
ಬುದ್ಧಿ ಭಾವ ಬದುಕು
ನಿರಂಜನ

ಬುದ್ಧಿ ಭಾವ ಬದುಕು

ಈ ಪುಸ್ತಕ

ಮೆದುಳನ್ನು ಕುರಿತು ಶರೀರವಿಜ್ಞಾನ ನಮಗೆಷ್ಟನ್ನೋ ತಿಳಿಸಿಕೊಟ್ಟಿದೆ. ಇನ್ನೂ ನಡೆದೇ ಇದೆ ಅದರ ಬಗೆಗಿನ ಸಂಶೋಧನೆ. ಇದು ಕೌತುಕದ ವಲಯ.

ಬುದ್ಧಿ, ಭಾವ, ಕ್ರಿಯೆ—ಈ ಮೂರಕ್ಕೂ ಮೆದುಳು ಆವಾಸಸ್ಥಾನ. 'ಸಹೃದಯ', 'ಹೃದಯವೈಶಾಲ್ಯ', 'ಹೃತ್ಪೂರ್ವಕ' ಎಂಬ ಶಬ್ದಗಳನ್ನು ಎಷ್ಟು ಉದಾರವಾಗಿ ಇನ್ನೂ ಬಳಸುತ್ತೇವೆ ನಾವು ! ತಲೆಯೊಳಗೆ ಬುದ್ಧಿ, ಎದೆಗುಂಡಿಗೆಯಲ್ಲಿ ಮನಸ್ಸು ಎಂಬ ಕಲ್ಪನೆಗಳಿದ್ದ ಕಾಲವೂ ಇತ್ತು. ವಾಸ್ತವವಾಗಿ, ಬದುಕಿಗೆ ಸ್ಪಂದಿಸಿದ ಇಂದ್ರಿಯಗಳು 'ಬುದ್ಧಿ'ಗೆ ವರದಿ ಸಲ್ಲಿಸುತ್ತವೆ. ಬುದ್ಧಿಯ ಬಲಗೈ ಭಾವ. ಬುದ್ಧಿ ಗುಂಡಿ ಒತ್ತಿದೊಡನೆ ಅಂಗಾಂಗಗಳು ಕ್ರಿಯಾಪ್ರವೃತ್ತವಾಗುತ್ತವೆ. ಸ್ಪಂದನ ಯಾವಾಗಲೂ ಬದುಕಿಗೆ, ಬುದ್ಧಿ ಭಾವ ಮೇಳೈಸಿದಾಗ ಮುಂದಿನ ಹೆಜ್ಜೆ.

ಎಲ್ಲ ಸೃಜನಶೀಲರಿಗೂ ಬದುಕೇ ಮೂಲ ಸೆಲೆ. ಬುದ್ಧಿಭಾವ ಸಮತೋಲ ಸಾಧಿಸಿದಾಗ ಒಳ್ಳೆಯ ಕೃತಿ ಹುಟ್ಟುತ್ತದೆ. ಆ ಸಾಮರಸ್ಯವಿಲ್ಲದಿದ್ದರೆ, ಬರೆವಣಿಗೆ ಬರೇ 'ಬೌದ್ಧಿಕ'ವೆನಿಸಬಹುದು ಅಥವಾ 'ಭಾವನಾತ್ಮಕ'ವಾಗಬಹುದು.

ಒಮ್ಮೊಮ್ಮೆ ವಿಚಾರಗಳು ಕೈಕೈಮಿಲಾಯಿಸಿ ನನ್ನ ಮೆದುಳು ತಪ್ತವಾಗುತ್ತದೆ; ಕೆಲವೊಮ್ಮೆ ಭಾವೋದ್ವೇಗದಿಂದಲೂ ಬಿಸಿಯೇರುತ್ತದೆ. ಈ ಗೊಂದಲದಲ್ಲೂ ಒಂದು ಹದ ಸಾಧ್ಯವಾದಾಗ ಸೃಷ್ಟಿಕಾರ್ಯ ಮುದ ನೀಡುತ್ತದೆ. ಬದುಕಿಗೆ ನಾನು ಸದಾ ಬದ್ಧ. ಇದು ನನ್ನ ಬಂಡವಾಳ.

ಕಳೆದ ನಾಲ್ವತ್ತು-ನಾಲ್ವತ್ತೆರಡು ವರ್ಷಗಳ ಅವಧಿಯಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿ ನಾನು ವ್ಯಕ್ತಪಡಿಸಿದ ಅಭಿಪ್ರಾಯಗಳು ಯಾವುವು ? ನಾನು ನಡೆದುಬಂದ ದಾರಿ ಯಾವುದು? ಈ ಪುಸ್ತಕದಲ್ಲಿರುವ ಬರೆಹ, ಭಾಷಣಗಳು ಆ ಪ್ರಶ್ನೆಗಳಿಗೆ ಒಂದು ಬಗೆಯ ಉತ್ತರ ನೀಡುತ್ತವೆ.

ಇವು ಮಹತ್ವದ ಸಾಹಿತ್ಯ ದಾಖಲೆಗಳೆಂಬ ಭ್ರಮೆ ನನಗಿಲ್ಲ. ಆದರೂ ಈ ಪುಸ್ತಕವನ್ನೋದಿದ ಆಸಕ್ತರಿಗೆ ಸಂತೋಷವಾದೀತೇನೋ ಎಂಬ ಆಸೆ ಮಾತ್ರ ಇದೆ.

ಬೆಂಗಳೂರು
೧ ಆಗಸ್ಟ್, ೧೯೮೪

ನಿರಂಜನ

ಬುದ್ಧಿ ಭಾವ ಬದುಕು

ಬರೆಹ-ಭಾಷಣ ಸಂಕಲನ

ನಿರಂಜನ

ಸಂಕಲನ

ಸೀಮಂತಿನೀ ನಿರಂಜನ

ಡಿ. ವಿ. ಕೆ. ಮೂರ್ತಿ

ಕೃಷ್ಣಮೂರ್ತಿಪುರಂ : : ಮೈಸೂರು ೪

BUDDHI BHAAVA BADUKU : A collection of essays and speeches by Niranjana in Kannada. Collected and Edited by Seemantini Niranjana. Second Edition : 2007. Published by D.V.K. Murthy, Krishnamurthipuram, Mysore - 4 ✆ : 2331484.

ಮೊದಲನೆಯ ಮುದ್ರಣ : ೧೯೮೪

ಎರಡನೆಯ ಮುದ್ರಣ : ೨೦೦೭

ಮುಖ ಪುಟ ವಿನ್ಯಾಸ : ಎಚ್. ಕೆ. ದ್ವಾರಕನಾಥ

ಮುದ್ರಕರು : ಎ. ಜಿ. ಸುವ್ರತೀಂದ್ರ, ವಾಣೀ ಪ್ರೆಸ್, ಗೀತಾ ರಸ್ತೆ, ಚಾಮರಾಜಪುರಂ
ಮೈಸೂರು ೫೭೦ ೦೦೫ - ☎ 2330295

ಹೂರಣ

ವಿಷಯ

೧೯೪೨ ಬಿಡುಗಡೆಯ ಬೆಲೆ ೯

೧೯೪೫ ಹೊಸ ಸೃಷ್ಟಿಯ ಪ್ರಸವದ ಕಡೆಗೆ ! ೨೨

೧೯೫೨ ಕಥೆಯಲ್ಲಿ ವಸ್ತುವಿನ ಆಯ್ಕೆ ೨೭

೧೯೫೨ ಕನ್ನಡ ಸಾಹಿತ್ಯದ ಪ್ರಗತಿಶೀಲರು ಎತ್ತ ಸಾಗಿದ್ದಾರೆ ? ೩೦

೧೯೫೩ ಪ್ರಗತಿಯ ತೀಕ್ಷ್ಣ ದೃಷ್ಟಿ ೩೯

೧೯೫೩ ಸಾಹಿತಿ ಮತ್ತು ಸಮಾಜ ೪೪

೧೯೫೩ 'ರೊಮ್ಯಾಂಟಿಕ್' ಕಾವ್ಯ; ನವ್ಯ ಕಾವ್ಯ ; ಜನ ಕಾವ್ಯ ೪೭

೧೯೫೩ ಪ್ರಗತಿಶೀಲ ಸಾಹಿತ್ಯ : ಗೊತ್ತು, ಗುರಿ ೫೩

೧೯೫೩ ಸ್ವಾತಂತ್ರ್ಯ ಹೋರಾಟ ಮತ್ತು ಆಧುನಿಕ ಕನ್ನಡ ಸಾಹಿತ್ಯ ೬೦

೧೯೫೩ ಕನ್ನಡ ಕಾದಂಬರಿಯ ಹಿರಿಯ ಪರಂಪರೆ ೬೬

೧೯೫೩ ಪ್ರಗತಿಶೀಲತೆಯ ಹುಟ್ಟು ೭೧

೧೯೫೩ ಕನ್ನಡ ಸಾಹಿತ್ಯದಲ್ಲಿ ಸೂಳೆಗಾರಿಕೆ ೭೭

೧೯೫೩ ಪ್ರಗತಿವಾದದ ಬಗೆಗೆ ತಪ್ಪು ಕಲ್ಪನೆ ೮೨

೧೯೫೪ ವಸ್ತು ಇಲ್ಲದ ಕೃತಿ ೮೭

೧೯೫೪ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರುಷಾರ್ಥಶೂನ್ಯವಾದ ೯೦

೧೯೫೫ ಬೆಲಿನ್ಸ್ಕಿಯ ಕಾವ್ಯಮೀಮಾಂಸೆ ೯೫

೧೯೫೫ ವಿಚಾರ ಸಾಹಿತ್ಯ ೧೦೭

೧೯೫೭ ಸಾಹಿತ್ಯ ಸೃಷ್ಟಿಯ ಸಮಸ್ಯೆ ೧೨೬

೧೯೫೭ ಬರೆಯುವುದು ಯಾತಕ್ಕೋಸ್ಕರ ? ೧೨೯

೧೯೫೭ ಲೇಖಕ ಮತ್ತು ಮನಸ್ಸಾಕ್ಷಿ ೧೩೨

೧೯೬೦ ಸಾಹಿತ್ಯ ಮತ್ತು ಸಾಮಾಜಿಕ ನೀತಿ ೧೩೫

೧೯೬೦ ಇತಿಹಾಸ ಕಲಿಸುವ ಪಾಠ ೧೩೯

೧೯೬೪ ಕಳೆದ ಅಧ್ಯಾಯದ ಮೇಲೆ ಬೆಳಕು ೧೪೩

೧೯೬೪ ಕನ್ನಡ ಸಣ್ಣಕತೆಯ ಮೇಲೆ ಪಶ್ಚಿಮದ ಪ್ರಭಾವ ೧೪೯

೧೯೬೪ ಒಂದು, ಎರಡು, ಮೂರು ೧೫೪
೧೯೬೯ ಸಾಹಿತ್ಯ ಮತ್ತು ಪ್ರಚಾರ ೧೫೯
೧೯೭೪ ಕಮಿಟ್‌ಮೆಂಟ್ ಯಾರಿಗೆ ? ಯಾವುದಕ್ಕೆ ? ೧೬೮
೧೯೭೫ ಕೋಮಲ ಕ್ರಾಂತಿಕಾರಿ ಸಜ್ಜದ್ ಜಾಹೀರ್ ೧೭೩
೧೯೭೫ ಪ್ರಗತಿಪಂಥದ ಘೋಷಣೆ ೧೭೭
೧೯೭೬ ಕರ್ನಾಟಕ ಪ್ರಗತಿಪಂಥದ ಸ್ಥಾಪನಾ ಸಮ್ಮೇಳನದ ಅಧ್ಯಕ್ಷ ಭಾಷಣ ೧೮೧
೧೯೭೬ ಉತ್ತಮ ಬದುಕಿನ ಎತ್ತರಕ್ಕೆ ಸಾಹಿತ್ಯದ ಏಣಿ ೧೯೫
೧೯೭೭ ರಂಗಮಧ್ಯದಿಂದ ನಿರ್ಗಮನ ೨೦೧
೧೯೭೭ ಸಾಹಿತ್ಯ ಮತ್ತು ಇತಿಹಾಸ ಪ್ರಜ್ಞೆ ೨೦೭
೧೯೭೮ ಪಂಥವೆಂದರೆ ದಾರಿ, ಮಾರ್ಗ; ಗುಂಪಲ್ಲ, ಮಠವಲ್ಲ ೨೧೪
೧೯೮೪ Man, the Pivot; Humanism, the Creed ೨೧೬
೧೯೮೪ ಸಾಹಿತ್ಯ ಪ್ರೇರಣೆಯ ಮೊದಲ ಹೆಜ್ಜೆಗಳು ೨೨೬
ಬಂಧ-ಅನುಬಂಧ ೨೩೩

೧೯೪೨

ಬಿಡುಗಡೆಯ ಬೆಲೆ

ನಾವು ಇಂದು ಕ್ರಾಂತಿಯುಗದಲ್ಲಿ ಜೀವಿಸುತ್ತಿದ್ದೇವೆ. ಕ್ರಾಂತಿಯ ಸೌರಭವನ್ನು ಹೊತ್ತಿರುವ ವಾಯುವಿನಲ್ಲೇ ಉಸಿರಾಡುತ್ತಿದ್ದೇವೆ. ಹಲವು ಉಪನದಿಗಳೊಂದಾಗಿ, ಹಿರಿಯ ಪ್ರವಾಹವಾಗಿ ರೂಪುಗೊಂಡು, ನಿಶ್ಚಿತಗುರಿಯತ್ತ ಬಲುರಭಸದಿಂದ ಧಾವಿಸುವಂತೆ, ವಿಭಿನ್ನಮತ-ಧೋರಣೆಗಳೂ ವಿವಿಧ ಮನೋಭಿಪ್ರಾಯಗಳೂ ಸಮ್ಮಿಲಿತವಾಗಿ ಜನಜೀವನದ ಉತ್ಕೃಷ್ಟದೆಸೆಯತ್ತ ವೇಗದಿಂದ ಸಾಗುತ್ತಿವೆ. ಈ ಮಹಾಸಂಭವಕ್ಕೆ ಜ್ಞಾನಿಗಳೂ ಚಿಂತಕರೂ ಅವರ ಅಸಂಖ್ಯ ಅನುಯಾಯಿಗಳೂ ಕಾರಣಕರ್ತರು. ಗುರಿಯು ಸಾಧಿಸಲ್ಪಟ್ಟ ಬಳಿಕ ಮುಂದಿನ ಇತಿಹಾಸಕಾರರು ಈ ಕಾರಣಕರ್ತರನ್ನು ಕುರಿತು ಗೌರವದ ನುಡಿಗಳನ್ನಾಡುವರು; ಮೆಚ್ಚುಗೆಯ ಮಾತನ್ನು ಬರೆಯುವರು.

ಸಾಹಿತಿಗಳು ಜ್ಞಾನಿಗಳ ಮತ್ತು ಚಿಂತಕರ ಪಂಗಡದಿಂದ ಹೊರಗಾದವರಲ್ಲ. ಹಾಗೆಂದೇ, ಮುಂದಿನ ಚರಿತ್ರೆಗಳು ಅವರ ಸ್ಮರಣೆಯನ್ನು ಮಾಡುವುವು. ಶಕ್ತಿಯಲ್ಲೂ ಪ್ರಭಾವದಲ್ಲೂ ಕತ್ತಿಗಿಂತ ತಾನು ಹಿಂದಿಲ್ಲವೆಂಬುದನ್ನು ಹಲವೊಮ್ಮೆ ಲೆಕ್ಕಣಿಕೆ ತೋರಿಸಿಕೊಟ್ಟಿದೆ. ಸಾಹಿತ್ಯ ಜನಜೀವನದ ನಿಲುವುಗನ್ನಡಿಯಾಗಿ ನಿಂತಿದೆ. ಜನತೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ; ಅದಕ್ಕೆ ರೂಪುಗೊಟ್ಟಿದೆ. ರಷ್ಯದಲ್ಲೊಬ್ಬ ಟಾಲ್‌ಸ್ಟಾಯ್—ಒಬ್ಬ ಗಾರ್ಕಿ, ಇಂಗ್ಲೆಂಡಿನಲ್ಲೊಬ್ಬ ಡಿಕನ್ಸ್, ಫ್ರಾನ್ಸಿನಲ್ಲೊಬ್ಬ ವಾಲ್ಟೇರ್, ಜರ್ಮನಿಯಲ್ಲಿ ಅರ್ನ್‌ಸ್ಟ್ ಟಾಲರ್ ಇವರು ಆಗಿಹೋದರು ; ತಮ್ಮ ಸೇವೆಯನ್ನು ಮಾಡಿ, ಅಮರ ಕೃತಿಗಳನ್ನು ಹಿಂದೆ ಬಿಟ್ಟು ನಡೆದರು.

ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಜೀವನಸಾಹಿತ್ಯ ಇಂದು ಕಂಡುಬರುತ್ತಿದೆ. ತರುಣ ಸಾಹಿತಿಗಳ ಒಲವು ಆ ಕಡೆಗೆ ಬಾಗಿದ್ದು ಆ ಕಾರ್ಯರಂಗದಲ್ಲಿ ಅವರು ದುಡಿಯುತ್ತಿರುವರು. ಭಾರತದಲ್ಲಿ ಜೀವನಸಾಹಿತ್ಯ ಹೆಚ್ಚನ್ನು ಸಾಧಿಸಿಲ್ಲ. ಜನತೆಯ ಮನಸ್ಸನ್ನು ಅದರೆಡೆಗೆ ಸೆಳೆಯುವುದು ಸುಲಭವಾದರೂ ಆ ಯತ್ನ ಬಿರುಸಾಗಿ ನಡೆದಿಲ್ಲ. ಕನ್ನಡ ಸಾಹಿತ್ಯವಷ್ಟನ್ನೇ ತೆಗೆದು ನೋಡಿದರೆ ಜೀವನಸಾಹಿತ್ಯದ

ಬೆಳವಣಿಗೆಯನ್ನು ಕಂಡು ಹಿಗ್ಗುವಂತೇನೂ ಇಲ್ಲ. ಅಭಿವೃದ್ಧಿಯೇ ಆದುದಿಲ್ಲ ಎಂದರೂ ತಪ್ಪಾಗಲಾರದು. ಆದರೆ ಬರಿಯ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿನ ಕನ್ನಡ ಕಿರುಗತೆಗಳ ವಿಸ್ತೃತ ಕಾರ್ಯಕ್ಷೇತ್ರವನ್ನು ನೋಡಿದ ಬಳಿಕ ಜೀವನ ಸಾಹಿತ್ಯದ ಭವಿತವ್ಯದ ಕುರಿತು ಚಿಂತಿಸಬೇಕಾದ ಪ್ರಮೇಯವೊದಗುವುದಿಲ್ಲ. ಐತಿಹಾಸಿಕ, ಪೌರಾಣಿಕ ಮತ್ತು ಪತ್ತೇದಾರಿ ಕಾದಂಬರಿಗಳ ಉತ್ಕರ್ಷೆಯ ಕಾಲ ಕಳೆದುಹೋಗಿ ಬಹಳ ಸಮಯವಾಯಿತು. ಸಮಾಜದ, ಧರ್ಮದ ತೆರೆಯ ಮರೆಯಲ್ಲಿನ ಆಗುಹೋಗುಗಳನ್ನು ಬೈಲಿಗೆಳೆದು ಚಿತ್ರಿಸುವ ಕೃತಿಗಳನ್ನು ಕೆಲವು 'ನಿರ್ದಯ' ಲೆಕ್ಕಣಿಕೆಗಳು ಬರೆದಿವೆ. ಸಮಾಜದ ಬುಡಕಟ್ಟನ್ನೇ ಅಡಿಮೇಲಾಗಿಸುವ 'ಸಾಹಸಿಗಳು' ಸಾಹಿತ್ಯಕ್ಷೇತ್ರದಲ್ಲಿ ಕಂಡುಬರುತ್ತಿದ್ದಾರೆ. ರಾಜಕೀಯ ಇತ್ತೀಚೆಗೆ ಸಾಹಿತ್ಯ ಕ್ಷೇತ್ರದಲ್ಲಿ ಸೇರಿಕೊಂಡು, ರಾಜಕಾರಣ ಮತ್ತು ಸಾಹಿತ್ಯಗಳ ಕಡುಮಿಶ್ರಣವನ್ನೀಗ ಆತುರದಿಂದ ವಾಚಕವರ್ಗ ಆಸ್ವಾದಿಸುತ್ತಿದೆ.

ಇಂತಹ ಕೆಲವು ಕೃತಿಗಳಲ್ಲಿ ಶ್ರೀ ವಡಗೇನಹಳ್ಳಿ ಅಶ್ವತ್ಥ ನಾರಾಯಣರಾಯರ 'ಬಿಡುಗಡೆಯ ಬೆಲೆ' ಎಂಬ ಗ್ರಂಥಕ್ಕೆ (ಮನೋಹರ ಗ್ರಂಥಮಾಲೆಯ ನಲ್ವತ್ತಾರನೆಯ ಕುಸುಮ) ಒಂದು ವಿಶಿಷ್ಟ ಸ್ಥಾನವಿದೆ.

ಮಾತೃಭೂಮಿಯ ಸೇವೆಗಾಗಿ

ತನ್ನ ತಾಯ್ನಾಡಿನ ಬಂಧವಿಮೋಚನೆಗಾಗಿ ತ್ಯಾಗಿಯಂತೆ ದುಡಿದ ಅನಾಮಧೇಯನಾದ ಅಹಿಂಸಾತ್ಮಕ ಯೋಧನೊಬ್ಬನ ಆತ್ಮವೃತ್ತವು 'ಬಿಡುಗಡೆಯ ಬೆಲೆ'ಯ ವಸ್ತು. 'ಕಾವ್ಯದಲ್ಲಿ ಹೇಳಬೇಕಾದುದನ್ನು ಕವಿ-ಕಲೋಪಾಸಕ ತಾಪತ್ರಯಗಳಲ್ಲಿ ಕಲಿಯುತ್ತಾನೆ' ಎಂದು ಷೆಲ್ಲಿ ಕವಿ ನುಡಿದುದನ್ನು ಪ್ರೊ. ಗೋಕಾಕರು ತಮ್ಮ ಮುನ್ನುಡಿಯಲ್ಲಿ ಎತ್ತಿ ಬರೆದಿರುವರು. ಹೌದು; ಶ್ರೀ ಅಶ್ವಥ್ಥನಾರಾಯಣರು ಅನುಭವಿಸಿದ್ದಾರೆ. ತಮ್ಮ ಅನುಭವವನ್ನು ಬಿಚ್ಚಿ ಬರೆದಿದ್ದಾರೆ.

ಬರಿಯ ಕಲ್ಪನಾಸಾಮ್ರಾಜ್ಯದಲ್ಲಿ ಅವರು ವಿಹರಿಸಿಲ್ಲ. ಸತ್ಯಗಳನ್ನು—ನಂಬಲಿಕ್ಕಾಗದ ಸತ್ಯಗಳನ್ನು—ಅವರು ಹೇಳಿದ್ದಾರೆ; ಸ್ವಯಂಸೇವಕನ ದಿನಚರಿಯ ರೂಪದಲ್ಲಿ ಉಜ್ವಲಕೃತಿಯೊಂದನ್ನು ರಾಯರು ಬರೆದಿದ್ದಾರೆ.

'ಬಿಡುಗಡೆಯ ಬೆಲೆ'ಯಲ್ಲಿ ವಸ್ತುವಿಗೆ ಪ್ರಾಧಾನ್ಯವಿದೆ. ಮಹಾತ್ಮಾಗಾಂಧಿಯವರ ಆತ್ಮಕಥೆಯಾದ 'ಸತ್ಯಶೋಧನೆ'ಯನ್ನು ಅವರ ಭಕ್ತರು ಗೀತೆಯಂತೆ ಪಠಿಸಬಹುದು. ಪಂ. ಜವಾಹರರ ಆತ್ಮವೃತ್ತವನ್ನೆತ್ತಿಕೊಂಡು ಉತ್ಸಾಹಿ ತರುಣರು "ಭಾರತದ ಏಕಮಾತ್ರ ಅನಭಿಷಿಕ್ತ ಸಮ್ರಾಟನ ಆತ್ಮಕಥೆ! ನಮ್ಮ ಬೈಬಲ್!" ಎನ್ನಬಹುದು; ಇಲ್ಲವೆ, ಹಾಲಿವುಡ್ಡಿನ ಚಲಚ್ಚಿತ್ರ ನಿರ್ಮಾಪಕರು, 'ಪಾಲ್ ಮುನಿ, ನೆಹರುವಿನ ಪ್ರತಿಮೂರ್ತಿ

ಯಾಗಿದ್ದಾನೆ. ಆ ಆತ್ಮಕಥೆಯನ್ನು ಚಿತ್ರಿಸೋಣ!" ಎನ್ನಬಹುದು. ಆದರೆ ದೇಶಸೇವೆ ಮಾಡುವುದೆಲ್ಲ ಮಹಾತ್ಮ-ನೆಹರೂರಂತೆ ಪ್ರಖ್ಯಾತರಾಗಿ, ಜನರ ಹೃದಯಾಧಿದೇವತೆಗಳಾಗಿ ರಾರಾಜಿಸುವುದರಲ್ಲಿ ಪರ್ಯವಸಾನಗೊಳ್ಳುವುದಿಲ್ಲ ಎಂಬುದನ್ನು ಅರಿಯದವರೆಷ್ಟು ಮಂದಿ? ಅನಾಮಧೇಯ ಸೇವಕರಾಗಿ, ನಿಃಸ್ವಾರ್ಥಿಗಳಾಗಿ, ತ್ಯಾಗಿಗಳಾಗಿ, ದೇಶದ ಸೇವೆಯಲ್ಲಿ ಅವರ್ಣನೀಯ ಯಾತನೆಗಳನ್ನನುಭವಿಸಿ, ತಮ್ಮ ಸಮಾಧಿಯ ಮೇಲೆ ಕೀರ್ತಿಯ ಗುಡಿಯೊಂದನ್ನೂ ಕಟ್ಟಿಸದೆ-ಹಾರಿಸದೆ, ಬಂಧು-ಬಳಗವನ್ನು ಸಂಕಟದ ಮಡುವಿನಲ್ಲದ್ದಿ ಮೃತರಾದವರೆಷ್ಟು ಮಂದಿ? 'ಅ' ವರ್ಗದಲ್ಲಿ ಸೆರೆಮನೆಯ ಸುಖವನ್ನನುಭವಿಸಿ, ತಿಂಗಳಿಗೆ ಮೂವತ್ತು-ಐವತ್ತು ರೂ.ಗಳಿಗೆ ಕಡಿಮೆಯಿಲ್ಲದೆ ಮನೆಯಿಂದ ಹಣ ತರಿಸಿ ವೆಚ್ಚಮಾಡಿ ದೇಶಸೇವೆ ಮಾಡುವುದು ತ್ಯಾಗವೇನೋ ನಿಜ, ಆದರೆ ಮನೆಯಲ್ಲಿ ಹೆಂಡತಿ-ಮಕ್ಕಳು-ತಾಯಂದಿರನ್ನು ಉಪವಾಸ ಬೀಳಿಸಿ-ಗೋಳಾಡಿಸಿ-ತುರಂಗದ 'ಬುರಾ' 'ಬುರಾಕಿ'ನಲ್ಲಿ ಕುಳಿತು, 'ತಿಕ್ಕಿ-ಫಿಕ್ಕಿ'ಗಳನ್ನು ತಿಂದು, ರೋಗಪೀಡಿತರಾಗುವುದಕ್ಕೂ ತ್ಯಾಗವೆಂಬ ಹೆಸರು ಕೊಡಬಹುದೇನು ? ಅಂತಹರ ಬಿಡುಗಡೆಯ ಬೆಲೆಯೇನು? 'ಕ' ವರ್ಗದ ಸತ್ಯಾಗ್ರಹಿಯೊಬ್ಬನ ಮಾರ್ಮಿಕ-ಹೃದಯ ಭೇದಕ ಜೀವನ ಚಿತ್ರವೊಂದು 'ಬಿಡುಗಡೆಯ ಬೆಲೆ'ಯಲ್ಲಿದೆ.

ಭಾವುಕ ಬರಹಗಾರ

ಶ್ರೀ ಅಶ್ವತ್ಥನಾರಾಯಣರಾಯರು ತತ್ವವಾದಿ: ಭಾವುಕರೂ ಹೌದು. ಅವರು ಕವಿಯಾಗಿ ಕಲ್ಪನಾಸಾಮ್ರಾಜ್ಯದಲ್ಲಿ ಮನಬಂದಂತೆ ವಿಹರಿಸಬಲ್ಲರು. ಆದರೆ ತಮ್ಮ ಕವಿತಾಶಕ್ತಿಯನ್ನು, ಪಂಡಿತವೃಂದಕ್ಕಾಗಿಯೇ ಬರೆಯಲ್ಪಡುವ ಬೃಹತ್ ಕಾವ್ಯದ ರಚನೆಗೆ ಉಪಯೋಗಿಸಿಲ್ಲ. ಜನಸಾಮಾನ್ಯರಿಗೆ ತಾವು ಹೇಳುತ್ತಿರುವುದು ನೇರವಾಗಿ ಹೋಗಿ ನಾಟುವಂತೆ ಮಾಡುವುದಕ್ಕಾಗಿ, ಭಾವುಕನ ಕನಸುಗಳನ್ನು ಯಥಾರ್ಥತೆಯ ಮತ್ತು ಪರಿಷ್ಕಾರದ ಹೊದಿಕೆಯಲ್ಲಿ ಮುಚ್ಚಿ ತೋರಿಸುವುದಕ್ಕಾಗಿ, ತಮ್ಮ ಪ್ರತಿಭೆಯ ಸಹಾಯವನ್ನು ಲೇಖಕರು ಪಡೆದಿದ್ದಾರೆ.

..."ಇಪ್ಪತ್ತು ಶತಮಾನಗಳು ಕಳೆದುಹೋಗುತ್ತಿವೆ. ಇದಾರು ಇಲ್ಲಿ ಈ ಮೂರ್ತಿ? ಮೋರೆಯಲ್ಲಿ ದೃಢನಿರ್ಧಾರ ತೋರುತ್ತ ಮೈಯಲ್ಲಿ ವಯಸ್ಸಿನ ಭಾರವನ್ನು ಹೊರುತ್ತ ಕೈಯಲ್ಲಿ ದಂಡವನ್ನು ಹಿಡಿದು ನಮ್ಮ ಮುಂದೆ ಸಾಗಿ ಹೋಗುತ್ತಿರುವ ಈ ದುರ್ಬಲ ಮರ್ತ್ಯಮೂರ್ತಿ ಇದಾರು ? ಹಿಂದೆ ಅನುಸರಿಸಿ ಬರುತ್ತಿರುವ ಧವಳವಸ್ತ್ರಧಾರಿಗಳಾದ ಈ ವೀರಭಟರೊಡನೆ ಈತ ಎಲ್ಲಿ ಹೋಗುತ್ತಿದ್ದಾನೆ ? ಈತನ ನಾರುಡೆಯನ್ನು ನೋಡಿಯೂ ಗುಂಪುಗುಂಪಾಗಿ ಸುತ್ತುವರಿದು ಹಾದಿಯುದ್ದಕ್ಕೂ ಅಪಾರವಾದ ಗೌರವ ಪುರಸ್ಕಾರಗಳನ್ನು ಜನರು ಏಕೆ ತೋರುತ್ತಿದ್ದಾರೆ......?"

ಸಾಮಾನ್ಯ ಮಂದಿ ಇದನ್ನು ಓದಿ ನೋಡಲಿ; ಓದಿಸಿ ಕೇಳಲಿ ; ಅದರ ಮಾಧುರ್ಯವನ್ನು ಸವಿಯುವುದಕ್ಕೆ ಅವರಿಗೆ ಹೆಚ್ಚು ಹೊತ್ತು ಬೇಕಿಲ್ಲ. ಆ ಮಾತುಗಳು ಅವರಿಗೆ ನಾಟಕದ ನಾಯಕ ಆತ್ಮಗತ ನುಡಿದುಕೊಂಡಂತೆ.

ಗೊಮ್ಮಟೇಶ್ವರನ ಮುಖಮುದ್ರೆಯನ್ನು ನೋಡುತ್ತ, "ಸಂಜೆ ಶಾಂತಿ ಪ್ರಸಾದಗಳ ಮೂರ್ತಿಯಾಗಿದ್ದ; ಈಗ ಆನಂದೋದ್ರೇಕವು ಕಣ್ಣಲ್ಲಿ ತುಂಬಿ ಸೂಸುತ್ತಿವೆ" ಎನ್ನುತ್ತಾರೆ.

ಈ ಭಾವುಕ ಜೀವಿ ತಾವು ಎಂದೆಂದಿಗೂ ನೆನಪಿನಲ್ಲಿಡುವ ಚಿತ್ರವನ್ನು ನೋಡಿದ್ದು, ನಮಗದನ್ನು ನುಡಿಗಳಲ್ಲಿ ಚಿತ್ರಿಸಿ, ನಾವೂ ಅದನ್ನು ಆಜನ್ಮ ಮರೆಯದಂತೆ ಮಾಡುತ್ತಾರೆ. "ಬಾಡಿ ಬಾಗಿದ ನಿರಾಡಂಬರ ಜೀವಿಗಳು—ಗಂಡಸರು ಹೆಂಗಸರು—ತಮ್ಮ ತಲೆ ಭುಜಗಳ ಮೇಲೆ ಕೊಂಬೆ ಟೊಂಗೆಗಳನ್ನು ಹೊತ್ತು ಈ ಪವಿತ್ರ ಶಾಂತಿಯುದ್ಧದಲ್ಲಿ ಗೆದ್ದು ವಿಜಯಪತಾಕೆಗಳನ್ನು ಹಾರಿಸಿದಂತೆ ಬರುವ ಚಿತ್ರ....." ಎಂದು ಅವರು ನೋಡುತ್ತಾರೆ; ನಮ್ಮನ್ನು ಕರೆಕರೆದು. ಆಗ್ರಹದ ಆಹ್ವಾನವಿತ್ತು ನೋಡಹೇಳುತ್ತಾರೆ.

ಸ್ವಯಂಸೇವಕರು ದುಡಿಯುವುದು ಆಶೆಯನ್ನು ಜೀವನದ ಉಸಿರಾಗಿಟ್ಟುಕೊಂಡು; ಶುಭಪ್ರತೀಕ್ಷೆಯನ್ನು ಮಾಡಿಕೊಂಡು; ಆದರೆ ತಾವು ಉತ್ತ ಹೊಲದಲ್ಲಿ ಬೆಳೆಯಾಗಲಿಲ್ಲವೆಂದರೆ ಯಾರಿಗೆ ದುಃಖವಾಗಬೇಡ! ಸ್ವಯಂಸೇವಕರು ಸೆರೆಮನೆ ಸೇರುವುದಕ್ಕೆ ಮೊದಲು ದುಡಿದದ್ದೊಂದು ಕಾರ್ಯಕ್ಷೇತ್ರದಲ್ಲಿ, ಮರಳಿ ಬಂದಾಗ ಅಲ್ಲಿನ ಜನತೆ ಜೀವಂತವಿರುವ ಒಂದು ಲಕ್ಷಣವೂ ತೋರದೆಹೋದರೆ, ಅವರಿಗೆ ಎಂತಹ ವ್ಯಥೆಯಾಗಬೇಡ! ಗ್ರಂಥದ ಕೊನೆಯಲ್ಲಿ ಭಾವುಕನ ಅದೊಂದು ಭಾವನೆ ಮೂರ್ತಿವೆತ್ತು ನಿಂದಿದೆ.

ಆದರ್ಶ ಸ್ವಯಂಸೇವಕ

ಇಲ್ಲೀಗ ಯಾರ ಅನುಭವಗಳ ಪರಿಚಯವಾಗುತ್ತಿದೆ? ಶ್ರೀ ಅಶ್ವತ್ಥ ನಾರಾಯಣರಾಯರದೆ ? ಇಲ್ಲವೆ ತಾಯ್ನಾಡಿನ ಸ್ವಾತಂತ್ರ್ಯವೊಂದಲ್ಲದೆ ಬೇರಾವ ಪ್ರತಿಫಲಾಪೇಕ್ಷೆಯನ್ನು ಬಯಸದೆ ದುಡಿದ ಸ್ವಯಂಸೇವಕನದೆ ? ಅದರಲ್ಲಿ ವಿವಾದ ಬೇಕಾಗಿಲ್ಲ. ಲೇಖಕರ ಖ್ಯಾತಿಯಿಂದಾಗಿ ಅವರ ಅನುಭವಗಳಿಗೂ ಈ ಪುಸ್ತಕಕ್ಕೂ ಪ್ರಾಧಾನ್ಯ ದೊರಕುವಂತಾಗಿದ್ದರೆ 'ಬಿಡುಗಡೆಯ ಬೆಲೆ' ನನ್ನ ಮೆಚ್ಚಿನ ಗ್ರಂಥವಾಗುವುದು ಅಸಂಭವವಿತ್ತು. ಆದರೆ ಸ್ವಾತಂತ್ರ್ಯಾಭಿಲಾಷಿಗಳಾಗಿರುವ ಕೋಟಿಜನ ಭಾರತೀಯರಿಗೆ ಇಂದು ಬೇಕಾಗಿರುವುದು ಆದರ್ಶ ಸ್ವಯಂಸೇವಕನೊಬ್ಬನ ಜೀವಿತ, ಶಿಸ್ತು ಮೊದಲಾದುವು. ಅದನ್ನು ಲೇಖಕರು ಒದಗಿಸಿಕೊಟ್ಟಿದ್ದಾರೆ. ಕಾಮ್ರೇಡ್ ....ಇಲ್ಲವೆ

ಪ..... ಮತ್ತು ಲೇಖಕರೊಳಗೆ ತಾದಾತ್ಮ್ಯ ಕಂಡುಬಂದರೆ ಅದರಿಂದ ಆಶ್ಚರ್ಯಪಡಬೇಕಾದುದೂ ಇಲ್ಲ.

೧೯೨೦ರ ಕ್ರಾಂತಿ ವರ್ಷದಲ್ಲಿ ಒಬ್ಬರ ಬಳಿಕೊಬ್ಬರಾಗಿ ಖಾದಿಯ ಬಟ್ಟೆಬರೆಗಳನ್ನು ತೊಟ್ಟುಕೊಂಡರು. ಆಗ ಸ್ವಯಂಸೇವಕ ತನ್ನಲ್ಲಿ ತಾನೇ ಗುಣಗುಣಿಸಿಕೊಳ್ಳುತ್ತಿದ್ದಾನೆ, 'ಇದು ಕಾಲದ ಮಹಿಮೆ: ಹೀಗೇ ಸಾಗಿದರೆ ಸಾಕು ಮುಂದೆ.' ಆತ ಒಮ್ಮೆಲೆ ಹೊಸತೊಂದು ಸೃಷ್ಟಿಗಾಗಿ ಹಾತೊರೆಯುವುದಿಲ್ಲ... ಆದರೆ ಆ ಆಶಯ ಪೂರ್ಣವಾಗುವುದು, ಕಾರ್ಯಸಾಧನೆಯಾಗುವುದು ಎಂಬುದನ್ನು ಆತ ನಂಬಿದ್ದಾನೆ.

ತನ್ನ ಸೇವೆಯ ಫಲವಾಗಿ ಹೇಳತೀರದ ಸಂಕಷ್ಟಗಳನ್ನು ಅನುಭವಿಸಿದ ಮೇಲೂ—ಜೀವನವನ್ನು ನಿರಾಶೆಯ ಅಂಧಕಾರ ಕವಿದಾಗಲೂ—ಅವನು ಹೇಳುತ್ತಾನೆ: "ನಾನಿನ್ನೂ ತರುಣ; ಬಾಳಿನ ಹೊಸಲ ಮೇಲೆ ಇದೇನೆ. ಹೃದಯದಲ್ಲಿ ಹುದುಗಲಾರದ ಸಾವಿರ ಆಶೆಗಳಿವೆ. ಅವೆಲ್ಲ ರೂಪಗೊಂಡು ತೃಪ್ತವಾಗಲು ಕಾತರವಾಗಿವೆ. ಇಡೀ ಆಯುಷ್ಯದ ಪೂರ್ಣ ಭವಿಷ್ಯವೇ ನನ್ನನ್ನು ನಿರಾಶೆಯ ಶೂನ್ಯದೃಷ್ಟಿಯಿಂದ ದಿಟ್ಟಿಸಿ ನೋಡುತ್ತಿದೆ...." ಆದರೂ ತನ್ನ ಸೋಲನ್ನೊಪ್ಪಿಕೊಳ್ಳಲು ಆತ ಸಿದ್ಧನಿಲ್ಲ.

"ತಾಯಿನಾಡಾದ ಭರತಭೂಮಿಯ ಸೇವೆಮಾಡುವುದು ಪ್ರತಿಯೊಬ್ಬ ಭಾರತೀಯನಿಗೂ ಈ ಸಮಯದಲ್ಲಿ ಪವಿತ್ರಕರ್ತವ್ಯ; ಕರ್ತವ್ಯದ ಮಾತಿರಲಿ, ದೊಡ್ಡ ಗೌರವ" ಎಂದು ಸ್ವಯಂಸೇವಕ ಮುಂದುವರಿಸುತ್ತಾನೆ; "ನಿಮ್ಮ ತಂದೆ ಈ ಮಾತಿಗೆ ಒಪ್ಪದೆ ಹೋಗಬಹುದು. ನಿಮ್ಮ ತಾಯಿ ಚೆಲುವಿಯಾದ ಸೊಸೆ ಮನೆಯೊಳಗೆ ಕಾಲಿಟ್ಟು ಸ್ವಲ್ಪ ಸುಖಸಂತೋಷ ತರಲಿ ಎಂದು ಲೆಕ್ಕಹಾಕುತ್ತಿರಬಹುದು. ಇಂಥ ಇನ್ನೂ ಸಾವಿರ ಕಾರಣ ನಿಮ್ಮ ಕಣ್ಣು ಕುಕ್ಕುತ್ತಿರಬಹುದು.... ಆದರೆ, ನಮಗಿಂತ ಮೊದಲು ಹೋಗಿರುವ ನೂರಾರು ಜನರ ಗತಿಯೇನು....?" ಇಂಗ್ಲೆಂಡಿನ ಧನಿಕ ಸ್ತ್ರೀಯೊಬ್ಬಳು ಯುದ್ಧರಂಗದಲ್ಲಿ ತನ್ನ ನಾಲ್ವರು ಮಕ್ಕಳನ್ನು ಕಳೆದುಕೊಂಡು ಪ್ರತೀಕಾರದ ಪ್ರತಿಜ್ಞೆ ಸ್ವೀಕರಿಸುತ್ತಾಳೆ. ತನ್ನ ಸ್ವಂತ ಖರ್ಚಿನಿಂದ ನಾಲ್ಕು ವಿಮಾನಗಳನ್ನು ಕೊಂಡುಕೊಟ್ಟು, ಒಂದೊಂದಕ್ಕೂ ಒಬ್ಬ ಮಗನ ಹೆಸರಿಟ್ಟು, "ಹೋಗಲಿ ಅವು ! ಜರ್ಮನರ ಮೇಲೆ ಬಾಂಬು ಸುರಿಸಲಿ!" ಎಂದು ಹೂಂಕರಿಸುತ್ತಾಳೆ; ಮರುಕ್ಷಣದಲ್ಲೆ, "ನಾನು ಮುದುಕಿಯಾಗಿಬಿಟ್ಟೆ! ಇಲ್ಲದಿದ್ದರೆ ನಾನೇ ಒಬ್ಬ ವೈಮಾನಿಕಳಾಗುತ್ತಿದ್ದೆನಲ್ಲ!" ಎಂದು ರೋದಿಸುತ್ತಾಳೆ. ರಂಗದ ರಣಕಣದಲ್ಲಿ ದೇಹವಿಟ್ಟ, ಗೆಳೆಯರಿಗಾಗಿ ಹಿಂದುಳಿದ ಸೈನಿಕ ತವಕಪಡುತ್ತಾನೆ. ಮರಣವು ಸಿದ್ಧ ಎಂದು ತಿಳಿದಿದ್ದೂ ಆತ ಮುಂದಕ್ಕೋಡುತ್ತಾನೆ. ಈ ಸತ್ಯಾಗ್ರಹಿ ಅನ್ನುತ್ತಿರುವುದೂ ಅದನ್ನೇ! "ನಮಗಿಂತ ಮೊದಲು ಹೋಗಿರುವ ನೂರಾರು ಜನರ ಗತಿಯೇನು?"

ಜನರು ಹಿಂದೆ ಹೋದ ವೀರರನ್ನು ಮರೆಯದಿರುವುದಕ್ಕೆ, ನಮ್ಮ ಅಪೂರ್ಣ ಧ್ಯೇಯವನ್ನು ಸ್ಮರಿಸುತ್ತಿರುವುದಕ್ಕೆ ಈ ಕರೆಯನ್ನು ಲೇಖಕರು ಕೊಡುತ್ತಾರೆ.

ಏನನ್ನು ಬರೆಯುವುದಕ್ಕೂ ಸಂಪೂರ್ಣ ಸ್ವಾತಂತ್ರ್ಯವಿರುವ ತನ್ನ ದಿನಚರಿಯಲ್ಲಿ ಈತ ಏನು ಬರೆಯುತ್ತಾನೆ?—"ಲೇಖನವ್ಯವಸಾಯದಲ್ಲಿ ನನಗೊಳ್ಳೇ ಹುರುಪು. ಸಂಪಾದಕೀಯ ಲೇಖನಗಳಂತೂ ಬಹಳ ಸರಸವಾಗಿಯೂ ಗಂಭೀರವಾಗಿಯೂ ಬರುತ್ತಿವೆ." ಶ್ರೀ ಪ.... ಅವರ ಸೌಜನ್ಯದ ಮೇರೆ ನಿಜವಾಗಿಯೂ ಬಹು ವಿಸ್ತೃತವಾದುದು. 'ಆ ಲೇಖನಗಳನ್ನು ನಾನು ಬರೆದೆ' ಎನ್ನುವುದಕ್ಕೆ ಅವರಿಗೆ ಇಷ್ಟವಿಲ್ಲ. 'ನಿನ್ನೆ, ಜನತೆಯನ್ನು ಸರಿಯಾದ ಹಾದಿಗೆ ಹಚ್ಚುವಂಥ, ವಿದ್ವತ್ಪೂರ್ಣ ಅಗ್ರಲೇಖನ ಬರೆದೆ' ಎನ್ನುವುದಿಲ್ಲ.

ಒಂದು ಕಾರ್ಯಕ್ಷೇತ್ರದಲ್ಲಿ ದುಡಿಯುತ್ತಿದ್ದಾಗ ಗೆಳೆಯರು ಇಡೀ ಒಂದು ಕೊಠಡಿಯನ್ನೇ—ಅವರಿದ್ದುದು ಅತಿ ಚಿಕ್ಕ ಮನೆಯಲ್ಲಿ—ಪ..... ಅವರಿಗೆ ಕೊಟ್ಟರು. ಅವರು ಕೇಳದೆ ಕೊಟ್ಟುದನ್ನು ಇವರು ಸ್ವೀಕರಿಸಿದರು. ಕಾರಣ ಕೇಳುವುದೂ ಇವರಿಗೆ ಬೇಕಿಲ್ಲ. "ಬಹುಶಃ ನನ್ನ ಆರೋಗ್ಯದ ಸೂಕ್ಷ್ಮಸ್ಥಿತಿ ನೋಡಿ ಹೀಗೆ ಮಾಡಿದ್ದಾರು" ಎಂದು ಸಮಾಧಾನ ಮಾಡಿಕೊಳ್ಳುವರು!

ಸತ್ಯಾಗ್ರಹಿಯೊಬ್ಬನು ಮಾಡಬಹುದಾದ ತ್ಯಾಗಗಳಿಗಾದರೂ ಕೊನೆಯಿದೆಯೆ? ಇಲ್ಲಿನ ಸ್ವಯಂಸೇವಕನ ಜೀವನದ ದಾರುಣಚಿತ್ರವೊಂದೇ ಅದನ್ನು ಪ್ರತಿಬಿಂಬಿಸದು. ಆತ ವಾಚಕರಿಗೆ ಪರಿಚಯಮಾಡಿಕೊಡುವ, ಐಶ್ವರ್ಯವನ್ನೆಲ್ಲಾ ದೇಶಸೇವೆಗಾಗಿ ವಿನಿಯೋಗಿಸಿ ಲಕ್ಷಾಧಿಪತಿಯ ಸ್ಥಾನದಿಂದ ಭಿಕ್ಷಾಧಿಪತಿಯದಕ್ಕೆ ಇಳಿದ ಶ್ರೀಮಂತ, ಲಾಠೀ ಏಟು ತಿಂದವರನ್ನು ಉಪಚರಿಸಲಿಕ್ಕೆಂದು ಹೋಗಿ ತಾನೇ ಶಿಕ್ಷಿಸಲ್ಪಟ್ಟು ವೈದ್ಯಕೀಯ ಸಹಾಯವಿಲ್ಲದ ಡಾಕ್ಟರ್, ಸತ್ಯಾಗ್ರಹದ ಫಲವಾಗಿ ತೀರ ಹುಚ್ಚನಾಗಿದ್ದ ಲೇಖಕರ ಒಬ್ಬ ಸಹೋದ್ಯೋಗಿ, ಇವರಂತಹರೆಷ್ಟು ಮಂದಿ ಈ ದೇಶದಲ್ಲಿಲ್ಲ ?

"ದೇಶಸೇವಕ ಪ್ರತಿಯೊಬ್ಬನೂ ತನ್ನ ಪಾಲಿನ ಕೆಲಸವನ್ನು ಸ್ವಲ್ಪವೂ ಗೊಣಗದೆ ನಗುನಗುತ್ತ ಮಾಡುತ್ತಾನೆ. ಈ ಸೇವೆಗೆ ಸಿಗುವ ಪ್ರತಿಫಲವೋ—ದಿನಕ್ಕೆರಡು ಹೊತ್ತು ಒರಟೊರಟು ತಿಂಡಿ, ಈ ಗಳಿಗೆಗೋ ಆ ಗಳಿಗೆಗೋ ಕಾದಿರುವ 'ವಾರಂಟು'!" ಹಾಗೆಂದು ಯಾರೂ ತಮ್ಮ ಕರ್ತವ್ಯವನ್ನು ಮಾಡದೆ ಹಿಂದುಳಿಯುವುದಿಲ್ಲ.

ತನ್ನ ಅಭಿಪ್ರಾಯಗಳನ್ನು

ಶಕ್ತಿಪೂರ್ಣ ಭಾಷೆಯಲ್ಲಿ ಅಲ್ಲಲ್ಲಿ ಹೇಳುವ ಕಲೆ ಬಹು ಚೆನ್ನಾಗಿ ಈ ಸ್ವಯಂ ಸೇವಕನಿಗೆ ಸಾಧಿಸಿದೆ. ಕೆಳಗೆ ನೆಲದ ಉಡಿಯಲ್ಲಿ ಕೆಲಸ ಮಾಡುತ್ತಿದ್ದ ಪಠಾಣರನ್ನು ಕಂಡಾಗ ಈತನಿಗೆ ಹೊಳೆಯುತ್ತದೆ: "ಇದೇ ಜನ ಪಟ್ಟಣಗಳಲ್ಲಿ ಸೇರಿ ಸಾಹುಕಾರಿಕೆಯ

ನಕ್ಷತ್ರವೃತ್ತಿಯನ್ನು ನಡೆಸಿ ಜನರನ್ನು ಸುಲಿಯುತ್ತಾರೆ; ಇನ್ನೊಂದು ಕಡೆ ಹೀಗೆ. ಇವರಿಗೆ ಅಲ್ಲೇ ಅನ್ನ ಸಿಗಬಾರದೇಕೆ ಅವರ ಮನೆಯಲ್ಲಿ?" ನಾಡಿನ ಹಣ ನಾಡಿನ ಮಂದಿಗಾಗಿಯೇ ವಿನಿಯೋಗವಾಗಬೇಕೆಂದು ಅವರ ಆಸೆ. ಅದರಲ್ಲಿ "ಹಿಂದೀಯರನ್ನು ಹೊರಕ್ಕಟ್ಟಿರಿ!" ಎಂದು ಘೀಳಿಡುವ ಬರ್ಮೀಯರ ಇಲ್ಲವೆ ಸಿಂಹಳೀಯರ ಅವಿಸ್ತೃತ ಬುದ್ಧಿಕೋನ ಕಂಡುಬರುವುದಿಲ್ಲ.

"ಹಳ್ಳಿಗಳಲ್ಲಿ ಪಟೇಲ ತಲಾಟಿಗಳೇ ಅಧಿಕಾರಿಗಳ ಅಧಿಕೃತ ಪ್ರತಿನಿಧಿಗಳು. ಅವರ ಅಣ್ಣತಮ್ಮಂದಿರನ್ನು ಪೀಡಿಸಿ ಹಿಂಡಲಿಕ್ಕೆ ಇವರೇ ಏಜಂಟರು". ಈ ವಾಕ್ಯಗಳನ್ನು ಬರೆದ ವ್ಯಕ್ತಿಯ ಮನೋಭಾವನೆಯನ್ನರಿಯುವುದು ಹೆಚ್ಚು ಕಷ್ಟದ ಕೆಲಸವೇನೂ ಅಲ್ಲ.

೧೯೪೦ರಲ್ಲಿ ಮಹಾತ್ಮರು ಸತ್ಯಾಗ್ರಹವನ್ನಾರಂಭಿಸಿದಾಗ, "ಪ್ರತಿಯೊಬ್ಬ ಸತ್ಯಾಗ್ರಹಿಯೂ ತನ್ನ ಪ್ರತಿಜ್ಞೆ ಪೂರೈಸುವ ತನಕ ಸತ್ಯಾಗ್ರಹ ಮಾಡುತ್ತಲೇ ನಡೆಯಬೇಕು; ಒಮ್ಮೆಯೂ ಮನೆಗೆ ಹಿಂದಿರುಗಬಾರದು" ಎಂದು ಆಜ್ಞಾಪಿಸಿದರು. ೧೯೩೦ರಲ್ಲಿ ಅಂಥ ಆಜ್ಞೆಯಿರಲಿಲ್ಲವಾದರೂ ಯಾವ ಸತ್ಯಾಗ್ರಹಿಯೂ ತನ್ನ ಕಾರ್ಯರಂಗದಿಂದ ದೂರ ನಡೆದು ಮನೆಗೆ ಹೋಗಿ ಬರುವ ಆಸೆ ತೋರಿಸುತ್ತಿರಲಿಲ್ಲ. ಆದರೆ ತನ್ನ ಊರು ಸಮೀಪಕ್ಕೆ ಬಂದಾಗಲೊಮ್ಮೆ, "ಹಾಗೆಯೇ ಒಂದು ಹೊತ್ತು ನಮ್ಮ ತಾಯಿಯನ್ನು ನೋಡಿಕೊಂಡು ಮತ್ತೆ ಹಾರಿಹೋದರಾಯಿತಲ್ಲ. ನನ್ನನ್ನು ನೋಡಿ ಆಕೆ ಎಷ್ಟು ಸಂತೋಷಪಟ್ಟಾಳು!" ಎಂದು ಮಗ ಪುಳಕಿತನಾಗುತ್ತಾನೆ. ತನ್ನ ಆಶಯವನ್ನು ಸಮರ್ಥಿಸಿಕೊಳ್ಳುತ್ತಾ, 'ನಮ್ಮ ಮನೆಯಲ್ಲಿ ಒಂದು ವಾರ ನಿಂತರೆ ನಮ್ಮನ್ನೇನು ಗುಂಡಿಗೆ ಕೊಡುವುದಿಲ್ಲವಲ್ಲ' ಎಂದು ಸಮಾಧಾನ ಹೇಳಿಕೊಳ್ಳುತ್ತಾನೆ.

ತಾವು ವಾಸಿಸಿದ ಆಶ್ರಮದ ಬಳಿಯಲ್ಲಿನ ಕೊಳವನ್ನು ಕಂಡು ಲೇಖಕರು ಯೋಚಿಸುತ್ತಾರೆ; "ನಮ್ಮ ನಾಡು ತೀರ ಬಡನಾಡು, ಇಲ್ಲದಿದ್ದರೆ ಇಲ್ಲಿನ ಜನ ಮಹಾವೈಭವದಿಂದ ದೋಣಿಯಾಟಕ್ಕೆ ಅನುಕೂಲ ಮಾಡಿಕೊಳ್ಳದೆ ಬಿಡುತ್ತಿದ್ದರೆ?" ನಮ್ಮ ನಾಡು ಎಲ್ಲದರಲ್ಲೂ ಹೀಗೆಯೇ. ಖನಿಜೋತ್ಪತ್ತಿಗಳಿಂದ ತುಂಬಿದೆ; ಆದರೆ ಅವುಗಳ ಸದುಪಯೋಗವಾಗುತ್ತಿಲ್ಲ! ಧಾರಾಳ ಮಳೆಯಿದೆ; ಆದರೆ ಬೆಳೆ ಸಮೃದ್ಧವಾಗಿ ಬೆಳೆಯುವುದಿಲ್ಲ !

ಗಾಂಧೀಜಿ ಕಳೆದ ಸತ್ಯಾಗ್ರಹವನ್ನು ಸ್ವಾತಂತ್ರ್ಯ ಸಂಪಾದನೆಗೆ ಉಪಯೋಗಿಸದೆ ಉಪ್ಪಿನ ಕರ ತೆಗೆಸುವುದಕ್ಕಾಗಿಯೇ ನಡೆಸಿದರು ಎಂದು ಟೀಕಿಸುವವರು ಹಲವರಿದ್ದಾರೆ. ತಮ್ಮ ಗುರುಗಳ ಮೇಲಿನ ಟೀಕೆಯನ್ನು ಉತ್ತರಿಸುವುದಕ್ಕೆ ಯತ್ನಿಸುತ್ತಿದ್ದಾರೆಯೋ ಅನ್ನುವಂತೆ "ಜೈಲಿನಲ್ಲಿ..... ಪಲ್ಯಕ್ಕೆ ಉಪ್ಪು ತೋರಿಸಿಯೇ ಇರಲಿಲ್ಲ; ತೋರಿಸಿದ್ದರೂ ತೋರಿಸಿರಬಹುದು. ಆದರೆ ನಾಲಿಗೆಗೇನು ಅದರ ರುಚಿಯೇ ಗೊತ್ತಾಗುವುದಿಲ್ಲ.

'ಉಪ್ಪಿಗಿಂತಲೂ ರುಚಿಯಿಲ್ಲ'ವಲ್ಲವೇ? ನಮಗೆ ಈ ಉಪ್ಪಿನ ಒಂದು ಚುಟುಕು ಇಲ್ಲದ್ದು ಹೇಗೋ, ಹಾಗೇ ಬಡವರಿಗೆ ಉಪ್ಪಿನ ಒಂದು ಚುಟುಕು ಎಷ್ಟೋ ಬೆಲೆಯದ್ದಲ್ಲವೇ?" ಎಂದು ಪ್ರಶ್ನಿಸುತ್ತಿದ್ದಾರೆ.

ಅವರ ಅಭಿಪ್ರಾಯದಂತೆ ಮನುಷ್ಯ ನಿಜವಾಗಿ ವಿಚಿತ್ರ ಪ್ರಾಣಿ! ಗಾಳಿ ಬಂದತ್ತ ತಿರುಗುವ ದೋಣಿಯಿದ್ದಂತೆ. ಪರಿಸ್ಥಿತಿ ಹೇಗೆ ಬಂದರೆ ಹಾಗೆ ಹೋಗಬೇಕು.

ಜೈಲು ಸಂದರ್ಶಿಸುವುದಕ್ಕೆಂದು ಒಮ್ಮೆ ಯಾರೋ ಬಂದಿದ್ದವರಲ್ಲಿ ಒಬ್ಬ ಆಂಗ್ಲ ಸ್ತ್ರೀ ಕಲ್ಲುಕಡಿಯುತ್ತಿದ್ದ ತರುಣ ಖೈದಿಯೊಬ್ಬನ ಮೇಲೆ ಕನಿಕರಗೊಂಡು ಎರಡು ಸಂತೈಸುವ ನುಡಿಗಳನ್ನಾಡಿದಳು. ಆಗ ಅವಳ ಗಂಡ ಅಧಿಕಾರಿ ಅದನ್ನು ನೋಡಿದ. ನೋಡಿ ಹಿಂದಿರುಗಿ ಬಂದು ಅಲ್ಲಿಂದ ಆಕೆಯನ್ನು ಎಳೆದುಕೊಂಡು ಹೋದ. ಆಕೆಯ ಸೌಜನ್ಯವನ್ನು ನಿಂದಿಸಿದ: "ಖೈದಿಗಳಿಗೆ ದಯೆತೋರಿಸಿದವರುಂಟೆ? ನಾಯಿಗಳು!— ಸಾಯಲಿ, ಅವರಿಗೆ ಹೀಗೇ ಆಗಬೇಕು" ಎಂದ. ಇದನ್ನೆಲ್ಲ ನೋಡುತ್ತಲಿದ್ದ ಸ್ವಯಂಸೇವಕ ತಪ್ತನಾಗಿದ್ದಾನೆ 'ವಿಲಾಯತಿಯಲ್ಲಿ- ತನ್ನ ಸ್ವದೇಶದಲ್ಲಿ-ಈ ಅಧಿಕಾರಿ ಹೀಗೆ ಮಾಡಿದರೆ ಅವನಿಗೆ 'ಮೂರ್ಖಶಿಖಾಮಣಿ' ಎಂಬ ಬಿರುದು ಬರಬಹುದಾಗಿತ್ತು. ಸ್ವಲ್ಪವಾದರೂ ಸೌಶೀಲ್ಯವಿಲ್ಲ. ಅವನ ಕೆನ್ನೆಗೆ ಎರಡು ಎಳೆದುಬಿಡಲೇ ಅನ್ನಿಸುತ್ತದೆ. ಆದರೆ ನಾವು ಅಹಿಂಸಾವಾದಿಗಳಲ್ಲವೆ!" ಎನ್ನುತ್ತಾನೆ. ಈ ಧ್ವನಿಯಲ್ಲಿ ಕಟು ಟೀಕೆಯಿದ್ದಂತೆ, ತನ್ನ ಅಸಹಾಯಕತೆಯನ್ನು ತಾನೇ ಕಂಡು ನಾಚಿದಂತೆ, ಭಾಸವಾಗುತ್ತದೆ. ಅಹಿಂಸೆಯ ವಿಚಾರದಲ್ಲಿ ಯಾರು ಏನೇ ಹೇಳಲಿ; ಲೇಖಕರ ತತ್ವನಿಷ್ಠೆಯನ್ನು ದೂರುವ ಹಾಗಿಲ್ಲ.

ಗ್ರಂಥದಲ್ಲಿ, ಸ್ವಯಂಸೇವಕನಿಗೆ ವಿಪ್ಲವಭೈರವನ ಪರಿಚಯವಾದ ವಿಭಾಗ ಬಂದೊಡನೆಯೇ ಅತಿಕುತೂಹಲಪೂರ್ಣ ವಾಚನಕ್ಕೆ ಮೊದಲಾಗುವುದು. 'ಬಾಂಬಿನ ಬಂಗಾಳಿ ಬಾಬು'ವನ್ನು ಕಂಡು 'ಕ್ರಾಂತಿಪೂಜಾರಿ' ಎಂದು ಕಡೆಗಣಿಸುವುದರ ಬದಲಿಗೆ, ಆತನ ಬಳಿಸಾರಿ, ಸಹಾನುಭೂತಿ ತೋರಿಸಿ, ಸ್ವಯಂಸೇವಕ ಗೆಳೆತನ ಸಂಪಾದಿಸುತ್ತಾನೆ. ಎಲ್ಲಿಯೂ ತನ್ನ ಅಂಧವಿಶ್ವಾಸವನ್ನು ಪ್ರದರ್ಶಿಸುವುದಕ್ಕೆ ಆತನಿಗೆ ಅನುವು ದೊರಕಿಲ್ಲ, ಕಾರಣ—ಆತನು ಅಂಧವಿಶ್ವಾಸಿಯೇ ಅಲ್ಲ.

ಹೊಸತೊಂದು ಗುರಿ ವಿಧಾನ

ಈ ಗ್ರಂಥವನ್ನು ಬರೆಯುವುದರಲ್ಲಿ ಶ್ರೀ ರಾಯರು ತಮ್ಮ ಗುರಿಯನ್ನು ಸಾಧಿಸಿದ್ದಾರೆ. 'ಹೆಸರಾಂತ ಲೇಖಕನಾಗುವುದು' ಅವರ ಗುರಿಯಾಗಿತ್ತೆ? ಎಂಬ ಪ್ರಶ್ನೆಗೆ "ಅಂಥ ಆಸೆಯನ್ನು ಅವರು ಕಟ್ಟಿಕೊಳ್ಳದಿದ್ದರೂ ಖ್ಯಾತಿ ಅವರನ್ನು ಅರಸಿಕೊಂಡೇ ಬಂದಿದೆ" ಎಂಬ ಉತ್ತರ ಸಿಗುವುದು. ತಾವು ಮಾಡಿದುದು ಏನನ್ನೆಲ್ಲ? ಜೈಲಿಗೆ

ಹೋದುದು ಎಷ್ಟು ಬಾರಿ ? ಸಾಧಿಸಿದ ಮಹತ್ಕಾರ್ಯಗಳು ಯಾವುವು? ಎಂಬ ವಿಷಯಗಳ ಪಟ್ಟಿಯನ್ನು ಬರೆದು ಪ್ರಕಟಿಸಿದರೂ ಪತ್ರಿಕೆಗಳು ಕೀರ್ತಿ ತರುವುವು. ಆದರೆ ಅವರ ಗುರಿ ಇದೆಲ್ಲದಕ್ಕಿಂತ ಹಿರಿದಾಗಿತ್ತೆಂದು ಊಹಿಸಬೇಕಾಗಿದೆ. ಬಿಡುಗಡೆಯ ಬೆಲೆಯ ಬರಿಯ ಪಠನ ಮಾತ್ರದಿಂದ ಆದರ್ಶ ಸ್ವಯಂಸೇವಕರಾದ ಮಂದಿಯೆಷ್ಟು? ರಾಜಕಾರಣದಲ್ಲಿ ಅಭಿರುಚಿ ತೋರಿಸಿದ ಸಾಹಿತಿಗಳೆಷ್ಟು ಮಂದಿ? ಸಾಹಿತ್ಯದ ಸವಿಯನ್ನುಂಡ ರಾಜಕಾರಣಿಗಳು, ದೇಶಸೇವಕ-ಸೇವಿಕೆಯರು ಎಷ್ಟು ಮಂದಿ?

ರಾಯರ ಶೈಲಿ ವಿಶಿಷ್ಟವಾದುದು. ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ ನಾವೀನ್ಯವು ಅದರಲ್ಲಿದೆ. ಶ್ರೀ ಅಶ್ವತ್ಥನಾರಾಯಣರಾಯರ ಮನಮೋಹಕ ಶೈಲಿಯನ್ನು ಗ್ರಂಥದಿಂದ ಬೇರ್ಪಡಿಸಲು ಬರುವುದಿಲ್ಲ. ಆ ಶೈಲಿ ಶಕ್ತಿಪೂರ್ಣವಾಗಿದೆ. ಅದನ್ನು ಬರೆದ ಲೆಕ್ಕಣಿಕೆ ಬಿರುಸಾದುದಿರಬೇಕು; ಕೈ-ತೋಳು ಹಲವೊಂದು ಜೀವನಸಮರಗಳಲ್ಲಿ ಹೋರಾಡಿ ಪಳಗಿದುದಿರಬೇಕು.

"ಅರೆಬತ್ತಲೆಯಾದ ಅರೆಹೊಟ್ಟೆಯಾದ ವಿದ್ಯಾಗಂಧವಿಲ್ಲದ ರೈತರು ಸಾವಿರಾರು ಜನ ಹೀಗೆ ಬಂದು ನಿಂತು ಯುಗಯುಗಾಂತರದಿಂದ ತಮ್ಮ ಪಾಲಿಗೆ ಬಂದ ದೌರ್ಜನ್ಯವನ್ನು ತಿರಸ್ಕರಿಸುವುದನ್ನು ನೋಡಿ ಕನಿಕರ, ಸಹಾನುಭೂತಿಗಳಿಂದ ನಮ್ಮ ಎದೆ ಕರಗಿದರೆ, ಬಿರಿದರೆ ಏನಚ್ಚರಿ?" ಯಥಾರ್ಥತೆಯನ್ನು ಮುಖದೆದುರು ಎತ್ತಿಹಿಡಿದಾಗಲೂ ಕಣ್ಣುಮುಚ್ಚಿ, "ಇಲ್ಲ! ಇದು ಯಥಾರ್ಥತೆಯೆಂದು ನಾನು ಒಪ್ಪಿಕೊಳ್ಳುವುದಿಲ್ಲ!" ಎನ್ನುವ ಮಂದಿ ಮೇಲಿನ ಸಾಲುಗಳನ್ನೋದಬೇಕು; ಓದಿ ತಿಳಿಯಬೇಕು......"ಪ್ರತಿವಾದವೇನಾದರೂ ಉಂಟೋ?" ಅಧಿಕಾರಿಗಳ ಪ್ರಶ್ನೆ.

ಸ್ವಯಂಸೇವಕ ಸತ್ಯಾಗ್ರಹಿ ಉತ್ತರವೀಯುತ್ತಾರೆ: "ಇಲ್ಲ, ಇಲ್ಲ. ಶುದ್ಧಾಂಗವಾಗಿ ಇಲ್ಲ. ನಿಮ್ಮ ಕೈಯಲ್ಲಿ ಕೋರಾ ಕಾಗದಕ್ಕೆ ಸಹಿ ಹಾಕಿಕೊಟ್ಟಿದ್ದೇವೆ. ನಿಸ್ಸಂಕೋಚವಾಗಿ ನಮಗೆ ಶಿಕ್ಷೆ ಕೊಡಬಹುದು."

"ಆರು ವಾರ ಕಠಿಣ ಶಿಕ್ಷೆ."

"ಇಷ್ಟೆಯೆ?"

ಹಿರಿಯ ದೇಶಸೇವಕರು, ನ್ಯಾಯಾಧೀಶರ ತೀರ್ಮಾನದ ಬಳಿಕ ತಮ್ಮ ಆಸನದಿಂದೆದ್ದು, ನಗುಮೊಗರಾಗಿ "Thank you!" ಅಂದರೆ, ಇವರು ಕೇಳುತ್ತಿದ್ದಾರೆ: "ಇಷ್ಟೆಯೆ?" ಲೋಕದ ಅತಿಬಲಿಷ್ಠ ಸಾಮ್ರಾಜ್ಯಶಾಹಿ ರಾಷ್ಟ್ರವೊಂದನ್ನು ಎದುರಿಸುತ್ತಿರುವ ವೀರಯೋಧನೀತ. ಅವನಿಗೆ ಅಂಜಿಕೆ ಎಂಬುದು ಅರಿಯದು. ಮಹತ್ಕಾರ್ಯ ಸಾಧನೆಯಲ್ಲಿ ತನ್ನ ಅಸುವನ್ನರ್ಪಿಸುವುದಕ್ಕೂ ಸಿದ್ಧನಾಗಿ ಬಂದಿದ್ದಾನೆ. ಹಾಗೆಂದೇ ಹಸಿದ ಕೇಸರಿಯ ಮೀಸೆಯನ್ನು ಕುಲುಕಿಸುತ್ತಾ ಆತ ಕೇಳುತ್ತಿದ್ದಾನೆ: "ಇಷ್ಟೆಯೆ?"

ತನ್ನ ತಾಯಿಯ ಹಿರಿಯಾಸೆಗಳೆಲ್ಲ ಬರಿಯಾಸೆಗಳಾಗುತ್ತಿರುವಾಗ, ನೆನಸೆಲ್ಲ ಕನಸಾಗುತ್ತಿರುವಾಗ ಮಗ ದುಃಖಿಯಾಗಿದ್ದರೂ ಕೆಚ್ಚೆದೆಯ ಮಾತುಗಳನ್ನಾಡುತ್ತಾನೆ.

"ಏನಮ್ಮಾ! ಏನಂದೆ? ನಾನು ತಮಾಷೆ ಮಾಡುತ್ತಿರುವೆನೆಂದೇ? ಇಲ್ಲ, ಇಲ್ಲ. ನಿಜವಾಗಿಯೂ ಹೇಳುತ್ತಿದ್ದೇನೆ. ಮಾತೃಭೂಮಿಗಾಗಿ ಸಾವಿರಾರು ಜನ ಗಂಡು-ಹೆಣ್ಣು ಮಾಡಿದ ತ್ಯಾಗ, ಸಹಿಸಿದ ಕಷ್ಟ ಬರೀ ಕನಸಾದೀತೆ? ಬೇಗನೆ ನಮಗೆ ಸ್ವಾತಂತ್ರ್ಯ ಲಭಿಸಿ, ಜಗತ್ತು ಮೆಚ್ಚಿ ತಲೆದೂಗುತ್ತಿರಲು ನಮ್ಮ ಬಾವುಟ ಹಾರಾಡೀತು ಎಂದು ನಾನು ನಂಬಿದ ಹಾಗೆ ನೀನೂ ನಂಬಿಲ್ಲವೇ, ತಾಯಿ? ಗತಕಾಲದ ವೈಭವ ಪ್ರಭಾವಗಳಿಂದ ಭಾರತವರ್ಷ ಮತ್ತೆ ಬೆಳಗೀತೆಂದು ನಿನಗನಿಸದೇ ತಾಯಿ?" ಆದರೆ ತಾಯಿ ಅಳುವುದರ ಹೊರತು ಬೇರೇನು ಮಾಡಬಲ್ಲಳು?

ಅರ್ಥಪೂರ್ಣ ಲಘುಹಾಸ್ಯ

ರಾಜಕೀಯ ಹೋರಾಟವೆಸಗಿದ ಸತ್ಯಾಗ್ರಹಿ ಸ್ವಯಂಸೇವಕನ ದಿನಚರಿಯಲ್ಲೂ ಹಾಸ್ಯಕ್ಕೆ ಎಡೆಯುಂಟೆ? ಬಿಡುಗಡೆಯ ಬೆಲೆಯನ್ನೋದುತ್ತಿರುವಂತೆ ಹಲವೊಮ್ಮೆ ಮೈನವಿರೇಳುವುದು; ನರನಾಡಿಗಳಲ್ಲಿ ಬಿಸಿರಕುತದ ತೀವ್ರ ಸಂಚಾರವಾಗುವುದು; ಕಣ್ಣುಗಳಲ್ಲಿ ಕಂಬನಿದುಂಬುವುದು; ಅಟ್ಟಹಾಸಮಾಡುವ ಬ್ರಿಟಿಷ್ ಸಾಮ್ರಾಜ್ಯಸಿಂಹ ನಮ್ಮೆದುರು ಬಂದು ನಿಂತಂತೆ, ನಮ್ಮನ್ನು ಸಮರಕ್ಕಾಹ್ವಾನಿಸುವಂತೆ, ಭಾಸವಾಗುವುದು. ಆದರೆ ಇದೆಲ್ಲದಕ್ಕೂ ಮಿಗಿಲಾಗಿ ತಿಳಿಹಾಸ್ಯದ ಸವಿಯೂಟ ನಮಗೆ ಸಿಗುವುದು. ಈ ವಿಚಾರದಲ್ಲಿ ಲೇಖಕರು 'ಕಕಾ' ಮಾಲೆಯ ಕಸ್ತೂರಿ, ಕಾರಂತ, ಕೈಲಾಸಂರನ್ನು ನೆನಪು ಮಾಡಿಕೊಡುವರು.

ಧುರೀಣರೊಬ್ಬರನ್ನು ಬಂಧಿಸಿದುದಕ್ಕಾಗಿ ಊರಲೆಲ್ಲ ಹರತಾಳವಾಚರಿಸಿದ್ದಾರೆ. ಆ ಹರತಾಳವು ಯಶಸ್ವಿಯಾಗುವಂತೆ ಮಾಡಲು ಸ್ವಯಂಸೇವಕ ಯತ್ನಿಸಿದ್ದಾನೆ. ಆದರೂ ಕೊನೆಗೆ, "ಈ ಉತ್ಸಾಹದ ಫಲವಾಗಿ ನನಗೆ ಆ ದಿನ ಮುಂಜಾನೆ ಫಲಾಹಾರವಾಗಲಿಲ್ಲ. ಕೇಳಿದಷ್ಟು ಹಣ ಕೊಡುತ್ತೇನೆಂದರೂ ಹೋಟಲಿನವನೇನು ಜುಮ್ಮೆನ್ನುವ ಹಾಗಿಲ್ಲ." ಇದನ್ನೋದಿದವರು "ಅಯ್ಯೋ! ಪಾಪ!" ಎಂದು ಸಹಾನುಭೂತಿ ತೋರಿಸುವರೆಂಬ ಆಸೆಯೇನೋ ಲೇಖಕರಿಗೆ !

ಆದಷ್ಟು ಬೇಗನೆ ಸಮರಕಣವನ್ನು ಪ್ರವೇಶಿಸಬೇಕೆಂಬ ತವಕ ಈ ಸತ್ಯಾಗ್ರಹಿಗೆ. "ಯಾರು ಬಲ್ಲರು? ಮುಂದೆ ಹೋದವರಲ್ಲಿ ಯಾರುಯಾರಿಗೆ ಆಗಲೇ ಬಹುಮಾನ ಸಿಕ್ಕಿದೆಯೋ!" ಎನ್ನುತ್ತಾರೆ. ಹೋರಾಡಿ ಸೆರೆಮನೆ ಸೇರುವುದು ನಾನ್ನೂರು ಗಜ ಓಟದಲ್ಲಿ ಮೊದಲು ಓಡಿ ಬಹುಮಾನ ಪಡೆದಂತೆ ಇವನಿಗೆ !

ಕೆಲಸ ಬಿಟ್ಟ ಪಟೇಲರನ್ನು ಗೌರವಿಸುವುದಕ್ಕಾಗಿ ಸಭೆ ಸೇರಿತು. "ಪ್ರಾರಂಭದಲ್ಲಿ

ಪಟ್ಟಣಿಗರು ಕೆಲವರು, ನಾಡಸೇವೆಗಾಗಿ ಹಳ್ಳಿಗರು ಇಂಥ ದಿಟ್ಟತನ ಹೆಜ್ಜೆ ಹಾಕಿದುದಕ್ಕಾಗಿ ಅವರನ್ನು ಹೊಗಳಿದರು. ಇದು ಚಿಲ್ಲರೆ ಕಾರ್ಯಸಾಧನೆಯಲ್ಲ!" ಯಾವುದು—? ನಾಡಸೇವೆಗಾಗಿ ಹಳ್ಳಿಗರು ದಿಟ್ಟತನದ ಹೆಜ್ಜೆ ಹಾಕಿದುದೆ?! ಇಲ್ಲವೆ ಪಟ್ಟಣಿಗರು ಕೆಲವರು ಅವರನ್ನು ಹೊಗಳಿದುದೆ?!

ಶ್ರೀ ಕೃಷ್ಣಶರ್ಮರ ವರ್ಧಾಯಾತ್ರೆಯ 'ಗೆಟೌಟ್' ಅಧ್ಯಾಯದಲ್ಲಿ ನಾವು ಹೊಟ್ಟೆತುಂಬ ನಕ್ಕು ಆನಂದಿಸುವುದು ಕೊನೆಗೆ 'ಗೆಟೌಟ್' ಎಂದರೆ 'ಗೆಸ್ಟ್ ಹೌಸ್' ಎಂದು ತಿಳಿದಾಗ. ಅಂತಹ ಕೌಶಲ್ಯಗಳನ್ನೇ ಶ್ರೀ ಅಶ್ವತ್ಥನಾರಾಯಣರಾಯರೂ ತೋರಿಸದೆ ಇಲ್ಲ. ಸತ್ಯಾಗ್ರಹಿ ತನ್ನ ಗೆಳೆಯನ ಕುರಿತು ಆ ತನಕ ಏನೂ ಪರಿಚಯ ಮಾಡಿಕೊಡದೆ ಫಕ್ಕನೆ "ನನ್ನ ಗೆಳೆಯ ಜನರಿಗೆ ತಿಳಿಯುವಂತೆ ಚೆನ್ನಾಗಿ ಮಾತನಾಡಿದ. ಅವನ ಮಾಸ್ತರರ ಕೆಲಸ ಈಗ ಒಳ್ಳೇ ಉಪಕಾರ ಮಾಡಿತು" ಎಂದು ಬರೆದು, ಓದುಗರು ನಸುನಕ್ಕು ತಲೆದೂಗುವಂತೆ ಮಾಡುತ್ತಾರೆ.

ಗ್ರಾಮದ ಜನರಿಗೆ ಸ್ವಯಂಸೇವಕರು ಮಾಡಿಕೊಂಡ ಹತ್ತು ವಾಕ್ಯಗಳ ಬಿನ್ನಹವು ಕಿರಸ್ತಾನರ ಬೈಬಲ್ಲಿನ ಹತ್ತು ಮಹಾಸೂತ್ರಗಳಾದುವು !

ತುರಂಗದ ದ್ವಾರದ ಬಳಿ ಬಂದಾಗ ಜವಾದಾರ ಝಡತಿ ಮಾಡಿದ. ಪ್ರಾಣರಕ್ಷಣೆಗಾಗಲೀ ಪ್ರಾಣಹಿಂಸೆಗಾಗಲೀ ಆಯುಧಗಳಿರಬಾರದಷ್ಟೆ! ಕಡೆಗೆ ಕತ್ತಿನಲ್ಲಿ ಜನಿವಾರವೂ ಇರಬಾರದು, ಆದರೆ "ನನಗೆ ಈ ವಿಸರ್ಜನ ನಾಟಕದ ಅಗತ್ಯ ಬೀಳಲಿಲ್ಲ; ಆಶ್ರಮದ ಕೊಳದಲ್ಲಿ ಪವಿತ್ರ ಜಾಹ್ನವಿಗೆ ನಾನೇ ಮೊದಲು ಒಪ್ಪಿಸಿದ್ದೆ. ಈಸುವಾಗ ಅದರಿಂದ ಬಹಳ ತೊಂದರೆಯಾಗುತ್ತಿತ್ತು!" ಒಳ್ಳೆಯ ಬ್ರಾಹ್ಮಣ! ಗುರು ಗಾಂಧೀಜಿ ಯಜ್ಞೋಪವೀತವನ್ನು ಬಿಟ್ಟು ಇರುವವರಲ್ಲ; ಈ ಶಿಷ್ಯ ಬಿಡದೆ ಇರುವವರಲ್ಲ!

ಸಂಜೆಯಾಗುತ್ತಲೇ ಇಹದ ಜ್ಞಾನವಾಯಿತಂತೆ! "ಹೊಟ್ಟೆಯಲ್ಲಿ ಡೊಂಬರು ಆಡುತ್ತಿದ್ದಾರೆ. ಊಟದ ಗತಿಯೇನು ?" ಎಂದು ಗೆಳೆಯರನ್ನು ಕೇಳಬೇಕಾಯಿತು. ಆದರೆ ತಡವಾಗಿ ಜೈಲು ಸೇರಿದವರಿಗೆ ಊಟ ಹಾಕಬೇಕೆಂಬ ನಿಯಮವಿರಲಿಲ್ಲ ! ಜೈಲುಜೀವನದ ಸರಸಭಾಗವನ್ನು ಓದಿ ಮರೆಯುವಂತಿಲ್ಲ. 'ಆಲ್‌ಬೇಲ್' ಕೂಗು, 'ಬುರಾಕು', 'ತಿಕ್ಕಿ-ಫಿಕ್ಕಿ'ಗಳು ಶಾಶ್ವತವಾಗಿ ಉಳಿಯುವಂತೆ ಶ್ರೀ ರಾಯರು ಮಾಡಿದ್ದಾರೆ. "ಹೊಲೆಯನೊಬ್ಬ ಮಾಡಿದ ಅಡಿಗೆಯನ್ನು ಹೊಲಸುನಾರುವ ಸವರ್ಣನೊಬ್ಬ ಬಡಿಸಿದ್ದು, ತಿನ್ನಬೇಕಾಗಿದೆ" ಅಂತೆ. ಹೊಲೆಯನೇ ಬಡಿಸುತ್ತಿದ್ದರೆ ? 'ಹೊಲಸು ನಾರುವ ಸವರ್ಣ' ಅದರಲ್ಲಿ ಕೈ ಇಕ್ಕಿದುದರಿಂದ ಅದು ಒಗ್ಗದೆಹೋಯಿತು ! ಎಂತಹ ಕ್ರೂರಸತ್ಯ; ಶ್ರೇಷ್ಠ ವಿಡಂಬನ! 'ಬಾಂಬಿನ ಜಾತಿಗೆ ಸೇರಿದವನಾದ' ಬಂಗಾಳಿ ಬಾಬು

ಜೈಲಧಿಕಾರಿಗಳ ಒತ್ತಾಯಕ್ಕೆ 'ಬಾಂಬು ಮಾಡಿ ತೋರಿಸುವೆ'ನೆಂದು ಹೇಳಿ, ಮಂಜಿನಗಡ್ಡೆ, ಸಕ್ಕರೆ, ಹಾಲು ತರಿಸಿ, ಐಸ್‌ಕ್ರೀಂ ಮಾಡಿ ಕುಡಿದ ಕಥೆ, ರಸಿಕಜೀವಿಗಳನ್ನು ಸೆರೆಮನೆಗೆ ಆಕರ್ಷಿಸುವಷ್ಟು ಶಕ್ತವಾಗಿದೆ.

ಜೈಲಿನಲ್ಲಿ ಸಂಗಡಿಗರೊಂದಿಗೆ ಹರಟೆಹೊಡೆಯುತ್ತಿದ್ದಾಗ ಒಬ್ಬರು ಹೇಳಿದರು: "ನೀನೇ ಕಣಯ್ಯ ಹಿಂದುಸ್ಥಾನದ ಪ್ರಜಾಪ್ರಭುತ್ವದ ಮೊದಲನೇ ಅಧ್ಯಕ್ಷ" ಎಂದು. ಸತ್ಯಾಗ್ರಹಿ-ಸ್ವಯಂಸೇವಕ ಉತ್ತರವಿತ್ತ: "ಸದ್ಯ, ನನ್ನ ಆಮಶೌಚ ನಿಲ್ಲಲಿ; ಆಮೇಲೆ ನೋಡೋಣ!

ಮ್ಯಾಕ್ಸಿಂ ಗಾರ್ಕಿಯ 'ತಾಯಿ'

ರಷ್ಯನ್ ಸಾಹಿತ್ಯದಲ್ಲಿ—ಏಕೆ? ಜಗತ್ತಿನ ಸಾಹಿತ್ಯದಲ್ಲೇ—ಮ್ಯಾಕ್ಸಿಂಗಾರ್ಕಿಯ Mother ಕಾದಂಬರಿಗೆ ಒಂದು ಹಿರಿಯ ಸ್ಥಾನವಿದೆ. ಝಾರ್ ಅರಸರ ದಬ್ಬಾಳಿಕೆಯ ಕಾಲದಲ್ಲಿ ಕ್ರಾಂತಿಕಾರಿಯಾಗಿದ್ದ ಯುವಕನೊಬ್ಬನ ತಾಯಿಯ—ಆದರ್ಶ ತಾಯಿಯ—ಜೀವಿತದ ಸೊಗಸಾದ ಚಿತ್ರ ಅದು. ದೇವರಲ್ಲಿ ವಿಶ್ವಾಸವುಳ್ಳ—ಅರಸನಲ್ಲಿ ಭಕ್ತಿಯುಳ್ಳ— ಆ ತಾಯಿ ಕೊನೆಗೂ ಮಗನ ಹಾದಿಗೇ ಬರುವ ಮಾರ್ಮಿಕ ಕತೆ. ಬಿಡುಗಡೆಯ ಬೆಲೆಯಲ್ಲಿ ಕಂಡುಬರುವ ತಾಯಿಗೂ ಗಾರ್ಕಿಯ ತಾಯಿಗೂ ಅಜಗಜಾಂತರವಿದೆ. ಆದರೆ ಈ ಎರಡು ಕೃತಿಗಳಲ್ಲೂ ತಾಯಿಯ—ಹೆತ್ತ ತಾಯಿಯ— ಎರಡು ಸಹಜಚಿತ್ರಗಳಿವೆ.

'ಬಿಡುಗಡೆಯ ಬೆಲೆ'ಯಲ್ಲಿರುವ ತಾಯಿಗೆ ಮಗನ ಕಾರ್ಯಸಾಧನೆಯ ಕುರಿತು ಆತುರವಿಲ್ಲ. ಮಗನು 'ಒಳ್ಳೆಯವ'ನಾಗಿ ಬದುಕಿ ಬಾಳಬೇಕೆಂಬುದು ಅವಳ ಆಸೆ. ಹಲವೊಮ್ಮೆ ಹೆತ್ತ ಕರುಳು ಮಗನಿಗಾಗಿ ಮಿಡಿದುಕೊಳ್ಳುತ್ತದೆ. "ಎಂಥ ಪೋಲಿಫಟಿಂಗನಾದರೂ ಸರಿಯೆ, ಮಗನನ್ನು ಮಡಿಲಲ್ಲಿ ಹಾಕಿಕೊಳ್ಳುತ್ತಾಳೆ' ಎಂದಿರುವರು. ಲೇಖಕರು ಸೆರೆಮನೆಯಿಂದ ಬಿಡುಗಡೆಯಾಗಿ ರೋಗಪೀಡಿತನಾಗಿ ಬದುಕಿ ಉಳಿದ ಬಳಿಕ, ನಿರುದ್ಯೋಗಿಯಾಗಿ ಅಲೆಯಬೇಕಾದಾಗ, ತಾಯಿ ಕೇಳುತ್ತಾಳೆ; "ನಿನಗೆ ಸ್ವಾತಂತ್ರ್ಯ ಸಿಕ್ಕಂತಾಯಿತೆ, ಮಗೂ?" ಅದು ಕೂರಂಬಾಗಿ ತೋರಬಹುದು, ಆದರೆ ಹಾಗೆ ಹೇಳದೆ ಆಕೆ ಬೇರೇನು ಮಾಡಬಲ್ಲಳು?

ತಾಯಿಯ ಅನುಜ್ಞೆಯಿಲ್ಲದೆ ಸತ್ಯಾಗ್ರಹಕ್ಕೆಂದು ಓಡಿಹೋದುದಕ್ಕೆ ಅವಳು ಹೇಳುತ್ತಾಳೆ: "ನೀನು ಸತ್ಯಾಗ್ರಹಿಯಲ್ಲವೇನಪ್ಪ? ನಿನ್ನ ತಾಯಿಗೆ ಸುಳ್ಳು ಹೇಳಿ ಮೋಸ ಮಾಡಿ ಹೇಡಿಯ ಹಾಗೆ ಓಡಿಹೋಗುತ್ತಾರೆಯೆ? ಇದೆಯೇ ನಿನ್ನ ಸತ್ಯದ ಆಗ್ರಹ? ನಿನ್ನ ಸತ್ಯದ ಮಾತಿಗೂ ಈ ನಡತೆಗೂ ಎಷ್ಟು ವ್ಯತ್ಯಾಸ ನೋಡು!". ಇದನ್ನು ಕೇಳಿದಾಗ ಈ ಭೂಗರ್ಭದಲ್ಲಿ ಇಳಿದು ಹೋಗೋಣ ಎನ್ನಿಸಬಹುದು. ತಾಯಿ

ಜತೆಯಲ್ಲೇ ಕಣ್ಣೀರನ್ನೂ ಸುರಿಸಿದಳೆಂದರೆ, ಆಕೆಯ ಸೆರಗಿನಲ್ಲಿ ಮುಖವನ್ನು ಮರೆಮಾಡಿ ಅಳಬೇಕಾಗಬಹುದು.

ತಾಯಿಯನ್ನು ಅತಿ ನಿಕೃಷ್ಟಸ್ಥಿತಿಯಲ್ಲಿ ಬಿಟ್ಟು ಮಗ ಜೈಲಿಗೆ ಹೋಗಿದ್ದಾನೆ. ಜೈಲಿನಿಂದ ಜ್ವರ-ಕಾಯಿಲೆಗಳೊಡನೆ ಹಿಂದಕ್ಕೆ ಬಂದು, "ಉಹು ! ಈ ಮನೆಯಲ್ಲಿರಲಾರೆ; ಒಳ್ಳೆ ಮನೆ ಬೇಕು" ಎನ್ನುತ್ತಾನೆ.

ಆಕೆ ಕೇಳುತ್ತಾಳೆ: "ಅಷ್ಟು ಹೆಚ್ಚು ಬಾಡಿಗೆ ಹೇಗೆ ಕೊಡಬೇಕಪ್ಪಾ ಈ ಕಾಲದಲ್ಲಿ?"

"ಹಾಗಾದರೇನು, ನಾನು ಸಾಯಲಿ ಎಂದು ನಿನ್ನ ಅಭಿಪ್ರಾಯವೇನು ?" ಎಂದು ಮಗನ ವಿಕಟ ಪ್ರಶ್ನೆ. ಹೌದು ; ಎಂಥ ವಿಕಟ ಪ್ರಶ್ನೆ ! ಆದರೆ ತಾಯಿಯ ಹೃದಯ ಬಹು ವಿಶಾಲವಾದುದು; ಏನು ಮಾಡುವುದಕ್ಕೂ ಅದು ಹಿಂಜರಿಯದು.

ಮಗನ ಬೆಂಬಲವಾಗಿ ನಿಂತ ತಾಯಿಯ ಚಿತ್ರವನ್ನು ಗಾರ್ಕಿ ತನ್ನ ಕೀರ್ತಿವೆತ್ತ ಕುಂಚದಿಂದ ಚಿತ್ರಿಸಿದ್ದಾನೆ. ಅಂತಹ ತಾಯಂದಿರು ಭಾರತದಲ್ಲೂ ಇಲ್ಲದೆ ಇಲ್ಲ. ಆದರೆ ಆ ತಾಯಿಯ ಇನ್ನೊಂದು ಚಿತ್ರವನ್ನು ಶ್ರೀ ಅಶ್ವತ್ಥ ನಾರಾಯಣರಾಯರು ಅಳುಕಿಲ್ಲದೆ ಬರೆದಿದ್ದಾರೆ ; ಚೆನ್ನಾಗಿ ಬರೆದಿದ್ದಾರೆ.

'ಬಿಡುಗಡೆಯ ಬೆಲೆ'ಯು ಕನ್ನಡ ಸಾಹಿತ್ಯದಲ್ಲೊಂದು ಹೊಸ ಯತ್ನ. ಆ ಯತ್ನ ಸಫಲವಾಗಿದೆ; ಎಣಿಕೆಯನ್ನು ಮೀರಿ ಸಫಲವಾಗಿದೆ. ಪರದಾಸ್ಯದಲ್ಲಿರುವ ಭಾರತೀಯ ಬಂಧವಿಮೋಚನೆಗೆ ಅದು ಕರೆಕೊಡುತ್ತಿದೆ. ಅದೊಂದು ಉಜ್ವಲ ಕೃತಿ, ಅಮರ ಗ್ರಂಥ; ಜತೆಯಲ್ಲೆ ಒಂದು ಒಳ್ಳೆಯ ಜೀವನ ಸಾಹಿತ್ಯ.

- ಮನೋಹರ ಗ್ರಂಥಮಾಲೆ ತನ್ನ ಪ್ರಕಟಣೆಗಳನ್ನು ಕುರಿತು ಏರ್ಪಡಿಸಿದ 'ನನಗೆ ಮೆಚ್ಚುಗೆಯಾದ ಗ್ರಂಥ' ಪ್ರಬಂಧಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ. ಅಚ್ಚಾದದ್ದು ೧೯೪೨ರ ಜುಲೈ ತಿಂಗಳ 'ಜೀವನ'ದಲ್ಲಿ.

೧೯೪೫

ಹೊಸ ಸೃಷ್ಟಿಯ ಪ್ರಸವದ ಕಡೆಗೆ !

"ಮಧ್ಯಮ ವರ್ಗದ ಸಾಹಿತ್ಯ, ಕೂಲಿಕಾರನ ಸಾಹಿತ್ಯ, ಬೋರೇಗೌಡನ ಸಾಹಿತ್ಯ ಎಂತ ಯಾಕೆ ವಿಂಗಡಿಸುತ್ತೀರಿ? ಅಂಥಾದ್ದೇನೂ ಇಲ್ಲ. ಹಾಗೆ ವಿಭಜನೆ ಮಾಡುವುದೆಲ್ಲ ಹುಚ್ಚುತನ. ಸಾಹಿತ್ಯ ಸಾಹಿತ್ಯವೇ-" ಎಂದು ಎದೆಯ ಮೇಲೆ ಕೈಯಾಡಿಸಿ, 'ನಿಮ್ಮಾಣೆ' ಇಟ್ಟು, ನಿರ್ದಾಕ್ಷಿಣ್ಯವಾಗಿ ಹೇಳುವ ಸಾಹಿತಿಗಳು ಕೆಲವರಿದ್ದಾರೆ. ಆದರೆ ಇದಕ್ಕೆ ತೀರ ಭಿನ್ನವಾದ ಅಭಿಪ್ರಾಯವುಳ್ಳ ಸಾಹಿತಿಗಳೂ, ವಿಮರ್ಶಕರೂ ಬೇಕಷ್ಟು ಜನ ಇದ್ದಾರೆ—ಎಂದು ನಮ್ರತೆಯಿಂದ ಹೇಳಲೇಬೇಕಾಗುತ್ತದೆ.

ದಕ್ಷಿಣದ ಹೈದರಾಬಾದಿನಲ್ಲಿ ಮೊನ್ನೆ ಅಖಿಲ ಭಾರತ ಉರ್ದು ಪ್ರಗತಿಶೀಲ ಲೇಖಕರ ಪ್ರಥಮ ಸಮ್ಮೇಳನ ಜರುಗಿತು. ಅದರ ಅಧ್ಯಕ್ಷತೆ ವಹಿಸಿದ್ದ ಸುಪ್ರಸಿದ್ಧ ಉರ್ದು ಕತೆಗಾರರೂ ಕಾದಂಬರಿಕಾರರೂ ಆದ, ಕೃಷನ್‌ಚಂದರ್ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು :

"ನಮ್ಮ ಪ್ರಗತಿಶೀಲಸಾಹಿತ್ಯದಲ್ಲಿ ಹೆಚ್ಚಿನಂಶ ಮಧ್ಯಮವರ್ಗದ ಜೀವನವನ್ನೇ ಚಿತ್ರಿಸುತ್ತದೆ. ಸುತ್ತಲಿನ ಪರಿಸ್ಥಿತಿಯ ಫಲವಾಗಿ ಬೇರೇನೂ ಸಾಧ್ಯವಿಲ್ಲದೆ ಹೋಗಿದೆ ಎಂಬುದೂ ಸರಿ. ಆದರೆ ಈಗ ಈ ಗಡಿ ಎಲ್ಲೆಗಳನ್ನು ಕಡಿದು ನಾವು ಮುಂದೆ ಹೋಗಬೇಕು. ಕೂಲಿಕಾರರ ಮತ್ತು ಕೃಷಿಕರ ಜೀವನವನ್ನು ನಾವು ಚಿತ್ರಿಸಬೇಕು; ಅವರ ಆಸೆ-ಆಕಾಂಕ್ಷೆಗಳನ್ನು ರೂಪಿಸಬೇಕು.......

"ಇದಕ್ಕೋಸ್ಕರ ನಮ್ಮ ಸಾಹಿತ್ಯದ ಮಟ್ಟವನ್ನು ನಾವು ಬದಲಿಸಬೇಕಾದೀತು. ಆದರೆ ಅದರಲ್ಲೇನೂ ದೋಷವಿಲ್ಲ. ಅದು ಸರಿಯಾದ್ದೇ. ಏಕೆಂದರೆ ಜನಸಾಮಾನ್ಯರೇ ಹೊಸ ಸಾಹಿತ್ಯಕ್ಕೆ ಮೂಲ. ಮುಖ ತಿರುಗಿಸಿ ಜನಜೀವನದ ಈ ಮಹಾಪ್ರವಾಹದಿಂದ ನಾವು ದೂರ ಸರಿದರೆ ಯಾವ ಸುಧಾರಣೆಯನ್ನೂ ಮಾಡಿದ ಹಾಗಾಗುವುದಿಲ್ಲ. ಆಗ ಸಾಹಿತ್ಯವಾಹಿನಿಯೇ ಬಾಡಿ ಬತ್ತಿಹೋಗುವುದು. ನಮ್ಮ ಜೀವಿತೋದ್ದೇಶವನ್ನು ನಾವು ಸಾಧಿಸಲಾರೆವು."

ಕೃಷನ್‌ಚಂದರ್ ಹಿರಿಯ ಸಾಹಿತಿಗಳನ್ನು ನಿಂದಿಸಿ ಅವರನ್ನು ಫಾಸಿಸ್ಟರು-ಗುಂಡರು ಎಂದು ಕರೆಯಲಿಲ್ಲ. ಸಂಕುಚಿತಮನೋವೃತ್ತಿಯ ಸಾಹಿತಿಯ ಬಾಯಿಯಿಂದ ಮೇಲಿನ

ಮಾತು ಹೊರಡದು. ತನ್ನ ಜನತೆಯನ್ನೂ ನಾಡನ್ನೂ ಪ್ರೀತಿಸುವ, ತನ್ನ ಜೀವನದಲ್ಲೊಂದು ಉದ್ದೇಶವಿದೆ ಎಂದು ಭಾವಿಸುವ, ವಿಶಾಲಹೃದಯಿ ಮಾತ್ರ ಹಾಗೆ ಹೇಳಬಲ್ಲ.

ಕಳೆದ ಎರಡು ವರ್ಷಗಳಲ್ಲಿ ಚಿತ್ರವಿಚಿತ್ರವಾಗಿ ನಮ್ಮ ನಾಡಿನಲ್ಲೂ ಪ್ರಗತಿಶೀಲ ಲೇಖಕರ ಆಂದೋಲನ ಹುಟ್ಟಿಕೊಂಡು ಬೆಳೆದಿದೆ. ಆದರೆ ಒಂದು ಸ್ಥಾನಕ್ಕಾಗಿ-ಮಾನಕ್ಕಾಗಿ-ಗೌರವಕ್ಕಾಗಿ-ಹೆಸರಿಗಾಗಿ ಕಚ್ಚಿ ಕಡಿದಾಡುವ ನಾಡು ನಮ್ಮದು. ಸಾಹಿತ್ಯದ ಶೀತೋದಕದಲ್ಲಿ ಅಂತರ್ಗತವಾಗಿ ಹರಿಯುವ ಉಷ್ಣೋದಕದ ಪ್ರವಾಹವಾಗಿ ಕನ್ನಡ ಪ್ರಗತಿಶೀಲ ಸಾಹಿತ್ಯ ಆಂದೋಲನ ರೂಪುಗೊಂಡಿಲ್ಲ. ಅಸಹಿಷ್ಣುತೆ ನಮ್ಮ ಧರ್ಮವಾಗಿದೆ. ಪರನಿಂದೆ ಅನುದಿನದ ಆಚರಣೆಯಾಗಿದೆ. ಹೈದರಾಬಾದಿನಲ್ಲಾದ ಸಮ್ಮೇಳನಕ್ಕೆ ನಾವು ಪ್ರಾಧಾನ್ಯಕೊಡಬೇಕಾಗಿರುವುದು ಆ ಕಾರಣದಿಂದಲೇ.

* * *

ಆ ಸಮ್ಮೇಳನಕ್ಕೆ ಐವರು ಅಧ್ಯಕ್ಷರಿದ್ದರು. ಅಷ್ಟು ಮಂದಿ ಉರ್ದು ಸಾಹಿತಿಗಳಲ್ಲಿ ಇಬ್ಬರು ಮಹಮ್ಮದೀಯರು, ಮೂವರು ಹಿಂದೂಗಳು. ಕೃಷನ್‌ಚಂದರಿಗೆ ಚಿಕ್ಕವಯಸ್ಸು; ಇನ್ನೂ ಮೂವತ್ತೈದು ದಾಟಿಲ್ಲ. ಆದರೆ ಮೌಲಾನಾ ಹಸ್ರತ್ ಮೊಹಾನಿ, ಖಾಜಿ ಅಬ್ದುಲ್ ಗಫರ್, ರಘುಪತಿ ಸಹಾಯ್ ಫರಾಕ್, ಸಜ್ಜದ್ ಜಹೀರ್ ಇವರೆಲ್ಲ ವಯಸ್ಸಿನಲ್ಲಿ ಹಿರಿಯರಾಗಿದ್ದರೂ ಕೃಷನ್‌ಚಂದರ ಪ್ರಧಾನಾಧ್ಯಕ್ಷತೆಗೆ ಆಕ್ಷೇಪಿಸಲಿಲ್ಲ. ರಾಜಕೀಯಕ್ಕೂ ಸಾಹಿತ್ಯಕ್ಕೂ ಏನೇನೂ ಸಂಬಂಧವಿಲ್ಲವೆನ್ನುವ ಮಡಿಮೈಲಿಗೆ ನಮ್ಮ ನಾಡಿನಲ್ಲಿ ಮಾತ್ರ. ಉರ್ದೂ ಸಾಹಿತ್ಯಕ್ಷೇತ್ರದಲ್ಲಿ ಬಹಳ ಬೆಳವಣಿಗೆಯಾಗಿದೆ. ಅಧ್ಯಕ್ಷಮಂಡಲದಲ್ಲಿ ಮುಸ್ಲಿಂ ಲೀಗ್ ಮನೋಭಾವನೆಯವರಿದ್ದರು, ರಾಷ್ಟ್ರೀಯವಾದಿ ಕಾಂಗ್ರೆಸ್ಸಿಗರಿದ್ದರು, ಕಮ್ಯುನಿಷ್ಟರಿದ್ದರು. ಪಕ್ಷರಾಜಕೀಯ ಹೊಸ ನಾಡನ್ನು ಕಟ್ಟುವ ಅವರ ಏಕ ಉದ್ದೇಶಕ್ಕೆ ಭಂಗತರಲಿಲ್ಲ.

ನಾಲ್ಕು ದಿನಗಳ ಕಾಲ ಸಮ್ಮೇಳನ ನಡೆಯಿತು. ದೂರದ ಜಯಪುರದ ಪಿ.ಇ.ಎನ್. (ಕವಿಗಳು, ನಿಬಂಧಕಾರರು, ಕಾದಂಬರಿಕಾರರು) ಸಮ್ಮೇಳನಕ್ಕಾಗಿ ಹೊರಡಲು ಸನ್ನಾಹಮಾಡುತ್ತಿದ್ದ ಸರೋಜಿನಿದೇವಿ ಈ ಸಮ್ಮೇಳನಕ್ಕೆ ಬಂದು, ಪ್ರಗತಿಶೀಲರ ಆಂದೋಲನ ಅಷ್ಟು ದೊಡ್ಡ ರೂಪ ತಳೆದಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು; ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು. ಅ. ಭಾ. ಪ್ರಗತಿಶೀಲ ಲೇಖಕ ಸಂಘದ ಸ್ಥಾಪಕ ಸದಸ್ಯರಲ್ಲೊಬ್ಬರಾದ ಡಾ॥ ಮುಲ್ಕ್‌ರಾಜ್ ಆನಂದರು, ಆಗ ತಾನೆ ಇಂಗ್ಲೆಂಡಿನಿಂದ ಹಿಂದಿರುಗಿದ್ದು, ಉರ್ದೂ ಬಾಂಧವರಿಗೆ ಶುಭಾಶಯ

ಗಳನ್ನು ಕೋರಿದರು. ಉರ್ದೂ ಸಾಹಿತ್ಯದ ನಾನಾಮುಖ ಬೆಳವಣಿಗೆಯ ಬಗ್ಗೆ ವಿಚಾರಗೋಷ್ಠಿಗಳೂ ಚರ್ಚಾಕೂಟಗಳೂ ಜರುಗಿದವು. ದಿವಂಗತ ಪ್ರೇಮಚಂದರ ಜೀವನ ಮತ್ತು ಕೃತಿಗಳ ವಿಷಯ ನಿಬಂಧಗಳು ಓದಲ್ಪಟ್ಟವು-ಹಿಂದೀ-ಹಿಂದೂಸ್ಥಾನೀ—ಉರ್ದೂ ಗೊಂದಲದ ವಿಚಾರವಾಗಿಯೂ ಚರ್ಚೆ ನಡೆಯಿತು. ಪ್ರಗತಿಶೀಲ 'ಮುಷಾಯಿರಾ'ಗಳಾದುವು.

ಸಮ್ಮೇಳನದಲ್ಲಾದ ನಿರ್ಧಾರಗಳು ಯಾವುವು?

ಬಲು ಹಿಂದೆ ಜೀವಿಸಿ ಕಾಲವಾದ ಪ್ರಗತಿಶೀಲ ಉರ್ದೂ ಕವಿ ಗಲೀಬನ ಸ್ಮಾರಕವಾಗಿ ಪ್ರತಿವರ್ಷ ೨೫೦ ರೂ.ಗಳನ್ನು ಆಯಾ ವರ್ಷದ ಉತ್ತಮ ಉರ್ದೂ ಕೃತಿಗೆ ಅ.ಭಾ. ಪ್ರಗತಿಶೀಲ ಲೇಖಕ ಸಂಘ ಉರ್ದೂ ಶಾಖೆಯವರು ಬಹುಮಾನ ಕೊಡಬೇಕು.

ಹಿಂದೀಯ ಚಲಚ್ಚಿತ್ರೋದ್ಯಮವನ್ನು ಕತ್ತುಹಿಸುಕಿ ಕೊಲ್ಲುತ್ತಿರುವ ಬಂಡವಾಳಗಾರರ ಲಾಭಬಡಕತನ ಮತ್ತು ವ್ಯಾಪಾರದೃಷ್ಟಿ ನಿಲ್ಲಬೇಕು.

ಉರ್ದೂ ಪತ್ರಿಕೋದ್ಯಮದಲ್ಲಿ ಕಾಣುತ್ತಿರುವ ಅಶ್ಲೀಲಪ್ರಿಯತೆ ಕೊನೆಗೊಂಡು, ಸತ್ಯಕ್ಕಾಗಿ-ನ್ಯಾಯಕ್ಕಾಗಿ ಉರ್ದೂ ಪತ್ರಿಕೆಗಳು ಹೋರಾಡಬೇಕು.

ಹೆಚ್ಚು ಪುಸ್ತಕ-ಪತ್ರಿಕೆಗಳನ್ನು ಪ್ರಕಟಿಸಲು ಅನುಕೂಲವಾಗುವಂತೆ ಸರಕಾರ ಕಾಗದದ 'ಕ್ವೋಟ'ವನ್ನು ಉದಾರವಾಗಿ ಕೊಡಬೇಕು...

ಪ್ರಖ್ಯಾತ ಉರ್ದು ಕ್ರಾಂತಿಕವಿ ಮಲಿಹಾಬಾದಿ ಜೋಶ್ ಹೈದರಾಬಾದ್ ಸಂಸ್ಥಾನದೊಳಗೆ ಕಾಲಿಡಬಾರದೆಂದು ನಿರ್ಬಂಧವಿತ್ತು. ಹಾಗಾಗಿ ಆ ಕವಿ ಸಮ್ಮೇಳನದಲ್ಲಿ ಭಾಗವಹಿಸುವುದು ಸಾಧ್ಯವಿರಲಿಲ್ಲ. ನಿಜಾಮ ಸರಕಾರ ಇನ್ನೂ ಆ ಪ್ರತಿಬಂಧಕಾಜ್ಞೆಯನ್ನು ತೆಗೆದುಹಾಕದೇ ಇರುವುದನ್ನು ಖಂಡಿಸುವ ಒಂದು ನಿರ್ಣಯವನ್ನೂ ಸಮ್ಮೇಳನ ಸ್ವೀಕರಿಸಿತು.

ಹೈದರಾಬಾದಿನಲ್ಲಾದ ಪ್ರಗತಿಶೀಲರ ಈ ಸಮ್ಮೇಳನಕ್ಕೂ ಜಯಪುರದಲ್ಲಾದ ಪಿ.ಇ.ಎನ್. ಸಮ್ಮೇಳನ ಇಲ್ಲವೆ ನಮ್ಮದೇ ಆದ ಸಾಹಿತ್ಯ ಸಮ್ಮೇಳನಕ್ಕೂ ವ್ಯತ್ಯಾಸ ಗಳಿವೆ. ಪಿ.ಇ.ಎನ್. ಸಮ್ಮೇಳನದ ಉದ್ಘಾಟನೆಯನ್ನು ದಿವಾನ ಸರ್ ಮಿರ್ಜಾ ಇಸ್ಮಾಯಿಲರು ಮಾಡಿದರು. ಹೈದರಾಬಾದಿನ ಸಮ್ಮೇಳನದ ಉದ್ಘಾಟನೆಗೆ ರಾಜಕುಮಾರರೂ ಬರಲಿಲ್ಲ; ಬೇರೆ ಯಾವ ನವಾಬ್ ಬಹದೂರ್ ಉಲ್‌ಮುಲ್ಕರೂ ದಯಮಾಡಿಸಲಿಲ್ಲ. ನಮಗೆ ರಾಜಾಶ್ರಯಬೇಕು, ಅವರಿಗೆ ಜನಾಶ್ರಯ ಸಾಕು.

* * *

ಹೀಗೆ ಹೇಳುವುದನ್ನೆಲ್ಲ, 'ಬರೇ ಕಲ್ಮಶದ ಅಪಪ್ರಚಾರ ಇದು' ಎಂದು

ಅಲ್ಲಗಳೆಯುವುದು ಸಾಧ್ಯವಿಲ್ಲ, ಮುಂದಿನ ನೂತನ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಮತೆಯ ಹೊಸ ನಾಡಿನಲ್ಲಿ—ಬದುಕಿ ಬಾಳಬೇಕಾದವರು ನಾವು. ಅಂಥ ನಾಡು ಬಂದಾಗ ನೋಡಿಕೊಳ್ಳೋಣ ಎಂದು ಸುಮ್ಮನಿರುವುದು ತಪ್ಪು. ರಾಜಕೀಯ ಹೋರಾಟದಿಂದಾಗಿ ಅಂಥ ನಾಡು ಲಭಿಸುವುದಿಲ್ಲ. ಮಹಾರಾಜರೊಬ್ಬರ ಕೃಪೆಯಿಂದಲೂ ನೂತನ ಕರ್ನಾಟಕ ಹುಟ್ಟುವುದಿಲ್ಲ. ಅದನ್ನು ಕಟ್ಟಬೇಕಾದವರು ನಾವು-ನಮ್ಮ ಜನ-ಆ ಮಹಾ ಉದ್ಯಮದಲ್ಲಿ ದುಡಿಯಬೇಕಾದವರು ನಾವು-ನಮ್ಮ ಸಾಹಿತಿಗಳು, ಕಲಾವಿದರು.

ಪ್ರತಿದಿನ ಪ್ರತಿನಿಮಿಷ, ಲೋಕದ ಒಂದೊಂದು ಘಟನೆಯೂ "ಕಾರ್ಯೋನ್ಮುಖರಾಗಿರಿ!" ಎಂದು ಕರೆಕೊಡುತ್ತಿದೆ. ಕರ್ನಾಟಕದಷ್ಟೆ ವಿಸ್ತೀರ್ಣವುಳ್ಳ ಫ್ರಾನ್ಸಿನಲ್ಲಿ, ಹಿಟ್ಲರ್ ಮುಸುಡೆತ್ತಿ ದೇಶದಾದ್ಯಂತ ಓಡಾಡುತ್ತಿದ್ದಾಗಲೇ, ೨೦,೦೦೦ ಮಂದಿ ಲೇಖಕರು, ಸಾಹಿತಿಗಳು, ಪತ್ರಿಕೋದ್ಯೋಗಿಗಳು ಮತ್ತು ಕಲಾವಿದರು ತಮ್ಮದೇ ಆದ ಫಾಸಿಸ್ಟ್ ವಿರೋಧೀ ಸಂಘಟನೆಯನ್ನು ಗುಪ್ತವಾಗಿ ರಚಿಸಿಕೊಂಡರು ಎಂದರೆ ಏನು ಹೇಳೋಣ ?

ಶುದ್ಧರಾಜಕೀಯ ಬೇರೆ—ಶುದ್ಧ ಸಾಹಿತ್ಯ ಬೇರೆ ಎಂದು ಸುಮ್ಮನಿರೋಣವೇ?

ಗಾಂಧಿವಾದಿ ಸಿದ್ಧವನಹಳ್ಳಿ ಕೃಷ್ಣಶರ್ಮರು ಹೈದರಾಬಾದಿನೊಳಗೆ ಕಾಲಿರಿಸ ಕೂಡದು ಎಂದು ಕಟ್ಟಪ್ಪಣೆಯಾದಾಗ, ಉಡುಪಿಯ ಸಮತಾವಾದಿ ಹರಿದಾಸ ಆಚಾರ್ ಪರಕೀಯ—ಮೈಸೂರು ನಗರದಿಂದ ಹೊರಡಬೇಕು—ಸಂಸ್ಥಾನವನ್ನೇ ಬಿಡಬೇಕು, ಎಂದು ಮೈಸೂರು ಸರಕಾರ ಆಜ್ಞೆ ಕೊಟ್ಟಾಗ, 'ನಮಗೂ ಇದಕ್ಕೂ ಸಂಬಂಧವಿಲ್ಲ' ಎಂದು ಸಾಹಿತಿಗಳು ಹೇಳಬೇಕಲ್ಲವೆ ?

'ಮಂಗಳೂರು-ಉತ್ತರ ಕರ್ನಾಟಕದವರು' ಎಂದು ಮೈಸೂರಿನ ಮಹನೀಯರು ಬಲಬದಿಗೆ ತಿರುಗುವುದೂ 'ಗಂಧದ ಗುಡಿಯವರು' ಎಂದು ಹೊರಗಿನವರು ಮೂದಲಿಸುವುದೂ ತಪ್ಪಲ್ಲವೇ ?

ಮನೋರಂಜನೆಯೊಂದೇ ರಸಿಕತೆಯೊಂದೇ ಸಾಹಿತಿಯ ಲಕ್ಷಣವಲ್ಲ. ಶುದ್ಧಸಾಹಿತ್ಯದ ಬುರುಡೆ ಹತ್ತೊಂಬತ್ತನೆಯ ಶತಮಾನದ್ದು—ಈಗಿನದಲ್ಲ.

ಆ ದೇಶ-ಈ ದೇಶಗಳ ಉದಾಹರಣೆಗಳಿಗೆ ಅನುಸಾರವಾಗಿ ನಾವು ನಡೆಯುವುದು ಬೇಡ. ಆದರೆ ನಮ್ಮ ಪ್ರೀತಿಯ ದೇಶದ್ದೇ ಆದ ಉರ್ದೂ ಭಾಷಾಪ್ರಪಂಚದಲ್ಲಿ ಆಗಿರುವ ಸಾಧನೆಯ ವಿಚಾರ ಏನು ತೀರ್ಮಾನಕ್ಕೆ ಬರೋಣ?

೧೯೩೬ರಲ್ಲಿ ಅ.ಭಾ. ಪ್ರಗತಿಶೀಲ ಲೇಖಕರ ಸಮ್ಮೇಳನ ದಿವಂಗತ ಪ್ರೇಮಚಂದರ ಅಧ್ಯಕ್ಷತೆಯಲ್ಲಿ ಜರುಗಿತು. ಅಲ್ಲಿಂದ ಇಲ್ಲಿಯವರೆಗೆ ಸಾಹಿತ್ಯ

ನಾನಾಮುಖವಾಗಿ ಬೆಳೆಯುವಂತೆ ಮಾಡಲು, ಪ್ರಗತಿಶೀಲವಾದ ಹಾದಿಯಲ್ಲಿ ಮುಂದುವರಿಯುವಂತೆ ಮಾಡಲು, ಪ್ರ.ಶಿ. ಚಳವಳಿ ಪ್ರೇರಕವಾಗಿದೆ-ಸಹಾಯಕವಾಗಿದೆ.

ನಮ್ಮ ಕರ್ನಾಟಕದಲ್ಲಿ? "ಎಲ್ಲಿ ಎಂಥ ಆಂದೋಲನ! ಬಾಲಪೀಡೆ ತಗಲಿ ಶೈಶವದಲ್ಲೇ ತೀರಿಕೊಂಡಿತಲ್ಲ!" ಎಂದು ನಿಜಸ್ಥಿತಿಯನ್ನು ಕಣ್ಣರಳಿಸಿ ಕಾಣಲು ನಿರಾಕರಿಸುವ ಹಿರಿಯ ಸಾಹಿತಿಗಳು ಸ್ವಲ್ಪ ವಿಚಾರದಿಂದಿರುವುದು ಮೇಲು. ಪ್ರಗತಿಶೀಲರೆಂದು ಪರೇಡ್ ಮಾಡುವವರಂತೂ ತಮ್ಮ ಗುರುತರವಾದ ಹೊಣೆಗಾರಿಕೆಯನ್ನು ಪ್ರತಿಹೆಜ್ಜೆಗೂ ತಿಳಿದಿರುವುದು ಲೇಸು. ಪ್ರಗತಿಶೀಲರ ಆಂದೋಲನ ಸಂಕುಚಿತ ಮನೋವೃತ್ತಿಯ, ಇದನ್ನೇ ಬರೆಯಿರಿ—ಇದನ್ನೇ ಬಿಡಿರಿ ಎನ್ನುವ ಸರ್ವಾಧಿಕಾರಿ ಮನೋಭಾವನೆಯ, ವಿಧ್ವಂಸಕ ಚಳವಳಿಯಲ್ಲ. ಹಿರಿಯ ಪರಂಪರೆಯನ್ನು ಉಳಿಸಿಕೊಂಡು, ಹೊಸ ಹಾದಿಯಲ್ಲಿ, ಪುರೋಗಾಮಿಯಾಗಿ, ಸರ್ವವ್ಯಾಪಿಯಾಗಿ, ರಚನಾತ್ಮಕವಾದ ರೀತಿಯಲ್ಲಿ ಅದು ಸಾಗಬೇಕು. ಗರ್ಭಸ್ರಾವಕ್ಕಲ್ಲ, ಹೊಸ ಸೃಷ್ಟಿಯ ಪ್ರಸವಕ್ಕೆ, ಆ ಕಾರ್ಯವಿಧಾನದ 'ಗತಿ'ಯನ್ನು ಶೀಘ್ರಗೊಳಿಸುವುದಕ್ಕೆ, ಪ್ರಗತಿಶೀಲರು ನೆರವಾಗಬೇಕು, ದುಡಿಯಬೇಕು.

- ಪ್ರಕಟಣೆ : 'ವಾಣಿ' ಮಾಸಿಕದಲ್ಲಿ.

೧೯೫೨

ಕಥೆಯಲ್ಲಿ ವಸ್ತುವಿನ ಆಯ್ಕೆ

ಕಥಾಲೇಖನದಲ್ಲಿ ವಸ್ತುವಿಗೆ ಮಹತ್ವವಿದೆ. ಕತೆಗಾರ ಜೀವನವನ್ನು ತಾನು ನೋಡುವ ಬಗೆ, ತನ್ನ ಸಂಸ್ಕಾರ, ತನ್ನ ಮೇಲಿನ ವರ್ಗಪ್ರಭಾವ ಇವುಗಳ ಹಿನ್ನೆಲೆಯಲ್ಲಿ ಕಥಾವಸ್ತುವನ್ನು ಆಯ್ದುಕೊಳ್ಳುತ್ತಾನೆ.

ಪಶ್ಚಿಮ ತೀರದ ಪಂಜೆ-ಕಾಮತರು ಕನ್ನಡದಲ್ಲಿ ಕಥಾಕೃತಿಯನ್ನು ಆರಂಭಿಸಿದವರು. ಮೈಸೂರಿನ ಮಾಸ್ತಿಯವರು ಕನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆಗೆ ಭದ್ರಸ್ಥಾನವನ್ನು ದೊರಕಿಸಿಕೊಟ್ಟ ಮೊದಲಿಗರು. ಅವರ ಕಥೆಗಳಿಂದ ಆರಂಭವಾಗಿ ಇಂದಿನವರೆಗೆ ಕನ್ನಡ ಸಣ್ಣ ಕತೆಗಳು ನಾನಾ ಮುಖವಾಗಿ ಬೆಳೆದುಬಂದಿವೆ. ಆ ಬೆಳವಣಿಗೆಯಲ್ಲಿ ವಸ್ತುವೈವಿಧ್ಯವನ್ನು ನಾವು ಕಾಣುತ್ತೇವೆ.

ಕತೆಗಾರನೂ ತಾನು ಜೀವಿಸುತ್ತಿರುವ ಸಮಾಜದ ಒಂದು ಘಟಕ. ಸಮಾಜದ ಆಗುಹೋಗುಗಳಿಂದ ಸಂವೇದನಾಜೀವಿಯಾದ ಕಲಾವಿದ ಬಾಧಿತನಾಗದೆ ಇರುವುದು ಸಾಧ್ಯವೇ ಇಲ್ಲ. ತನ್ನ ದೃಷ್ಟಿಯಲ್ಲಿ ತಾನು ಕಂಡುದನ್ನು ಇತರರಿಗೆ ತನ್ನ ಕೃತಿಯಲ್ಲಿ ಆ ಶಕ್ತಿಶಾಲಿ ತಿಳಿಸಿಕೊಡುತ್ತಾನೆ.

ಈ ದೃಷ್ಟಿಯಿಂದ ವಿವೇಚಿಸಿ ನೋಡಿದರೆ, ಆಳುವವರ ಕುಟಿಲತೆಯಿಂದಾಗಿ ಹಿಂದೆ ಹರಿಹಂಚಿಹೋದ ಕನ್ನಡ ನಾಡಿನ ವಿವಿಧ ಭಾಗಗಳ ಸಾಂಸ್ಕೃತಿಕ ಪ್ರತಿನಿಧಿಗಳು ತಮ್ಮ ಕೃತಿಗಳಲ್ಲಿ—ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯವನ್ನು ತೋರಿಸುವುದು ಅನಿವಾರ್ಯವಾಯಿತು.

ಮೈಸೂರಿನಿಂದ, ಉತ್ತರ ಕರ್ನಾಟಕದಿಂದ, ದಕ್ಷಿಣ ಕನ್ನಡದಿಂದ, ನದಿಗಳು ಹರಿದುಬಂದು ಬಲಿಷ್ಠವಾದ ಕನ್ನಡ ಕಥಾಪ್ರವಾಹವನ್ನು ರೂಪಿಸಿವೆ.

ಪಾಳೆಯಗಾರ ಚೌಕಟ್ಟು ಭದ್ರವಾಗಿದ್ದ ಮೈಸೂರು ಸಂಸ್ಥಾನದಲ್ಲಿ 'ಶ್ರೀನಿವಾಸ' ಮತ್ತಿತರರು, ತಮ್ಮ ಸುತ್ತುಮುತ್ತಲಿನ ಮಧ್ಯಮವರ್ಗ ತೋರಿಸಿದ ಚಿತ್ರಗಳನ್ನು ಆಯ್ದು ಕೃತಿ ರಚಿಸಿದರು. 'ಶ್ರೀನಿವಾಸ'ರಿಂದ 'ಆನಂದ'ರ ತನಕ ವಸ್ತುವಿನ ನಾವೀನ್ಯ ಹಿಗ್ಗತೊಡಗಿತು.

ಅದು ಕನ್ನಡದ ನವೋದಯ ಕಾಲ. ಜನತೆಯ ಸ್ವಾತಂತ್ರ್ಯಾಕಾಂಕ್ಷೆ 'ಕನ್ನಡತನ'ದ ರೂಪ ಪಡೆಯಿತು. ಸಾಹಿತ್ಯಿಕ ಪ್ರಮುಖರು ಹೊಸ ಚೇತನದಿಂದ ಕೂಡಿ, ಕನ್ನಡ ಸಾಹಿತ್ಯದ ಸರ್ವತೋಮುಖ ಬೆಳವಣಿಗೆಗೆ ಕಾರಣರಾದರು.

'ಸಮಾಜಸೇವೆ' 'ಸಮಾಜಸುಧಾರಣೆ' ಎಂಬ ಅಸ್ಪಷ್ಟವಾದ ಆಶಯಗಳು ಆಗ ನಾಡಿನ ಬುದ್ಧಿಜೀವಿಗಳನ್ನು ಕಲಕುತ್ತಿದ್ದವು. ಸಾಹಿತ್ಯಕ್ಷೇತ್ರಕ್ಕೆ ಮೊದಲಿನವರಿಗಿಂತ ಒಂದು ದಶಕದ ಅನಂತರ ಬಂದ ಕಾರಂತ, ಅ.ನ.ಕೃ. ಮತ್ತಿತರರು ಸಮಾಜ ಪದ್ಧತಿಯನ್ನು ವಿಮರ್ಶೆಗೆ ಒಳಗುಮಾಡುವ ಕೆಲವು ಕಥೆಗಳನ್ನು ಬರೆದರು.

ರಾಷ್ಟ್ರೀಯ ಚಳವಳಿಗೆ ಹೆಜ್ಜೆಹೆಜ್ಜೆಗೂ ಒದಗಿದ ಸೋಲು ಜನರನ್ನು ಬಾರಿಬಾರಿಗೆ ನಿರಾಶೆಯ ಕತ್ತಲಲ್ಲಿ ಕೆಡವಿತು. ಸೂಕ್ಷ್ಮಜೀವಿಯಾದ ಕತೆಗಾರನ, ಕಲಾವಿದನ ಮೇಲಂತೂ ಅಂಥ ಸೋಲಿನಿಂದ ಆಗುತ್ತಿದ್ದ ಆಘಾತ ಅಲ್ಪವಲ್ಲ. ಮುಂದೇನು ? ಎಂಬ ಪ್ರಶ್ನೆ ಬಂತು. ಜನರೆದುರು ಹೊಸ ಸಮಸ್ಯೆಗಳು ತೋರಿ ಬಂದುವು. ಆಗ ಸಣ್ಣಕತೆ ಮತ್ತಷ್ಟು ವಿವಿಧತೆಯಿಂದ ಜನಜೀವನಕ್ಕೆ ಸಮೀಪವಾಗಬೇಕಿತ್ತು. ಆದರೆ ಹಾಗೆ ಆಗಲಿಲ್ಲ. ಹೊಸ ಸಮಸ್ಯೆಗಳನ್ನು ಇದಿರಿಸಲು ಇಚ್ಛಿಸದ ಹಲವರು ಸಣ್ಣಕತೆ ಬರೆಯುವುದನ್ನೇ ನಿಲ್ಲಿಸಿದರು. ಮೈಸೂರು ಸಂಸ್ಥಾನದ ಹಲವರು ಸಾಹಿತ್ಯದ ಇತರ ಪ್ರಕಾರಗಳನ್ನು ಆರಿಸಿಕೊಂಡರು. ಉತ್ತರ ಕರ್ನಾಟಕದ 'ಆನಂದಕಂದ'ರು 'ಕವಿಭೂಷಣ'ರಾದರು. ದಕ್ಷಿಣ ಕನ್ನಡದ ಒಬ್ಬಿಬ್ಬರು ಕಾದಂಬರಿ-ಕಾವ್ಯಗಳತ್ತ ದೃಷ್ಟಿಯೋಡಿಸಿದರು.

೧೯೩೯-೪೦ನೆಯ ಇಸವಿಯ ಅನಂತರ ಬಂದ ಕಾಲಾವಧಿಯೊಂದು ಪರ್ವಕಾಲವೇ ಸರಿ. ದ್ವಿತೀಯ ಮಹಾಯುದ್ಧ ನಮ್ಮ ಜೀವನವನ್ನು ಕಲಕಿತು. ತೀರ ಹೊಸದಾದ ಉಗ್ರವಾದ ಸಮಸ್ಯೆಗಳನ್ನು ಜನರು ಇದಿರಿಸಬೇಕಾಯಿತು. ಅತೃಪ್ತಿ ದೇಶದಲ್ಲಿ ತಾಂಡವವಾಡಿತು. ರಾಷ್ಟ್ರೀಯ ಹೋರಾಟವೊಂದು ವ್ಯಗ್ರರೂಪ ತಳೆದು ಉಜ್ವಲ ಅಧ್ಯಾಯ ಬರೆಯಿತು.

ಅದನ್ನೆಲ್ಲ ಸಾಹಿತ್ಯದಲ್ಲಿ ಪ್ರತಿಬಿಂಬಿಸುವ ಹೊಸ ಪೀಳಿಗೆಯ ಲೇಖಕರನ್ನು ಆಗ ಕಂಡೆವು.

ಹಿಂದೆ 'ಶ್ರೀನಿವಾಸ'ರ 'ವೆಂಕಟಶಾಮಿಯ ಪ್ರಣಯ', 'ಆನಂದ'ರ 'ಬೇವು-ಬೆಲ್ಲ'ಗಳಿಂದ ಆರಂಭಿಸಿ, 'ಭಾರತೀಪ್ರಿಯ'ರ 'ಮೋಚಿ'ಯನ್ನು ಹಾದುಬಂದ ಕನ್ನಡ ಸಣ್ಣಕತೆ, ಕಟ್ಟೀಮನಿಯವರ 'ಕಾರವಾನ್', 'ಚದುರಂಗ'ರ 'ಶವದ ಮನೆ', ತ.ರಾ.ಸು. ರವರ 'ದ್ರೋಹಿ', ಪಾಟೀಲ ಪುಟ್ಟಪ್ಪನವರ 'ಸಾವಿನ ಮೇಜವಾನಿ', ಅರ್ಚಕ ವೆಂಕಟೇಶರ 'ಜೀವನ ಸಂಗ್ರಾಮ'ಗಳಾಗಿ ಅರಳಿತು.

ಪ್ರಗತಿಶೀಲ ಲೇಖಕರ ಚಳವಳಿ ಎಷ್ಟೋ ಜನ ಲೇಖಕರು ತಮ್ಮ ಧ್ಯೇಯ-

ನಿಲುಮೆಗಳ ಬಗ್ಗೆ ಪುನರ್ವಿಮರ್ಶೆ ಮಾಡುವಂತಾಯಿತು.

ಹಾಗೆಯೇ ಪ್ರಾಂತದ ಹಲವೆಡೆಗಳಲ್ಲಿ ರೂಪುಗೊಂಡ ರೈತ-ಕಾರ್ಮಿಕರ ವರ್ಗಹೋರಾಟವನ್ನು, ರಾಜಕೀಯ ಆಶೋತ್ತರಗಳನ್ನು ಚಿತ್ರಿಸುವ ಕತೆಗಳು ಬಂದುವು.

ಆದರ್ಶವಾದವೇ ಆತನಕ ಮುಖ್ಯಪ್ರವೃತ್ತಿಯಾಗಿದ್ದ ಕಥಾಸಾಹಿತ್ಯದಲ್ಲಿ ವಾಸ್ತವವಾದವೂ ತನ್ನ ಬಾವುಟವೆತ್ತಿ ಸಾಹಿತ್ಯವಾಹಿನಿಯಲ್ಲಿ ಹೊಸ ಪ್ರವಾಹವನ್ನು ಹರಿಸಿತು.

ಆಮೇಲೆ ದೇಶಕ್ಕೆ ಸ್ವಾತಂತ್ರ್ಯ ಬಂತೆಂದು ಸಾರಿದರು. ಸ್ವಾತಂತ್ರ್ಯದ ಬಗ್ಗೆ ಜನರು ಕಟ್ಟಿಕೊಂಡಿದ್ದ ಆಸೆಗಳೆಷ್ಟೊ! ಮತ್ತೆ ಭ್ರಮನಿರಸನದ ಅಂಕ ಬಂತು.

ಈಗ ಚುನಾವಣೆಯೂ ಬಂದು ನಡೆದು ಮುಕ್ತಾಯವಾಗಿದೆ.

ಜಾಗೃತರಾಗಿರುತ್ತಿರುವ ನಮ್ಮ ದೇಶದ ಜನರ ಬೌದ್ಧಿಕ ಹಸಿವನ್ನು ಇಂಗಿಸುವ, ಜೀವನದ ದರ್ಶನಮಾಡಿಸುವ, ಮುಂದೆ ಸಾಗಲು ಬೆಳಕು ತೋರಿಸಿಕೊಡುವ ಸಾಹಿತ್ಯ-ಸಣ್ಣಕತೆ ಈ ದಿನ ಹೇರಳವಾಗಿ ಬೇಕು.

ಈ ಹೊಸತನಕ್ಕೆ ಸಣ್ಣಕತೆಯ ವಸ್ತುವಿನಲ್ಲಿ ಆಸ್ಪದ ದೊರೆತರೆ ಕನ್ನಡ ಸಣ್ಣಕತೆ ಮತ್ತೊಮ್ಮೆ ಜನಪ್ರಿಯವಾಗಿ ಜಯಭೇರಿ ಹೊಡೆಯುವುದರಲ್ಲಿ ಯಾವ ಸಂದೇಹವೂ ಇಲ್ಲ.

- ಬೆಂಗಳೂರು 'ಸಾಹಿತಿಗಳ ಸಂಘ' ಏರ್ಪಡಿಸಿದ್ದ ಸಣ್ಣ ಕತೆಗಾರರ-ಕಾದಂಬರಿಕಾರರ ಸಮ್ಮೇಳನದಲ್ಲಿ ಮಾಡಿದ ವಿಚಾರವಿನಿಮಯ ಭಾಷಣ. ಪ್ರಕಟಣೆ : 'ಜೀವನ' ಮಾಸಿಕದಲ್ಲಿ.

ಕನ್ನಡ ಸಾಹಿತ್ಯದ ಪ್ರಗತಿಶೀಲರು ಎತ್ತ ಸಾಗಿದ್ದಾರೆ ?

ಕನ್ನಡ ಸಾಹಿತ್ಯದಲ್ಲಿ ೧೯೪೩-೪೪ ಅವಧಿಯಲ್ಲಿ ಒಂದು ರೀತಿಯ ಕೋಲಾಹಲವನ್ನೇ ಉಂಟುಮಾಡಿದ ಪ್ರಗತಿಶೀಲ ಲೇಖಕರ ಚಳವಳಿ, ಕ್ರಮೇಣ ಕ್ಷೀಣವಾಗಿ ಹೋಯಿತು. ಆ ಚಳವಳಿಯ ಗುರಿ-ಧ್ಯೇಯಗಳ ಬಗ್ಗೆ ನಿರ್ದಿಷ್ಟ ಅಭಿಪ್ರಾಯಗಳೇ ಇರದಿದ್ದ, ತಪ್ಪು ಕಲ್ಪನೆಯಿದ್ದ, ಕೆಲವರ ಸ್ವಯಂ ಪ್ರತಿಷ್ಠೆಯ ಬಂಡೆಗಲ್ಲಿಗೆ ಬಡೆದು ಪ್ರಗತಿಶೀಲರ ಆಂದೋಲನ ಕುಂಠಿತವಾಯಿತು.

ಕನ್ನಡ ನಾಡಿನ ಪ್ರಗತಿಶೀಲರನ್ನೆಲ್ಲ ಒಂದುಗೂಡಿಸಿ ಚಳವಳಿಯನ್ನು ಪುನರುದ್ದೀಪನಗೊಳಿಸಲು, ಅದಕ್ಕೋಸ್ಕರ ಸಮ್ಮೇಳನವನ್ನು ಕರೆಯಲು, ಮಾಡಿದ ಯಾವ ಯತ್ನವೂ ಆಗ ಫಲಕಾರಿಯಾಗಲಿಲ್ಲ.

ಸಂಘಟನೆಯ ಸ್ವರೂಪ ಸಾಧ್ಯವಾಗದೆ ಹೋದರೂ ಹಲವಾರು ಲೇಖಕರೇನೋ ಆ ಚಳವಳಿಯ ಉದಾತ್ತಧ್ಯೇಯಗಳ ಪ್ರಭಾವಕ್ಕೆ ಒಳಗಾದರು. ಅವರ ಕೃತಿಗಳ ವಸ್ತುವಿನ ವ್ಯಾಪ್ತಿ ಬೆಳೆಯಿತು.

.....ಈಗ ಹಲವು ವರ್ಷಗಳ ಮೇಲೆ ಮತ್ತೊಮ್ಮೆ ಕನ್ನಡ ಪ್ರಗತಿಶೀಲ ಸಾಹಿತಿಗಳ ಸಮ್ಮೇಳನದ-ಸಂಘಟನೆಯ ಮಾತು ಕೇಳಿಸುತ್ತಿದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಜೂನ್ ೪ ರಿಂದ ೭ರವರೆಗೆ ಜರಗಿದ ಸಮ್ಮೇಳನವೊಂದು ಪ್ರಗತಿಶೀಲತೆಯ ವಿವಾದಕ್ಕೆ ಮತ್ತೆ ಪ್ರಾಮುಖ್ಯತೆಯನ್ನು ತಂದಿದೆ.

ಯಾರ ಸಮ್ಮೇಳನ ?

ಹಿರಿಯೂರಿನಲ್ಲಿ ನಡೆದ ಸಮಾರಂಭದ ಹೆಸರು 'ಪ್ರಗತಿಶೀಲ ಸಾಹಿತಿಗಳ ಪ್ರಥಮ ಸಮ್ಮೇಳನ' ಎಂದು. ಹಿರಿಯೂರಿನ ಪ್ರಗತಿಶೀಲರ ಸಾಹಿತಿಗಳ ಸಮ್ಮೇಳನವೆ ? ಚಿತ್ರದುರ್ಗ ಜಿಲ್ಲೆಯದೆ? ಮೈಸೂರು ಸಂಸ್ಥಾನದ್ದೆ? ಅಖಿಲ ಕರ್ನಾಟಕದ್ದೆ?— ಏನೆಂಬುದು ಆಹ್ವಾನ ಪತ್ರಿಕೆಯಿಂದ ಸ್ಪಷ್ಟವಾಗಿಲ್ಲ. ಹಿರಿಯೂರಿನ 'ವಿಜಯ ಕಲಾವಿದರು' ಈ ಸಮ್ಮೇಳನವನ್ನು ಕರೆದಿರುವರೆಂದು ಹೇಳಲಾಯಿತು. ಈ ವಿಷಯ ಜಾಹೀರಾದುದು ಸಮ್ಮೇಳನಕ್ಕೆ ನಾಲ್ಕಾರು ದಿನಗಳ ಅವಕಾಶ ಇದ್ದಾಗ ಮಾತ್ರ.

ಒಂಬತ್ತು ವರ್ಷಗಳ ಹಿಂದೆ ಪ್ರಗತಿಶೀಲ ಲೇಖಕರ ಚಳವಳಿ ಆರಂಭವಾದಾಗಿನಿಂದ ಅದರಲ್ಲಿ ದುಡಿದಿರುವ ಹಲವಾರು ಲೇಖಕರಿದ್ದಾರೆ. ಅವರಲ್ಲಿ ಯಾರನ್ನೂ ಕೇಳದೆ, ಅವರ ಸಿದ್ಧತಾಸಮಿತಿಯೊಂದನ್ನು ರಚಿಸದೆ, ಯಾವುದೋ ವ್ಯಕ್ತಿಯೊಬ್ಬರ ನಿರ್ದೇಶದಂತೆ ವಿಜಯಕಲಾವಿದರು ಸಮ್ಮೇಳನ ಕರೆದರು.

ಅದರ ಅಧ್ಯಕ್ಷರಾಗಿ ನಿಯೋಜಿತರಾದ (ವಿಜಯ ಕಲಾವಿದರಿಂದ?) ವೈದ್ಯಗುರು, ದ. ಕೃ. ಭಾರದ್ವಾಜರು "ಈ ಸಮ್ಮೇಳನವನ್ನು ಮೈಸೂರು ಸಂಸ್ಥಾನದ ಪ್ರಗತಿಶೀಲ ಲೇಖಕರ ಸಮ್ಮೇಳನವೆಂದು ಕರೆಯಬಹುದು" ಎಂದರು. ಆದರೆ ಸಮ್ಮೇಳನದ ಸೂತ್ರಚಾಲಕರಾಗಿದ್ದ ಅ.ನ.ಕೃ. ಮೂರನೇ ದಿನ ಅದನ್ನು ಕನ್ನಡನಾಡಿನ ಪ್ರಗತಿಶೀಲ ಸಾಹಿತಿಗಳ ಪ್ರಥಮ ಸಮ್ಮೇಳನವೆಂದು ಕರೆದರು. ದ್ವಿತೀಯ ಸಮ್ಮೇಳನ ಡಿಸೆಂಬರ್ ತಿಂಗಳಲ್ಲಿ ಬಳ್ಳಾರಿಯಲ್ಲಿ ಜರುಗುವುದೆಂದರು; ಆ ಸಮ್ಮೇಳನದ ಸ್ವಾಗತಾಧ್ಯಕ್ಷರನ್ನೂ ಅಲ್ಲೇ ನಿಯೋಜಿಸಿದರು ; ಪ್ರಾಂತಿಕ ಪ್ರಗತಿಶೀಲ ಲೇಖಕರದೊಂದು ಸ್ಥಾಯೀ ಸಮಿತಿಯನ್ನೂ ಪ್ರತ್ಯೇಕವಾಗಿ ರಚಿಸಿಕೊಂಡರು.

ಅಂತೂ ಪ್ರಗತಿಶೀಲ ಲೇಖಕರ ಸಮ್ಮೇಳನವೊಂದು ಜರುಗಿತು.

ತೀರ ಅಪ್ರಾತಿನಿಧಿಕ

ಯಾವ ದೃಷ್ಟಿಯಿಲ್ಲೂ ಸಮ್ಮೇಳನ ಪ್ರಾತಿನಿಧಿಕವಾಗಿರಲಿಲ್ಲ. ನಿಯೋಜಿತ ಅಧ್ಯಕ್ಷರಲ್ಲದೆ, ಸಮ್ಮೇಳನಕ್ಕೆ ಬಂದವರಲ್ಲಿ ಚಳವಳಿಯ ಸಂಘಟನೆಗೆ ಸಂಬಂಧಿಸಿದ ಪ್ರಮುಖರೆಂದರೆ ಅ.ನ.ಕೃ. ಮತ್ತು ನಾಡಿಗೇರ್ ಮಾತ್ರ. 'ನಿರಂಜನ' ಎರಡನೇ ದಿನ ಬಂದರು. ಭಾಷಣಕಾರರಾಗಿ ವಿಶೇಷ ಆಹ್ವಾನದ ಮೇರೆಗೆ ಮೈಸೂರಿನಿಂದ ಬಂದಿದ್ದ ಚದುರಂಗ-ಅಡಿಗರು ಪ್ರತಿನಿಧಿಗಳಾದವರಲ್ಲಿ ಪ್ರಮುಖರು. ಚಳವಳಿಗೆ ಇದೇ ಮೊದಲ ಬಾರಿಗೆ ಬಂದ ಹೊಸಬರೆಂದರೆ, ದೇವುಡು ಮತ್ತು ಆಸ್ಥಾನ ವಿದ್ವಾನ್ ನಂಜುಂಡಾರಾಧ್ಯರು. ಇವರಲ್ಲದೆ ಇನ್ನೂ ಮೂರು-ನಾಲ್ಕು ಮಂದಿ ಲೇಖಕರನ್ನು ಎಣಿಸಬಹುದಾಗಿತ್ತು. ಹೀಗೆ ಒಟ್ಟು ಲೇಖಕ-ಪ್ರತಿನಿಧಿಗಳು ಹನ್ನೆರಡು ಮಂದಿ; ಸ್ವಾಗತ ಸಮಿತಿಯವರ ಸಂಖ್ಯೆ ಹದಿನಾರು (ಇವರಲ್ಲಿ ಬಹಳ ಜನ ಲೇಖಕರಲ್ಲದವರು). ಕಾರ್ಯಕಲಾಪಗಳನ್ನೆಲ್ಲ ನೋಡಲು ಬರುತ್ತಿದ್ದ ಊರವರ ಸಂಖ್ಯೆ ಇದ್ದಾಗ ಐವತ್ತು, ಹೆಚ್ಚಿದ್ದಾಗ ನೂರು.

ಹಾಗಾದರೆ, ಯೋಚಿಸುವುದಕ್ಕೂ ಅವಕಾಶ ದೊರೆಯದಷ್ಟು ಆತುರ-ಅವಸರವಾಗಿ ಈ ಸಮ್ಮೇಳನವನ್ನು ಕರೆದು, ತೀರ ಅಪ್ರಾತಿನಿಧಿಕವಾದ ರೀತಿಯಲ್ಲಿ, ಅದನ್ನು ಜರಗಿಸುವ ಉದ್ದೇಶವೇನಿತ್ತು ?

ಎಂಥ ಪ್ರಗತಿಶೀಲತೆ ?

ಈ ಸಮ್ಮೇಳನದ ಉದ್ಘಾಟನೆಗೆ ಬಂದವರು ಬಳ್ಳಾರಿಯ ಭಾಸ್ಕರಾಚಾರ್ಯ ರಾಮಚಂದ್ರ ಶರ್ಮ ಸ್ವಾಮಿ ಎಂಬವರು. ಇವರು ಸುಪ್ರಸಿದ್ಧ ವೈದ್ಯರೆಂದೂ ದೇವಿಯ ಆರಾಧಕರೆಂದು ತೆಲುಗು ಭಾಷೆಯ ಕವಿಯೆಂದೂ ಅಲ್ಲಿದ್ದವರಿಗೆ ಪರಿಚಯ ಮಾಡಿಕೊಡಲಾಯಿತು.

ಅಧ್ಯಕ್ಷರು ಅಚ್ಚುಮಾಡಿದ್ದ ಭಾಷಣವನ್ನೇ ತಂದಿದ್ದರು. ಅದರಲ್ಲಿ ಅವರು ಆದರ್ಶವಾದ ಮತ್ತು ಆಧ್ಯಾತ್ಮವಾದದ ಪ್ರಚಾರ ನಡೆಸಿದರು.

ಭಾರತೀಯ ಪ್ರಗತಿಶೀಲ ಲೇಖಕರ ಚಳವಳಿಯ ಘೋಷಣೆಯಲ್ಲಿ ಹೇಳಿ ರುವುದೇನು ?

ಪುರಾಣಸಾಹಿತ್ಯ ಕುಸಿದು ಬಿದ್ದಮೇಲೆ ತಲೆಯೆತ್ತಿದ ಭಾರತೀಯ ಸಾಹಿತ್ಯ ಜೀವನದ ಸಹಜತೆಯಿಂದ ದೂರ ಸರಿಯುವ ಮನೋಭಾವವನ್ನು ವ್ಯಕ್ತಪಡಿಸುತ್ತಿದೆ. ಅದು ಸಹಜತೆಯಿಂದ ದೂರವಾಗಿ ಅಧ್ಯಾತ್ಮವಾದದಲ್ಲಿಯೂ ಆದರ್ಶವಾದದಲ್ಲಿಯೂ ಆಶ್ರಯಪಡೆಯಲೆತ್ನಿಸುತ್ತಿದೆ. ಪರಿಣಾಮವಾಗಿ ಅದು ಕ್ಷಯಿಸಿ, ಮಾನಸಿಕ, ದೈಹಿಕ ದೌರ್ಬಲ್ಯಗಳನ್ನು ತೋರಿಸಿ, ಒಂದು ಬಗೆಯ ಕಠೋರ ಸಂಪ್ರದಾಯಪ್ರಿಯತೆಯನ್ನೂ ವಿಕೃತ ಆದರ್ಶವನ್ನೂ ನಿರ್ಣಯಮಾಡಿದೆ.

ಭಾರದ್ವಾಜರು ಪ್ರಗತಿಶೀಲತೆಯ ಹೆಸರಲ್ಲಿ ಈಗ ಪ್ರತಿಪಾದಿಸುತ್ತಿರುವುದೇನು?

"...ವೈಜ್ಞಾನಿಕ ವಿಧಾನದ ಚಿಂತನೆಯಿಂದ ನಮ್ಮ ಭೌತಿಕ ಜ್ಞಾನವು ಬೆಳೆಯುವುದು, ನಮ್ಮಲ್ಲಿ ತಾರ್ಕಿಕ ಬುದ್ಧಿಯು ಹೆಚ್ಚುವುದು, ಆದರೆ ಅದು ನಮಗೆ ಜೀವನದ ಮರ್ಮವನ್ನು ತಿಳಿಸಿ, ನಮ್ಮ ಆತ್ಮವಿಕಾಸಗೊಳ್ಳಲು ಸಹಾಯ ಮಾಡಲಾರದು."

"....ಇಂದು ವಿಜ್ಞಾನದ ಪ್ರಭಾವಕ್ಕೊಳಗಾಗಿರುವ ಅನನುಭವಿಗಳಾದ ನಮ್ಮ ತರುಣತರುಣಿಯರು ಪ್ರತಿಯೊಂದು ಕೃತಿಯನ್ನು ತಾವು ಕಲಿತಿರುವ ವಿಜ್ಞಾನದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಚಟವು ಅವರಿಗೆ ಇಂದಿನ ವಿದ್ಯಾಭ್ಯಾಸ ಕ್ರಮದಿಂದ ಬಂದುಬಿಟ್ಟಿದೆ. ಈ ವ್ಯಾಧಿಯು ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲ ದೇಶ ಗಳಲ್ಲಿಯೂ ವ್ಯಾಪಿಸಿಕೊಂಡಿದೆ...."

ಭಾರದ್ವಾಜರ ಪ್ರಕಾರ ಪ್ರಗತಿಶೀಲ ಕಲಾವಿದನ ಕರ್ತವ್ಯವೇನು ? ಲೇಖಕನ ಗುರಿಯೇನು ?

"... ಸೃಷ್ಟ್ಯಾತ್ಮಕ ಭಾವವುಳ್ಳ ಕಲಾವಂತನು ಮಾನವಜೀವನಕ್ಕೆ ಸಂಬಂಧಿಸಿದ ಒಂದು ವಿಷಯವನ್ನು ಆರಿಸಿ, ಅದರಲ್ಲಿ ತನ್ನ ಅದ್ವಿತೀಯವಾದ ಅನುಭಾವ ವಿಭಾವಗಳ ದೃಷ್ಟಿಗಳನ್ನು ಬೆರೆಸಿ ತಾನು ಕಂಡ ಸೌಂದರ್ಯವನ್ನು—ಸತ್ಯವನ್ನು

ಬೇರೆಯವರ ಹೃದಯವೂ ಅರಿತು ಶಾಂತಿಯನ್ನೂ ಆನಂದವನ್ನೂ ಅನುಭವಿಸುವಂತೆ ಮಾಡುವನು.

"....ಸಾಹಿತ್ಯದಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಡಗಿದ್ದರೆ, ಆತ್ಮವನ್ನು ಜಾಗೃತಗೊಳಿಸಿ ವಿಕಾಸಗೊಳಿಸುವುದೇ ಅದರ ಮುಖ್ಯ ಕೆಲಸ....ನಮ್ಮಲ್ಲಿರುವ ಆತ್ಮವನ್ನು ಜಾಗೃತಗೊಳಿಸುವುದೇ ಅದರ ಗುರಿ....

"ಸಾಹಿತ್ಯವು ಯಾವನನ್ನೂ ಧರ್ಮಾಂತರಗೊಳಿಸುವುದಿಲ್ಲ. ಅಥವಾ ಅದು ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡುವುದಿಲ್ಲ. ಅದು ನಮ್ಮ ಮನಸ್ಸನ್ನು ಬದಲಾಯಿಸಿ, ನಮ್ಮ ಹೃದಯವನ್ನು ಮಿಡಿದು, ನಮ್ಮ ಆತ್ಮವು ಶಾಂತಿಸುಖವನ್ನು ಅನುಭವಿಸುವಂತೆ ಮಾಡುವುದು..."

ಇದೀಗ ಅವರ ಕಲ್ಪನೆಯ ಪ್ರಗತಿಶೀಲತೆ! ರಾಯಲಸೀಮೆ-ಕೋಲಾರಗಳ ಕ್ಷಾಮ; ಸ್ವಾತಂತ್ರ್ಯ ನೀಡದೇಹೋದ ಸುಖ; ಕೋಟಿ ಜನತೆಯ ಸಂಕಟದ ನಿಟ್ಟುಸಿರು; ಬಾಳ್ವೆಗಾಗಿ, ಭವಿಷ್ಯತ್ತಿಗಾಗಿ ಮಾನವನ ಹೋರಾಟ—ಇವೆಲ್ಲದರ ವಾಸ್ತವಿಕ ಚಿತ್ರಣ ಸಾಹಿತ್ಯದಲ್ಲಾಗಬೇಕೆಂದು, ಸಮಾಜದ ಪುನರ್ವ್ಯವಸ್ಥೆಯ ಕಾರ್ಯದಲ್ಲಿ ಪ್ರಗತಿಶೀಲ ಸಾಹಿತಿಗಳು ಮುಂದಾಗಬೇಕೆಂದು, ಭಾರದ್ವಾಜರು ಹೇಳಲಿಲ್ಲ. ಹಾಗೆ ಹೇಳುವ ಆವಶ್ಯಕತೆ ಅವರಿಗೆ ತೋರಲಿಲ್ಲ!

ಆ 'ಪ್ರಗತಿಶೀಲ' ಭಾಷಣದ ಇತರ ಮುಖ್ಯ ಅಂಶಗಳೆಂದರೆ, ರಷ್ಯಾದ ಕುರಿತಾದ ನಿಂದೆ; "ಇಂದು ಜಗತ್ತಿನ ಅನೇಕ ವಿಜ್ಞಾನಿಗಳು, ಡಾಕ್ಟರುಗಳು, ತಮ್ಮತಮ್ಮ ಕ್ಷೇತ್ರದಲ್ಲಿ ೨೦-೩೦ ವರುಷ ಸತ್ಯಾನ್ವೇಷಣೆಯ ದೃಷ್ಟಿಯಿಂದ ದುಡಿದು ಬೇಸತ್ತು ಕೊನೆಗೆ ಭಾರತೀಯ ಆಧ್ಯಾತ್ಮಿಕ ಶಾಸ್ತ್ರಕ್ಕೆ ಶರಣುಹೋಗುತ್ತಿರುವರು" ಎಂಬ ಪ್ರತಿಪಾದನೆ; "ಈಗಿನಿಂದ ನಿಮಗೆ ೪೦ ವರುಷ ವಯಸ್ಸಾಗುವವರೆಗೆ ಚಿಕ್ಕಪುಟ್ಟ ಕಥೆಗಳು ಪ್ರಬಂಧಗಳು ಹರಟೆಗಳು ಮೊದಲಾದ ಲಘುಸಾಹಿತ್ಯವನ್ನು ರಚಿಸುತ್ತ ಹೋಗಿ, ಮುಂದೆ ದೊಡ್ಡ ಕೃತಿಗಳನ್ನು ನಿರ್ಮಿಸಿ" ಎಂದು ತರುಣ ಸಾಹಿತಿಗಳಿಗೆ ಅವರ ಮನವಿ!

ಇವಿಷ್ಟೇ ಅಲ್ಲದೆ....

—ಕಾಮಪ್ರಚೋದಕ ಚಲಚ್ಚಿತ್ರಗಳಿಗೆ ಸರಕಾರ ಅವಕಾಶಕೊಡದಂತೆ ನಿಷೇಧ ಪ್ರದರ್ಶನ ಮಾಡಬೇಕು, ಎಂದರು.... ಕರ್ನಾಟಕ ಏಕೀಕರಣ ಏರ್ಪಡಬೇಕೆಂದರು;

—ಟೈಪ್‌ರೈಟರು ನಿರ್ಮಾಣ ವಿಷಯದಲ್ಲಿ ಸರ್ಕಾರ ನಡೆದುಕೊಂಡ ರೀತಿಯನ್ನು ಖಂಡಿಸಿದರು.

ಹೀಗೆ ಭಾರದ್ವಾಜರ ಭಾಷಣ ತೀರ ಮಾಮೂಲಿನ 'ಅಧ್ಯಕ್ಷ-ಉಪನ್ಯಾಸ' ವಾಯಿತು.

ಪ್ರಗತಿ ಮತ್ತು ಕಾಮಪ್ರಚೋದನೆ

ಕಾಳಿದಾಸ, ನಗುವಿನ ಮೀಮಾಂಸೆ, ಕಾವ್ಯ, ಕಾದಂಬರಿಗಳ ಮೇಲೆ ಭಾಷಣಗಳಿದ್ದುವು, ಯಾವುದಾದರೂ ಕನ್ನಡ ಸಾಹಿತ್ಯೋತ್ಸವದಲ್ಲಿರುವ ಭಾಷಣಗಳ ಹಾಗೆ.

ಪ್ರಗತಿಶೀಲ ಲೇಖಕರ ಚಳವಳಿ ಹುಟ್ಟಿದಂದಿನಿಂದ ಈವರೆಗಿನ ಸುಮಾರು ಒಂದು ದಶಕದ—ಕನ್ನಡ ಸಾಹಿತ್ಯ ಪ್ರಗತಿಯ ಬಗ್ಗೆ ಒಂದೇ ಒಂದು ಅಭ್ಯಾಸಪೂರ್ಣ ಉಪನ್ಯಾಸವಾಗಲೀ ನಿಬಂಧವಾಚನವಾಗಲೀ ಇರಲಿಲ್ಲ. ಆಧುನಿಕ ಕನ್ನಡ ಸಾಹಿತ್ಯದಲ್ಲಿರುವ ನಿಸರ್ಗವಾದ, ವಾಸ್ತವವಾದ, ಆದರ್ಶವಾದ ಈ ಪ್ರವೃತ್ತಿಗಳ ಬಗ್ಗೆ ಯಾವುದೇ ರೀತಿಯ ಚರ್ಚೆಯಾಗಲೀ ವಿಚಾರವಿನಿಮಯವಾಗಲೀ ಇರಲಿಲ್ಲ.

ಅ.ನ.ಕೃ. ದೃಷ್ಟಿಯಲ್ಲಿ 'ಅಕ್ಷರ ವ್ಯಭಿಚಾರಿ'ಗಳೂ ಗಂಡಸರೂ ದುಂಡಾ ಪ್ರವೃತ್ತಿಯವರೂ ಆದ ಕನ್ನಡ ವಿಮರ್ಶಕರಿಗೆ ಉತ್ತರವೆಂದು ಬರೆಯಲಾದ "ಸಾಹಿತ್ಯ ದಲ್ಲಿ ಕಾಮಪ್ರಚೋದನೆ" ಎಂಬ ಪುಸ್ತಕದ ಬಿಡುಗಡೆ, ಸಮ್ಮೇಳನದ ಒಂದು ಮುಖ್ಯ ಕಾರ್ಯಕ್ರಮವಾಗಿತ್ತು.

ಬಿಡುಗಡೆಮಾಡಿದ ಭಾಸ್ಕರಾಚಾರ್ಯರು ತಾವಿನ್ನೂ ಪುಸ್ತಕವನ್ನು ಓದಿಲ್ಲವೆಂದರು. ಕಾಮ, ಜೀವನದಲ್ಲಿ ಎಷ್ಟು ಮುಖ್ಯವೆಂದೂ ಆರೋಗ್ಯಕ್ಕೆ ಎಷ್ಟು ಹಿತಕರವೆಂದೂ ವಿವರಿಸಿ, ಅದು ಉತ್ಪನ್ನವಾಗುವ ಬಗೆಯನ್ನು ವರ್ಣಿಸಿದರು. "ಈ ವಿಷಯವಾಗಿ ಬರೆಯಲಾಗಿರುವ ಈ ಮಹಾಗ್ರಂಥವನ್ನು ಉದ್ಘಾಟಿಸಲು ಹೆಮ್ಮೆಪಡುತ್ತೇನೆ" ಎಂದರು.

ಗ್ರಂಥಪರಿಚಯ ಮಾಡಿಕೊಡಲು ಎದ್ದುನಿಂತ ಆಸ್ಥಾನವಿದ್ವಾನ್ ಆರಾಧ್ಯರು ತಾವೂ ಪುಸ್ತಕವನ್ನು ಪೂರ್ಣವಾಗಿ ಓದಿಲ್ಲವೆಂದರು. ಆದರೂ ಆ ಪುಸ್ತಕದ ಹುಟ್ಟಿಗೆ ಕಾರಣರಾದ ವಿಮರ್ಶಕರ 'ಕಟುಕವೃತ್ತಿ'ಯನ್ನು ಖಂಡಿಸಿ ಬುದ್ಧಿವಾದದ ಮಾತುಗಳನ್ನಾಡಿದರು. ಕಾಮಪ್ರಚೋದನೆಯು ಯಾವಾಗಲೂ ಒಳ್ಳೆಯದೇ ಎಂದರು.

ಸ್ವತಃ ಗ್ರಂಥಕರ್ತೃವೇ ಮಾತನಾಡಿ "ನೂರು ಡಾಕ್ಟರೇಟ್ ಪದವಿ ಪಡೆಯಲು ಬೇಕಾದಷ್ಟು ವಿಷಯ ಇಲ್ಲಿ ಸಂಗ್ರಹಿಸಿದ್ದೇನೆ. ಬೇಕಾದರೆ ಇನ್ನೊಂದು ವರ್ಷದಲ್ಲಿ ಇಂಥಾ ಇನ್ನಿಪ್ಪತ್ತು ಪುಸ್ತಕ ಬರೆಯಬಲ್ಲೆ" ಎಂದರು. ಬೆಂಗಳೂರಿನಲ್ಲಿ ಜರಗಿದ ಕತೆಗಾರ- ಕಾದಂಬರಿಕಾರರ ಸಮ್ಮೇಳನವು ಅಪ್ರಾತಿನಿಧಿಕವೆಂದರು. ಕಾಮಪ್ರಚೋದಕ ಸಾಹಿತ್ಯವನ್ನು ಟೀಕಿಸಿ "ಅಲ್ಲಿ ಅವಿವೇಕಿಗಳು ಮಾಡಿದ" ನಿರ್ಣಯವನ್ನು ಖಂಡಿಸಿದರು.

ಕಮ್ಯೂನಿಸ್ಟ್ ಸಾಹಿತಿಗಳಿಗೂ ಪುರೋಗಾಮಿ ಸಾಹಿತಿಗಳಿಗೂ "ಎಚ್ಚರದಿಂದಿರಿ!" ಎಂದರು. ರಷ್ಯದ ಆಜ್ಞೆ ಪ್ರಕಾರ ತಾವು ಪುಸ್ತಕ ಬರೆಯಲು ಸಿದ್ಧವಿಲ್ಲವೆಂದೂ ಕಾಮಪ್ರಚೋದನೆಯು ಅಪ್ಪಟ ಸ್ವದೇಶಿಯೆಂದು ಆದಿಕಾಲದಿಂದಲೂ ಓತಪ್ರೋತವಾಗಿ ಆ ಪ್ರವೃತ್ತಿ ಹರಿದುಬಂದಿದೆಯೆಂದೂ ಹೇಳಿದರು.

"ಈ ಬಿಡುಗಡೆ ಸಮಾರಂಭವು ಕಾರ್ಯಕ್ರಮದಲ್ಲಿ ಇದ್ದುದೇ ನಮಗೆ ತಿಳಿದಿರಲಿಲ್ಲವಲ್ಲ" ಎಂದು ಒಬ್ಬರು ಉದ್ಗಾರವೆತ್ತಿದಾಗ ಅಧ್ಯಕ್ಷರು, " ಇಲ್ಲಿಗೆ ಬರುವವರೆಗೆ ನನಗೂ ತಿಳಿದಿರಲಿಲ್ಲ" ಎಂದರು ! ಆದರೆ ಸಮ್ಮೇಳನದ ಮುಖ್ಯ ಸಂಘಟಕರಾದ ಚಿತ್ರದುರ್ಗದ ಶ್ರೀಧರಮೂರ್ತಿಯವರು (ಪತ್ರಿಕೋದ್ಯೋಗಿ ಮತ್ತು ಅ.ನ.ಕೃ. ಆತ್ಮಚರಿತ್ರೆಯ ಪ್ರಕಾಶಕರು) "ಆ ಕಾರ್ಯಕ್ರಮ ವೊದಲೇ ನಿರ್ಧಾರವಾಗಿತ್ತು" ಎಂದು ಉತ್ತರವಿತ್ತರು !

ಸ್ವಚ್ಛಂದತೆಗೆ ಲೈಸೆನ್ಸ್

ಈಗಿನ ಪತ್ರಿಕಾಶಾಸನವನ್ನು ಖಂಡಿಸುವ, ಸ್ಥಾನಬದ್ಧತೆಯ ಶಾಸನ ವಾಪಸಾಗಬೇಕೆನ್ನುವ, ಕ್ರಿಮಿಯುದ್ಧವನ್ನು ಖಂಡಿಸುವ, ಕೆಲವು ನಿರ್ಣಯಗಳಾದುವು. ಇವು ಮಹತ್ವದ ನಿರ್ಣಯಗಳಾದರೂ ಅವುಗಳ ಬಗ್ಗೆ ಉದ್ದುದ್ದ ಭಾಷಣಗಳಿರಲಿಲ್ಲ. ಎಲ್ಲವೂ ಚುಟುಕಾಗಿದ್ದುವು !

ಆದರೆ ಸಮ್ಮೇಳನದ ಮುಖ್ಯ ನಿರ್ಣಯವಿದ್ದುದು ಬೇರೆಯೇ !

ಅದು ಕಾಮಪ್ರಚೋದಕ ಸಾಹಿತ್ಯಕ್ಕೆ ಸಂಬಂಧಿಸಿದ್ದು. ಫೆಬ್ರವರಿ ಆದಿಯಲ್ಲಿ ಬೆಂಗಳೂರಲ್ಲಿ ಜರಗಿದ ಕನ್ನಡ ಕತೆಗಾರ-ಕಾದಂಬರಿಕಾರರ ಸಮ್ಮೇಳನದಲ್ಲಿ, ಕಾಮಪ್ರಚೋದಕ ಸಾಹಿತ್ಯವನ್ನು ರಚಿಸಬಾರದೆಂದು ಲೇಖಕರಿಗೆ ಮನವಿ ಮಾಡಿಕೊಂಡ ನಿರ್ಣಯದ ಖಂಡನೆ; ಅಂಥ ನಿರ್ಣಯಗಳಿಂದ ಲೇಖಕನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಿದೆ ಎಂಬ ಆಪಾದನೆ; ಅಂಥ ನಿರ್ಣಯಗಳನ್ನು ಸಂಘ ಸಂಸ್ಥೆಗಳು ಮಾಡುವುದರಿಂದ ಸಾಹಿತ್ಯಕ್ಕೆ ಹಾನಿಯಾಗುವುದೆಂಬ ಎಚ್ಚರಿಕೆ—ಈ ಅಂಶಗಳು ಆ ಖಂಡನಾನಿರ್ಣಯದಲ್ಲಿದ್ದುವು.

ನಿರಂಜನರು ಆ ಖಂಡನಾನಿರ್ಣಯವನ್ನು ವಿರೋಧಿಸಿದರು : "ಹಿಂದೆ ಚಳವಳಿ ಹುಟ್ಟಿದಾಗ ಕೆಲ ಸಂಪ್ರದಾಯವಾದಿ ಸಾಹಿತಿಗಳು ಲೇಖಕನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂತೆಂದು ಆಕ್ರೋಶಮಾಡಿದರು. ಶ್ರಮಜೀವಿಗಳ ಜೀವನ ಚಿತ್ರಿಸಿ ಎಂದೆಲ್ಲ ಹೇಳಲು ನೀವು ಯಾರು—ಎಂದರು. ಈಗ, ಕಾಮಪ್ರಚೋದಕ ಸಾಹಿತ್ಯರಚನೆ ಸಲ್ಲದು—ಎಂದಾಗ, ಕೆಲ ಪ್ರಗತಿಶೀಲರೇ ಲೇಖಕನ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲಿತೆನ್ನುತ್ತಾರೆ! ಜೀವನದ ಒಂದಂಶವಾಗಿ ಕಾಮದ ಚಿತ್ರಣ ಸಾಹಿತ್ಯದಲ್ಲಿ ಅನಿವಾರ್ಯ. ಆದರೆ

ಮಾನವನ ನೈಸರ್ಗಿಕ ದೌರ್ಬಲ್ಯಗಳ ಲಾಭ ಪಡೆದು ಕೇವಲ ಕಾಮೋದ್ದೀಪನೆಯನ್ನೇ ಉದ್ದೇಶವಾಗುಳ್ಳ ಕ್ಷುದ್ರಸಾಹಿತ್ಯ ರಚಿಸುವುದು ಹೇಯಕರವಾದದ್ದು. ಮದ್ರಾಸಿನ ಕೆಲ ಬಂಡವಾಳಗಾರರು ಕನ್ನಡ ಭಾಷೆಯಲ್ಲಿ ಇಂಥ ಕೆಲಪತ್ರಿಕೆಗಳನ್ನು ಮುದ್ರಿಸಿ ಈ ನಾಡಿಗೆ ಕಳಿಸುತ್ತಿದ್ದಾರೆ. ಇದನ್ನು ವಿಚಾರಿಗಳಾದ ಓದುಗರು ಖಂಡಿಸಬಾರದೆ ? ಜನಹಿತೈಷಿಗಳಾದ ಪ್ರಗತಿಶೀಲರು ಖಂಡಿಸುವುದು ಬೇಡವೇ? ದಿನನಿತ್ಯದ ಜೀವನ ಸಮಸ್ಯೆ—ಹೋರಾಟಗಳಿಂದ ಮಾನವನ ಗಮನವನ್ನು ದೂರ ಸೆಳೆದು, ಅವನ ಕರ್ತೃತ್ವಶಕ್ತಿಯನ್ನು ಕುಂಠಿತಗೊಳಿಸಿ, ಅವನನ್ನು ನಿರ್ವೀರ್ಯನಾಗಿಯೂ ನಿಶ್ಚೇಷ್ಟಿತನಾಗಿಯೂ ಮಾಡುವ ಕ್ಷುದ್ರಸಾಹಿತ್ಯ ರಚಿಸುವುದೆಂದರೆ ಪ್ರಗತಿಗೆ ದ್ರೋಹ ಬಗೆದಂತೆಯೇ ಸರಿ. ಪ್ರಗತಿಶೀಲ ಲೇಖಕರ ಚಳವಳಿ ಆರಂಭವಾದಾಗ ಇರಿಸಿಕೊಂಡ ಉದಾತ್ತ ಧ್ಯೇಯ-ಗುರಿಗಳು ಈಗೆಲ್ಲಿಗೆ ಹೋದುವು ? ಕಾಮ-ಶೃಂಗಾರ ಮಾತ್ರದಿಂದಲೇ ಪ್ರಗತಿ ಎನ್ನುವಂತೆ ಇಲ್ಲಿ ಮಾತಾಡುತ್ತಿರುವುದು ತುಂಬ ವಿಷಾದಕರವಾಗಿದೆ" ಎಂದು ತಮ್ಮ ಭಾಷಣದಲ್ಲಿ ಅವರು ಹೇಳಿದರು. ಏನೇನೂ ಪ್ರಾತಿನಿಧಿಕವಲ್ಲದ ಆ ಸಮ್ಮೇಳನದಲ್ಲಿ ಅಂಥ ನಿರ್ಣಯವನ್ನು ಚರ್ಚಿಸದೆ, ನಿಜವಾಗಿಯೂ ಪ್ರಾತಿನಿಧಿಕವಾದ ಇಡಿಯ ಕನ್ನಡನಾಡಿಗೇ ಅನ್ವಯಿಸುವಂಥ ಇನ್ನೊಂದು ಸಮ್ಮೇಳನಕ್ಕೆ ಆ ಚರ್ಚೆಯನ್ನು ಮುಂದುವರಿಸಬೇಕೆಂದು ಸಲಹೆ ಇತ್ತರು.

ಆದರೆ ಅಧ್ಯಕ್ಷರು ಅದಕ್ಕೆ ಸಮ್ಮತಿ ಕೊಡಲಿಲ್ಲ. "ಕಾಮಪ್ರಚೋದಕ ಚಲಚ್ಚಿತ್ರಗಳಿಗೆ ಸರಕಾರ ಅವಕಾಶಕೊಡದಂತೆ ನಿಷೇಧ ಪ್ರದರ್ಶನಮಾಡಬೇಕು' ಎಂದು ಅಧ್ಯಕ್ಷ ಭಾಷಣದಲ್ಲಿ ಕರೆಕೊಟ್ಟ ಭಾರದ್ವಾಜರು, "ನಮ್ಮ ಸಾಹಿತ್ಯವನ್ನು ಟೀಕಿಸುವುದರಿಂದ ಪೊಲೀಸರಿಗೂ ಸರಕಾರಕ್ಕೂ ಕೈಹಾಕಲು ನೆಪಮಾಡಿ ಕೊಟ್ಟಹಾಗಾಗುತ್ತದೆ" ಎಂದರು. ಅಷ್ಟೇ ಅಲ್ಲ; ಕಾಮಪ್ರಚೋದಕ ಚಲಚಿತ್ರಗಳಿವೆ ಎಂದವರು, ಸಾಹಿತ್ಯದಲ್ಲಿ ಮಾತ್ರ ಪ್ರಚೋದಕ ಸಾಹಿತ್ಯವಿಲ್ಲ ಎಂದರು !

ದೇವುಡುರವರು ಮಾತನಾಡುತ್ತಾ, "ನಿರಂಜನರಿಗೆ ಮದುವೆಯಾಗಿ ಮಕ್ಕಳಾಗಿದ್ದರೆ ಕಾಮದ ಅರ್ಥ ತಿಳಿಯುತ್ತಿತ್ತು. ಕೈಲಾಗದವನಿಗೆ ಒಂದು ಹೆಂಗಸನ್ನು ಆಳುವುದೇ ಕಷ್ಟವಾಗಬಹುದು. ಆದರೆ ಛಾತಿ ಇರುವ ನನ್ನಂಥ ಗಂಡಸು ನಾಲ್ಕು ಹೆಂಡಿರು ಬೇಕೆಂದರೆ ತಪ್ಪೇನು ? ಅಂಥ ಸಾಹಿತ್ಯ ಯಾಕೆ ರಚಿಸಬಾರದು ? ಎಂದು ಕೇಳಿದರು.

ಇದು 'ಪ್ರಗತಿಶೀಲ' ಸಾಹಿತಿಗಳ ಸಮ್ಮೇಳನವಾದ್ದರಿಂದ ಪ್ರತಿನಿಧಿಗಳು ಮಾತ್ರ ಮತಕೊಡಲು ಅವಕಾಶವಿರಬೇಕೆಂದೂ ಅದು ಪ್ರಜಾಪ್ರಭುತ್ವದ ರೀತಿಯೆಂದೂ ಕೇಳಲಾಯಿತು. ಆದರೆ ಅಧ್ಯಕ್ಷರು, ಅಲ್ಲಿ ನೆರೆದಿದ್ದ ಹಿರಿಯೂರಿನ ಜನರನ್ನು ಒಳಗೊಂಡು ಯಾರು ಬೇಕಾದರೂ ಮತ ಕೊಡಬಹುದೆಂದರು!

ನಿರ್ಣಯವನ್ನು ವಿರೋಧಿಸಿದವರನ್ನು ಒಳಗೊಂಡು ಎಂಟು ಜನ ವಿರೋಧ ಮತ ಕೊಟ್ಟರು. ಅಧ್ಯಕ್ಷರು, ಅ.ನ.ಕೃ. ಮತ್ತಿತರರನ್ನು ಒಳಗೊಂಡು ಮೂವತ್ತು ಜನ ಪರವಾಗಿ ಮತ ಕೊಟ್ಟರು. ಹಲವರು ತಟಸ್ಥರಾಗಿ ಉಳಿದರು. ಹೀಗೆ ಸಾಹಿತಿಗಳಿಗೆ, ಪರೋಕ್ಷವಾಗಿ ಸ್ವಚ್ಛಂದತೆಯ ಲೈಸೆನ್ಸ್ ಕೊಡುವ ನಿರ್ಣಯ ಬಹುಮತದಿಂದ ಸ್ವೀಕೃತವಾಯಿತು.

ಕಮ್ಯೂನಿಸ್ಟ್ ವಿರೋಧ

ಕಿವಿಯೊಡೆಯುವ ಹಾಗೆ ಸಮ್ಮೇಳನದಲ್ಲಿ ತಿಳಿಸುತ್ತಿದ್ದ ಇನ್ನೊಂದು ಆಕ್ರೋಶ ವೆಂದರೆ, ಕಮ್ಯೂನಿಸ್ಟ್ ವಿರೋಧದ ಬೊಬ್ಬಾಟ. ಅ.ನ.ಕೃ. ತಮ್ಮ ಪ್ರತಿಯೊಂದು ಭಾಷಣದಲ್ಲೂ ಈ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು.

ಪ್ರಗತಿಶೀಲ ಸಾಹಿತಿಗಳೆಲ್ಲ ಕಮ್ಯೂನಿಸ್ಟರು ಎಂಬ ಆರೋಪ ಹಿಂದೆಯೂ ಇತ್ತು. ಅದಕ್ಕೆ ಯೋಗ್ಯ ಉತ್ತರವನ್ನೂ ಆಗಲೇ ಕೊಡಲಾಗಿತ್ತು. ಅ. ನ. ಕೃಷ್ಣರಾಯರು ಸಂಪಾದಕರಾಗಿದ್ದ 'ಪ್ರಗತಿಶೀಲ ಸಾಹಿತ್ಯ' ಎಂಬ ಪುಸ್ತಕದಲ್ಲೇ ಆ ಬಗ್ಗೆ ಹೀಗೆ ಕಮ್ಯೂನಿಸ್ಟರಲ್ಲದ ಒಬ್ಬ ಲೇಖಕರು ಬರೆದುದುಂಟು:

"ಪ್ರಗತಿ ವಿರೋಧಕರು, ಸಾಮ್ರಾಜ್ಯವಾದಿಗಳು, ಫ್ಯಾಸಿಸ್ಟರು ಮತ್ತು ಬಂಡವಾಳ ಗಾರರು, ಜನತೆಯನ್ನು ಸಂದೇಹದಲ್ಲಿ ಕೆಡವಲು ಸದಾ ಈ 'ಕೆಂಪು' (ಕಮ್ಯೂನಿಸ್ಟ್) ಬಣ್ಣವನ್ನು ಉಪಯೋಗಿಸುತ್ತಾರೆ. ಜಿನೋವೀವ್ ಫೋರ್ಜರಿ ಪತ್ರ, ಸಾಕೋವಾನ್ ಜೆತ್ತಿ ಪ್ರಕರಣ, ಮೀರತ್ ಖಟ್ಲೆ ಹಾಗೂ ಇಂತಹದೇ ಆದ ನೂರಾರು ನೀತಿಗಳು ಪ್ರತಿಯೊಂದು ದೇಶದಲ್ಲೂ ಆಗಾಗ ಆಚರಿಸಲ್ಪಟ್ಟಿವೆ. ಭಾರತದಲ್ಲೇ ಬಂಡವಲಿಗ, ಧರ್ಮಾಧಿಕಾರಿ ಹಾಗೂ ಸರಕಾರಗಳು ಮತ್ತು ಇವರೆಲ್ಲರ ದಾಸರು ತಮಗೆ ಕಹಿಯಾದ ಪುರೋಗಾಮಿ ಚಳವಳಿಗಳನ್ನೆಲ್ಲ 'ಕಮ್ಯೂನಿಸ್ಟ್' ಎಂದು ಕರೆದು, ಜನತೆಯ ಬೆಂಬಲವನ್ನು ಪಡೆಯದಂತೆ ಮಾಡಲು ಯತ್ನಿಸಿದ್ದಾರೆ."

ಆ ಕೆಲಸವನ್ನು ಪ್ರಗತಿಶೀಲರೆಂದು ಕರೆದುಕೊಳ್ಳುವ ಅ. ನ. ಕೃಷ್ಣರಾಯರೇ ಮಾಡುತ್ತಿರುವುದು ದುರಂತವೆ ಸರಿ! ತಮ್ಮ ಸ್ವಚ್ಛಂದತೆಯ ಬಗ್ಗೆ ಸವಾಲುಹಾಕಿರುವವರನ್ನೆಲ್ಲ ಕಮ್ಯೂನಿಸ್ಟ್ ಸಾಹಿತಿಗಳು-ಪ್ರತಿಗಾಮಿಗಳು ಎಂದು ಕರೆಯಲು ಅವರು ಯತ್ನಿಸುತ್ತಿರುವುದು ನಿಜಕ್ಕೂ ಹಾಸ್ಯಾಸ್ಪದವಾಗಿದೆ.

ಇತರ ಕಾರ್ಯಕ್ರಮಗಳು

ಅನಂತಸುಬ್ಬರಾಯರ ಟೈಪ್‌ರೈಟರ್ ಪ್ರದರ್ಶನ, ಚಿತ್ರದುರ್ಗದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇತಿಹಾಸ ಸಂಶೋಧಕ ಹುಲ್ಲೂರು ಶ್ರೀನಿವಾಸ

ಜೋಯಿಸ್, ಗವಾಯಿ ಬಸವರಾಜ ಮನ್ಸೂರ್, ದ. ಕೃ. ಭಾರದ್ವಾಜರಿಗೆ ಮಾನಪತ್ರಸಮರ್ಪಣ ಈ ಕಾರ್ಯಕ್ರಮಗಳೂ ಜರುಗಿದುವು.

ಏಕೀಕರಣಕ್ಕೆ ಸಂಬಂಧಿಸಿದ ನಿರ್ಣಯಕ್ಕೆ ಹಿರಿಯೂರಿನ ಕೆಲವರು ವಿರೋಧ ತೋರಿಸಿದ್ದರಿಂದ ಈ ನಿರ್ಣಯವನ್ನೇ ವಾಪಸು ತೆಗೆದುಕೊಳ್ಳಲಾಯಿತು.

ಅಂತೂ ಹೀಗೆ ಸಮ್ಮೇಳನ ಮುಗಿಯಿತು.

ಅದೇ ರಾತ್ರಿ ಅಖಿಲ ಕರ್ನಾಟಕ ಪ್ರಗತಿಶೀಲ ಲೇಖಕರ ಚಳವಳಿಯ ಸ್ಥಾಯೀ ಸಮಿತಿಯೊಂದು ನೇಮಕವಾಯಿತು. ಬೆಳಗಾಂವಿಯ ಬಸವರಾಜ ಕಟ್ಟೀಮನಿ, ಧಾರವಾಡದ ದ. ಬಾ. ಕುಲಕರ್ಣಿ, ಬಳ್ಳಾರಿಯ ಕೋ. ಚೆನ್ನಬಸಪ್ಪ, ಮಂಗಳೂರಿನ ಬಿ. ಶಂಕರ ಭಟ್, ಬೆಂಗಳೂರಿನ ನಿರಂಜನ ಇವರು ಯಾರನ್ನೂ ಸ್ಥಾಯಿ ಸಮಿತಿಗೆ ಅಲ್ಲಿ ಸೇರಿಸಿಕೊಳ್ಳುವ ಔದಾರ್ಯವನ್ನು ಸಮ್ಮೇಳನದ ಪ್ರಮುಖರು ತೋರಿಸಲಿಲ್ಲ! ಈ ಸ್ಥಾಯಿ ಸಮಿತಿಗೆ ಚಿತ್ರದುರ್ಗದ ಶ್ರೀಧರಮೂರ್ತಿ ಕಾರ್ಯದರ್ಶಿ, ಅದರ ಕಚೇರಿ ಇರುವುದು ಚಿತ್ರದುರ್ಗದಲ್ಲೇ.

ಅಂತೂ, ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನೂರೊಂದು ಹೊಸ ಸಮಸ್ಯೆಗಳು ಜನರ ಮುಂದಿರುವಾಗ, ಸಾಂಸ್ಕೃತಿಕ ಜೀವನದಲ್ಲೇ ನವಚೇತನವನ್ನು ತುಂಬುವಂಥ ಹೊಸ ಪರಿಸ್ಥಿತಿಗೆ ನಾಡಿನ ಪ್ರಗತಿಶೀಲ ಲೇಖಕರು ಕಾರಣರಾಗುವುದರ ಬದಲು, ಈ ರೀತಿಯಲ್ಲಿ ಇದೊಂದು ಸಮ್ಮೇಳನದ ಮುಕ್ತಾಯವಾಯಿತು.

ಸ್ವಾಗತಾಧ್ಯಕ್ಷ ಅವಧಾನಿ ಮತ್ತು ಗೆಳೆಯರು ಊಟ ಉಪಚಾರಗಳಲ್ಲಿ ಮಿಗಿಲಾದ ಕೈ ಎನಿಸಿ ದುಡಿದರು. ಹೊಟ್ಟೆ ತಣಿಯಿತು, ಮನಸ್ಸಲ್ಲ.

ಕೆಲವರ ಯತ್ನದಿಂದಾಗಿ ಪ್ರಗತಿಶೀಲ ಸಾಹಿತ್ಯ ಚಳವಳಿ ಗೊತ್ತುಗುರಿ ಇಲ್ಲದೆ ಅಡ್ಡದಾರಿ ಹಿಡಿಯುತ್ತಿದೆ. ಕನ್ನಡ ಲೇಖಕರು ಈ ಬಗ್ಗೆ ತುಂಬ ಯೋಚಿಸಿ ಚರ್ಚಿಸಿ ನಿರ್ದಿಷ್ಟ ಅಭಿಪ್ರಾಯಗಳನ್ನು ರೂಪಿಸದ ಹೊರತು, ನಿಜವಾದ ಪ್ರಗತಿಶೀಲ ಚಳವಳಿಗೆ ಉಳಿಗಾಲವೇ ಇಲ್ಲ.

● 'ಪ್ರಜಾವಾಣಿ'ಯಲ್ಲಿ ಪ್ರಕಟಿತ

೧೯೫೩

ಪ್ರಗತಿಯ ತೀಕ್ಷ್ಣದೃಷ್ಟಿ

ಕನ್ನಡದಲ್ಲಿ ಪ್ರಗತಿಯ ಸಾಹಿತ್ಯ ಚಳವಳಿ ಆರಂಭವಾಗಿ ಇಂದಿಗೆ ಹತ್ತು ವರ್ಷಗಳು ಕಳೆದಿವೆ. ಈ ಲೇಖನದಲ್ಲಿ ಬರೆಯುತ್ತಿರುವ ಮಾತು, ೧೦ ವರ್ಷಗಳಿಗೂ ಹಿಂದಿನದು. ೧೯೪೧ರಲ್ಲಿ ಕೊಡಲ್ಪಟ್ಟ ಒಂದು ಭಾಷಣವೇ ಇದರ ವಸ್ತು.

ಪ್ರಗತಿಶೀಲತೆ ಎಂಬ ಪದ—ಸಾಹಿತ್ಯಕ್ಕೆ ಸಂಬಂಧಿಸಿ—ನಮಗೆ ಹೊಸತು. ಪ್ರಗತಿಶೀಲ ಸಾಹಿತ್ಯ ಎಂಬ ಪದಪ್ರಯೋಗವನ್ನು ನಾವು ಸಾಹಿತ್ಯದಲ್ಲಿ ಕೇಳುತ್ತಿರುವುದು ಈ ಹತ್ತು ವರ್ಷಗಳಲ್ಲಿ ಮಾತ್ರ. ಆದರೆ ಸಾಹಿತ್ಯದಲ್ಲಿ ಪ್ರಗತಿಯಾಗಬೇಕೆಂಬ ಹಂಬಲ ಹೊಸದಲ್ಲ. ಸಾಹಿತ್ಯವು ಜನಸಾಮಾನ್ಯರಿಗೆ ಉಪಯುಕ್ತವಾಗಿರಬೇಕೆಂಬ ಆಶಯ ಹೊಸದಲ್ಲ.

ಅದು ಹಳೆಯದು—ಎಂದು ಸಿದ್ಧಪಡಿಸಿ ತೋರಿಸುವುದಕ್ಕಾಗಿ, ಕನ್ನಡದೊಬ್ಬ ಪ್ರಮುಖ ಸಾಹಿತಿ ಮಾಡಿದ ಭಾಷಣವನ್ನು ಇಲ್ಲಿ ಪರಿಚಯಿಸಲು ಆಯ್ದು ಕೊಂಡಿದ್ದೇನೆ.

ಗಾಂಧೀಜಿ ಮತ್ತು ಸಾಹಿತ್ಯ

ಆ ಕನ್ನಡ ಸಾಹಿತಿಯು ಹೆಸರು ಹನುಮಂತರಾವ್ ಮಾಂಜರೇಕರ. ಉತ್ತರ ಕನ್ನಡ ಜಿಲ್ಲೆಯ, ಅಂದರೆ ಕಾರವಾರ ಜಿಲ್ಲೆಯ ಹೆಸರು ಹೇಳಿದೊಡನೆ ಸಾಹಿತ್ಯ ಸಂಸ್ಕೃತಿಯ ಕ್ಷೇತ್ರದಲ್ಲಿ ಸುಳಿಯುವ ಹೆಸರು ಹನುಮಂತರಾಯರದು. ಕನ್ನಡದ ಪುನರುದಯದ ಕಾಲದಲ್ಲಿ ನಾಡಿನ ಯುವಕ ಮುಂದಾಳುಗಳಾಗಿ ದುಡಿದವರಲ್ಲಿ ಅವರೊಬ್ಬರು.

ಉತ್ತರ ಕನ್ನಡದ ಸೋದರಿ ಜಿಲ್ಲೆಯಾದ ದಕ್ಷಿಣ ಕನ್ನಡಕ್ಕೆ ಮಾಂಜರೇಕರರನ್ನು ಒಮ್ಮೆ ಆಹ್ವಾನಿಸಲಾಯಿತು. ಮಂಗಳೂರಿನ ಮಿತ್ರಮಂಡಳಿಯವರು, ೧೯೪೧ನೇ ವರ್ಷ ನಾಡಹಬ್ಬದ ಸಮಯದಲ್ಲಿ ಅವರನ್ನು ಸಾಹಿತ್ಯಗೋಷ್ಠಿಯ ಅಧ್ಯಕ್ಷಸ್ಥಾನವನ್ನು ಕೊಟ್ಟು, ಬರಮಾಡಿಕೊಂಡರು. ಆಗ ಅವರು ಅಲ್ಲಿ ಮಾಡಿದ 'ಇಂದಿನ ಕನ್ನಡ

ಸಾಹಿತ್ಯದ ಪರಾಮರ್ಶ' ಎಂಬ ಭಾಷಣದ ಪ್ರತಿ ನನ್ನಲ್ಲಿದೆ.

ಆ ಭಾಷಣದ ಮುಖ್ಯಾಂಶಗಳು ಹೀಗಿವೆ:

"ರಾಜಕೀಯ ಉತ್ಥಾನಕ್ಕೆ ಸಾಧನವೆಂಬ ದೃಷ್ಟಿಯಿಂದ ಸಾಹಿತ್ಯದ ಕಡೆಗೆ ನೋಡುವವರಲ್ಲಿ ನಾನು ಒಬ್ಬನಾದುದರಿಂದ ಸಾಹಿತ್ಯವೆಂದಕೂಡಲೇ, ಗಾಂಧೀಜಿಯವರು ಗುಜರಾಥಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ ಒಂದು ಮಾತು ನೆನಪಾಗುತ್ತಿದೆ. 'ನೀರು ಸೇದುವವರಿಗೆ, ಬಂಡಿ ನಡೆಸುವವರಿಗೆ, ಮೈಬೆವರನ್ನು ಸುರಿಸುತ್ತಿರುವವರಿಗೆ, ಉಪಯುಕ್ತವಾಗುವಂತಹ ಹಾಡುಗಳನ್ನು ಯಾವಾತನು ರಚಿಸುವನೋ ಅವನೇ ನಿಜವಾಗಿ ವಿಜಯಶಾಲಿಯಾದ ಲೇಖಕನು!' ಕರ್ನಾಟಕದೊಳಗಿನ ಹಿರಿಯ ಸಾಹಿತಿಗಳೆನಿಸಿಕೊಳ್ಳುವವರು ಸಾಹಿತ್ಯದ ಇಂಥ ಒರಟು ವ್ಯಾಖ್ಯೆಯನ್ನು ಕೇಳಿ ಅಪಹಾಸ್ಯ ಮಾಡಬಹುದು. ಮಯೂರ ಸಿಂಹಾಸನದಿಂದ ಎಳೆದು ತಂದು ಶಾರದೆಯನ್ನು ಮಣ್ಣಿನಲ್ಲಿ ಕೆಡವಿದ್ದಾರೆ, ಗಾಂಧಿಯವರು—ಎಂತಲೂ ಮರುಗಬಹುದು!"

ಪರಾನ್ನಪುಷ್ಟವರ್ಗ

"ಇತ್ತೀಚೆಗೆ ಸಾಮಾನ್ಯಮಾನವಜೀವನದಿಂದ ಭಿನ್ನವಾದ, ಅಲಿಪ್ತವಾದ ಬಂಡವಲುಗಾರರ ವರ್ಗವೊಂದು ಪ್ರತ್ಯೇಕವಾದಂತೆ, ಜನಜೀವನದಿಂದ ಅಲಿಪ್ತವಾದ ಸಾಹಿತಿಗಳ ಜಾತಿಯೊಂದು ಸಿದ್ಧವಾಗುತ್ತಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಬಂಡವಲುಶಾಹಿಯ ವಿರುದ್ಧ ಇಂದು ಜಗತ್ತಿನಲ್ಲಿ ಹೋರಾಟವು ನಡೆದಿರುವಂತೆ, ಸಾಹಿತಿಶಾಹಿಯ ವಿರುದ್ಧ ಬಂಡಾಯ ಹೂಡುವ ಕಾಲವೂ ಶೀಘ್ರದಲ್ಲಿ ಬರಬಹುದೇನೋ ಎಂಬ ಸಂದೇಹ ನನ್ನನ್ನು ಕಾಡುತ್ತಿದೆ! ಬಂಡವಲುಗಾರರಿಗೆ Parasite class ಎಂದು ಕರೆಯುವಂತೆ, ಸಾಹಿತಿಗಳಿಗೆ ಪರಾನ್ನಪುಷ್ಟವರ್ಗ ಎಂದು ಸಂಬೋಧಿಸುವ ಸಮಯವು ಪ್ರಾಪ್ತವಾಗಬಹುದೆ?"

"ಮಹಾತ್ಮಾ ಗಾಂಧಿಯವರ ವ್ಯಾಖ್ಯೆಗೆ ಅನುಗುಣವಾದ ಸಾಹಿತ್ಯವನ್ನು ಹೊಸಗನ್ನಡದಲ್ಲಿ ಹುಡುಕಹೋದರೆ ಎಷ್ಟು ಸಿಕ್ಕೀತು ? ಅದೇ ಹಳಗನ್ನಡದಲ್ಲಿ ದಾಸರು, ಶರಣರು, ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ—ಮೊದಲಾದ ಜನಪದ ಕವಿಗಳು ಇಂದಿಗೂ ಜನತಾಹೃದಯಸಿಂಹಾಸನದ ಮೇಲೆ ಆರೂಢರಾಗಿದ್ದಾರೆ. ಅವರಿಗೆ ಸರಿಸಮಾನರಾಗಿ ನಿಲ್ಲಬಲ್ಲ ಸಾಹಿತಿಗಳು ಇಂದು ನಮ್ಮಲ್ಲಿ ಇದ್ದಾರೆಯೇ? ಬೇಂದ್ರೆಯವರು ಮಹಾಕವಿಗಳೆಂದೂ ಅವರು ವಿಶ್ವಕವಿಗಳ ಮಾಲಿಕೆಯಲ್ಲಿ ಸ್ಥಾನಹೊಂದಲು ಯೋಗ್ಯರಿದ್ದಾರೆಂದೂ ಅವರ ಸಾಹಿತಿ-ಮಿತ್ರರು ಅವರನ್ನು ಹೊಗಳುತ್ತಾರೆ. ಅವರು ಹಾಗೆ ಇರಲೂಬಹುದು. ಆದರೆ ನಮ್ಮ ಜನತೆಯು ಮಟ್ಟವು

ಅಷ್ಟು ಮೇಲಕ್ಕೇರಿದೆಯೆ ? ಜನಸಾಮಾನ್ಯರ ಮಾತಂತಿರಲಿ; ಕೇವಲ ಸಾಹಿತ್ಯಭಕ್ತರೆಂದು ಇಲ್ಲಿ ಉಪಸ್ಥಿತರಾಗಿರುವ ಮಹಾಶಯರಲ್ಲಿ ಎಷ್ಟು ಮಂದಿ ಅವರ ಅಷ್ಟೂ ಕವನಗಳನ್ನು ಓದಿ ಅರ್ಥಮಾಡಿದವರಿದ್ದಾರೆ? ಪುಟ್ಟಪ್ಪನವರ ಸಂಸ್ಕೃತ ಮಿಶ್ರಿತ ಭಾಷಾಶೈಲಿಯನ್ನು ತಿಳಿದುಕೊಳ್ಳಬಲ್ಲ ಸಾಮಾನ್ಯರು ಎಷ್ಟು ಜನ? A sentence that needs explanations is not worth explanation—ಸ್ಪಷ್ಟೀಕರಣದ ಆವಶ್ಯಕತೆ ಇರುವ ವಾಕ್ಯವು ಸ್ಪಷ್ಟೀಕರಣಕ್ಕೆ ಯೋಗ್ಯವಾದುದೇ ಅಲ್ಲ—ಎಂದು ವಾಲ್ಟೇರ್ ಹೇಳಿದ್ದಾನೆ....

ಕನ್ನಡ ಕಾವ್ಯದಲ್ಲಿ ರೊಮ್ಯಾಂಟಿಕ್ ಯುಗದ ಪ್ರಭೃತಿದ್ವಯರಾದ ಬೇಂದ್ರೆ-ಪುಟ್ಟಪ್ಪರ ಕುರಿತು ಜನಪದದ ಪರವಾಗಿ ಮಾಂಜರೇಕರರು ಈ ಟೀಕೆಯನ್ನು ಮಾಡಿದರು. ಪ್ರಗತಿಶೀಲರು ಈಗ ಮಾಡುತ್ತಿರುವ ಟೀಕೆಯೂ ಇದೇ ಹದಿಮೂರು ವರುಷಗಳಲ್ಲಿ ಹಿಂದೆ ಸಾಹಿತ್ಯಪ್ರಮುಖರು ಮಾಡಿದ್ದನ್ನೇ.

ಸಾಮಾನ್ಯರನ್ನು ತಿಳಿದುಕೊಳ್ಳಿ

ನಮ್ಮ ಸಾಹಿತಿಗಳು ಜನಪದದ ಸುಖದುಃಖಗಳೊಡನೆ ತಾದಾತ್ಮ್ಯ ಹೊಂದಬೇಕೆಂದು ಕರೆಕೊಡುತ್ತಾ ಮಾಂಜರೇಕರ್ ಹೀಗೆ ಹೇಳಿದುದು:

".... ನಮ್ಮ ನಾಡಿನಲ್ಲಿ ಈಗ ಅಕ್ಷರಜ್ಞರ ಸಂಖ್ಯೆ ೧೦೦ರಲ್ಲಿ ೧೫ಕ್ಕೆ ಮಿಕ್ಕಿಲ್ಲ. ಈ ೧೫ರಲ್ಲಿ ಸಹ ಸಂಸ್ಕೃತಿ ಸಂವರ್ಧನಕ್ಕೆ ತಮ್ಮ ಅಕ್ಷರಜ್ಞಾನವನ್ನು ಬಳಸಿಕೊಳ್ಳಲು ಸಮರ್ಥರಾದವರು ಅರ್ಧದಷ್ಟು. ಅಂದಮೇಲೆ ಈಗ ಹೊರಬೀಳುತ್ತಿರುವ ಸಾಹಿತ್ಯವು, ೧೦೦ರಲ್ಲಿ ಕೇವಲ ಐದಾರು ಮಂದಿಗೆ ಉಪಯುಕ್ತವಾದುದೆಂದಾಯಿತು. ಈ ಐದಾರು ಜನರಲ್ಲಿ ಸಿರಿವಂತರೇ ಹೆಚ್ಚು ಮಂದಿ. ಹೀಗಾಗಿ ಅವರ ವಿರಾಮಕಾಲಾಯಾಪನೆಗೆ ಉಪಯುಕ್ತವಾದ ವಾಙ್ಮಯವೇ ಇಂದು ಹೆಚ್ಚುಹೆಚ್ಚಾಗಿ ಹೊರಬೀಳುತ್ತಿರುವುದರಲ್ಲಿ ಏನಾಶ್ಚರ್ಯ? ಇಂತಹ ಪರಿಸ್ಥಿತಿಯಲ್ಲಿ ನಿಜವಾದ ಸಾಹಿತ್ಯಾಭಿವೃದ್ಧಿಗೆ ಅಕ್ಷರ ಪ್ರಚಾರದಷ್ಟು ಬಲವಾದ ಸಾಧನವು ಇನ್ನೊಂದಿಲ್ಲ. ಆದುದರಿಂದ ಸಾಹಿತಿಗಳು ಜನಪದದ ದೃಷ್ಟಿಯಿಂದ ನಿರುಪಯುಕ್ತವೆನ್ನಿಸುವ ಸಾಹಿತ್ಯಸಂವರ್ಧನದ ಕೆಲಸಕ್ಕೆ ಸ್ವಲ್ಪಮಟ್ಟಿಗೆ ತಡೆಹಾಕಿ, ಅಕ್ಷರ ಪ್ರಚಾರಕ್ಕಾಗಿ ಹೊರಬೀಳುವ ಹೊತ್ತು ಇನ್ನೂ ಬಂದಿಲ್ಲವೇ ? ಹಾಗೆ ಮಾಡಿದಲ್ಲಿ ಸಾಮಾನ್ಯ ಜನರ ದೃಷ್ಟಿಯಿಂದ ಯಾವಯಾವ ಅಡಚಣೆಗಳು ಬಂದೊದಗುತ್ತವೆ ಎಂಬುದರ ಅರಿವು ಅವರಿಗಾಗುವುದು. ಅವರು ಜನತೆಯ ಸುಖದುಃಖಗಳೊಂದಿಗೆ ತಾದಾತ್ಮ್ಯ ಹೊಂದುವರು. ಆಗ ಅವರು ಬರೆಯುವ ಸಾಹಿತ್ಯವು ನಿಜವಾಗಿ ಪ್ರಭಾವೀ ಸಾಹಿತ್ಯವಾಗುವುದು, ಜನತೆಯ ಮನ್ನಣೆಯನ್ನು ಪಡೆಯುವುದು."

ವಿಮರ್ಶೆ ಪ್ರಶಂಸೆ

ಹದಿಮೂರು ವರುಷಗಳ ಹಿಂದೆಯೇ, ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿ ಆರಂಭವಾಗುವುದಕ್ಕೆ ಮುಂಚೆಯೇ, ಹೀಗೆ ಪ್ರಗತಿಯ ತೀಕ್ಷ್ಣದೃಷ್ಟಿಯಿಂದ ನೋಡಿ ಕನ್ನಡ ಸಾಹಿತ್ಯವನ್ನು ಅವಲೋಕಿಸಿದ ವ್ಯಕ್ತಿ, ವಿಮರ್ಶೆಯ ಕುರಿತು ಹೇಳಿರುವ ಎರಡು ಮಾತುಗಳು ಗಮನೀಯವಾಗಿವೆ.

"ನಮ್ಮಲ್ಲಿಯ ವಿಮರ್ಶೆಯೂ ಯೋಗ್ಯವಾದ ಹಾದಿಯನ್ನು ಹಿಡಿದಿಲ್ಲ. ಪರಸ್ಪರ ಪ್ರಶಂಸೆಯೇ ಹೆಚ್ಚು ! ತುತೂರಿಯೂದುವುದೇ ಹೆಚ್ಚು ! ನಿರ್ದಾಕ್ಷಿಣ್ಯವಾಗಿ ಸಹಾನುಭೂತಿಯಿಂದ ದೋಷಗಳನ್ನು ಬಯಲಿಗೆಳೆಯುವ ವಿಮರ್ಶಕರು ಕಡಿಮೆ. ಒಬ್ಬ ಲೇಖಕನು ಪ್ರಸಿದ್ಧಿಗೆ ಬರುವುದೇ ತಡ—ಅವನು ಏನು ಬರೆದರೂ ನಡೆಯುತ್ತದೆ. ಏನು ಬರೆಯುತ್ತಾನೆಂದು ನೋಡುವುದಕ್ಕಿಂತ, ಯಾರು ಬರೆಯುತ್ತಾರೆ ಎನ್ನುವದರ ಕಡೆಗೇ ನಮ್ಮ ಲಕ್ಷ್ಯ ಹೆಚ್ಚು !"

ಈಗಲೂ ಕನ್ನಡದಲ್ಲಿ ವಿಮರ್ಶೆಯ ಕುರಿತು ಸಾಹಿತಿಗಳಿಗೆ ಇರುವ ಅಭಿಪ್ರಾಯ ವಿಚಿತ್ರವಾಗಿದೆ. ಆಗ ನಡೆದ ಪರಸ್ಪರ ಪ್ರಶಂಸೆ ಈಗಲೂ ಅಲ್ಪಪ್ರಮಾಣದಲ್ಲಿದೆ. ಆದರೆ ಹೆಚ್ಚಾಗಿ ತೋರಿಬರುತ್ತಿರುವುದು ಹಿಂದಿನ ಪ್ರವೃತ್ತಿಯ ಇನ್ನೊಂದು ಮೈ. ಮಾಂಜರೇಕರ ಅವರು ಹಿಂದೆ ಬಯಸಿದಂಥ 'ನಿರ್ದಾಕ್ಷಿಣ್ಯವಾಗಿ ಸಹಾನುಭೂತಿಯಿಂದ ದೋಷಗಳನ್ನು ಬಯಲಿಗೆಳೆಯುವಂಥ' ವಿಮರ್ಶೆಗಳು ಈಗ ಬರುತ್ತಿವೆ. ಆದರೆ ವಿಮರ್ಶೆಗೆ ಒಳಗಾದ ಸಾಹಿತಿಗಳು ಅಂಥ ವಿಮರ್ಶೆಗಳನ್ನೆಲ್ಲ ವೈಯಕ್ತಿಕ ಅಪಪ್ರಚಾರವೆಂದು ಮೂದಲಿಸುತ್ತಾರೆ! ಆಗ ನಡೆದುದೂ ವಿಮರ್ಶೆಯನ್ನು ಕಡೆಗಣಿಸುವ ಯತ್ನ; ಈಗಿನ ಯತ್ನವೂ ಅದಕ್ಕಿಂತ ಭಿನ್ನವಾದದ್ದಲ್ಲ.

ವಿಸ್ತಾರ ಅನುಭವ

"ಕನ್ನಡ ಸಾಹಿತ್ಯ ನಿರ್ಮಿತಿಯು ಈಗ ಏಕಾಂಗಿಯಾಗಿ ಸಾಗುತ್ತಿದೆಯೆಂದು ನನಗನಿಸುತ್ತಿದೆ. ನಮ್ಮ ಬರಹಗಾರರಲ್ಲಿ ೧೦ಂಕ್ಕೆ ೯೦ರಷ್ಟು ಜನ ಶಿಕ್ಷಕ-ವೃತ್ತಿಯವರು (ಉಪಾಧ್ಯಾಯರು)... ಬೇರೆಬೇರೆ ವೃತ್ತಿಯ ಜನರು ಸಾಹಿತ್ಯ ನಿರ್ಮಿತಿಯ ಕಾರ್ಯದಲ್ಲಿ ಕೈಯಿಕ್ಕುವುದು ಕಡಿಮೆ. ಹೀಗಾಗಿ ವಾಙ್ಮಯದೊಳಗಿನ ವಿವಿಧಾನುಭವಗಳಿಂದ ನಾವು ವಂಚಿತರಾಗಿದ್ದೇವೆ" ಎಂದೂ ಮಾಂಜರೇಕರ ಅವರು ಹೇಳಿದರು. ಇಷ್ಟು ವರ್ಷಗಳಲ್ಲಿ ಈ ವಿಷಯದಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಿದೆ. ಆದರೆ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ.

ಸಾಹಿತಿ ಮಾಂಜರೇಕರರು ನಮ್ಮ ರಾಜಕಾರಣಿಗಳ ಬಗ್ಗೆ ಹೇಳಿದ ಒಂದು ಮಾತನ್ನು ಕೊನೆಯದಾಗಿ ಇಲ್ಲಿ ಉಲ್ಲೇಖಿಸಬೇಕು.

"ಕಾಲೇಲಕರ, ಮುನಶಿ, ರಾಜಗೋಪಾಲಾಚಾರಿ ಮೊದಲಾದ ರಾಜಕಾರಣಿಗಳಿಗೆ ಅವರವರ ಮಾತೃಭಾಷೆಯ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನವಿದೆ. ಆದರೆ ನಮ್ಮಲ್ಲಿಯ ರಾಜಕಾರಣಿಗಳು ಸಾಹಿತ್ಯದ ಮಟ್ಟಿಗಾದರೂ ಅಸ್ಪೃಶ್ಯತೆಯನ್ನು ಪಾಲಿಸುತ್ತಿದ್ದಾರೆ!"

"ಈಗಿನ ರಾಜಕಾರಣಿಗಳಿಂದ ಸಂಸ್ಕೃತಿ ಪ್ರಸಾರದ ಮಾತು ಕೇಳಿಬರುತ್ತಿದೆ ಯಾದರೂ ಸಾಹಿತ್ಯದ ಕುರಿತು ಅವರಿಗೆ ಇರುವ ಆಸಕ್ತಿ ಮಾತ್ರ ವಿವಾದಾಸ್ಪದವಾದುದೆ!

...ಮಾಂಜರೇಕರರು ಮಾಡಿದ ಸಾಹಿತ್ಯದ ಪರಾಮರ್ಶ ಹಳೆಯದು.

ಆದರೆ ಅದರ ಉಪಯುಕ್ತತೆ ಇಂದಿಗೂ ಅಷ್ಟೇ ಮುಖ್ಯವಾಗಿದೆ—ಅಷ್ಟೇ ಹೊಸದಾಗಿದೆ."

- ಪ್ರಥಮ ಪ್ರಕಟಣೆ : 'ಪ್ರಜಾವಾಣಿ'ಯಲ್ಲಿ ; ಬಳಿಕ 'ಕಾನಡಾವೃತ್ತ' ಕನ್ನಡ ಸಾಹಿತ್ಯ ಸಮ್ಮೇಳನಾಂಕದಲ್ಲಿ.

೧೯೫೩.

ಸಾಹಿತಿ ಮತ್ತು ಸಮಾಜ

ತನ್ನ ಅಭಿಪ್ರಾಯಗಳಿಗೆ ಬರಹದ ರೂಪುಕೊಡುವ ಸಾಮರ್ಥ್ಯವುಳ್ಳ ಸಾಹಿತಿಗೂ ಜನಸಮುದಾಯದಿಂದ ರೂಪಿತವಾದ ಸಮಾಜಕ್ಕೂ ಸಂಬಂಧವಿದೆಯೇ? ಇದೆ-ಇದೆ—ಎಂಬ ಉತ್ತರ ಬಾರಿಬಾರಿಗೂ ಬಂದಿದೆಯಾದರೂ ಆ ಸಂದೇಹ ಮಾತ್ರ ಸಂಶಯಾತ್ಮಕರನ್ನು ಆಗಾಗ್ಗೆ ಬಾಧಿಸುವುದುಂಟು.

ಸಾಹಿತಿಯು ಇತರರಂತೆಯೇ ಒಬ್ಬ ಮನುಷ್ಯ. ಆತನಿಗೂ ಸಂಸಾರದ ಸುಖ ದುಃಖಗಳಿವೆ. ಆತನೂ ಮನೆಬಾಡಿಗೆ ತೆರಬೇಕಾಗುತ್ತದೆ. (ಎಲ್ಲೋ ಒಬ್ಬಿಬ್ಬರಿಗೆ ಸ್ವಂತ ಮನೆಗಳಿರುವುದೂ ಉಂಟು.) ಈ ಹತ್ತು ವರ್ಷಗಳ ಕಾಲ ಆತನೂ ರೇಷನ್ ಕಾರ್ಡ್ ಹಿಡಿದು ಕ್ಯೂ ನಿಂತಿದ್ದಾನೆ. ನಿನ್ನೆ-ಇಂದು-ನಾಳೆಗಳಿಂದ ಆತನೂ ಬಾಧಿತನೇ.

ಹೀಗಿರುವಾಗ, ಆತ ನಿರಂಕುಶಮತಿ, ಸ್ವತಂತ್ರನು, ಎನ್ನುವುದರ ಅರ್ಥವೇನು?

ಸಾಹಿತಿಗಳು ಕಲಾವಿದರು ಕೂಡ—ತಮ್ಮದೊಂದು ವಿಶಿಷ್ಟವರ್ಗವೆಂದು ಭಾವಿಸುವುದುಂಟು. ಸಮಾಜದ ನಿಯಮಗಳಿಂದ ತಾವು ಬಂಧಿತರಲ್ಲವೆಂದು ಕೆಲವರು ಪ್ರತಿಪಾದಿಸುವುದುಂಟು. ಜನತೆಯನ್ನು ಸಾಮಾನ್ಯವಾಗಿ ತೂಗುವ ಅಳತೆಗೋಲಿನಿಂದ ತಮ್ಮನ್ನು ಅಳೆಯಬಾರದೆಂದು ವಾದಿಸುವುದುಂಟು.

ಅದು ಸರಿಯೇ ?

ಇಂದಿನ ಕೆಲವೊಂದು ಸಾಹಿತ್ಯ ಸಮಸ್ಯೆಗಳು ಈ ಪ್ರಶ್ನೆಯ ಉತ್ತರವನ್ನು ಅವಲಂಬಿಸಿವೆ.

ಕೃತಿ ಮತ್ತು ಕರ್ತೃ

ಸಾಹಿತಿ ಸಾಮಾನ್ಯವಾಗಿ ಬಾಹ್ಯಜಗತ್ತಿನಲ್ಲಿ ಹಲವೊಂದು ವಿಷಯಗಳನ್ನು ನಿರೀಕ್ಷಿಸುತ್ತಾನೆ. ಕೆಲವೊಂದು ವಿಷಯಗಳನ್ನು ಅನುಭವಿಸುತ್ತಾನೆ. ಈ ನಿರೀಕ್ಷಣೆ, ಅನುಭವಗಳು ಆತನ ಹೃದಯದ ಹೊಯ್ದಾಟವನ್ನೂ ಮೆದುಳಿನ ಕೆಲಸವನ್ನೂ ನಿಯಂತ್ರಿಸುತ್ತವೆ.

ಮುಂದೆ ತನ್ನ ಭಾವನೆ-ವಿಚಾರಗಳಿಗೆ ಆತ ರೂಪು ಕೊಡಬಯಸುತ್ತಾನೆ. ಯಾವುದಾದರೊಂದು ಸನ್ನಿವೇಶ ಬರೆ ಎಂದು ಅವನಿಗೆ ಕರೆಕೊಡುತ್ತದೆ. ಅದೇ ಆತನಿಗೆ ಬರುವ ಸ್ಫೂರ್ತಿ, ಆಗ ಆತ ಕೃತಿ ರಚಿಸುತ್ತಾನೆ.

ಹಾಗೆ ಕೃತಿ ರಚಿಸುವುದು ಅವನ ವೈಯಕ್ತಿಕ ಆವಶ್ಯಕತೆಯಲ್ಲವೆ? ಹೌದು. ಏನನ್ನಾದರೂ ಕಂಡಾಗ, ಅನುಭವಿಸಿದಾಗ, ತನ್ನಲ್ಲಾಗುವ ಪ್ರತಿಕ್ರಿಯೆಗಳನ್ನು ಆತ ಮಾತಿನಲ್ಲಿ ಮೂಡಿಸಲೇಬೇಕು. ನಗುಬಂದಾಗ ಮುಖವರಳುವುದು, ದುಃಖವಾದಾಗ ಕಣ್ಣಂಚಿನಲ್ಲಿ ಹನಿಯೂಡುವುದು, ಎಷ್ಟು ಅನಿವಾರ್ಯವೋ, ಬರೆಹಗಾರ ಕೃತಿ ರಚಿಸುವುದೂ ಅಷ್ಟೇ ಅನಿವಾರ್ಯ.

ಕೆಲವರು 'ನಾವು ಆತ್ಮಾನಂದಕ್ಕಾಗಿ ಬರೆಯುತ್ತಿದ್ದೇವೆ' ಎನ್ನುವುದುಂಟು. ಆದರೆ ಹಾಗೆ ಬರೆದವರು ಹಸ್ತಪ್ರತಿಯನ್ನು ಉಪ್ಪಿನಕಾಯಿ ಭರಣಿಯಲ್ಲಿಡುವುದಿಲ್ಲ. ನಾಲ್ಕು ಜನರಿಗೆ ಓದಿ ತೋರಿಸುತ್ತಾರೆ ! ಆಮೇಲೆ ಅಚ್ಚುಹಾಕಿಸುತ್ತಾರೆ. ಓದಿದವರು ತಮ್ಮನ್ನು ಹೊಗಳಬೇಕು ಎಂದು ಅಪೇಕ್ಷಿಸುತ್ತಾರೆ. ವಾಸ್ತವವಾಗಿ ಅವರಿಗೆ ಆತ್ಮಾನಂದದ ಅನುಭವವಾಗುವುದು, ಅಂಥ ಹೊಗಳಿಕೆ ಬಂದಾಗಲೇ! ಹೌದು, ಬರಿಯ ಆತ್ಮಾನಂದಕ್ಕಾಗಿ ಬರೆಯುವ ಮಾತು ಶುದ್ಧ ಬುರುಡೆ.

ಆದರೆ ಕೃತಿ ರಚಿಸಿದಾಗ ಕಲಾವಿದನಿಗೆ ಸಾಹಿತಿಗೆ ಒಂದು ಅಪೂರ್ವ ಅನುಭವ ವಾಗುತ್ತದೆಂಬುದು ನಿಜ. ಒಮ್ಮೊಮ್ಮೆ ಮೈಮರೆಯುತ್ತಾ ಬರೆಯುವ ಸನ್ನಿವೇಶ ಒದಗುವುದುಂಟು. ಅದು ಕೃತಿರಚನೆಯ-ಸೃಷ್ಟಿಯ-ಸ್ವರ್ಗಸುಖ. ಒಮ್ಮೊಮ್ಮೆ ಅತೃಪ್ತಿ ಎನಿಸುವುದುಂಟು. ಅದು ಮುಂದಿನ ಪ್ರಗತಿಗೆ ಸೋಪಾನವಾದ ಅತೃಪ್ತಿ.

ಬರೆದು ಮುಗಿಸುವ ತನಕ ಈ ಕೃತಿ ಸಾಹಿತಿಯು ಸೊತ್ತು. ಆ ಬಳಿಕ ಅದರ ಹಕ್ಕುದಾರರು ಜನತೆ, ಕೃತಿಯ ಹಿರಿತನವನ್ನಾಗಲೀ ಅಲ್ಪತನವನ್ನಾಗಲೀ ತೂಗಿ ನೋಡುವವರು ಓದುಗರು. ಅವರೂ ಸ್ವತಂತ್ರರೇ. ಬರಹಗಾರನಿಗೆ ಬರೆಯುವ ಸ್ವಾತಂತ್ರ್ಯವಿರುವಂತೆ, ಓದಿ ತನ್ನ ಅಭಿಪ್ರಾಯವನ್ನು ತಿಳಿಸುವ ಸ್ವಾತಂತ್ರ್ಯ ಓದುಗನಿಗಿದೆ.

ಯಾವುದೋ ಭಾವನೆ, ವಿಚಾರ, ಬರಹಗಾರನ ಹೃದಯದಲ್ಲೋ ಮೆದುಳಲ್ಲೋ ಇರುವಷ್ಟು ಕಾಲ, ಅವುಗಳಿಂದ ಬಾಧಿತನಾಗುವವನು ಅವನೊಬ್ಬನೇ. ಆದರೆ ಆತ ಬರೆದ ಕೃತಿ ಓದುಗರ ಕೈಗೆ ಬಿದ್ದಮೇಲೆ, ಓದುವವರೆಲ್ಲ ಆ ಕೃತಿಯಿಂದ ಬಾಧಿತರಾಗುತ್ತಾರೆ. ಆಗ ಕರ್ತೃ ಓದುಗರಿಗೆ ಜವಾಬ್ದಾರನಾಗುತ್ತಾನೆ.

ಸಾಹಿತಿಯ ಜವಾಬ್ದಾರಿ

ಆ ಕಾರಣದಿಂದಲೇ ಸಾಹಿತಿಯ ಜವಾಬ್ದಾರಿ ಹಿರಿದು. ಮೇಧಾವಿಯಾದ ಸಾಹಿತಿ,

ತನ್ನ ಲೇಖನಿಯ ಸಾಮರ್ಥ್ಯದಿಂದ ಸಮಾಜವನ್ನು ನಿರ್ಮಿಸಬಲ್ಲನು, ಇಲ್ಲವೆ ನಿರ್ನಾಮ ಮಾಡಬಲ್ಲನು. ಇದು ಎಲ್ಲ ಸಾಹಿತಿಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಅನ್ವಯಿಸುವ ಮಾತು. ಒಳ್ಳೆಯ ಸಾಹಿತ್ಯಕೃತಿಯೊಂದು ಬಂದಾಗ, ಸಮಾಜದಲ್ಲಿರುವ ಒಳಿತಿನ ತೂಕ ಹೆಚ್ಚುವುದು. ಕೆಟ್ಟಕೃತಿ ಬಂದಾಗ ಕೆಡುಕಿನ ತೂಕ ಹೆಚ್ಚುವುದು.

ಹೀಗಾಗಿ, ಯಾವ ಸಾಹಿತಿಯೂ ಸಮಾಜದಿಂದ ಬೇರ್ಪಟ್ಟು ಇರಲಾರ, ಆತನ ಕೃತಿಯೇ ಅವನಿಗೂ ಸಮಾಜಕ್ಕೂ ಇರುವ ಸಂಬಂಧದ ಕೊಂಡಿ.

ಸಾಹಿತಿ ತನ್ನ ಕೃತಿಯ ಮೂಲಕ ಓದುಗನನ್ನು ನಗಿಸಬಲ್ಲ; ಆತ ಅಳುವಂತೆ ಮಾಡಬಲ್ಲ; ವಿಚಾರವನ್ನು ಕೆರಳಿಸಬಲ್ಲ; ಕಾರ್ಯೋನ್ಮುಖನಾಗಿಸಬಲ್ಲ. ಹಾಗೆಯೇ ಕರ್ತವ್ಯವಿಮುಖನಾಗಿಯೂ ಮಾಡಬಲ್ಲ. ಸಾಹಿತಿ ಸಾಮರ್ಥ್ಯವಂತ. ಅವನಿಂದ ಲಾಭವೂ ಆಗಬಲ್ಲದು; ಹಾನಿಯೂ ಆಗಬಲ್ಲುದು. ಆತ ಸದುದ್ದೇಶದಿಂದ, ಉದಾತ್ತಧ್ಯೇಯಗಳಿಂದ ಪ್ರೇರಿತನಾಗಿದ್ದರೆ, ಆ ಕೃತಿಯಿಂದ ಸಮಾಜಕ್ಕೆ (ಅಂದರೆ ಜನತೆಗೆ) ಪ್ರಯೋಜನವಾಗುವುದು, ಆತ ಧ್ಯೇಯರಹಿತನೂ ಕುವಿಚಾರಿಯೂ ಆಗಿದ್ದರೆ, ಆ ಕೃತಿಯಿಂದ ಅಷ್ಟೇ ಹಾನಿಯಾಗುವುದು.

ಲಾಭವೋ ಹಾನಿಯೋ, ಇಷ್ಟು ಮಾತ್ರ ನಿಜ. ಸಾಹಿತಿಗೂ ಸಮಾಜಕ್ಕೂ ಸಂಬಂಧ ವಿದೆ; ನಿಕಟ ಸಂಬಂಧವಿದೆ. ಅಷ್ಟೇ ಅಲ್ಲ, ಸಾಹಿತಿ ಸಮಾಜಕ್ಕೆ ಜವಾಬ್ದಾರನಾಗಿದ್ದಾನೆ. ಅವನ ಮೇಲೆ ದೊಡ್ಡ ಜವಾಬ್ದಾರಿಯಿದೆ.

ಹಕ್ಕು ಮತ್ತು ಬಾಧ್ಯತೆ

ಹಕ್ಕು ಇರುವಲ್ಲಿ ಬಾಧ್ಯತೆಯೂ ಉಂಟು. ಸ್ವತಂತ್ರವಾಗಿ ಕೃತಿರಚಿಸುವುದು ಸಾಹಿತಿಯ ಹಕ್ಕು. ಅದೇ ಹೊತ್ತಿಗೆ, ಆ ಕೃತಿಯಿಂದ ಜನತೆಗೆ ಪ್ರಯೋಜನವಾಗುವಂತೆ ನೋಡುವ ವಿಷಯದಲ್ಲಿ ಆತ ಬಾಧ್ಯನು.

ಹಕ್ಕನ್ನು ಚಲಾಯಿಸಲೇಬೇಕು; ಹಾಗೆಯೇ ಬಾಧ್ಯತೆಯನ್ನು ಮರೆಯಲೇಬಾರದು.

"ಸಾಹಿತ್ಯ ಆಗಲಿ, ವಿಜ್ಞಾನ ಆಗಲಿ, ಯಾರು ಯಾವ ದಾರೀನೇ ಹಿಡೀಲಿ, ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸ್ಬೇಕಾದ ಋಣ ಸಮಾಜಸೇವೆ-ಅಂತ ಶಾಸ್ತ್ರ ಹೇಳುತ್ತೆ" ಎಂದಿದ್ದಾರೆ ಕೈಲಾಸಂ.

ಸಾಹಿತಿ ಈ ಋಣವನ್ನು ಸಮಾಜಕ್ಕೆ ಸಲ್ಲಿಸಬೇಕು. ಸಮಾಜವನ್ನು, ಜನತೆಯನ್ನು ಆತ ಮರೆತರೆ, ತಳವರಿಯದ ಜಾರುಗುಂಡಿಯಲ್ಲಿ ಆತ ಇಳಿದುಹೋಗುತ್ತಾನೆ. ತನ್ನ ಕರ್ತವ್ಯವನ್ನು ನೆನಪಿಟ್ಟು, ಸಾಧಕನಾದರೆ ಸಾಹಿತಿಯ ಜೀವನ ಸಾರ್ಥಕವಾಗುತ್ತದೆ. ಸಮಾಜಕ್ಕೆ ಅವನು ಸಲ್ಲಿಸಬೇಕಾದ ಋಣಸಂದಾಯವಾಗುತ್ತದೆ.

• ಮೊದಲು ಅಚ್ಚಾದದ್ದು 'ಜಯಭೇರಿ'ಯಲ್ಲಿ

೧೯೫೩

'ರೊಮ್ಯಾಂಟಿಕ್' ಕಾವ್ಯ; ನವ್ಯಕಾವ್ಯ; ಜನಕಾವ್ಯ.....

೧

ರಾಮಚಂದ್ರಶರ್ಮರ 'ಹೃದಯಗೀತ'

ಹದಗೆಡುತ್ತಿರುವ ನಮ್ಮ ಸಮಾಜಜೀವನದಲ್ಲಿ ಈಗ, ಅಲ್ಪಸಂತೋಷವನ್ನು ಉಂಟು ಮಾಡುವ ಕೀಳುಕಾಮನೆಗಳನ್ನು ತೃಪ್ತಿಪಡಿಸುವ ಒಂದು ಜಾತಿಯ ಸಾಹಿತ್ಯ ತಲೆ ಎತ್ತಿದೆ. ಅದನ್ನೆದುರಿಸಿ, ಬೇರೆ ಮಟ್ಟದ ಸಾಹಿತ್ಯವನ್ನು ಮುಂದಿಡುವುದು ಸಾಹಸದ ಕೆಲಸ. ಈ ಪರಿಸ್ಥಿತಿಯಲ್ಲಿ ಕಾವ್ಯಗಳಿಗೆ, ಕವನ ಸಂಕಲನಗಳಿಗೆ, ಪ್ರಕಾಶಕರು ಸಿಗುವುದು ದುರ್ಲಭ. ಪ್ರಕಟನಕಾರ್ಯವು ಒಳ್ಳೆಯ ವ್ಯಾಪಾರವಾಗುತ್ತಿರುವ ಈ ದಿನಗಳಲ್ಲಿ ಸಾಹಿತ್ಯ ಕ್ಷೇತ್ರದಲ್ಲೂ 'ವಶೀಲಿ' ತನ್ನ ರಾಜ್ಯ ನಡೆಸಿದೆ. ಅಂಥಾದ್ದರಲ್ಲೂ ಅಳುಕದೆ, 'ಹೃದಯಗೀತ'ವನ್ನು ನಾಡಿಗೆ ಕೊಟ್ಟಿರುವ ರಾಮಚಂದ್ರಶರ್ಮರೂ ಅವರ ಪ್ರಕಾಶಕಮಿತ್ರರೂ ಅಭಿನಂದನಾರ್ಹರೇ ಸರಿ.

ಇದೊಂದು ಕನ್ನಡ ಕವಿತೆಗಳ ಒಳ್ಳೆಯ ಸಂಕಲನ. ಸಂವೇದನಾಜೀವಿಯಾದ ಈ ಕಲಾವಿದ, ಅತೃಪ್ತಿಯ ಅನುಭವದಿಂದ ಶೋಧಕನಾಗುವುದನ್ನು ಇಲ್ಲಿ ಕಾಣುತ್ತೇವೆ. ಸತ್ಯವನ್ನೂ ಮೂಲವನ್ನೂ ಶೋಧಿಸಹೊರಟ ಈ ಕವಿ ಅನಿವಾರ್ಯವಾಗಿ ಪಕ್ಷಪಾತಿಯಾಗುತ್ತಾನೆ. ಈಗ ಆತನ ಲೇಖನಿ ಕರವಾಳ ವಾಗುತ್ತದೆ.

'ಆಗಸ್ಟ್ ಹದಿನೈದು', 'ಹಾಡಿನೊಳಗೊಂದು ಹಾಡು', 'ಎಂದಿಗೆ?' 'ನೆತ್ತರಿಗೆ ಬೆಲೆಯಿಲ್ಲ'—ಈ ಕವಿತೆಗಳು ಸ್ವಾತಂತ್ರ್ಯೋತ್ತರ ಭಾರತದ ಜನಜೀವನಕ್ಕೆ ಕನ್ನಡಿ ಹಿಡಿದಿವೆ. ಆ ಪ್ರತಿಬಿಂಬವನ್ನು ನೋಡುತ್ತ ಓದುವವನ ಮನಸ್ಸು ಕಳವಳಕ್ಕೆ ಗುರಿಯಾಗುತ್ತದೆ. ರಷ್ಯದ ಕ್ರಾಂತಿಕವಿ ಮಯಕೋವ್‌ಸ್ಕಿಯ ಮೂರು ಕವಿತೆಗಳೂ ಟರ್ಕಿಯ ಕ್ರಾಂತಿಕವಿ ನಾಜೀಮ್ ಹಿಕ್ಮತರ ಎರಡು ಕವಿತೆಗಳೂ ಇಲ್ಲಿ ಅನುವಾದಿಸಲ್ಪಟ್ಟಿದೆ. ಪೋಲೆಂಡಿನ ಕವಿಯೊಬ್ಬರ ಕೃತಿಯಿಂದ ಪ್ರೇರಿತವಾಗಿ 'ವಿಶ್ವಶಾಂತಿ' ಬಂದಿದೆ. ಹಿಟ್ಲರನ ಫ್ಯಾಸಿಸ್ಟ್ ಭಟರಿಂದ ಗಲ್ಲಿಗೇರಿಸಲ್ಪಟ್ಟ

ಜೂಲಿಯಸ್ ಫೂಚಿಕ್, ಅಮೆರಿಕದ ಫ್ಯಾಸಿಸ್ಟರಿಂದ ಈಗ ಹಿಂಸೆಗೆ ಗುರಿಯಾಗುತ್ತಿರುವ ಹವಾರ್ಡ್ ಫಾಸ್ಟ್—ಇವರಿಬ್ಬರನ್ನು ಕುರಿತು ಬರೆದ ಎರಡು ಕವನಗಳಿವೆ. ಜಾರ್ಜಿಯದ ಒಬ್ಬ ಕವಿ, ಷೆಲ್ಲಿ ಆಡೆನ್‌ರಿಂದ ಪ್ರೇರಿತವಾದ ಕವಿತೆಗಳಿವೆ.... ಈ ಎಲ್ಲ ಕವಿತೆಗಳನ್ನು, ಅವುಗಳ ಚಾರಿತ್ರಿಕ ಹಿನ್ನೆಲೆಯ ಪರಿಜ್ಞಾನವಿಲ್ಲದೆ ಪೂರ್ತಿಯಾಗಿ ತಿಳಿದುಕೊಳ್ಳುವುದು ಕಷ್ಟ. ಕನ್ನಡ ಓದುಗರಲ್ಲಿ ಬಹುಸಂಖ್ಯಾತರಿಗೆ ಈ ಕವಿತೆಗಳಲ್ಲಿ ಚಿತ್ರಿತವಾದ ಸನ್ನಿವೇಶಗಳ ಪರಿಚಯವೇ ಇಲ್ಲವೆಂದರೂ ತಪ್ಪಾಗದು.

ರಾಮಚಂದ್ರಶರ್ಮರ ಕವಿಹೃದಯದ ವಿಚಿತ್ರ ಅನುಭವಗಳ ಪರಿಚಯವನ್ನು ಒಳ್ಳೆಯ ಒಂದು ಕವಿತೆಯಾದ 'ಕ್ಷೋಭೆ'ಯಿಂದ ಪಡೆಯಬಹುದು.

ಹೀಗೆ ಹಲವು ಕವಿತೆಗಳಲ್ಲಿ ಜನಕಾವ್ಯದ ಬಳ್ಳಿಗಳು ವರ್ಣರಂಜಿತವಾಗಿ ಚಿಗುರಿರುವುದನ್ನು ಇಲ್ಲಿ ಕಾಣುತ್ತೇವೆ.

ಆದರೆ ಶರ್ಮರ ಮನಸ್ಸು ತೂಗುಯ್ಯಾಲೆಯಂತೆ ಇನ್ನೂ ತೂಗಾಡುತ್ತಿದೆಯೆನ್ನುವುದಕ್ಕೆ 'ಇಂದಿಲ್ಲವೇ ಆ ದೇವಮಾನವ' ಕವಿತೆಯ ಕೊನೆಯ ಸಾಲು ಮತ್ತು 'ನಿರಾಶೆಯ ಆಳದಿಂದ' ಎಂಬ ಕವಿತೆ—ಸಾಕ್ಷ್ಯಗಳಾಗಿವೆ. 'ಮಾಯೆ ಮಲಗಿತ್ತು', 'ಮುಗಿಲ ಮರೆಯ ಚಂದಿರ' ಕವಿತೆಗಳು, ಜನಸಮುದಾಯದಿಂದ ಈ ಕವಿ ಇನ್ನುಮುಂದೆ ಸದಾಕಾಲವೂ ದೂರವೇ ಕುಳಿತರೆ ಆಗಬಹುದಾದ ನಷ್ಟವನ್ನು ತೋರಿಸುತ್ತವೆ. ಇಂಥ ಧೀಮಂತ ಕವಿ, ವೈಯಕ್ತಿಕ ತೃಪ್ತಿಯಲ್ಲೇ ಸಮಾಧಾನಗೊಂಡು, ನಾಲ್ಕಾರು ಜನರಿಗಷ್ಟೇ ಮೀಸಲಾದ ಕವಿತೆಗಳನ್ನು ಬರೆಯುವಂತಾಗಬಾರದು.

ನವ್ಯಕಾವ್ಯದ ಹೆಸರಿನಲ್ಲಿ ಕನ್ನಡ ಕವಿತೆಯನ್ನು ಚಕ್ರಬಂಧಸ್ಪರ್ಧೆಯ ಮಟ್ಟಕ್ಕಿಳಿಸುವ ಒಂದು ಯತ್ನ ಈಗ ಆಗುತ್ತಿದೆ. ಬೆಳೆದುಬಂದ ಪರಂಪರೆಯನ್ನು ವಿಚಾರದ ದೃಷ್ಟಿಯಿಂದ ನೋಡಿ ಅರ್ಥಹೀನ ಸಂಪ್ರದಾಯಗಳಿಗೆ ಎಳ್ಳುನೀರು ಬಿಟ್ಟಿರುವ ಶರ್ಮರು, ಹೊಸತನದ ಸೆರಗು ಧರಿಸಿರುವ ನವ್ಯಕಾವ್ಯದತ್ತ ಆಕರ್ಷಿತರಾಗುವುದು ಸ್ವಾಭಾವಿಕ. ಆ ಆಕರ್ಷಣೆ ಕ್ಷಣಿಕವಾಗಿ, ಜನಪದ ಜೀವನದಿಂದ, ಸಾಹಿತ್ಯದಿಂದ ಸ್ಫೂರ್ತಿ ಪಡೆಯುತ್ತ, ಶರ್ಮರು ಸಂದೇಹ ಶಂಕೆಗಳಿಲ್ಲದ ಪ್ರಗತಿಯ ಭವ್ಯದಾರಿಯಲ್ಲೇ ನಡೆಯುವಂತಾಗಬೇಕು.

ಆರಂಭದ 'ಹೃದಯಗೀತ'ದಲ್ಲಿ ತಮ್ಮೊಳಗಿನ ಹೊಯ್ದಾಟಗಳನ್ನು ಶರ್ಮರು ಚಿತ್ರಿಸಿದ್ದಾರೆ. ಇನ್ನೊಮ್ಮೆ ಹೃದಯಗೀತವನ್ನು ಬರೆದಾಗ ಹೊಯ್ದಾಟಗಳು ನಿಂತು, ತಾವು ಕಂಡ ರಾಜವೀಧಿಯ ಬಗೆಗೆ ಅವರು ಹಾಡುವರೆಂದು ನಿರೀಕ್ಷಿಸೋಣವೇ ?

ಪುಸ್ತಕ ಸೊಗಸಾಗಿದೆ. ಹೊದಿಕೆಯ ಮೇಲೆ ಕಲಾವಿದ ಆರ್.ಎಸ್.ಎನ್. ಬರೆದಿರುವ ಕಟುವಾದ ಒಂದು ಚಿತ್ರವಿದೆ. ಅದು ಸ್ವಾತಂತ್ರ್ಯೋತ್ತರ ಭಾರತದ ಚಿತ್ರ.

ಈ ಸಂಗ್ರಹವಿಲ್ಲದ ಪುಸ್ತಕ ಭಂಡಾರವು 'ಬಿಕೋ' ಎನ್ನುವುದರಲ್ಲಿ ಸಂಶಯವಿಲ್ಲ.

೨

'ಹೃದಯಗೀತ' ದ ಹಿನ್ನುಡಿ

ಕನ್ನಡದಲ್ಲಿ ಮುನ್ನುಡಿ-ಹಿನ್ನುಡಿಗಳ ಹವ್ಯಾಸ ಹೊಸದಲ್ಲ. ನುರಿತ ಲೇಖಕರು, ಮುನ್ನುಡಿಯ ರೂಪದಲ್ಲಿ ಸ್ನೇಹಿತರಿಂದ ಸವಿವಚನಗಳನ್ನು ಬರೆಸುವುದು; ಹೊಸ ಲೇಖಕರ ಕೃತಿಗಳಿಗೆ 'ಹಳಬ'ರು ಪರಿಚಯದ ರೂಪವಾಗಿ ಎರಡು ಮಾತುಗಳ ಮುನ್ನುಡಿ ಬರೆಯುವುದು—ಬಹಳ ದಿನಗಳಿಂದ ನಡೆದುಬಂದಿರುವ ಪದ್ಧತಿ. ಆದರೆ ಇತ್ತೀಚೆಗೆ, ಪುಸ್ತಕದ ತಿರುಳಿಗೆ ಕನ್ನಡಿ ಹಿಡಿಯುವ ಕೆಲಸವನ್ನು ಮುನ್ನುಡಿಗಳು ಮಾಡುತ್ತವೆ. ಕೆಲವು ಸಾಹಿತಿಗಳು ತಮ್ಮ ಕೃತಿಗಳಿಗೆ ತಾವೇ ಮುನ್ನುಡಿ ಬರೆದು, ತಮ್ಮ ಪ್ರತಿಪಾದನೆಗಳನ್ನು ಮುಂದಿಡುತ್ತಾರೆ. ಹಿನ್ನುಡಿಗಳೂ ಅಂಥದೇ ಕೆಲಸ ಮಾಡುತ್ತವೆ. ಹೀಗಾಗಿ, ಪುಸ್ತಕದ ತಿರುಳನ್ನು ತಿಳಿಯಲು ಮುನ್ನುಡಿ ಹಿನ್ನುಡಿಗಳು ಸಹಾಯಕವಾಗುತ್ತವೆ. ಇಂಥ ಪರಿಸ್ಥಿತಿಯಲ್ಲಿ ಪುಸ್ತಕಗಳನ್ನು ವಿಮರ್ಶೆ ಮಾಡುವಾಗ, ಕೃತಿಗೆ ಕೊಡುವಷ್ಟೇ ಮಹತ್ವವನ್ನು ಮುನ್ನುಡಿ-ಹಿನ್ನುಡಿಗಳಿಗೂ ಕೊಡಲೇಬೇಕು.

ರಾಮಚಂದ್ರಶರ್ಮರ 'ಹೃದಯಗೀತ'ಕ್ಕೆ ಹಿನ್ನುಡಿಯ ಭಾಗವೊಂದಿದೆ. ಅದರಲ್ಲಿ ಕನ್ನಡದ ಇಬ್ಬರು ಪ್ರಖ್ಯಾತ ಕವಿಗಳಾದ ಗೋಪಾಲಕೃಷ್ಣ ಅಡಿಗ ಮತ್ತು ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರು 'ಹೃದಯಗೀತ'ದ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ನಿಮಿತ್ತದಿಂದ ಎರಡು ಲೇಖನಗಳನ್ನು ಬರೆದಿದ್ದಾರೆ.

ನವ್ಯಕಾವ್ಯದ ರೂಪುರೇಖೆ

ಅಡಿಗರ ಅಭಿಪ್ರಾಯದಲ್ಲಿ, "ಒಂದು ಕಡೆ ಅವನು (ಉತ್ತಮ ಕವಿ) ಸಂಪ್ರದಾಯ ಶೀಲರ ಆಗ್ರಹಕ್ಕೆ ತುತ್ತಾಗಬೇಕಾದರೆ ಇನ್ನೊಂದು ಕಡೆ ರಾಜಕೀಯ ವಿಮರ್ಶಕರ ಉಗ್ರಪ್ರಚಾರವನ್ನು ಎದುರಿಸಬೇಕಾಗುತ್ತದೆ."

ಜನಸಾಮಾನ್ಯರಿಗೆ ಮಾತ್ರವಲ್ಲ, ವಿದ್ಯಾವಂತರಿಗೂ ಅರ್ಥವಾಗದ ರೀತಿಯಲ್ಲಿ, ಕವಿತೆ ಬರೆಯುವ ಚಟವೊಂದು 'ನವ್ಯಕಾವ್ಯ'ದ ಹೆಸರಲ್ಲಿ ಹುಟ್ಟಿಕೊಂಡಿದೆ. ಈ ಹೊಸ ವಾದದಿಂದ ತಮ್ಮ ಸ್ಥಾನಕ್ಕೆ ಸಂಚಕಾರ ಒದಗುತ್ತದೆಂದು, ಕೆಲವು 'ಹಿರಿಯ' ಕವಿಗಳು ನವ್ಯಕಾವ್ಯವನ್ನು ಖಂಡಿಸಿದ್ದಾರೆ; ಆದರೆ ಪ್ರಗತಿಶೀಲರು, "ಈ ನವ್ಯಕಾವ್ಯದ ಹಿನ್ನೆಲೆಯಲ್ಲಿ ಪಲಾಯನವಾದವಿದೆ; ಪ್ರತಿಗಾಮಿಯಾದ ತತ್ವಜ್ಞಾನವಿದೆ" ಎನ್ನುವ ಕಾರಣದಿಂದ ನವ್ಯಕಾವ್ಯವನ್ನು ಟೀಕಿಸಿದ್ದಾರೆ. "ರಾಜಕೀಯ ವಿಮರ್ಶಕರ ಉಗ್ರ

ಪ್ರಚಾರ"ವೆಂದು ಅಡಿಗರು ಕರೆದಿರುವುದು ಇದನ್ನೇ !

"ಕೃತಿ ಸಾರ್ಥಕವಾಗಬೇಕಾದರೆ ಕವಿಯ ಅನುಭವಶಕ್ತಿ ಸದಾ ಜಾಗೃತವಾಗಿರುವುದರ ಜೊತೆಗೆ ಯುಗಧರ್ಮದೊಡನೆ ಬೆರೆಯುವ ಬಲವೂ ಬೆಳೆಯಬೇಕಾಗುತ್ತದೆ" ಎನ್ನುತ್ತಾರೆ ಅಡಿಗರು. ಆ ಯುಗಧರ್ಮ ಯಾವುದು ? ಅಧಃಪತನದ ಹಾದಿಯಲ್ಲಿ ಆಳಕ್ಕೆ ಇಳಿಯುವುದು ಯುಗಧರ್ಮವೆ ? ಅಥವಾ ಹೊಸ ಸಮಾಜವ್ಯವಸ್ಥೆಯ ನಿರ್ಮಾಣಕ್ಕಾಗಿ ಸುಲಿಗೆದಾರ ಶಕ್ತಿಗಳೊಡನೆ ಹೋರಾಡುವುದು ಯುಗಧರ್ಮವೆ? ಇಲ್ಲವೆ ಬಲ್ಲವರು ಕೈಕಟ್ಟಿದ ಪ್ರೇಕ್ಷಕರಾಗಿ ನಿಲ್ಲುವುದೇ ಯುಗಧರ್ಮವೇ ?

ಅಡಿಗರು, ತಿರುಳನ್ನು ಬಲಿಕೊಟ್ಟು ಸ್ವರೂಪ-ಶೈಲಿಯನ್ನು ಎತ್ತಿಹಿಡಿಯುವುದು ಆಶ್ಚರ್ಯಕರವಾಗಿದೆ. ಹಿಂದೆ ಅಡಿಗರು ಬರೆದ 'ಕಟ್ಟುವೆವು ನಾವು' ಕವಿತೆ, ಕಾರ್ಯೋನ್ಮುಖರಾಗಿರೆಂದು ಯುವಜನಕ್ಕೆ ಕವಿ ಕೊಟ್ಟ ಕರೆಯಾಗಿತ್ತು. ಈಗ ಅಡಿಗರ ದೃಷ್ಟಿಯಲ್ಲಿ ಕವಿ ಅಂಥ ಕೆಲಸವನ್ನು ಮಾಡಬೇಕಾದುದಿಲ್ಲ. ಕವಿ ಬರೆದುದನ್ನು ಸಹಸ್ರ ಕಂಠಗಳು ಹಾಡಿದಾಗ ಮಾತ್ರ ಅದು ಜನಜೀವನದಲ್ಲಿ ಹೊಸ ಚೇತನವನ್ನು ಉಂಟುಮಾಡುತ್ತದೆ.

"ಈಗ ಕವಿತೆಗಳನ್ನು ರಚಿಸುತ್ತಿರುವ ಯಾವ ಕವಿಯೂ ಪಾಶ್ಚಾತ್ಯಕವಿಗಳ, ಮುಖ್ಯವಾಗಿ ಇಂಗ್ಲಿಷ್ ಕವಿಗಳ, ಕಾವ್ಯಮಾರ್ಗದ ಪ್ರಭಾವಕ್ಕೆ ಬಾಹಿರನಾಗಿ ಬರೆಯಲಾರ. ಜಗತ್ತಿನ ಕಾವ್ಯಪ್ರಗತಿಯನ್ನು ಅರಿಯದೆ ಬರೆಯುವವನ ಕವಿತೆ ಸತ್ವಹೀನವಾದ ಪ್ರೇತಕವಿತೆಯಾಗುತ್ತದೆ" ಎನ್ನುತ್ತಾರೆ ಅಡಿಗರು. ನಮ್ಮ ಜನಜೀವನದಿಂದ, ಜನಪದ ಸಾಹಿತ್ಯದಿಂದ ಶತಮಾನಗಳ ಸಾಹಿತ್ಯಕೃಷಿಯಿಂದ ಮುಖ ತಿರುಗಿಸಿದವರು ಮಾತ್ರ ಹೀಗೆ ಹೇಳಬಲ್ಲರು. ಜಗತ್ತಿನ ಕಾವ್ಯಪ್ರಗತಿಯನ್ನು ತಿಳಿಯುವುದು ಅಪೇಕ್ಷಣೀಯ. ಆದರೆ ಅದಕ್ಕೆ ಅವಶ್ಯವಾದ ಮೇಲುಮಟ್ಟದ ಆಂಗ್ಲವಿದ್ಯಾಭ್ಯಾಸವಿಲ್ಲದ ಕನ್ನಡಕವಿಗಳು ಬರೆಯುವುದೆಲ್ಲ, "ಸತ್ವಹೀನವಾದ ಪ್ರೇತಕವಿತೆಯಾಗುತ್ತದೆ" ಎಂದು ಹೇಳುವುದು ಸರಿಯಲ್ಲ.

"ಸಾಹಿತಿಯನ್ನು ತಮ್ಮ ವಾದಸಿದ್ಧಾಂತಗಳಿಗೆ ತೊತ್ತಾಗಿಸಿಕೊಳ್ಳಲು ದುಡಿಯುತ್ತಿರುವ ರಾಜಕೀಯ ಪಕ್ಷಗಳೂ ಪ್ರಚಾರಕರೂ ಬಹಳ ಮಂದಿ ಇದ್ದಾರೆ. ತರುಣ ಕವಿಗಳನ್ನು ಉಬ್ಬಿಸಿ ಹೊಂಡಕ್ಕೆ ತಳ್ಳುವಂಥ ರಾಜಕೀಯ ಯಂತ್ರಗಳೂ ಅಲ್ಲಲ್ಲಿ ಇವೆ" ಎನ್ನುತ್ತಾರೆ ಈ ಕವಿ. ಇದು ನಿಜವೆಂದಾದರೆ ಅಂಥ ಯಂತ್ರಗಳಿಗೆ ಬಹಿಷ್ಕಾರ ಹಾಕಲೇಬೇಕು! ಆದರೆ ಕವಿ ಯಾವುದೋ ಭ್ರಮೆಗೊಳಗಾಗಿ ಹೀಗೆ ಬರೆದಿರುವಂತೆ ತೋರುತ್ತಿದೆ.

"ಆನಂದಕ್ಕಿಂತ ಹೆಚ್ಚಾಗಿ ಸತ್ಯದ ಅನ್ವೇಷಣವೇ, ಅದರ ಆವಿಷ್ಕಾರವೇ ನವ್ಯಕವಿತೆಯ ಗುರಿ. ಪಕ್ಷಾತೀತವಾಗುವ ಮನಸ್ಸು ಅಂಥ ಸತ್ಯವನ್ನು ಹುಡುಕಲಾರದು;

ಹುಡುಕಿ ಕೃತಕೃತ್ಯವಾಗಲಾರದು" ಇದು ಅಡಿಗರ ಖಂಡಿತ ಅಭಿಪ್ರಾಯ. ಕವಿ ಯಾವುದೇ 'ರಾಜಕೀಯ ಪಕ್ಷ'ವನ್ನೂ ಸೇರದೆ ಇರಬಹುದು. ಆದರೆ ಆತ ಅನ್ವೇಷಣೆ ಮಾಡುವ ಸತ್ಯದ-ನ್ಯಾಯದ-ಪಕ್ಷವೊಂದಿದೆ. ಕವಿ ಅದನ್ನು ಅನಿವಾರ್ಯವಾಗಿ ಕಾಣುತ್ತಾನೆ. ಆಗ ಸತ್ಯದ-ನ್ಯಾಯದ ಪರವಾಗಿ ಅಸತ್ಯವನ್ನೂ ಅನ್ಯಾಯವನ್ನೂ ಇದಿರಿಸಿ ಆತನ ಕವಿತಾವಾಣಿ ಹರಿಯಲೇಬೇಕಾಗುತ್ತದೆ. ಆಗ ಆತ, 'ಪಕ್ಷಾತೀತ'ನಾಗುವುದಿಲ್ಲ, 'ಪಕ್ಷಪಾತಿ'ಯಾಗುತ್ತಾನೆ.

ಜನಕಾವ್ಯದ ದುಂದುಬಿ

ಕನ್ನಡದ ಇನ್ನೊಬ್ಬ ಪ್ರಮುಖ ಯುವಕ ಕವಿಯಾದ ಎಸ್.ಆರ್. ಎಕ್ಕುಂಡಿಯವರ ಪ್ರಕಾರ—

"ಇಂಗ್ಲಿಷ್ ಶಿಕ್ಷಣದ ಮೂಲಕ ಕನ್ನಡದಲ್ಲಿ ಸಾಹಿತ್ಯದ ಹಲವು ಹೊಸ ಪ್ರಯೋಗಗಳು ಆರಂಭವಾದ ಮಾತು ಬಹುಶಃ ಎಲ್ಲರಿಗೂ ಗೊತ್ತು... ಮಾತಿನ ರೀತಿ ಬದಲಾದರೂ ಆಡಿದ ಮಾತಿನ ಅರ್ಥ ಹೊಸದೇನಲ್ಲ.... ವಸ್ತುಸ್ಥಿತಿಯನ್ನು ಮರೆತೋ, ಕಡೆಗಣಿಸಿಯೋ, ಸಹಿಸಲಾರದೆಯೋ, ಆದರ್ಶದ ನೂರು ಗೋಪುರಗಳನ್ನು ಇಂಥ ಕಾವ್ಯದಲ್ಲಿ ನಾವು ಕಾಣುತ್ತೇವೆ."

"ಕಾವ್ಯವಾಗಲಿ ಸಾಹಿತ್ಯವಾಗಲಿ ಸಜೀವವಾಗಿರಬೇಕಾದರೆ ಅದರ ಬೇರುಗಳು ಜನತೆಯ ಬಾಳಿನಲ್ಲಿರಬೇಕು.... ಈ ಮಾತಿಗೆ ಇತಿಹಾಸ ಸಾಕ್ಷಿಯಾಗಿ ನಿಂತಿದೆ. ಎಂಥ ಅದ್ಭುತವಾದ ಶಬ್ದಸಂಪತ್ತಿದ್ದರೂ ಅಲಂಕಾರಗಳಿದ್ದರೂ ನಮ್ಮ 'ಮಹಾಕವಿ'ಗಳನ್ನು ನಾವು 'ಗುಡಿಸಲು'ಗಳಲ್ಲಿ ಕೇಳುತ್ತಿಲ್ಲ. ಒಪ್ಪಿದರೂ ಸರಿ ಒಪ್ಪದಿದ್ದರೂ ಸರಿ ಇಂದಿನದು ಜನಯುಗ. ಕವಿ ಜನವಾಣಿಯಾಗದಿದ್ದರೆ ಅವನು ಏನು ಬರೆದರೂ ಎಷ್ಟು ಬರೆದರೂ ಅಷ್ಟೇ..."

"ರಾಜಕೀಯವನ್ನು ಬಿಟ್ಟು ಬಾಳಿಲ್ಲ. ಬಾಳನ್ನು ಬಿಟ್ಟು ಕಾವ್ಯವಿಲ್ಲ. ಜೀವನದ ಅನೇಕ ಮುಖಗಳ ಸಮನ್ವಯ ಈ ಜನತೆಯ ಕಾವ್ಯದ ಬೆನ್ನೆಲುಬು."

"ಜನತೆಯ ಕಾವ್ಯ ಜನತೆಯ ಭಾಷೆಯಲ್ಲಿರಬೇಕು... ಬದುಕಿನ ದುಃಸ್ಥಿತಿಯನ್ನು ಕಂಡು...ಸಹಿಸಲಾರದ ಸಿಡಿದೆದ್ದ ಧೀರರಿದ್ದಾರೆ. ಜನತೆಯ ಕಾವ್ಯ ಇಂಥ ಧೀರಕಾವ್ಯ."

"ಕಾವ್ಯವನ್ನು ವಸ್ತುಸ್ಥಿತಿಯ ಕಲಾತ್ಮಕ ನಿರೂಪಣೆಯೆಂದು ನಾವು ಒಪ್ಪಿಕೊಂಡರೆ ಕಾವ್ಯದ ಸತ್ವಯುಕ್ತವಾಣಿ ಬದುಕಿನ ನೆಮ್ಮದಿಗೆ ಧಾರೆಯೆರೆಯಬೇಕು. ಇಂಥ ವಾಣಿ ಭಾರ್ಗವನ ಗಂಡುಗೊಡಲಿ. ಇದು ಹೊಲ್ಲದ್ದನ್ನು ಸವರುತ್ತದೆ; ಹೊಸ ಸೃಷ್ಟಿಗೆ ನೆಲೆ ಮಾಡಿಕೊಡುತ್ತದೆ."

—ಇವಿಷ್ಟು ಸೂಕ್ಷ್ಮವಾಗಿ ಎಕ್ಕುಂಡಿಯವರ ಅಭಿಪ್ರಾಯಗಳು. ಅಡಿಗರ ದೃಷ್ಟಿಕೋನಕ್ಕೆ ತೀರ ವ್ಯತಿರಿಕ್ತವಾದುದೊಂದು ದೃಷ್ಟಿಕೋನವನ್ನು ಇಲ್ಲಿ ಕಾಣುತ್ತೇವೆ.

ಕಾವ್ಯಪ್ರಗತಿ

ರಾಮಚಂದ್ರಶರ್ಮರ ಕೃತಿಗಳಲ್ಲಿ ಅಲ್ಲಿ ಇಲ್ಲಿ ನವ್ಯಕಾವ್ಯದ ಪ್ರಭಾವವನ್ನು ಅಡಿಗರು ಕಂಡಿದ್ದರೆ, ಜನಕಾವ್ಯದ ಎಳೆಯನ್ನು ಎಕ್ಕುಂಡಿಯವರು ಕಂಡಿದ್ದಾರೆ! ಸ್ವತಃ ರಾಮಚಂದ್ರಶರ್ಮರ ಅಭಿಪ್ರಾಯವೇನು? "ನವ್ಯಕಾವ್ಯದ ಬಗೆಗೆ ನಾನಾಡಬಹುದಾಗಿದ್ದುದನ್ನೆಲ್ಲ ನನ್ನ ಗೆಳೆಯರು ಶ್ರೀ ಗೋಪಾಲಕೃಷ್ಣ ಅಡಿಗ ಮತ್ತು ಶ್ರೀ ಎಕ್ಕುಂಡಿಯವರೇ ಆಡಿದ್ದಾರೆ" ಎಂಬ ಮಾತು ಶರ್ಮರ ಮುನ್ನುಡಿಯಲ್ಲಿದೆ. ವಿನಯಶೀಲರು ಹಾಗೆ ಹೇಳುವುದು ಸ್ವಾಭಾವಿಕ. ಆದರೆ ವಾಸ್ತವವಾಗಿ ಅಡಿಗ-ಎಕ್ಕುಂಡಿಯವರ ಲೇಖನಗಳಲ್ಲಿ ಕಂಡುಬರುವುದೇನು? ಕನ್ನಡ ಕಾವ್ಯ ಎತ್ತಸಾಗಿದೆ? ಶರ್ಮರೂ ನಮ್ಮೆಲ್ಲ ಕವಿಗಳೂ ಆ ಕುರಿತು ಆಳವಾಗಿ ಯೋಚಿಸುವುದು ಅವಶ್ಯ.

● 'ಚಿತ್ರಗುಪ್ತ'ದಿಂದ

೧೯೫೩

ಪ್ರಗತಿಶೀಲ ಸಾಹಿತ್ಯ: ಗೊತ್ತು, ಗುರಿ

ಹೊಸದಾಗಿ ತಲೆ ಎತ್ತುವ ಪ್ರತಿಯೊಂದು ವಾದವೂ ವಾತಾವರಣವನ್ನು ಕಲಕುವುದು ಅನುಭವಸಿದ್ಧವಾದ ಸಂಗತಿ. ತತ್ವಜ್ಞಾನಗಳ ತಾಕಲಾಟವೇ ಮಾನವನ ಬೆಳವಣಿಗೆಗೆ ಕೈಗನ್ನಡಿಯಾಗಿದೆ. ಪ್ರತಿಯೊಂದು ವಾದದ ಉದಯದೊಡನೆ ಉಂಟಾಗುವ ವಾಗ್ವಾದ ಕೋಲಾಹಲವೆಲ್ಲ ಅನಿವಾರ್ಯವಾದ ಸಂಭವಗಳೇ ಸರಿ.

ಹತ್ತು ವರ್ಷಗಳ ಹಿಂದೆ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ವಾದ ಮಂಡಿಸಲ್ಪಟ್ಟಾಗ ಹಾಗೆಯೇ ಆಯಿತು. ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆ, ಕನ್ನಡದ ಪುನರುದಯ ಕಾಲದಲ್ಲಿ, ಆಧುನಿಕ ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳು ಕಾಣಿಸಿಕೊಂಡಾಗ, ಹಳೆಯ ತಲೆಮಾರಿನ ಘನಪಂಡಿತರು ತೋರಿಸಿದ ಪ್ರತಿಭಟನೆಯನ್ನು ನಾಚಿಸುವಹಾಗೆ, ಪ್ರಗತಿಶೀಲಸಾಹಿತ್ಯವಾದವನ್ನು ಹಲವರು ಇದಿರಿಸಿದರು. ಆ ವಾದದ ಮಹತ್ವವನ್ನು ಆಗ ಯಾರೂ ಕಡೆಗಣಿಸಿದಹಾಗೆ ತೋರಲಿಲ್ಲ. ಪರಿಷತ್ತಿನ ಪ್ರಮುಖರಿಂದ ಮೊದಲಾಗಿ ಪ್ರತಿಯೊಬ್ಬ ಸಾಹಿತಿಯೂ ಆಗಿನ ಚರ್ಚೆಗಳಲ್ಲಿ ಭಾಗವಹಿಸಿದ್ದುಂಟು. ರಬಕವಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣ ಮತ್ತು ಸಾಹಿತ್ಯಗೋಷ್ಠಿಯ ಅಧ್ಯಕ್ಷಭಾಷಣ, ಪ್ರಗತಿಶೀಲತೆಯ ವಾದಕ್ಕೆ ಗೌರವಕೊಟ್ಟು ಕನ್ನಡ ಸಾಹಿತ್ಯದಲ್ಲಿ ಅದಕ್ಕೊಂದು ಸ್ಥಾನ ಕಲ್ಪಿಸಿದುವು.

ನಿಸರ್ಗ ಮತ್ತು ಪ್ರಗತಿ

ಸೃಷ್ಟಿಯಿಂದ ಈ ತನಕ ಮಾನವ ಪ್ರಗತಿ ಹೊಂದುತ್ತಲೇ ಇದ್ದಾನೆ. ಅವನ ಸಂಸ್ಕಾರ-ನಾಗರಿಕತೆ ಕಾಲಕಾಲಕ್ಕೂ ಬದಲಾಗುತ್ತ ಬಂದಿವೆ.

ಪ್ರಪಂಚದ ನಾನಾ ಭಾಗಗಳ ಮಾನವರ ಸಂಸ್ಕೃತಿಯ ಏರಿಳಿತಗಳನ್ನು ಅವಲೋಕಿಸಿದರೆ, ಒಂದು ವಿಷಯ ಸ್ಪಷ್ಟವಾಗುವುದು: ಎಲ್ಲೆಡೆಗಳಲ್ಲೂ ಏಕಪ್ರಕಾರವಾದ ಸಂಸ್ಕೃತಿ ನಮಗೆ ಕಾಣಲು ದೊರೆಯುವುದಿಲ್ಲ. ಒಂದೊಂದು ದೇಶದ ಸಂಸ್ಕೃತಿಯೂ ಅಲ್ಲಲ್ಲಿನ ಸಮಾಜ ವ್ಯವಸ್ಥೆಯ ಪ್ರತಿಬಿಂಬವಾಗಿದೆ. ಪ್ರತಿಯೊಂದು ದೇಶದ ಸಾಹಿತ್ಯವೂ ಅಲ್ಲಲ್ಲಿನ ಪ್ರಮುಖ ಮಾನವ ಪ್ರವೃತ್ತಿಗಳ ಕೈಗನ್ನಡಿಯಾಗಿದೆ.

ಸಾಹಿತ್ಯವು ಪ್ರಗತಿಹೊಂದುತ್ತ ಬಂದಿದೆ ಎಂಬುದು ನಿಜ. ಆದರೆ ಅದು ಏಕಪ್ರಕಾರವಾದ ಪ್ರಗತಿಯಲ್ಲ. ಏಳ್ಗೆಯ ಶಕ್ತಿಗಳನ್ನು ಅದುಮಿ ಹಿಡಿಯುವ ಸಮಾಜವ್ಯವಸ್ಥೆಯಲ್ಲಿ, ಪಾಳೆಯಗಾರ ಕಲಹಗಳಿಂದ ಜನಜೀವನ ಬೆಂದು ಬೆಂಡಾದಾಗ, ಸಾಹಿತ್ಯದ—ಲಲಿತ ಕಲೆಗಳ—ಪ್ರಗತಿ ಹೊಂದಲಿಲ್ಲ. ಅಧರ್ಮ ತಾಂಡವವಾಡಿದಾಗ, ಅನ್ಯಾಯಕ್ಕೆ ಗುರಿಯಾದ ಜನತೆಯ ವಾಣಿಯಾಗಿ, ಪ್ರತಿಭಟನೆಯ ಸಾಹಿತ್ಯ ಹುಟ್ಟಿತು. ಅಂಥ ಸಾಹಿತ್ಯ ಪ್ರಗತಿಯ ಹಾದಿ ತೋರಿತು.

ಹೀಗೆ ಕೆಲವೊಮ್ಮೆ ಕುಂಠಿತವಾಗಿ, ಮತ್ತೆ ಕೆಲವೊಮ್ಮೆ ದೀರ್ಘಕಾಲಾವಧಿಯ ಸ್ಥಗಿತ ಸ್ಥಿತಿಯ ಬಳಿಕ, ಸಾಹಿತ್ಯ ತನ್ನದೇ ಹಾದಿ ಹಿಡಿದು ಪ್ರಗತಿಹೊಂದುತ್ತ ಬಂದುದನ್ನು ಕಾಣುತ್ತೇವೆ. ಹಾಗೆಯೇ ಸಮಾಜಶಕ್ತಿಗಳು ಜನತೆಗೆ ಅಪಕಾರ ಬಯಸಲು ಅಪೇಕ್ಷಿಸಿದಾಗ, ಜನತೆಯ ಪ್ರಗತಿಗೆ ಆಘಾತವಾದುದನ್ನೂ ಕಾಣುತ್ತೇವೆ.

ಹೀಗಿರುತ್ತ, ಪ್ರಗತಿಹೊಂದಲೇಬೇಕಾದ್ದು ನಿಸರ್ಗನಿಯಮ; ನಾವು ಮಾಡಬೇಕಾದ್ದು ಏನೂ ಇಲ್ಲ; ಎಂದು ಹೇಳುವುದು ತಪ್ಪಾದೀತು. ಇದು, ಪೂರ್ವಜನ್ಮದ ಫಲವೆಂದೋ, ಬ್ರಹ್ಮ ಬರೆದ ಬರೆಹವೆಂದೋ ಮಾನವ ಯತ್ನವನ್ನು ಮಾಡದೇ ಇರುವ ಮನೋವೃತ್ತಿಯ ಇನ್ನೊಂದು ರೂಪ.

ದಾಸರಾಷ್ಟ್ರಗಳು ಸ್ವಾತಂತ್ರ್ಯವನ್ನು ಸಾಧಿಸಿಕೊಂಡ ಶತಮಾನ ಇದು. ಬಹುಸಂಖ್ಯೆಯಲ್ಲಿ ಮಾನವರು ತಮ್ಮ ಆತ್ಮಶಕ್ತಿಯ ಸ್ವರೂಪದರ್ಶನವನ್ನು ಮಾಡಿಕೊಂಡ ಯುಗ. ಸಮಾಜದೊಂದು ಘಟಕ ತಾನು ಎಂದು ನಂಬಿರುವ ವಿಚಾರಿಯಾದ ನಾಗರಿಕ, ತನ್ನ ಹಕ್ಕುಬಾಧ್ಯತೆಗಳನ್ನು ಈ ದಿನ ತಿಳಿದುಕೊಂಡಿದ್ದಾನೆ. ಸಮಾಜದ ಹಿತಕ್ಕಾಗಿ ಮಾನವಕೋಟಿಯ ಕಲ್ಯಾಣಕ್ಕಾಗಿ ತಾನು ಮಾಡಬೇಕಾದ ಕರ್ತವ್ಯಗಳು ಏನೆಂಬುದನ್ನು ಅವನು ಮನಗಂಡಿದ್ದಾನೆ. ಕತ್ತಲಿನಿಂದ ಬೆಳಕಿಗೆ, ದಾಸ್ಯದಿಂದ ಸ್ವಾತಂತ್ರ್ಯಕ್ಕೆ, ಅಶಾಂತಿ ಅಸಮಾಧಾನದಿಂದ ಸುಖಶಾಂತಿಗೆ, ಜನತೆ ಆದಷ್ಟು ಬೇಗನೆ ಮುಂದುವರಿಯಬೇಕೆಂಬ ಬೋಧೆ ತಿಳಿವಳಿಕೆಯನ್ನು ಈ ದಿನ ಸುಶಿಕ್ಷಿತರಾದ ಹೆಚ್ಚು ಜನರಲ್ಲಿ ನಾವು ಕಾಣಬಹುದು.

ಜನತೆಯ ಮುನ್ನಡೆಗೆ ಸಾಹಿತ್ಯ ಸಹಾಯಕವಾಗಬೇಕು ಎನ್ನುವುದು ಒಂದು ಒಳ್ಳೆಯ ಅಭಿಪ್ರಾಯ. ಬಹಳ ಜನರು ಇದನ್ನು ಒಪ್ಪುತ್ತಾರೆ.

ಅದನ್ನು ಒಪ್ಪುವವರು, ಇಂಥದೇ ರೀತಿಯಲ್ಲಿ ಸಾಹಿತ್ಯದ ಪ್ರಗತಿಯಾಗಲಿ, ಇಂಥದೇ ರೀತಿಯಲ್ಲಿ ಜನತೆಗೆ ಅದರಿಂದ ಪ್ರಯೋಜನವಾಗಲಿ, ಎಂದು ಆಶಿಸುತ್ತಾರೆ.

ಜನತೆಯ ಮುನ್ನಡೆಗೆ ಸಾಹಿತ್ಯ ಸಹಾಯಕವಾಗಬೇಕೆನ್ನುವುದು, ನಮ್ಮ ಸಾಹಿತ್ಯ ಪ್ರಗತಿಶೀಲವಾಗಬೇಕೆನ್ನುವುದು, ಅವರ ವಾದ.

ಇದು ನಿಸರ್ಗವೆಂಬಂತೆ ತನ್ನಿಂದ ತಾನಾಗಿ ಸ್ವೇಚ್ಛೆಯಾಗಿ ಹರಿಯುವ ಸಾಹಿತ್ಯಪ್ರವಾಹ, ಬರಡುಭೂಮಿಯಲ್ಲಿ ಹಸುರು ತುಂಬಿಸುವ, ಕೋಟಿ ಮನೆಗಳಿಗೆ ಸೊದರು ನೀಡುವ, ಪ್ರಭಾವಶಾಲಿ ಪ್ರವಾಹವಾಗಲೆಂಬುದು, ಪ್ರಗತಿಶೀಲರ ಹಾರೈಕೆ.

ಕಾಡಿನ ಬಿಲ್ಲು ಬೀದಿಗೆ

೧೯೪೩ರಲ್ಲಿ ಕನ್ನಡ ಸಾಹಿತ್ಯದಲ್ಲಿ ಈ ವಾದವನ್ನು ಒಪ್ಪಿಕೊಂಡವರು ಅದೇ ಹಾರೈಕೆಯನ್ನು ಮುಂದಿರಿಸಿದರು. ಆದರೆ ಆ ಹಾರೈಕೆ ಕೈಗೂಡುವಂತೆ ಅವರೆಲ್ಲರೂ ವರ್ತಿಸಲಿಲ್ಲ, ಪ್ರಗತಿಶೀಲ ಸಾಹಿತ್ಯದ ಗುರಿ-ಧ್ಯೇಯಗಳನ್ನು ಸ್ಪಷ್ಟವಾಗಿ ತಿಳಿಯಲಾರದೆ ಹೋದವರು, ತಮ್ಮ ಅಪಕ್ವ ವಿಚಾರಗಳೇ ಪ್ರಗತಿಶೀಲ ವಿಚಾರಗಳೆಂದರು. ನುಡಿ ಸರಿಯಾಗಿದ್ದಾಗ, ನಡೆ ಅದಕ್ಕೆ ಸರಿಹೋಗಲಿಲ್ಲ.

ಪರಿಣಾಮವೇನು ? ಗೊತ್ತುಗುರಿ ಇಲ್ಲದೆ ಸಾಗಿದ್ದ ಕನ್ನಡಸಾಹಿತ್ಯದ ಪ್ರವಾಹದ ಗತಿಯನ್ನು ಬದಲಾಯಿಸಲು ಆ ಆಂದೋಲನ ಸಮರ್ಥವಾಗಲಿಲ್ಲ. ಹಲವಾರು ಲೇಖಕರು—ಹೆಚ್ಚಾಗಿ ಯುವಕ ಲೇಖಕರು—ಆ ಚಳವಳಿಯ ಪ್ರಭಾವಕ್ಕೆ ಒಳಗಾದರೂ, ಪ್ರಗತಿಶೀಲ ಬರೆಹಗಾರರ ಸಂಘಟನೆ ಬೆಳೆಯಲಿಲ್ಲ.

ಆಗ ಪ್ರಗತಿಶೀಲ ಸಾಹಿತ್ಯ ಚಳವಳಿಯನ್ನು ಖಂಡಿಸಿದವರಲ್ಲಿ ನಾನಾ ರೀತಿಯವರಿದ್ದರು. ಹೊಸತು ಎಂಬ ಕಾರಣದಿಂದ ಮೂಗು ಮುರಿದವರು ಕೆಲವರು; ಗುರಿಧ್ಯೇಯಗಳನ್ನು ಅರ್ಥಮಾಡಿಕೊಂಡು, ಇವು 'ಅಪಾಯಕಾರಿ' ಎಂದು ನಂಬಿ, ಪೂರ್ಣ ಬೋಧೆಯಿಂದ ಪ್ರತಿಭಟಿಸಿದವರು ಕೆಲವರು; ತಮ್ಮ ಮೇಲಾದ ಅರ್ಥಹೀನ ಟೀಕೆಯಿಂದ ಕೆರಳಿ ಲೇಖನಿ ಹಿರಿದವರು ಉಳಿದ ಕೆಲವರು. ಅಸಹನೆಯ ಅಣಕದ ಮಾತುಗಳಿಂದ ಆಗ ಸಾಹಿತ್ಯಕ್ಷೇತ್ರ ಕಲುಷಿತವಾಯಿತು.

ಹೀಗಾದುದಕ್ಕೆ ತಕ್ಕಮಟ್ಟಿಗೆ ಪ್ರಗತಿಶೀಲರೂ ಕಾರಣರಾದರೆನ್ನುವುದು ತಪ್ಪಲ್ಲ. ಪ್ರಗತಿಶೀಲರೆಂದರೆ, ರಾಮಾಯಣ-ಮಹಾಭಾರತಗಳನ್ನು ಜರೆಯುವವರು, ಅಶ್ಲೀಲ ಸಾಹಿತ್ಯವನ್ನು ಸೃಷ್ಟಿಸುವವರು, ಕಮ್ಯೂನಿಸ್ಟ್ ಪಕ್ಷದ ಕಾರ್ಯಕ್ರಮಗಳನ್ನು ಪ್ರಚುರಗೊಳಿಸುವವರು—ಎಂದು ಆಗ ಕೇಳಿಬಂದ ಟೀಕೆಗಳೆಲ್ಲ ಸುಳ್ಳಾಗಿರಲಿಲ್ಲ. ಅಂಥ ಟೀಕೆಗೆ, ಪ್ರಗತಿಶೀಲರೆಂದು ಕರೆದುಕೊಂಡವರ ವರ್ತನೆಯೂ ಸ್ವಲ್ಪಮಟ್ಟಿಗೆ ಕಾರಣವಾಯಿತು.

ನಮ್ಮ ಪ್ರಗತಿಶೀಲರು ನಡೆಯಬೇಕಾಗಿದ್ದ ಭವ್ಯಹಾದಿ ವಿಶಾಲವಾಗಿತ್ತು ; ದೀರ್ಘವಾಗಿತ್ತು. ಆದರೆ ಪೂರ್ಣ ತಿಳಿವಳಿಕೆಯಿಲ್ಲದೆ ನಮ್ಮವರು ಕಾಡುಕಡಿಯುವ ಹೆಸರಲ್ಲಿ, ಕಾಡಿನ ಕಲ್ಲುಮುಳ್ಳನ್ನೆಲ್ಲ ಬೀದಿಗೆಳೆದು ರಂಪಮಾಡಿದರು.

ಹೀಗಿದ್ದರೂ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿ ಅಭಿಮಾನಾಸ್ಪದ ವಾದುದೇನನ್ನೂ ಸಾಧಿಸಿಲ್ಲವೆಂದು ಈಗ ಹೇಳುವುದು ಸರಿಯಲ್ಲ. ತಮಗೆ ತಿಳಿದೋ ತಿಳಿಯದೆಯೋ ನಮ್ಮ ಸಾಹಿತಿಗಳಲ್ಲಿ ಹಲವರು ಯುಗಧರ್ಮದ ಕರೆಗೆ ಓಗೊಟ್ಟಿದ್ದಾರೆ. ಸಾಹಿತ್ಯ ಜನತೆಯ ಆಸೆ-ನಿರಾಶೆಗಳನ್ನು ಆನಂದ ಅತೃಪ್ತಿಗಳನ್ನು ಕಾಮನಬಿಲ್ಲಿನ ಎಲ್ಲ ಬಣ್ಣಗಳಲ್ಲೂ ಪ್ರತಿಬಿಂಬಿಸಬೇಕು; ಹಾಗೆಯೇ ಸಾಹಿತ್ಯ, ಜನತೆಯನ್ನು ಮುಂದಕ್ಕೊಯ್ಯುವ ಪ್ರೇರಕಶಕ್ತಿಯಾಗಬೇಕು—ಎಂಬ ಅಭಿಪ್ರಾಯ ವನ್ನು ಒಟ್ಟಿನಲ್ಲಿ ಹಲವರು ಒಪ್ಪಿದ್ದಾರೆ. ತಾವು ಯಾರ ಪ್ರಭಾವಕ್ಕೂ ಒಳಗಾಗಿಲ್ಲ ವೆಂದು ಪ್ರಗತಿಯ ಮೋಡಿಯ ಮುಂದೆ ಅವರು ವಿಚಾರಮಗ್ನರಾಗಿದ್ದಾರೆ. ಹೊಸ ತಲೆಮಾರಿನ ಲೇಖಕರಲ್ಲಿ ಹೆಚ್ಚಿನವರು ಬೋಧಪೂರ್ಣವಾಗಿ ಬರೆಯುವ ಯೋಧ ಸಾಹಿತಿಗಳಾಗಿದ್ದಾರೆ. ಈ ಹತ್ತುವರ್ಷಗಳಲ್ಲಿ ಈ ಎಲ್ಲರಿಂದ ಸೃಷ್ಟಿಯಾಗಿರುವ ಸಾಹಿತ್ಯರಾಶಿಯನ್ನು ಅವಲೋಕಿಸಿದರೆ, ಯಾವ ಪ್ರಗತಿಪ್ರಿಯನಿಗೂ ಅಭಿಮಾನವೆನಿಸದೆ ಇರಲಾರದು.

ತಪ್ಪು ಕಲ್ಪನೆ-ಸ್ಪಷ್ಟೀಕರಣ

ಪ್ರಗತಿಶೀಲ ಸಾಹಿತ್ಯದ ಬಗ್ಗೆ ಸಾಮಾನ್ಯವಾಗಿ ಕಂಡುಬರುವ ಕೆಲವು ತಪ್ಪುಕಲ್ಪನೆಗಳಿವೆ. ಅವುಗಳ ಬಗ್ಗೆ ಸೂಕ್ಷ್ಮವಾಗಿ ಪರಾಮರ್ಶಿಸೋಣ.

"ಆರ್ಥಿಕ ಸಂಕಷ್ಟಗಳನ್ನು ಚಿತ್ರಿಸುವವರು ಮಾತ್ರ ಪ್ರಗತಿಶೀಲ"ರು, ಎಂಬ ಅಭಿಪ್ರಾಯ. ಆರ್ಥಿಕ ಬಿಕ್ಕಟ್ಟು, ಜೀವನ ವೆಚ್ಚದ ಏರಿಕೆ, ಹರತಾಳಗಳ ಬಗ್ಗೆಯಷ್ಟೆ ಬರೆದರೆ, ಅದು ವರದಿಯಾಗಬಹುದು, ಸಾಹಿತ್ಯವಾಗಲಾರದು. ಜೀವನದ ನಿರೀಕ್ಷಣೆ-ಅನುಭವಗಳನ್ನು ಕಲೆಯ ಮೂಸೆಯಲ್ಲಿ ಪುಟಕ್ಕಿಟ್ಟಾಗ ಮಾತ್ರ ಬರವಣಿಗೆಯು ಪುತ್ಥಳಿಯಾದ ಕಲಾಕೃತಿಯಾದೀತು, ಪ್ರಗತಿಶೀಲ ಸಾಹಿತ್ಯವಾದೀತು.

ಪ್ರಗತಿಶೀಲರು ಪುರಾತನ ಪರಂಪರೆಗಳನ್ನು ವಿರೋಧಿಸುವವರು ಎಂಬ ಇನ್ನೊಂದು ಅಭಿಪ್ರಾಯ, ಇದು ಕೂಡ ಸರಿಯಲ್ಲ. ರಾಮಾಯಣ ಮಹಾಭಾರತಗಳ ಭರ್ತ್ಸನೆ ಮಾಡುವುದು ಪ್ರಗತಿಶೀಲತೆಯಲ್ಲ. ಮಾನವೀಯತೆ, ಶಾಂತಿಪ್ರಿಯತೆ, ಸ್ನೇಹಭಾವನೆ, ಅನ್ಯಾಯಕ್ಕಿದಿರು ಪ್ರತಿಭಟನೆ—ಇವು ನಮ್ಮ ರಾಷ್ಟ್ರದ ಹಿರಿಯ ಪರಂಪರೆಗಳು, ಪ್ರಗತಿಶೀಲರು ಅವುಗಳನ್ನು ಎತ್ತಿಹಿಡಿಯುತ್ತಾರೆ. ಆದರೆ ಅವರು ಅಂಧಾಭಿಮಾನಿ ಗಳಲ್ಲ. ವಿಮರ್ಶಕ ದೃಷ್ಟಿಯಿಂದ ಹಳೆಯದೆಲ್ಲವನ್ನೂ ಅವರು ಜನೋಪಯೋಗದ ಒರೆಗಲ್ಲಿಗೆ ತೀಡಿ ನೋಡುತ್ತಾರೆ. ಹಳೆಯದರಲ್ಲಿ ನಿಷ್ಪ್ರಯೋಜಕವಾದುದನ್ನೆಲ್ಲ ಅವರು ಬದಿಗಿರಿಸುತ್ತಾರೆ.

"ವಿದೇಶೀ ಸಾಹಿತ್ಯದ ಅನುಕರಣೆ ಮಾಡುವವರು"—ಎನ್ನುವುದು ಇನ್ನೊಂದು ಬಿರುದು. ಅನುಕರಣೆಯ ಆರೋಪ ಸರಿಯಲ್ಲ. ಸಾಹಿತ್ಯವು ವಿದೇಶದ್ದಾದಮಾತ್ರಕ್ಕೆ—ಅಮೇರಿಕದ್ದಿರಲಿ, ರಷ್ಯದ್ದಿರಲಿ, ಇಂಗ್ಲೆಂಡಿನದ್ದಿರಲಿ, ಚೀನದ್ದಿರಲಿ—ಅದು ತ್ಯಾಜ್ಯವಲ್ಲ. ಪ್ರಪಂಚದ ಯಾವ ಮೂಲೆಯಿಂದ ಬಂದರೂ ಸರಿಯೇ, ಒಳ್ಳೆಯ ವಿಚಾರವನ್ನೂ ಸಾಹಿತ್ಯವನ್ನೂ ಪ್ರಗತಿಶೀಲರು ಗೌರವಿಸುತ್ತಾರೆ; ಆದರೆ ಅನುಕರಣೆ ಮಾಡುವುದಿಲ್ಲ. ನಮ್ಮ ದೇಶದ ಜನರಿಗೆ ಆ ಸಾಹಿತ್ಯದ ಪರಿಚಯ ಮಾಡಿಕೊಡುತ್ತಾರೆ, ಆದರೆ ಅದಕ್ಕೆ ಕನ್ನಡದ ಬಣ್ಣ ಬಳಿಯುವುದಿಲ್ಲ.

"ಪ್ರಗತಿಶೀಲರು ಅಶ್ಲೀಲ ಸಾಹಿತ್ಯವನ್ನು ಸೃಷ್ಟಿಸುವವರು" ಎನ್ನುವ ಅಪವಾದ. ಹೆಣ್ಣುಗಂಡಿನ ಸಂಬಂಧದ ಚಿತ್ರಣದಲ್ಲಿ ಕಾಮಕ್ಕಾಗಲೀ ಶೃಂಗಾರಕ್ಕಾಗಲೀ ಲೈಂಗಿಕ ಸಮಸ್ಯೆಗಳಿಗಾಗಲೀ ಸ್ಥಾನವೇ ಇಲ್ಲವೆಂದು ಪ್ರಗತಿಶೀಲರು ಹೇಳುವುದಿಲ್ಲ. ಆದರೆ ಹಳೆಯ ಸಾಹಿತ್ಯದಲ್ಲಿ ಅಲ್ಲಲ್ಲಿ ಸಿಗಬಹುದಾದ ಕಾಮಕೇಳಿಯ ಭಟ್ಟಂಗಿ ಸಾಹಿತ್ಯವು ಅವರಿಗೆ ಮಾದರಿಯಲ್ಲ. ಹಾಗೆಯೇ, ಒರಟು ನೈಸರ್ಗಿಕವಾದದ ಮಟ್ಟಕ್ಕಿಳಿದ ಕೆಲವು ಪಾಶ್ಚಾತ್ಯಸಾಹಿತ್ಯಕೃತಿಗಳೂ ಅವರಿಗೆ ಮೇಲ್ಪಂಗ್ತಿಯಲ್ಲ. ಹೆಣ್ಣಿಗೆ ನಮ್ಮ ಸಮಾಜದಲ್ಲಿ ಆಗಿರುವ ಅನ್ಯಾಯವನ್ನು ಅವರು ಚಿತ್ರಿಸುವರಾದರೂ ಕಾಮಪ್ರಚೋದನೆಯ ಉದ್ದೇಶದಿಂದ ಅವರು ಕೃತಿ ರಚಿಸುವುದಿಲ್ಲ.

"ಪ್ರಗತಿಶೀಲ ಸಾಹಿತಿಗಳೆಲ್ಲ ನಾಸ್ತಿಕರು ಅಥವಾ ಮಾರ್ಕ್ಸ್‌ವಾದಿಗಳು. ಮಾರ್ಕ್ಸ್‌ವಾದವು ಒಂದು ತತ್ವಜ್ಞಾನ-ಸಮಗ್ರ ಜೀವನವನ್ನು ನೋಡುವ ದೃಷ್ಟಿಕೋನ, ಬುದ್ಧಿಜೀವಿಗಳು ಆ ತತ್ವಜ್ಞಾನದಿಂದ ಪ್ರಭಾವಿತರಾಗಬಹುದು-ಆಗದೆ ಇರಬಹುದು. ಅದು ಅವರವರಿಗೆ ಸಂಬಂಧಪಟ್ಟ ವಿಷಯ. ಆದರೆ ಮಾರ್ಕ್ಸ್‌ವಾದಿಗಳು ಮಾತ್ರವೇ ಪ್ರಗತಿಶೀಲರೆನ್ನುವುದು ತಪ್ಪು. ವೈಜ್ಞಾನಿಕ ದೃಷ್ಟಿಕೋನವಿಲ್ಲದವರು, ಆದರ್ಶವಾದಿಗಳು, ತಮ್ಮ ಮಾನವೀಯ ಭಾವನೆಗಳಿಂದ ಸತ್ಯನಿಷ್ಠೆಯಿಂದ ಪ್ರಗತಿಶೀಲವಾದ ಕೃತಿಗಳನ್ನು ರಚಿಸುತ್ತಾರೆ.

ಇಂಥ ತಪ್ಪು ಅಭಿಪ್ರಾಯಗಳಿಂದಾಗಿ, ಅಂಥ ಅಭಿಪ್ರಾಯಗಳಿಗೆ ಸ್ವಲ್ಪಮಟ್ಟಿಗೆ ನಮ್ಮ ಪ್ರಗತಿಶೀಲ ಲೇಖಕರು ಅವಕಾಶ ಕೊಟ್ಟುದರಿಂದಾಗಿ, ಪ್ರಗತಿಶೀಲ ಸಾಹಿತ್ಯ ಅಪೇಕ್ಷಣೀಯವಾದಷ್ಟು ಪ್ರಮಾಣದಲ್ಲಿ ಸಾರಸ್ವತ ಸಮಾಜದಲ್ಲಿ ಮನ್ನಣೆಯನ್ನು ಪಡೆಯದೆ ಹೋಯಿತು.

ಪ್ರಗತಿಶೀಲರ ಘೋಷಣೆ

ಈ ಸಂದರ್ಭದಲ್ಲಿ ಭಾರತದ ನಾನಾ ಭಾಷೆಗಳ ಪ್ರಗತಿಶೀಲ ಸಾಹಿತಿಗಳು ಸಮ್ಮೇಳನ ನಡೆಸಿ ಇತ್ತೀಚೆಗೆ ಸ್ವೀಕರಿಸಿರುವ ಘೋಷಣೆ ಗಮನಾರ್ಹವಾಗಿದೆ.

ಪ್ರಗತಿಶೀಲ ಸಾಹಿತ್ಯದ ಲಕ್ಷಣಗಳೇನು? ಪ್ರಗತಿಶೀಲ ಸಾಹಿತಿಗಳ ಧ್ಯೇಯಗಳೇನು? ಅವರ ಗುರಿಯೇನು ? ಎಂಬುದನ್ನೆಲ್ಲ ಈ ಘೋಷಣೆ ಸ್ಪಷ್ಟಪಡಿಸಿದೆ.

ಆ ಘೋಷಣೆ: "ಭಾರತದ ಜನರು, ತಮ್ಮ ಕಲೆ ಮತ್ತು ಸಾಹಿತ್ಯ, ತಮ್ಮ ರಾಷ್ಟ್ರೀಯ ಪರಂಪರೆಗಳಿಗೆ ಅನುಸಾರವಾಗಿ ಅಭಿವೃದ್ಧಿ ಹೊಂದಬೇಕೆಂದು ಬಯಸುತ್ತಾರೆ, ಎಲ್ಲ ದೇಶಪ್ರೇಮಿ ಸಾಹಿತಿಗಳೂ ಕಲಾವಿದರೂ ಜನತೆಯ ಈ ನ್ಯಾಯವಾದ ಹೆಬ್ಬಯಕೆಯನ್ನು ತೃಪ್ತಿಗೊಳಿಸಲು ಪ್ರಯತ್ನಿಸುತ್ತಾರೆ. ತಮ್ಮ ಸಾಂಸ್ಕೃತಿಕ ಪರಂಪರೆಯ ವಿಷಯದಲ್ಲಿ ಅವರು ಹೆಮ್ಮೆಪಡುತ್ತಾರೆ. ಈ ಪರಂಪರೆಯಲ್ಲಿ ಸುಂದರವಾದುದೆಲ್ಲವನ್ನೂ ಹಿರಿದಾದುದೆಲ್ಲವನ್ನೂ ತಮ್ಮ ಸೃಷ್ಟ್ಯಾತ್ಮಕ ಪ್ರಯತ್ನಗಳಿಂದ ಮುಂದುವರಿಸಲು ಅವರು ಇಷ್ಟಪಡುತ್ತಾರೆ. ಅದರಲ್ಲಿ ಸುಳ್ಳಾದುದೆಲ್ಲವನ್ನೂ ಅವನತಿಯದೆಲ್ಲವನ್ನೂ ತೊಡೆದುಹಾಕಲು ಅವರು ಆಶಿಸುತ್ತಾರೆ."

"ನಮ್ಮ ಜನತೆಯು ತಮ್ಮ ಸಲುವಾಗಿ ಸ್ವತಂತ್ರವಾದ, ಸಮೃದ್ಧವಾದ ಜೀವನವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಪ್ರಪಂಚದ ಎಲ್ಲ ಜನಾಂಗಗಳೊಡನೆಯೂ ಅವರು ಶಾಂತಿಯುತ ಮತ್ತು ಸ್ನೇಹಮಯ ಸಂಬಂಧದೊಂದಿಗೆ ಬಾಳಬಯಸುತ್ತಾರೆ.

"ನಮ್ಮ ಸಾಹಿತ್ಯವು ಮಾನವೀಯ ಭಾವನೆಯಿಂದ ತುಂಬಿರಬೇಕು; ಜೀವನದಲ್ಲಿ ಶ್ರದ್ಧೆಯನ್ನೂ ಉಜ್ವಲಭವಿಷ್ಯತ್ತಿನಲ್ಲಿ ಭರವಸೆಯನ್ನೂ ಹೊಂದಿರಬೇಕು."

"ಮಾನವನ ಸೃಷ್ಟ್ಯಾತ್ಮಕ ಶಕ್ತಿಯ ಬಗ್ಗೆ ತಿರಸ್ಕಾರ, ಒಂದು ಕುಲ ಅಥವಾ ಜನಾಂಗದ ಮೇಲೆ ಮತ್ತೊಂದು ಅಧಿಕಾರ, ಜಾತಿ ಮತ್ತು ಮತೀಯ ದ್ವೇಷ—ಇವು ನಮ್ಮ ಜನತೆಯ ಹಿತಕರವಾದ ಪರಂಪರೆಗೆ ದೂರವಾಗಿವೆ. ಧ್ಯೇಯರಹಿತ ಜೀವನ, ಮೂಢನಂಬಿಕೆ, ನಿರಾಶೆ ಮತ್ತು ವಿಧಿವಾದ—ಇವು ನಮ್ಮ ಬೆಳವಣಿಗೆಯನ್ನು ತಡೆಯುತ್ತವೆ."

"ಅಶ್ಲೀಲತೆಯ, ಕಾಮಪ್ರಚೋದನೆಯ ಕೊಲೆ-ಸುಲಿಗೆಯ ಸಾಹಿತ್ಯವನ್ನು ನಾವು ವಿರೋಧಿಸುತ್ತೇವೆ."

"ನಮ್ಮ ಸಾಹಿತ್ಯವು ಕಲಾತ್ಮಕವಾಗಿಯೂ ಸುಂದರವಾಗಿಯೂ ಇರಬೇಕು. ಅದರ ಸ್ವರೂಪವು ರಾಷ್ಟ್ರೀಯವಾಗಿಯೂ ಜನಪ್ರಿಯವಾಗಿಯೂ ಇರಬೇಕು; ನಮ್ಮ ದೇಶದ ಎಲ್ಲ ಭಾಷೆಗಳಲ್ಲಿಯೂ ಸಾಹಿತ್ಯವು ವಿಕಾಸಗೊಳ್ಳಲು ಪೂರ್ಣ ಅನುಕೂಲತೆಗಳಿರಬೇಕು—ಎಂದು ನಾವು ಆಶಿಸುತ್ತೇವೆ."

"ನಮ್ಮ ಸಾಹಿತಿಗಳು ಜನತೆಯ ಸೇವೆಯಲ್ಲಿ ಒಂದುಗೂಡಬೇಕೆಂದು ಸುಖಮಯ ಸಮೃದ್ಧ ಜೀವನದ ಕಡೆಗೆ ಮುನ್ನಡೆಯುವಂತೆ ಜನತೆಯನ್ನು ತಮ್ಮ ಸೃಷ್ಟ್ಯಾತ್ಮಕ ಕೃತಿಗಳ ಮೂಲಕ ಪ್ರೇರೇಪಿಸಬೇಕೆಂದೂ ನಾವು ಕರೆಕೊಡುತ್ತೇವೆ."

ಈ ಘೋಷಣೆ, ವ್ಯಾಖ್ಯೆಯ ಆವಶ್ಯತೆ ಇಲ್ಲದಷ್ಟು ಸ್ವಯಂಸ್ಪಷ್ಟವಾಗಿದೆ.

ಉತ್ತಮ ಸಾಹಿತ್ಯ

೧೯೪೫ರಲ್ಲಿ ಕನ್ನಡ ನಾಡಿನಲ್ಲಿ ಪ್ರಗತಿಶೀಲ ಸಾಹಿತ್ಯದ ಕುರಿತು ನಡೆಯುತ್ತಿದ್ದ ವಾದವಿವಾದಗಳ ಹಿನ್ನೆಲೆಯಲ್ಲಿ, ಮದರಾಸಿನ 'ಆಕಾಶವಾಣಿ' ಕೇಂದ್ರದವರು, 'ಉತ್ತಮ ಸಾಹಿತ್ಯವೆಂದರೇನು?' ಎಂಬ ಬಗೆಗೆ ಒಂದು ವಿಚಾರ ಸಂಕಿರಣವನ್ನೇರ್ಪಡಿಸಿದ್ದರು. ಆ ವಿಚಾರಸಂಕಿರಣದಲ್ಲಿ ಭಾಗವಹಿಸುತ್ತಾ, ಮದರಾಸು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ (ದಿವಂಗತ) ಕೈಲಾಸಂ ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಸ್ಮರಿಸುವುದು ಅಗತ್ಯವಾಗಿದೆ.

ಅವರು ಹೀಗೆ ಹೇಳಿದರು: "ಯಾವುದು ಉತ್ತಮ ಸಾಹಿತ್ಯ-ಅನ್ನೋ ಪ್ರಶ್ನೆ ಯಾವಾಗ್ಲೂ ಇದ್ದೇ ಇದೆ. ಕವಿ ತನಗೆ ತೋಚಿದ್ದನ್ನ ಬರೀತಾನೆ, ಚಿತ್ರಿಸ್ತಾನೆ. ಆದರೆ ಯಾವುದು ಸಾಹಿತ್ಯರೀತ್ಯಾ ಉತ್ತಮ ಅನ್ನೋದನ್ನ ತೀರ್ಮಾನಿಸೋದು ಕವಿ ಅಲ್ಲ—ಜನ, ಸಮಾಜ. ಮುಂದೆ ನಡೆಯೋಕೆ ಯಾವುದು ಅವರಿಗೆ ಸಹಾಯ ಆಗ್ತದೋ, ಅದು ಅವರ ದೃಷ್ಟೀಲಿ ಉತ್ತಮ ಸಾಹಿತ್ಯ. ಅಂದ್ರೆ ಯಾವುದು ಸಮಾಜಕ್ಕೆ ಉಪಯೋಗ್ವೋ ಅದೇ ಉತ್ತಮ ಸಾಹಿತ್ಯ. ಸಾಹಿತ್ಯ ಆಗಲಿ, ವಿಜ್ಞಾನ ಆಗಲಿ, ಯಾರು ಯಾವ ದಾರೀನೇ ಹಿಡೀಲಿ, ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸ್ಬೇಕಾದ ಋಣ—ಸಮಾಜ ಸೇವೆ—ಅಂತ ಶಾಸ್ತ್ರ ಹೇಳುತ್ತೆ. ಆದ್ರಿಂದ ಸಮಾಜಕ್ಕೆ ಉಪಯೋಗವಾಗಿರೋದೇ ಉತ್ತಮ ಸಾಹಿತ್ಯ ಲಕ್ಷಣ."

ಪ್ರಗತಿಶೀಲರು ಸಾಹಿತ್ಯದಲ್ಲಿ ಅಪೇಕ್ಷಿಸುವ ಲಕ್ಷಣಗಳಿಗೂ ಕೈಲಾಸಂ ನಿರೂಪಣೆಗೂ ಇರುವ ಸಾಮ್ಯ ಯಾರನ್ನಾದರೂ ಚಕಿತಗೊಳಿಸೀತು. ಆಧುನಿಕ ಕನ್ನಡ ಸಾಹಿತ್ಯದ ಈ ಹಿರಿಯರ ಮಾತು, ನಾಡಿನ ಸಾಹಿತಿಗಳಿಗೆಲ್ಲ ಬೆಳಕು ತೋರುವ ದೀವಟಿಗೆಯಾಗಿರುವುದನ್ನು ಕಂಡು, ನಾವು ಅಭಿಮಾನಪಡಬೇಕಾಗಿದೆ.

ಕೈಲಾಸಂ ಹೇಳಿರುವ ಲಕ್ಷಣ ಉತ್ತಮ ಸಾಹಿತ್ಯಕ್ಕೆ ಸಂಬಂಧಿಸಿದ್ದು. ಪ್ರಗತಿಶೀಲ ಸಾಹಿತ್ಯದ ಲಕ್ಷಣವೂ ಅದೇ ಎಂದು, ಒಂದೇ ಮಾತಿನಲ್ಲಿ ಹೇಳಿದರೆ ಸಾಕಲ್ಲವೇ?

• ಕಾಲು ಶತಮಾನ ತುಂಬಿದ ಸಂದರ್ಭದಲ್ಲಿ 'ರಾಷ್ಟ್ರಬಂಧು' ಪ್ರಕಟಿಸಿದ ವಿಶೇಷಾಂಕದಲ್ಲಿ ಅಚ್ಚಾದದ್ದು. ಮುಂದೆ ಇದು 'ಲೇಖಕ' ಪತ್ರಿಕೆಯಲ್ಲೂ ಪ್ರಕಟವಾಯಿತು.

೧೯೫೩.

ಸ್ವಾತಂತ್ರ್ಯ ಹೋರಾಟ ಮತ್ತು ಆಧುನಿಕ ಕನ್ನಡ ಸಾಹಿತ್ಯ

ಸಾಹಿತ್ಯ ಕೃತಿಗಳನ್ನು ಇಲ್ಲವೆ ಕಲಾಕೃತಿಗಳನ್ನು ಪರಿಗಣಿಸುವಾಗ, ಇದು ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಎಂದು ವಿಂಗಡಿಸುವ ಸಂಪ್ರದಾಯ ಉಂಟು. ಆ ವಿವಿಧತೆಗೆ ಇನ್ನಷ್ಟು ಕಳೆಕಟ್ಟುವಹಾಗೆ, ಕೃತಿಗಳನ್ನು, 'ರಾಜಕೀಯ' ಎಂಬ ತಲೆಕಟ್ಟಿನ ಕೆಳಗೂ ಪರೀಕ್ಷಿಸುವುದನ್ನು ನಾವು ಕಾಣುತ್ತೇವೆ.

ಇದು ಸಮಂಜಸವಲ್ಲವೆಂಬ ತರ್ಕಬದ್ಧವಾದ ಜೀವನವೇ ಮುಖ್ಯವೆಂಬುದು, ಹೀಗೆ ವಾದಿಸುವವರ ಅಭಿಪ್ರಾಯ. ಆ ಕೃತಿಯಲ್ಲಿ ಕಂಡುಬರುವ ವ್ಯಕ್ತಿಗಳು ಸಾಮಾನ್ಯಜೀವಿಗಳಾಗಿರಬಹುದು, ರಾಜಕಾರಣಿಗಳಿರಬಹುದು. ಹಳೆಯ ಪುರಾಣದ ಪಾತ್ರಗಳಿರಬಹುದು; ಏನಿದ್ದರೂ ಜೀವನವನ್ನು ಆ ಕೃತಿ ಪ್ರತಿಬಿಂಬಿಸುತ್ತದೆ—ಎಂದು ಅವರು ವಿವರಣೆ ಕೊಡುತ್ತಾರೆ.

ಆ ವಾದದ ಚರ್ಚೆ ಇಲ್ಲಿ ಮುಖ್ಯವಲ್ಲ. ಯಾವುದಾದರೊಂದು ಕೃತಿಯನ್ನು ನೋಡಿ ಇದು ರಾಜಕೀಯ ಕಾದಂಬರಿಯೆಂದೂ ರಾಜಕೀಯ ಕತೆ—ನಾಟಕವೆಂದೂ ಈಗ ಹೇಳುತ್ತಾರೆ. ಇಂತಹ ಹೇಳಿಕೆಯಲ್ಲಿರುವ ರಾಜಕೀಯ ಪದದ ಅರ್ಥವೇನು? 'ರಾಜಕೀಯ' ಎಂದೊಡನೆ ಮೂಗುಮುರಿಯುವವರು, 'ಐತಿಹಾಸಿಕ'ವೆಂದಾಗ ಸುಮ್ಮನಿರುತ್ತಾರೆ, ಇಲ್ಲವೆ ಮೆಚ್ಚುಗೆ ಸೂಚಿಸುತ್ತಾರೆ. ಇದಕ್ಕೆ ಕಾರಣವೇನು ?

ಈ ದಿನ ಇತಿಹಾಸ ಎನ್ನಿಸಿಕೊಂಡಿರುವುದು, ನಿನ್ನೆ—ಅದರ ಕಾಲದಲ್ಲಿ ರಾಜಕೀಯವಾಗಿತ್ತು. ಈ ದಿನ ರಾಜಕೀಯ ಎನಿಸಿಕೊಂಡಿರುವುದು, ಮುಂದಿನವರ ದೃಷ್ಟಿಯಲ್ಲಿ ಇತಿಹಾಸವಾಗುವುದು. ಈ ಅಂಶವನ್ನು ಎಲ್ಲರೂ ಚೆನ್ನಾಗಿ ಗಮನಿಸಿ ನೋಡಬೇಕು. ಮಾನವ ಹೊಸ ಸಾಧನೆಯನ್ನು ಮಾಡಿದಾಗ, ಆತ ನೂತನ ಇತಿಹಾಸ ಬರೆದನೆಂದು ಹೇಳುವುದುಂಟು. ಆದರೆ ಅಂತಹ ಇತಿಹಾಸದ ಬಗ್ಗೆ ಸಾಹಿತಿ ಕೃತಿ ರಚಿಸಿದರೆ ಅದು ರಾಜಕೀಯವೆಂದು ಕೆಲವರು ದೂಷಿಸುತ್ತಾರೆ. ಇದನ್ನು ಆಳವಾಗಿ

ಯೋಚಿಸಿ ನೋಡಿದರೆ ಒಂದು ವಿಷಯ ಸ್ಪಷ್ಟವಾಗುವುದು : ರಾಜಕೀಯ ಎಂದೊಡನೆ ದೂರ ನೆಗೆಯುವವರು ದೊಡ್ಡ ತಪ್ಪು ಮಾಡುತ್ತಾರೆ; ವಿವಿಧ ಕಾರಣಗಳಿಗಾಗಿ ತಪ್ಪು ಮಾಡುತ್ತಾರೆ. ಜನಜೀವನದಿಂದ, ಅದರ ನರಳಾಟ-ಹೋರಾಟಗಳಿಂದ, ದೂರವಿರಲು ಅಪೇಕ್ಷಿಸುವವರು ಅಂತಹ ತಪ್ಪುಗಳನ್ನು ತಮಗೆ ತಿಳಿಯದೆಯೇ ಮಾಡುತ್ತಾರೆ.

ಲೇಖನಿಯ ಹೊಣೆಗಾರಿಕೆ

ಹೀಗೆ ರಾಜಕೀಯವನ್ನು ಕೋಲುಮಡಿಯ ದೂರದಿಂದ ನೋಡುವವರು, ಪ್ರಗತಿಶೀಲ ಸಾಹಿತ್ಯಚಳವಳಿ ಆರಂಭವಾದಾಗ, "ರಾಜಕೀಯ ಶಕ್ತಿಗಳು ಬಲೆ ಬೀಸ ತೊಡಗಿವೆ" ಎಂದು ಆಕ್ರೋಶ ಮಾಡಿದರು. ಜೀವನದ ಆರಾಧಕರಾಗಿ ಮೂಕಜನತೆಯ ವಾಣಿಯಾಗಿ ಪ್ರಗತಿಶೀಲರು ಕೃತಿ ರಚಿಸತೊಡಗಿದಾಗ, ಸ್ವಾಭಾವಿಕವಾಗಿಯೆ ಸಂಪ್ರದಾಯದ ಎಲ್ಲೆಕಟ್ಟುಗಳನ್ನು ದಾಟಿ ಪ್ರಗತಿಶೀಲರ ಲೇಖನಿ ಮುಂದುವರಿಯಿತು. ಸಾಮಾಜಿಕ, ರಾಜಕೀಯ, ಐತಿಹಾಸಿಕ, ಪೌರಾಣಿಕ—ಯಾವ ಕ್ಷೇತ್ರವೂ ಅವರ ವಸ್ತುವಿಸ್ತಾರದೊಳಗೆ ಅಡಕವಾಗದೆ ಹೋಗಲಿಲ್ಲ.

ಕನ್ನಡ ನಾಡಿನಲ್ಲಿ ಬಿರುಗಾಳಿಯಂತೆ ಬೀಸಿಬಂದ ಪ್ರಗತಿಶೀಲ ಬರಹಗಾರರ ಚಳವಳಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಯಿತೆನ್ನುವ ತೀರ್ಮಾನವನ್ನು ಬೇಕಾದರೆ ನಾಳೆಗೆ ಬಿಟ್ಟುಕೊಡಬಹುದು. ಆದರೆ ಆ ತೀರ್ಮಾನಕ್ಕೆ ಬರಲು ಸಹಾಯಕವಾಗುವಂತೆ ಪೂರ್ವಭಾವಿಯಾಗಿ ಕೆಲವು ಅಭಿಪ್ರಾಯಗಳನ್ನು ನಾವು ಮಂಡಿಸಬೇಕು. ನಮ್ಮಲ್ಲಿ ನಡೆದ ಪ್ರಗತಿಶೀಲರ ಚಳವಳಿಯಲ್ಲಿ ಇತರ ನ್ಯೂನತೆಗಳು ಎಷ್ಟೇ ಇದ್ದಿರಲಿ, ನಮ್ಮ ಲೇಖಕರ ಪಾಲಿಗೆ ಆ ಚಳವಳಿ ವಸ್ತುವಿನ ಆಯ್ಕೆಯ ಕ್ಷೇತ್ರವನ್ನು ಮತ್ತಷ್ಟು ವಿಸ್ತಾರಗೊಳಿಸಿತು ಎನ್ನುವುದು ಮಾತ್ರ ನಿರ್ವಿವಾದದ ವಿಷಯ.

ಈ ಹಿನ್ನೆಲೆಯಲ್ಲಿ ಕಳೆದ ಹತ್ತು ವರ್ಷಗಳ ಸಾಹಿತ್ಯಸೃಷ್ಟಿಯನ್ನು ನಾವು ನಿರೀಕ್ಷಿಸಬೇಕು. ಅದಕ್ಕಿಂತಲೂ ಹಿಂದೆ ಕನ್ನಡದಲ್ಲಿ ರಚಿತವಾದ ಸಾಹಿತ್ಯಕೃತಿಗಳನ್ನೂ ನಾವು ಗಮನಿಸಿದಾಗ, ಆ ಕಾಲಕ್ಕೂ ಕಳೆದ ಒಂದು ದಶಕಕ್ಕೂ ಇರುವ ವ್ಯತ್ಯಾಸ ಸ್ಫುಟವಾಗಿ ಕಾಣುವುದು. ಜನಜೀವನವನ್ನು—ರಾಜಕೀಯ ಅಂಶಗಳನ್ನೂ ಒಳಗೊಂಡು-ಎಲ್ಲಾ ವರ್ಣಗಳಲ್ಲಿ ಚಿತ್ರಿಸುವ ಹೊಣೆಗಾರಿಕೆಯನ್ನು ಕನ್ನಡ ಬರಹಗಾರರು ಹೇಗೆ ನಿರ್ವಹಿಸುತ್ತ ಬಂದಿರುವರೆಂಬುದು ಆಗ ಸ್ಪಷ್ಟವಾಗುವುದು.

ಒಳ್ಳೆಯ ಪರಂಪರೆ

ಕನ್ನಡದ ನವೋದಯದ ಕಾಲ. ಇಪ್ಪತ್ತೈದು—ಮೂವತ್ತು ವರ್ಷಗಳಿಗೆ ಹಿಂದಿನ ಮಾತು. ಸ್ವಾತಂತ್ರ್ಯಹೋರಾಟದ ಮಹಾಪ್ರವಾಹದ ಅಲೆಗಳು ಹಿಂದುಳಿದಿದ್ದ ನಮ್ಮ ನಾಡಿಗೂ ಬಂದು ತಲಪಿದುವು. ರಾಷ್ಟ್ರೀಯ ಮನೋಭಾವದಿಂದ ಪ್ರೇರಿತರಾಗಿ

ನಮ್ಮವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾದರು. ಹೊಸ ಉಸಿರಿನಿಂದ ವಾತಾವರಣ ತುಂಬಿತು. ಕನ್ನಡ ಜನಾಂಗದ ಭಾಷೆ, ಸಾಹಿತ್ಯ, ಸಂಸ್ಕೃತಿಯ ಮಾತುಗಳು ಕೇಳಿಬಂದುವು. ಗಳಗನಾಥರೂ ವೆಂಕಟಾಚಾರ್ಯರೂ ಸೋದರಭಾಷೆಗಳಿಂದ ಒಳ್ಳೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಅತ್ಯಂತ ಮಹತ್ತರವಾದ ಉಳುಮೆಯ ಕೆಲಸ ಮಾಡಿದರು. ಪರಕೀಯರಿಗಿದುರು ಅಸಮಸಾಹಸದಿಂದ ಹೋರಾಡಿದ ಮರಾಠರ ಕತೆಗಳು, ಬಂಗಾಳದ ಸಂತಾಲರ ಕತೆಗಳು ನಮ್ಮವರ ಭುಜಗಳಲ್ಲಿ ಸ್ಫೂರ್ತಿ ಬರಿಸಿದವು.

ಆ ಬಳಿಕ ಪುಂಖಾನುಪುಂಖವಾಗಿ ಕನ್ನಡದಲ್ಲಿ ಹುಟ್ಟಿಬೆಳೆದ ಸಾಹಿತ್ಯಕೃತಿಗಳೆಲ್ಲವೂ ಸ್ವಾತಂತ್ರ್ಯಹೋರಾಟದಿಂದ ಪ್ರಭಾವಿತವಾಗಿದ್ದುವೆಂದು ಯಾರೂ ಹೇಳುವುದಿಲ್ಲ. ಪಾಳೆಯಗಾರ ಪ್ರಭುತ್ವದ ಶೋಷಣೆಯ ರಾಜ್ಯಯಂತ್ರದ ಗಾಲಿಕೀಲಿಗಳಾಗಿದ್ದವರು, ಸಾಹಿತ್ಯವನ್ನು ಜನಜೀವನದಿಂದ ಆದಷ್ಟು ದೂರವಿಡಲು ಕಾರಣರಾದರು-ಪರೋಕ್ಷವಾಗಿ ಕಾರಣರಾದರು. ಈ ಪ್ರವೃತ್ತಿಯ ಸಾಹಿತಿಗಳ ಸಂಖ್ಯೆ ದೊಡ್ಡದಾಗಿದ್ದರೂ ಅಲ್ಲಿ—ಇಲ್ಲಿ ಕೆಲವರು ಮಸುಕುಮಸುಕಾಗಿ ಜನತೆಯ ಹೋರಾಟದ ಛಾಯೆಯನ್ನು ನಮ್ಮ ಸಾಹಿತ್ಯದಲ್ಲಿ ಮೂಡಿಸಿದರು.

ವಿದೇಶೀಯರ ದಬ್ಬಾಳಿಕೆ ನಡೆದಿದ್ದ ಕಾಲದಲ್ಲಿ ಆ ಕೆಲಸ ಸುಲಭವಾಗಿರಲಿಲ್ಲ. ಆದರೆ ಕನ್ನಡ ನುಡಿಯ ನಾಡಿನ ಹಿರಿಮೆಯ ಬಗ್ಗೆ ಮಾತನಾಡುವುದು ಏನೂ ಅಪಾಯಕರವಾಗಿರಲಿಲ್ಲ. ಆ ಕೆಲಸವನ್ನು ಎಲ್ಲ ಸಾಹಿತಿಗಳೂ ಮಾಡಿದರು.

ಗಳಗನಾಥ ವೆಂಕಟಾಚಾರ್ಯರ ಕೃತಿಗಳಿಂದ, ಕನ್ನಡ ನಾಡಿನಲ್ಲಿ ಜನಜಾಗೃತಿಯ ಕೆಲಸ ನಡೆದಿತ್ತು. ಅನುವಾದಗಳಾಗಿದ್ದರು ಸಹ ಅವರ ಕೃತಿಗಳು, ಒಳ್ಳೆಯ ಪರಂಪರೆಯನ್ನು ಆರಂಭಿಸಿದುವು.. ಆದರೆ ಆ ಪರಂಪರೆ, ಏಕಪ್ರಕಾರವಾಗಿ, ಮುಂದು ವರಿಯಲಿಲ್ಲ. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲೂ ಏರುತಗ್ಗುಗಳಿದ್ದವು. ಒಂದು ಹೋರಾಟ ಮುರಿದಾಗ, ಅರ್ಥವಿಲ್ಲದ ಒಪ್ಪಂದವಾದಾಗ, ಜನರಲ್ಲಿ ನಿರಾಶೆಯ ಅಸಹಾಯಕತೆಯ ಮನೋಭಾವನೆ ಮನೆಮಾಡುತ್ತಿತ್ತು. ಆಗ ಆ ವಾತಾವರಣದಲ್ಲೂ ಹೃದಯ-ಮೆದುಳುಗಳನ್ನು ಭದ್ರವಾಗಿಟ್ಟು, ಭವಿಷ್ಯತ್ತನ್ನು ಮರೆಯದೆ, ಕೃತಿ ರಚಿಸಿದವರು ನಮ್ಮಲ್ಲಿ ಕಡಿಮೆ. ಅಂತಹವರಲ್ಲಿ ಹಲವರು ಜೀವನದಿಂದ ದೂರವಾಗಿ ಅಧ್ಯಾತ್ಮದ ಮೊರೆಹೊಕ್ಕರು. ಮೂವತ್ತೂಮೂರು ಕೋಟಿಯ ಹಿತಚಿಂತನೆ ಮಾಡುತ್ತಿದ್ದ ಬೇಂದ್ರೆಯವರಿಗೆ ಪಾಂಡಿಚೇರಿಯ ಮಾತೆಯವರ ಕರೆ ಕೇಳಿಸಿತು. ಸ್ವಾತಂತ್ರ್ಯಸಂಗ್ರಾಮದಲ್ಲಿ ನಿಷ್ಠಾವಂತನಾದ ಸೈನಿಕನಾಗಿದ್ದ ಶಿವರಾಮಕಾರಂತರು, ಭ್ರಮೆ ನಿರಸನವಾದ ಬಳಿಕ, ಯಾವುದನ್ನೂ ನಂಬದ ಸಿನಿಕನಾದರು. "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಎಂದು ಹಾಡಿದ ಗದುಗಿನ ಕವಿ, ಇನ್ನು ತಮ್ಮ ಕೆಲಸವಾಯಿತೆಂದು ಶಸ್ತ್ರಸನ್ಯಾಸ ಮಾಡಿದರು.... ಅದು ನಮ್ಮ ಅವನತಿಯ ಕಾಲ.

ಉತ್ಕರ್ಷಹೊಂದಿದ್ದ ಕನ್ನಡರಂಗಭೂಮಿ ಕುಸಿದುಬಿತ್ತು. ಸೋತುಹೋಗಿದ್ದ ಸ್ವಾತಂತ್ರ್ಯಹೋರಾಟ, ಸಂಸ್ಕೃತಿಯ ಕ್ಷೇತ್ರದಲ್ಲೂ ನಿರಾಶೆಯ ಶಿಥಿಲತೆಯ ನಿಷ್ಕ್ರಿಯೆಯ ವಾತಾವರಣವನ್ನುಂಟುಮಾಡಿತು.

೧೯೪೦ರ ಬಳಿಕ

ಜನಜೀವನವನ್ನು ದಹಿಸಿದ ದಳ್ಳುರಿ ೧೯೪೦ರಲ್ಲಿ ಬಂತು. ಅದು ಎರಡನೆಯ ಘೋರ ಮಹಾಯುದ್ಧ. ಹೊಸ ಸಮಸ್ಯೆಗಳು ಭೂತಾಕಾರವಾಗಿ ಎದ್ದುನಿಂತವು. ಕನ್ನಡ ಬರಹಗಾರರ ಮುಂದೆ ಎರಡು ಹಾದಿಗಳಿದ್ದುವು. ಒಂದು, ಜೀವನದಿಂದ ಪಲಾಯನವಾದ. ಇನ್ನೊಂದು, ಜೀವನರಂಗದಲ್ಲೇ ಜನತೆಯೊಡನೆ ನಿಂತು ಹೊಸ ರೀತಿಯ ಕೃತಿರಚನೆ.

ದೇಶದ ಸ್ವಾತಂತ್ರ್ಯ ಸಾಧನೆಯು ಘೋರಪ್ರಶ್ನೆಯೊಂದಿತ್ತು. ಜಗತ್ತನ್ನೇ ಕಬಳಿಸುತ್ತಿದ್ದ ದುಷ್ಟಶಕ್ತಿಯಾದ ಫಾಸಿಸಮಿನ ಪ್ರಶ್ನೆ ಮತ್ತೊಂದು. ಜನತೆಯನ್ನು ಹೆಚ್ಚುಹೆಚ್ಚು ದರಿದ್ರರನ್ನಾಗಿ ಮಾಡಿ ಜೀವನವನ್ನು ಅಸಹನೀಯಗೊಳಿಸುತ್ತಿದ್ದ ಸಮಾಜಘಾತಕ ಶಕ್ತಿಗಳು ಇನ್ನೊಂದೆಡೆ... ಇವೆಲ್ಲವುಗಳ ಎದುರಲ್ಲಿ ಕನ್ನಡದ ಬರಹಗಾರ ಲೇಖನಿ ಹಿರಿದ. ಈ ದಿನ ಪ್ರಸಿದ್ಧರಾಗಿರುವ—ಆದರೆ ಆಗ ಹೊಸಬರಾಗಿದ್ದ—ಯುವಕ ಲೇಖಕರು ಸ್ವಾತಂತ್ರ್ಯಹೋರಾಟದ ಬಗ್ಗೆ, ಜನತೆಯ ಹೋರಾಟದ ಬಗ್ಗೆ, ಬರೆದರು. ಅವು ಅತ್ಯಂತ ಮೇಲ್ಮಟ್ಟದ ಕಲಾಕೃತಿಗಳಾಗಿರಲಿಲ್ಲ. ಆದರೆ ಅವುಗಳಲ್ಲಿ ಪ್ರಾಮಾಣಿಕತೆಯಿತ್ತು; ಬಾಳ್ವೆಯನ್ನು ಪ್ರೀತಿಸುವ ಹೊಸ ಚೇತನವಿತ್ತು. ಆ ಕಾರಣದಿಂದ ಅವು ಜನರಮೇಲೂ ಆ ಪೀಳಿಗೆಯ ಇತರ ಬರೆಹಗಾರರ ಮೇಲೂ ಪರಿಣಾಮವನ್ನುಂಟುಮಾಡಿದುವು.

ಆ ಸನ್ನಿವೇಶದಲ್ಲಿ ಹಳೆಯ ತಲೆಮಾರಿನವರು ತಮ್ಮ ರಾಜಕೀಯ ಹೋರಾಟದ ಅನುಭವಗಳನ್ನು ಆಧಾರವಾಗಿಟ್ಟು, ಕೃತಿ ರಚಿಸಿದರು. ವಡಗೇನಹಳ್ಳಿಯವರ 'ಬಿಡುಗಡೆಯ ಬೆಲೆ', ಸ್ವಾತಂತ್ರ್ಯಹೋರಾಟಕ್ಕೆ ಸಂಬಂಧಿಸಿದ ಉತ್ತಮ ಕೃತಿಯಾಗಿ ಬೆಳಗಿತು. ಇತರ ಕಾದಂಬರಿಗಳು ಬಂದುವು. ೧೯೪೨ರ ಮಹಾಹೋರಾಟ, ಹೊಸ 'ಗಂಡುಗೊಡಲಿ'ಗಳ ಹುಟ್ಟಿಗೆ ಕಾರಣವಾಯಿತು. 'ತಿರುಗುಪ್ಪೆ' ನಾಟಕ (ಕಲ್ಲೂರು,) 'ಮೂರಾಬಟ್ಟೆ' ಕಾದಂಬರಿ (ಇನಾಮದಾರ,) 'ರಕ್ತತರ್ಪಣ' 'ಸ್ವಾತಂತ್ರ್ಯದೆಡೆಗೆ' ಕಾದಂಬರಿಗಳು (ತ.ರಾ.ಸು. ಮತ್ತು ಕಟ್ಟೀಮನಿ), ಹೀಗೆ ಹೊಸ ಹುಲುಸು ಬೆಳೆಯನ್ನೇ ನಾಡು ಕಂಡಿತು.

ಅದೇ ಹೊತ್ತಿಗೆ ಸ್ವಾತಂತ್ರ್ಯ ಹೋರಾಟವನ್ನು ಚಿತ್ರಿಸಿದ ಉದ್ಗ್ರಂಥಗಳು ಬಂದುವು; 'ಔದಾರ್ಯದ ಉರುಳಿನಲ್ಲಿ' (ಕಾರಂತ), 'ರಾಷ್ಟ್ರಪುರುಷ" (ಮಿರ್ಜಿ), 'ಮೆರವಣಿಗೆ'

(ಗೊರೂರು)..... ಇತ್ಯಾದಿ. ಅಡಿಗರಂತಹ ಯುವಕ ಕವಿಗಳು ಆಗ ಆಗಸ್ಟ್ ಒಂಬತ್ತನ್ನು ಕುರಿತು 'ನೆನೆ ನೆನೆಯೋ ಆ ದಿನವ" ಎಂದು ಹಾಡಿದರು.

ಬಂದೊದಗಿದ ಸ್ವಾತಂತ್ರ್ಯ

ಆಮೇಲೆ ಬಂತು ೧೯೪೭ರ ಆಗಸ್ಟ್ ಹದಿನೈದು. ಅದು ಸ್ವಾತಂತ್ರ್ಯ ಬಂದ ದಿನ. ಆಗ ಕುವೆಂಪು 'ಸ್ವಾತಂತ್ರ್ಯಗಾಥಾ'ವನ್ನು ಬರೆದರು. ದೊರೆತ ಸ್ವಾತಂತ್ರ್ಯದ ಬಗ್ಗೆ ಎಲ್ಲಿಯೂ ಯಾವ ಶಂಕೆಯೂ ಇರಲಿಲ್ಲ. ಎಲ್ಲರಿಗೂ ಸಂತೋಷವಾಗಿತ್ತು. ಆದರೆ ಭ್ರಮೆನಿರಸನಕ್ಕೆ ಹೆಚ್ಚು ಹೊತ್ತು ಹಿಡಿಯಲಿಲ್ಲ.

ಶ್ರೀರಂಗರ 'ಪುರುಷಾರ್ಥ' ಕಾದಂಬರಿ ಆ ಸಂಭ್ರಮದ ಸನ್ನಿವೇಶದಲ್ಲಿ ಕಟುಸತ್ಯದ ಕ್ರೂರವಾಸ್ತವತೆಯನ್ನು ಮುಂದಿರಿಸಿತು..... ಆ ಬಳಿಕ ಒಬ್ಬೊಬ್ಬರಾಗಿ ಹಲವು ಬರೆಹಗಾರರು ತಮ್ಮ ಶಂಕೆ ಸಂದೇಹಗಳಿಗೆ ಮಾತಿನ ರೂಪಕೊಟ್ಟರು. ಶಿವೇಶ್ವರ ದೊಡ್ಡಮನಿಯಂತಹ ಯುವಕ ಕವಿ ಆಳುವ ವರ್ಗವನ್ನು ಇದಿರಿಸಿ ಮಾತನಾಡಿದರು..... ಆಗಲೂ ರಾಜಕೀಯ ಕಾದಂಬರಿಗಳು ಬರುತ್ತಿದ್ದವು. ೧೯೪೨ ಕಳೆದು ಎಷ್ಟೋ ವರ್ಷಗಳಾದಮೇಲೆ 'ಅಮರ ಆಗಸ್ಟ್' (ಅ.ನ.ಕೃ.) ಎಂಬ ಒಂದು ಕಾದಂಬರಿ ಬಂತು. ಪ್ರಗತಿಶೀಲ ಸಾಹಿತ್ಯ ಚಳವಳಿಯು ರಾಜಕೀಯದ ಕೈಗೂಸು ಎಂಬರ್ಥದಲ್ಲಿ ಹಿಂದೆ ಹೇಳಿದ್ದ ಎಂ.ವಿ.ಸೀ.ಯವರು, 'ಮಾದನ ಮಗಳು' ಎಂಬ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯುಳ್ಳ ಒಂದು ಕಾದಂಬರಿಯನ್ನು ಬರೆದು ಮುಗಿಸಿದರು.

ಹೀಗೆ ಸ್ವಾತಂತ್ರ್ಯಹೋರಾಟ ಕನ್ನಡ ಸಾಹಿತ್ಯದಲ್ಲೂ ಪ್ರತಿಬಿಂಬಿತವಾಗುತ್ತ ಬಂದಿರುವುದನ್ನು ನಾವು ಕಾಣಬಹುದು. ಯಾರು ಎಷ್ಟು ಬೇಡವೆಂದರೂ ರಾಜಕೀಯ—ಈಗ ಜನಜೀವನವನ್ನು ಅಸಹನೀಯವಾಗಿ ಮಾಡಿರುವ ರಾಜಕೀಯ—ನಮ್ಮ ಬರೆಹಗಾರರ ಆಚಾರ-ವಿಚಾರಗಳನ್ನು ರೂಪಿಸುತ್ತಿರುವುದನ್ನು ನಾವು ನೋಡಬಹುದು.

ಸ್ವಾತಂತ್ರ್ಯ ಬಂದು ಆರು ವರ್ಷಗಳಾಗಿವೆ. ಹೊಲ, ಉದ್ಯೋಗ, ನಾಡು ನುಡಿ, ಸುಖಮಯ ಜೀವನಕ್ಕೆ ಸಂಬಂಧಿಸಿ, ಕನ್ನಡ ಜನತೆಯ ಕನಸುಗಳು ಇನ್ನೂ ಕೈಗೂಡದೆ ಉಳಿದಿವೆ. ಇಂತಹ ಪರಿಸ್ಥಿತಿಯಲ್ಲಿ ಜೀವನ ಮತ್ತೊಮ್ಮೆ ಬರೆಹಗಾರನಿಗೆ ಆಹ್ವಾನವೀಯುತ್ತಿರುವುದು ಸಹಜ. ಭವಿಷ್ಯತ್ತಿನ ಒಳ್ಳಿತಿಗಾಗಿಯೂ ವರ್ತಮಾನ ಕಾಲದ ಸಮಾಧಾನಕ್ಕಾಗಿಯೂ ಎಡೆಬಿಡದೆ ಬರೆಹಗಾರರು ನಮ್ಮ ಜನತೆಯೊಡನೆ ಬೆರೆತು ಬದುಕಬೇಕಾಗಿದೆ. ಸುಖಜೀವನಕ್ಕೋಸ್ಕರವಾದ ಜನತೆಯ ಹೋರಾಟವೇ ಇಂದಿನ ಸ್ವಾತಂತ್ರ್ಯಹೋರಾಟ. ಅದರ ಯಶಸ್ಸಿನಲ್ಲೇ ಬೆಳುದಿಂಗಳನ್ನೂ ನಲ್ಲನಲ್ಲೆಯರ ಚೆಂದುಟಿಗಳನ್ನೂ ಕಾಣುವುದು ಸಾಧ್ಯ.....

ಈ ಕೆಲವು ವರ್ಷಗಳಲ್ಲಿ ವೇಶ್ಯಾ ಸಮಸ್ಯೆಯೊಂದೇ ಅತಿಮುಖ್ಯವಾಗಿ ಕಂಡುಬಂದ ಒಬ್ಬಿಬ್ಬರು ಬರೆಹಗಾರರನ್ನು ಬಿಟ್ಟರೆ, ಬೇರೆ ಹಲವರಿಂದ, ಜನತೆಯ ಭ್ರಮೆ ನಿರಸನದ ಬದುಕಿನ ಹೊಸ ಆಸೆಯ ಪ್ರತಿಬಿಂಬವಾದ ಕೆಲವು ಕೃತಿಗಳು ಬಂದಿವೆ—ಆದರೆ ಬಲು ಸಣ್ಣ ಪ್ರಮಾಣದಲ್ಲಿ ಬಂದಿವೆ.

ಜನಜೀವನವೆಲ್ಲಾ, ಒಳ್ಳೆಯ ಬದುಕಿಗೋಸ್ಕರ ಮಾನವ ನಡೆಸುವ ಹೋರಾಟದಿಂದಲೇ ತುಂಬಿದೆ. ಅವನ ನಗು, ಅಳು, ಸುಖ, ಶೃಂಗಾರ, ರಂಜನೆಗಳೆಲ್ಲಾ ಈ ಹೋರಾಟಕ್ಕೆ ಅಧೀನವಾಗಿವೆ. ಎಂತಲೇ, ಜನಜೀವನವನ್ನು ಅದರ ಎಲ್ಲ ಬಣ್ಣಗಳಲ್ಲೂ ಈಗ ನಾವು ಚಿತ್ರಿಸುವಾಗ, ಹೊಸ ಹೊಸ ವಸ್ತುಗಳನ್ನು ಕಾಣುವುದು ಖಂಡಿತ. ಅಂತಹ ಹೊಸತನದಿಂದಲೇ ಈಗಿನ ಮುಂದಿನ ಕನ್ನಡ ಸಾಹಿತ್ಯದ ಸೃಷ್ಟಿ ಹೆಚ್ಚು ಫಲಪ್ರದವಾಗುವುದು.

- ಪ್ರಥಮ ಪ್ರಕಟನೆ 'ಚಿತ್ರಗುಪ್ತ' ಸ್ವಾತಂತ್ರ್ಯೋತ್ಸವ ಸಂಚಿಕೆಯಲ್ಲಿ.

ಕನ್ನಡ ಕಾದಂಬರಿಯ ಹಿರಿಯ ಪರಂಪರೆ

ಈ ವಿಷಯ, ವಿಮರ್ಶೆಯ ಒಂದು ಉದ್ಗ್ರಂಥಕ್ಕೆ ವಸ್ತುವಾದೀತು. ಏಕೆಂದರೆ ಕನ್ನಡ ಕಾದಂಬರಿಗಳ ಬೆಳವಣಿಗೆಯು ಅಷ್ಟು ವ್ಯಾಪಕವಾಗಿದೆ, ಕನ್ನಡ ಕಾದಂಬರಿಗಳ ಇತಿಹಾಸ ಅರ್ಧಶತಮಾನದ್ದು. ಅದರಲ್ಲಿ ಇತ್ತೀಚಿನ ಎರಡು ದಶಕಗಳಲ್ಲಿ ಕನ್ನಡ ಕಾದಂಬರಿಗಳು ನಾನಾಮುಖವಾಗಿ ಚಿಗುರಿ ಬಲಿತು ಸರ್ವವ್ಯಾಪಕವಾದುದು.

ಆಧುನಿಕ ಕನ್ನಡಸಾಹಿತ್ಯದಲ್ಲಿ ಈ ದಿನ ಅತ್ಯಂತ ಜನಪ್ರಿಯವಾಗಿರುವುದು ಕಾದಂಬರಿಯ ಪ್ರಕಾರ. ಕನ್ನಡ ಸಾಹಿತ್ಯದಲ್ಲಿ ಅತಿಹೆಚ್ಚು ಜನಪ್ರಿಯವಾದ ಸಾಹಿತ್ಯ ಪ್ರಕಾರಗಳನ್ನು ಈ ರೀತಿಯಾಗಿ ವಿಂಗಡಿಸಬಹುದು.

೧. ಹಳೆಗನ್ನಡ ಸಾಹಿತ್ಯದ ಮಹಾಕಾವ್ಯಗಳು

೨. ಆ ಬಳಿಕ ಈ ಶತಮಾನದ ಆರಂಭದಲ್ಲಿ, ಕನ್ನಡ ನವೋದಯದ ಅವಧಿಯಲ್ಲಿ, ಸಣ್ಣಕತೆ.

೩. ಸಣ್ಣಕತೆಯ ಬಳಿಕ ಕಾದಂಬರಿ.

ಈ ಶತಮಾನದಲ್ಲಿ, ಈಗ, ನಮ್ಮ ಪ್ರಾಚೀನ ಕಾವ್ಯಗಳು ಅಧ್ಯಯನದ ವಸ್ತುಗಳಾಗಿ ಮಾತ್ರ ಉಳಿದಿವೆ ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ. ಪಾಶ್ಚಾತ್ಯ ಸಾಹಿತ್ಯ ಸ್ವರೂಪಗಳಿಂದಲೂ ಮುಂದುವರಿದ ಬಂಗಾಳಿ ಭಾಷೆಯಿಂದಲೂ ಸ್ಫೂರ್ತಿಪಡೆದ ಸಣ್ಣಕತೆ ಒಂದು ಕಾಲದಲ್ಲಿ ಕನ್ನಡದಲ್ಲಿ ಅತ್ಯಂತ ಮೆಚ್ಚುಗೆಯ ಪ್ರಕಾರವಾಗಿತ್ತು. ಆಗ ಬರೆಹಗಾರರು ಸಣ್ಣಕತೆಗಳ ಸೃಷ್ಟಿಯಲ್ಲಿ ಆಸಕ್ತಿ ವಹಿಸುತ್ತಿದ್ದರು. ಆದರೆ ಈಗ ಆ ಪರಿಸ್ಥಿತಿಯಲ್ಲಿ, ಸಣ್ಣಕತೆಗಳನ್ನು ಮೆಚ್ಚಿಕುಕ್ಕಿ ಕಾದಂಬರಿ ತಲೆ ಎತ್ತಿದೆ.

ಈಗಿನ ಪ್ರಮುಖ ಕಾದಂಬರಿಕಾರರೆಲ್ಲ ಹತ್ತಿಪ್ಪತ್ತು ವರ್ಷಗಳಿಗೆ ಹಿಂದೆ ಸಣ್ಣಕತೆಗಾರರಾಗಿದ್ದವರು. ಆ ವಿಭಾಗದಲ್ಲಿ ಕೈಯಾಡಿಸಿ ಸಿದ್ಧಹಸ್ತರೆನ್ನಿಸಿಕೊಂಡವರು, ಇವರೆಲ್ಲಾ ಸಣ್ಣಕತೆಗಳ ಮೆಟ್ಟಲು ತುಳಿದೇ ಅಂಗಳಕ್ಕಿಳಿದವರು.

ಪ್ರಬುದ್ಧತೆಗೆ ಅಳತೆಗೋಲು

ಕನ್ನಡ ಕಾದಂಬರಿಯ ಪ್ರಕಾರವೂ ಸ್ಫೂರ್ತಿಪಡೆದಿರುವುದು ಪಾಶ್ಚಾತ್ಯ ಸಾಹಿತ್ಯದಿಂದ. ಸಂಸ್ಕೃತ ಸಾಹಿತ್ಯದಲ್ಲೇ ಆಗಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲೇ ಆಗಲಿ, ಕಾದಂಬರಿಯ ಪ್ರಕಾರ ಬೀಜರೂಪದಲ್ಲಿ ಕಾಣಸಿಗಬಹುದು. ಹಾಗಂದು, ಹೇಳುವುದರಿಂದ ನಮಗೆ ಆತ್ಮಸಂತೋಷವೇನೋ ಆದೀತು. ಆದರೆ ನಿರ್ವಿಕಾರಚಿತ್ತದಿಂದ ವಸ್ತುಸ್ಥಿತಿಯನ್ನು ನಾವು ಗಣನೆಗೆ ತೆಗೆದುಕೊಂಡರೆ ಕಾದಂಬರಿಯ ಪ್ರಕಾರಕ್ಕೆ ಸಂಬಂಧಿಸಿ, ನಮ್ಮ ದೇಶದಲ್ಲಿ ಪ್ರಚಲಿತವಿರುವ ಸಹಸ್ರಾರು ಪಾಶ್ಚಾತ್ಯ ಕಾದಂಬರಿಗಳಿಗೆ ನಾವು ಋಣಿಗಳಾಗಿರುವುದು ಸ್ಪಷ್ಟವಾದೀತು.

ಇದರಲ್ಲಿ ಲಜ್ಜೆಪಡಬೇಕಾದ ವಿಷಯವೇನೂ ಇಲ್ಲ. ಪಾಶ್ಚಾತ್ಯ ಸಾಹಿತ್ಯದಲ್ಲಿ ನಾವು ಗಮನಿಸಿದ್ದು, ಅಭ್ಯಾಸ ಮಾಡಿದ್ದು ಸ್ವರೂಪವನ್ನು, ತಂತ್ರವನ್ನು, ಪ್ರಕಾರವನ್ನು. ಕಾವ್ಯಮಾರ್ಗದಲ್ಲಿ ಹೇಗೆಯೋ ಗದ್ಯಮಾರ್ಗದಲ್ಲೂ ಅಷ್ಟೇ. ಆದರೆ ನಮ್ಮ ಬರೆಹಗಾರರು ಆ ಚೌಕಟ್ಟಿನೊಳಗೆ ತುರುಕಿದ ತಿರುಳು ನಮ್ಮದು. ಅವರು ಕಂಡುದು ನಮ್ಮ ಜೀವನ, ಚಿತ್ರಿಸಿದ್ದೂ ಅದನ್ನೇ.

ನಮ್ಮ ಬರೆಹಗಾರರು ಜೀವನದ ವಿಸ್ತಾರ ಹಿನ್ನೆಲೆಯನ್ನು ರಚಿಸಿಕೊಂಡು ವರ್ಣರಂಜಿತ ಚಿತ್ರವನ್ನು ರೂಪಿಸುತ್ತ ಕಾದಂಬರಿಗಳನ್ನು ಸೃಷ್ಟಿಸಲು ಸಮರ್ಥರಾದರೆಂಬುದು ಹೆಮ್ಮೆಯ ವಿಷಯ. ನಮ್ಮ ಸಾಹಿತ್ಯಶಕ್ತಿ ಪ್ರಬುದ್ಧವಾಯಿತೆನ್ನುವುದಕ್ಕೆ ಅದು ನಿದರ್ಶನ. ಕಾದಂಬರಿ ಎನ್ನುವುದು ಲಲಿತವಾದ ಮನೋರಂಜಕವಾದ, ನಿಷ್ಪ್ರಯೋಜಕವಾದ ವಸ್ತು ಎಂದು ಪರಿಗಣಿಸಲ್ಪಡದೆ, ಸಂಶೋಧನೆಯ ವಿಮರ್ಶೆಯ ಗ್ರಂಥಗಳಷ್ಟೇ ಕಾವ್ಯಗಳಷ್ಟೇ ಅದಕ್ಕೂ ಮನ್ನಣೆ ದೊರೆಯುತ್ತಿರುವುದು ಸಮಾಧಾನದ ವಿಷಯ.

ಮೊದಲ ಕಾದಂಬರಿಗಳು

ಬಂಗಾಳಿಯಿಂದಲೂ ಮರಾಠಿಯಿಂದಲೂ ಕಾದಂಬರಿಗಳು ಅನುವಾದಿತವಾಗಿ ಕನ್ನಡರೂಪ ತಳೆದು ಜನಮನವನ್ನು ಸೆಳೆದವೆಂಬುದು ಒಪ್ಪಿಕೊಳ್ಳಬೇಕಾದ ಅಂಶ. ಆದರೆ ಅದೇ ಹೊತ್ತಿಗೆ ಕನ್ನಡದ ಸ್ವತಂತ್ರ ಕಾದಂಬರಿಗಳೂ ಹುಟ್ಟಿದ್ದುವೆಂಬುದನ್ನು, ಪ್ರಕಟವಾಗುತ್ತಿದ್ದುವೆಂಬುದನ್ನು ದುರ್ಲಕ್ಷಿಸುವ ಹಾಗಿಲ್ಲ.

ಕನ್ನಡದ ಆರಂಭದ ಕಾದಂಬರಿಗಳನ್ನು ಗುರುತಿಸೋಣ.

ಈಗ ತಿಳಿದಿರುವ ಹಾಗೆ ಕನ್ನಡದ ಮೊದಲ ಕಾದಂಬರಿ—ಸ್ವತಂತ್ರ ಸಾಮಾಜಿಕ ಕಾದಂಬರಿ—೧೮೯೯ರಲ್ಲಿ ಪ್ರಕಟವಾಯಿತು. ಅದರ ಹೆಸರು 'ಇಂದಿರಾಬಾಯಿ ಅಥವಾ ಸದ್ಧರ್ಮವಿಜಯವು'. ೨೫೦ ಪುಟಗಳ ಆ ಕೃತಿಯನ್ನು ಬರೆದವರು ಗುಲವಾಡಿ

ವೆಂಕಟರಾಯರು.

ಎರಡನೆಯ ಕಾದಂಬರಿಯ ಹೆಸರು 'ವಾಗ್ದೇವಿ'. ಬರೆದವರು ಬೋಳಾರ ಬಾಬುರಾಯರು. ಪ್ರಕಟವಾದುದು ೧೯೦೫ರಲ್ಲಿ.

ಮೂರನೆಯದು 'ರೋಹಿಣಿ' (೧೯೦೭) ಬರೆದವರು ಗುಲವಾಡಿ ಅಣ್ಣಾಜಿಯವರು.

ನಾಲ್ಕನೆಯದು, ಕೆರೂರ ವಾಸುದೇವಾಚಾರ್ಯ ವಿರಚಿತ 'ಇಂದಿರೆ' (೧೯೦೮).

ಐದನೆಯದು, ಎಂ. ಎಸ್. ಪುಟ್ಟಣ್ಣನವರ ಕಾದಂಬರಿ 'ಮಾಡಿದ್ದುಣ್ಣೋ ಮಹಾರಾಯ' (೧೯೧೫).

ಆದರೆ ಈ ಕಾದಂಬರಿಯ ಪರಂಪರೆ ಅಖಂಡವಾಗಿ ಬೆಳೆಯಲಿಲ್ಲ. ನಡುವೆ ಸ್ವಲ್ಪ ಕಾಲ ಬರಡಾಯಿತು. ಆಧುನಿಕ ಸಾಹಿತ್ಯದ ಮೊದಲ ಬರೆಹಗಾರರು ಕನ್ನಡ ಚಳುವಳಿಯ ಆರಂಭದಲ್ಲಿ ನಮ್ಮ ಸಾಹಿತ್ಯಹೊಲದಲ್ಲಿ ಬೇರೆ ಬೀಜಗಳನ್ನು ಬಿತ್ತಿ ಕೃಷಿಮಾಡಿದರು.

ಮತ್ತೊಮ್ಮೆ ಪ್ರವಾಹ

ಹೀಗಿದ್ದರೂ ಕಾದಂಬರಿ ಮತ್ತೊಮ್ಮೆ ಮುಖ ತೋರಿಸದೆ ಇರಲಿಲ್ಲ. ಸಣ್ಣ ಕತೆಗಳ ಕ್ಷೇತ್ರದಲ್ಲಿ ಕೈಯಾಡಿಸಿ ನುರಿತವರಾಗಿದ್ದ ಮಾಸ್ತಿ, ಪುಟ್ಟಪ್ಪ, ಕಾರಂತ ಮತ್ತು ಅ.ನ.ಕೃ. ಕನ್ನಡದಲ್ಲಿ ಒಳ್ಳೆಯ ಕಾದಂಬರಿಗಳನ್ನು ಕೊಡತೊಡಗಿದರು. ಆಗ ಜನ ಆ ಗಾತ್ರದ ಪುಸ್ತಕಗಳ ಒಳಗೆ ಏನಿತ್ತೆಂದು ವಿಚಾರಿಸಲಿಲ್ಲ. ಇದು ಕನ್ನಡದ ಗಾತ್ರದ ಪುಸ್ತಕ. ಕನ್ನಡದ ಕಾದಂಬರಿ ಎಂಬ ಮಾನದಿಂದ ಆಗಿನ ಪ್ರತಿಯೊಂದು ಕೃತಿಯನ್ನೂ ಅವರು ಎತ್ತಿಕೊಂಡರು.

ಅಲ್ಲಿಂದೀಚೆಗೆ ಕಾದಂಬರಿಯ ಪ್ರವಾಹ ಓತಪ್ರೋತವಾಗಿ ಹರಿದುಬಂದಿದೆ. ಹಲವಾರು ಬರೆಹಗಾರರು ಕಾದಂಬರಿಯ ಪ್ರಕಾರವನ್ನು ಕರಗತಮಾಡಿಕೊಂಡು ಕನ್ನಡ ಕಾದಂಬರಿಗಳ ವಿಪುಲರಾಶಿಗೆ ತಮ್ಮ ಕೊಡುಗೆಗಳನ್ನು ಕೊಟ್ಟಿದ್ದಾರೆ.

ಪುಟಗಳ ದೃಷ್ಟಿಯಿಂದ ನೋಡೋಣವೇ ? ನಮ್ಮಲ್ಲಿ ಸಾವಿರದ ಎಲ್ಲೆಯನ್ನು ದಾಟಿರುವ 'ನಟಸಾರ್ವಭೌಮ'ವಿದೆ; 'ಸಮರಸವೇ ಜೀವನ'ವಿದೆ.

ತಂತ್ರ-ಕುಶಲತೆಗಳ ದೃಷ್ಟಿಯಿಂದ ನೋಡೋಣವೆ? ನಾವು ಖಂಡಿತವಾಗಿಯೂ ಆಧುನಿಕ ಐರೋಪ್ಯ ಸಾಹಿತ್ಯದ ತಂತ್ರ-ಕುಶಲತೆಗಳ ಮಟ್ಟದಿಂದ ಬಹಳ ಹಿಂದಿಲ್ಲ.

ಆದರೆ ಸಾಹಿತ್ಯವೆನ್ನುವುದು ಬರಿಯ ಶೈಲಿ ಮತ್ತು ತಂತ್ರ ಮಾತ್ರವಲ್ಲ. ಬರೆದುದು ಸಾಹಿತ್ಯವಾಗಬೇಕಾದರೆ, ಅದರಲ್ಲಿ ಅಡಕವಾಗಿರುವ ತಿರುಳು ಅತಿಮಹತ್ವದ ಒಂದಂಶ.

ಆಧುನಿಕ ಕನ್ನಡ ಕಾದಂಬರಿಗಳತ್ತ ದೃಷ್ಟಿ ಹರಿಸಿ ಕೆಲವು ಮುಖ್ಯಮೈಲುಗಲ್ಲುಗಳನ್ನು ಗುರುತಿಸೋಣ.

ನಿರ್ದಿಷ್ಟ ಪ್ರದೇಶದ ನಿರ್ದಿಷ್ಟಕಾಲಾವಧಿಯ ಜನಜೀವನ ನಮಗೆ ಬೇಕೆ? 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮರಳಿ ಮಣ್ಣಿಗೆ'ಗಳಿವೆ.

ಕಲಾವಿದರ ಜೀವನವನ್ನು-ವಾಸ್ತವಿಕ ಕಾಲ್ಪನಿಕ ಏನಾದರೂ ಸರಿಯೇ ಕಲಾತ್ಮಕವಾಗಿ ಚಿತ್ರಿಸುವ ಪುಟ್ಟ ಕೃತಿಗಳೂ ಬೇಕೆ ? 'ಸುಬ್ಬಣ್ಣ', 'ಸಂಧ್ಯಾರಾಗ'ಗಳಿವೆ.

ರಾಷ್ಟ್ರೀಯ ಹೋರಾಟದ ಪ್ರತ್ಯಕ್ಷ ಹಿನ್ನೆಲೆಯುಳ್ಳ ಕಾದಂಬರಿ ಬೇಕೇ? ಪ್ರಾಯಶಃ 'ಪುರುಷಾರ್ಥ'ವನ್ನು ಮೀರಿಸುವ ಕೃತಿ ಇನ್ನೊಂದು ಈಗ ಇರಲಾರದು.

ವಿಷಮದಾಂಪತ್ಯದ ದುರಂತಚಿತ್ರಗಳು ಬೇಕೇ ? ಐದು ವರ್ಷಗಳ ಅಂತರದಲ್ಲಿ ಕಳೆದ ದಶಕದಲ್ಲಿ ಬಂದ ಎರಡು ಕೃತಿಗಳಿವೆ. 'ನಿಸರ್ಗ' ಮತ್ತು 'ಸರ್ವಮಂಗಳಾ'.

ನಮ್ಮ ಸಾಂಸ್ಕೃತಿಕ ಜೀವನದ ಮೂಲ ಇಟ್ಟಿಗೆಗಳಾಗಿರುವ ಉಪಾಧ್ಯಾಯರ ಬಾಳುವೆಯ ಚಿತ್ರಣವಾದರೆ 'ಮುಗಿದ ಯುದ್ಧ', 'ರಾಮಣ್ಣ ಮಾಸ್ತರು' 'ಬೆಂಕಿಯಬಲೆ'ಗಳಿವೆ.

ಪರಿಸ್ಥಿತಿಯ ಕೂಸುಗಳಾದ ಹೆಣ್ಣುಗಂಡಿನ ಸಮಸ್ಯೆಯ ಸೂಕ್ಷ್ಮ ಚಿತ್ರಣವಾದರೆ 'ಅನುರಕ್ತೆ' ಇದೆ.

ವೇಶ್ಯಾ ಸಮಸ್ಯೆಯ ನಿಮಿತ್ತದಿಂದ ಬಂದ ಕೃತಿಗಳಿಗಂತೂ ಬರಗಾಲವಿಲ್ಲ. ಬಹುಮಟ್ಟಿಗೆ ಆ ಸಮಸ್ಯೆಯ ನಿಜವಾದ ಚಿತ್ರಣ ಎನ್ನುವ ದೃಷ್ಟಿಯಿಂದ 'ಬೀದಿಯಲ್ಲಿ ಬಿದ್ದವಳು' ಮತ್ತು 'ಮಸಣದ ಹೂ'ಗಳಿವೆ.

ವಯಸ್ಸು ಐದೇ ಆದರೂ ಮಹಾಪ್ರತಿಭಾಶಾಲಿ, ಮೈಮೇಲೆ ಮುತ್ತೈದೆಯರು ಬರುವ ಸ್ತ್ರೀರತ್ನಗಳು, ಮುಟ್ಟಿದ್ದೆಲ್ಲಾ ದಿವ್ಯೌಷಧವಾಗುವ ಶ್ರೀವನಿತೆಯರು, ನಾಲಿಗೆ ಕಡಿದರೂ ಹಾಡುವ ಕಲಾವಿದರು, ಮೂಢನಂಬಿಕೆಗಳು ಬಲಿಯುವಂತೆ ಮಾಡುವ ಚಿತ್ರಣಗಳೂ ಇವೆ. ಸಮಾಜದ ಕೆಳಗಿನ ಹಂತವನ್ನು ಚಿತ್ರಿಸಿರುವ 'ಪರದೇಶಿ'ಯಂಥ ಕೃತಿಗಳು ಪ್ರಕಟವಾಗಿವೆ.

ನಮ್ಮ ಹಳೆಯ ಇತಿಹಾಸ, ಯೋಗ್ಯರೀತಿಯಲ್ಲೂ ಯುಕ್ತಾಯುಕ್ತತೆಯ ವಿವೇಚನೆ ಇಲ್ಲದೆಯೂ ಕಾದಂಬರಿಗಳಿಗೆ ವಸ್ತುವಾಗಿದೆ.

'ಚೋಮನ ದುಡಿ'ಯಿಂದ ಹಿಡಿದು 'ಜ್ವಾಲಾಮುಖಿ'ಯವರೆಗೆ ಮೇಲೆ ಸಾಗಿ ಬರೆದಿರುವ ವರ್ಗಹೋರಾಟದ ಕಥನಗಳಿವೆ.

ಪಾಳೆಯಗಾರ ಸಂಸ್ಕೃತಿಯ ಕುರುಹುಗಳಾದ ಮಠಾಧಿಪರು ಕೆಲವರ ಸ್ವೇಚ್ಛಾಚಾರವನ್ನು ಬಯಲಿಗೆಳೆಯುವ ಕೃತಿಗಳು 'ವಾಗ್ದೇವಿ' ೧೯೦೫ರಲ್ಲಿ ಪ್ರಕಟವಾದರೆ 'ಮೋಹದ ಬಲೆಯಲ್ಲಿ' ೧೯೫೭ರಲ್ಲಿ ಪ್ರಕಟವಾಗಿದೆ.

ಇದೀಗ, ವಿಪುಲವಾಗಿ ತೋರುವ ನಮ್ಮ ಕಾದಂಬರಿ ಸೃಷ್ಟಿ.

ಸೃಷ್ಟಿಯ ದೃಷ್ಟಿ

೧೯೪೩ರ ಬಳಿಕ ಪ್ರಗತಿಶೀಲತೆಯ ಕರೆ ನಮ್ಮ ನಾಡಿನಲ್ಲಿ ಕೇಳಿಸಿತು. ಅಂದಿನಿಂದ ಅದು ಹೊಸತಾಗಿ ಬಂದಿತೆಂದು ಅರ್ಥವಲ್ಲ. ಆ ಒಳ್ಳೆಯ ಭಾವನೆಗಳಿಗೆ ನಿರ್ದಿಷ್ಟ ರೂಪಕೊಟ್ಟು ಅದು ಇಂಥದೇ ಎಂದು ಗುರುತಿಸುವ ಯತ್ನ ಆಗ ನಡೆಯಿತು.

ಅದರ ಫಲವಾಗಿಯೂ ಯುದ್ಧ ಹಾಗೂ ಯುದ್ಧಾನಂತರ ನೂತನ ಬಣ್ಣ ತಳೆದು ರೂಪುಗೊಳ್ಳತೊಡಗಿದ ನಮ್ಮ ಸಾಮಾಜಿಕ ವಾತಾವರಣದ ಫಲವಾಗಿಯೂ ಕಾದಂಬರಿಗಳ ವಸ್ತುಗಳಲ್ಲಿ ಹೊಸತನ ತೋರಿತು. ಪ್ರಮುಖ ಲೇಖಕರು ಕೆಲವರು ಬದುಕನ್ನು ನೋಡುವ ದೃಷ್ಟಿ ಬದಲಾಯಿತು. ಅವರ ಸಮಾಜಪ್ರಜ್ಞೆ ಸ್ಫುಟಗೊಂಡಿತು.

ಒಂದು ಕಾಲದಲ್ಲಿ ಕನ್ನಡ ಕಾದಂಬರಿಗಳ ಮೇಲೆ ಇಡೀ ಸಾಹಿತ್ಯದ ಮೇಲೆಯೇ—ಪ್ರಭುತ್ವ ಸ್ಥಾಪಿಸಿದ್ದ ಪ್ರವೃತ್ತಿ—ಆದರ್ಶವಾದ.

ಈ ಸ್ಥಾನವನ್ನಿಂದು ವಾಸ್ತವವಾದ ಆಕ್ರಮಿಸಿಕೊಳ್ಳುತ್ತಿದೆ.

ವಾಸ್ತವವಾದದ ಪ್ರವೃತ್ತಿ ಇಬ್ಬದಿಗಳಲ್ಲೂ ತೀಕ್ಷ್ಣಧಾರೆಯುಳ್ಳ ಅಲಗು. ಅದು ಅರ್ಥಹೀನ ರೂಪಗ್ರಹಣವಾಗಬಹುದು; ಸದುದ್ದೇಶವಿಲ್ಲದೆ ಹೋದಾಗ ವಾಸ್ತವವಾದ ಒರಟು 'ನೈಸರ್ಗಿಕವಾದ'ವಾಗಿ ಕೊನೆಗಾಣಬಹುದು. ಸದುದ್ದೇಶವುಳ್ಳ ಸಮಾಜಪ್ರಜ್ಞೆಯುಳ್ಳ ಮಾನವವಾದಿಯ ಕೈಯಲ್ಲಿ ವಾಸ್ತವವಾದ ಹಿರಿಯ ಶಕ್ತಿಯಾಗಿ ಪರಿಣಮಿಸಬಹುದು.

ಇಂದಿನ ಕಾದಂಬರಿಗಳು ಆ ಎರಡೂ ಪ್ರವೃತ್ತಿಗಳನ್ನು ತೋರಿಸಿಕೊಟ್ಟಿವೆ.

ನಮ್ಮ ಕಾದಂಬರಿಕಾರರು ಕನ್ನಡದ ಮೊದಲನೇ ಕಾದಂಬರಿಗಳಾದ 'ಇಂದಿರಾಬಾಯಿ' ಮತ್ತು 'ವಾಗ್ದೇವಿ'ಗಳನ್ನು ಮರೆಯುವುದು ಸಾಧ್ಯವಿಲ್ಲ. 'ಇಂದಿರಾಬಾಯಿ' ಆಗಿನ ಸಾರಸ್ವತ ಸಮಾಜವನ್ನು ಚಿತ್ರಿಸುವ, ಆ ಸಮಾಜದ ಲೋಪದೋಷಗಳನ್ನು ಬಯಲಿಗೆಳೆಯುವ ಕೃತಿ. 'ವಾಗ್ದೇವಿ', ಮಠಾಧೀಶರ ಸೋಗಿನಲ್ಲಿ ನಡೆಯುವ ಅತ್ಯಾಚಾರಗಳನ್ನು ಬಯಲಿಗೆಳೆಯುವ ಕಠೋರಕೃತಿ. ಇವು ಎರಡರಲ್ಲೂ ನಾವು ಪ್ರಗತಿಶೀಲ ಧ್ಯೇಯಧೋರಣೆಗಳನ್ನೇ ಕಾಣುತ್ತೇವೆ.

ನಮ್ಮ ಮೊದಲ ಕಾದಂಬರಿಗಳೇ ಇಂತಹ ಹಿರಿಯ ಪರಂಪರೆಯನ್ನು ಹಾಕಿಕೊಟ್ಟಿರುವುದು ಹೆಮ್ಮೆಯ ವಿಷಯ.

ಆ ಪರಂಪರೆಯನ್ನು ಎತ್ತಿಹಿಡಿದು ಪ್ರಗತಿಯ ಹಾದಿಯಲ್ಲಿ ನಮ್ಮ ಕಾದಂಬರಿಗಳು ಸೃಷ್ಟಿಯಾಗಲೆಂದು ಹಾರೈಸುವುದು ಹೆಚ್ಚಾಗಲಾರದು.

● 'ಪ್ರಜಾವಾಣಿ'ಯಿಂದ

೧೯೫೩

ಪ್ರಗತಿಶೀಲತೆಯ ಹುಟ್ಟು

ಭಾರತದಲ್ಲಿ ಕೆಲವು ವರ್ಷಗಳ ಹಿಂದೆ, ಸಾಹಿತ್ಯಸಾಗರದಲ್ಲಿ ಭೀಮತೆರೆಗಳನ್ನೆಬ್ಬಿಸಿ ಅಲ್ಲೋಲ ಕಲ್ಲೋಲ ಮಾಡಿದ, ಪ್ರಗತಿಶೀಲತೆಯ ಚಳವಳಿಯ ಉಗಮವೇನು ? ಆ ಹೊಸ ವಿಚಾರ ಹೇಗೆ ಹರಡಿತು? ಆ ದಿಕ್ಕಿನಲ್ಲಿ ಕೆಲಸ ಮಾಡಿದ ಆದ್ಯ ಪ್ರವರ್ತಕರಾರು ? ಎಂಬ ವಿಷಯಗಳನ್ನು ಮನದಟ್ಟುಮಾಡಿಕೊಳ್ಳುವುದರಿಂದ ಪ್ರಯೋಜನವಿದೆ.

ಮೊದಲ ಅಖಿಲ ಭಾರತ ಪ್ರಗತಿಶೀಲಸಾಹಿತಿಗಳ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಪ್ರಖ್ಯಾತ ಹಿಂದಿ-ಉರ್ದು ಸಾಹಿತಿ ಪ್ರೇಮಚಂದ್. ಎರಡನೆಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು ವಿಶ್ವಕವಿ ರವೀಂದ್ರರು.

ಇದಿಷ್ಟು ಅಧ್ಯಕ್ಷತೆ ವಹಿಸಿದವರ ಮಾತಾಯಿತು.

ಆದರೆ ಆ ಸಮ್ಮೇಳನಗಳಿಗೆ, ಚಳವಳಿಗೆ ಪೂರ್ವಭಾವಿಯಾಗಿ ದುಡಿದವರಲ್ಲಿ ಇಬ್ಬರು ಮುಖ್ಯರು; ಒಬ್ಬರು ಸಜ್ಜದ್ ಜಹೀರ್, ಇನ್ನೊಬ್ಬರು ಡಾ. ಮುಲ್ಕ್‌ರಾಜ್ ಆನಂದ್.

ಈಗ ಪ್ರಗತಿಶೀಲ ಜಹೀರ್ ಪಾಕಿಸ್ತಾನದ ಸೆರೆಮನೆಯಲ್ಲಿದ್ದಾರೆ. ಫಿತೂರಿಯ ಠಕ್ಕು ಮೊಕದ್ದಮೆಯೊಂದನ್ನು ಹೂಡಿ ದೀರ್ಘಕಾಲದಿಂದ ಅವರನ್ನು ಬಂಧಿಸಿ ಇಡಲಾಗಿದೆ.

ಈಗ ಹೊಸದಾಗಿ ಹೊರಡುತ್ತಿರುವ 'ಭಾರತೀಯ ಸಾಹಿತ್ಯ' ಎಂಬ ಪತ್ರಿಕೆಯಲ್ಲಿ ಜಹೀರರ ಒಂದು ಲೇಖನ ಅಚ್ಚಾಗಿದೆ.

'ನೆನಪುಗಳು' ಎಂಬುದು ಅದರ ಹೆಸರು. ಅದು ೧೯೪೦ನೆಯ ಇಸವಿಯಲ್ಲಿ ಸಜ್ಜದ್ ಜಹೀರ್ ಬರೆದ ಲೇಖನ. ಭಾರತದ ಪ್ರಗತಿಶೀಲ ಚಳವಳಿಗೆ ಸಂಬಂಧಿಸಿ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳಲು ಅದು ಸಹಾಯಕವಾಗಿದೆ.

ಮೂಲ ಉರ್ದುವಿನಿಂದ ಇಂಗ್ಲಿಷಿಗೆ ಭಾಷಾಂತರವಾಗಿರುವ ಆ ಲೇಖನದಿಂದ, ಕನ್ನಡ ಓದುಗರ ತಿಳಿವಳಿಕೆಗಾಗಿ ಈ ಕೆಲವಂಶಗಳನ್ನು ಆಯ್ದುಕೊಡಬಹುದು.

* * *

ಲೇಖನದ ಆರಂಭ

೧೯೩೩—ಒಂದು ವಿಶಿಷ್ಟ ರೀತಿಯ ವರುಷ. ಆಗ ನಾನು ಲಂಡನ್ನಿನಲ್ಲಿ ನನ್ನ ವಿದ್ಯಾರ್ಥಿಜೀವನದ ಕೊನೆಯ ದಿನಗಳನ್ನು ಕಳೆಯುತ್ತಿದ್ದೆ. ವಕೀಲಶಿಕ್ಷಣಕ್ಕಾಗಿ ಬಂದವನು ನಾನು. ಆದರೆ ಆಗ ನನಗೆ ಯಾವ ಆಸಕ್ತಿಯೂ ಅದರಲ್ಲಿ ಉಳಿದಿರಲಿಲ್ಲ. ಸುತ್ತುಮುತ್ತಲೂ ನಡೆಯುತ್ತಿದ್ದುದೆಲ್ಲವೂ ನನ್ನ ಹಾಗೂ ನನ್ನ ಸಹಬಾಂಧವರ ಮೇಲೆ ತೀವ್ರ ಪರಿಣಾಮವನ್ನುಂಟುಮಾಡುತ್ತಿದ್ದವು.

....ಜಗತ್ತನ್ನೇ ನುಂಗಹೊರಟ ಆರ್ಥಿಕ ಬಿಕ್ಕಟ್ಟಿನ ರಾಜಕೀಯ ಪರಿಣಾಮದ ವಿರಾಟರೂಪ ತೋರಿಕೊಂಡಿತು. ಎಲ್ಲ ಕಡೆಗಳಿಂದಲೂ ಫಾಸಿಸ್ಟ್ ದಬ್ಬಾಳಿಕೆಯ ದುಃಖಪೂರ್ಣ ಕತೆಗಳೇ ಕೇಳಿಬರುತ್ತಿದ್ದವು.

ಅಂಥ ದುಷ್ಟಶಕ್ತಿಗಿದಿರಾಗಿ ಜನತೆ ಎಚ್ಚೆತ್ತು ಪ್ರತಿಭಟಿಸಿದ್ದನ್ನು ನಾವು ಕಂಡೆವು... ಬುದ್ಧಿಜೀವಿಗಳಲ್ಲೂ ವಿಚಾರಕ್ರಾಂತಿಯಾಯಿತು. ಜರ್ಮನಿಯ ಮಹಾ ಸಾಹಿತಿಗಳಾದ ಥಾಮಸ್ ಮಾನ್ರ್, ಅರ್ನೆಸ್ಟ್ ಟಾಲರ್ ಮತ್ತಿತರರು, ಅಂತರರಾಷ್ಟ್ರೀಯ ಖ್ಯಾತಿಯ ಐನ್‌ಸ್ಟೀನ್, ಹಾಬರ್ ಮತ್ತಿತರರು ಕಲಾವಿದರು, ಸಂಗೀತಗಾರರು, ಡಾಕ್ಟರರು ಇವರೆಲ್ಲಾ ಆಗ 'ದೇಶಭ್ರಷ್ಟ'ರಾಗಿ ಊಟಕ್ಕೆ ದಿಕ್ಕಿಲ್ಲದೆ ಅಲೆಯುತ್ತಿದ್ದ ಕಾಲ, ಜನಸಮುದಾಯ ಫಾಸಿಸ್ಟ್ ಶಕ್ತಿಗಿದುರು ಎಚ್ಚೆತ್ತಿರುತ್ತಿದ್ದುದನ್ನು ಕಂಡು ಅವರೂ ಧೈರ್ಯ ತಾಳಿದರು. ತಾವೂ ಜನತೆಯ ಮುನ್ನಡೆಯ ಮುಂಭಾಗದಲ್ಲಿ ನಿಂತರು.

ಕಣ್ಣೆದುರು ನಡೆಯುತ್ತಿದ್ದ ಘಟನೆಗಳು, ನಾವು ಓದುತ್ತಿದ್ದ ಪುಸ್ತಕಗಳು, ನಡೆಸುತ್ತಿದ್ದ ಚರ್ಚೆಗಳು, ನಮ್ಮನ್ನು ಹೊಸಬರನ್ನಾಗಿ ಮಾಡಿದುವು.... ನಾವು ಮೆಲ್ಲಮೆಲ್ಲನೆ ಸಮಾಜವಾದದ ಸಿದ್ಧಾಂತದತ್ತ ಸಾಗಿದೆವು.

ನಮ್ಮ ಪುಟ್ಟ ಬಳಗದ ಹಲವರು ಲೇಖಕರಾಗಬೇಕೆಂದು ಅಪೇಕ್ಷೆಪಟ್ಟೆವು. (ಯುವಕರಾಗಿದ್ದ ಜಹೀರ್ ಇಂಗ್ಲೆಂಡಿಗೆ ಹೋಗುವುದಕ್ಕೆ ಮುಂಚೆಯೇ, ಉರ್ದು ಸಾಹಿತ್ಯಕ್ಷೇತ್ರದ ಉದಯೋನ್ಮುಖ ತಾರೆಯಾಗಿ ಬೆಳಗಿದ್ದರು. ಮುಲ್ಕ್‌ರಾಜ್ ಆನಂದರ ಸಾಹಿತ್ಯ ಚಟುವಟಿಕೆಗಳೂ ಸಾಗಿದ್ದವು... ಲೇ.) ಬೇರೇನನ್ನು ನಾವು ಮಾಡುವುದು ಸಾಧ್ಯವಿತ್ತು? ದೇಹಶ್ರಮ ನಮ್ಮಿಂದ ಶಕ್ಯವಿರಲಿಲ್ಲ. ಯಾವ ಉದ್ಯೋಗವನ್ನೂ ನಾವು ಕಲಿತಿರಲಿಲ್ಲ. ಸಾಮ್ರಾಜ್ಯವಾದಿ ಸರಕಾರದ ಚಾಕರಿ ಮಾಡುವುದು ನಮ್ಮ ಪಾಲಿಗೆ ಆಗುಹೋಗದ ಮಾತಾಗಿತ್ತು...

ನಾವು ಹಲವಾರು ಇಂಗ್ಲಿಷ್ ಲೇಖಕರನ್ನು ಸಂಧಿಸುತ್ತಿದ್ದೆವು. ಅವರಲ್ಲಿ ಒಬ್ಬರ ಬಗ್ಗೆ—ರಾಲ್ಫ್‌ಫಾಕ್ಸ್‌ರ ಬಗ್ಗೆ ನಾನು ಬರೆಯಲೇಬೇಕು. ಫಾಕ್ಸ್ ನಮಗಿಂತ ಸುಮಾರು ಹತ್ತು ವರ್ಷ ದೊಡ್ಡವರಾಗಿದ್ದರೂ ನಮ್ಮೊಡನೆ ಅವರು ಅತ್ಯಂತ ಸಲಿಗೆಯಿಂದ

ವರ್ತಿಸುತ್ತಿದ್ದರು. ಜನಾಂಗದ ಕುಲದ ಭಾಷೆಯ ವ್ಯತ್ಯಾಸಗಳೆಲ್ಲ ಆಗ ಮಾಯ ವಾಗುತ್ತಿದ್ದವು.

ಬೀಜ—ಮೊಳಕೆ

ಒಂದು ದಿನ, ಪ್ರಗತಿಶೀಲ ಲೇಖಕರ ಸಂಘದ ಬಗೆಗೆ ಮಾತಾಡೋಣವೆಂದು ಫಾಕ್ಸ್‌ರನ್ನು ನನ್ನ ಕೊಠಡಿಗೆ ಊಟಕ್ಕೆ ಕರೆದೆ. ತನ್ನ ಬಂಗಾಳಿ ಮಿತ್ರರೊಬ್ಬರು ಕಿಚಡಿಯನ್ನೂ, ಪಲಾವನ್ನೂ ಹೋಲುವಂಥ ಭಕ್ಷವೊಂದನ್ನು ತಯಾರಿಸಿದರು. ಫಾಕ್ಸ್‌ಗೆ ಅದು ತುಂಬ ರುಚಿ ಎನಿಸಿತು. ಸಾಹಿತ್ಯದ ಬಗ್ಗೆ ದೀರ್ಘಕಾಲ ಚರ್ಚೆ ನಡೆಯಿತು. ಪ್ರಗತಿಶೀಲವಾದವನ್ನು ಮುಂದಿಡುವ ಉದ್ವೇಗದಲ್ಲಿ ಅವು ಸಂಕುಚಿತ ವಾದಕ್ಕೂ ದುರಭಿಪ್ರಾಯಗಳಿಗೂ ಎಡೆಕೊಡಬಾರದೆಂದು ಫಾಕ್ಸ್ ಎಚ್ಚರಿಸಿದರು. ನಮ್ಮ ಬಂಗಾಳಿ ಮಿತ್ರನೊಬ್ಬ ಟಾಗೋರರನ್ನು ಟೀಕಿಸಿದ; ಅವರು ಭಾರತದ ಬಂಡವಾಳಶಾಹಿಯ ಪ್ರತಿನಿಧಿಯೆಂದೂ, ಪ್ರತಿಗಾಮಿಯೆಂದೂ ಹೇಳಿದ. ರಾಲ್ಫ್ ಫಾಕ್ಸ್‌ಗೆ ಇದರಿಂದ ತುಂಬ ಬೇಸರವೆನಿಸಿತು. ಇಂಥ ಮಾತು ಮಾರ್ಕ್ಸ್‌ವಾದವನ್ನು ನಗೆಗೀಡುಮಾಡುತ್ತದೆಂದು ಅವರು ಹೇಳಿದರು. ಯಾವನೇ ಕವಿಯನ್ನಾಗಲೀ, ಸಾಹಿತಿಯನ್ನಾಗಲೀ ಅಷ್ಟು ಸುಲಭವಾಗಿ ಯಾವುದೇ ಕಾಲ್ಪನಿಕ ಶಿಬಿರಕ್ಕೆ ತಳ್ಳುವಂತಿಲ್ಲ ಎಂದರು. ಆಗಲೇ 'ಚೆಂಗೀಸ್‌ಖಾನ್' ಪುಸ್ತಕವನ್ನು ಫಾಕ್ಸ್ ಬರೆಯುತ್ತಿದ್ದುದು. ರಾಲ್ಫ್ ಫಾಕ್ಸ್‌ನ ಬೂದು ಕೂದಲು, ನೀಲಿ ಕಣ್ಣುಗಳು, ವಿಶೇಷವಾಗಿ ಆ ಸಲಿಗೆಯ ಮಿಂಚುವ ನಡೆ—ಎರಡು ವರ್ಷಗಳ ಬಳಿಕ ಸ್ಪೇನಿನಲ್ಲಿ ಸ್ವಾತಂತ್ರ್ಯ ಯೋಧನಾಗಿ ಹೋರಾಡುತ್ತ ಆತ ಪಡೆದ ಮರಣ—ಒಂದನ್ನೂ ಎಂದಿಗೂ ನಾನು ಮರೆಯಲಾರೆ, ಎಂದಿಗೂ !

ಒಂದು ದಿನ ನನ್ನ ಕೊಠಡಿಯಲ್ಲೊಂದು ಸಭೆ ಜರುಗಿಸಿದೆವು. ಆರೇಳು ಜನರಿದ್ದೆವು. ಭಾರತೀಯ ಪ್ರಗತಿಶೀಲ ಲೇಖಕರ ಸಂಸ್ಥೆಯನ್ನು ಕಟ್ಟಲು ಒಂದು ಸಮಿತಿ ರಚಿಸಿದೆವು. ಆರಂಭದಲ್ಲಿ ಕೆಲಸ ನಿಧಾನವಾಗಿ ನಡೆಯಿತು. ಆದರೆ ಸ್ವಲ್ಪ ದಿನಗಳಲ್ಲೇ ಎಲ್ಲರೂ ಆಸಕ್ತಿ ತಳೆದೆವು. ಚಳವಳಿಯ ಗುರಿ ಉದ್ದೇಶಗಳನ್ನು ನಿರೂಪಿಸಿ, ಒಂದು ಘೋಷಣೆಯನ್ನು ಸಿದ್ಧಗೊಳಿಸಬೇಕೆಂದು ನಿರ್ಣಯಿಸಲಾಯಿತು. ನಾಲ್ಕೈದು ಜನರಿಗೆ ಆ ಕೆಲಸವನ್ನು ಒಪ್ಪಿಸಿದ್ದೂ ಆಯಿತು. ಮೊದಲ ಕರಡು ಪ್ರತಿಯನ್ನು ಆನಂದ್‌ರೇ ತಯಾರಿಸಿದರು. ಅದು ದೀರ್ಘವಾಗಿತ್ತು. ಇನ್ನೊಂದು ಕರಡನ್ನು ಡಾ॥ ಘೋಷ್ ತಯಾರಿಸಿದರು. ಅವು ಎರಡರ ಆಧಾರದ ಮೇಲೆ ಮೂರನೆಯ ಕೊನೆಯ ಪ್ರತಿಯನ್ನು ನಾನು ಸಿದ್ಧಪಡಿಸಿದೆ.

ಸಂಘದ ಸ್ಥಾಪನೆ

ಬಲುಸಂಭ್ರಮದಿಂದ ಮೊದಲ ದೊಡ್ಡ ಸಭೆಗೆ ಸಿದ್ಧತೆ ನಡೆಸಲಾಯಿತು. ಆಗಲೆ ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಜ್‌ಗಳಲ್ಲಿ ಸಾಹಿತ್ಯದ ಒಲವಿದ್ದ ಭಾರತೀಯರನ್ನೆಲ್ಲ ನಾವು ಕಂಡು ಮಾತಾಡಿದ್ದೆವು. ಲಂಡನ್ನಿನಲ್ಲಿ ಒಂದು ರೆಸ್ಟುರಾದ ಮಾಲಿಕನಾಗಿದ್ದ ಚೀನಿಯನೊಬ್ಬ, ಹಿಂಬದಿಯ ಒಂದು ಕೊಠಡಿಯನ್ನು ಬಾಡಿಗೆ ಇಲ್ಲದೆಯೇ ಇಂಥ ಸಭೆಗಳಿಗಾಗಿ ಬಿಟ್ಟುಕೊಡುತ್ತಿದ್ದ. ಈ ಸಣ್ಣ ಗಾಳಿ ಸಂಚಾರವಿಲ್ಲದ ಕೊಠಡಿಯಲ್ಲಿ, ಬಲು ಪ್ರಯಾಸದಿಂದ ನಾಲ್ವತ್ತು-ಐವತ್ತು ಜನ ಕುಳಿತಿರುವುದು ಸಾಧ್ಯವಿತ್ತು.

ಅಂಥ ಕೊಠಡಿಯಲ್ಲಿ ನಮ್ಮ ಮೊದಲ ಸಭೆ ಜರಗಿತು. ಮುಲ್ಕ್‌ರಾಜ್ ಆನಂದರನ್ನು ಸಭೆಯ ಅಧ್ಯಕ್ಷರಾಗಿ ಆರಿಸಿದೆವು. ಘೋಷಣೆಯನ್ನು ತಯಾರು ಮಾಡಲು ಏರ್ಪಟ್ಟಿದ್ದ ಸಮಿತಿಯ ಪರವಾಗಿ ಸಿದ್ಧವಾಗಿದ್ದ ಪ್ರತಿಯನ್ನು ಸಭೆಯ ಮುಂದಿರಿಸಿದೆವು. ಕೆಲವು ಸಣ್ಣ ತಿದ್ದುಪಾಟುಗಳೊಡನೆ ಆ ಘೋಷಣೆ ಸ್ವೀಕೃತವಾಯಿತು. ಕಾರ್ಯಸಮಿತಿಗೆ ಆಯ್ಕೆಹೊಂದಿದ ನಾವು ನಾಲ್ಕೈದು ಜನರಿಗೆ, ಸಮಾರಂಭ ಯಶಸ್ವಿಯಾದಂತೆ ಕಂಡಿತು. ಲಂಡನ್ನಿನಲ್ಲಿ ೩೦-೩೫ ಜನ ಭಾರತೀಯರನ್ನು ನಾವು ಒಂದೆಡೆ ತರಲು ಸಮರ್ಥರಾಗಿದ್ದೆವು. ಅಲ್ಲದೆ, ಘೋಷಣೆಯನ್ನು ಸಿದ್ಧಗೊಳಿಸುವ ಕೆಲಸದಲ್ಲಿ ನಮ್ಮ ವಿಚಾರಗಳು ಸ್ಪಷ್ಟವಾಗಿದ್ದುವು. ಪ್ರಗತಿಶೀಲತೆ ಎಂದರೇನು ? ಪ್ರಗತಿಶೀಲ ಲೇಖಕರ ಗುರಿ, ಧ್ಯೇಯಗಳೇನು ? ಅವರು ಹೇಗೆ ಕೆಲಸ ಮಾಡಬೇಕು ?—ಈ ಪ್ರಶ್ನೆಗಳಿಗೆಲ್ಲ, ತಾತ್ಕಾಲಿಕ ಉತ್ತರಗಳನ್ನಾದರೂ ಕೊಡಲು ನಮ್ಮ ಘೋಷಣೆ ಸಮರ್ಥವಾಗಿತ್ತು. ಈಗಲೂ (೧೯೪೦) ನಮ್ಮ ಪತ್ರಿಕೆಗಳಲ್ಲಿ ಈ ಕುರಿತು ಅಪೇಕ್ಷಣೀಯವಾದ ಚರ್ಚೆ ನಡೆಯುತ್ತಿರುವಾಗ, ಆಗಿನ ನಮ್ಮ ಘೋಷಣೆಯ ಸಮಗ್ರತೆ ಒಡೆದು ತೋರುತ್ತಿದೆ.

(ಇದು ೧೯೪೦ರ ಮಾತು; ಆದರೆ ಅಂಥ ಚರ್ಚೆ—ಅಪೇಕ್ಷಣೀಯವಾದ ಚರ್ಚೆ—೧೯೫೮ರಲ್ಲೂ ಜರುಗುತ್ತಿದೆ-ಲೇ.)

ನಮ್ಮ ಪ್ರಗತಿಶೀಲ ಲೇಖಕರ ಸಂಘದ ಸಭೆ ತಿಂಗಳಿಗೆ ಒಂದು ಬಾರಿ ಇಲ್ಲವೆ ಎರಡು ಬಾರಿ ಲಂಡನ್ನಿನಲ್ಲಿ ಜರುಗುತ್ತಿತ್ತು.... ಒಂದು ಸಭೆಯಲ್ಲಿ, ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ|| ಸುನೀತಿ ಕುಮಾರ್ ಚಟರ್ಜಿಯವರು ಭಾರತದ ಎಲ್ಲ ಭಾಷೆಗಳಿಗೂ ರೋಮನ್ ಲಿಪಿಯನ್ನು ಬಳಸುವ ಆವಶ್ಯಕತೆಯ ಕುರಿತು ಭಾಷಣ ಮಾಡಿದರು. ಭಾರತದಿಂದ ಹಲವು ಸಹಸ್ರಮೈಲು ದೂರವಿದ್ದ ನಾವು ಆಗ ಅದು ಸರಿ ಎಂದುಕೊಂಡೆವು !

ಮತ್ತೊಮ್ಮೆ ಬಂಗಾಳದ ಕವಿ ಖ್ವಾಜಾ ನೂರುಲ್ ಇಸ್ಲಾಂ ಕುರಿತು ನಮ್ಮ

ಬಂಗಾಳಿ ಸದಸ್ಯರೊಬ್ಬರು ಒಂದು ನಿಬಂಧವನ್ನೋದಿದರು. ಆನಂದ್, ತಾವು ಬರೆದ 'ದಿ ಟೆರರಿಸ್ಟ್' (ಉಗ್ರಕ್ರಾಂತಿಕಾರಿ) ಎಂಬ ಕತೆಯನ್ನೋದಿದ್ದರು. ನಾನು ನನ್ನ 'ಭೀಮಾರ್' (ರೋಗಿ) ಎಂಬ ಉರ್ದು ಏಕಾಂಕ ನಾಟಕವನ್ನೋದಿದೆ. ಭಾರತದಲ್ಲಿ 'ಅಂಗರಾಯ್' (ಕೆಂಡಗಳು) ಕಥಾಸಂಗ್ರಹದಲ್ಲಿ ನನ್ನ ಕಥೆ ಪ್ರಕಟವಾದ ಬಳಿಕ ಇದೇ ನನ್ನ ಮೊದಲಿನ ಕೃತಿಯಾಗಿತ್ತು. ಈ ಸಾಹಿತ್ಯ ಚಟುವಟಿಕೆಯ ಹಿನ್ನೆಲೆಯಲ್ಲೇ 'ಲಂಡನ್-ಕಿ-ಏಕ್-ರಾತ್' ಎಂಬ ನನ್ನ ಕಾದಂಬರಿಯನ್ನು ಬರೆಯತೊಡಗಿದೆ.

ಆದರೆ ದೂರದ ಲಂಡನ್ನಿನಲ್ಲಿ ಕುಳಿತು ಮಾಡುವ ಇಂಥ ಕಾರ್ಯದಿಂದ ಹೆಚ್ಚಿನ ಪ್ರಯೋಜನವಿರಲಿಲ್ಲ. ಭಾರತದ ವಿವಿಧ ಭಾಷೆಗಳಿಗೂ ಹರಡಿ, ಗುರಿ ಧ್ಯೇಯಗಳು ಕೃತಿಯಲ್ಲಿ ಕಂಡುಬಂದಾಗ ಮಾತ್ರ, ಪ್ರಗತಿಶೀಲ ಲೇಖಕರ ಚಳವಳಿಯೊಂದು ಪ್ರಭಾವಶಾಲಿಯಾದ ಶಕ್ತಿಯಾಗುವುದೆಂಬುದನ್ನು ನಾವು ಮನಗಂಡೆವು.

ಪ್ಯಾರಿಸ್ ಅಧಿವೇಶನ

ಆ ಅವಧಿಯಲ್ಲೇ ೧೯೩೫ರಲ್ಲಿ 'ಸಂಸ್ಕೃತಿಯ ರಕ್ಷಣೆಗಾಗಿ ವಿಶ್ವದ ಸಾಹಿತಿಗಳ ಸಮ್ಮೇಳನವೊಂದು ಪ್ಯಾರಿಸಿನಲ್ಲಿ ಜರುಗಿತು. ಅದಕ್ಕೋಸ್ಕರ ಆರಂಭದಲ್ಲಿ ಎಡೆಬಿಡದೆ ದುಡಿದವರು ಫ್ರೆಂಚ್ ಸಾಹಿತಿ ಹೆನ್ರಿ ಬಾರ್ಬೂಸೆ. ಆ ಸಮ್ಮೇಳನದ ಬೆನ್ನೆಲುಬಾಗಿ ನಿಂತವರು ರಷ್ಯದ ಮಾಕ್ಸಿಂ ಗಾರ್ಕಿ ಮತ್ತು ಫ್ರಾನ್ಸಿನ ರೋಮೆ ರೋಲಾ ಹಾಗೂ ಇತರರು. ಅದು ಅತ್ಯಂತ ಹಾಗೂ ಮಹತ್ವದ ಸಮ್ಮೇಳನ. ಪ್ರಪಂಚದ ಸಾಂಸ್ಕೃತಿಕ ಇತಿಹಾಸದಲ್ಲೇ ಆ ಸಮ್ಮೇಳನದ ಕ್ರಾಂತಿಕಾರಕ ಸಂಪುಟವನ್ನು ಆರಂಭಿಸಿತು.

ನನ್ನ ವಕೀಲಿ ಪರೀಕ್ಷೆ ಮುಗಿದಿತ್ತು. ಲಂಡನ್ನಿನಿಂದ ಬಂದು ನಾನು ಪ್ಯಾರಿಸ್ಸಿನಲ್ಲಿ ಸ್ವಲ್ಪ ಕಾಲ ನಿಂತೆ. ಭಾರತಕ್ಕೆ ಮರಳಿದಮೇಲೆ ಬರೆಯಲು ಬಿಡುವಾಗದೆಂದು ತಿಳಿದಿದ್ದ ನಾನು, ನನ್ನ 'ಲಂಡನ್-ಕಿ-ಏಕ್-ರಾತ್' ಕಾದಂಬರಿಯನ್ನು ಅಲ್ಲೇ ಬರೆದು ಮುಗಿಸುವುದರಲ್ಲಿ ನಿರತನಾದೆ.

ಒಂದು ದಿನ ಫ್ರೆಂಚ್ ಕವಿ ಲೂಯಿ ಆರಗಾನ್‌ರನ್ನು ಕಂಡಾಗ, ಭಾರತದಲ್ಲಿ ನಾವು ಆರಂಭಿಸಬೇಕೆಂದಿರುವ ಚಳವಳಿಯ ಕುರಿತು ಮಾತನಾಡಿ, ಸಾಹಿತಿಗಳನ್ನು ಸಂಘಟಿಸುವ ವಿಷಯದಲ್ಲಿ ಅವರ ಅನುಭವವನ್ನು ಕೇಳಿದೆ. ನಗುತ್ತ ಭುಜಕುಪ್ಪಳಿಸುತ್ತ, ಅವರೆಂದರು: "ಅದೊಂದು ವಿಷಯ ಕೇಳಬೇಡಿ. ಸಾಹಿತಿಗಳನ್ನು ಸಂಘಟಿಸುವುದರಷ್ಟು ಕಷ್ಟದ ಕೆಲಸ ಇನ್ನೊಂದಿಲ್ಲ. ಪ್ರತಿಯೊಬ್ಬನೂ ವಿಶಿಷ್ಟ ಹಾದಿಯನ್ನೇ ಅಪೇಕ್ಷಿಸುತ್ತಾನೆ. ಹೀಗಿದ್ದರೂ ನಾವು ಪ್ರಯತ್ನಿಸಬೇಕು. ತಮ್ಮ ಕಲೆಯ ಪ್ರಗತಿಯ ರಕ್ಷಣೆಗಾಗಿ ಸಾಹಿತಿಗಳು ಸಂಘಟಿತರಾಗಲೇಬೇಕೆಂದು ಆಧುನಿಕ ಜಗತ್ತಿನ ಸ್ಥಿತಿಗತಿಗಳು ಈಗ ಒತ್ತಾಯಿಸುತ್ತಿವೆ..."

ಭಾರತಕ್ಕೆ ನಾನು ಹೊರಟಾಗ ವಸಂತಾಗಮನವಾಗಿತ್ತು. ಮರದೆಲೆಗಳ ಹಸುರು ಕಳೆದು, ಹಳದಿ-ಕೆಂಪು ತಲೆದೋರಿತ್ತು. ತಣ್ಣಗೆ ಗಾಳಿ ಬೀಸುತ್ತಿತ್ತು. ಯಾರೋ ಸೂರ್ಯಪ್ರಕಾಶದಿಂದ ಉಷ್ಣವನ್ನೆಲ್ಲ ಕಸಿದುಕೊಂಡು ಬೆಳಕನ್ನಷ್ಟೇ ಬಿಟ್ಟು ಹೋದಂತಿತ್ತು...

ಅನಂತರ ಆರಂಭವಾಯಿತು ಇನ್ನೊಂದು ಅಧ್ಯಾಯ.

* * *

ಕೊನೆಯಲ್ಲಿ

ಆ ಹೊಸ ಅಧ್ಯಾಯವೇ ಭಾರತದಲ್ಲಿ ಜಹೀರರಂಥ ಪ್ರಮುಖ ಉರ್ದು ಸಾಹಿತಿಗಳೂ ಬೇರೆ ನಾಲ್ಕಾರು ಜನರೂ ಆರಂಭಿಸಿದ ಪ್ರಗತಿಶೀಲ ಲೇಖಕರ ಚಳವಳಿ.

ನಮ್ಮ ದೇಶದಲ್ಲಿ ಇಷ್ಟು ವರ್ಷ ಕಾಲ ನಾನಾವಿಧವಾಗಿ ಏರುಪೇರಾಗಿ ಪ್ರಗತಿಶೀಲ ಲೇಖಕರ ಚಳವಳಿ ಬೆಳೆದಿದೆ, ನಮ್ಮ ನಾಡಿನಲ್ಲಿ ಕೂಡ.

- 'ಪ್ರಜಾವಾಣಿ' ಯಿಂದ.

೧೯೩೫

ಕನ್ನಡ ಸಾಹಿತ್ಯದಲ್ಲಿ ಸೂಳೆಗಾರಿಕೆ

ಕನ್ನಡ ಸಾಹಿತ್ಯದಲ್ಲಿ ವೇಶ್ಯಾಪದ್ಧತಿಯು ಮೊದಲು ಚಿತ್ರಿತವಾಗಿ ಹಲವು ವರ್ಷಗಳು ಕಳೆದಿವೆ. ನಾನು ಹೇಳುತ್ತಿರುವುದು ಹಳೆಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಮಾತನ್ನಲ್ಲ. ಸಂಸ್ಕೃತ ಸಾಹಿತ್ಯದಿಂದ ಸ್ಫೂರ್ತಿಪಡೆದು ಮೈವೆತ್ತಿಬಂದ ಶೃಂಗಾರಸಾಹಿತ್ಯದ ವಿಷಯವನ್ನೂ ಅಲ್ಲ. ಆ ವೇಶ್ಯೆಯರ, ವಿಟರ ಕಾಮಕೇಳಿಗಳ ಲೋಕ, ನಮ್ಮ ಜನಸಾಮಾನ್ಯರ ಕಲ್ಪನೆಗೆ ಎಟುಕದೆ ಬಲು ದೂರವಾಗಿದೆ.

ಆದರೆ ನಮ್ಮ ಜನರಿಗೆ ಪರಿಚಿತವಾಗಿರುವ ವೇಶ್ಯಾಜೀವನವಿದೆ. ಅದು ಈ ಶತಮಾನದ್ದು. ಇಪ್ಪತ್ತನೆಯ ಶತಮಾನದ ಆಧುನಿಕರಾದ ನಾವು, ವಿವಿಧ ಪೀಳಿಗೆ ಯವರು, ದೇಹದ ಮಾರಾಟದ ಬಗ್ಗೆ ತಿಳಿದಿದ್ದೇವೆ.

ಸೂಳೆಗಾರಿಕೆ ಎನ್ನುವುದು ಸುಖವಿಲಾಸಕ್ಕಿರುವ ಇನ್ನೊಂದು ಹೆಸರೆ ? ಹಾಗೆಂದು ಭಾವಿಸಿದವರಿದ್ದಾರೆ. ಹಾಗಲ್ಲ; ಇದೊಂದು ಘೋರ ರೋಗ; ಸಮಾಜಕ್ಕೆ ತಗಲಿರುವ ಜಾಡ್ಯ—ಎಂದು ಭಾವಿಸಿ ಸಂಕಟಪಡುವವರಿದ್ದಾರೆ. ಏನೇ ಇರಲಿ, ಇದು ಅನಿವಾರ್ಯ, ಎನ್ನುವವರಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ಮಡಿವಂತಿಕೆಯ ಸಂಕುಚಿತ ಪ್ರವೃತ್ತಿಯಿಂದ ಆವೃತ್ತವಾಗಿದ್ದರೂ ಆ ಆವರಣದಿಂದ ಹೊರಬಂದು ಸೂಳೆಗಾರಿಕೆಯ ಬಗ್ಗೆ ಬರೆಯುವ ಯತ್ನ, ಬಲುಹಿಂದೆ ನಡೆಯಿತು. ಅದು ೧೯೧೯ರಲ್ಲಿ. ಆ ಯತ್ನವನ್ನು ಮಾಡಿದರು ಕನ್ನಡದಲ್ಲಿ ಪ್ರಗತಿಶೀಲತೆಯ ಪ್ರಪಿತಾಮಹರಾದ ಕೈಲಾಸಂ.

ಅವರು ರಚಿಸಿದ 'ಮೊಮ್ಮಗಳ ಮುಯ್ಯಿ'ಯನ್ನು ಯಾರೋ ಬರೆದುಕೊಂಡಿದ್ದರು. ಆದರೆ ಆ ಹಸ್ತಪ್ರತಿ ಕಳೆದುಹೋಗಿದೆ. ಅಲ್ಪಸ್ವಲ್ಪ ಅಂಶಗಳನ್ನು ನೆನಪಿಟ್ಟವರು, ಅಷ್ಟನ್ನು ಮಾತ್ರ ಅಚ್ಚುಹಾಕಿಸಿದ್ದಾರೆ. ಆ ಭಾಗವನ್ನಷ್ಟು ಓದಿದರೂ ಸಾಕು, ಮೈರೋಮ ಮುಳ್ಳಾಗುವುದು. ಕೈಲಾಸಂ ನಾಲಿಗೆ, ಮಾರಕ ಅಸ್ತ್ರವಾಗಿ, ತನ್ನ ಮೂಲಕ ಮಾತುಗಳನ್ನಾಡಿಸಿದ ಪಾತ್ರಗಳ ಆ ಬಗೆಯೊ!

'ಮೊಮ್ಮಗಳ ಮುಯ್ಯಿ'ಯಲ್ಲಿದ್ದುದು, ಸೂಳೆಗಾರಿಕೆಯ ಶನಿಸಂತಾನವಾದ ಗುಹ್ಯರೋಗದ ಚಿತ್ರಣ.

ಮಹಾಕೃತಿ 'ಸೂಳೆ'

ಎಂಟು ವರ್ಷಗಳ ಮೇಲೆ (೧೯೨೭) ಇನ್ನೊಂದು ಕೈಲಾಸಂ ಕೃತಿ ರೂಪುಗೊಂಡಿತು. ಅದರ ಹೆಸರು 'ಸೂಳೆ.' ಅದು ಅದ್ಭುತರಮ್ಯನಾಟಕ. ಮಹಾ ಮೇಧಾವಿಯೊಬ್ಬನೇ, ಜೀನಿಯಸ್ ಒಬ್ಬನೇ, ರಚಿಸುವುದು ಸಾಧ್ಯವಿರುವ ಕೃತಿ.

ಅದಾದ ಬಳಿಕ ಕಾರಂತರ 'ಕನ್ಯಾಬಲಿ' ಅಥವಾ 'ಸೂಳೆಯ ಸಂಸಾರ' ಬಂತು. ಅದರ ಮುನ್ನುಡಿಯಲ್ಲಿ 'ಈ ಲೇಖಕನಿಗೆ ದಯೆಯಿಲ್ಲ' ಎಂಬ ಮಾತಿತ್ತು. ಆ ಲೇಖಕನಿಗೆ ದಯೆ ಇರಲಿಲ್ಲ. ಬಲು ತೀಕ್ಷ್ಣವಾಗಿ ಪರಿಣಾಮಕಾರಿಯಾಗಿ ತನ್ನ ಕೆಲಸವನ್ನು ಅದು ಮಾಡಿತ್ತು. ಆದರೆ ಆಗಿನ್ನೂ ಕಾರಂತರದು ಪಳಗಿದ ಕೈಯಾಗಿರಲಿಲ್ಲ. ಆ ಕೃತಿ ಕಲಾತ್ಮಕವಾಗಿರಲಿಲ್ಲ. ಒಳ್ಳೆಯ ಸಾಹಿತ್ಯಕೃತಿಯಾಗಿರಲಿಲ್ಲ.

ಅದರ ಅನಂತರ ಬಂದುದು ಕೃಷ್ಣರಾಯರ 'ಜೀವನ ಯಾತ್ರೆ'. ಮೊದಲ ಈ ಕಾದಂಬರಿಯೂ ಅಷ್ಟೇ. ಸದುದ್ದೇಶವಿತ್ತಾದರೂ ಅದನ್ನು ಪರಿಣಾಮಕಾರಿಯಾಗಿ ಹೇಳುವ ಸಾಮರ್ಥ್ಯ ಆಗಿನ ಪಳಗದ ಆ ಕೈಗೆ ಇರಲಿಲ್ಲ.

ಪ್ರಗತಿವಾದ

ಇಷ್ಟು ಕೃತಿಗಳು ಪ್ರಕಟವಾದುದು, ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿ ತಲೆದೋರಿದುದಕ್ಕೆ ಮುಂಚೆ.

೧೯೪೩ರ ಬಳಿಕ ಕನ್ನಡದಲ್ಲಿ ಬೀಸಿದ ಪ್ರಗತಿವಾದದ ಬಿರುಗಾಳಿ, ಜೀವನದ ಸಮಸ್ಯೆಗಳ ವಿರಾಟ್‌ದರ್ಶನವನ್ನು ನಮ್ಮ ಬರೆಹಗಾರರು ಕಾಣಲು ಒಂದು ಅವಕಾಶ ಒದಗಿಸಿತು. ಆದರೆ ಆ ಅವಕಾಶವನ್ನು ಉಪಯೋಗಿಸಿಕೊಂಡವರಿಲ್ಲ. ಬಿರುಗಾಳಿಯೇನೋ ಬೀಸಿತು. ರೆಂಬೆಕೊಂಬೆಗಳು ತೂಗಾಡಿದುವು. ಹಣ್ಣೆಲೆ, ಚಿಗುರೆಲೆ, ತರಗೆಲೆಗಳು ಸದ್ದು ಮಾಡಿದುವು. ಆದರೆ ಮತ್ತೆ ನಿಶ್ಶಬ್ದ... ಏನೂ ಆಗಲಿಲ್ಲ.

ಪ್ರಗತಿವಾದದ ಹಲವರನ್ನು ಪ್ರಭಾವಕ್ಕೆ ಒಳಗು ಮಾಡಿದರೂ ಆ ದೃಷ್ಟಿಯ ಕೃತಿಗಳು ಪರಿಣಾಮಕಾರಿಯಾದ ಪ್ರಮಾಣದಲ್ಲಿ ಬರಲಿಲ್ಲ.

ಆಮೇಲೆ ಬಂತು ೧೯೫೦...

ಅದಕ್ಕಿಂತ ಮುಂಚಿತವಾಗಿ, ಜೀವನದ ಇತರ ಸಮಸ್ಯೆಗಳಂತೆ ಸೂಳೆಗಾರಿಕೆಯೂ ಅಲ್ಲಿ ಇಲ್ಲಿ ಕತೆಗಳಲ್ಲಿ ಕವನಗಳಲ್ಲಿ ಸುಳಿದುದುಂಟು. ಆದರೆ ಅವು ಯಾರ ಗಮನ ವನ್ನೂ ಸೆಳೆಯಲಿಲ್ಲ.

ಆದರೆ ೧೯೫೦ರ ಅನಂತರ ಬಂದ ಮೂರು ಕಾದಂಬರಿಗಳು ಮಾತ್ರ, ತೀಕ್ಷ್ಣ ಅಭಿಪ್ರಾಯಗಳ ಭಾವನೆಗಳ ಪ್ರಚೋದನೆಗೆ ಕಾರಣವಾದುವು. ಆದರೆ ಆ ಕೃತಿಗಳಿಗೂ ಪ್ರಗತಿವಾದಕ್ಕೂ ಸಂಬಂಧವಿರಲಿಲ್ಲ.

ಮೂರು ಕೃತಿಗಳು

ಕೈಲಾಸಂ ಒಮ್ಮೆ ಹೇಳಿದರಂತೆ : "ಕೃಷ್ ಮನಸ್ಸು ಮಾಡಿದರೆ ನನ್ನ 'ಸೂಳೆ'ಗಿಂತ ನೂರು ಪಾಲು ಚೆನ್ನಾಗಿರುವ ಕೃತಿ ರಚಿಸಬಲ್ಲ."

ಕೃಷ್ ಎಂದರೆ ಕೃಷ್ಣರಾಯರು.

ಹಾಗೆಂದು ತಮ್ಮ ಒಂದು ಪುಸ್ತಕದಲ್ಲಿ ಕೃಷ್ಣರಾಯರೇ ಹೇಳಿಕೊಂಡಿದ್ದಾರೆ.

ಆದರೆ ಆ ಮಾತು ಮಾತ್ರ ಇಂದಿಗೂ ಕೈಲಾಸಂ ಜೋಕಾಗಿಯೇ ಉಳಿದಿದೆ.

ಅ.ನ.ಕೃ. ಕಾದಂಬರಿಗಳು ಪ್ರಗತಿಯ ದೃಷ್ಟಿಗೆ ಎಳ್ಳು-ನೀರು ಬಿಟ್ಟುದು ಮಾತ್ರವಲ್ಲ; ನಮ್ಮ ಬರೆಹಗಾರರು ಪ್ರಗತಿಗಿದಿರಾದ ಹಾದಿಯಲ್ಲಿ ಕೆಳಕ್ಕೆ ಜಾರುವುದು ಹೇಗೆ ಸಾಧ್ಯವೆಂಬುದನ್ನೂ ತೋರಿಸಿಕೊಟ್ಟವು. ವೇಶ್ಯಾಪದ್ಧತಿಯ ಮೂಲೋತ್ಪಾಟನೆಯೇ ತಮ್ಮ ಗುರಿಯೆಂದು ಅವರು ಮುನ್ನುಡಿಗಳಲ್ಲಿ ಎಷ್ಟು ಹೇಳಿಕೊಂಡರೂ ಒಳಗಿನ ತಿರುಳು ಹಳಸಿಹೋಗಿದ್ದ ಕಾಮಕೇಳಿಗಳ ವಿಕೃತವಿಲಾಸಗಳ ರಸಪುಷ್ಟ ವರ್ಣನೆಯಾಗಿತ್ತು.

ಆ ಮಾಲೆಯ ಮೊದಲ ಕಾದಂಬರಿಯಲ್ಲಿ ವೇಶ್ಯಾಸಮಸ್ಯೆಯ ಚಿತ್ರವೆನ್ನುವ ಭ್ರಮೆಯುಂಟಾಗಲು ಅವಕಾಶವೇನೋ ಇತ್ತು. ಆದರೆ ಮುಂದಿನ ಎರಡು ಪುಸ್ತಕಗಳು ಬಂದಾಗ ಹಿಂದಿನ ಭ್ರಮೆಯೂ ವಿಚಾರಿಗಳಾದ ಓದುಗರಲ್ಲಿ ಉಳಿಯಲಿಲ್ಲ.

ಮಹಾಮೇರುವಿನಂತಹ ಕೈ-ಕೃತಿ 'ಸೂಳೆ'ಯ ಎದುರು ಈ ಕೃತಿಗಳು ಬೆಟ್ಟಗಳು ಕೂಡ ಆಗಿರಲಿಲ್ಲ, ತಿಪ್ಪೆಗುಂಡಿಗಳಾಗಿದ್ದುವು.

ಆ ಸಂಬಂಧವಾಗಿ ನಡೆದ ವಾದ-ವಿವಾದ ಹಲವಾರು ಬರೆಹಗಾರರ ವಿಚಾರ ಸರಣಿಯಮೇಲೆ ಪ್ರಭಾವ ಬೀರಿದ್ದು ಸ್ವಾಭಾವಿಕವೇ. ಹೊಸಬರು ಕೂಡ ವೇಶ್ಯಾ ಸಮಸ್ಯೆಯನ್ನೆತ್ತಿಕೊಳ್ಳತೊಡಗಿದರು.

ಆದರೆ ಈ ಸಂದರ್ಭದಲ್ಲಿ, ಪ್ರಗತಿ ದೃಷ್ಟಿಯ ಬಗ್ಗೆ ಆಸಕ್ತಿ ಹುಟ್ಟಿಸುವ ಹಾಗೆ ಬಸವರಾಜ ಕಟ್ಟೀಮನಿಯವರ 'ಬೀದಿಯಲ್ಲಿ ಬಿದ್ದವಳು' ಬಂತು. ಚಿತ್ರಗಳು ಮೈತುಂಬಿಕೊಳ್ಳಲು, ವಿಚಾರಗಳು ಪರಿಪುಷ್ಟವಾಗಲು, ಅವಕಾಶವೇ ಇಲ್ಲದಷ್ಟು ಸಣ್ಣಗಾತ್ರದಲ್ಲಿ ಈ ಕಥಾವಸ್ತು ಅಡಕವಾಗಿದ್ದರೂ, ಕಟ್ಟೀಮನಿಯವರ ಮಾನವೀಯ ದೃಷ್ಟಿ, ಆ ಕೃತಿಗೆ ಮಹತ್ವವನ್ನು ದೊರಕಿಸಿತು.

ಈಗ ಈ ಸರಮಾಲೆಯ ಇನ್ನೊಂದು 'ಬುಕೆ'ಯಾಗಿ ಗಾತ್ರದ ಹೊಸ ಪುಸ್ತಕ ಬಂದಿದೆ. 'ಮಸಣದ ಹೂ.'

ಮುಕ್ತಾಯಕ್ಕೆ ಮುಂಚೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿನ ಸೂಳೆಗಾರಿಕೆಯ ಬಗ್ಗೆ ಬರೆಯುವ ಯಾವ

ಲೇಖನವೂ 'ಮಸಣದ ಹೂ'ವಿನ ಬಗ್ಗೆ ಬರೆಯದೆ ಮುಕ್ತಾಯವಾಗುವುದು ಸಾಧ್ಯವಿಲ್ಲ.

ತ.ರಾ.ಸು. ಚೆನ್ನಾಗಿ ಬರೆಯುವ ಕನ್ನಡ ಬರೆಹಗಾರರಲ್ಲಿ ಒಬ್ಬರು. ಕೆಲವೊಮ್ಮೆ ಅವರು ಗೊಡ್ಡು ಸಂಪ್ರದಾಯವಾದಿಯಾಗಿಯೂ ಕೃತಿ ರಚಿಸಬಲ್ಲರು; ಕೆಲವೊಮ್ಮೆ ಪ್ರತಿಗಾಮಿಯೂ ಆಗಬಲ್ಲರು. ಅವರಲ್ಲಿ ಸುಸಂಬದ್ಧವಾದ ದೃಷ್ಟಿ ಇಲ್ಲ.

ಹೀಗಿದ್ದರೂ ಅವರ ಈ ಕೃತಿ, ಹೆಮ್ಮೆ ಪಡುವಂಥದಾಗಿದೆ. ಕಾಮಪ್ರಚೋದನೆಯ ಸಾಹಿತ್ಯದ ಬಗ್ಗೆ ನಡೆದಿರುವ ಚರ್ಚೆ ವಾದ-ವಿವಾದಗಳೆಲ್ಲ ಅವರ ಮೇಲೆ ಪರಿಣಾಮವನ್ನುಂಟುಮಾಡಿವೆ. ಅವರು ಓದಿರುವ ಕೆಲವು ಒಳ್ಳೆಯ ಇಂಗ್ಲಿಷ್ ಪುಸ್ತಕಗಳೂ ಅವರ ನೆರವಿಗೆ ಬಂದಿವೆ. ಇಂಗ್ಲಿಷ್ ಪುಸ್ತಕಗಳಿಂದ ದೊಡ್ಡಮಾತುಗಳನ್ನು ಉಲ್ಲೇಖಿಸುವ ಹವ್ಯಾಸ ಇವರಿಗೂ ಇದೆಯಾದರೂ ಆ ಉಲ್ಲೇಖಗಳನ್ನು ಗೌರವದಿಂದ ಕಂಡು ಅದರ ಒರೆಗಲ್ಲಿಗೆ ತೀಡಿದಾಗಲೂ ಕೃತಿ ಬಂಗಾರವಾಗಿಯೇ ಇರುವಂತೆ ಅವರು ಎಚ್ಚರ ವಹಿಸಿದ್ದಾರೆ. ಅವರು ಈ ಪುಸ್ತಕದ ರಚನೆಯಲ್ಲಿ ತೋರುವ ಮಾನವೀಯ ದೃಷ್ಟಿ, ಅವರ ಕೃತಿಯ ಹಿರಿಮೆಗೆ ಕಾರಣವಾಗಿದೆ.

ಕಾದಂಬರಿಯ ಬರವಣಿಗೆಯನ್ನು ನವತಂತ್ರದ ಯಂತ್ರದಲ್ಲಿ ಸಾಣೆ ಹಿಡಿಯಲು ತ.ರಾ.ಸು. ಯತ್ನಿಸಿರುವುದು ಅವರ ಕೃತಿ ಹೆಚ್ಚು ಪರಿಣಾಮಕಾರಿಯಾಗದೆ ಇರಲು ಕಾರಣವಾಗಿದೆ.

ಅದಲ್ಲದೆ, ಪ್ರತಿಪಾದಿಸುವ ಸೂತ್ರಗಳನ್ನು ಮನಗಾಣಿಸಿಕೊಡುವ ಆತುರದಲ್ಲಿ, ಕಾದಂಬರಿಯ ಸಮಗ್ರ ಕಲಾತ್ಮಕ ಸ್ವರೂಪಕ್ಕೂ ಕುಂದುಂಟಾಗಿದೆ.

ಅದೇನಿದ್ದರೂ, ವೇಶ್ಯಾಜೀವನದ ವಿವಿಧಮುಖಗಳನ್ನು ಜನಹಿತದ ತಿಳಿವಳಿಕೆಯ ದೃಷ್ಟಿಯಿಂದ ಚಿತ್ರಿಸುವುದರಲ್ಲಿ ತ.ರಾ.ಸು. ಇಲ್ಲಿ ಬಲು ಯಶಸ್ವಿಯಾಗಿದ್ದಾರೆ. ಅವರ ವಾದಗಳಲ್ಲಿ ಆಗಾಗ್ಗೆ ಕೃತ್ರಿಮತೆಯ ಅಪಸ್ವರ ಕಂಡುಬಂದರೂ ಕೃತಿಯನ್ನು ಒಟ್ಟಿನಲ್ಲಿ ತೂಗಿನೋಡುವಾಗ ತಕ್ಕಡಿಯ ಒಳಿತಿನ ತಟ್ಟೆಯೇ ಕೆಳಹೋಗುತ್ತದೆ.

"ಇಂಥ ಕಾದಂಬರಿಯನ್ನು ಬರೆಯುವಾಗ ರತಿಸಮಯ, ಅದಕ್ಕೆ ಸಂಬಂಧಿಸಿದ ಕೆಲವು ಮಾತುಗಳು, ಬರುವುದು ಅನಿವಾರ್ಯ. ಅಲ್ಲೂ ವಾಚ್ಯವಾಗಿ ಹೇಳುವುದನ್ನು ಸೂಚ್ಯವಾಗಿ ಹೇಳಲು ಯತ್ನಿಸಿದ್ದೇನೆ."

—ಇದು ಆ ಪುಸ್ತಕದ ಮುನ್ನುಡಿಯಲ್ಲಿ ಗ್ರಂಥಕರ್ತರು ಹೇಳಿಕೊಂಡಿರುವ ಒಂದು ಮಾತು. ಪುಸ್ತಕವನ್ನೋದುತ್ತ, ಮುನ್ನುಡಿಯಲ್ಲಿ ಹೇಳಿರುವುದು ಬಹುಮಟ್ಟಿಗೆ ಪ್ರಾಮಾಣಿಕವಾದ ಮಾತು—ಎಂಬುದನ್ನು ತಿಳಿಯುವಾಗ, ಓದುಗರಿಗೆ ಸಂತೋಷವಾಗದೆ ಇರದು.

ಇಷ್ಟು ಸಾಕೆ ?

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೂಳೆಗಾರಿಕೆಗೆ ಸಂಬಂಧಿಸಿದ ಕೃತಿಗಳ ಮೇಲೆಲ್ಲ ಕಣ್ಣೋಡಿಸಿ. ಆ ವೃತ್ತಿಯ ಬಗ್ಗೆ ಹೇರಳ ಸಾಹಿತ್ಯ ಬಂದಂತಾಯಿತಲ್ಲವೆ? ವೇಶ್ಯಾಜೀವನದ ನಿಜವಾದ ಹಾಗೂ ಕೃತಕವಾದ ಹಲವು ಮುಖಗಳನ್ನು ನಾವು ಕಂಡುದಾಯಿತಲ್ಲವೆ ?

ಇಂಥ ಸಾಹಿತ್ಯ ಬೇಕಾದಷ್ಟು ಬೇಡಾದಷ್ಟು ಸೃಷ್ಟಿಯಾಗಿರುವ ಈ ಅವಧಿಯಲ್ಲಿ ಇನ್ನು ಸ್ವಲ್ಪ ಕಾಲವಾದರೂ ಜೀವನದ ಬೇರೆ ಸಮಸ್ಯೆಗಳ ಬಗ್ಗೆ ಬರೆಹಗಾರರು ದೃಷ್ಟಿಹರಿಸುವರೆಂದು ನಿರೀಕ್ಷಿಸಬಹುದಲ್ಲವೆ ?

ಆದರ ಮೇಲೂ, ಸೂಳೆಗಾರಿಕೆಗೆ ಸಂಬಂಧಿಸಿಯೇ ಬರೆಯಬೇಕೆಂದು ಯಾರಾದರೂ ಇಚ್ಛಿಸಿದರೆ, ಅವಶ್ಯವಾಗಿ ಬರೆಯಲಿ. ಆದರೆ ಆಗ ಆ ಬರೆವಣಿಗೆಯನ್ನು ಅವರು ಸಮರ್ಥಿಸಿಕೊಳ್ಳಬೇಕಾದೀತು, ಅಷ್ಟೆ.

● 'ಚಿತ್ರಗುಪ್ತ'ದಿಂದ.

೧೯೫೩

ಪ್ರಗತಿವಾದದ ಬಗೆಗೆ ತಪ್ಪು ಕಲ್ಪನೆ

'ಪ್ರಗತಿವಾದ' ಎಂಬೊಂದು ಲೇಖನ ನವೆಂಬರ್ ೧೫ರ 'ಚಿತ್ರಗುಪ್ತ'ದಲ್ಲಿ ಪ್ರಕಟವಾಗಿದೆ. ಅದು ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರಾದ ಎಂ.ವಿ. ಸೀತಾರಾಮಯ್ಯನವರಿಂದ ಅನುವಾದಿತವಾದ ಲೇಖನ.

ಅದರ ಮೂಲವು ಅಕ್ಟೋಬರ್ ೧೧ನೇ ತಾರೀಕಿನ 'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದೊಂದು ಗ್ರಂಥವಿಮರ್ಶೆ. ಆ ವಿಮರ್ಶೆಯ ಅನುವಾದವನ್ನು ಕೊಡುತ್ತ ಅದಕ್ಕೊಂದು ಮುನ್ನುಡಿಯನ್ನು ಎಂ.ವಿ.ಸೀ.ಯವರು ಬರೆದಿದ್ದಾರೆ.

ಆ ಮುನ್ನುಡಿಯಲ್ಲಿ ಹೀಗಿದೆ: "ಸಾಹಿತ್ಯದಲ್ಲಿ 'ಪ್ರಗತಿವಾದ' ಎನ್ನುವುದು ಕನ್ನಡಕ್ಕೆ ಮಾತ್ರ ವಿಶಿಷ್ಟವಾದುದಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಉತ್ಥಾಪಿತವಾದ ಆ ವಾದ ಭಾರತಕ್ಕೂ ಪ್ರವೇಶಿಸಿ, ಬಹುಶಃ ಎಲ್ಲ ಪ್ರಮುಖ ಭಾರತೀಯ ಭಾಷಾಸಾಹಿತ್ಯಗಳಲ್ಲೂ ಪ್ರಚುರವಾಗಿದೆ. ಕನ್ನಡಿಗರಿಗೆ ಈ ವಾದದ ವಿಚಾರ ಹೊಸದಲ್ಲವಾದರೂ, ಈಚೆಗೆ 'ಪ್ರಗತಿಶೀಲ'ಪಂಥಿಗಳಲ್ಲೇ ಇಬ್ಬಣವಾಗಿ ವಾಗ್ಯುದ್ಧಗಳು ನಡೆದು, ಆ ವಾದದ ತಿರುಳೇನೆಂಬುದರ ಬಗ್ಗೆ ವಿಷಯಕುತೂಹಲಿಗಳು ಸಂದೇಹಗ್ರಸ್ತರಾಗುವುದು ಸಹಜ..."

ಇದಾದಬಳಿಕ 'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ವಿಮರ್ಶೆಯಿದೆ.

ಕನ್ನಡದಲ್ಲಿ ಹತ್ತು ವರ್ಷಗಳಿಗೆ ಹಿಂದೆ ಪ್ರಗತಿವಾದವು ತಲೆ ಎತ್ತಿದಾಗ ಅದನ್ನು ಪ್ರಬಲವಾಗಿ ವಿರೋಧಿಸಿದ ಕೆಲವರು ಪ್ರಮುಖ ಸಾಹಿತಿಗಳಲ್ಲಿ ಎಂ.ವಿ. ಸೀ.ಯವರು ಒಬ್ಬರು. ಆದರೂ ನಿಜವಾದ ಪ್ರಗತಿವಾದವೆಂದರೇನೆಂಬುದನ್ನು ತಿಳಿದುಕೊಳ್ಳುವ ಯತ್ನವನ್ನು ಅವರು ಬಿಟ್ಟುಕೊಟ್ಟುದಿಲ್ಲ. ಪೂರ್ವನಿಶ್ಚಿತ ಅಭಿಪ್ರಾಯಗಳಿಂದ ಪೂರ್ತಿ ಬಾಧಿತರಾಗದೇ ವಿಷಯ ಪರಿಶೀಲನ ಮಾಡುವ ಸಾಮರ್ಥ್ಯವೂ ಅವರಿಗುಂಟು. ಅದಕ್ಕೆ ಸ್ವಲ್ಪ ಸಮಯದ ಹಿಂದೆ 'ರಾಷ್ಟ್ರಬಂಧು'ವಿನ ಬೆಳ್ಳಿಯ ಹಬ್ಬದ ಸಂಚಿಕೆಯಲ್ಲಿ, ಕಳೆದ ಇಪ್ಪತ್ತೈದು ವರ್ಷಗಳ ಕನ್ನಡಸಾಹಿತ್ಯವನ್ನು ಅವಲೋಕಿಸಿದ ಅವರ ಲೇಖನವೇ ಸಾಕ್ಷಿ. ಈಗಲಾದರೂ ಜಾಗೃತರಾಗಿಯೆ ಇದ್ದು ಪ್ರಗತಿವಾದದ ಬಗೆಗೆ ಅನ್ಯಭಾಷೆಯ ಪತ್ರಿಕೆಯೊಂದರಲ್ಲಿ ಬಂದ ವಿಮರ್ಶೆಯನ್ನು ಗಮನಿಸಿ, ಅದನ್ನು ಕನ್ನಡಕ್ಕೆ ಅನುವಾದಿಸಿ

ಸಾಹಿತ್ಯದಲ್ಲಿ ಆಸಕ್ತಿಯುಳ್ಳವರಿಗೆಲ್ಲ ತಿಳಿಯಲೆಂದು ವಾರಪತ್ರಿಕೆಯಲ್ಲಿ ಪ್ರಕಟಿಸಿರುವುದು ಅವರ ಸಮಯಪ್ರಜ್ಞೆಯನ್ನು ತೋರಿಸುತ್ತದೆ. ಇದು ಶ್ಲಾಘನೀಯವೆ ಸರಿ.

ಆದರೆ, ಅವರು ಅನುವಾದಿಸಿರುವ ವಿಮರ್ಶೆಯೂ ಅದಕ್ಕೆ ಮುನ್ನುಡಿಯಾಗಿ ಅವರು ಬರೆದಿರುವ ಮಾತುಗಳೂ ವಿವಾದಾಸ್ಪದವಾಗಿವೆ.

ಇಬ್ಬಣ-ವಾಗ್ಯುದ್ಧ

"ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಉತ್ಥಾಪಿತವಾದ ಪ್ರಗತಿವಾದ ಭಾರತಕ್ಕೂ ಪ್ರವೇಶಿಸಿ..."

—ಈ ರೀತಿ ಒಂದು ವಿಚಾರಸರಣಿಯನ್ನು ವಿದೇಶೀಯವೆಂದು ಕರೆದು ಅದರ ಬಗೆಗೆ ಅನಾದರವನ್ನುಂಟುಮಾಡಲು ಯತ್ನಿಸುವುದು ವಿಷಾದಕರ. ತತ್ವಜ್ಞಾನಿ ರಾಧಾಕೃಷ್ಣನ್ ಹೇಳಿರುವಂತೆ, ಯಾವುದೇ ಒಂದು ವಿಚಾರವನ್ನು ವಿದೇಶೀಯವೆಂಬ ಕಾರಣದಿಂದ ಪ್ರತಿಭಟಿಸುವುದು ಮೂರ್ಖ ಅಭಿಮಾನ. ಪಶ್ಚಿಮದ ಪ್ರತಿಭೆಯನ್ನು ಮೆಚ್ಚಿಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ ಅದರ ಅಂಧಾನುಕರಣೆಯನ್ನು ಮಾತ್ರ ಮಾಡಕೂಡದು. ನಾವೇನನ್ನು ಸ್ವೀಕರಿಸಿದರೂ ಅದು ಗೊಬ್ಬರವಾಗಿ ನಮ್ಮ ಮಣ್ಣಿನೊಡನೆಯೇ ಬೆರೆಯಬೇಕು. ಬೀಜ ನಮ್ಮದೇ ; ಬಿತ್ತುವವರು ನಾವೇ ; ಗಿಡ ಬೆಳೆಸುವವರೂ ನಾವೇ.

"ಕನ್ನಡಿಗರಿಗೆ ಈ ವಾದದ ವಿಚಾರ ಹೊಸದಲ್ಲವಾದರೂ, ಈಚೆಗೆ 'ಪ್ರಗತಿಶೀಲ' ಪಂಥಿಗಳಲ್ಲೇ ಇಬ್ಬಣವಾಗಿ ವಾಗ್ಯುದ್ಧಗಳು ನಡೆದು..."

—ಕನ್ನಡ ಸಾಹಿತ್ಯದ ಪ್ರಗತಿಶೀಲರಲ್ಲಿ ಇಬ್ಬಣಗಳೂ ಆಗಿಲ್ಲ; ವಾಗ್ಯುದ್ಧಗಳೂ ನಡೆದಿಲ್ಲ. ಪ್ರಗತಿಶೀಲರು ಪರಸ್ಪರ ಟೀಕೆವಿಮರ್ಶೆಗಳನ್ನು ಮಾಡಿದ್ದುಂಟು, ಮಾಡುವುದೂ ಉಂಟು. ಪ್ರಗತಿಶೀಲಸಾಹಿತ್ಯದ ಬಗೆಗೆ ಯಾವುದು ಸರಿಯಾದ ಕಲ್ಪನೆ ಎಂಬ ವಿಷಯ ಚರ್ಚಿಸಲ್ಪಟ್ಟುದೂ ಉಂಟು. ೧೯೫೨ರ ಜೂನ್ ತಿಂಗಳಲ್ಲಿ ಹಿರಿಯೂರಿನಲ್ಲಿ ಜರುಗಿದ ಕೆಲವರು ಕನ್ನಡ ಬರೆಹಗಾರರ ಪ್ರಗತಿ ಸಮ್ಮೇಳನದಿಂದ ಆರಂಭವಾಗಿ, ಈ ವರ್ಷ ಫೆಬ್ರುವರಿಯಲ್ಲಿ ಜರುಗಿದ ಅಖಿಲ ಭಾರತ ಪ್ರಗತಿಶೀಲ ಬರೆಹಗಾರರ ಸಮ್ಮೇಳನದ ತನಕ ಪ್ರಗತಿವಾದವನ್ನು ಕುರಿತು ಕನ್ನಡದಲ್ಲಿ ಚರ್ಚೆಯಾದುದು ನಿಜ. ಆದರೆ ಅದನ್ನು 'ಇಬ್ಬಣ', 'ವಾಗ್ಯುದ್ಧ' ಎಂಬ ಪದ ಪ್ರಯೋಗಗಳಿಂದ ವರ್ಣಿಸುವುದು ಸರಿಯಲ್ಲ.

ವಿಮರ್ಶೆಯ ವಿಮರ್ಶೆ

'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ವಿಮರ್ಶೆ, ಹಿಂದೀ ಭಾಷೆಯಲ್ಲಿ ಪ್ರಕಟವಾಗಿರುವ 'ಪ್ರಗತಿವಾದ್-ಕಿ-ರೂಪರೇಖಾ' ಎಂಬ ಪುಸ್ತಕವನ್ನು ಕುರಿತಾದುದು.

ಆ ಪುಸ್ತಕವನ್ನು ಬರೆದವರು ಮನ್ಮಥನಾಥ ಗುಪ್ತ ಎಂಬ ಹಿಂದೀ ಬರೆಹಗಾರರು. ಅವರು ಪ್ರಗತಿಶೀಲ ಪಂಥದವರೆಂದು ಹೇಳಲಾಗಿದೆ.

ಹೀಗೆ, ಪ್ರಗತಿಶೀಲರೆಂದು ಕರೆದುಕೊಂಡ ಇಬ್ಬರು ಪ್ರಗತಿವಾದದ ಬಗ್ಗೆ ಬರೆದುದನ್ನು 'ಹಿಂದೂ' ಪತ್ರಿಕೆಯಲ್ಲಿ ವಿಮರ್ಶೆಮಾಡಿದ್ದಾರೆ. ಆ ಪುಸ್ತಕದಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳನ್ನು ಉಲ್ಲೇಖಿಸಿ ಅವುಗಳನ್ನು ವಿಮರ್ಶೆಯ ಒರೆಗಲ್ಲಿಗೆ ತೀಡಿನೋಡಿದ್ದಾರೆ.

ಆ ಗ್ರಂಥಕರ್ತರ ಅಭಿಪ್ರಾಯಗಳನ್ನು ಪರಾಂಬರಿಸುವುದು ಅಗತ್ಯ. ಆ ವಿಮರ್ಶೆಯನ್ನು ವಿಮರ್ಶಿಸುವುದಗತ್ಯ.

ತಪ್ಪುಕಲ್ಪನೆ

ಮನ್ಮಥನಾಥ ಗುಪ್ತರ ಅಭಿಪ್ರಾಯಗಳು ಯಾವುವು, ವಿಮರ್ಶಕರ ಅಭಿಪ್ರಾಯಗಳು ಯಾವುವು, ಎಂದು ಪ್ರತ್ಯೇಕಿಸುವುದು ಇಲ್ಲಿ ಕಷ್ಟವಾಗಿದೆ.

ಆದರೂ ಪ್ರಗತಿವಾದದ ಬಗೆಗೆ ಈ ವಿಮರ್ಶೆಯಲ್ಲಿ ಮೂಡಿಬರುವ ಕಲ್ಪನೆಗಳನ್ನು ಹೀಗೆ ಮಂಡಿಸಬಹುದು:

೧. ಪ್ರಗತಿವಾದವು ಮುಖ್ಯವಾಗಿ ಡಾರ್ವಿನ್ ಮತ್ತು ಮಾರ್ಕ್ಸ್ ಮಹಾಶಯರ ದರ್ಶನ ಸಿದ್ಧಾಂತಗಳ ಪ್ರಭಾವಕ್ಕೆ ಒಳಗಾಗಿದೆ;ವರ್ಗಕಲಹವನ್ನು ಪ್ರವೃದ್ಧಿಗೊಳಿಸುವ ಮೂಲಕ ಬಂಡವಾಳಪದ್ಧತಿಯನ್ನು ನಿರ್ಮೂಲಗೊಳಿಸಿ, ಕಮ್ಯೂನಿಸಂ ತತ್ತ್ವಾನುಸಾರಿ ಯಾದ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಿ, ದೀನದಲಿತ ಮತ್ತು ಶ್ರಮಜೀವಿ ವರ್ಗ ಗಳನ್ನು ಉದ್ಧಾರಮಾಡುವುದೇ ಅದರ ಮುಖ್ಯ ಉದ್ದೇಶ.

೨. ಪ್ರಗತಿವಾದಿ ಲೇಖಕರು ದೇವರ ಹಾಗೂ ಇತರ ಯಾವುದೇ ಬಗೆಯ ಪ್ರಕೃತ್ಯತೀತ ಶಕ್ತಿಯ ಅಸ್ತಿತ್ವವನ್ನು ನಿರಾಕರಿಸುತ್ತಾರೆ.

೩. ಪ್ರಗತಿಶೀಲರು ಭಾರತೀಯ ಸಂಸ್ಕೃತಿಯನ್ನು ಮರಣೋನ್ಮುಖವಾದ ಶವರೂಪದ ಭಾರತೀಯ ಸಂಸ್ಕೃತಿ ಎನ್ನುತ್ತಾರೆ; ಪ್ರಾಚೀನವಾದದ್ದರ ಬಗ್ಗೆ ತೋರುವ ಭಕ್ತಿಗೌರವಗಳನ್ನು ಪ್ರಗತಿವಿರುದ್ಧವೆಂದು ಎಣಿಸುವುದಲ್ಲದೆ, ಪ್ರಾಚೀನ ಸಂಬಂಧವೆಲ್ಲವನ್ನೂ ಸಂಪೂರ್ಣವಾಗಿ ಕಡಿದುಹಾಕಿಕೊಳ್ಳಬೇಕೆಂದು ವಾದಿಸುತ್ತಾರೆ.

೪. ಪ್ರಗತಿವಾದಿಗಳು ಹೊಸಮತ-ತತ್ತ್ವವೊಂದನ್ನು ಸೃಷ್ಟಿಮಾಡಿದ್ದಾರೆ; ಅದು ಯುರೋಪಿನ ಕಮ್ಯೂನಿಸಂ ತತ್ತ್ವ.

ಇವಿಷ್ಟೂ ತಪ್ಪು ಕಲ್ಪನೆಗಳೆಂದು ಹೇಳದೆ ಅನ್ಯಗತಿ ಇಲ್ಲ.

ಪ್ರಗತಿವಾದದ ಬಗೆಗೆ ಬೆಳಕು ತೋರಬೇಕೆಂಬ ಉದ್ದೇಶದಿಂದ ಎಂ.ವಿ.ಸೀ. ಯವರು ಈ ವಿಮರ್ಶೆಯನ್ನು ಅನುವಾದಿಸಿದರೆಂಬುದು ನಿಸ್ಸಂದೇಹವಾಗಿದೆ. ಹಾಗೆ

ಮಾಡಹೊರಟವರು ಆರೋ ಒಬ್ಬರು ಬರೆದ ಒಂದು ಪುಸ್ತಕವನ್ನು (ಅದರ ವಿಮರ್ಶೆಯನ್ನು) ಆಧಾರವಾಗಿ ಇಟ್ಟುಕೊಳ್ಳುವುದರ ಬದಲು, ಭಾರತದ ಪ್ರಗತಿಶೀಲ ಬರೆಹಗಾರರ ಸಮ್ಮೇಳನವೊಂದು ಇತ್ತೀಚೆಗೆ ಪ್ರಗತಿವಾದಕ್ಕೆ ಕೊಟ್ಟ ರೂಪುರೇಖೆಗಳ ಸ್ಪಷ್ಟಚಿತ್ರಣವನ್ನೇ ಆಧಾರವಾಗಿಟ್ಟು ವಿಮರ್ಶಿಸಬೇಕಾಗಿತ್ತು. ಫೆಬ್ರುವರಿಯಲ್ಲಾದ ಅಖಿಲ ಭಾರತ ಪ್ರಗತಿಶೀಲ ಬರೆಹಗಾರರ ಸಮ್ಮೇಳನದಲ್ಲಿ ಸ್ವೀಕೃತವಾದ ಘೋಷಣೆಯನ್ನು ಪರಾಮರ್ಶಿಸದೆ, ಪ್ರಗತಿವಾದವನ್ನು ಸೂಕ್ಷ್ಮವಾಗಿ ನಿಂದಿಸುವ ಒಂದು ವಿಮರ್ಶೆಯನ್ನು ಎತ್ತಿಹಿಡಿದುದು ಪರಮ ಅನ್ಯಾಯ.

ಮಾರ್ಕ್ಸ್‌ವಾದಿಗಳು, ಕಮ್ಯೂನಿಸ್ಟರು, ನಾಸ್ತಿಕರು, ಅಶ್ಲೀಲಸಾಹಿತ್ಯವನ್ನು ಸೃಷ್ಟಿಸುವವರು—ಎಂಬ ಅಪಪ್ರಚಾರ ಹೊಸತಲ್ಲ. ಮಾರ್ಕ್ಸ್‌ವಾದಿಗಳಿರಲಿ ಗಾಂಧಿವಾದಿಗಳಿರಲಿ, ನಾಸ್ತಿಕರಿರಲಿ, ಆಸ್ತಿಕರಿರಲಿ, ಶುಭ್ರವಾದ ಮಾನವೀಯ ದೃಷ್ಟಿಯಿಂದ, ಬದುಕಿನಲ್ಲಿ ಶ್ರದ್ಧೆ-ನಂಬುಗೆಯನ್ನು ಪ್ರತಿಪಾದಿಸುವುದರಿಂದ ಚಿರಂತನವಾದ ಆಶಾವಾದದಿಂದ, ಎಲ್ಲರೂ ಪ್ರಗತಿವಾದಿಗಳಾಗಬಲ್ಲರು.

ಸ್ಪಷ್ಟೀಕರಣ-ಘೋಷಣೆ

ಎಂ.ವಿ.ಸೀ.ಯವರು ಅನುವಾದಿಸಿರುವ ವಿಮರ್ಶೆಯಿಂದ, ಪ್ರಗತಿವಾದದ ಬಗೆಗೆ ಆಗುವ ತಪ್ಪುಕಲ್ಪನೆಯನ್ನು ಹೋಗಲಾಡಿಸುವುದು ಅಗತ್ಯ. ಅದನ್ನು ಸಾಧಿಸಲು ಭಾರತದ ಪ್ರಗತಿವಾದಿಗಳ ಘೋಷಣೆಯನ್ನು ಉಲ್ಲೇಖಿಸುವುದೇ ಸರಿಯಾದ ಮಾರ್ಗ. ಪ್ರಗತಿಶೀಲ ಸಾಹಿತ್ಯದ ಲಕ್ಷಣಗಳೇನು ? ಪ್ರಗತಿಶೀಲಸಾಹಿತಿಗಳ ಧ್ಯೇಯಗಳೇನು? ಅವರ ಗುರಿಯೇನು? ಎಂಬುದೆಲ್ಲವೂ ಈ ಘೋಷಣೆಯಲ್ಲಿ ಸ್ಪಷ್ಟವಾಗಿವೆ. ಘೋಷಣೆ—

"೧. ಭಾರತದ ಜನರು, ತಮ್ಮ ಕಲೆ ಮತ್ತು ಸಾಹಿತ್ಯ ತಮ್ಮ ರಾಷ್ಟ್ರೀಯ ಪರಂಪರೆಗಳಿಗೆ ಅನುಸಾರವಾಗಿ ಅಭಿವೃದ್ಧಿ ಹೊಂದಬೇಕೆಂದು ಬಯಸುತ್ತಾರೆ. ಎಲ್ಲ ದೇಶಪ್ರೇಮಿಸಾಹಿತಿಗಳೂ ಕಲಾವಿದರೂ ಜನತೆಯ ಈ ನ್ಯಾಯವಾದ ಹೆಬ್ಬಯಕೆಯನ್ನು ತೃಪ್ತಿಗೊಳಿಸಲು ಪ್ರಯತ್ನಿಸುತ್ತಾರೆ. ತಮ್ಮ ಸಾಂಸ್ಕೃತಿಕ ಪರಂಪರೆಯ ವಿಷಯದಲ್ಲಿ ಅವರು ಹೆಮ್ಮೆಪಡುತ್ತಾರೆ. ಆ ಪರಂಪರೆಯಲ್ಲಿ ಸುಂದರವಾದುದೆಲ್ಲವನ್ನೂ ಹಿರಿದಾದುದೆಲ್ಲವನ್ನೂ ತಮ್ಮ ಸೃಷ್ಟ್ಯಾತ್ಮಕ ಪ್ರಯತ್ನಗಳಿಂದ ಮುಂದುವರಿಸಲು ಅವರು ಇಷ್ಟಪಡುತ್ತಾರೆ. ಅದರಲ್ಲಿ ಸುಳ್ಳಾದುದೆಲ್ಲವನ್ನೂ ಅವನತಿಯದೆಲ್ಲವನ್ನೂ ತೊಡೆದುಹಾಕಲು ಅವರು ಆಶಿಸುತ್ತಾರೆ.

೨. ನಮ್ಮ ಜನತೆಯು ತಮ್ಮ ಸಲುವಾಗಿ ಸ್ವತಂತ್ರವಾದ, ಸಮೃದ್ಧವಾದ ಜೀವನವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಪ್ರಪಂಚದ ಎಲ್ಲ ಜನಾಂಗ

ಗಳೊಡನೆಯೂ ಅವರು ಶಾಂತಿಯುತ ಮತ್ತು ಸ್ನೇಹಮಯ ಸಂಬಂಧದೊಂದಿಗೆ ಬಾಳಬಯಸುತ್ತಾರೆ.

೩. ನಮ್ಮ ಸಾಹಿತ್ಯವು ಮಾನವೀಯ ಭಾವನೆಯಿಂದ ತುಂಬಿರಬೇಕು; ಜೀವನದಲ್ಲಿ ಶ್ರದ್ಧೆಯನ್ನೂ ಉಜ್ವಲಭವಿಷ್ಯತ್ತಿನಲ್ಲಿ ಭರವಸೆಯನ್ನೂ ಹೊಂದಿರಬೇಕು.

೪. ಮಾನವನ ಸೃಷ್ಟ್ಯಾತ್ಮಕ ಶಕ್ತಿಯ ಬಗ್ಗೆ ತಿರಸ್ಕಾರ, ಒಂದು ಕುಲ ಅಥವಾ ಜನಾಂಗದ ಮೇಲೆ ಮತ್ತೊಂದರ ಅಧಿಕಾರ, ಜಾತಿ ಮತ್ತು ಮತೀಯ ದ್ವೇಷ—ಇವು ನಮ್ಮ ಜನತೆಯ ಹಿತಕರವಾದ ಪರಂಪರೆಗೆ ದೂರವಾಗಿವೆ. ಧ್ಯೇಯರಹಿತ ಜೀವನ, ಮೂಢನಂಬಿಕೆ, ನಿರಾಶೆ ಮತ್ತು ವಿಧಿವಾದ—ಇವು ನಮ್ಮ ಬೆಳವಣಿಗೆಯನ್ನು ತಡೆಯುತ್ತವೆ.

೫. ಅಶ್ಲೀಲತೆಯ, ಕಾಮಪ್ರಚೋದನೆಯ, ಕೊಲೆಸುಲಿಗೆಯ ಸಾಹಿತ್ಯವನ್ನು ನಾವು ವಿರೋಧಿಸುತ್ತೇವೆ.

೬. ನಮ್ಮ ಸಾಹಿತ್ಯವು ಕಲಾತ್ಮಕವಾಗಿಯೂ ಸುಂದರವಾಗಿಯೂ ಇರಬೇಕು; ಅದರ ಸ್ವರೂಪವು ರಾಷ್ಟ್ರೀಯವಾಗಿಯೂ ಜನಪ್ರಿಯವಾಗಿಯೂ ಇರಬೇಕು; ನಮ್ಮ ದೇಶದ ಎಲ್ಲ ಭಾಷೆಗಳಲ್ಲಿಯೂ ಸಾಹಿತ್ಯವು ವಿಕಾಸಗೊಳ್ಳಲು ಪೂರ್ಣ ಅನುಕೂಲತೆಗಳಿರಬೇಕು—ಎಂದು ನಾವು ಆಶಿಸುತ್ತೇವೆ.

೭. ನಮ್ಮ ಸಾಹಿತಿಗಳು ಜನತೆಯ ಸೇವೆಯಲ್ಲಿ ಒಂದುಗೂಡಬೇಕೆಂದೂ ಸುಖಮಯ ಸಮೃದ್ಧ ಜೀವನದ ಕಡೆಗೆ ಮುನ್ನಡೆಯುವಂತೆ ಜನತೆಯನ್ನು ತಮ್ಮ ಸೃಷ್ಟ್ಯಾತ್ಮಕ ಕೃತಿಗಳ ಮೂಲಕ ಪ್ರೇರೇಪಿಸಬೇಕೆಂದೂ ನಾವು ಕರೆಕೊಡುತ್ತೇವೆ.

ಎಂ.ವಿ.ಸೀ.ಯವರು ಅನುವಾದಿಸಿ ಕನ್ನಡದಲ್ಲಿ ಪ್ರಕಟಿಸಿದ 'ವಿಮರ್ಶೆ' ಯಿಂದ ಪ್ರಗತಿವಾದದ ಬಗೆಗೆ ಕನ್ನಡ ಓದುಗರಲ್ಲಿ ಉಂಟಾಗಿರಬಹುದಾದ ತಪ್ಪುಕಲ್ಪನೆಯ ಬದಲು, ಸರಿಯಾದ ತಿಳಿವಳಿಕೆ ಮೂಡಲು ಪ್ರಗತಿಶೀಲರ ಈ ಘೋಷಣೆ ನೆರವಾಗುವುದರಲ್ಲಿ ಸಂದೇಹವಿಲ್ಲ.

- ಪ್ರಕಟಣೆ 'ಚಿತ್ರಗುಪ್ತ'ದಲ್ಲಿ. ಈ ಲೇಖನಕ್ಕೆ ಎಂ.ವಿ.ಸೀ. ವ್ಯಕ್ತಪಡಿಸಿದ ಪ್ರತಿಕ್ರಿಯೆ ಈ ಪುಸ್ತಕದ ಕೊನೆಯಲ್ಲಿ ಅನುಬಂಧ ರೂಪದಲ್ಲಿ ಅಚ್ಚಾಗಿದೆ.

ವಸ್ತು ಇಲ್ಲದ ಕೃತಿ

ಕೆಲವು ವರ್ಷಗಳ ಹಿಂದೆ ವಯಸ್ಸಾದ ಸದ್ಗೃಹಸ್ತರೊಬ್ಬರು, ಆಗಲೇ ಕನ್ನಡನಾಡನಲ್ಲಿ ಪ್ರಖ್ಯಾತರಾಗಿದ್ದ ಒಬ್ಬ ಸಾಹಿತಿಯನ್ನು ಸಂಧಿಸಿದರು.

ವೈಯಕ್ತಿಕ ಸುಖದುಃಖ ವಿಚಾರಿಸಹೊರಟು ಅವರು ಕೇಳಿದರು :

"ಏನ್ಮಾಡ್ಕೊಂಡಿದೀಯಪ್ಪಾ?"

"ಹೀಗೇ ಬರೀತಾ ಇದೀನಿ."

"ಅದ್ಸರೀನಪ್ಪಾ. ಆದರೆ ಉದ್ಯೋಗ?"

ಬರೆಯುತ್ತಿರಬಹುದು, ಆದರೆ ಜೀವನ ನಿರ್ವಹಣಕ್ಕೆ ಮಾತ್ರ ಬೇರೆ ಉದ್ಯೋಗ ಬೇಕು—ಎಂಬುದು ಅವರ ಅಭಿಪ್ರಾಯವಾಗಿತ್ತು.

ಆ ಒಬ್ಬರ ಅಭಿಪ್ರಾಯವಲ್ಲ ; ವಸ್ತುಸ್ಥಿತಿಯೇ ಹಾಗಿತ್ತು ಆಗ. ಸ್ವಂತದ ಮನೆ ಇದ್ದು, ಬೇಕಷ್ಟು ಅಕ್ಕಿ ಬರುವ ಹೊಲವಿದ್ದರೆ ಮಾತ್ರ, ಬೇರೆ ಉದ್ಯೋಗವಿಲ್ಲದೆ ಯಾರಾದರೂ ಸಾಹಿತ್ಯ ಸೇವೆಯಲ್ಲಿ ನಿರತರಾಗುತ್ತಿದ್ದರು.

ಆದರೆ ಆರಂಭದಲ್ಲೇ ಸೂಚಿಸಿದಂತೆ, ಅದು ಕೆಲವು ವರ್ಷಗಳಿಗೆ ಹಿಂದಿನ ಮಾತು.

ಇಂದು ಪರಿಸ್ಥಿತಿ ಬದಲಾಯಿಸಿದೆ. ಬರೆವಣಿಗೆಯೊಂದನ್ನೇ ಜೀವನ ನಿರ್ವಹಣಕ್ಕಾಗಿ ಅವಲಂಬಿಸಿರುವ ಮೂವರು ನಾಲ್ವರಾದರೂ ಕನ್ನಡದಲ್ಲಿ ಸಿಗುತ್ತಾರೆ. ಒಬ್ಬಿಬ್ಬರು ಆದಾಯತೆರಿಗೆ ಕೊಡುವ ಮಟ್ಟಕ್ಕೂ ಬಂದಿದ್ದಾರೆ. ಬೇರೆ ಉದ್ಯೋಗದ ಜತೆಯಲ್ಲೇ ಸಂಪಾದನೆಯ ಉಪಮಾರ್ಗವಾಗಿ ಬರೆವಣಿಗೆಯನ್ನು ಅವಲಂಬಿಸಿರುವವರೂ ಹಲವರಿದ್ದಾರೆ.

ಕೈ ಹೊತ್ತಿಗೆಗಳು ಕನ್ನಡದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದಮೇಲೆ ಪರಿಸ್ಥಿತಿ—ಕನ್ನಡದ ಕೆಲ ಬರೆಹಗಾರರ ಪರಿಸ್ಥಿತಿ—ಬಹಳ ಮಟ್ಟಿಗೆ ಸುಧಾರಿಸಿದೆ.

ಆದರೆ ಇಲ್ಲಿ ಪ್ರತಿಯೊಬ್ಬರೂ ಗಮನಿಸಬೇಕಾದ ಒಂದು ಮುಖ್ಯ ಅಂಶವಿದೆ. ಅದು, ಇಂತಹ ಬದಲಾವಣೆಗಾಗಿ ಬರೆಹಗಾರರು ತೆರುತ್ತಿರುವ ಬೆಲೆ.

ಇದು ಎಂತಹ ಬೆಲೆ ಎಂಬುದನ್ನು ತಿಳಿಯಲು ವಿಚಾರಮತಿಗಳಾದ ಓದುಗರ ಮಾತುಗಳಿಗೆ ನಾವು ಕಿವಿ ಕೊಡಬೇಕು.

"ಬರುಬರುತ್ತಾ ರಾಯರ ಕುದುರೆ ಕತ್ತೆಯಾಯ್ತು ಎನ್ನುವ ಗಾದೆಯ ಹಾಗೆ !"

"ಅದೇ ಪ್ರತೀಕ, ಅದೇ ಉಪಮೆ ಅದೇ ದೃಶ್ಯ!"

"ಇದು ಚರ್ವಿತಚರ್ವಣ. ಹಿಂದಿನ ವಸ್ತುವನ್ನೇ ಇಲ್ಲಿ ಮತ್ತೆ ಮೆಲಕು ಹಾಕಿದ್ದಾರೆ."

"ಅಯ್ಯೊ ಇವರೂ ಅದೇ ವಿಷಯ ಬರೆದರಲ್ಲ!"

ಈ ಎಲ್ಲ ಮಾತುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ. ಕೆಲ ಬರೆಹಗಾರರು ಒಂದರಮೇಲೊಂದಾಗಿ ಅವಿರಾಮವಾಗಿ ಕೃತಿ ರಚಿಸುವುದು ನಿಜ. ಆತುರದ ಸೃಷ್ಟಿಯ ಫಲವಾಗಿ ಕಲಾವಂತಿಕೆಗೆ ಸ್ವಲ್ಪಮಟ್ಟಿಗೆ ಧಕ್ಕೆಯೊದಗುವುದೂ ಸ್ವಾಭಾವಿಕ.

ಆದರೆ ಯಾವನೇ ಬರೆಹಗಾರನಿಂದ ವಸ್ತುವಿನ ಚರ್ವಿತಚರ್ವಣ ಯಾಕೆ ಆಗಬೇಕು? ವಸ್ತುವಿನ ಅಭಾವದಿಂದ ಬರೆಹಗಾರ ಬವಣೆಪಡುತ್ತಿರುವಂತೆ ಓದುಗನಿಗೆ ಯಾಕೆ ಭಾಸವಾಗಬೇಕು?

* * *

ವಸ್ತುವಿನ ಪ್ರಶ್ನೆ, ಕನ್ನಡಸಾಹಿತ್ಯಸೃಷ್ಟಿಯನ್ನು ಕಾಲುಶತಮಾನದಮಟ್ಟಿಗೆ ಒಮ್ಮೆಲೆ ಮಂದಕ್ಕೆ ತಳ್ಳಿದ ಕೈಹೊತ್ತಿಗೆಗಳ ಅವತಾರವಲ್ಲದೇ ಇದ್ದರೂ, ಉದ್ಭವಿಸದೆ ಇರುತ್ತಿರಲಿಲ್ಲ. ಒಬ್ಬನೇ ಕರ್ತೃವಿನಿಂದ ಹೆಚ್ಚು ಕೃತಿಗಳು ಬಂದಂತೆ ವಸ್ತು ಸಮಸ್ಯೆ ಆತನನ್ನು ಕಾಡುವುದು ಸಹಜ.

"ಈ ರೀತಿ ಬರೆಯುತ್ತಹೋದರೆ ನಾಳೆ ಇವರಿಗೆ ವಸ್ತು ದೊರೆಯದೇ ಹೋಗಬಹುದು."

ಇದು ಕೇಳಿಬರುತ್ತಿರುವ ಶಂಕೆಯ ಸ್ವರ.

ಇದು ನಿಜವೆ ?

ಇದು ನಿಜವೂ ಹೌದು; ಸುಳ್ಳೂ ಹೌದು.

ಕೆಲ ಬರೆಹಗಾರರ ಮಟ್ಟಿಗೆ ನಿಜ; ಕೆಲ ಬರೆಹಗಾರರ ಮಟ್ಟಿಗೆ ಸುಳ್ಳು. ಬರೆಯುವವನಿಗೆ ಅಪಾರವಾದ ಪ್ರತ್ಯಕ್ಷ ಅನುಭವಬೇಕು. ಇನ್ನೊಬ್ಬರ ಇನ್ನೊಂದು ಭಾಷೆಯ—ಕೃತಿಗಳನ್ನೋದಿ ಪಡೆಯುವಂಥಾದ್ದು ಎರವಲು ಅನುಭವ. ಅದಕ್ಕೆ ಕಡಿಮೆ ಬೆಲೆ. ಬರೆಹಗಾರ ಸಂಚಾರಮಾಡಬೇಕು. ಬದುಕಿನ ಸಹಸ್ರಮುಖಗಳನ್ನು ಪರಿಚಯಮಾಡಿಕೊಳ್ಳಬೇಕು. ಅನುಭವಿಸುವುದು ದುಸ್ಸಾಧ್ಯವಾದಕಡೆ, ಸೂಕ್ಷ್ಮನಿರೀಕ್ಷಣೆಯ ಹಿರಿಯ ಗುಣದಿಂದ ಆ ನಷ್ಟವನ್ನು ತುಂಬಿಕೊಳ್ಳಬೇಕು. ಜನರ ಮಾತುಗಳಿಗೆ ಕಿವಿಗೊಡಬೇಕು. ಅವರ ಚಲನವಲನವನ್ನು ಬಲುಸೂಕ್ಷ್ಮವಾಗಿ ಪರಿಶೀಲಿಸಬೇಕು. ಸಮಾಜದಲ್ಲಿ, ಜಗತ್ತಿನಲ್ಲಿ, ಆಗುತ್ತಿರುವ ಪರಿವರ್ತನೆಯನ್ನು ಅವಲೋಕಿಸಿ, ಅದರ

ಸಾಮಾನ್ಯ ನಿಯಮಗಳನ್ನು ಗೊತ್ತುಹಚ್ಚಬೇಕು. ಹೊಸ ಇತಿಹಾಸ ಬರೆಯುತ್ತಿರುವ ಜನರನ್ನು ಗಮನಿಸಬೇಕು. ಆ ಇತಿಹಾಸ ಬರೆಯುವುದರಲ್ಲಿ ಸ್ವತಃ ಪಾಲುಗೊಳ್ಳಬೇಕು. ಬರೆಹಗಾರ ಪದವೀಧರನಾದರೂ ಒಂದೇ. ಆಗದೇ ಇದ್ದರೂ ಒಂದೇ—ಆತ ಸದಾಕಾಲವೂ ವಿದ್ಯಾರ್ಥಿಯೇ ಆಗಿರಬೇಕು. ವಿಶಾಲವಾದ ಜಗತ್ತೇ ಆತನ ವಿಶ್ವವಿದ್ಯಾಲಯ. ಕಲಿತದು ಮುಗಿಯಿತು—ಎಂದು ಆತ ಎಂದಿಗೂ ಹೇಳುವಂತಿರ ಬಾರದು.

ಅಂತಹ ದೃಷ್ಟಿಯುಳ್ಳವರಿಗೆ, ವಿದ್ವತ್ತುಳ್ಳವರಿಗೆ, ಸಾಮರ್ಥ್ಯ ಉಳ್ಳವರಿಗೆ, ವಸ್ತುವಿನ ಅಭಾವ ಎಂದೂ ಉಂಟಾಗಲಾರದು.

ಇಪ್ಪತ್ತನೆಯ ಶತಮಾನದ ಮಹಾನ್ ಸಾಹಿತಿ ಗಾರ್ಕಿ ಒಂದೆಡೆ ಹೀಗೆ ಹೇಳಿದ್ದ:

"ಹಿಂದೆಯೂ ಈಗಲೂ ಮುಂದೆಯೂ ಶ್ರಮವೇ-ದುಡಿಮೆಯೇ-ಸಂಸ್ಕೃತಿಯ ಬುನಾದಿ... ಮಾನವಜೀವಿಗಳು ಹೇಗೆ ಭೂಮಿಯ ಮೇಲೆ ದುಡಿವರೆಂಬುದೇ ಜಗತ್ತಿನಲ್ಲಿ ಅತ್ಯಂತ ರೋಮಾಂಚಕಾರಿಯಾದ ಕಥೆ."

ಇದು ಆರೋಗ್ಯಕರವಾದ ದೃಷ್ಟಿ. ಅದರಲ್ಲಿ ಯಾವ ಸಂದೇಹವೂ ಇಲ್ಲ.

ಸಾಹಿತ್ಯದಲ್ಲಿ ವಾಸ್ತವವಾದದ ಆಧಾರದ ಮೇಲೆ ಕೃತಿ ರಚಿಸುವವರಿಗೆ ವಸ್ತುವಿನ ಬರಗಾಲವೆಂಬುದಿಲ್ಲ. ಜನತೆಯೊಡನೆ ನಿಕಟಸಂಪರ್ಕವಿರುವವರಿಗೆ, ಬದುಕಿನಲ್ಲಿ ಶ್ರದ್ಧೆ-ನಂಬುಗೆ ಇದ್ದು ಮಾನವೀಯ ತತ್ತ್ವಜ್ಞಾನವಿರುವವರಿಗೆ, ಸ್ಫೂರ್ತಿಯ ತೊರೆ ಬತ್ತಿಹೋದೀತೆಂಬ ಭಯವಿಲ್ಲ.

ಆದರೆ 'ದಂತಸೌಧ'ದಲ್ಲೇ ಏಕಾಂತದಲ್ಲಿರಬಯಸುವವರಿಗೆ, ಸಮಾಜದಿಂದ ದೂರವಿರುವವರಿಗೆ, 'ಪ್ರವಾಹ-ಪಥಿಕ'ರಿಗೆ, ತಮ್ಮ ಬುರುಡೆಯ ಕಲ್ಪನಾ ಶಕ್ತಿಯೊಂದನ್ನೇ ಅಥವಾ ಇನ್ನೊಬ್ಬರ-ಇನ್ನೊಂದು ಭಾಷೆಯ ಕೃತಿಯನ್ನೇ ಅವಲಂಬಿಸುವವರಿಗೆ, ವಸ್ತುವಿನ ಬರಗಾಲ ಒದಗುವುದರಲ್ಲಿ ಆಶ್ಚರ್ಯವಿಲ್ಲ.

* * *

ಮೊದಲ ರೀತಿಯ ಬರೆಹಗಾರರೇ ನಮಗೆ ದೊರೆತು ಕನ್ನಡ ಸಾಹಿತ್ಯದಲ್ಲಿ ವಸ್ತುವಿನ ಅಭಾವ ಎಂದಿಗೂ ತಲೆದೋರದಿರಲಿ—ಎಂಬುದೇ ನಮ್ಮೆಲ್ಲರ ಹಾರೈಕೆಯಾಗಬೇಕಲ್ಲವೆ ?

- 'ಸಂಚಾರಿ' ಪತ್ರಿಕೆಯಲ್ಲಿ; ಬಳಿಕ 'ಚಿತ್ರಗುಪ್ತ'ದಲ್ಲಿ.

೧೯೫೪

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರುಷಾರ್ಥ ಶೂನ್ಯವಾದ

ವಾತ್ಸ್ಯಾಯನ ಎಂಬುವರು ಹಿಂದೀ ಭಾಷೆಯ ಉದ್ದಾಮ ಲೇಖಕರಲ್ಲೊಬ್ಬರು. ಹಿಂದೀ ಸಾಹಿತ್ಯದ ಸದ್ಯದ ಪರಿಸ್ಥಿತಿಯನ್ನು ಕುರಿತು ಅವರದೊಂದು ಲೇಖನ ಇತ್ತೀಚೆಗೆ 'ಸಂಡೇ ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಪ್ರಕಟವಾಯಿತು.

ಆಧುನಿಕ ಹಿಂದೀ ಸಾಹಿತ್ಯ ಅಧೋಮುಖವಾಗಿದೆಯೆಂದು ಅವರ ಅಭಿಪ್ರಾಯ.

"ಈಗಿನ ಯುವಕ (ಹಿಂದಿ) ಲೇಖಕರು ಪ್ರತ್ಯೇಕತೆಯ ಭಾವನೆಯಿಂದ, ಪ್ರವಾಹದಿಂದ ದೂರಕ್ಕೆ ತಳ್ಳಲ್ಪಟ್ಟ, ಬೇರುಸಹಿತ ಕಿತ್ತೆಸೆಯಲ್ಪಟ್ಟ, ಭಾವನೆಯಿಂದ ನರಳುತ್ತಿದ್ದಾರೆ."

"ಇನ್ನೊಮ್ಮೆ ಸಂಭವಿಸಲಾರದ ಘಟನೆಗಳನ್ನು ಕುರಿತು ಅಸೂಯೆಪಡುತ್ತ ಅವರು ಸಂಕಟ ಅನುಭವಿಸುತ್ತಾರೆ."

—ಈ ರೀತಿಯಾಗಿ ತಮ್ಮ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದರು.

ವಾತ್ಸ್ಯಾಯನರು ಮಾಡಿದ ರೋಗ ನಿದಾನದ ವೈಖರಿಯು ಸಮರ್ಪಕ ವಾಗಿಲ್ಲವೆಂದು ಸಾರಿಹೇಳುವ ಇನ್ನೊಂದು ಲೇಖನವನ್ನು ಅದೀಬ್ ಎಂಬುವರು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಬರೆದರು.

ಈಗ ಲೇಖಕರಲ್ಲಿ ನಿರಾಶೆಯ ಭಾವನೆ ಬೆಳೆದಿರುವುದಕ್ಕೆ ಸುತ್ತಮುತ್ತಲಿನ ವಾತಾವರಣವೇ ಕಾರಣ; ಆ ವಾತಾವರಣಕ್ಕಿದಿರಾಗಿ ನಡೆಯಲು ಲೇಖಕರು ನಿರಾಕರಿಸುತ್ತಿರುವುದು ಕಾರಣ. ಹಿಂದಿನ ಲೇಖಕರೆಲ್ಲ ಈಗಲೂ ಚೆನ್ನಾಗಿಯೇ ಬರೆಯುತ್ತಿರುವರೆನ್ನುವುದಾಗಲೀ, ಈಗಿನ ಹೊಸ ಲೇಖಕರೆಲ್ಲರೂ ಕೆಟ್ಟದಾಗಿಯೇ ಬರೆಯುತ್ತಾರೆನ್ನುವುದಾಗಲೀ, ಸರಿಯಲ್ಲ. ನಿರಾಶೆಯ (ಪುರುಷಾರ್ಥ ಶೂನ್ಯವಾದದ) ಪ್ರವೃತ್ತಿ ಹೊಸ ಪೀಳಿಗೆಯ ಲೇಖಕರನ್ನು ಮಾತ್ರ ಆವರಿಸಿದೆ ಎನ್ನುವುದು ನಿಜವಲ್ಲ.

—ಎಂಬ ಅಭಿಪ್ರಾಯವನ್ನು ಅವರು ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿದರು.

ಈ ವಾದ-ವಿವಾದದಲ್ಲಿನ ಸತ್ಯಾಸತ್ಯತೆಯ ಇತ್ಯರ್ಥವನ್ನು ಕನ್ನಡಿಗರಾದ ನಾವು

ಮಾಡಬೇಕಾದುದಿಲ್ಲ. ಅದನ್ನು ಹಿಂದೀ ಭಾಷೆಯ ಸಾಹಿತ್ಯದ ಪ್ರಮುಖರಿಗೂ ಜನಸಮುದಾಯಕ್ಕೂ ಬಿಟ್ಟುಬಿಡೋಣ.

ಕನ್ನಡ ಸಾಹಿತ್ಯದಲ್ಲಿ

ಆದರೆ ಸೋದರ ಭಾಷೆಯೊಂದರ ಸಾಹಿತ್ಯದ ಪೃಥಕ್ಕರಣದ ಹಿನ್ನೆಲೆಯಲ್ಲಿ ನಮ್ಮ ಭಾಷೆಯತ್ತ, ಸಾಹಿತ್ಯದತ್ತ ನಿರೀಕ್ಷಿಸುವ ಪರೀಕ್ಷಿಸುವ ದೃಷ್ಟಿ ಹೊರಳುವುದು ಸ್ವಾಭಾವಿಕ.

ಸೂಕ್ಷ್ಮಾವಲೋಕನದಿಂದ ನಮಗೆ ಇಷ್ಟು ಹೊಳೆಯಬಹುದು:

ಹಳೆಯ ತಲೆಮಾರಿನ ಸಾಹಿತಿಗಳಲ್ಲಿ ಹಲವರಿಂದು ಬಹುಮಟ್ಟಿಗೆ ನಿಷ್ಕ್ರಿಯರು ಅಥವಾ ಅಲ್ಪಸ್ವಲ್ಪ ಸಾಹಿತ್ಯಸೃಷ್ಟಿಯಲ್ಲೇ ಸಂತೃಪ್ತಿಯನ್ನು ಕಾಣುವವರು.

ಹೆಚ್ಚಿನ ಚಟುವಟಿಕೆಯನ್ನು ನಾವು ಕಾಣುತ್ತಿರುವುದು ಮುಖ್ಯವಾಗಿ ಹೊಸ ಪೀಳಿಗೆಯ ಲೇಖಕರಲ್ಲಿ.

ಈ ದಿನ ಪ್ರಧಾನವಾಗಿ ಕನ್ನಡದಲ್ಲಿ ಸಾಹಿತ್ಯ ಎನ್ನುವ ಹೆಸರಲ್ಲಿ ಜನರಿಂದ ಅಂಗೀಕೃತವಾಗುವ ಪ್ರಕಾರ ಯಾವುದು ? ಕಾವ್ಯವಲ್ಲ, ನಾಟಕವಲ್ಲ, ಸಣ್ಣಕತೆ-ಹರಟೆಗಳಲ್ಲ. ಆ ಪ್ರಕಾರ—ಕಾದಂಬರಿ.

ಆಧುನಿಕ ಕನ್ನಡ ಕಾದಂಬರಿಯ ಸೃಷ್ಟಿಯಲ್ಲಿ ಹೆಚ್ಚಿನ ಪಾಲು ಈಗ ಹೊಸ ಪೀಳಿಗೆಯ ಲೇಖಕರಿಂದಲೇ ಬರುತ್ತದೆ. ಹಿಂದಿನ ಕಾಲಕ್ಕಿಂತ ಈಗ ಹೆಚ್ಚು ಜನ ಯುವಕ ಲೇಖಕರು ಕಾದಂಬರಿ ರಚನೆಯಲ್ಲಿ ನಿರತರಾಗಿದ್ದಾರೆ.

ಇಂತಹ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ನಾವು ಕಾಣುವ ಪ್ರಮುಖ ಪ್ರವೃತ್ತಿ ಯಾವುದು ?

ನಂಬುಗೆ-ಶ್ರದ್ಧೆ

ಪ್ರಗತಿಶೀಲ ಸಾಹಿತ್ಯ ಚಳವಳಿ, ವಾಸ್ತವವಾದಕ್ಕೆ ಕನ್ನಡ ಸಾಹಿತ್ಯದಲ್ಲೊಂದು ಚಿರಸ್ಥಾನವನ್ನು ದೊರಕಿಸಿಕೊಟ್ಟಿತು. ಆದರ್ಶವಾದದ ಪ್ರಾಬಲ್ಯಕ್ಕೂ ಹಿರಿಮೆಗೂ ಸರಿ ಎನಿಸುವಹಾಗೆ ವಾಸ್ತವವಾದವೂ ತನ್ನ ಬಾವುಟವನ್ನು ಭದ್ರವಾಗಿ ನೆಟ್ಟಿತು.

ಆದರೆ ಎಲ್ಲರೂ ತಿಳಿದಿರುವಹಾಗೆ ವಾಸ್ತವವಾದಕ್ಕೆ ನಾನಾ ಮುಖಗಳುಂಟು. ಜನತೆಯ ಸಾಮೂಹಿಕ ಹಿತವನ್ನು ಬಯಸುವ ಮಾನವವಾದಿಯ ಕೈಯಲ್ಲಿ ವಾಸ್ತವವಾದ ಪ್ರಗತಿಯ ಪ್ರಬಲ ಸಾಧನವಾಗಬಹುದು. ಮಾನವನಲ್ಲಿ ನಂಬುಗೆ ಇಲ್ಲದ ವ್ಯಕ್ತಿವಾದಿಯ ಕೈಯಲ್ಲಿ ವಾಸ್ತವವಾದ ಜೀವನವನ್ನು ಮತ್ತಷ್ಟು ಬೀಭತ್ಸವಾಗಿಯೂ ಅಸಹ್ಯವಾಗಿಯೂ ತೋರಿಸಿಕೊಡುವ ಆಯುಧವಾಗಬಹುದು.

ಈ ದಿನ ಆಧುನಿಕ ಕನ್ನಡ ಲೇಖಕರ ಬರವಣಿಗೆಯಲ್ಲಿ ವಾಸ್ತವವಾದದ ಪ್ರವೃತ್ತಿಯ ವಿವಿಧ ಮುಖಗಳನ್ನು ನಾವು ಕಾಣುತ್ತೇವೆ.

"ಇಂದು ಯಾವ ನಂಬುಗೆ-ಶ್ರದ್ಧೆ-ಭಕ್ತಿಯೂ ಇಲ್ಲದೆ ನಮ್ಮ ಜೀವನ ತ್ರಿಶಂಕು ಸ್ವರ್ಗದಲ್ಲಿ ತೂಗಾಡುತ್ತಿದೆ."

ಎಂದು ಪ್ರತಿಪಾದಿಸುವ ವಾಸ್ತವವಾದಿ ಲೇಖಕರು ನಮ್ಮಲ್ಲಿದ್ದಾರೆ.

ಬದುಕಿನ ಮೂಲಭೂತ ಸಮಸ್ಯೆಗಳನ್ನೂ ಅವುಗಳಿಂದ ರೂಪಿತವಾಗುವ ಮಾನವನ ಮನೋಭಾವನೆಗಳನ್ನೂ ಮರೆತು, ವಿದೇಶೀಯ ವಾದಗಳಿಗೆ ಮನಸೋತು, ಮನೋವಿಶ್ಲೇಷಣೆಯ ಇಲ್ಲವೆ ಮತ್ತಾವುದಾದರೊಂದರ ಕಗ್ಗಾಡಿನಲ್ಲಿ ಸಿಕ್ಕುಗಳನ್ನು ಬಿಡಿಸುವುದರಲ್ಲೇ ಬರವಣಿಗೆಯ ಸಾರ್ಥಕ್ಯವನ್ನು ಕಾಣುವ ವಾಸ್ತವವಾದಿ ಬರೆಹಗಾರರಿದ್ದಾರೆ.

ವಾಸ್ತವತೆಯ ಹೆಸರಲ್ಲಿ ಮಾನವ ದೌರ್ಬಲ್ಯಗಳನ್ನು ಕೆರಳಿಸಿ 'ಜನಪ್ರಿಯತೆ'ಯನ್ನು ದೊರಕಿಸಿಕೊಳ್ಳುವ ವಾಸ್ತವವಾದಿಗಳಿದ್ದಾರೆ.

ಮನೋರಂಜನೆಯೊಂದನ್ನೇ ಗುರಿಯಾಗಿಟ್ಟು ಜೀವನದ ವಾಸ್ತವ ಚಿತ್ರಗಳನ್ನು ಕೊಡುವವರಿದ್ದಾರೆ.

ವಾಸ್ತವತೆಯ ದೃಷ್ಟಿಯಿಂದ ನಿನ್ನೆ-ಇಂದು-ನಾಳೆಗಳನ್ನು ಒಟ್ಟಾಗಿ ನೋಡಿ, ಬದುಕಿನಲ್ಲಿ ನಂಬುಗೆಯನ್ನೂ ಶ್ರದ್ಧೆಯನ್ನೂ ಪ್ರತಿಪಾದಿಸುವ ವಾಸ್ತವವಾದಿಗಳಿದ್ದಾರೆ.

ಕನ್ನಡದಲ್ಲಿ ಕಾದಂಬರಿಯ ಪ್ರಕಾರ ಇದೇ ಈಗ ಪ್ರಬುದ್ಧವಾಗುತ್ತಿದೆಯಾದರೂ ವಾಸ್ತವವಾದವೇ ಈ ದಿನ ಮುಖ್ಯಪ್ರವೃತ್ತಿಯಾಗಿರುತ್ತೆ, ಮೇಲೆ ಹೇಳಿದ ವಿವಿಧ ಚಿಹ್ನೆಗಳನ್ನು ಆ ಪ್ರವೃತ್ತಿಯಲ್ಲಿ ಓದುಗರು ಗುರುತಿಸುವುದು ಸಾಧ್ಯವಿದೆ.

ಅಪಾಯಕಾರಿ

ವಾಸ್ತವತೆಯ ಹೆಸರಿನಲ್ಲಿ ಈಗ ಕೆಲವು ಕಾದಂಬರಿಗಳಲ್ಲಿ ತಿಳಿದೋ ತಿಳಿಯದೆಯೋ ಪ್ರತಿಪಾದಿತವಾಗುತ್ತಿರುವ ಒಂದು ವಾದವಿದೆ—ಅದು ಪುರುಷಾರ್ಥ ಶೂನ್ಯವಾದ.

ಈ ವಾದ, ಮಾನವನಲ್ಲಿ ಸಾಮಾನ್ಯವಾಗಿ ನಮಗಿರಬಹುದಾದ ವಿಶ್ವಾಸವನ್ನೇ ನಷ್ಟಗೊಳಿಸುತ್ತದೆ. ಬದುಕೇ ಹೀಗೆ, ಪ್ರವಾಹ ಬಂದತ್ತ ತೇಲಿದರಾಯಿತು, ವಾತಾವರಣವನ್ನು ಇದಿರಿಸಿ ಪ್ರಯೋಜನವಿಲ್ಲ ಎನ್ನುತ್ತದೆ. ಮಾದಕ ದ್ರವ್ಯಗಳ ಸೇವನೆ, ವೇಶ್ಯೆಯರ ಮನೆಗಳಿಗೆ ಅಲೆದಾಟ—ಇವು ಸ್ವಾಭಾವಿಕವೆಂದು ಸಾಧಿಸುತ್ತವೆ. ಹೆಂಗಸಿನ ಮೂಲಕ, ಇಲ್ಲವೆ ಗಂಡಸಿನ ಮೂಲಕ, "ಪ್ರೇಮವೆಂಬುದಿಲ್ಲ; ಗಂಡಸರೆಲ್ಲಾ ಒಂದೇ; ಅಥವಾ ಹೆಣ್ಣು ಯಾರಾದರೇನು, ಎಲ್ಲಾ ಒಂದೇ" ಎಂದು ಸಾರಿ ಹೇಳುತ್ತದೆ.

ಅವರ ದೃಷ್ಟಿಯಲ್ಲಿ ಈ ಬದುಕು ಬರಿಯ ಬರಡುಭೂಮಿ. ಇಲ್ಲಿ ನಾವು ಮಾಡಬಹುದಾದ್ದು, ಮಾಡಬೇಕಾದ್ದು, ಏನೂ ಇಲ್ಲ.

ಇಂತಹ ದೃಷ್ಟಿ ಅಪಾಯಕಾರಿಯೆಂದು, ಸಮಾಜದ ಮುನ್ನಡೆಗೆ ಘಾತುಕ ವಾಗಿದೆಯೆಂದು ಬೇರೆ ಹೇಳಬೇಕಾದ್ದಿಲ್ಲ.

ಭ್ರಮನಿರಸನದ ಬಳಿಕ

ದೇಶ ಸ್ವತಂತ್ರವಾಯಿತು. ಎಲ್ಲ ಜನರಂತೆ ಸಂವೇದನಾ-ಜೀವಿಯಾದ ಸಾಹಿತಿಯೂ—ಸ್ವಾತಂತ್ರ್ಯಕ್ಕೋಸ್ಕರ ಸ್ವತಃ ಹೋರಾಡಿದ್ದ ಹೊಸ ಪೀಳಿಗೆಯ ಲೇಖಕನೂ—ನೂರೊಂದು ಆಸೆಗಳನ್ನು ಕಟ್ಟಿಕೊಂಡಿದ್ದರು. ಆದರೆ ಆ ಆಸೆಗಳೆಲ್ಲ ಫಲಿಸಲಿಲ್ಲ. ಬಹಳಮಟ್ಟಿಗೆ ಭ್ರಮನಿರಸನ ಅನಿವಾರ್ಯವಾಯಿತು. ಆದರ್ಶದ ಮರೀಚಿಕೆಯನ್ನು ಬೆನ್ನಟ್ಟಿಹೊರಟಿದ್ದ ಉತ್ಸಾಹಿಗಳನ್ನು ಕಟುವಾಸ್ತವತೆ ಇದಿರಿಸಿ ಅಣಕಿಸಿತು.

ಅಂತಹ ಹಿನ್ನೆಲೆಯಲ್ಲಿ ಪುರುಷಾರ್ಥಶೂನ್ಯವಾದ ಕೆಲವೊಂದು ಕನ್ನಡ ಲೇಖಕರಲ್ಲಿ ತೋರಿಬಂದುದೂ ಆಶ್ಚರ್ಯವಾದ ಮಾತಲ್ಲ.

ಆದರೆ, ಕಾಹಿಲೆಯು ಫ್ಯಾಷನ್ ಆಗುವುದು ಸಾಧ್ಯವೇ ? ರೋಗಮೂಲವನ್ನು ಕೆದಕಿ ನಿವಾರಣೆಯ ಉಪಾಯವನ್ನು ಕೈಗೊಳ್ಳಬೇಕಲ್ಲವೆ?

ಹಳೆಯ ಪೀಳಿಗೆಯ ಕೆಲವರು ಪ್ರತಿಭಾವಂತ ಲೇಖಕರು ತಿಳಿವಳಿಕೆಯ ಮೇರೆಯನ್ನು ದಾಟಿದ ಅಧ್ಯಾತ್ಮವಾದದ ಮರೆಹೊಕ್ಕು ಬದುಕಿನಿಂದ ಮುಖ ತಿರುಗಿಸಿದ್ದು ನಿಜ. ಅದನ್ನು ಸಮರ್ಥಿಸುವುದೂ ಸಾಧ್ಯವಿಲ್ಲ.

ಹಾಗೆಯೇ ವಾಸ್ತವತೆಯ ಹೆಸರಲ್ಲಿ ಪುರುಷಾರ್ಥಶೂನ್ಯವಾದಿಗಳಾಗಿ ಹೊಸ ಪೀಳಿಗೆಯ ಕೆಲ ಲೇಖಕರನ್ನು ಅವಹೇಳನಕ್ಕೆ ಗುರಿಮಾಡುವುದೂ ಅಕ್ಷಮ್ಯ.

ಅನಿವಾರ್ಯವಲ್ಲ

ಆದರೆ ಲೇಖಕನ ಪಾಲಿಗೆ ಪುರುಷಾರ್ಥಶೂನ್ಯದಂತಹ ಮನೋಭಾವ ಅನಿವಾರ್ಯವಲ್ಲ; ಅನಿವಾರ್ಯವಾಗಕೂಡದು. ಲೋಕವ್ಯಾಪಾರದಲ್ಲಿ ತಾನೊಂದು ಅಂಶವೆಂದು ನಂಬಿ, ತನ್ನ ನಿಲುವನ್ನು ಕಂಡುಕೊಂಡು, ಸಮಾಜದ ಒಟ್ಟಿನ ಏಳ್ಗೆಗೆ ನೆರವಾಗಲು ಸಾಮರ್ಥ್ಯವನ್ನು ಆತ ಸಂಪಾದಿಸಬೇಕು.

ಹಿಂದೀ ಲೇಖಕ ವಾತ್ಸ್ಯಾಯನರಿಗೆ ಉತ್ತರವಿತ್ತ ಅದೀಬರ ಮಾತಿನಲ್ಲೇ ಹೇಳುವುದಾದರೆ:

"ತನ್ನ ಆಯ್ಕೆಯನ್ನು ಮಾಡುವುದರಲ್ಲಿ ಹಿಂದಿನ ಬರೆಹಗಾರರಿಗೆಲ್ಲ ಎಂತಹ

> ತೊಂದರೆಗಳೇ ಇದ್ದಿರಲಿ, ಈಗಿನ ಬರೆಹಗಾರರಿಗೆ ಅಂತಹ ಯಾವ ತೊಂದರೆಗಳೂ ಇಲ್ಲ. ತನ್ನ ವೈಯಕ್ತಿಕ ಸಮಸ್ಯೆಗಳನ್ನು ವಿಶ್ವನಾಟಕದ ಒಂದಂಶವಾಗಿ ಆತ ಕಂಡರಾಯಿತು, ಸುತ್ತುಮುತ್ತಲಿನ ಕೋಟ್ಯಂತರ ಜೀವಿಗಳ ಬದುಕನ್ನು ವಿರೂಪಗೊಳಿಸುತ್ತಿರುವ ಶಕ್ತಿಗಳೇ ತನ್ನ 'ಅಹಮ'ನ್ನೂ ಗಾಯಗೊಳಿಸಿವೆಯೆಂದು ಆತ ಮನಗಂಡರಾಯಿತು."

ಪುರುಷಾರ್ಥಶೂನ್ಯವಾದದ ಹರಕಲು ಬಾವುಟಗಳನ್ನು ಎತ್ತಿಹಿಡಿಯಬಯಸುವ ನಮ್ಮ ಕೆಲವರು ಲೇಖಕರೂ ಮೇಲಿನ ಮಾತುಗಳನ್ನು ಪರಿಗಣಿಸಿ ಆತ್ಮನಿರೀಕ್ಷಣೆ ಮಾಡಿಕೊಳ್ಳುವುದು ಸಾಧ್ಯ, ಅಲ್ಲವೆ?

- ಅಚ್ಚಾದುದು 'ಚಿತ್ರಗುಪ್ತ' ದಲ್ಲಿ.

೧೯೫೫

ಬೆಲಿನ್ಸ್ಕಿಯ ಕಾವ್ಯಮೀಮಾಂಸೆ

"ನಮ್ಮ ಕಾಲದ ಕಲೆ ಎಂತಹದು ? ಅದು, ಸಮಾಜವನ್ನು ಕುರಿತಾದ ತೀರ್ಪು, ಪೃಥಕ್ಕರಣ; ಪರಿಣಾಮವಾಗಿ ಸಮಾಜ ವಿಮರ್ಶೆ. ಈಗ ವಿಚಾರದ ಅಂಶ ಕಲೆಯ ಅಂಶದೊಡನೆ ಬೆರೆತಿದೆ. ನಮ್ಮ ಕಾಲದಲ್ಲಿ ಕಲಾಕೃತಿಯು, ಯುಗಧರ್ಮದ ಮಹತ್ತರವಾದ ಅಂತಃಸ್ಫೂರ್ತಿಯಿಂದ ಹುಟ್ಟದೆ, ಚಿತ್ರಿಸಬೇಕು ಎನ್ನುವ ಒಂದೇ ಉದ್ದೇಶಕ್ಕೋಸ್ಕರ ಬದುಕನ್ನು ಚಿತ್ರಿಸಿದರೆ, ಅದು ಸಂಕಟದ ಕೂಗು ಇಲ್ಲವೆ ಮಹದಾನಂದದ ಅಮರಗಾನವಾಗದೆ ಇದ್ದರೆ, ಒಂದು ಪ್ರಶ್ನೆಯಾಗದೆ ಅಥವಾ ಪ್ರಶ್ನೆಗೆ ಉತ್ತರವಾಗದೆ ಇದ್ದರೆ, ಆ ಕೃತಿ ನಿರ್ಜೀವವೆನ್ನಿಸಿಕೊಳ್ಳುವುದು." ಇದು, ಒಂದು ಶತಮಾನದ ಹಿಂದೆ, ರಷ್ಯಾ ದೇಶದ ಮಹಾವಿಮರ್ಶಕನೊಬ್ಬನು ಆಡಿದ ಮಾತು. ಆತನ ಹೆಸರು ಬೆಲಿನ್ಸ್ಕಿ.

ವಿಸಾರಿಯನ್ ಗ್ರಿಗರಿವಿಸ್ ಬೆಲಿನ್ಸ್ಕಿ ಹುಟ್ಟಿದುದು ೧೮೧೧ರಲ್ಲಿ; ಪ್ರಭಾವಶಾಲಿಯಾದ, ಅವಿಶ್ರಾಂತವಾದ ಬದುಕನ್ನು ಬಾಳಿ ಸತ್ತುದು ೧೮೪೮ರಲ್ಲಿ.

ಬದುಕಿದ್ದಾಗ ಆತ ಹತ್ತೊಂಬತ್ತನೆಯ ಶತಮಾನದ ಐರೋಪ್ಯ ಸಾಹಿತ್ಯದ ಮಹಾಪ್ರಭೃತಿಗಳ ಅಗ್ರಪಂಕ್ತಿಯಲ್ಲಿ ವಿರಾಜಮಾನನಾಗಿದ್ದ. ಸತ್ತಮೇಲೆ, ವಿಶ್ವಸಾಹಿತ್ಯದ ಸೌಂದರ್ಯಮೀಮಾಂಸೆಯ ಪ್ರಾಂಗಣದಲ್ಲಿ ಭವ್ಯವಾದ ಸ್ಥಿರವಾದ ಸ್ಥಾನವನ್ನು ಪಡೆದು ಅಮರನಾದ.

ವಿಮರ್ಶಕ-ಮೀಮಾಂಸಕ ಬೆಲಿನ್ಸ್ಕಿಯ ಕಾರ್ಯಕ್ಷೇತ್ರ ವಿಸ್ತಾರವಾಗಿತ್ತು. ತತ್ತ್ವಜ್ಞಾನ, ಸಮಾಜಶಾಸ್ತ್ರ, ಇತಿಹಾಸ—ನಿರಂಕುಶ ಸರಕಾರಕ್ಕಿದಿರು ಹೋರಾಟ; ಇವುಗಳ ಜತೆಯಲ್ಲಿ, ಇವುಗಳಿಗೆ ಪೂರಕವಾಗಿ ಹಾಗೂ ಸಾಧಕವಾಗಿ, ಸಾಹಿತ್ಯ ವಿಮರ್ಶೆ-ಸೌಂದರ್ಯಮೀಮಾಂಸೆ. ಈ ಎಲ್ಲ ಕಾರಣಗಳಿಗಾಗಿಯೂ ಆತ ಪ್ರಖ್ಯಾತನೇ.

ಎಳೆಯ ಬೆಲಿನ್ಸ್ಕಿ ೧೮೨೯ರಲ್ಲಿ ಮಾಸ್ಕೋ ವಿಶ್ವವಿದ್ಯಾಲಯವನ್ನು ಪ್ರವೇಶ ಮಾಡಿದ. ಆದರೆ ಅಲ್ಲಿ ವಿದ್ಯಾಭ್ಯಾಸ ಮುಕ್ತಾಯವಾಗುವುದಕ್ಕೆ ಮುಂಚೆಯೇ

ವಿಶ್ವವಿದ್ಯಾಲಯದ ಅಧಿಕಾರಿಗಳು ಆತನನ್ನು ಹೊರಹಾಕಿದರು. 'ಆ ವಿದ್ಯಾರ್ಥಿ ಅನಾರೋಗ್ಯ ಪ್ರಕೃತಿಯವನೂ ಸ್ವಲ್ಪಮಟ್ಟಿಗೆ ದಡ್ಡನೂ' ಆಗಿದ್ದನೆಂಬುದು ಅಧಿಕಾರಿಗಳು ತೋರಿಸಿದ ಕಾರಣ. ಆದರೆ ವಸ್ತುಸ್ಥಿತಿ ಬೇರೆಯೇ ಇತ್ತು. ವಿದ್ಯಾರ್ಥಿ ಬೆಲಿನ್ಸ್ಕಿ 'ದ್ಮಿತ್ರಿ ಕಾಲಿನಿನ್' ಎಂಬೊಂದು ನಾಟಕವನ್ನು ಬರೆದಿದ್ದ. ಗುಲಾಮಪದ್ಧತಿಯನ್ನು ವಿರೋಧಿಸಿ ಭೂಮಾಲೀಕರ ದೌರ್ಜನ್ಯವನ್ನು ಚಿತ್ರಿಸಿತ್ತು ಆ ನಾಟಕ. ಅಂತಹ ಅಪಾಯಕಾರಿ ವ್ಯಕ್ತಿಯನ್ನು ವಿಶ್ವವಿದ್ಯಾಲಯದಲ್ಲಿ ಇರಗೊಡುವುದು ಸಾಧ್ಯವಿರಲಿಲ್ಲ. ಹೀಗಾಗಿ ಅಧಿಕಾರಿಗಳು ಸಂಶೋಧನೆ ನಡೆಸಿ, ವಿದ್ಯಾರ್ಥಿ ಬೆಲಿನ್ಸ್ಕಿ ಅನಾರೋಗ್ಯ ಪ್ರಕೃತಿಯವನೆಂದೂ ಸ್ವಲ್ಪಮಟ್ಟಿಗೆ ದಡ್ಡನೆಂದೂ ಕಂಡುಹಿಡಿದರು !

ಈ ರೀತಿ ವಿದ್ಯಾಭ್ಯಾಸವನ್ನು ಮುಕ್ತಾಯಗೊಳಿಸಿದ ಬೆಲಿನ್ಸ್ಕಿ, ಬರೆಹಗಾರನಾಗಿ ರಷ್ಯದ ಸಾಹಿತ್ಯಕ್ಷೇತ್ರಕ್ಕೆ ಪದಾರ್ಪಣೆಮಾಡಿದ.

ಆ ಕ್ಷೇತ್ರದಲ್ಲಿ ಆತ ನಡೆಸಿದುದು, ಸಾಯುವವರೆಗೂ ಅಂದರೆ ಹದಿನೈದು ವರ್ಷಗಳ ಕಾಲ—ನಿರಂತರವಾದ ಸಾಹಿತ್ಯಚಟುವಟಿಕೆ. ಈ ಚಟುವಟಿಕೆಗೆ, ಹೊಗೆಯಾಡುತ್ತಿದ್ದ ರಷ್ಯಾ ಹಿನ್ನೆಲೆಯಾಗಿತ್ತು. ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಕ್ರಾಂತಿಕಾರ ಭಾವನೆಗಳು, ರಷ್ಯದ ಶ್ರೀಮಂತವರ್ಗದ ಕೆಲವರಲ್ಲಿ ಮಾತ್ರ ಮನೆಮಾಡಿದ್ದುವು. ಕ್ರಮೇಣ ಪ್ರಜಾಪ್ರಭುತ್ವ ಚಳವಳಿ ವಿಸ್ತಾರಗೊಂಡು, ಬಂಡಾಯದ ಭಾವನೆ ಜನಸಾಮಾನ್ಯರನ್ನೂ ಆವರಿಸಿತು. ಬೆಲಿನ್ಸ್ಕಿ ಆ ಎರಡು ಘಟ್ಟಗಳ ನಡುವಿನ ಸೇತುವೆಯಾಗಿದ್ದ. ಮುಂದುವರಿದ ಇತರ ಪಾಶ್ಚಾತ್ಯರಾಷ್ಟ್ರಗಳ ಪ್ರಮುಖ ವಿಚಾರಧಾರೆಗಳನ್ನು ಸ್ವಾಭಾವಿಕವಾಗಿಯೇ ಬೆಲಿನ್ಸ್ಕಿ ಮನನಮಾಡಿದ. ಆದರೆ ಅವುಗಳನ್ನೆಂದೂ ಆತ ಕುರುಡುನಂಬಿಕೆಯಿಂದ ಪೂಜಿಸಲಿಲ್ಲ. ಬದಲು, ರಷ್ಯಾದ ವಿಶಿಷ್ಟ ಪರಿಸ್ಥಿತಿಯನ್ನೇ ಸದಾ ಗಮನದಲ್ಲಿಟ್ಟು, ಸ್ವತಂತ್ರವಿಚಾರಸರಣಿಯನ್ನು ಬೆಲಿನ್ಸ್ಕಿ ರೂಪಿಸಿಕೊಂಡ. ಆರಂಭದಲ್ಲಿ, ಜರ್ಮನಿಯ ತತ್ತ್ವವೇತ್ತರ ಪ್ರಭಾವ ಆತನ ಮೇಲೆ ಬಲವಾಗಿತ್ತು. ಆದರೆ ವಸ್ತುಸ್ಥಿತಿಯ ಉರಿಬೆಳಕಿನೆದುರು ಭಾವವಾದದ ಮಂಜು ಕರಗಿಹೋಯಿತು.

ಜನಸಮುದಾಯದ ಯಾವುದೇ ಚಳವಳಿಗೆ ಬೆಲಿನ್ಸ್ಕಿ ನೇರವಾದ ನಾಯಕನಾಗಲಿಲ್ಲ. ಬದಲು, ನೂತನ ವಿಚಾರಧಾರೆ ಸಾಹಿತ್ಯಕ್ಷೇತ್ರದಲ್ಲಿ ಆತನನ್ನು, ನಾಯಕಮಣಿಯನ್ನಾಗಿ—ಹೊಸ ಪಂಥದ ಮಾರ್ಗದರ್ಶಕನನ್ನಾಗಿ ಮಾಡಿತು.

ವಾಸ್ತವವಾದದ ಹೆದ್ದಾರಿ

ಬೆಲಿನ್‌ಸ್ಕಿ ಹಾಕಿಕೊಟ್ಟುದು ವಾಸ್ತವವಾದದ ಹೆದ್ದಾರಿ. ಆತನದು ಜನವಾದಿಯಾದ ವಾಸ್ತವತೆ. ಕ್ರಾಂತಿಕಾರನ ದೃಷ್ಟಿಯಿಂದ ಆತ ಬದುಕನ್ನು ನೋಡಿದ. ಹೀಗಾಗಿ ಬೆಲಿನ್‌ಸ್ಕಿಯ ವಾಸ್ತವತೆ ವಿಶಿಷ್ಟರೂಪ ತಳೆಯಿತು.

ಒಂದೆಡೆ ಆತ ಬರೆದ: "ವಾಸ್ತವತೆ ಇದೀಗ ಆಧುನಿಕ ಜಗತ್ತಿನ ಘೋಷ ಮತ್ತು ಕೊನೆ ಮಾತು!.... ವಾಸ್ತವತೆ ಮಣ್ಣಿನಿಂದ ಚಿಮ್ಮುತ್ತದೆ; ಮತ್ತು ಎಲ್ಲಾ ವಾಸ್ತವತೆಯ ಮಾತೃಕೆಯಾದ ಮಣ್ಣೇ ಸಮಾಜ."

ಬೆಲಿನ್‌ಸ್ಕಿಯ ಸೌಂದರ್ಯಮೀಮಾಂಸೆಯ ಪ್ರವಾಹ ಹರಿಯುವುದು ಈ ಮೂಲದಿಂದ. ವಾಸ್ತವತೆ, ಕಲಾತ್ಮಕ ಪರಿಪೂರ್ಣತೆ ಮತ್ತು ವಾಸ್ತವತೆಯ ಆಂತರಿಕವಾದ ಕ್ರಿಯಾತ್ಮಕ ಅಂಶ—ಇವು ಮೂರು, ಬೆಲಿನ್‌ಸ್ಕಿಯ ಪ್ರತಿಪಾದನೆಯ ಮೂಲಭೂತ ಅಂಗಗಳಾಗಿವೆ.

ಬೆಲಿನ್‌ಸ್ಕಿಯ ಅಭಿಪ್ರಾಯದಂತೆ ಕಲಾತ್ಮಕ ಸೃಷ್ಟಿಯು ಬದುಕಿನ ಸತ್ಯದಿಂದಲೇ ತನ್ನ ಸೊಗಸುಗಾರಿಕೆಯನ್ನೂ ಯಥಾರ್ಥಸ್ವರೂಪವನ್ನೂ ಉದಾತ್ತಮಹತ್ವವನ್ನೂ ಪಡೆಯುತ್ತದೆ. ಪ್ರಾಮಾಣಿಕನಾದ ಕಲಾವಿದನಿಗೆ 'ವಾಸ್ತವತೆಯ ತಿಳಿವು' ಇದ್ದರಾಯಿತು. ಬದುಕಿನ ಯಾವುದೋ ಒಂದಂಶವನ್ನು ಮಾತ್ರ ಸರಿಯಾಗಿ ಕಾಣದೆ, ಸ್ವರೂಪವನ್ನೇ ಸಮಗ್ರ ವಾಸ್ತವವಾಗಿ ಕಾಣುವುದರಿಂದ ಕೃತಿ ಉತ್ತಮಗೊಳ್ಳುತ್ತದೆ.

ವಾಸ್ತವತೆಯ ಹಿರಿಮೆಯನ್ನು ಕುರಿತು ಬೆಲಿನ್‌ಸ್ಕಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಗಮನಾರ್ಹವಾಗಿದೆ. ಹಿರಿದಾದ ಕಲೆ ಮಾತನಾಡುವುದು ಬದುಕಿನ ಭಾಷೆಯನ್ನು, ಪ್ರಾಮಾಣಿಕನಾದ ಹಿರಿಯ ಕಲಾವಿದ ವಾಸ್ತವವಾದಿಯಾದ ಕೃತಿರಚಿಸುವಾಗ, ಆತನ ಸ್ವಂತ ಅಭಿಪ್ರಾಯಗಳೇನೇ ಇರಲಿ, ವಾಸ್ತವತೆಗೇ ಜಯವಾಗುತ್ತದೆ. ಹಾಗೆಯೇ, ಉದ್ದೇಶವು ಸಾಧುವಾಗಿದ್ದರೂ ವಾಸ್ತವತೆಯ ಮನೋರಾಗವಿಲ್ಲದವನ ಕೃತಿ ಸಪ್ಪಗಾಗುತ್ತದೆ.

ಈ ದೃಷ್ಟಿಕೋನವನ್ನು ಬೆಲಿನ್‌ಸ್ಕಿ, ಆತನ ಸಮಕಾಲೀನನಾಗಿದ್ದ ಪ್ರಖ್ಯಾತ ಸಾಹಿತಿ ಗೊಗೋಲನ ಕೃತಿವಿಮರ್ಶೆಯ ಮೂಲಕ ಸ್ಪಷ್ಟಪಡಿಸಿದ. ಗೊಗೋಲ್ ಹಿರಿಯ ಕಲಾವಿದನಾಗಿದ್ದ. ಅವನ ಕೃತಿಗಳು ರಷ್ಯದ ಜನಜೀವನಕ್ಕೆ ಕನ್ನಡಿ ಹಿಡಿಯುತ್ತಿದ್ದುವು. ಪ್ರಜಾಪ್ರಭುತ್ವ ಮನೋವೃತ್ತಿ ಜನರಲ್ಲಿ ಬೆಳೆಯಲು ಆ ಸಾಹಿತ್ಯಕೃತಿಗಳು ಸಹಾಯಕವಾದುವು. ಆದರೆ ವ್ಯೆಯಕ್ತಿಕವಾಗಿ ಗೊಗೋಲ್‌ನಲ್ಲಿ ಪ್ರತಿಗಾಮಿ ಪ್ರವೃತ್ತಿಗಳಿದ್ದುವು. ದಿನಕಳೆದಂತೆ ಆ ಪ್ರವೃತ್ತಿಗಳು ಬಲಗೊಂಡುವು. ಹೀಗಿದ್ದರೂ ತನ್ನ ಪ್ರಾಮಾಣಿಕತೆಯ ಕುಂಚವನ್ನು ಯಥಾರ್ಥತೆಯ ಬಣ್ಣಗಳಲ್ಲಷ್ಟೇ ಆತ

ಅದ್ದುತ್ತಿದ್ದುದರಿಂದ ಆತನ ಕೃತಿಗಳು ಭವ್ಯವಾಗಿಯೇ ಉಳಿದುವು.

ಒಂದು ಲೇಖನದಲ್ಲಿ ಬೆಲಿನ್ಸ್ಕಿ ಹೀಗೆ ಬರೆದಿದ್ದಾನೆ: "ನಮ್ಮ ಸಾಹಿತ್ಯ ಯಾವಾಗಲೂ ಆಲಂಕಾರಿಕ ಸ್ವರೂಪವನ್ನು ದಾಟಿ ಸ್ವಾಭಾವಿಕವಾಗಲು ಯತ್ನಿಸಿದೆ. ಯಶಸ್ವಿಯಾಗುತ್ತಬಂದಿರುವ ಈ ಯತ್ನದಲ್ಲೇ ನಮ್ಮ ಸಾಹಿತ್ಯಚರಿತ್ರೆಯ ಅರ್ಥವೂ ಸ್ಫೂರ್ತಿಯೂ ಅಡಕವಾಗಿವೆ. ಈ ದಿಕ್ಕಿನಲ್ಲಿ ಗೊಗೋಲ್‌ನಷ್ಟು ಯಶಸ್ವಿಯಾದ ಬರೆಹಗಾರ ಬೇರೆ ಇಲ್ಲವೆನ್ನುವುದು ತಪ್ಪಾಗಲಾರದು. ಇತರ ಭಾವಗಳೇನೇ ಇರಲಿ, ಕಲೆಯು ವಾಸ್ತವತೆಗೆ ಅಂಟಿಕೊಂಡಿರುವುದರಿಂದಲೇ ಇದು ಸಾಧ್ಯವಾಗಿದೆ. ಇದು ಗೊಗೋಲ್ ಮಾಡಿರುವ ಮಹಾಸೇವೆ. ಆ ಮೂಲಕ, ಕಲೆಯ ವಿಷಯದಲ್ಲಿ ಜನರಿಗಿರುವ ಅಭಿಪ್ರಾಯವನ್ನೇ ಆತ ಸಂಪೂರ್ಣವಾಗಿ ಬದಲಾಯಿಸಿದ್ದಾನೆ..... ಎಲ್ಲಾ ಬಣ್ಣಗಳಲ್ಲಿ ವಾಸ್ತವತೆಯ ಪ್ರತ್ಯುತ್ಪಾದನೆಯೇ ಗೊಗೋಲನ ಕಲೆ."

ಸಾಹಿತ್ಯಕೃತಿಯು ಅಥವಾ ಕಲಾಕೃತಿಯು ವಾಸ್ತವತೆಯ ಪ್ರತ್ಯುತ್ಪಾದನೆಯಾಗಬೇಕೆಂದು ಹೇಳುವಾಗ ಬೆಲಿನ್ಸ್ಕಿ, ಕಲೆಯು ವಾಸ್ತವತೆಯ ಛಾಯಾಗ್ರಹಣವಾಗಲೆಂದು ಎಂದಿಗೂ ಅಭಿಪ್ರಾಯಪಡುವುದಿಲ್ಲ. ಕಲಾವಿದ ವಾಸ್ತವತೆಯನ್ನು ತನ್ನ ಕೃತಿಯಲ್ಲಿ ಒಡಮೂಡಿಸುವಾಗ, ತಾನು ಕಂಡುದಕ್ಕೊಂದು ಅರ್ಥವನ್ನು ಕೊಡಬೇಕು. ಸಮಾಜದ ಪ್ರಾಗತಿಕಶಕ್ತಿಗಳ ನೆಲೆಯಲ್ಲಿ ನಿಂತು ಆತ, ತಾನು ಚಿತ್ರಿಸುವ ವಾಸ್ತವತೆಯನ್ನು ಕುರಿತು ತೀರ್ಪನ್ನೀಯಬೇಕು.

ಸೃಷ್ಟಿಯಾದ ಪ್ರತಿಬಿಂಬವನ್ನು ಮೂಲದೊಡನೆ ಹೋಲಿಸಿ ನೋಡುವುದೇ ಬೆಲಿನ್ಸ್ಕಿ ಅನುಸರಿಸಿದ ವಿಮರ್ಶೆಯ ವಿಧಾನ. ಈ ರೀತಿಯಾಗಿ ಕೃತಿಯ ಕಲಾತ್ಮಕ ಸ್ವರೂಪವನ್ನು ಆತ ಗೊತ್ತುಮಾಡುತ್ತಿದ್ದ. ಕಲಾತ್ಮಕ ಸ್ವರೂಪವೆಂದರೆ ವಾಸ್ತವತೆಯ ಸಮಗ್ರತೆ. ಈ ದೃಷ್ಟಿಯಿಂದ ಆಗುವ ಕಲಾತ್ಮಕಸೃಷ್ಟಿಯಲ್ಲಿ ಸುಳ್ಳಿಗೆ-ಕೃತ್ರಿಮವಾದುದಕ್ಕೆ —ಎಡೆಯಿಲ್ಲ. ಮಿಥ್ಯವೆಂದಿಗೂ ಕಲಾತ್ಮಕವಾಗುವುದಿಲ್ಲ. ಒಂದೇ, ತನ್ನ ಸ್ವಂತ ಅಭಿಪ್ರಾಯವೇನೇ ಇದ್ದರೂ ಕಲಾವಿದ ವಾಸ್ತವತೆಗೆ ವಿಧೇಯನಾಗಿರುತ್ತಾನೆ; ಇಲ್ಲವೆ, ಒಳ್ಳೆಯ ಕೃತಿಯನ್ನು ಸೃಷ್ಟಿಸಲಾರದೆ ವಿಫಲನಾಗುತ್ತಾನೆ. ಒಂದು ವಸ್ತು ವಿಸ್ತಾರವಾಗಿದ್ದಷ್ಟೂ ಕೃತಿ ಹೆಚ್ಚು ಕಲಾತ್ಮಕವಾಗುತ್ತದೆ. ವಾಸ್ತವತೆಯೇ ಪ್ರತಿಯೊಂದು ಕಲಾಕೃತಿಯ ಹಿಂದಿನ ಮಹಾಪ್ರೇರಕ ಶಕ್ತಿ.

ಈ ರೀತಿ ಮೀಮಾಂಸೆಯನ್ನು ಮಾಡಿದ ಬೆಲಿನ್ಸ್ಕಿ, "ಕ್ರಿಯಾತ್ಮಕ ಸೌಂದರ್ಯ ಮೀಮಾಂಸೆಯೇ ವಿಮರ್ಶೆ" ಎಂದು ಕರೆದ.

ಕಾವ್ಯ ಎಂದರೇನು ?

ಬೆಲಿನ್ಸ್ಕಿಯ ಅಭಿಪ್ರಾಯದಂತೆ, "ವಾಸ್ತವ ಮತ್ತು ನೈಜ ವಿಚಾರಗಳ ಕಲೆಯೇ

ಕಾವ್ಯ, ಸಲ್ಲದ ಭಾವ ವೈಪರೀತ್ಯವಲ್ಲ." ಇದು, "ಪ್ರತಿಮಾರೂಪವಾದ ಸತ್ಯ;" "ಸಾಧ್ಯತೆಯ ರೂಪದಲ್ಲಿ ವಾಸ್ತವತೆಯ ಸೃಷ್ಟ್ಯಾತ್ಮಕ ಪ್ರತ್ಯುತ್ಪಾದನೆ."

"ಕಾವ್ಯವೆಂದರೇನು? ಅದೇನನ್ನು ಒಳಗೊಂಡಿದೆ?—ಇದೀಗ ಪ್ರಶ್ನೆ. ಸಾಮಾನ್ಯ ಬರೆಹಗಾರರು, ಅದು ಕಲ್ಪನೆಯ ಸೃಷ್ಟಿ ಎಂದು ಭಾವಿಸುತ್ತಾರೆ. ನಿದ್ದೆಹೋದ ಮನುಷ್ಯನ ಕನಸುಗಳೂ ಮತಿಗೆಟ್ಟ ಮನುಷ್ಯನ ಕಿರಿಚಾಟಗಳೂ ಕಲ್ಪನೆಯ ಸೃಷ್ಟಿಗಳೇ. ಆದರೆ ಅವು ಕಾವ್ಯವಲ್ಲ. ಕಾವ್ಯಸೃಷ್ಟಿಗೆ, ಬೇರೆ ರೀತಿಯ ಸೃಷ್ಟಿಯಿಂದ ಅದನ್ನು ಪ್ರತ್ಯೇಕಿಸಿ ತೋರಿಸುವಂತಹ ಯಾವುದಾದರೂ ನಿರ್ದಿಷ್ಟ ಗುಣವಿರಬೇಕು. ಸಾಧ್ಯತೆಯ ರೂಪದಲ್ಲಿ ವಾಸ್ತವತೆಯ ಸೃಷ್ಟ್ಯಾತ್ಮಕ ಪ್ರತ್ಯುತ್ಪಾದನೆಯೇ ಕಾವ್ಯ. ಆದುದರಿಂದ ವಾಸ್ತವತೆಯಲ್ಲಿ ಇಲ್ಲದುದು ಕಾವ್ಯದಲ್ಲೂ ಮಿಥ್ಯವೇ. ಬೇರೆ ಮಾತಿನಲ್ಲಿ ಹೇಳುವುದಾದರೆ, ವಾಸ್ತವತೆಯಲ್ಲಿ ಇಲ್ಲದುದು ಕಾವ್ಯವಾಗಲಾರದು."

ಬೇರೊಂದೆಡೆ ಬೆಲಿನ್ಸ್ಕಿ ವಿವರವಾಗಿ ಹೀಗೆ ಹೇಳಿದ್ದಾನೆ: "ಪ್ರತಿಯೊಂದು ಕಾವ್ಯಸೃಷ್ಟಿಯೂ ಕವಿಯ ಮನಸ್ಸಿನಲ್ಲಿ ಬೇರೂರಿರುವ ಬಲಶಾಲಿಯಾದ ಭಾವದ ಫಲ. ಆ ಭಾವವು, ಆತನ ಬರೇ ಮಾನಸಿಕ ಚಟುವಟಿಕೆಯ ಪರಿಣಾಮ ಮಾತ್ರ ಎಂದು ನಾವು ಭಾವಿಸಿದರೆ, ಕಲೆಯನ್ನು ಮಾತ್ರವಲ್ಲ, ಕಲೆಯ ಸಾಧ್ಯತೆಯನ್ನೂ ನಾವು ಅಳಿಸಿಬಿಡುತ್ತೇವೆ. ಯಾವುದೋ ಭಾವವನ್ನು ಯೋಚಿಸಿ ಸರಿಯಾದ ಚೌಕಟ್ಟಿನಲ್ಲಿ ಅದನ್ನು ತುರುಕಿಸುವುದಷ್ಟೇ ಕಾವ್ಯವೆಂದಾದರೆ, ಸಂಪಾದನೆ ಇಲ್ಲದೆ ಸಂಕಟಪಡುವಾಗ ಅಥವಾ ಲಾಭದ ಆಸೆಯಿಂದ ಬಾಯಲ್ಲಿ ನೀರೂರುವಾಗ ಇಲ್ಲವೆ, ಏನೋ ಖುಷಿಯಾದಾಗ ನಾವೂ ಯಾಕೆ ಕವಿಗಳಾಗಬಾರದು ? ಇಲ್ಲ, ಸ್ವಾಭಾವಿಕವಾಗಿಯೇ ಸ್ವಯಂಪ್ರೇರಣೆಯಿಂದಲೇ ಕವಿಗಳಾದವರು ಹಾಗೆ ಮಾಡುವುದಿಲ್ಲ ! ಸ್ವಭಾವತಃ ಕವಿಯಲ್ಲದವನು ಯಾವುದಾದರೂ ಗಹನವಾದ ಸತ್ಯವಾದ ಪರಿಶುದ್ಧವೇ ಆದ ಭಾವವನ್ನು ಯೋಚಿಸಬಹುದು. ಆದರೆ ಆತ ಬರೆಯುವುದು ಮಾತ್ರ ಅಲ್ಪವಾಗಿ ಕಪಟದ್ದಾಗಿ ಅಪ್ರಾಮಾಣಿಕವಾಗುವುದು; ಅಸಹ್ಯವಾಗಿ ನಿರ್ಜೀವವಾಗುವುದು. ಅದರಿಂದ ಯಾರಿಗೂ ಸಮಾಧಾನವಾಗದು. ಆ ಕವಿತೆ ಒಳಗೊಂಡ ಭಾವ ಎಷ್ಟೇ ಸತ್ಯವಾದರೂ ಎಲ್ಲರಿಗೂ ನಿರಾಶೆಯಾಗುವುದು. ಜನರು ಕಲೆಯನ್ನು ತಿಳಿದುಕೊಳ್ಳುವ ರೀತಿ ಇದು; ಕವಿಗಳಿಂದ ಅವರು ಕೇಳುವುದು ಇಂತಹದನ್ನು ; ವಿರಾಮವಿದ್ದಾಗ ಜನರಿಗೋಸ್ಕರ ನೀವು ಸೊಗಸಾದ ಒಂದು ಭಾವವನ್ನು ಯೋಚಿಸಿ, ಬಂಗಾರದ ಕಟ್ಟಿನೊಳಗಿಡುವ ವಜ್ರದಹಾಗೆ ಅದನ್ನೊಂದು ಚೌಕಟ್ಟಿನಲ್ಲಿ ಇರಿಸಿ ! ಆಹಾ, ಸಿದ್ಧವಾಯಿತು ಕಾವ್ಯ!.... ಇಲ್ಲ, ಅಂತಹ ಭಾವಗಳು ಕವಿಯ ಮನಸ್ಸನ್ನು ಆವರಿಸುವುದಿಲ್ಲ. ಜೀವಂತ ಸೃಷ್ಟಿಯ ಜೀವಂತ ಬೀಜ ಹಾಗೆ ಮೊಳೆಯುವುದಿಲ್ಲ. ಕಲೆಯು ಅಸ್ಪಷ್ಟ ತಾತ್ವಿಕ ಭಾವಗಳನ್ನಾಗಲೀ ವಿವೇಚನಾಪೂರ್ಣ

ಭಾವಗಳನ್ನಾಗಲೀ ಸಹಿಸುವುದಿಲ್ಲ. ಅದು ಸಹಿಸುವುದು ಕಾವ್ಯಭಾವಗಳನ್ನು ಮಾತ್ರ. ಕಾವ್ಯಭಾವವು ಯುಕ್ತಿಸರಣಿಯಲ್ಲ, ಜಡತತ್ತ್ವವಲ್ಲ, ಯಾವುದೇ ನಿಯಮವಲ್ಲ. ಅದು ಮಿಡಿಯುತ್ತಿರುವ ಉದ್ವಿಗ್ನಹೃದಯ, ಅದು ಮನೋರಾಗ... ಮನೋರಾಗವೆಂದರೇನು ? ಕಲಾಸೃಷ್ಟಿಯು ಯಾವುದೇ ತಮಾಷೆಯಲ್ಲ. ಕಲಾಕೃತಿಯು ವಿರಾಮದ ಇಲ್ಲವೆ 'ಶೋಕಿ'ಯ ಫಲವಲ್ಲ. ಕಲಾವಿದ ಶ್ರಮಪಡುವುದರಿಂದಲೇ ಆ ಸೃಷ್ಟಿ ಸಾಧ್ಯವಾಗುತ್ತದೆ. ತನ್ನ ಆತ್ಮದಲ್ಲಿ ಹೊಸತೊಂದು ಕೃತಿಯ ಬೀಜದ ಬಿತ್ತನೆ ಹೇಗೆ ಆಯಿತೆಂಬುದು ಆತನಿಗೇ ತಿಳಿದಿರುವುದಿಲ್ಲ. ತಾಯಿ ತನ್ನ ಗರ್ಭದಲ್ಲಿ ಶಿಶುವನ್ನು ಹೊತ್ತಹಾಗೆ ಕಾವ್ಯಭಾವದ ಬೀಜವನ್ನು ತನ್ನೊಳಗೆ ಆತ ಹೊರುತ್ತಾನೆ. ಕಾವ್ಯಸೃಷ್ಟಿಯ ಕ್ರಿಯೆಯು ಮಗುವಿನ ಜನನದ ಕ್ರಿಯೆಗೆ ಸಮಾನವಾಗಿದೆ. ದೈಹಿಕ ಶ್ರಮದೊಡನೆ ಕಂಡುಬರುವ ವೇದನೆಯೂ ಅಂತಹದೇ. ಇದು ಆತ್ಮಕ್ಕೆ ಸಂಬಂಧಿಸಿದ ಮಾನಸಿಕವಾದ ವೇದನೆ, ಅಷ್ಟೇ. ಆದುದರಿಂದ, ಕವಿಯು ಸೃಷ್ಟಿಯ ಯತ್ನಕ್ಕೂ ಸಾಹಸಕ್ಕೂ ಕೈ ಇಕ್ಕಿದರೆ, ಯಾವುದೋ ಬಲಶಾಲಿಯಾದ ಶಕ್ತಿಯಿಂದ ಅಜೇಯವಾದ ಉದ್ವೇಗದಿಂದ ಆತ ಪ್ರೇರಿತನಾಗಿದ್ದಾನೆ ಎಂಬುದು ಸ್ಪಷ್ಟ. ಆ ಶಕ್ತಿಯೇ ಉದ್ವೇಗವೇ ಮನೋರಾಗ."

ಹೀಗೆ, ವಾಸ್ತವತೆಯ ಮನೋರಾಗದಿಂದ ಸ್ಫೂರ್ತಿಗೊಂಡು ಹುಟ್ಟಿದ ಕಾವ್ಯ ಪ್ರಭಾವಶಾಲಿಯಾಗುತ್ತದೆಂದು, ಅದೇ ನಿಜವಾದ ಕಾವ್ಯವಾಗುತ್ತದೆಂದು, ಬೆಲಿನ್ಸ್ಕಿ ಹೇಳಿದ.

ಬದುಕಿಗಾಗಿ ಕಲೆ

ಈ ರೀತಿ ಹೊಸ ವಿಚಾರಗಳನ್ನು ಪ್ರತಿಪಾದಿಸಲು ಹೊರಟ ಬೆಲಿನ್ಸ್ಕಿ ಪ್ರತಿಗಾಮಿಯಾದ ಹಳೆಯ ವಿಚಾರಗಳಿಗಿದಿರು ಎಡೆಬಿಡದೆ ಹೋರಾಡಬೇಕಾಯಿತು. ಆಳುವ ವರ್ಗದ ಆರಾಧಕರು ಬಳಸುತ್ತಿದ್ದುದು 'ಕಲೆಗಾಗಿ ಕಲೆ' ಎನ್ನುವ ಮೋಹಕ ಘೋಷ, ಹೀಗೆ ಕಲಾ ಸೃಷ್ಟಿಯನ್ನೆಲ್ಲ ನಿರ್ಜೀವಗೊಳಿಸಲು ಅವರು ಯತ್ನಿಸುತ್ತಿದ್ದರು. ಆ ಘೋಷದ ಹಿಂದಿನ ದುರುದ್ದೇಶವನ್ನು ಬೆಲಿನ್ಸ್ಕಿ ಬಾರಿಬಾರಿಗೂ ಬಯಲಿಗೆಳೆದ.

ಒಮ್ಮೆ ಆತ ಹೀಗೆ ಬರೆದ : "ಪ್ರಾಸಗಳ ಕುಣಿತದ ಕಾಲ ಕಳೆಯಿತು. ಅದು ಇನ್ನೆಂದೂ ಮರಳಿ ಬರದು. ಕ್ಷುಲ್ಲಕವಾದ ಭಾವವೈಪರೀತ್ಯಗಳಿಗೂ ಹೃದಯ ವಿಕಾರಗಳಿಗೂ ಈಗ ಬೆಲೆಯಿಲ್ಲ. ಆಳವಾದ ಭಾವನೆಗಳನ್ನೂ ವಿಚಾರಗಳನ್ನೂ ಕಲಾತ್ಮಕರೂಪದಲ್ಲಿ ವ್ಯಕ್ತಗೊಳಿಸುವುದೇ ಈಗ ಬೇಕಾದ್ದು. ಅದಕ್ಕೆ ಪ್ರಾಸವಿದ್ದರೂ ಸರಿಯೇ, ಇಲ್ಲದಿದ್ದರೂ ಸರಿಯೆ, ಈ ದಿನ ಕಾವ್ಯದಲ್ಲಿ ಯಶಸ್ಸುಗಳಿಸಲು ಪ್ರತಿಭೆಯೊಂದೇ ಸಾಲದು. ಕಾಲಧರ್ಮವನ್ನು ಕುರಿತು ಆತ ಶಿಕ್ಷಣ ಪಡೆದಿರಬೇಕು. ಕನಸಿನ ಜಗತ್ತಿನಲ್ಲಿ ಕವಿ ಇನ್ನು ಬದುಕುವುದು ಸಾಧ್ಯವಿಲ್ಲ. ಆತ ಈಗಾಗಲೇ ಈ

ಕಾಲದ ವಾಸ್ತವತೆಯ ರಾಜ್ಯದ ನಾಗರಿಕನಾಗಿದ್ದಾನೆ. ಆತ ಸಂತೋಷ ಪಡಿಸುವ ಬರಿಯ ಭಟ್ಟಂಗಿಯಾಗಬೇಕೆಂದು ಸಮಾಜ ಈಗ ಅಪೇಕ್ಷಿಸುವುದಿಲ್ಲ. ಬದಲು ಆತ, ತನ್ನ ಅಂತಃಸ್ಫೂರ್ತಿಯ ಧ್ಯೇಯವಾದಿಯಾದ ಬದುಕಿನ ಪ್ರತಿನಿಧಿಯಾಗ ಬೇಕೆಂದು, ಇತರರಲ್ಲಿನ ನೋವು ಸಂಕಟಗಳನ್ನು ಕಾಣುವುದಕ್ಕಿಂತ ಮುಂಚಿತವಾಗಿ ತನ್ನಲ್ಲೇ ಸಮಾನವಾದ ನೋವು ಸಂಕಟಗಳನ್ನು ಕಂಡು, ಕಾವ್ಯ ಸ್ವರೂಪದಲ್ಲಿ ಅವುಗಳನ್ನು ಒಡಮೂಡಿಸಿ, ಗುಣಪಡಿಸುವ ವೈದ್ಯನಾಗಬೇಕೆಂದು ಸಮಾಜ ಬಯಸುತ್ತದೆ."

ಬದುಕಿಗೋಸ್ಕರ ಕಲೆ ಇರಬೇಕೆಂದು ಪ್ರತಿಪಾದಿಸಿದ ಬೆಲಿನ್ಸ್ಕಿ, ಕಲೆಯ ಅಂಶದ ಮಹತ್ವವನ್ನೆಂದೂ ಕಡೆಗಣಿಸಲಿಲ್ಲ. ಸಾಮಾಜಿಕ ಸಮಸ್ಯೆಗಳನ್ನು ಸಾಹಿತ್ಯದಲ್ಲಿ ಒಡಮೂಡಿಸುವ ಆತುರದಲ್ಲಿ ಕಲೆಯ ಅಂಶದ ಬಗೆಗೆ ಅಲಕ್ಷ್ಯ ತೋರಿದ ಕವಿಗಳನ್ನೂ ಬರೆಹಗಾರರನ್ನೂ ಆತ ಕಟುವಾಗಿ ಟೀಕಿಸಿದ. ಪ್ರತಿಭೆ ಇಲ್ಲದೆಹೋದರೆ ಎಷ್ಟು ಒಳ್ಳೆಯ ಪ್ರವೃತ್ತಿ ಇದ್ದೇನು ಫಲ?—ಎಂದು ಆತ ಕೇಳಿದ. ಪ್ರತಿಭೆ ಇಲ್ಲದವರು ಸಾಹಿತ್ಯಸೃಷ್ಟಿಗೆ ಕೈ ಇಕ್ಕಿದರೆ, ಯಾವ ಪ್ರತಿಮೆಗಳನ್ನೂ ಅವರು ಕಲ್ಪಿಸಲಾರದೆ ವಿಫಲರಾಗುತ್ತಾರೆ. ಗುಲಾಮಗಿರಿಯಲ್ಲಿದ್ದ ರೈತರ ದಾರುಣಪರಿಸ್ಥಿತಿಯನ್ನು ತೋರಿಸುವುದಕ್ಕೋಸ್ಕರ ಒಬ್ಬಾತ ಬರೆದ ಒಂದು ಕಾದಂಬರಿಯನ್ನೋದಿ ಒಮ್ಮೆ ಬೆಲಿನ್ಸ್ಕಿ ಹೀಗೆ ಹೇಳಿದ : "ಗ್ರಂಥಕರ್ತರು ಕಾದಂಬರಿ ಬರೆಯುವ ಯತ್ನಕ್ಕೆ ಕೈ ಹಾಕದೆ, ಅದರ ತಿರುಳನ್ನು ನಿರೀಕ್ಷಕನೊಬ್ಬನ ಟಿಪ್ಪಣಿಯಾಗಿ ಸಿದ್ಧಗೊಳಿಸಿದ್ದರೆ ಅವರ ಸದುದ್ದೇಶದ ಸಾಧನೆ ಹೆಚ್ಚು ಯಶಸ್ವಿಯಾಗುತ್ತಿತ್ತು..."

ಆಯಾ ಕಾಲದ ಸಾಮಾಜಿಕ ಪ್ರವೃತ್ತಿಗಳಿಗೂ ಕಲೆಗೂ ಇರುವ ಸಂಬಂಧವನ್ನು ಕುರಿತು ಬೆಲಿನ್ಸ್ಕಿ ಈ ರೀತಿ ಬರೆದ: "ಹಲವರು ಈಗ 'ಪ್ರವೃತ್ತಿ' ಎಂಬ ಪದದಿಂದ ಆಕರ್ಷಿತರಾಗಿದ್ದಾರೆ. ಆ ಪದದಲ್ಲೇ ಎಲ್ಲವೂ ಅಡಕವಾಗಿದೆ ಎಂದು ಅವರ ಭಾವನೆ. ಆದರೆ ನಿಜ ಸಂಗತಿ ಏನು? ಮೊದಲಿನದಾಗಿ, ಕಲೆಯ ಕ್ಷೇತ್ರದಲ್ಲಿ ಪ್ರತಿಭೆ ಇಲ್ಲದೆ ಹೋದರೆ ಪ್ರವೃತ್ತಿಗೆ ಚಿಕ್ಕಾಸಿನ ಬೆಲೆ ಇಲ್ಲ. ಎರಡನೆಯದಾಗಿ, ಪ್ರವೃತ್ತಿಯು ಬರೆಹಗಾರನ ಮನಸ್ಸಿನೊಳಗೆ ಮಾತ್ರವಲ್ಲ, ಮುಖ್ಯವಾಗಿ ಆತನ ಹೃದಯದಲ್ಲೂ ರಕ್ತದಲ್ಲೂ ಇರಬೇಕು. ಎಲ್ಲದಕ್ಕಿಂತ ಹೆಚ್ಚಾಗಿ, ಅದು ಒಳಗಿನಿಂದಲೇ ಉದಿಸುವ ಸ್ಫುರಿಸುವ ಭಾವನೆಯಾಗಬೇಕು; ಕಲೆಗೋಸ್ಕರ ತಾನು ಇರುವಷ್ಟೇ ಆ ಪ್ರವೃತ್ತಿಗೋಸ್ಕರವೂ ಇರುವೆನೆಂಬ ಬೋಧೆ ಆತನಲ್ಲಿರಬೇಕು. ಪುಸ್ತಕ ಓದಿ ಒಂದು ಭಾವವನ್ನು ಆಯ್ದುಕೊಳ್ಳಬಹುದು ಅಥವಾ ಬೇರೆಯವರಿಂದ ಕೇಳಿ ತಿಳಿಯಬಹುದು. ಸರಿಯಾದ ರೀತಿಯಲ್ಲಿ ಅದನ್ನು ಅರ್ಥಮಾಡಿಕೊಳ್ಳಲೂಬಹುದು. ಆದರೆ ಬರೆಹಗಾರ ಸಂಪೂರ್ಣವಾಗಿ ಅದನ್ನು ಅರಗಿಸಿಕೊಂಡು ಅದರ ಮೇಲೆ ತನ್ನ ಸ್ವಂತ ವ್ಯಕ್ತಿತ್ವದ

ಮುದ್ರೆಯನ್ನೊತ್ತದೇ ಹೋದರೆ, ಕವಿತಾರಚನೆಯಲ್ಲಿ ಮಾತ್ರವಲ್ಲ, ಎಲ್ಲ ರೀತಿಯ ಸಾಹಿತ್ಯ ಚಟುವಟಿಕೆಯಲ್ಲೂ ಅದು ನಿಷ್ಪ್ರಯೋಜಕವಾಗುವುದು. ಎಷ್ಟು ಬೇಕಿದ್ದರೂ ನಿಸರ್ಗವನ್ನು ಪ್ರತಿಬಿಂಬಿಸಿ; ಸಿದ್ಧಗೊಳಿಸಿದ ಭಾವಗಳನ್ನೂ ಸುಪ್ರಸಿದ್ಧ ಪ್ರವೃತ್ತಿಗಳನ್ನೂ ಮನಸ್ವಿಯಾಗಿ ನಿಮ್ಮ ಹಸ್ತಪ್ರತಿಯೊಳಗೆ ತುರುಕಿಸಿ; ಆದರೆ ನಿಮ್ಮಲ್ಲಿ ಕಾವ್ಯಪ್ರತಿಭೆ ಇಲ್ಲದಿದ್ದರೆ, ನಿಮ್ಮ ಬರವಣಿಗೆ ಯಾವುದನ್ನು ಪ್ರತಿಬಿಂಬಿಸುತ್ತಿದೆ ಎಂಬುದು ಯಾರಿಗೂ ಅರ್ಥವಾಗದು. ಅದರೊಳಗಿರುವ ಭಾವಗಳೂ ಪ್ರವೃತ್ತಿಗಳೂ ಸಾಮಾನ್ಯವಾದ ಆಲಂಕಾರಿಕ ಅಂಶಗಳಾಗಿ ಉಳಿಯುವುವು.—ಹೀಗೆ, ಸಾಹಿತ್ಯ ಸೃಷ್ಟಿಯಲ್ಲಿ ಆಂತರಿಕವಾದ ಕ್ರಿಯಾತ್ಮಕ ಅಂಶವೂ ಬಲು ಮುಖ್ಯವೆಂಬುದನ್ನು ಬೆಲಿನ್‌ಸ್ಕಿ ಸಾರಿದ.

ಸಾಮಾಜಿಕ ಹಿತಗಳಿಗೆ ಸಂಬಂಧವೇ ಇಲ್ಲದ 'ಶುದ್ಧ' ಕಲೆ ಎಂದಾದರೂ ಇತ್ತೆ? ಬೆಲಿನ್‌ಸ್ಕಿ ಹೇಳಿರುವಂತೆ "ಶುದ್ಧವಾದ ಅಸ್ಪಷ್ಟವಾದ ನಿಶ್ಮರತವಾದ ಅಥವಾ ತತ್ತ್ವಜ್ಞಾನಿಗಳು ಹೇಳುವಂತೆ ಪರಿಪೂರ್ಣವಾದ ಕಲೆ ಎಂದೂ ಎಲ್ಲಿಯೂ ಇರಲಿಲ್ಲ."

"ಮೊದಲಿನದಾಗಿ, ಕವಿಯು ಒಬ್ಬ ಮನುಷ್ಯ, ಬಳಿಕ ಆತ ರಾಷ್ಟ್ರದ ಪ್ರಜೆ, ಅನಂತರ ತನ್ನ ಕಾಲದ ಕೂಸು... ಆದುದರಿಂದಲೇ ಕಾವ್ಯವನ್ನೂ ಕವಿಯನ್ನೂ ವಾತಾವರಣದಿಂದ ಪ್ರತ್ಯೇಕಿಸಿ ಸೌಂದರ್ಯಮೀಮಾಂಸೆಯನ್ನು ಮಾಡುವುದು ಈಗ ಸಾಧ್ಯವಿಲ್ಲ."

ಕಲೆ ಮತ್ತು ವಿಜ್ಞಾನ

ವಾಸ್ತವತೆಯ ತಳಹದಿಯಮೇಲೆ ಕಲೆ ಸೃಷ್ಟಿಯಾಗಬೇಕೆಂಬ ಅಂಶದಿಂದ ಕಲೆಯ ಸಾಮಾಜಿಕ ಮೌಲ್ಯವೂ ಮಹತ್ವವೂ ಹೆಚ್ಚುತ್ತವೆ. ಪ್ರಾಮಾಣಿಕನಾದ ಕಲಾವಿದನ ಕೃತಿಯನ್ನೋದಿ ಅಲ್ಲಿ ಪ್ರತಿಬಿಂಬಿತವಾಗಿರುವ ಸಾಮಾಜಿಕ ಬದುಕಿನ ಅಭ್ಯಾಸದಿಂದ, ಆ ಸಮಾಜದೊಳಗಿನ ವಿವಿಧ ವಿಭಾಗಗಳ ವರ್ಗಗಳ ಪರಸ್ಪರ ಸಂಬಂಧವನ್ನೂ ವರ್ಗಹಿತಗಳ ಬೆಳವಣಿಗೆಯನ್ನೂ ನಾವು ತಿಳಿಯಬಹುದು. ಬರೆದವನ ವೈಯಕ್ತಿಕ ಅಭಿಪ್ರಾಯಕ್ಕಿಂತಲೂ ಅಲ್ಲಿ ಚಿತ್ರಿಸಿರುವ ಬದುಕಿನ ಸತ್ಯತೆಯೇ ಮುಖ್ಯವಾದುದರಿಂದ ಆ ಕೃತಿಯ ಸಹಾಯದಿಂದ ನಮ್ಮ ಸಾಮಾಜಿಕ ಜ್ಞಾನವನ್ನು ಹೆಚ್ಚಿಸಬಹುದು. ಇಂತಹ ತಿಳಿವಳಿಕೆಯ ಸಾಧನೆಯಲ್ಲಿ ವಿಜ್ಞಾನದಂತೆಯೇ ಕಲೆಯೂ ಸಹಕಾರಿ.

ಈ ಸಂಬಂಧವಾಗಿ ಬೆಲಿನ್‌ಸ್ಕಿ ಹೀಗೆ ಬರೆದಿದ್ದಾನೆ :

"....ಕಲೆಯೂ ವಿಜ್ಞಾನವೂ ಒಂದೇ ಅಲ್ಲವೆಂಬುದನ್ನು ಜನರು ಬಲ್ಲರು. ಆದರೆ ತಿರುಳಿಗೆ ಸಂಬಂಧಿಸಿ ವ್ಯತ್ಯಾಸವಿಲ್ಲ; ವ್ಯತ್ಯಾಸವಿರುವುದು ವಸ್ತುವನ್ನು ವಿಸ್ತರಿಸುವ ವಿಧಾನದಲ್ಲಿ ಮಾತ್ರ—ಎಂಬುದು ಅವರಿಗೆ ತಿಳಿಯದು. ತತ್ತ್ವಜ್ಞಾನಿ ಯುಕ್ತಿ

ಸರಣಿಯಲ್ಲಿ ಮಾತನಾಡುತ್ತಾನೆ; ಕವಿ ಪ್ರತಿಮೆಗಳು ಮತ್ತು ಚಿತ್ರಗಳ ರೂಪದಲ್ಲಿ ಮಾತನಾಡುತ್ತಾನೆ. ಆದರೆ ಇಬ್ಬರೂ ಹೇಳುವ ವಿಷಯ ಮಾತ್ರ ಒಂದೇ. ರಾಜಕೀಯ ಅರ್ಥಶಾಸ್ತ್ರಜ್ಞ ಅಂಕೆಸಂಖ್ಯೆಗಳೊಡನೆ ಸನ್ನದ್ಧನಾಗಿ ಸಮಾಜದಲ್ಲಿ ಇಂತಹ ಇಂತಹ ವರ್ಗದ ಸ್ಥಿತಿಗತಿ ಇಂತಿಂತಹ ಕಾರಣಗಳಿಗಾಗಿ ಸುಧಾರಿಸಿದೆಯೆಂದೋ ಕೆಟ್ಟಿದೆ ಯೊಂದೋ ಸಿದ್ಧಪಡಿಸಿ ತೋರಿಸುತ್ತಾನೆ. ಕವಿ, ಬದುಕಿನ ಮುಖ್ಯವಾದ, ಕಣ್ಣಿಗೆ ಕಟ್ಟುವ, ವರ್ಣನೆಯಿಂದ ಪ್ರಾಮಾಣಿಕವಾದ ಚಿತ್ರವನ್ನು ಕೊಟ್ಟು ಓದುಗರ ಮನಸ್ಸನ್ನು ಪ್ರಚೋದಿಸಿ, ಆ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಸುತ್ತಾನೆ, ಒಬ್ಬಾತ ಸಿದ್ಧಪಡಿಸಿಕೊಟ್ಟರೆ, ಇನ್ನೊಬ್ಬ ತೋರಿಸಿಕೊಡುತ್ತಾನೆ. ಆದರೆ ಇಬ್ಬರೂ ಸತ್ಯವನ್ನೇ ಮನಗಾಣಿಸಿಕೊಡುತ್ತಾರೆ. ಒಬ್ಬ ತರ್ಕಬದ್ಧವಾದ ಲೆಕ್ಕಾಚಾರದಿಂದ, ಇನ್ನೊಬ್ಬ ಚಿತ್ರಗಳ ಮೂಲಕ, ಮೊದಲಿನದನ್ನು ತಿಳಿದುಕೊಳ್ಳುವವರ ಸಂಖ್ಯೆ ಮಾತ್ರ ಬಲು ಸ್ವಲ್ಪ, ಎರಡನೆಯದು ಎಲ್ಲರಿಗೂ ಅರ್ಥವಾಗುತ್ತದೆ. ಸಮಾಜವು ಅತಿ ಹೆಚ್ಚು ಹಾಗೂ ಅತ್ಯಂತ ಪವಿತ್ರ ಆಸಕ್ತಿಯನ್ನು ವಹಿಸುವುದು ತನ್ನ ಕಲ್ಯಾಣದಲ್ಲಿ. ಸಮಾಜದ ಸದಸ್ಯರೆಲ್ಲರೂ ಆಸಕ್ತಿಯನ್ನು ತೋರುತ್ತಾರೆ. ಆ ಕಲ್ಯಾಣ ಸಾಧನೆಯ ಹಾದಿಯು ತಿಳಿವಳಿಕೆ. ಕಲೆಯು ವಿಜ್ಞಾನದಷ್ಟೇ ಚೆನ್ನಾಗಿ ಆ ತಿಳಿವಳಿಕೆಯನ್ನು ಹೆಚ್ಚಿಸಬಲ್ಲುದು. ಇಲ್ಲಿ ವಿಜ್ಞಾನ ಮತ್ತು ಕಲೆ ಎರಡೂ ಏಕಪ್ರಕಾರವಾಗಿ ಅವಶ್ಯವಾಗಿವೆ. ಕಲೆಗಿಂತ ವಿಜ್ಞಾನ ಹೆಚ್ಚು ಮಹತ್ವದ್ದಾಗುವುದು, ಇಲ್ಲವೆ ವಿಜ್ಞಾನಕ್ಕಿಂತ ಕಲೆ ಹೆಚ್ಚು ಮಹತ್ವದ್ದಾಗುವುದು ಸಾಧ್ಯವಿಲ್ಲ."

ಈ ರೀತಿ ಬರೆದು ಬೆಲಿನ್ಸ್‌ಕಿ ಸಾಹಿತಿಯನ್ನು, ತತ್ತ್ವಜ್ಞಾನಿಯ, ರಾಜಕೀಯ ಅರ್ಥಶಾಸ್ತ್ರಜ್ಞನ, ವಿಜ್ಞಾನಿಯ ಸಾಲಿನಲ್ಲಿ ಹಿರಿಯ ಸ್ಥಾನಕ್ಕೇರಿಸಿದ.

ಕತ್ತಿಯಾದ ಲೇಖನಿ

ಹೀಗೆ ಸೌಂದರ್ಯಮೀಮಾಂಸೆಯ ಕ್ಷೇತ್ರದಲ್ಲಿ ಬೆಲಿನ್ಸ್‌ಕಿ ಕಟ್ಟಿದುದು ಮೂರು ಪ್ರಾಕಾರಗಳ ಅಭೇದ್ಯ ದುರ್ಗ : ಒಂದು, ವಾಸ್ತವತೆ;

ಎರಡು, ಕಲಾತ್ಮಕ ಪರಿಪೂರ್ಣತೆ ;

ಮೂರು, ಆಂತರಿಕವಾದ ಕ್ರಿಯಾತ್ಮಕ ಅಂಶ.

ಇಂತಹ ದುರ್ಗದಲ್ಲಿ ಬೆಲಿನ್ಸ್‌ಕಿ, ಒಂದು ಶತಮಾನದ ಹಿಂದೆ, ಒಂದೇ ಸಮನೆ ಎಲ್ಲ ಕಾಲಗಳಲ್ಲೂ ಬೆಳಕು ನೀಡುವಂತಹ ದೀಪಸ್ತಂಭವನ್ನು ನೆಟ್ಟ.

ಆ ಕೆಲಸ ಸುಲಭವಾಗಿರಲಿಲ್ಲ, ಅದನ್ನು ಕುರಿತು ಆತನ ಸಂಗಡಿಗನಾದ ಚೆರ್‌ನಿಷೆವ್‌ಸ್ಕಿ ಹೀಗೆ ಹೇಳಿದ್ದಾನೆ: "ಬೆಲಿನ್ಸ್‌ಕಿ ಅತಿಯಾದ ಆಗ್ರಹಗಳನ್ನೇನೂ ವ್ಯಕ್ತಪಡಿಸಲಿಲ್ಲ. ಆದರೆ ಆತ ಕೇಳಿದುದೆಲ್ಲವೂ ದೃಢವಾಗಿದ್ದುವು, ಸುಸಂಬದ್ಧ

ವಾಗಿದ್ದುವು, ಒಂದೇ ಸಮನೆ ಕೆಚ್ಚಿನಿಂದ ಆತ ಅವುಗಳನ್ನು ವ್ಯಕ್ತಗೊಳಿಸುತ್ತಿದ್ದ. ಅತ್ಯಂತ ಕ್ರೂರವಾದ ತೀರ್ಪನ್ನೂ ಮೃದುಮಾತುಗಳಲ್ಲಿ ಹೇಳುವುದು ಸಾಧ್ಯ. ಆದರೆ ಧೀರ ಪ್ರಕೃತಿಯವನೂ ನಿರ್ಧಾರಮನಸ್ಕನೂ ಆದ ಬೆಲಿನ್ಸ್ಕಿ, ಅಂತಹ ತಂತ್ರವನ್ನು ತುಚ್ಛೀಕರಿಸಿದ. ತಾನು ಯೋಚಿಸಿದುದನ್ನಷ್ಟೇ ಆತ ಬರೆದ. ಸತ್ಯಕ್ಕೆ ಅಪಚಾರವಾಗ ಬಾರದೆಂಬುದಷ್ಟೇ ಆತ ತೋರಿದ ಕಾತರ. ಬರವಣಿಗೆಯಲ್ಲಿ, ತನ್ನ ವಿಚಾರಗಳನ್ನು ಅತ್ಯಂತ ಸಮರ್ಪಕವಾಗಿ ವ್ಯಕ್ತಗೊಳಿಸಲು ಬೇಕಾದ ನಿರ್ದಿಷ್ಟ ಪದಗಳನ್ನಷ್ಟೇ ಆತ ಬಳಸುತ್ತಿದ್ದ. ಕೆಟ್ಟುದನ್ನು ನೇರವಾದ ಮಾತಿನಲ್ಲಿ ಕೆಟ್ಟುದೆಂದೇ ಆತ ಕರೆದ. ತನ್ನ ತೀರ್ಪನ್ನು ಸಂದೇಹಕ್ಕೆ ಎಡೆಕೊಡುವಂತಹ ಸೂಚ್ಯಪದಗಳಲ್ಲಾಗಲೀ ರಾಜತಾಂತ್ರಿಕ ಭಾಷೆಯಲ್ಲಾಗಲೀ ಮುಚ್ಚಿಟ್ಟು ಹೇಳಲಿಲ್ಲ. ಆದರೆ ಕೆಲವರಿಗೆ, ಸತ್ಯದ ಪ್ರತಿಯೊಂದು ಪದವೂ—ಅದೆಷ್ಟೇ ಮಿತವಾಗಿರಲಿ—ಕ್ರೂರವಾಗಿ ತೋರುತ್ತದೆ. ಅಂತಹ ಜನರು ಬೆಲಿನ್ಸ್ಕಿಯ ಅಭಿಪ್ರಾಯಗಳನ್ನು ಕ್ರೂರವೆಂದೇ ಕರೆದರು. ಇದಕ್ಕೆ ಏನು ಮಾಡುವುದು ಸಾಧ್ಯ? ನೇರವಾದ ವರ್ತನೆಯನ್ನು ಕ್ರೂರವಾಗಿಯೇ ಯಾವಾಗಲೂ ಕಾಣುವ ಹಲವರು ಇದ್ದೇ ಇರುತ್ತಾರೆ. ಆದರೆ ಓದಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ವಿರುವವರು ಬೆಲಿನ್ಸ್ಕಿಯ ಅಪೇಕ್ಷೆಗಳೂ ಆಸೆಗಳೂ ಬಲು ಮಿತವಾದುವೆಂಬುದನ್ನು ಬಲ್ಲರು. ಪ್ರಬುದ್ಧವಾದ ಮನಸ್ಸಿರುವ ಪ್ರತಿಯೊಬ್ಬ ಮನುಷ್ಯನಿಗೂ ಅಗತ್ಯವಾದು ದಕ್ಕಿಂತ ಹೆಚ್ಚಿನದನ್ನು ನಮ್ಮ ಬರೆಹಗಾರರಿಂದ—ಕಲಾವಿದರಿಂದ ಬೆಲಿನ್ಸ್ಕಿ ಕೇಳಲಿಲ್ಲ.

"ವಿರೋಧಿಗಳೊಡನೆ ವಿವಾದದಲ್ಲಿ ಬೆಲಿನ್ಸ್ಕಿ ಎಂದೂ ಸೋಲುತ್ತಿರಲಿಲ್ಲ. ಪ್ರತಿಯೊಂದು ಸಾರಿಯೂ ಎದುರಾಳಿಗೆ ಎಲ್ಲ ಅಂಶಗಳಲ್ಲೂ ಸಂಪೂರ್ಣ ಸೋಲಾಗುತ್ತಿತ್ತು. ಪ್ರತಿಯೊಂದು ಸಾಹಿತ್ಯಿಕ ವಿವಾದ ನಡೆದಾಗಲೂ ಬೆಲಿನ್ಸ್ಕಿಯನ್ನು ವಿರೋಧಿಸಿದವನು ಜನಸಮುದಾಯದಲ್ಲಿ ಹೆಚ್ಚಿನಂಶ ತನ್ನ ಗೌರವವನ್ನು ಕಳೆದುಕೊಳ್ಳುತ್ತಿದ್ದ. ಏಕೆ? ಹೀಗೆ ಆಗುತ್ತಿದ್ದುದಕ್ಕೆ ಬೆಲಿನ್ಸ್ಕಿ ವಿರೋಧಿಸುತ್ತಿದ್ದ ಅಭಿಪ್ರಾಯಗಳ ಸ್ವರೂಪವೇ ಕಾರಣ. ಖಂಡಿತವಾಗಿಯೂ ಅಪಾಯಕಾರಿಯಾದ ತೀರಾ ತಪ್ಪಾದ ಅಭಿಪ್ರಾಯಗಳನ್ನು ಮಾತ್ರವೇ ಬೆಲಿನ್ಸ್ಕಿ ಖಂಡಿಸುತ್ತಿದ್ದ....."

ಆಧುನಿಕ ಐರೋಪ್ಯ ಸಾಹಿತ್ಯದ ಪ್ರಮುಖ ವಿಮರ್ಶಕ ಪ್ರಭೃತಿಗಳಲ್ಲಿ ಒಬ್ಬನಾದ ಜಾರ್ಜ್ ಲುಕಾಸ್ ಇದೇ ವಿಷಯವಾಗಿ ಹೀಗೆ ಬರೆದಿದ್ದಾನೆ :

"....ಬೆಲಿನ್ಸ್ಕಿಯ ಹಲವಾರು ಸಮಕಾಲೀನರು, ವಿಮರ್ಶಕರು ಹಾಗೂ ಕವಿಗಳು, ಆತ ಪ್ರತಿಯೊಂದನ್ನೂ ಪುಡಿಗೂಡಿಸುತ್ತಿದ್ದನೆಂದೂ ಪ್ರತಿಯಾಗಿ ಬೇರೇನನ್ನೂ ನಿರ್ಮಿಸುತ್ತಿರಲಿಲ್ಲವೆಂದೂ ದೂರುತ್ತಿದ್ದರು. ಬೆಲಿನ್ಸ್ಕಿ ತನ್ನ ವಿಮರ್ಶಾತ್ಮಕ ಪೃಥಕ್ಕರಣದಿಂದ ಹಲವಾರು ಸಮಕಾಲೀನರ ಸಾಹಿತ್ಯಜೀವನವನ್ನು ಮಣ್ಣುಗೂಡಿಸಿ ದನೆಂಬುದು ನಿಜ. ಆದರೆ ಈ ವಿವಾದಗಳಲ್ಲೆಲ್ಲ ಭವಿಷ್ಯತ್ತು ಬೆಲಿನ್ಸ್ಕಿಯ ತೀರ್ಪಿಗೇ

ಬೆಂಬಲಕೊಟ್ಟಿದೆ. ಆ ಮಹಾ ವಿಮರ್ಶಕನ ಅತ್ಯುಗ್ರದಾಳಿಗೆ ಒಳಗಾದ ಯಾವ ಗ್ರಂಥಕರ್ತನೂ ಅಂತಹ ಚಿಕಿತ್ಸೆಗೆ ಅರ್ಹನಾಗಿರಲಿಲ್ಲವೆಂದು ಮುಂದೆ ಕಂಡುಬಂದುದಿಲ್ಲ. ಬೆಲಿನ್ಸ್‌ಕಿಯ ವಿಮರ್ಶೆಯೆಲ್ಲ ರಷ್ಯದ ಸಾಹಿತ್ಯಾಕಾಶವನ್ನು ಶುಭ್ರಗೊಳಿಸಿದ ಗುಡುಗುಗಾಳಿ.......ಬೆಲಿನ್ಸ್‌ಕಿ, ತಾನು ಬದುಕಿದ್ದಾಗಲೇ, ವಾಸ್ತವವಾದಿ ಪೀಳಿಗೆಯ ಮೊದಲ ಕೃತಿಗಳು ಪ್ರಕಟವಾದುದನ್ನು ನೋಡಿದ. ಆಗ ಈ ಅವಿಶ್ರಾಂತ ವಿಮರ್ಶಕ ಮೃದುಹೃದಯದ ತಿಳಿವಳಿಕೆಯುಳ್ಳ ವ್ಯಕ್ತಿಯಾದ; ಹೊಸ ಪ್ರತಿಭೆಯ ಉತ್ಸಾಹಿ ಶೋಧಕನಾದ ತೂರ್ಗೆನೀವ್, ಗೊಂಚರೊವ್, ದಸ್ತ ಯೇವ್‌ಸ್ಕಿ ಇವರೆಲ್ಲರ ಆಗಮನವನ್ನು ಆತ ಆತ್ಮೀಯತೆಯಿಂದ ಘೋಷಿಸಿದ. ಈ ಮಹಾವಾಸ್ತವವಾದಿ ಬರೆಹಗಾರರೆಲ್ಲ ರಷ್ಯದ ಸಾಹಿತ್ಯದಲ್ಲಿ ಯೋಗ್ಯಸ್ಥಾನವನ್ನು ಆಕ್ರಮಿಸುವಂತೆ ಬೆಲಿನ್ಸ್‌ಕಿ ನೆರವಾದ.

ಬೆಲಿನ್ಸ್‌ಕಿಯ ಕೃತಿಗಳಲ್ಲಿ ಮುಖ್ಯವಾದುವು; ಹತ್ತೊಂಬತ್ತನೆಯ ಶತಮಾನದ ರಷ್ಯದ ರಾಷ್ಟ್ರಕವಿ ಪೂಷ್ಕಿನ್‌ನ ಕೃತಿಗಳನ್ನು ಕುರಿತು ಬರೆದ ವಿಮರ್ಶಾಲೇಖನ; 'ರಷ್ಯದ ಸಾಹಿತ್ಯವನ್ನು ಕುರಿತು ಯೋಚನೆಗಳು ಮತ್ತು ಟಿಪ್ಪಣಿಗಳು; ೧೮೪೫ರಲ್ಲೂ ೧೮೪೭ರಲ್ಲೂ ರಷ್ಯದ ಸಾಹಿತ್ಯವನ್ನು ಕುರಿತು ಬರೆದ ಸಿಂಹಾವಲೋಕನಗಳು; ಅಸಂಖ್ಯವಾದ ಸಾಹಿತ್ಯ ನಿಬಂಧಗಳು, ಪ್ರಬಂಧಗಳು ಪುಸ್ತಕ ವಿಮರ್ಶೆಗಳು. ಕೊನೆಯದಾಗಿ, ಸಾಯುವುದಕ್ಕೆ ಮುಂಚೆ ಆತ ಬರೆದ 'ಗೊಗೋಲ್‌ಗೆ ಕಾಗದ.'

ಪ್ರಭಾವಶಾಲಿಯಾದ ಈ ಲೇಖನಿಯ ಎದುರು ಸಾಹಿತ್ಯಕ್ಷೇತ್ರದ ಹಾರ ತುರಾಯಿಗಳು ಮಾತ್ರವಲ್ಲ, ಆಳುತ್ತಿದ್ದ ನಿರಂಕುಶಶಾಹಿಯೂ ನಡುಗಿತು. ಗುಪ್ತ ಪೋಲಿಸ ದಳಕ್ಕೆ ನೆರವಾಗುತ್ತಿದ್ದ ಕೆಲ ಬರೆಹಗಾರರು, ಬಂಡಾಯಗಾರ ಬೆಲಿನ್ಸ್‌ಕಿಯನ್ನು ಕುರಿತು ಸರಕಾರಕ್ಕೆ ಒಂದೇ ಸಮನೆ ವರದಿಗಳನ್ನು ಕಳುಹಿದರು: "ಸಾರ್ವಜನಿಕವಾಗಿ ರಾಜದ್ರೋಹದ ಬೀಜ ಬಿತ್ತಲು ಅವಕಾಶವಿಲ್ಲದೆ"ಪತ್ರಿಕೆಗಳ ಅಂಕಣದ ಮೂಲಕ ಬೆಲಿನ್ಸ್‌ಕಿ ಆ ಕೆಲಸ ಮಾಡುತ್ತಿದ್ದನೆಂದು ದೂರುಕೊಟ್ಟರು. ಸರಕಾರದ ವಿಜ್ಞಾನ ಪರಿಷತ್ತಿನ ಸದಸ್ಯನೊಬ್ಬ, ಬೆಲಿನ್ಸ್‌ಕಿಯ ಮತ್ತಿತರರ ಲೇಖನಗಳನ್ನು ಸಂಗ್ರಹಿಸಿ ವಿಂಗಡಿಸಿ ಏಳು ಬುಟ್ಟಿಗಳಲ್ಲಿ ತುಂಬಿ, 'ದೇವರಿಗಿದಿರಾಗಿ', 'ಸರಕಾರಕ್ಕಿದಿರಾಗಿ' 'ನೀತಿಗಿದಿರಾಗಿ' ಇತ್ಯಾದಿ ಹಣೆಪಟ್ಟಿಗಳನ್ನು ಅಂಟಿಸಿ, ಗುಪ್ತಪೋಲೀಸರ ಶಾಖೆಗೆ ಕಳುಹಿಕೊಟ್ಟ.

ಜಾರ್ ಚಕ್ರವರ್ತಿಯ ಹಿರಿಯ ಅಧಿಕಾರಿಗಳಲ್ಲೊಬ್ಬ ಒಮ್ಮೆ ಬೆಲಿನ್ಸ್‌ಕಿಯೊಡನೆ ಸೆಂಟ್ ಪೀಟರ್ ಮತ್ತು ಪಾಲ್ ದುರ್ಗದ ಕಾರಾಗಾರದಲ್ಲಿ, "ಬೆಚ್ಚಗಿನ ಒಂದು ಪುಟ್ಟ ಕೊಠಡಿ ನಿನಗಾಗಿ ಸಿದ್ಧವಾಗಿದೆ" ಎಂದು ಹೇಳಿದ. ಬೆಲಿನ್ಸ್‌ಕಿ ಹೋದಲ್ಲೆಲ್ಲ ಸರಕಾರದ ಗೂಢಚಾರರು ಅವನನ್ನು ಹಿಂಬಾಲಿಸಿದರು. ಆತನ ಕಾಗದಪತ್ರಗಳನ್ನು

ಒಡೆದು ನೋಡಿದರು; ಕಿರುಕುಳ ಕೊಟ್ಟರು.

ಬೆಲಿನ್ಸ್‌ಕಿಯನ್ನು ಕಾಡುತ್ತಿದ್ದ ಇನ್ನೊಂದು ದೊಡ್ಡ ದುಷ್ಟಶಕ್ತಿಯಿತ್ತು-ಬಡತನ; ಅದರ ಬೆಂಗಾವಲಿಗಿದ್ದುದು ಉಪವಾಸ. ಯೌವನ ಪ್ರಾಪ್ತವಾದಾಗಲೇ ಅನಾರೋಗ್ಯದ ಸರಸ ಆತನಿಗೆ ಲಭಿಸಿತ್ತು. ಕ್ರಮೇಣ ಆ ಅಸ್ವಾಸ್ಥ್ಯ ಕ್ಷಯವಾಗಿ ಮಾರ್ಪಟ್ಟು ದೇಹವನ್ನು ದಹಿಸಿತು. ಚಿಕಿತ್ಸೆಗೆಂದು ಬೆಲಿನ್ಸ್‌ಕಿ, ಫ್ರಾನ್ಸ್-ಜರ್ಮನಿಗಳಿಗೆ ಹೋದ; ಪ್ರಯೋಜನವಾಗಲಿಲ್ಲ. ಹಾಗೆ ವಿದೇಶದಲ್ಲಿದ್ದಾಗಲೇ ಆತ 'ಗೊಗೋಲ್‌ಗೆ ಕಾಗದ'ವನ್ನು ಬರೆದ. ಅದು ಹಲವಾರು ಪೀಳಿಗೆಗಳಿಗೇ ಆತ ಬಳುವಳಿಯಾಗಿ ಬಿಟ್ಟುಹೋದ ಬರೆವಣಿಗೆ—ಆತನ ಚರಮ ಕೃತಿ.

೧೮೪೮ ಮೇ ೨೬ ರಂದು ಬೆಲಿನ್ಸ್‌ಕಿ ಗತಿಸಿದ. ಆತನ ಅವಶೇಷಗಳನ್ನು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಸಮಾಧಿ ಮಾಡಿದರು.

ಆತ ಸತ್ತರೂ ಆಳುತ್ತಿದ್ದವರ ತಲೆನೋವು ಕಡಿಮೆಯಾಗಲಿಲ್ಲ, ಆತನ 'ಗೊಗೋಲ್‌ಗೆ ಕಾಗದ'ದ ಪ್ರಕಟಣೆಯನ್ನು ಸರಕಾರ ನಿಷೇಧಿಸಿತು. ಅದನ್ನು ಓದಿದ, ಪ್ರತಿಮಾಡಿದ ತಪ್ಪಿಗಾಗಿ ಹಲವರ ಬಂಧನವಾಯಿತು. "ಆತ ಬದುಕಿದ್ದಿದ್ದರೆ ದುರ್ಗದಲ್ಲಿ ಕೊಳೆಹಾಕುತ್ತಿದ್ದೆವು" ಎಂದು ಗುಪ್ತ ಪೊಲೀಸರ ಮುಖ್ಯಸ್ಥ ಆಕ್ರೋಶ ಮಾಡಿದ.

ಬೆಲಿನ್ಸ್‌ಕಿಯ ಹೆಸರನ್ನೇ ಪ್ರಸ್ತಾಪಿಸಬಾರದೆಂದು ರಷ್ಯದ ಪತ್ರಿಕೆಗಳ ಮೇಲೆಲ್ಲ ನಿಷೇಧಾಜ್ಞೆ ಹೊರಿಸಲಾಯಿತು. 'ಗೊಗೋಲ್‌ಗೆ ಕಾಗದ'ವಂತೂ ಬೆಲಿನ್ಸ್‌ಕಿ ಸತ್ತು ಐವತ್ತೇಳು ವರ್ಷಗಳವರೆಗೆ—೧೯೦೫ರ ವರಗೆ—ಪ್ರಕಟಗೊಳ್ಳುವುದು ಸಾಧ್ಯವಾಗಲಿಲ್ಲ.

ಹೀಗಿದ್ದರೂ ಬೆಲಿನ್ಸ್‌ಕಿಯ ಕೀರ್ತಿ ರಷ್ಯದ ಆದ್ಯಂತ ಹರಡಿತು, ಆತನ ಕೃತಿಗಳ ಪ್ರಭಾವ ರಷ್ಯದ ಆಚೆಗೆ ಇತರ ದೇಶಗಳಿಗೂ ಹಬ್ಬಿತು. ಬೆಲಿನ್ಸ್‌ಕಿಯ ಸಂಗಡಿಗನು-ಮುಖ್ಯವಾಗಿ ಚೆರ್‌ನಿಷೇವ್‌ಸ್ಕಿ ಮತ್ತು ದೊಬ್ರುಲ್ಯುಬೋವ್ ಬೆಲಿನ್ಸ್‌ಕಿಯ ಸಾಹಿತ್ಯ ಚಟುವಟಿಕೆಗಳನ್ನು ಮುಂದುವರಿಸಿ ಮುಂದಿನ ಅಧ್ಯಾಯಗಳನ್ನು ಬರೆದರು. ಆತ ಆರಂಭಿಸಿದ ಕ್ರಾಂತಿಕಾರಿ ಜನವಾದಿ ಕಾವ್ಯಮೀಮಾಂಸೆಯ ಮಾರ್ಗ, ಭವ್ಯವಾದೊಂದು ಪರಂಪರೆಯಾಯಿತು. ಆತನ ಜನವಾದಿ ವಾಸ್ತವವಾದವೇ ಮುಂದೆ ಇಪ್ಪತ್ತನೆಯ ಶತಮಾನದಲ್ಲಿ ಮ್ಯಾಕ್ಸಿಂಗಾರ್ಕಿ ಮೊದಲುಮಾಡಿದ ಸಮಾಜವಾದಿ ವಾಸ್ತವವಾದಕ್ಕೆ ಮಾತೃಕೆಯಾಯಿತು.

• ಪ್ರಥಮ ಪ್ರಕಟಣೆ 'ಪ್ರಬುದ್ಧ ಕರ್ನಾಟಕ' ದಲ್ಲಿ

೧೯೫೫

ವಿಚಾರ ಸಾಹಿತ್ಯ

ಸಮ್ಮೇಳನಾಧ್ಯಕ್ಷ ಶ್ರೀರಂಗರೇ ನೆರೆದಿರುವ ಲೇಖಕ ಬಾಂಧವರೇ, ಸಾಹಿತ್ಯಪ್ರಿಯರೇ,

ಈ ಲೇಖಕಗೋಷ್ಠಿಯ ಅಧ್ಯಕ್ಷನಾಗಬೇಕೆಂಬ ಕರೆಯೋಲೆ ಬಂದಾಗ ಕಳುಹಿದವರ ಅಜಾಗರೂಕತೆಯಿಂದ ಅಪ್ಪಿತಪ್ಪಿ ಇದು ನನ್ನೆಡೆಗೆ ಬಂದಿರಲಾರದಷ್ಟೆ-ಎಂಬ ಸಂದೇಹ ನನ್ನನ್ನು ಕ್ಷಣಕಾಲ ಕಾಡಿತು. ಆದರೆ, ಓಲೆಯಲ್ಲಿದ್ದ ಸುಸ್ಪಷ್ಟವಾದ ಒಕ್ಕಣೆ ಕಂಡು ನಾನು ಅಸಹಾಯನಾದೆ. ಬಳಿಕ, ಇದು ಕಾಲ ಧರ್ಮದ ಚಿಹ್ನೆ ಇರಬಹುದೆಂದು ನನ್ನನ್ನು ನಾನೇ ಸಮಾಧಾನಪಡಿಸಿದೆ. ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿ ಕಾರ್ಯಕಲಾಪಗಳೆಲ್ಲ ನಡೆಯುವಾಗ ಮರಿಸಮ್ಮೇಳನಗಳ ಆವಶ್ಯಕತೆಯಾದರೂ ಏನು? ಎಂದು ಆಕ್ಷೇಪಿಸಿದವನು ನಾನು. ಹೀಗಿದ್ದರೂ ನನ್ನನ್ನೇ ಹಿಡಿದುತರುವ ಎದೆಗಾರಿಕೆಯನ್ನು ಸಮ್ಮೇಳನದ ಸಂಘಟಕರು ತೋರಿದ್ದಾರೆ. ಅವರು ಅಭಿನಂದನೆಗೆ ಅರ್ಹರು ಎನ್ನಲೆ?

ನನ್ನ ಆಯ್ಕೆಯನ್ನು ಕುರಿತು ನಾನೇ ಟೀಕಿಸತೊಡಗುವುದು ಆಭಾಸವೆನಿಸೀತು. ಈ ಆಯ್ಕೆಯ ಮೂಲಕ ಕನ್ನಡ ಸಾಹಿತ್ಯಲೋಕದ ಯುವ ಜನಾಂಗವನ್ನೆ ಗೌರವಿಸಲಾಗಿದೆ-ಎಂಬ ದೊಡ್ಡ ಮಾತೊಂದನ್ನು ಹೇಳಲು ಮನಸ್ಸಾಗುತ್ತಿದೆ. ಹಾಗೆ ಹೇಳುವುದರಿಂದ, ನನ್ನ ಹೊಣೆಗಾರಿಕೆಯನ್ನು ನಾನು ಹೆಚ್ಚಿಸಿಕೊಂಡಂತೆ. ನನಗೆ ನಾನೇ ಜವಾಬ್ದಾರನಾಗಿರುವ ಸುಲಭ ಕೆಲಸದ ಬದಲು, ಇತರರ ಪರವಾಗಿಯೂ ಮಾತನಾಡುವ ಹೊಣೆಯನ್ನು ಹೊರುವುದು ಇದೆಲ್ಲಿಯ ಗೋಳು?

ಸ್ವಾಗತ ಸಮಿತಿಯವರು, 'ನಿಮ್ಮ ಭಾಷಣವನ್ನು ಬರೆದು ಕಳುಹಿಸಿ' ಎಂದು ಒಂದು ಪತ್ರದಲ್ಲಿ ಬರೆದರು. ಇನ್ನೊಂದು ಪತ್ರದಲ್ಲಿ, ನಿಮ್ಮ ಲೇಖನ ಬೇಗನೆ ಬರಲಿ' ಎಂದರು. ಬೇಕಾಗಿರುವುದು ಭಾಷಣವೆ ಲೇಖನವೆ ಎಂದು ನಾನು ತಬ್ಬಿಬ್ಬಾಗಲಿಲ್ಲ, ಬರೆಹಗಾರನ ಭಾಷಣ, ಲೇಖನದಂತೆಯೆ ಇರಬೇಕಾದುದು ನ್ಯಾಯ ತಾನೆ ?

ಅಮೆರಿಕದ ಸಾಹಿತಿ ಅರ್ನೆಸ್ಟ್ ಹೆಮಿಂಗ್‌ವೇ, 'ಬರೆಹಗಾರ ಎಂದಿಗೂ ಭಾಷಣಕಾರನಾಗಬಾರದು' ಎಂದಿದ್ದಾರೆ. ಇದನ್ನು ಒಪ್ಪಿಕೊಳ್ಳುವ ಆಸೆ, ಆದರೂ,

ಲೇಖನಿ ಬರೆವುದನ್ನು ನಾಲಗೆ ಒರೆದರೆ ತಪ್ಪೇನು? ಎಂಬ ತರ್ಕ. ಹೀಗಾಗಿ, ಬರೆಹಗಾರ ಭಾಷಣಕಾರನಲ್ಲ ಎಂಬುದನ್ನೊಪ್ಪಿಕೊಂಡು ಆತ ಭಾಷಣವನ್ನೇನಾದರೂ ಮಾಡಿದರೆ ಅದು ಲೇಖನದಂತಿರಬೇಕು ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ.

ಯಾವುದು ವಿಚಾರಸಾಹಿತ್ಯ ?

ವಿಚಾರಸಾಹಿತ್ಯವನ್ನು ಕುರಿತು ಲೇಖಕಗೋಷ್ಠಿಯ ಅಧ್ಯಕ್ಷಭಾಷಣ ನಡೆಯಬೇಕೆಂದು ನನಗೆ ಮುನ್ಸೂಚನೆ ದೊರೆತಿದೆ. ಹೀಗೆ ವಿಷಯವನ್ನು ನಿರ್ದಿಷ್ಟಗೊಳಿಸಿರುವುದು, ಮಾತನಾಡುವವರ ಹಾಗೂ ಕೇಳುವವರ ಇಬ್ಬರ ಆರೋಗ್ಯದ ದೃಷ್ಟಿಯಿಂದಲೂ ಒಳ್ಳೆಯದೇ ಎಂಬುದರಲ್ಲಿ ಸಂದೇಹವಿಲ್ಲ.

ವಿಚಾರಸಾಹಿತ್ಯವೆಂದು ವಾಙ್ಮಯದ ಯಾವ ಅಂಗವನ್ನು ಕುರಿತು ಮಾತನಾಡಲಿ? ಪ್ರಾಚೀನ ಕನ್ನಡ ಸಾಹಿತ್ಯದ ಬೂಜು ಹಿಡಿದಿರುವ ಗ್ರಂಥ ಭಂಡಾರವನ್ನು ತೆರೆದು, ಅಲಂಕಾರಗ್ರಂಥಗಳು ವ್ಯಾಕರಣ ಗ್ರಂಥಗಳು ಗಣಿತಶಾಸ್ತ್ರ-ಪಾಕಶಾಸ್ತ್ರ-ಕಾಮಶಾಸ್ತ್ರ-ವೈದ್ಯಶಾಸ್ತ್ರಗಳನ್ನೆತ್ತಿಕೊಳ್ಳಲೆ ? ಇದನ್ನೇ ಗತವೈಭವವೆಂದು ಕರೆದು ಇಹವನ್ನೇ ಮರೆತುಬಿಡುವುದು ಎಷ್ಟು ಸುಖಕರ ! ಅಥವಾ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ-ತತ್ತ್ವಜ್ಞಾನ-ಇತಿಹಾಸ ಮತ್ತಿತರ ವಿಷಯಗಳ ಮೇಲೆ ಅಲ್ಲೊಂದು ಇಲ್ಲೊಂದು ಪ್ರಕಟವಾಗಿರುವ ಪುಸ್ತಕಗಳನ್ನು ಕುರಿತು ವ್ಯಾಖ್ಯಾನ ಕೊಡಲೆ? ಅಂತಹ ಕೃತಿಗಳ ಯಾದಿಯೊಂದನ್ನು ಸಿದ್ಧಗೊಳಿಸಿ ನಿಮ್ಮ ಮುಂದಿಡಲೆ? ಇಲ್ಲವೆ, ಪಾಶ್ಚಾತ್ಯ ದಾರ್ಶನಿಕರ ವಿವಿಧ ಶಾಸ್ತ್ರಪಾರಂಗತರ ನಾಮಾವಳಿಯನ್ನು ಜಪಿಸಿ ಶ್ರೋತೃಗಳನ್ನು ದಂಗುಬಡಿಸುವ ವಿಫಲಯತ್ನವನ್ನು ಮಾಡಲೆ ?

ಮಾರಾಟಕ್ಕಿರುವ ಕನ್ನಡ ಪುಸ್ತಕಗಳ ಕ್ರಯಪಟ್ಟಿಯನ್ನು ನಮ್ಮ ಪ್ರಕಾಶಕರು ಆಗಾಗ್ಗೆ ಸಿದ್ಧಪಡಿಸುವುದುಂಟು. ಅದರಲ್ಲಿ ಮೊದಲು ಕಾಣಿಸುವ ಶೀರ್ಷಿಕೆ ಕಾದಂಬರಿ. ಅನಂತರ-ಸಣ್ಣಕತೆ, ಬಳಿಕ-ನಾಟಕ, ಅದಾದಮೇಲೆ ಕವಿತೆ. ಕೊನೆಯದಾಗಿ-ಇನ್ನಿತರ. ಆ 'ಇನ್ನಿತರ' ದಲ್ಲಿ, ಹರಟೆ- ಪ್ರಬಂಧಗಳ ಜತೆಗೆ ಜ್ಞಾನಸಾಹಿತ್ಯವನ್ನೂ ಕಾಣುವೆವು. ಪುಸ್ತಕಗಳ ಮೊತ್ತದಲ್ಲಿ ಆ ಸಾಹಿತ್ಯದ ಪ್ರಮಾಣ ಅತ್ಯಲ್ಪ. ಸಾಮಾನ್ಯವಾಗಿ ನಾವು ವಿಚಾರ ಸಾಹಿತ್ಯವೆನ್ನುವುದು ಆ ಅಲ್ಪ ಪ್ರಮಾಣವನ್ನೇ. ಆದರೆ, ಆ ರೀತಿಯಾದ ವರ್ಗೀಕರಣವನ್ನು ಸರಿಯೆಂದು ಒಪ್ಪಿಕೊಳ್ಳುವುದು ನನಗೆ ಇಷ್ಟವಿಲ್ಲ.

ವಿಚಾರಸಾಹಿತ್ಯ ಎನ್ನುವುದರ ವಿಪುಲ ಅರ್ಥವೇನು ಹಾಗಾದರೆ?

ಮನೋರಂಜನೆಯೊಂದೇ ಸೃಷ್ಟಿಸಾಹಿತ್ಯದ ಗುರಿ ಎಂದು ವಾದಿಸುವವರುಂಟು. ಅವರ ದೃಷ್ಟಿಯಲ್ಲಿ ಕತೆ-ಕಾದಂಬರಿ, ಕಾಲಹರಣ ಸಾಧನಮಾತ್ರ. ದಿನದಿಂದ ದಿನಕ್ಕೆ ಹೆಚ್ಚುಹೆಚ್ಚು ದುರ್ಬಲವಾಗುತ್ತಿರುವ ಆ ಪ್ರತಿಪಾದನೆಯನ್ನು ಒಪ್ಪದಿರುವವರಲ್ಲಿ

ನಾನೊಬ್ಬ. ಸೃಷ್ಟಿಸಾಹಿತ್ಯದಲ್ಲೂ ವಿಚಾರದ ಅಂಶವಿದ್ದೇತೀರಬೇಕು, ವಿಚಾರದ ಅಂಶವೂ ಕಲೆಯ ಅಂಶವೂ ಸಮಸಮನಾಗಿರಬೇಕು, ಸಮರಸ ಹೊಂದಿರಬೇಕು, ಎನ್ನುವ ಅಭಿಪ್ರಾಯ ನನ್ನದು.

ವಿಚಾರಸಾಹಿತ್ಯ ಎನ್ನುವುದಕ್ಕೆ ವ್ಯಾಪಕವಾದ ಅರ್ಥವನ್ನು ಕಲ್ಪಿಸುವುದು ಅಗತ್ಯ. ವಿಚಾರಶೀಲವಾದ, ವಿಚಾರವನ್ನುಳ್ಳ, ಸಾಹಿತ್ಯವೆಲ್ಲಾ ವಿಚಾರ ಸಾಹಿತ್ಯವೇ.

ಸತ್ಯ ಮತ್ತು ಸೌಂದರ್ಯ

ಜ್ಞಾನಿಯನ್ನು ಸತ್ಯಾನ್ವೇಷಕನೆನ್ನುತ್ತಾರೆ, ಸೌಂದರ್ಯೋಪಾಸಕನೆನ್ನಿಸಿಕೊಳ್ಳುವವನು ಕಲಾವಿದ-ಬರೆಹಗಾರ. ಸತ್ಯಾನ್ವೇಷಣೆಯೂ ಸೌಂದರ್ಯೋಪಾಸನೆಯೂ ವಿಭಿನ್ನ ಎಂಬ ಸಾಮಾನ್ಯ ಅಭಿಪ್ರಾಯವೊಂದು ರೂಢಿಯಲ್ಲಿದೆ. ಇದು ಸರಿಯೇ—ವಿಚಾರ ಮಾಡೋಣ.

ವಿಜ್ಞಾನಿಗಿರುವುದು ಬಹಿರ್ಮುಖ ದೃಷ್ಟಿ. ಸುತ್ತಲಿನ ವಸ್ತುಸ್ಥಿತಿಯಲ್ಲಿ ಆತ ಸತ್ಯವನ್ನು ಅರಸುತ್ತಾನೆ. ಹಾಗೆಯೇ ಸೌಂದರ್ಯದ ಉಪಾಸನೆ ಕೂಡಾ. 'ಸುಂದರ' ಎಂಬ ಅನುಭವವಾಗುವುದು ಯಾವುದನ್ನೋ ಕಂಡಾಗ, ಹೊರಗಿನ ಯಾವುದನ್ನೋ ಕುರಿತು ನಮ್ಮ ಅಂತರಂಗ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದಾಗ. ಹೀಗೆ, ಸತ್ಯ ಮತ್ತು ಸೌಂದರ್ಯ—ಎರಡನ್ನೂ ನಾವು ಕಾಣುವುದು ನಮ್ಮ ಸುತ್ತುಮುತ್ತಲಿನ ಇರುವಿಕೆಯಲ್ಲಿ. ಆ ಇರುವಿಕೆಯೇ ನಮ್ಮಲ್ಲಿ ಅರಿವನ್ನುಂಟುಮಾಡುವ ಪ್ರೇರಕ-ಶಕ್ತಿ- ನಿರ್ಣಾಯಕ ಶಕ್ತಿ. ಹೀಗೆ ತಿಳಿದುಕೊಳ್ಳುವುದರ ಬದಲು, ವಿಜ್ಞಾನವು ಬಹಿರಂಗಕ್ಕೆ ಸಂಬಂಧಿಸಿದ್ದೆಂದೂ ಕಲೆ ಅಂತರಂಗಕ್ಕೆ ಸಂಬಂಧಿಸಿದ್ದೆಂದೂ ಮಾಡುವ ವಾದ ಬುಡವಿಲ್ಲದ್ದು. ಮೆದುಳನ್ನೆಲ್ಲ ವಿಜ್ಞಾನಿಗಳ ಗುತ್ತಿಗೆಯಾಗಿ ಮಾಡಿ, ಹೃದಯ ಮಾತ್ರ ನಮ್ಮ ಬಂಡವಾಳ ಎನ್ನೋಣವೆ ? ಅಂತಹ ತ್ಯಾಗಬುದ್ಧಿಯಿಂದ ಅಪಹಾಸ್ಯಕ್ಕೆ ಕಾರಣರಾದೇವು, ಅಷ್ಟೆ.

ಆಂಗ್ಲ ಮಹಾಕವಿ ಕೀಟ್ಸ್, "ಸೌಂದರ್ಯವು ಸತ್ಯ, ಸತ್ಯವು ಸೌಂದರ್ಯ" ಎಂದ. ಆತ ಆಡಿರುವ ಮಾತು ಸಾರ್ವಕಾಲಿಕವಾದದ್ದು.

ವಿಜ್ಞಾನಿ ಅರಸುವ ಅಂಶವೂ ಕಲಾವಿದ ಕಾಣುವ ಅಂಶವೂ ವಸ್ತುಸ್ಥಿತಿಯಲ್ಲೇ ವಾಸ್ತವತೆಯಲ್ಲೇ ಅಡಕವಾಗಿವೆ. ಎಲ್ಲ ವಾಸ್ತವತೆಯ ಮೂಲವೇ ಸಮಾಜ. ಹೀಗಾಗಿ, ವಿಜ್ಞಾನಿಯ ಕೆಲಸವೇ ಇರಲಿ, ಕಲಾವಿದನ ಕೆಲಸವೇ ಇರಲಿ, ಆ ಸೃಷ್ಟಿಯೆಲ್ಲ ಸಾಮಾಜಿಕವಾದುದು.

ಒಂದು ಶತಮಾನದ ಹಿಂದೆ ರಷ್ಯಾದೇಶದ ಮಹಾ ವಿಮರ್ಶಕ ಬೆಲಿನ್ಸ್‌ಕಿ ಕಲೆ ಮತ್ತು ವಿಜ್ಞಾನಗಳಿಗೆ ಸಂಬಂಧಿಸಿ ಬರೆದ ಮಾತುಗಳು ಹೀಗಿವೆ :

"....ಕಲೆಯೂ ವಿಜ್ಞಾನವೂ ಒಂದೇ ಅಲ್ಲವೆಂಬುದನ್ನು ಜನರು ಬಲ್ಲರು. ಆದರೆ, ತಿರುಳಿಗೆ ಸಂಬಂಧಿಸಿ ವ್ಯತ್ಯಾಸವಿಲ್ಲವೆಂಬುದೂ ವ್ಯತ್ಯಾಸವಿರುವುದು ವಸ್ತುವನ್ನು ವಿಸ್ತರಿಸುವ ವಿಧಾನದಲ್ಲಿ ಮಾತ್ರವೆಂಬುದೂ ಅವರಿಗೆ ತಿಳಿಯದು. ತತ್ತ್ವಜ್ಞಾನಿ ಯುಕ್ತಿಸರಣಿಯಲ್ಲಿ ಮಾತನಾಡುತ್ತಾನೆ : ಕವಿ ಪ್ರತಿಮೆಗಳು ಮತ್ತು ಚಿತ್ರಗಳ ರೂಪದಲ್ಲಿ ಮಾತನಾಡುತ್ತಾನೆ. ಆದರೆ, ಇಬ್ಬರೂ ಹೇಳುವ ವಿಷಯ ಮಾತ್ರ ಒಂದೇ. ರಾಜಕೀಯ ಅರ್ಥಶಾಸ್ತ್ರಜ್ಞ ಅಂಕಿಸಂಖ್ಯೆಗಳೊಡನೆ ಸನ್ನದ್ಧನಾಗಿ, ಸಮಾಜದಲ್ಲಿ ಇಂತಹ ಇಂತಹ ವರ್ಗದ ಸ್ಥಿತಿಗತಿ ಇಂತಹ ಕಾರಣಗಳಿಗಾಗಿ ಸುಧಾರಿಸಿದೆಯೆಂದೋ ಕೆಟ್ಟಿದೆಯೆಂದೋ ಸಿದ್ಧಪಡಿಸಿ ತೋರಿಸುತ್ತಾನೆ. ಕವಿ, ಬದುಕಿನ ಮುಖ್ಯವಾದ ಕಣ್ಣಿಗೆ ಕಟ್ಟುವ ವರ್ಣನೆಯಿಂದ, ಪ್ರಾಮಾಣಿಕವಾದ ಚಿತ್ರವನ್ನು ಕೊಟ್ಟು ಓದುಗರ ಮನಸ್ಸನ್ನು ಪ್ರಚೋದಿಸಿ, ಸಮಾಜದಲ್ಲಿ ಇಂತಹ ಇಂತಹ ವರ್ಗದ ಸ್ಥಿತಿಗತಿ ಆ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಸುತ್ತಾನೆ. ಒಬ್ಬಾತ ಸಿದ್ಧಪಡಿಸಿಕೊಟ್ಟರೆ, ಇನ್ನೊಬ್ಬ ತೋರಿಸಿಕೊಡುತ್ತಾನೆ. ಆ ಇಬ್ಬರೂ ಮನಗಾಣಿಸಿಕೊಡುವುದು ಸತ್ಯವನ್ನೇ. ಒಬ್ಬ ತರ್ಕಬದ್ಧವಾದ ಲೆಕ್ಕಾಚಾರದಿಂದ, ಇನ್ನೊಬ್ಬ ಚಿತ್ರಗಳ ಮೂಲಕ. ಮೊದಲಿನದನ್ನು ತಿಳಿದುಕೊಳ್ಳುವವರ ಸಂಖ್ಯೆ ಮಾತ್ರ ಬಲು ಸ್ವಲ್ಪ. ಎರಡನೆಯದು ಎಲ್ಲರಿಗೂ ಅರ್ಥವಾಗುತ್ತದೆ ಸಮಾಜವು ಅತಿ ಹೆಚ್ಚು ಹಾಗೂ ಅತ್ಯಂತ ಪವಿತ್ರ ಆಸಕ್ತಿಯನ್ನು ವಹಿಸುವುದು ತನ್ನ ಸ್ವಂತದ ಕಲ್ಯಾಣದಲ್ಲಿ. ಸಮಾಜದ ಸದಸ್ಯರೆಲ್ಲರೂ ಆ ಆಸಕ್ತಿಯನ್ನು ತೋರಿಸುತ್ತಾರೆ. ಆ ಕಲ್ಯಾಣ ಸಾಧನೆಯ ಹಾದಿಯು ತಿಳಿವಳಿಕೆ. ಕಲೆಯು ವಿಜ್ಞಾನದಷ್ಟೇ ಚೆನ್ನಾಗಿ ಆ ತಿಳಿವಳಿಕೆಯನ್ನು ಹೆಚ್ಚಿಸಬಲ್ಲುದು. ಇಲ್ಲಿ ವಿಜ್ಞಾನ ಮತ್ತು ಕಲೆ ಎರಡೂ ಏಕಪ್ರಕಾರವಾಗಿ ಅವಶ್ಯವಾಗಿವೆ. ಕಲೆಗಿಂತ ವಿಜ್ಞಾನ ಹೆಚ್ಚು ಮಹತ್ವದ್ದಾಗುವುದು ಇಲ್ಲವೆ ವಿಜ್ಞಾನಕ್ಕಿಂತ ಕಲೆ ಹೆಚ್ಚುಮಹತ್ವದ್ದಾಗುವುದು ಸಾಧ್ಯವಿಲ್ಲ".

ಸ್ವತಃ ನಮ್ಮನ್ನೂ ಒಳಗೊಂಡ ಸಮಾಜದ ಕಲ್ಯಾಣವೇ ಲೋಕಕಲ್ಯಾಣವೇ ನಮ್ಮೆಲ್ಲರ ಗುರಿ ಎಂಬುದನ್ನು ಒಪ್ಪಿಕೊಳ್ಳಬಹುದಲ್ಲವೆ?' ಅಖಿಳ ಭುವನ ಹಿತಂಗಳ'ನು ಸಾಹಿತ್ಯ ಸಾಧಿಸಬೇಕು—ಎಂದ ನೃಪತುಂಗ, ಏಳು ಶತಮಾನಗಳಿಗೆ ಹಿಂದೆಯೇ. ಅಥವಾ ಈ ಶತಮಾನದಲ್ಲೇ ಮಹಾಪ್ರಭೃತಿ ಕೈಲಾಸಂ ಹೇಳಿದ, ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸ್ಬೇಕಾದ ಋಣ—ಸಮಾಜ ಸೇವೆ...."

ಸತ್ಯ ಸೌಂದರ್ಯಗಳೆರಡೂ ದೊರೆಯುವುದು ಸುತ್ತಲಿನ ಇರುವಿಕೆಯಿಂದಲೇ ಎಂದು ಮನಗಂಡ ನಾವು, ರೂಪಗಳು ಭಿನ್ನವಾದರೂ ವಿಜ್ಞಾನ ಮತ್ತು ಸಾಹಿತ್ಯಗಳ ಗುರಿಯೊಂದೇ ಎಂಬ ಮತವನ್ನು ಸ್ವೀಕರಿಸಿದ ಹಾಗಾಯಿತು.

ಗುರಿಯೊಂದೇ. ದಾರಿಗಳು ಬೇರೆಬೇರೆ. ಆದರೂ ಸಾಧನೆಯ ಮಾರ್ಗದಲ್ಲಿ ಬಳಸುವ ಅಂಶಗಳು ಮಾತ್ರ ಸಮಾನವಾದುವು: ನಮ್ಮ ಆವರಣ, ಅದರಿಂದ ಹುಟ್ಟಿದ

ತಿಳಿವಳಿಕೆ, ನಾವು ಉಸಿರಾಡುತ್ತಿರುವ ವ್ಯಾಪಕವಾದ ಬದುಕು.

ಕಳೆದ ಕೆಲ ಶತಮಾನಗಳಿಂದೀಚೆಗೆ ವಿಜ್ಞಾನ ಸಾಧಿಸಿರುವ ಪ್ರಗತಿ ಅದ್ಭುತವಾದುದು. ಕಲ್ಲುಕಲ್ಲುಗಳ ಚಕಮಕಿಯಿಂದ ಕಿಡಿ ಹುಟ್ಟಿಸಿದ ಆ ಹಿರಿಯನಿಂದ, ಸರ್ವಸಂಹಾರಕ ಮಾರಣಾಸ್ತ್ರದವರೆಗೆ ಸಾಗಿಬಂದಿರುವ ಹಾದಿಯ ಕಲ್ಪನೆಯೇ ರೋಮಾಂಚಕಾರಿಯಾಗಿದೆ. ಕಾಲಕಾಲಕ್ಕೂ ವೈಜ್ಞಾನಿಕ ಸಂಶೋಧನೆಗಳು ಸಾಮಾಜಿಕ ಪರಿವರ್ತನೆಗಳಿಗೆ ಕಾರಣವಾದವು. ಯಂತ್ರಯುಗ, ಮಹತ್ಸಾಧನೆಗಳಿಗೆ ಪೈಪೋಟಿ-ಯುದ್ಧಗಳಿಗೆ ಮಾತೃಕೆಯಾಯಿತು. ಬದುಕು ಹಸನಾಯಿತು ಅಸಹನೀಯವೂ ಆಯಿತು. ಮಾನವನ ವಿದ್ಯಾಕುಸುಮ ಪರಾಗವಾದ ಶೀಲ ಸೌಭಾಗ್ಯವಾದ ಸಂಸ್ಕೃತಿ, ಬೇರೆಬೇರೆ ಕಡೆ ಬೇರೆಬೇರೆ ರೂಪ ತಳೆಯಿತು.

ಹೊಲದ ಬಿತ್ತನೆಯ ಕಾಲದಲ್ಲೂ ಕುಯಿಲಿನ ಕಾಲದಲ್ಲೂ ಹಾಡು ಹುಟ್ಟಿಬಂತು, ಹಿಂದೆ. ರಾಗಿ ಬೀಸುವ ತಂಗಿ, ತೊಟ್ಟಿಲು ತೂಗುವ ತಾಯಿ, ದೋಣಿ ದಾಟಿಸುವ ಅಂಬಿಗ—ಹೀಗೆ ದುಡಿಮೆಯ ಜತೆಯಲ್ಲೇ ಸಾಹಿತ್ಯಸೃಷ್ಟಿ, ಯಾವಾಗಲೂ ಅಷ್ಟೆ, ಪ್ರಕೃತಿಯನ್ನು ಬದಲಾಯಿಸುವ ಮಾನವನ ಹೋರಾಟದಿಂದಲೇ ಅಮರಗಾನದ ಜನನ. ಸಾಹಿತ್ಯ, ಆಯಾಕಾಲದ ವಾಸ್ತವತೆಯ ಪ್ರತಿರೂಪ-ಕಲಾತ್ಮಕ ಪ್ರತ್ಯುತ್ಪಾದನೆ, ಅಲ್ಲದೆ, ಇರುವಿಕೆಯ ಚಿತ್ರಣದಲ್ಲಿ ಬಯಕೆಯ ಬರುವಿಕೆಯ ಸೊಗಸಾದ ಬಣ್ಣಗಳ ಸಂಯೋಜನೆ ಸಹಾ. ವಿಜ್ಞಾನದ ಮಾಯಾಬಾಜಾರಿನಲ್ಲಿ ಸಾಹಿತ್ಯ ಎಂದೂ ಸೋತುದಿಲ್ಲ. ಬಹ್ವಂಶ ಸಾಹಿತ್ಯ, ಯಾವಾಗಲೂ ಆಯಾ ಕಾಲಧರ್ಮದ ಪ್ರತೀಕವೇ ಬಲಗೊಳ್ಳುತ್ತಿರುವ ಅಥವಾ ಕುಸಿಯುತ್ತಿರುವ ಸಮಾಜದ, ಬದಲಾಗುತ್ತಿರುವ ಮಾನವ ಸಂಬಂಧಗಳ, ಚಿತ್ರಣ.

ವಿಜ್ಞಾನ ಬದುಕಿನ ಮಹಾಪರಿವರ್ತಕವೆಂಬುದರಲ್ಲಿ ಸಂದೇಹವಿಲ್ಲ. ಆ ವಿಶೇಷ ಜ್ಞಾನ, ಸಂಶೋಧನೆಗಳು, ಬೋಧನೆಗಳು, ನಮ್ಮನ್ನು ನಾವೇ ಸರಿಯಾಗಿ ಕಂಡುಕೊಳ್ಳಲು ಸಹಾಯಕವಾಗಿವೆ. ನಮ್ಮ ಸ್ತ್ರೀಪುರುಷರನ್ನು ಅರಿತುಕೊಳ್ಳಲು, ಸಮಾಜವನ್ನು ವಿಭಜಿಸಿ ನೋಡಲು, ಏನು-ಯಾಕೆಗಳಿಗೆ ಸಮಾಧಾನಕರ ಉತ್ತರ ಪಡೆಯಲು ನೆರವಾಗಿವೆ.

ಹದಿನೈದನೆಯ ಶತಮಾನದ ಇಟಲಿಯ ಲಿಯೊನಾರ್ದೊ ದ ವಿಂಚಿ ಅಪ್ರತಿಮ ಚಿತ್ರಕಾರನಾಗಿದ್ದ. ಆ ಕಾಲದ ಪ್ರಖ್ಯಾತ ವಿಜ್ಞಾನಿಯೂ ಆಗಿದ್ದ. ಅಂತಹ ಇತ್ತಂಡ ಬೃಹತ್‌ಸಾಧನೆ ಎಲ್ಲಾ ಕಲಾವಿದರಿಗೂ ಬರೆಹಗಾರರಿಗೂ ಸಾಧ್ಯವಾಗದು ನಿಜ. ಆದರೆ ಪ್ರತಿಯೊಬ್ಬನೂ ತನ್ನ ಜ್ಞಾನಸಂಪತ್ತನ್ನು ಬೆಳೆಸಿಕೊಳ್ಳಲು, ಅಡ್ಡಿಮಾಡುವವರು ಯಾರು? ವಿಜ್ಞಾನದ ತತ್ತ್ವಜ್ಞಾನದ ಅರ್ಥಶಾಸ್ತ್ರದ ರಾಜ್ಯಶಾಸ್ತ್ರದ ವಿವಿಧ ಶಾಸ್ತ್ರಗಳ ತಿರುಳನ್ನು ಸ್ವಾಧೀನಪಡಿಸಿಕೊಂಡು, ತನ್ನ ಅನುಭವದ ಜ್ಞಾನದ ಆಳವನ್ನೂ

ವಿಸ್ತಾರವನ್ನೂ ಹೆಚ್ಚಿಸದೇ ಇದ್ದರೆ, ಬರೆಹಗಾರ ಬೆಲೆಬಾಳುವ ಕೃತಿಯನ್ನು ಹೇಗೆ ತಾನೇ ರಚಿಸಬಲ್ಲ?

ಆಂಗ್ಲ ಸಾಹಿತ್ಯದ ಪುರಾತನ ಕಾದಂಬರಿಕಾರನಾದ ಫೀಲ್ಡಿಂಗ್, ಸಾಹಿತ್ಯದಲ್ಲಿನ ತನ್ನ ಆರಾಧ್ಯಮೂರ್ತಿಗಳಾದ ಹೋಮರ್ ಮತ್ತು ಮಿಲ್ಟನ್ನರನ್ನು ಕುರಿತು ಹೇಳುತ್ತಾ, "ಅವರು ತಮ್ಮ ಕಾಲದ ವಿದ್ವತ್ತನ್ನೆಲ್ಲ ಕರಗತ ಮಾಡಿಕೊಂಡಿದ್ದರು; ಸಮಾಜದ ಎಲ್ಲಾ ಹಂತಗಳ ಜನರೊಡನೆಯೂ ಸರಿಸಮಾನರಾಗಿದ್ದರು, ಎಂದಿದ್ದಾನೆ. ಹೋಮರ್ ಮಿಲ್ಟನರಿಗಿದ್ದುದು ಅಪೇಕ್ಷಣೀಯ ಗುಣಗಳೇ. ಬರೆಹಗಾರ, ತನ್ನ ಕಾಲದ ಸಮಸ್ಯೆಗಳು, ಸಾರವನ್ನು ಕಂಡುಹಿಡಿಯುವುದು, ಸಾಮಾಜಿಕ ಸಾಂಸ್ಕೃತಿಕ ರೂಪುರೇಖೆಗಳನ್ನು ಗುರುತಿಸಿಕೊಳ್ಳುವುದು. ಎಲ್ಲ ಹಂತಗಳ ಜನರೊಡನೆಯೂ ಸಮಾನನಾಗಿರಲು ಸಮರ್ಥನಾಗುವುದು, ಅತ್ಯಂತ ಸ್ವಾಗತಾರ್ಹವಾದ ಅವಶ್ಯಕತೆ.

ಈ ಪ್ರಪಂಚದಲ್ಲಿ ಸಹಸ್ರ ವಸ್ತುಗಳು ಕಣ್ಣಿಗೆ ಕಾಣಿಸುತ್ತವೆ. ಕಾಣಿಸದೆ ಇರುವ ವಸ್ತುಗಳ ಸಂಖ್ಯೆಯೂ ಸಹಸ್ರವೇ. ಇವುಗಳಲ್ಲೆಲ್ಲಾ ಸತ್ಯವೆಷ್ಟು, ಮಿಥ್ಯವೆಷ್ಟು? ಪ್ರತಿಯೊಬ್ಬನೂ—ಮುಖ್ಯವಾಗಿ ಬರೆಹಗಾರ—ಇದನ್ನು ತಿಳಿಯುವುದಗತ್ಯ, ಶತಮಾನಗಳಿಂದ ಬೆಳೆದುಬಂದಿರುವ ವಿಚಾರಗಳು, ಹೊಸದಾಗಿ ಹುಟ್ಟಿರುವ ವಿಚಾರಗಳು, ವೈಜ್ಞಾನಿಕ ಸಂಶೋಧನೆಗಳು—ಇವೆಲ್ಲವೂ ಆ ಕಾರ್ಯದಲ್ಲಿ ಬರೆಹಗಾರನಿಗೆ ನೆರವಾಗುತ್ತವೆ. ಸತ್ಯದ ನೆರವಿನಿಂದ ಜಗತ್ತನ್ನೇ ಬದಲಾಯಿಸುತ್ತಾನೆ ಮಾನವ. ಜತೆಯಲ್ಲೇ ತಾನೂ ಬದಲಾಗುತ್ತಾನೆ. ಸೌಂದರ್ಯೋಪಾಸಕನಾದ ಬರೆಹಗಾರ ಅಂತಹ ಸತ್ಯವನ್ನು ತಿಳಿದುಕೊಂಡಾಗ, ಆತನ ಲೇಖನಿ ಸತ್ಯದ ಬಲದಿಂದ ಜಗತ್ತನ್ನು ಸುಂದರಗೊಳಿಸುವ ಮಹಾಕಾರ್ಯಕ್ಕೆ ಮುಡಿಪಾಗುತ್ತದೆ.

ಬರೆಹಗಾರನ ದೃಷ್ಟಿ

ಆಳವಾದ ಅನುಭವವೂ ಸೂಕ್ಷ್ಮವಾದ ನಿರೀಕ್ಷಣ ಸಾಮರ್ಥ್ಯವೂ ಇರುವ ಲೇಖಕನಿಂದಲೇ ಒಳ್ಳೆಯ ಸಾಹಿತ್ಯಸೃಷ್ಟಿ ಸಾಧ್ಯ. ಪ್ರತಿಯೊಬ್ಬ ಬರೆಹಗಾರನೂ ವಿಚಾರಶೀಲನಾಗಲೇಬೇಕು ಎಂದು ಅಪೇಕ್ಷಿಸುವ ನಾವು, ಸಾಹಿತ್ಯಸೃಷ್ಟಿಯ ಮಹಾಯಜ್ಞದಲ್ಲಿ ಆತ ತೋರಬೇಕಾದ ಹಿರಿಯ ಗುಣಗಳನ್ನು ಕುರಿತು ಪ್ರಸ್ತಾಪ ಮಾಡೋಣ.

ಬರೆಹಗಾರ ತನ್ನ ಸಾಹಿತ್ಯದ ಭವ್ಯಪರಂಪರೆಯ ನಿಜವಾದ ವಾರಸುದಾರನಾಗಬೇಕೆಂಬ ವಿಷಯವಾಗಿ ಭಿನ್ನಾಭಿಪ್ರಾಯವಿರಲಾರದು. ಗತಕಾಲವನ್ನೆಲ್ಲ ಅಲ್ಲಗಳೆಯುವ ಪ್ರವೃತ್ತಿ ಆತ್ಮಘಾತುಕವಾದುದೇ ಸರಿ. ನಿನ್ನೆಯ ನೆನೆಗೊಬ್ಬರದೊಳಗೆ ಬೇರುಬಿಡದ, ನಾಳೆಯ ಮಾತೇಕೆ—ಇವತ್ತಿನ ಒಂದು ಹೊತ್ತನ್ನೂ ಕಮರದೆ

ಕಳೆಯದು, ನಮ್ಮ ನಾಡಿನ ಬರೆಹಗಾರರಿಗಿರುವ ಪರಂಪರೆ ಯಾವುದು? ಪ್ರಾಚೀನ ಕನ್ನಡ ಸಾಹಿತ್ಯದ್ದು ಮಾತ್ರ ಎನ್ನೋಣವೆ? ಹಾಗೆ ಹೇಳುವುದು ಸರಿಯಾಗಲಾರದು. ಸಂಸ್ಕೃತವೂ ನಮ್ಮದೇ. ಉರ್ದೂ-ಬಂಗಾಳಿ ಭಾಷೆಗಳೂ ನಮ್ಮವೇ. ಅಷ್ಟೇಕೆ, ಪ್ರಪಂಚದ ಎಲ್ಲ ಭಾಷೆಗಳಲ್ಲೂ ಸೃಷ್ಟಿಯಾಗುವ ಸಾಹಿತ್ಯ, ಎಲ್ಲಾ ಜನರಿಗೂ ಸೇರಿದ ಸೊತ್ತು. ಬರೆಹಗಾರ ಪ್ರಪಂಚದ ಯಾವ ಮೂಲೆಯಲ್ಲೇ ಇರಲಿ, ವಿಶ್ವ ಸಾಹಿತ್ಯವೆಲ್ಲ ಭವ್ಯತೆಗೂ ಆತ ಹಕ್ಕುದಾರ. ನಮ್ಮ ಪ್ರವಾಹದ ಉಗಮವಾಗುವುದೇನೋ ತಲಕಾವೇರಿಯಿಂದಲೆ. ಆದರೆ ಮುಂದುವರಿದಂತೆ ಹತ್ತು ದಿಕ್ಕಿನ ನೀರು ನಮ್ಮನ್ನು ಸೇರಿಯೇ ತೀರಬೇಕು.

ಭಾರತದ ಹಿರಿಯ ತತ್ತ್ವವೇತ್ತರಾದ ಸರ್ವಪಳ್ಳಿ ರಾಧಾಕೃಷ್ಣನ್, "ಪೌರಸ್ತ್ಯ ಮತಗಳು ಮತ್ತು ಪಾಶ್ಚಾತ್ಯ ಚಿಂತನೆ" ಎಂಬ ತಮ್ಮ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ:

ನಮ್ಮಲ್ಲಿ ಕೆಲವರು, ಬಾಹ್ಯಪ್ರಭಾವಗಳನ್ನೆಲ್ಲ ಇದಿರಿಸಬೇಕೆನ್ನುತ್ತಾರೆ. ಹಾಗೆ ಮಾಡಲು ಮೂರ್ಖ ಅಭಿಮಾನವೇ ಕಾರಣ. ಮಾನವಕುಟುಂಬದ ಒಂದು ಶಾಖೆ ಆಧ್ಯಾತ್ಮಿಕ ಪ್ರಗತಿಯನ್ನೋ ವೈಜ್ಞಾನಿಕ ಪ್ರಗತಿಯನ್ನೋ ಸಾಧಿಸುತ್ತದೆಂದಿಟ್ಟುಕೊಳ್ಳಿ. ಆ ಪ್ರಗತಿಯನ್ನು ಆ ಶಾಖೆಯು ತನಗೋಸ್ಕರ ಮಾತ್ರ ಸಾಧಿಸಿದೆ."

ಅಧ್ಯಾತ್ಮಕ್ಕೂ ವಿಜ್ಞಾನಕ್ಕೂ ಅನ್ವಯಿಸುವ ಈ ಮಾತು, ಸಾಹಿತ್ಯದ ಪಾಲಿಗೂ ಅಷ್ಟೇ ಸತ್ಯವಾದುದೆಂದು ಬೇರೆ ಹೇಳಬೇಕಾಗಿಲ್ಲ.

ಹೀಗೆ, ಮಾನವಸೃಷ್ಟಿಯಾದ ಸಾಹಿತ್ಯಲೋಕದಲ್ಲಿ ಹಿರಿದಾದುದೆಲ್ಲವನ್ನೂ ಭವ್ಯವಾದುದೆಲ್ಲವನ್ನೂ ಸೂರೆಗೊಳ್ಳುವುದು ಬರೆಹಗಾರನ ಕರ್ತವ್ಯ.

ವಿಶ್ವಸಾಹಿತ್ಯದಲ್ಲಿ, ಒಟ್ಟಿನಲ್ಲಿ ಅತ್ಯಂತ ಪ್ರಧಾನವಾಗಿ ಎದ್ದುಕಾಣಿಸುವ ಅಂಶ ಯಾವುದು? ಕಾಲಧರ್ಮವನ್ನು ಪ್ರತಿಬಿಂಬಿಸಿದ, ಬದುಕಿನಿಂದ ಚಿಮ್ಮಿದ, ಮಾನವರನ್ನು ಕುರಿತು ಓದುಗರ ಬೋಧೆಯನ್ನು ಹೆಚ್ಚಿಸಿದ ಸಾಹಿತ್ಯ ಮಾತ್ರವೇ ಚಿರಕಾಲ ಬದುಕುವ ಸಾಮರ್ಥ್ಯವನ್ನು ಗಳಿಸಿದೆ. ಆ ಸಾಹಿತ್ಯ ವಾಹಿನಿಯೇ ವಾಸ್ತವವಾದದ ಪರಂಪರೆ.

ಎಲ್ಲ ಜನರೂ ಸುಖಿಗಳಾಗಬೇಕು ಎಂದು ಬಯಸುವ ಬರೆಹಗಾರ ಸೂಕ್ಷ್ಮಸ್ಪರ್ಶಿಯೂ ಸಂವೇದನಾಜೀವಿಯೂ ಆದ ಬುದ್ಧಿಜೀವಿ-ಬದುಕನ್ನು, ಅಂದರೆ ತನ್ನ ಕೃತಿಗಳ ಸಹಸ್ರಪಾತ್ರಗಳನ್ನು, ಅವರ ಚಲನವಲನವನ್ನು ನೋಡುವ ದೃಷ್ಟಿ ಮಾನವೀಯವಾಗುವುದು ಸ್ವಾಭಾವಿಕ. ಅದು, ಸುಂದರವಾದುದೆಲ್ಲವನ್ನೂ ಆರಾಧಿಸುವ, ಹೊಲಸಾದುದೆಲ್ಲವನ್ನೂ ದ್ವೇಷಿಸುವ, ಮಾನವೀಯತೆ. ಕಂಬನಿಯನ್ನು ಕೈಯಿಂದೊರೆಸಿ ತುಟಿಗಳು ಮುಗುಳುನಗುವಂತೆ ಮಾಡುವ ಸಚೇತನ ಮಾನವೀಯತೆ.

ಅಂತಹ ಕಲಾವಿದ, ಬಲು ಸುಲಭವಾಗಿ ಮಾನವ ಹೃದಯಗಳಿಗೆ ಲಗ್ಗೆ ಇಡುವ ರಣಾಗ್ರೇಸರ. ಹಾಗೆ ಲಗ್ಗೆ ಇಡುವಾಗ ಆತನ ದೃಷ್ಟಿಯೆಲ್ಲ ಮೆದುಳಿನ ಕಡೆಗೇ. ಅಲ್ಲಿ ವಿಜಯಪತಾಕೆ ಹಾರಿದಾಗಲೇ ಆತ ತೃಪ್ತ.

ನಾವು ಸೃಷ್ಟಿಸುವ ಕೃತಿಯನ್ನೋದಿ ಇನ್ನೊಂದು ಜೀವನದ ಆತ್ಮ ಸಂಸ್ಕಾರವಾಯಿತೆನ್ನುವುದಕ್ಕಿಂತ ಹೆಚ್ಚಿನ ಉಡುಗೊರೆ ಬರೆಹಗಾರನಿಗೆ ಇನ್ನೇನು ಬೇಕು?

ಸಾಹಿತ್ಯಸೃಷ್ಟಿಗೆ ವಿಷಯದಾರಿದ್ರ್ಯ ಎನ್ನುವುದು ಇಲ್ಲವೇ ಇಲ್ಲ. ಹೃದಯ ಬಡವಾದ, ಮೆದಳು ಜಡವಾದ ಬರೆಹಗಾರನಿಗೆ ಮಾತ್ರ ಅಂತಹ ಸಂಕಟ. ಬದುಕಿನಿಂದ ಎಂದೂ ವಿಮುಖನಾಗದ, ಸದಾ ಜಾಗ್ರತನಾದ, ಬರೆಹಗಾರನಿಗೆ ಸಾವಿರ ಕಣ್ಣು; ಕಾಣಸಿಗುವುದು ಸಾವಿರ ನೋಟ. ಅವನ ಲೇಖನಿ ಅಮರ. ಆತ ಅದನ್ನು ಅದ್ದಿ ಬರೆಯುವುದು ಸಾಹಿತ್ಯಾಮೃತದ ಅಕ್ಷಯ ಪಾತ್ರೆಯಲ್ಲೇ.

ಆದರೆ ಇನ್ನೊಂದು ದೃಷ್ಟಿಯ ಬರೆಹಗಾರರೂ ಇರುವುದನ್ನು ನಾವು ಬಲ್ಲೆವು. ಮಾಡುವುದೇನೋ ಸಾಹಿತ್ಯ ಜಪ. ಆರಾಧನೆ ಮಾತ್ರ ಧನಲಕ್ಷ್ಮಿಯ ಗುಡಿಯಲ್ಲೇ. ಕಾಲದ ಪರೀಕ್ಷೆಯಲ್ಲಿ ಎಂದೂ ಜಯಿಸದಂತಹ ಕ್ಷಣಿಕ ಬಾಳ್ವೆಯ ಕೃತಿಗಳು ಅಂಥವರಿಂದ ಸೃಷ್ಟಿಯಾಗಬಲ್ಲುವು.

ವಿಶಾಲವೂ ಮಾನವೀಯವೂ ನ್ಯಾಯಪಕ್ಷಪಾತಿಯೂ ಆದ ದೃಷ್ಟಿ ಇರಬೇಕು ಬರೆಹಗಾರನಿಗೆ. ಆತ ಯಾವುದೇ ಜಡತತ್ತ್ವದ ಕಣ್‌ಪಟ್ಟಿ ಕಟ್ಟಿದ ಸವಾರಿ ಕುದುರೆಯಾಗುವುದು ಸಾಧ್ಯವೇ ಇಲ್ಲ. ಇದೇ ಕೊನೆಯಲ್ಲ, ಯಾವುದರಲ್ಲೂ ಇದೇ ಕೊನೆ ಎಂಬುದಿಲ್ಲ ಎನ್ನುವುದನ್ನು ಆತ ಸದಾ ನೆನಪಿಡಬೇಕು. ಜನರ ಮನೋರಾಜ್ಯದ ಅಧಿಪತಿಯಾದ ತಾನು ನಿರಂಕುಶಮತಿ ಎಂಬ ಭಾವನೆ ಬರೆಹಗಾರನಲ್ಲಿ ಎಂದು ಮೂಡಿತೋ ಅಂದಿಗೆ ಆತನ ಅಧಃಪತನವಾದಂತೆಯೇ. ತಾನು ಸಮಾಜದ ಒಬ್ಬ ಜವಾಬ್ದಾರನಾದ ಸದಸ್ಯ, ಜನಪದದ ವಿನೀತ ಕಿಂಕರ ಎಂಬ ಅಭಿಪ್ರಾಯ ಬರೆಹಗಾರನಲ್ಲಿ ಬಲಗೊಂಡಷ್ಟೂ ಆತನ ದೃಷ್ಟಿ ಹೆಚ್ಚು ನಿಚ್ಚಳವಾಗುವುದು, ನಿರ್ಮಳವಾಗುವುದು; ಸೃಷ್ಟಿ ಪವಿತ್ರವಾಗುವುದು.

ಬರೆಹಗಾರನಿಗೆ ಅತ್ಯಗತ್ಯವಾಗಿ ಇರಬೇಕಾದ ಇನ್ನೊಂದು ಅಂಶ—ಇತಿಹಾಸದ ನೋಟ. ನಿನ್ನೆಯ ಜನ ಇತಿಹಾಸ ರಚಿಸಿದರು. ಈ ದಿನ ನಮ್ಮ ಕಣ್ಣೆದುರಲ್ಲೇ ಇತಿಹಾಸದ ರಚನೆಯಾಗುತ್ತಿದೆ. ನಾಳೆಯ ದಿನ ಬದುಕಿನ ರೂಪ ಮತ್ತೆ ಬದಲಾಗಲಿದೆ. ಈ ಪರಿವರ್ತನೆಯ ಪ್ರವಾಹದ ನೇರವನ್ನು ಗುರುತಿಸುವ ಸಾಮರ್ಥ್ಯ, ಲೇಖಕನ ಪಾಲಿನ ಐಶ್ವರ್ಯವೇ ಸರಿ. ಗತಕಾಲದ ಪ್ರತಿನಿಧಿಯಾಗಿ, ವರ್ತಮಾನ ಕಾಲದ ಕಷ್ಟಸುಖಗಳಲ್ಲಿ ಪಾಲುಗಾರನಾಗಿ, ಭವಿಷ್ಯತ್ಕಾಲದ ಹರಿಕಾರನಾಗುವುದು

ಬರೆಹಗಾರ ನಿರ್ವಹಿಸಬೇಕಾದ ಚಾರಿತ್ರಿಕ ಪಾತ್ರ.

ವಿಚಾರವಂತನಾದ ಲೇಖಕ ಯಾವುದೇ ರಾಜಕೀಯ ನೀತಿಯ ಪ್ರಚಾರಕನಾಗಬೇಕೆ? ಎಂದು ಯಾರಾದರೂ ಕೇಳಬಹುದು. ನೂರು ಎಳೆಗಳಿಂದ ಬದುಕಿಗೆ ಬಂಧಿತನಾಗಿರುವ ಧೀಮಂತ ಬರೆಹಗಾರ, ಜನರ ಇರುವಿಕೆಯನ್ನೇ ನಿರ್ಧರಿಸುವ, ತೋರಿಕೆಗೆ ಸರ್ವಶಕ್ತವಾಗಿಯೇ ಇರುವ, ರಾಜಕೀಯದಿಂದ ನಿರ್ಲಿಪ್ತನಾಗುವುದು ಸಾಧ್ಯವೇ ಇಲ್ಲ. ಆದರೆ ಆತ ಯಾವುದೇ ರಾಜಕೀಯ ಪಕ್ಷದ ವಿವಿಧ ನೀತಿಗಳನ್ನು ಸಾಹಿತ್ಯದಲ್ಲಿ ಪ್ರತಿಪಾದಿಸತೊಡಗುವುದು ಖಂಡಿತವಾಗಿಯೂ ತಪ್ಪು. ಹಿಂದೆ ಸ್ವಾತಂತ್ರ್ಯಸಮರದಲ್ಲಿ ಜನರೊಡನೆ ಬೆರೆತು ಎಷ್ಟೋ ಬರೆಹಗಾರರು ಹೋರಾಡಿದರು. ಮುಂದೆ, ಜನರ ಒಲವಿನ ದುರುಪಯೋಗವನ್ನು ಕೆಲ ಸ್ವಾತಂತ್ರ್ಯನಾಯಕರು ಮಾಡಿದಾಗ, ಆ ಬರೆಹಗಾರರೇ ಅವರನ್ನು ಬಯಲಿಗೆಳೆದರು. ನ್ಯಾಯ ಎಲ್ಲಿಯೇ ಇರಲಿ, ಅದನ್ನು ನಾವು ಸಮರ್ಥಿಸಬೇಕು. ಅನ್ಯಾಯ ಎಲ್ಲಿಯೇ ಇರಲಿ, ಅದನ್ನು ಖಂಡಿಸಬೇಕು. ಅದೇ ಸರಿಯಾದ ದೃಷ್ಟಿ.

ಕೃತಿರಚನೆಯಲ್ಲಿ ಬರೆಹಗಾರ ಗಮನಿಸಬೇಕಾದ ಅಂಶಗಳನ್ನು ಕುರಿತು ಮಹರ್ಷಿ ತೋಲ್‌ಸ್ತೋಯ್ ಒಂದೆಡೆ ಹೀಗೆ ಹೇಳಿದ್ದಾರೆ :

"ಮೊದಲನೆಯದಾಗಿ ; ತಾನು ಆರಿಸಿಕೊಂಡಿರುವ ವಸ್ತುವನ್ನು ಕುರಿತು ಸ್ಪಷ್ಟವಾದ, ಅಂದರೆ ನೈತಿಕವಾದ, ದೃಷ್ಟಿ ಗ್ರಂಥಕರ್ತನಿಗಿರಬೇಕು.

"ಎರಡನೆಯದಾಗಿ, ಉಚ್ಚಾರದ ಸ್ಪಷ್ಟತೆ ಅಥವಾ ರಚನಾ ಸೌಂದರ್ಯ—ಇವೆರಡೂ ಒಂದೆ."

"ಮೂರನೆಯದಾಗಿ, ಪ್ರಾಮಾಣಿಕತೆ; ಅಂದರೆ, ತಾನು ಮುಂದಿಡುತ್ತಿರುವ ವಿಷಯವನ್ನು ಕುರಿತು ಪ್ರಾಮಾಣಿಕವಾದ ಒಲವು ಅಥವಾ ದ್ವೇಷ."

ವಿಶ್ವಸಾಹಿತ್ಯಕ್ಕೆ ಮಹೋನ್ನತ ಕೃತಿಗಳ ಕಾಣಿಕೆಯನ್ನು ನೀಡಿದ ತೋಲ್‌ಸ್ತೋಯ್‌ಯ ಈ ಮಾತುಗಳು ಗಮನಾರ್ಹವೇ ಸರಿ.

ಕಾವ್ಯಮೀಮಾಂಸೆಯ ಮಹತ್ವ

ಬರೆಹಗಾರ ಮತ್ತು ಓದುಗರ ನಡುವೆ ಮುಖ್ಯವಾದೊಂದು ಪಾತ್ರವನ್ನು ನಿರ್ವಹಿಸುತ್ತಿರುವ ವ್ಯಕ್ತಿಯೊಂದಿದೆ. ಆತ ವಿಮರ್ಶಕ. ಸೌಂದರ್ಯ ಸಮೀಕ್ಷೆಯನ್ನು ಮಾಡುವ ಈ ಮಹಾನುಭಾವ, ಕೃತಿಯ ರಸಾಸ್ವಾದನೆಯಲ್ಲಿ ಓದುಗನಿಗೆ ನೆರವಾಗುತ್ತಾನೆ. ಕೃತಿಯಲ್ಲಿ ಪ್ರತಿಪಾದಿತವಾಗಿರುವ ವಿಚಾರದಮೇಲೆ ಬೆಳಕು ಬೀರುತ್ತಾನೆ.

ವಿಮರ್ಶೆಯನ್ನು ಒಂದು ಶಾಸ್ತ್ರವೆಂದು ಪರಿಗಣಿಸುವವರು ನಮ್ಮಲ್ಲಿ ಕಡಮೆ.

ಸಾಹಿತ್ಯಸೃಷ್ಟಿಯ ಮೌಲ್ಯವನ್ನಳೆಯುವ ಮಾನದಂಡ, ಕೃತಿಯಿಂದ ಕೃತಿಗೆ ಕರ್ತೃವಿನಿಂದ ಕರ್ತೃವಿಗೆ ಬದಲಾಗುವುದು ತೀರಾ ಸಾಮಾನ್ಯವಾದ ವಿಷಯ. ಕನ್ನಡದಲ್ಲಿ ಬಹುಮಟ್ಟಿಗೆ ಕಾಣಸಿಗುವ ವಿಮರ್ಶೆಯೆಲ್ಲ, ಕೃತಿಯನ್ನೂ ಕರ್ತೃವನ್ನೂ ಕುರಿತಾದ ಪೂರ್ವಗ್ರಹಪೀಡಿತ ಪ್ರಶಂಸೆ ಇಲ್ಲವೆ ನಿಂದೆ.

ಜೀವನವನ್ನು ವೈಜ್ಞಾನಿಕವಾಗಿ ನೋಡಲೊಪ್ಪದ, ಬದುಕಿಗೂ ಸಾಹಿತ್ಯಕ್ಕೂ ಸಂಬಂಧವಿದೆಯೆಂದು ನಂಬದ, ಕೆಲವರು ವಿಮರ್ಶೆಯ ಕಾರ್ಯಕ್ಕೆ 'ಶುದ್ಧ ಸಾಹಿತ್ಯ' ಅಳತೆಗೋಲನ್ನು ಬಳಸುವುದುಂಟು. 'ಕಲೆಗಾಗಿ ಕಲೆ' ಎನ್ನುವ ಘೋಷವನ್ನು ಮುಂದಿಡುವವರೂ ಅದೇ ಜನ. ವಿಚಾರದ ಅಂಶ ಎಳ್ಳಿನಷ್ಟೂ ಇಲ್ಲದ ಸಾಹಿತ್ಯವೊಂದೇ ಅವರ ದೃಷ್ಟಿಯಲ್ಲಿ ಶುದ್ಧಸಾಹಿತ್ಯ. ಬರೆಯುವ ಚಟಕ್ಕೋಸ್ಕರ ಬರೆದರಾಯಿತು. ಏನನ್ನು ಬೇಕಾದರೂ. ಉದ್ದಕ್ಕೂ ಕುಣಿಯುವ ಪದಗಳ ಮೋಹಕ ಜೋಡಣೆ. ಸಮಾಜದಲ್ಲಿನ ಅತ್ಯಂತ ಪ್ರಭಾವಶಾಲಿ ಶಕ್ತಿಯಾದ ಸಾಹಿತ್ಯವನ್ನು ನಿರ್ವೀರ್ಯಗೊಳಿಸಬಲ್ಲವರೇ 'ಶುದ್ಧ ಸಾಹಿತ್ಯ'ದ ಮಾತನ್ನಾಡುತ್ತಾರೆ. ಜನಜಾಗೃತಿಗೆ ಹೆದರುವವರೇ 'ಪರಿಶುದ್ಧ' ಕಲೆಯ ಬಡಬಾವುಟವನ್ನೆತ್ತುತ್ತಾರೆ.

ಭಾವವಾದದ ಮೆದುಮಣ್ಣಿನಲ್ಲಿ ಮೇಲಕ್ಕೆ ವಿಳಲಾಗದಷ್ಟು ಆಳಕ್ಕೆ ಇಳಿದಿರುವ ಜನರ ದೃಷ್ಟಿಯಲ್ಲಿ, ಸೌಂದರ್ಯವೆನ್ನುವುದು ಮಾಯೆ. ಸೌಂದರ್ಯದ ಸಾಕ್ಷಾತ್ಕಾರ ವೆನ್ನುವುದು ಮನಶ್ಚಕ್ಷುವಿಗೆ ಮಾತ್ರ ಗೋಚರವಾಗುವ ದಿವ್ಯದರ್ಶನ. ಅವರ ಅಭಿಪ್ರಾಯದಂತೆ, ಕಲಾಕೃತಿಯ ಸನ್ನಿಧಿಯಲ್ಲಿ ತನಗುಂಟಾಗುವ ಭಾವಗಳನ್ನು ವ್ಯಕ್ತಗೊಳಿಸುವುದಷ್ಟೇ ವಿಮರ್ಶಕನ ಹೊಣೆಗಾರಿಕೆ.

ಇಂತಹ ಧೋರಣೆಯಿಂದ ಸಾಹಿತಿಗಾಗಲೀ ಸಮಾಜಕ್ಕಾಗಲೀ ಒಳಿತಾಗದೆಂಬುದು ಸ್ಪಷ್ಟ.

ಹಾಗಾದರೆ, ಸೌಂದರ್ಯ ಸಮೀಕ್ಷೆಯಲ್ಲಿ ಕೈಗೊಳ್ಳಬೇಕಾದ ಸರಿಯಾದ ವಿಧಾನ ಯಾವುದು?

ಸಾಹಿತ್ಯ ಕೃತಿಯಲ್ಲಿ ಸೃಷ್ಟಿಯಾಗಿರುವ ಪ್ರತಿಬಿಂಬವನ್ನು ಮೂಲದೊಡನೆ ಹೋಲಿಸಿ ನೋಡುವುದೇ ಮೊದಲ ಹಜ್ಜೆ. ಪ್ರತಿಯೊಂದು ಕೃತಿಯೂ ವಾಸ್ತವ ಬದುಕಿನ ಕಾಲ್ಪನಿಕ ಪ್ರತಿಬಿಂಬ. ಆ ರೀತಿಯ ತುಲನೆಯೊಡನೆ ಮೂಡಿಬರುವ ಪ್ರಶ್ನೆಗಳಿವು: ಆರಿಸಿ ಕೊಂಡಿರುವ ವಸ್ತುವಿನ ವಿಷಯದಲ್ಲಿ ಬರೆಹಗಾರನ ದೃಷ್ಟಿಪ್ರಾಮಾಣಿಕವಾಗಿದೆಯೇ? ಅದನ್ನು ಆಂತರಿಕ ಪ್ರೇರಣೆಯಿಂದ ಆತ ಬರೆದಿರುವನೆ ? ಕೃತಿಯಲ್ಲಿ ಪ್ರತಿಪಾದಿತ ವಾಗಿರುವ ವಿಚಾರದ ಮೌಲ್ಯವೆಷ್ಟು? ಯುಗಧರ್ಮ ಆ ಕೃತಿಯಲ್ಲಿ ಪ್ರತಿಧ್ವನಿತ ವಾಗಿದೆಯೆ? ಅದು ಕಲೆಯೆ ಅಥವಾ ಬರಿಯ ವಿಚಾರಗಳ ನೀರಸ ಜೋಡಣೆಯೆ? ಆತ ತೋರಿರುವ ಕಲಾವಂತಿಕೆಯ ಶ್ರದ್ಧೆ ಎಷ್ಟು? ಸಮಕಾಲೀನ ಸಾಹಿತ್ಯದಲ್ಲಿ ಅದರ

ಸ್ಥಾನಮಾನಗಳೇನು?—ಈ ಎಲ್ಲ ಪ್ರಶ್ನೆಗಳಿಗೆ ದೊರೆಯುವ ತರ್ಕಬದ್ಧ ಉತ್ತರವೇ ವಿಮರ್ಶೆ.

ಸಮಸ್ಯೆಯನ್ನು ಚಿತ್ರಿಸಿ, ಪರಿಹಾರವನ್ನು ಸೂಚಿಸಿ, ಎಂದು ಸಲಹೆ ನೀಡುವ ವಿಮರ್ಶಕ ಗುಣವೊಂದುಂಟು. ಯಾವುದೋ ಸಮಸ್ಯೆಯ ಚಿತ್ರಣ ಇಲ್ಲಿದೆ ಎಂದು ಸಾರಿ ಹೇಳುವುದು, 'ಇದು ವಿಚಾರಪೂರಿತ ಕೃತಿ' ಎಂದು ತುತ್ತೂರಿ ಊದಿದಂತೆ. ಪ್ರಚಲಿತ ಬದುಕಿನಿಂದ ವಸ್ತುವನ್ನಾಯ್ದುಕೊಂಡಾಗ ಅಲ್ಲೊಂದು ಸಮಸ್ಯೆ ಸಾಮಾನ್ಯವಾಗಿ ಅಡಕವಾಗಿರುವುದು ಸಹಜ. ಹೀಗಿದ್ದರೂ ಆ ಕೃತಿಗೊಂದು ಸಮಸ್ಯೆಯ ಹಣೆಪಟ್ಟಿ ಕಟ್ಟುವುದು, ಮಾರುಕಟ್ಟೆಯ ನೀತಿಗನುಸಾರವಾಗಿಯೇ ಎಂದು ಹೇಳದೆ ವಿಧಿಯಿಲ್ಲ. ಇನ್ನು ಪರಿಹಾರದ ವಿಷಯ. ಬರೆಹಗಾರ ಎಲ್ಲ ರೋಗಗಳಿಗೂ ಔಷಧಿ ಕೊಡುವ ಧನ್ವಂತರಿಯಾಗುವುದು ಉದ್ಧಟತನವೇ ಸರಿ. ಎಷ್ಟೋ ಕಡೆ ರೋಗವೇನೆಂದು ತಿಳಿದರೆ ಸಾಕು. ಚಿಕಿತ್ಸೆ ಸ್ವಯಂವ್ಯಕ್ತವಾಗುವುದು. ಸಾಹಿತ್ಯ ಕೃತಿಗಳಲ್ಲಿ ಪರಿಹಾರದ ಸುಳಿವು ಎಂದೂ ಇರಕೂಡದೆಂಬುದು ನನ್ನ ಅಭಿಪ್ರಾಯವಲ್ಲ. ಕಲೆಗೂ ಕಥೆಗೂ ಕುಂದುಬಾರದಂತೆ ಆ ವಿಷಯವನ್ನು ಬರೆಸುವುದು ಸಾಧ್ಯವಾದರೆ ಸಂತೋಷ. ಬದಲು ಪ್ರತಿಯೊಂದರಲ್ಲೂ ಪರಿಹಾರದ ಸೂಚನೆ ಇದ್ದೇ ಇರಬೇಕೆನ್ನುವುದು ಅರ್ಥವಿಲ್ಲದ ಮಾತು.

ಒಂದು ಕೃತಿಯ ವಾಚನದಿಂದ ಓದುಗ ಹೆಚ್ಚು ಬುದ್ಧಿವಂತನಾದರೆ, ಮನುಷ್ಯರನ್ನೂ ಸಮಾಜವನ್ನೂ ಕುರಿತಾದ ಆತನ ತಿಳಿವಳಿಕೆ ಹೆಚ್ಚಿದರೆ, ಆ ಸೃಷ್ಟಿ ಸಾರ್ಥಕವಾದಂತೆಯೇ. ಓದಿದಬಳಿಕ ಪರಿಹಾರ ತನ್ನಿಂದ ತಾನಾಗಿಯೇ ಸ್ಪಷ್ಟವಾಗುವಂತಹ ಕೃತಿಯೇ ಉತ್ತಮವಾದದ್ದು. ಕೃತಿಯಲ್ಲಿ ಅಡಕವಾಗಿರುವ ಯಾವುದೇ ವಿಚಾರ, ಕಥೆಯ ಬೆಳೆವಣಿಗೆಯೊಡನೆ ಸನ್ನಿವೇಶಗಳೊಡನೆ ಒಂದುಗೂಡಿ ತೋರಬೇಕಲ್ಲದೆ, ತಾನೇ ಪ್ರತ್ಯೇಕವಾಗಿ ಕಾಣಿಸಿಕೊಳ್ಳಬಾರದು.

ಬರೆಹಗಾರ ಕೃತಿಯಲ್ಲಿ ತನ್ನ ವೈಯಕ್ತಿಕ ವಿಚಾರಗಳನ್ನು ತುರುಕಬಹುದೆ? ಕಳೆದ ಶತಮಾನದ ಫ್ರೆಂಚ್ ಸಾಹಿತಿ ಫ್ಲಾಬೇರ್ ಆ ವಿಷಯವಾಗಿ ಸೊಗಸಾದ ಉತ್ತರ ನೀಡಿದ್ದಾನೆ:

"ವಿಶ್ವದಲ್ಲಿ ದೇವರು ಇರುವಂತೆ, ಕೃತಿಯಲ್ಲಿ ಕರ್ತೃವಿರಬೇಕು. ಆತ ಸರ್ವಾಂತರ್ಯಾಮಿಯಾಗಿದ್ದರೂ ಎಲ್ಲಿಯೂ ಗೋಚರನಾಗಬಾರದು."

ಬರೆಹಗಾರನೂ ಮನುಷ್ಯನೇ. ಆತ ಸಮಾಜದ ಸದಸ್ಯ, ರಾಷ್ಟ್ರದ ಪ್ರಜೆ. ಕಾಲಧರ್ಮದಿಂದ ಅವನೂ ಬಾಧಿತನೇ. ಹೀಗಾಗಿ ಆತನನ್ನೂ ಆತನ ಕೃತಿಯನ್ನೂ ವಾತಾವರಣದ ವೃತ್ತದೊಳಗೇ ಇರಿಸಿ ಸೌಂದರ್ಯ ಸಮೀಕ್ಷೆಯನ್ನು ಮಾಡಬೇಕು. ಅದೇ ಸರಿಯಾದ ಕಾವ್ಯಮೀಮಾಂಸೆ.

ಕನ್ನಡ ಸಾಹಿತ್ಯದಲ್ಲಿ ವಿಚಾರದ ಪರಂಪರೆ

ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ನಮ್ಮ ಆಧುನಿಕರು ಆಸಕ್ತಿ ತೋರುವುದು ಕಡಮೆ. ಇಂಗ್ಲಿಷ್ ತಿಳಿದವರೇ ನಾಗರಿಕರೆನ್ನುವ ದಾಸಮನೋಭಾವವೊಂದು ಬಲಗೊಂಡು, ನಮ್ಮ ಜನರನ್ನು ಸ್ವಾಭಿಮಾನಶೂನ್ಯರನ್ನಾಗಿ ಮಾಡಿತು. "ನಮ್ಮಲ್ಲೇನಿದೆ!" ಎನ್ನುವ ಉದ್ಗಾರ ಒಂದು ರೀತಿಯ ಸಂತೋಷದಿಂದಲೇ ಹೊರಟಿತು. ಎಡೆಬಿಡದ ಪಾಳೆಯಗಾರರ ಕದನಗಳ ದೆಸೆಯಿಂದ, ಬಳಿಕ ಪರಕೀಯರ ಆಡಳಿತದ ಕಾರಣದಿಂದ, ಒಂದು ಜನಾಂಗವಾಗಿ ನಮ್ಮ ಜನಪದ ಬಾಳಲು ಬೆಳೆಯಲು ಅವಕಾಶ ದೊರೆಯಲಿಲ್ಲ. ಆದರೂ ಪುರಾತನವಾದ ನಮ್ಮ ನಾಗರಿಕತೆ ಸಾಹಿತ್ಯಸೃಷ್ಟಿಗೆ ಮಾತೃಕೆಯಾಗಲೇ ಇಲ್ಲ ಎನ್ನುವುದುಂಟೆ? ಆರನೆಯ ಶತಮಾನದಿಂದ ಹಿಡಿದು ಇಪ್ಪತ್ತರ ಆರಂಭದವರೆಗೆ ಆಗಿರುವ ಕನ್ನಡ ಸಾಹಿತ್ಯಕೃಷಿ ಅಲ್ಪವೇನೂ ಅಲ್ಲ. ಆದರೆ ನಮ್ಮಲ್ಲಿನ ಬಹ್ವಂಶ ಓದುಗರಿಗೆ, ಎಲ್ಲಿ ನೋಡಿದರಲ್ಲಿ ದೊರೆಯುವ ಕಥೆಪುಸ್ತಕಗಳು ಮಾತ್ರ ಕನ್ನಡ ಸಾಹಿತ್ಯ. ಪ್ರಾಚೀನ ಕೃತಿಗಳನ್ನು ಪಠ್ಯವೆಂದು ಅಭ್ಯಾಸಮಾಡುವ ವಿದ್ಯಾರ್ಥಿಗಳುಂಟು. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೊಂದೇ ಅಂತಹ ಅಭ್ಯಾಸದ ಗುರಿ. ಜ್ಞಾನಸಾಹಿತ್ಯ ಸ್ವಲ್ಪಮಟ್ಟಿಗೆ ಹಿಂದೆಯೂ ರಚಿಸಲ್ಪಟ್ಟುದನ್ನು ನಾವು ಬಲ್ಲೆವು. ಕಾಲಗತಿಯ ವಿಚಾರದ ಪ್ರಗತಿಯ ಒರೆಗೆ ಹಚ್ಚಿ ನೋಡುವ ಮಾತಂತಿರಲಿ ಆ ಕೃತಿಗಳನ್ನು ಓದಿನೋಡುವವರೆಷ್ಟು ಜನ? ಶುದ್ಧಾಂಗ ಮತ ಪ್ರಚಾರವಿರುವ ಕೆಲಕೃತಿಗಳನ್ನೇನೋ ಬರಿಯ ಕುತೂಹಲಕ್ಕಾದರೂ ಆ ಕೃತಿಗಳನ್ನೇನೋ ಕೆಲವರು ಆಗೊಮ್ಮೆ ಈಗೊಮ್ಮೆ ಮುಟ್ಟಿನೋಡುವುದುಂಟು ಗಮಕಿಗಳ ಕೃಪೆಯಿಂದ ವಚನಗಳು, ದೇವನಾಮಗಳು ಕರ್ಣರಸಾಯನವಾಗುವುದುಂಟು. ಇತರ ಪ್ರಾಚೀನ ಸಾಹಿತ್ಯವೆಲ್ಲ ಈಗಿನವರಿಗೆ ಕಬ್ಬಿಣದ ಕಡಲೆ.

ಈ ದುಃಸ್ಥಿತಿಗೆ ನಮ್ಮ ಕನ್ನಡ ಬಲ್ಲಿದರೂ ಸೌಂದರ್ಯ ಸಮೀಕ್ಷಕರೂ ಸ್ವಲ್ಪ ಮಟ್ಟಿಗೆ ಕಾರಣರಾಗಿದ್ದಾರೆ. ರಗಳೆಯ ಹರಿಹರ, ಷಟ್ಪದಿಯ ರಾಘವಾಂಕ ಎನ್ನುವರೇ ಹೊರತು, ಆ ಕರ್ತೃಗಳನ್ನು ಕೃತಿಗಳನ್ನೂ ಆಗಿನ ವಾತಾವರಣದೊಳಗಿರಿಸಿ ತೂಗಿ ನೋಡುವವರು ಬೆಲೆ ಕಟ್ಟುವವರು ಕಡಮೆ. ಗತಕಾಲದ ನಮ್ಮ ಬದುಕಿನಲ್ಲಿ ಮತದ ಪ್ರಭಾವವೇ ಅತಿಮುಖ್ಯವಾಗಿತ್ತೆಂದು ಒಪ್ಪಿಕೊಳ್ಳೋಣ. ಆದರೆ ಯಾವ ಮತ ಪ್ರಚಾರವೇ ಆಗಲಿ ಎಂದಾದರೂ ಶೂನ್ಯದಲ್ಲಿ ನಡೆದುದುಂಟೆ? ಎಲ್ಲಾ ಬೋಧನೆಗಳೂ ಪ್ರತಿಪಾದನೆಗಳೂ ಆಯಾ ಕಾಲದ ಸಾಮಾಜಿಕ ಹಿನ್ನೆಲೆಗಳಲ್ಲೆ ಆದುವಲ್ಲವೆ? ಹೀಗೆ ಸಾಹಿತ್ಯದ ಮೂಲಕ ನಮ್ಮ ಪುರಾತನರ ಬದುಕನ್ನು ತಿಳಿದುಕೊಂಡು, ಒಂದೊಂದೇ ಚಿತ್ರವನ್ನೆತ್ತಿ ಹಿಡಿದು ಕ್ರಮಬದ್ಧವಾಗಿ ವೈಜ್ಞಾನಿಕವಾಗಿ

ಜೋಡಿಸಿ, ಸಮಗ್ರವಾದೊಂದು ಚಿತ್ರಶಾಲೆಯನ್ನು ರಚಿಸುವುದು ಎಷ್ಟು ಸ್ವಾರಸ್ಯಪೂರ್ಣವಾದ ಆಹ್ಲಾದಕರವಾದ ಕೆಲಸ ! ಆ ರೀತಿ ಪ್ರಾಚೀನ ಸಾಹಿತ್ಯಕ್ಕೂ ಆಗಿನ ಬದುಕಿಗೂ ಸಂಬಂಧ ಕಲ್ಪಿಸಿ ಮಾಡುವ ಸೌಂದರ್ಯ ಸಮೀಕ್ಷೆಯಿಂದ ಆಶ್ಚರ್ಯಕರವೆನ್ನಿಸುವಂತಹ ಪರಿಣಾಮ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಪ್ರಾಚೀನ ಸಾಹಿತ್ಯವನ್ನಿಷ್ಟು ಪರಾಮರ್ಶಿಸಿ ನೋಡಿ. ಗೊತ್ತುಗುರಿ ಇಲ್ಲದ ಬರೆವಣಿಗೆ ಅದಲ್ಲವೇ ಅಲ್ಲ. ವಿಚಾರದ ಅಂಶಕ್ಕಂತೂ—ಅದೆಂತಹ ವಿಚಾರವೇ ಇರಲಿ ಕೊರತೆ ಇಲ್ಲವೇ ಇಲ್ಲ. ಕಾವ್ಯಗಳ ತುಂಬಾ ಬದುಕಿನ ಮೀಮಾಂಸೆಯೇ. ಸಮಾಜದ ವಿಮರ್ಶೆಯೇ. ಕಲೆಯ ವಿಚಾರದ ವಿಕಾಸಕ್ಕೆ ಹಿಂದಿನ ಕಟ್ಟುಪಾಡುಗಳು ಅಡ್ಡಿಯಾದಾಗ, ಬಂಡಾಯವೇಳುವ ಮನೋವೃತ್ತಿಯ ನಿದರ್ಶನಗಳು ಎಷ್ಟೊಂದು! ನ್ಯಾಯ ಪಕ್ಷಪಾತ, ಸತ್ಯನಿಷ್ಠುರತೆ ಎಲ್ಲವೂ ಅಲ್ಲಿವೆ. ಬಸವಣ್ಣನವರ ವಚನಗಳೆ, ದಾಸರ ಪದಗಳೆ, ಸರ್ವಜ್ಞನೆ, ಸಂಚಿಯ ಹೊನ್ನಮ್ಮನೆ? ಇರುವಿಕೆಯ ಸ್ಥಿತಿಗಳನ್ನು ಕುರಿತೇ ಅಲ್ಲವೆ ಅವರು ಬರೆದುದು, ಒರೆದುದು?

ಇದೀಗ, ಶತಶತಮಾನಗಳಿಂದ ವಿಚಾರವಾಹಿನಿ ಕನ್ನಡ ಹೊಲದಲ್ಲಿ ಹರಿದು ಬಂದಿರುವ ಕಥೆ.

ಯಾವುದೂ ಜಡವಲ್ಲದ ಈ ಬದುಕಿನಲ್ಲಿ ವಿಚಾರಗಳೂ ಬದಲಾಗುತ್ತ ಬಂದುದನ್ನು ನಾವು ಕಂಡಿದ್ದೇವೆ. ಯಂತ್ರಗಳ ಆಗಮನ ಹಳೆಯ ಆರ್ಥಿಕ ಬುಡಕಟ್ಟನ್ನು ಹಿಡಿದು ಕುಲುಕಿತು. ಪಶ್ಚಿಮದ ಪ್ರತಿಭೆ ನಮ್ಮ ಜ್ಞಾನಸರೋವರವನ್ನು ಕಲಕಿತು. ಜೀವನದ ಮೇಲೆ ಅದರಿಂದಾದ ಪರಿಣಾಮದ ಪ್ರತಿಬಿಂಬ ಈ ಶತಮಾನದ ಆರಂಭದ ಸಾಹಿತ್ಯದಲ್ಲಿ ಒಡಮೂಡಿತು.

ಈ ಸಂದರ್ಭದಲ್ಲಿ, ಆಧುನಿಕ ಕನ್ನಡ ಸಾಹಿತ್ಯದ ಎರಡು ಆರಂಭ ಕೃತಿಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸ ಬಯಸುವೆ. ಒಂದರ ಹೆಸರು: 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ಇನ್ನೊಂದು 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು.'

'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ 'ಪ್ರಕಟವಾದುದು ೧೮೮೭ರಲ್ಲಿ. ಆಗ ಪ್ರಕಟವಾಗಿದ್ದಂತೆ 'ಹವ್ಯಕ ಹಿತೇಚ್ಛು ವಿದ್ವಾಂಸರೊಬ್ಬರು' ಆ ನಾಟಕದ ಕರ್ತೃ. ಸುಮಾರು ಎಪ್ಪತ್ತು ವರ್ಷಗಳಿಗೆ ಹಿಂದೆ ರಚಿಸಲ್ಪಟ್ಟ ಆ ಕೃತಿಯ ವಸ್ತು, ಕನ್ಯಾವಿಕ್ರಯದಂತಹ ಸಾಮಾಜಿಕ ರೋಗ. ಹಣ್ಣುಮುದುಕ, ವಿಧುರ, ಇಗ್ಗಪ್ಪ ಹೆಗ್ಗಡೆ ಕನ್ನಿಕೆಯೊಬ್ಬಳನ್ನು ಮದುವೆಯಾಗುತ್ತಾನೆ. ಆಕೆ ವಿಧವೆಯಾಗುತ್ತಾಳೆ. ಸ್ವಾಭಾವಿಕ ವಾಗಿಯೇ ಆಕೆಗೆ ದೊರೆತುದು ರಕ್ಷಣೆ ಮಾತ್ರವೇ ಅಲ್ಲ. ಸಮಾಜದ ದೃಷ್ಟಿಯಲ್ಲಿ ಅದು ಪಾಪಿಯ ಬದುಕು, ಪರಿವಾರ ಭ್ರೂಣಹತ್ಯ. ಶಿರಸಿಯ ನ್ಯಾಯಾಸ್ಥಾನದಲ್ಲಿ ನಡೆಯುವ ವಿಚಾರಣೆಯೆ! ನಾಟಕಕಾರರ ವಿಶಿಷ್ಟ ಸೃಷ್ಟಿಯಾದ ನ್ಯಾಯಾಧೀಶ

ತೀರ್ಪುಕೊಡುತ್ತ, ಸಮಾಜದ ದುಷ್ಟಪದ್ಧತಿಗಳನ್ನು ಧಿಕ್ಕರಿಸುತ್ತಾನೆ. ದುರಾಚಾರಗಳನ್ನು ಪ್ರತಿಬಂಧಿಸುವುದರ ಬದಲು ದುರುಳರಿಗೆ ನೆರವಾಗುವಂತಹ ಮಠಾಧಿಪತಿಗಳನ್ನು ಜರೆಯುತ್ತಾನೆ. ಈ ನಾಟಕದೊಳಗಿನ ಸಂಭಾಷಣೆಯೆಲ್ಲ ನಡೆಯುವುದು ಮನೆವಾತಿನಲ್ಲಿ. ಮಲೆನಾಡಿನೊಂದು ಜನವಿಭಾಗದ ಆಡುಭಾಷೆಯಲ್ಲಿ. ಅದರಲ್ಲೂ ಭೋಳೇ ಹೆಣ್ಣು ಆಡುವ ಕನ್ನಡ ಒಂದು ತೆರ. ನ್ಯಾಯಾಧೀಶರ ಕನ್ನಡ ಒಂದು ತೆರ. ಅಂತಹ ಸೂಕ್ಷ್ಮ ವಿಷಯದಲ್ಲೂ ನಾಟಕಕಾರರು ತೋರಿರುವುದು ಪ್ರಶಂಸೆಗೆ ಅರ್ಹವಾದ ಪ್ರಾಮಾಣಿಕತೆ. ಕೃತಿಯ ಉದ್ದಕ್ಕೂ ಮಿಡಿಯುತ್ತಿರುವುದು ಸಮಾಜ ಸುಧಾರಣೆಯ ಹಂಬಲ, ಹೊಲಸನ್ನು ಕಂಡು ಕನಲುವ ಮನೋವೃತ್ತಿ, ಸಚೇತನವಾದ ಮಾನವೀಯತೆ. ಈ ಕೃತಿರಚನೆಯ ಉದ್ದೇಶ? ಅದನ್ನು ನಾಟಕಕಾರರು ಮರೆಮಾಚಿಯೇ ಇಲ್ಲ. ಅವರ ಹಿಮ್ಮೇಳನದಲ್ಲಿದ್ದುದು ಮನೋರಂಜನೆಯ ಏಕನಾದವಲ್ಲ —ಜನಜಾಗೃತಿಯ ಝೇಂಕಾರ.

ವೆಂಕಟರಮಣ ಶಾಸ್ತ್ರಿ ಎಂಬವರೇ ಆ ವಿದ್ವಾಂಸರಿರಬೇಕೆಂದು ಇತ್ತೀಚೆಗೆ ಸಿದ್ಧಪಡಿಸಲಾಗಿದೆ. ಆಗಿನ ಕಾಲಕ್ಕೆ ಕ್ರಾಂತಿಕಾರಕ ವಿಚಾರಗಳನ್ನು ಪ್ರತಿಪಾದಿಸಿದ, ಆಳುತ್ತಿದ್ದ ಆಂಗ್ಲರ ಕಣ್ಣಲ್ಲಿ ಕೆಟ್ಟವನೆನ್ನಿಸಿಕೊಂಡ ವೆಂಕಟರಮಣ ಶಾಸ್ತ್ರಿಯವರು ಊರೂರು ಅಲೆದು ಸಾಹಸೀಜೀವನವನ್ನು ನಡೆಸಿ, ಕಡುಬಡತನದಲ್ಲೆ ಕೊನೆಗಾಲವನ್ನು ಕಳೆದರಂತೆ." ಕುಮುಟೆಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಲಿಂಗೇಶಶರ್ಮರು ಪ್ರಕಟಿಸಿದ ಈ ಪ್ರಹಸನದ ದ್ವಿತೀಯ ಆವೃತ್ತಿಯಲ್ಲಿ ವೆಂಕಟರಮಣ ಶಾಸ್ತ್ರಿಯವರ ತುಂಬು ಜೀವನದ ರುದ್ರವೂ ರಮ್ಯವೂ ಆದ ಕಥಾಚಿತ್ರವಿದೆ.

'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ'ಪ್ರಕಾಶಿತವಾದ ಹನ್ನೆರಡು ವರ್ಷಗಳಲ್ಲೇ—೧೮೯೯ರಲ್ಲಿ 'ಇಂದಿರಾಬಾಯಿ' ಎಂಬೊಂದು ಕೃತಿ ಪ್ರಕಟವಾಯಿತು. ಅದು ೨೫೦ ಪುಟಗಳ ಕಾದಂಬರಿ. ಬರೆದವರ ಹೆಸರು ಗುಲ್ವಾಡಿ ವೆಂಕಟರಾಯರು. ಆ ಕೃತಿಯನ್ನು ಕುರಿತು ಶಿವರಾಮ ಕಾರಂತರು ಹೇಳಿರುವ ಕೆಲಮಾತುಗಳು ಮನೋಜ್ಞವಾಗಿವೆ.

"ಗ್ರಂಥಕರ್ತರು ತಮ್ಮ ಕಾಲದ ಸಾಮಾಜಿಕ ಪ್ರಶ್ನೆಗಳನ್ನು ಸುರಸವಾಗಿ ಯಥಾತ್ಮಿಕವಾಗಿ ಅದರಲ್ಲಿ ಚಿತ್ರಿಸಿದ್ದಾರೆ..... ಇದು ಒಂದು ಶತಮಾನದ ಹಿಂದಿನ, ದಕ್ಷಿಣ ಕನ್ನಡದ—ಅದರಲ್ಲೂ ಮಂಗಳೂರಿನ—ಸಾರಸ್ವತ ಸಮಾಜದ ವಾಸ್ತವಿಕ ಚಿತ್ರವೆಂದರೆ ತಪ್ಪಾಗಲಾರದು. ಮಾನವನ ದುಷ್ಟತನ, ಸೌಜನ್ಯ, ನಯ, ವಿನಯ, ಔದ್ಧತ್ಯ ಎಲ್ಲವನ್ನೂ ತೂಕಮಾಡಿ ತೋರಿಸಿಕೊಟ್ಟಿದ್ದಾರೆ..... ತಮ್ಮ ಕಾಲದ ಜನಗಳ ನಂಬಿಕೆಯನ್ನು ಚಿತ್ರಿಸುವಾಗಲೂ ಈ ಕಾದಂಬರಿಕಾರರು ಯಥಾವತ್ತಾಗಿಯೇ ಅದನ್ನು ಚಿತ್ರಿಸಿದ್ದಾರೆ. ಸಮಾಜಸುಧಾರಣೆಯ ಆವೇಶಕ್ಕೆ ಮನಗೊಟ್ಟು, ಬರವಣಿಗೆಯಲ್ಲಿ

ಆಳತೆ ತಪ್ಪಿಲ್ಲ."

ಇದೀಗ ಕನ್ನಡದ ಮೊದಲ ಕಾದಂಬರಿ-ವಿಚಾರ ಮತ್ತು ಕಲೆಯ ಅಂಶಗಳು ಸಮರಸಗೊಂಡಿರುವ ಸಾಹಿತ್ಯಕೃತಿ !

ನಾಡು ಛಿದ್ರಛಿದ್ರವಾಗಿದ್ದ ಈ ದರಿದ್ರ ಭೂಮಿಯಲ್ಲಿ ಈ ಕೃತಿರತ್ನಗಳು ಪ್ರಾದೇಶಿಕವಾಗಿಯೇ ಉಳಿದುವು ; ಕನ್ನಡ ಕಲೆಯ ಮುನ್ನೆಡೆಯಲ್ಲಿ ಅವು ಹೆಗ್ಗುರುತುಗಳಾಗುವುದು ಸಾಧ್ಯವಾಗಲಿಲ್ಲ. ಆದರೂ ಅವುಗಳ ಚಾರಿತ್ರಿಕ ಮಹತ್ವವನ್ನು ಈ ದಿನ ನಾವು ಅಲ್ಲಗಳೆಯುವುದುಂಟೆ? ಅವುಗಳ ಹಿರಿಮೆಯನ್ನು ಗುರುತಿಸದೆ ಮುಂದುವರಿಯುವುದುಂಟೆ?

ಈ ಶತಮಾನದ ಸೃಷ್ಟಿ

ಆಧುನಿಕ ಕನ್ನಡ ಸಾಹಿತ್ಯದ ಬಹುಮುಖ ಬೆಳವಣಿಗೆಯನ್ನು ನಾವು ಕಾಣುವುದು ಕಳೆದ ಮೂರು ದಶಕಗಳಲ್ಲಿ. ರಾಷ್ಟ್ರೀಯ ಸ್ವಾತಂತ್ರ್ಯಹೋರಾಟ, ದೀರ್ಘಕಾಲದಿಂದ ಮುದುಡಿಕೊಂಡಿದ್ದ ಕ್ರಿಯಾಶಕ್ತಿಗಳಿಗೆಲ್ಲ ಚಾಲನೆಯನ್ನು ಕೊಟ್ಟಿತು. ಜನಾಂಗದ ಸ್ವಾಭಿಮಾನ, ವ್ಯಾಪಕವಾದ ರಾಷ್ಟ್ರಾಭಿಮಾನಕ್ಕೆ ಪೂರಕವಾಯಿತು. ಹಾಗೆ ಮೊದಲಾದುದೇ ಕನ್ನಡದ ಪುನರುದಯ ಚಳವಳಿ.

ಆಗಲೇ ರಕ್ತಗತವಾಗಿದ್ದ ಪರಭಾಷೆಯ ವ್ಯಾಮೋಹವನ್ನು ಬಿಟ್ಟು, ಒಳಗಿರು ವುದನ್ನು ತಾಯ್ನುಡಿಯಲ್ಲಿ ಹೊರಗೆಡವಲು ಆಗಿನ ಯುವಜನಾಂಗ ಮಾಡಿದ ಯತ್ನ—ಗಳಿಸಿದ ಯಶಸ್ಸು—ಸ್ಮರಣೀಯವಾದುದು. ಆಗ ಕೃತಿಯ ತಿರುಳೇನು ಎಂದು ಯೋಚಿಸಿದವರಿಲ್ಲ. ಎಷ್ಟೋ ಕಾಲದ ಅನಂತರ ಹುಟ್ಟಿದ ಮಗು ಹೇಗಿದ್ದರೂ ಮುದ್ದೇ. ಒಟ್ಟಿನಲ್ಲಿ ಕನ್ನಡವಾದರಾಯಿತು. ಕನ್ನಡದ ಕತೆ, ಕನ್ನಡದ ಕವಿತೆ, ಕನ್ನಡದ ನಾಟಕ, ಕನ್ನಡ ಕಾದಂಬರಿ.....

ನಾವೆಲ್ಲ ಕಂಡಿರುವಹಾಗೆ ಭಾವಾವೇಶದ ಆ ಕಾಲಘಟ್ಟ ಬಲು ಬೇಗನೆ ಕಳೆಯಿತು. ಕನ್ನಡಕೃತಿಯಾದರೆ ಸಾಲದು, ಒಳ್ಳೆಯ ಕನ್ನಡ ಕೃತಿಯಾಗಬೇಕು—ಎಂಬ ಆಶಯ ವ್ಯಕ್ತಪಟ್ಟಿತು.

ಮೂವತ್ತು ವರ್ಷಗಳ ಕಾಲ, ಯಾವುದೇ ಜನಾಂಗದ ಇಲ್ಲವೆ ರಾಷ್ಟ್ರದ ಇತಿಹಾಸ ದಲ್ಲಿ ಅಲ್ಪಾವಧಿಯೇನೂ ಅಲ್ಲ. ಆದರೆ ನಾವು ಬದುಕಿದ್ದುದು ಪರತಂತ್ರ ದೇಶದಲ್ಲಿ. ಹಂಚಿಹಂಚಿದ ನಾಡಿನಲ್ಲಿ. ಸ್ವತಂತ್ರವಲ್ಲದ ಜನಾಂಗದ ಪ್ರಗತಿಗೆ ಅವಕಾಶ ಕಡಮೆ. ನಮ್ಮ ಆಧುನಿಕ ಸಾಹಿತ್ಯದ ಬೆಳವಣಿಗೆಯನ್ನು ಆ ಹಿನ್ನೆಲೆಯಲ್ಲಿ ನಾವು ಗಮನಿಸಬೇಕು.

ವಿಜ್ಞಾನಕ್ಕೆ, ತತ್ತ್ವಜ್ಞಾನಕ್ಕೆ, ಇನ್ನಿತರ ಶಾಸ್ತ್ರಗಳಿಗೆ ಸಂಬಂಧಿಸಿ ಕನ್ನಡದಲ್ಲಿ ಪ್ರಕಟವಾಗಿರುವ ಪುಸ್ತಕಗಳ ಸಂಖ್ಯೆ ಎಷ್ಟು? ಸೃಷ್ಟಿಯ ಸಾಹಿತ್ಯ ನೂರರಷ್ಟು

ಪ್ರಕಟವಾದಾಗ ಜ್ಞಾನ ಸಾಹಿತ್ಯ ಒಂದರಷ್ಟಾದರೂ ಪ್ರಕಟವಾಗಿದೆಯೇ? ಪರಪೀಡಕರಾದ ಆಂಗ್ಲರ ಆಡಳಿತವನ್ನು ಬಿಟ್ಟುಬಿಡೋಣ. ಅವರ ಭಾಷೆ ಮತ್ತು ಸಾಹಿತ್ಯ ಮಾತ್ರ ನಮಗೆ ಮಹದುಪಕಾರಮಾಡಿದೆ ಎಂಬುದು ನಿರ್ವಿವಾದ. ಆಂಗ್ಲರ ಆಳ್ವಿಕೆ ಇಲ್ಲದೇ ಇರುತ್ತಿದ್ದರೆ, ರಷ್ಯದವರಂತೆ ಚೀಣದವರಂತೆ ಈ ಕ್ಷೇತ್ರದಲ್ಲಿ ಬೆಳವಣಿಗೆಯ ಬೇರೆಯೇ ಹಾದಿಯನ್ನು ನಾವು ನಿರ್ಮಿಸಿಕೊಳ್ಳುತ್ತಿದ್ದೆವು, ನಿಜ. ಆದರೆ ವಾಸ್ತವವಾಗಿ ಯಂತ್ರಯುಗದ ವೈಜ್ಞಾನಿಕ ಪ್ರಗತಿಗೆಲ್ಲ ಇಂಗ್ಲಿಷೇ ನಮಗೆ ಬೆಳಕಿಂಡಿಯಾಯಿತಲ್ಲವೆ? ಅಂತಹ ಇಂಗ್ಲಿಷಿನ ಮೂಲಕ ಜ್ಞಾನಸಂಪತ್ತನ್ನು ಹೆಚ್ಚಿಸಿಕೊಂಡು, ಅದೆಲ್ಲವನ್ನೂ ಅರಗಿಸಿ ಕನ್ನಡದಲ್ಲಿ ವ್ಯಕ್ತಪಡಿಸಿ ಜನಸಮುದಾಯದ ಸೊತ್ತಾಗಿ ಮಾಡಿದವರೆಷ್ಟು ಜನ? ಮಾನವನ ಬದುಕಿನ ಮೇಲೆ ಪರಿಣಾಮವನ್ನುಂಟು ಮಾಡುವಂತಹ ಇಂತಹ ಪ್ರಕಟಣೆಗಳು, ಏನೂ ಬಂದೇ ಇಲ್ಲವೆನ್ನುವುದು ತಪ್ಪಾದೀತು. ಪ್ರಕಟವಾಗಿರುವ ಜ್ಞಾನಸಾಹಿತ್ಯವೆಲ್ಲ, ಬೆಂಗಾಡಿನಲ್ಲಿ ಗುರುತೇ ಉಳಿಯದಂತೆ ಎಲ್ಲಿಯೋ ಸುರಿದ ನಾಲ್ಕು ತುಂತುರು ಹನಿ ಮಾತ್ರ.

ಸೃಷ್ಟಿಸಾಹಿತ್ಯಕ್ಷೇತ್ರದಲ್ಲಿ ವಾಸ್ತವವಾದದ ಹೆದ್ದಾರಿಯನ್ನೇನೋ ಕೆಲವರು ತುಳಿದರು. ಹೆಮ್ಮೆಪಡುವಂತಹ ಕೃತಿಗಳು ಕೆಲವು—ನಾಟಕಗಳು, ಕವಿತೆಗಳು, ಕೆಲ ಕತೆಕಾದಂಬರಿಗಳು—ಸೃಷ್ಟಿಯಾದುವು. ನೀರು ನಿಂತಲ್ಲೇ ನಿಂತಿತೇನೋ ಎಂದು ಕಂಡಾಗ, ಪ್ರಗತಿಶೀಲತೆಯ ಬಿರುಗಾಳಿಯೊಂದು ಬೀಸಿ, ತೆರೆಗಳನ್ನೆಬ್ಬಿಸಿ ದಂಡೆಗೆ ಬಡೆದು ಕೋಲಾಹಲವನ್ನುಂಟುಮಾಡಿತು. ಇಷ್ಟಿದ್ದರೂ ಕಂಡುಬರುವುದೇನು? ನಾವು ಕ್ರಮಿಸಿರುವ ಹಾದಿ ಸ್ವಲ್ಪವೇ—ಬಲು ಸ್ವಲ್ಪವೇ.

ಈ ಶತಮಾನದಲ್ಲಿ ದೇಶ ಸ್ವತಂತ್ರವಾದುದೇ ನಾವು ಕಂಡ ಮಹಾಸಂಭವ. ಆದರೆ ಯಾದವೀಕಲಹದ ಹೊಗೆ ಬಂಧವಿಮುಕ್ತರ ಉಸಿರು ಕಟ್ಟಿಸಿತು. ದೇಶದ ವಿಭಜನೆ, ಅನಂತರದ ಮಾರಣ ಹೋಮ, ನಮ್ಮೆಲ್ಲರ ಹೃದಯದ ಮೇಲೆ ಬರೆ ಎಳೆಯಿತು. ಕತ್ತಲೆಯ ಕನಸಿನಲ್ಲಿ ಕಂಡುದನ್ನು ಬೆಳಕಿನಲ್ಲಿ ನಾವು ಹುಡುಕಿದೆವು, ನಮಗೆ ದೊರತುದು ನಿರಾಶೆಯ ಪ್ರತಿಫಲ. ಸೂಕ್ಷ್ಮಜೀವಿಯಾದ ಬರೆಹಗಾರನಿಗಂತೂ ಆ ಭ್ರಮೆ ನಿರಸನ ಕುಠಾರಪ್ರಾಯವಾದದ್ದು. ಅದರ ನೇರವಾದ ಪರಿಣಾಮವನ್ನು ನಾವು ಕಾಣುವುದು ಆತನ ಕೃತಿಗಳಲ್ಲೇ. ಬದುಕಿನಿಂದ ವಿಮುಖನಾದ ಬರೆಹಗಾರ ಪರದ ಚಿಂತನೆಯೊಂದನ್ನೇ ಮಾಡಿದ. ಇಲ್ಲವೆ ಭಾವಲೋಕದಲ್ಲಿ ಮೈಮರೆತ; ಅಥವಾ ಅತಿಶಯವಾದ ಜಾರುಗುಂಡಿಯಲ್ಲಿ ತಳವಿಲ್ಲದ ವಿಷಯಾಸಕ್ತಿಯಲ್ಲಿ ಇಳಿದ. ಆತ ಮಾಡಿದುದೇ ಆತನ ಕೃತಿಯಲ್ಲಿ ಒಡಮೂಡಿತು.

ಈ ದಿನದ ಸಾಹಿತ್ಯಸೃಷ್ಟಿಯಲ್ಲಿ ಅನಿಷ್ಟಕಾರಕವೆಂದು ನನಗೆ ಅನಿಸುವ ಕೆಲ ಪ್ರವೃತ್ತಿಗಳನ್ನು ಕುರಿತು ಒಂದೆರೆಡು ಮಾತು ಇಲ್ಲಿ ಹೇಳಬೇಕು. ಸಾಮಾಜಿಕ

ಜೀವನದಿಂದ, ಜೀವನ ಪ್ರವಾಹದಿಂದ, ದೂರಹೋಗುವ ಬರೆಹಗಾರನಿಗೆ ಒಳ್ಳೆಯ ನಿದರ್ಶನವೆಂದರೆ ನಮ್ಮ ನವ್ಯ ಕವಿ. ಈಗ ಈತ ಸೃಷ್ಟಿಸುವುದು ವೈಯಕ್ತಿಕ ಕಾವ್ಯವನ್ನು, ಮಾತನಾಡುವುದು ವೈಯಕ್ತಿಕ ಪ್ರತಿಮೆಗಳ ಮೂಲಕ. ಕವಿವಾಣಿ ವಿಶ್ವವಾಣಿಯಾಗುವ ಕಾಲ ಕಳೆದಂತೆಯೇ! ಈ ಸಿನಿಕತನ, ನಿರಾಶಾವಾದ, ವಕ್ರತಾತ್ತ್ವಿಕದೃಷ್ಟಿ—ಎಷ್ಟು ಸರಿಯೋ ಎಷ್ಟು ತಪ್ಪೋ, ಓದುಗರಿಗೆ ಅದು ತಿಳಿದರೆ ತಾನೆ? ಯಾಕೆ ಹೀಗೆ—ಎಂದು ನವ್ಯ ಕವಿಯನ್ನು ಕೇಳಿನೋಡಿ. ದೊರೆಯುವ ಉತ್ತರ ಎಂಥದು? "ನಾನು ಬರೆಯೋದು ಇವತ್ತು ಹತ್ತೇ ಜನರಿಗೆ ತಿಳಿದರೂ ಸಾಕು, ನಾಳೆಯ ಜನರೆಲ್ಲ ನನ್ನ ಕೃತಿಯನ್ನು ಖಂಡಿತವಾಗಿಯೂ ಕೊಂಡಾಡುವರು." ಇಂಗ್ಲೆಂಡಿನಲ್ಲಿ ಕವಿತೆಗೆ ಎಂತಹ ಗತಿ ಒದಗಿತೆಂಬುದು ಪ್ರಾಯಶಃ ಈ ಸ್ನೇಹಿತರಿಗೆ ತಿಳಿಯದು. ಅಲ್ಲಿ ೧೮೦೦ನೆಯ ಇಸವಿಯಲ್ಲಿ ನೂರರಲ್ಲಿ ತೊಂಬತ್ತರಷ್ಟು, ಜನ ನಿರಕ್ಷರರಾಗಿದ್ದರು. ಆಗ ಸಾಮಾನ್ಯ ಓದುಗರ ಸಂಖ್ಯೆ ೧,೫೦,೦೦೦. ಇಪ್ಪತ್ತನೆಯ ಶತಮಾನದ ಮಧ್ಯಂತರದಲ್ಲಿ ಸಾಮಾನ್ಯ ಓದುಗರ ಸಂಖ್ಯೆ ಎರಡು ಕೋಟಿ. ಆಗ ಓದುಗರ ಸಂಖ್ಯೆ ಅಷ್ಟೊಂದು ಕಡಮೆ ಇದ್ದರೂ ಕವಿತಾ ಸಂಗ್ರಹಗಳು ಈಗಿನದಕ್ಕಿಂತ ಹೆಚ್ಚು ಮಾರಾಟವಾಗುತ್ತಿದ್ದುವು, ಅದಕ್ಕೇನು ? ಕಳೆದ ಮೂರು ದಶಕಗಳಿಂದ ನವ್ಯಕವಿತೆ ಬರೆಯುತ್ತಿರುವ ಆಂಗ್ಲ ಕವಿಗಳು ಆ ಪ್ರಶ್ನೆಗೆ ಉತ್ತರ ಕೊಡಬೇಕು. ಅಂಕೆ ಸಂಖ್ಯೆಗಳು ಕಲಿಸುವ ಅಮೂಲ್ಯ ಪಾಠವನ್ನು ನಮ್ಮವರು ದಯವಿಟ್ಟು ಗಮನಿಸಬೇಕು.

ನಾಟಕಗಳಂತೂ ಹಾಸ್ಯರಸ ಒಂದಿದ್ದರಾಯಿತೆನ್ನುವುದು ಪ್ರಚಲಿತ ಮತ. 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ'ದ ಪರಂಪರೆ ನಮಗೆ ತಿಳಿದಿರಲಿಲ್ಲವೆನ್ನೋಣ. ಆದರೆ ನಮಗೆ ಪರಿಚಿತರಾದ ಷಾ, ಇಬ್ಸೆನ್, ಮಾಲಿಯರರ ವಿಷಯವೇನು? ಕೈಲಾಸಂ ಕಣ್ಮರೆಯಾದರೆಂದು, ಅವರು ತುಳಿದ ಹೆದ್ದಾರಿಯನ್ನು ಮರೆಯೋಣವೇ?

ಕನ್ನಡದ ಸಣ್ಣ ಕತೆಗಳನ್ನು ನಮ್ಮ ಕತೆಗಾರರೇ ಸಾಯಬಡೆದರು, ಆ ಬಡಕೈಗಳಿಗೆ ಬಡಿಗೆಯನ್ನು ಒದಗಿಸಿಕೊಟ್ಟವನು ವ್ಯಾಪಾರೀ ಪ್ರಕಾಶಕ.

ಹರಟೆ-ಪ್ರಬಂಧಗಳ ಮಾತು, ಆ ಚಿಲ್ಲರೆಯವರನ್ನು ' ಹೇಗಿದೀರಪ್ಪಾ?' ಎಂದು ವಿಚಾರಿಸುವವರಾದರೂ ಯಾರು?

ಕತ್ತಿನವರೆಗೂ ಕಳೆತುಂಬಿದ ಫಲಪುಷ್ಪಗಳ ತೋಟವೊಂದೇ, ಕಾದಂಬರಿಯದು. ಇಲ್ಲಿನ ನೆಗೆತ ಕಸರತ್ತುಗಳೋ ಅದ್ಭುತ, ಜನಪ್ರಿಯ ಸರಕೆಲ್ಲ ಸಂತೆಗೋಸ್ಕರ ನೇಯುವ ಮೂರು ಮೊಳ. ಅದನ್ನು ಸಿದ್ಧಗೊಳಿಸಿದ ಕಂಪೆನಿಯ ಹಳೆಯ ಪ್ರಸಿದ್ಧಿಯ ಮೇಲಿಂದಲೇ ಅದರ ಮಾರಾಟವಾಗಬೇಕು. ಕೃತಿಯ ವಸ್ತುವಿಗೆ ಅನುಗುಣವಾಗಿ ಸ್ವರೂಪ (ತಂತ್ರ-ಶೈಲಿ) ಎಂದು ನೀವೆಲ್ಲಾದರೂ ಭಾವಿಸಬಹುದು. ಆದರೆ ನಮ್ಮ ಆಧುನಿಕ ಕಾದಂಬರಿಕಾರ ಮೊದಲು ತಂತ್ರವನ್ನು ಸೃಷ್ಟಿಸುತ್ತಾನೆ; ಬಳಿಕ ವಸ್ತುವನ್ನು! ಮನಶ್ಶಾಸ್ತ್ರ ವಿಜ್ಞಾನದೊಂದು ಶಾಖೆ ಎಂದು ನಾವೆಲ್ಲ ಒಪ್ಪಿದ್ದೇವೆ. ತನ್ನ ಪಾತ್ರಗಳನ್ನು ಸರಿಯಾಗಿ ತಿಳಿದುಕೊಳ್ಳಲು ಬರೆಹಗಾರನಿಗೆ ಆ ಶಾಸ್ತ್ರ ನೆರವಾಗುತ್ತದೆಂಬುದೂ

ನಿಜ. ಪ್ರತಿಯೊಂದು ಸಾಹಿತ್ಯಕೃತಿಯಲ್ಲೂ ಪಾತ್ರ ಪೋಷಣೆಯಲ್ಲಿ ಮನೋವಿಶ್ಲೇಷಣೆಯ ಸಾಮರ್ಥ್ಯ ಕಂಡುಬರಲೇಬೇಕು. ಆದರೆ ನಾವು ಮಾತ್ರ ಕಾದಂಬರೀ ರೂಪದಲ್ಲಿ ಬರೆಯುವುದು ಮನೋರೋಗವನ್ನು ಕುರಿತಾದ ನಿಬಂಧವನ್ನು, ನಮ್ಮ ದೃಷ್ಟಿಯಲ್ಲಿದು ಮುಂದುವರಿದ ನಾಗರಿಕತೆ; ನಾವು ಸಾಧಿಸಿರುವ ವೈಜ್ಞಾನಿಕ ಪ್ರಗತಿ! ಇದರ ಜತೆಯಲ್ಲೇ ಕಾಣುವಿರಿ—ಅದ್ಭುತ ಪವಾಡಗಳ ಚಿತ್ರಣವನ್ನು. ದೇವ, ದೇವತೆಯರನ್ನೂ ನಾಚಿಸುವಂತಹ ಪಾತ್ರಗಳು. ಮಾನವನ ಆತ್ಮವಿಶ್ವಾಸವೆಲ್ಲ ನಷ್ಟವಾಗಿ ಕುರುಡುನಂಬಿಕೆಗೇ ಅಂಟಿಕೊಳ್ಳುವಂತೆ ಮಾಡುವ ಯತ್ನ. ಅನಂತ ತ್ರಿಕೋಣದ ಹಾವಳಿಯಂತೂ ಕೇಳಲೇಬೇಡಿ. ಇದು ಬೇಸರವಾಯಿತೆಂದು ನೀವು ದೃಷ್ಟಿ ಹೊರಳಿಸುವುದು ಗತಕಾಲದ ಕಥೆಗಳ ಕಡೆಗೆ. ಅಲ್ಲಿಯಂತೂ ನಮ್ಮದು ಲೀಲಾಜಾಲವಾದ ನೆಯ್ಗೆ. ಎದುರಿಗಿರುವ ವಸ್ತುವಾದರೆ ಜವಾಬ್ದಾರಿ ಹೆಚ್ಚು. ಹಿಂದಿನದು ಎಂದ ಬಳಿಕ ನಾವಾಡಿದುದೇ ಸತ್ಯ. ಈ ದಿನದ ಇರುವಿಕೆಗೂ ನಾಳೆಯ ಬದುಕಿಗೂ ನಿನ್ನೆಯ ಚಿತ್ರ ನೆರವಾಗಬೇಕೆಂಬುದೆಲ್ಲ ಎಲ್ಲಿಯ ವಾದ? ಯಾವ ಆಧಾರಗಳೂ ಇಲ್ಲದ ಐತಿಹಾಸಿಕ ಸರಸಕಲ್ಪನೆಯ ಪ್ರವೃತ್ತಿಯೇ ಹೊಸದು! ಇನ್ನು ಪತ್ತೇದಾರಿ ಕಾದಂಬರಿಗಳನ್ನೆತ್ತಿಕೊಂಡಿರೋ, ಅಲ್ಲಿರುವ ಚಿತ್ರಣಕ್ಕೂ ನಮ್ಮ ಬದುಕಿಗೂ ನಡುವೆ ಇರುವುದು ಹಲವು ಸಹಸ್ರ ಹರದಾರಿಗಳ ಅಂತರ......

ಈ ಕುರಿತು ಯೋಚಿಸಿದ ಬಳಿಕ, ಕನ್ನಡದಲ್ಲಿ ಒಳ್ಳೆಯ ಕಾದಂಬರಿಗಳು ಬಂದೇ ಇಲ್ಲವೆಂದು ಯಾರೂ ಹೇಳಬಾರದು. ವಿಮರ್ಶಕಬುದ್ಧಿಯುಳ್ಳ ಯಾರೂ ಹಾಗೆ ಹೇಳಲಾರರು. ಮೇಲಿನ ನಿರೂಪಣೆಗಳಿಗೆ ಅಪವಾದಗಳು ಇದ್ದೇ ಇವೆ. ಆದರೆ ಎಷ್ಟೇ ಅಪವಾದಗಳಿದ್ದರೂ ವೈಜ್ಞಾನಿಕ ನೋಟವುಳ್ಳ, ಬದುಕಿನ ಸಮಗ್ರಚಿತ್ರವನ್ನು ಕೊಡುವ, ಒಂದು ಪಾತ್ರದ ಮೂಲಕ ಹೆಚ್ಚು ಕಡಿಮೆ ಅಂತಹದೇ ಸಾವಿರ ವ್ಯಕ್ತಿಗಳ ಪರಿಚಯಮಾಡಿಸುವ, ವಿಚಾರವೂ ಕಲೆಯೂ ಸಮರಸಹೊಂದಿರುವ, ಕೃತಿಗಳ ಸಂಖ್ಯೆ ಬಲು ಬಡಕಲು.

ಇದೀಗ ನಮ್ಮ ದುರವಸ್ಥೆ; ನಾವು ಸಿಲುಕಿಬಿದ್ದಿರುವ ವಿಷವ್ಯೂಹ. ನಮ್ಮ ಸಾಹಿತ್ಯ ಈ ಎಲ್ಲ ಬಂಧನಗಳನ್ನು ಕಡಿದೊಗೆದು ಝಾಡಿಸಿ ಮುಂದಕ್ಕೆ ಧಾವಿಸುವುದು ಸಾಧ್ಯವಿಲ್ಲವೆ? ಸತ್ಯದ ಸಾಮರ್ಥ್ಯವನ್ನು ಬಲ್ಲ ಯಾವ ಸೌಂದರ್ಯೋಪಾಸಕನೂ 'ಇಲ್ಲ' ಎನ್ನಲಾರ.

ಆಹ್ವಾನ

ಇದೊಂದು ಪರ್ವಕಾಲ. ಸಂದೇಹ-ಸಂಶಯಗಳ ಕಲುಷಿತ ವಾತಾವರಣದಲ್ಲೂ ವಿಶ್ವಬಂಧುತ್ವದ ಕಿರುಧ್ವನಿ ಮೋಹಕವಾಗಿ ಒರಲುತ್ತಿದೆ. ಮಾರಣಾಸ್ತ್ರಗಳ ಪ್ರಯೋಗಾರ್ಥ ಸ್ಫೋಟನದಿಂದ ಕಿವಿಯೊಡೆಯುತ್ತಿದ್ದರೂ ವಿಶ್ವಶಾಂತಿಯ ಗುಂಯಾರವ ಕೇಳಿ ಬರುತ್ತಿದೆ. ಪ್ರಕೃತಿಯ ಮೇಲೆ ಮಹಾವಿಜಯಗಳನ್ನು ಸಾಧಿಸಿದ

ಮಾನವ, ವಿಜ್ಞಾನವನ್ನು ಲೋಕಕಲ್ಯಾಣಕ್ಕಾಗಿ ಬಳಸಲು ಪಣತೊಟ್ಟಿದ್ದಾನೆ. ಒಂದೆಡೆ, ಭಾರತ ಸ್ವಾತಂತ್ರ್ಯದ ಸುಂದರ ಕಲ್ಪನೆ ದಿಟವಾಗುತ್ತಿರುವಂತೆಯೇ, ಇನ್ನೊಂದೆಡೆ, ಕನ್ನಡ ಜನಕೋಟಿಯ ಕನಸಿನ ರಾಜ್ಯದ ಮಂಗಳೋದಯವಾಗುತ್ತಿದೆ. ಸಮಾಜವಾದದ ಮುಂಬೆಳಗಿನಿಂದ ಭಾರತದ ಪ್ರಜೆ ಎಚ್ಚರಗೊಂಡಿದ್ದಾನೆ. ವಿಶ್ವದ ಪ್ರಜೆ ಜನತೆಯ ಜತೆಸೇರಿ ತಮ್ಮ ಬದುಕನ್ನೂ ಬದಲಾಯಿಸಲು ಭಾರತೀಯರು ಬದ್ಧಕಂಕಣರಾಗಿದ್ದಾರೆ. ಭಾರತ ರಾಷ್ಟ್ರದ ಅಭಿಮಾನಧನನಾಗುವ ಸದವಕಾಶ ಕನ್ನಡಿಗನಿಗೆ ಈಗ ದೊರೆತಿದೆ.

ಇಂತಹ ಸನ್ನಿವೇಶದಿಂದ ನಮ್ಮ ಕಲಾವಿದರೆಲ್ಲರ, ಬರೆಹಗಾರರೆಲ್ಲರ, ಮೈಪುಲಕಗೊಳ್ಳದೆ ಇರುವುದು ಸಾಧ್ಯವೆ?

ಸಾಕ್ಷರರ ಸುಸಂಸ್ಕೃತರ ನಾಡಾಗಬೇಕು ಈ ಭೂಮಿ; ಸುಖ ಸಮೃದ್ಧಿಯ ಬೀಡಾಗಬೇಕು; ವಿಶ್ವಮಾನ್ಯತೆಗೆ ಅರ್ಹವಾದ ಸಾಹಿತ್ಯ-ಕಲೆಗಳ ಆಗರವಾಗಬೇಕು. ಈ ಕಾರ್ಯಸಾಧನೆಯಲ್ಲಿ ನಾವು ನಿರ್ವಹಿಸಬೇಕಾಗಿರುವ ಪಾತ್ರ ಹಿರಿದು.

ಇಪ್ಪತ್ತೇಳು ವರ್ಷಗಳಿಗೆ ಹಿಂದೆ ಕಲಬುರ್ಗಿಯ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುತ್ತ 'ಶ್ರೀ' ಯವರೆಂದರು—

"ನಾವು, ಕನ್ನಡಿಗರು, ಇಂದು, ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನು ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ ಮಾಡುವುದಕ್ಕೆ ಅಲ್ಲ; ಹೊಸ ಉತ್ತಮ ಸಾಹಿತ್ಯವೊಂದನ್ನು ಸೃಷ್ಟಿಮಾಡುವುದಕ್ಕೆ ಹೊರಟಿರುವೆವು. ಹೊರಟವರು, ವಿಲಾಸವತಿಯ ಕೊರಳಿನ ಪುಷ್ಪಮಾಲಿಕೆಯೇ ಅಲ್ಲ ಸಾಹಿತ್ಯ, ಮಾನವಜೀವನದ ಪುನರ್ನಿರ್ಮಾಣಕಾರ್ಯದಲ್ಲಿ ಬದ್ಧಕಂಕಣವಾಗಿರುವ ವೀರನ ಕೈಯಿನ ಖಡ್ಗವೂ ಅಹುದೆಂದು ತಿಳಿದಿರುವೆವು."

ಕನ್ನಡದ ಪುನರುದಯ ಕಾಲದ ಆ ಶಂಖಧ್ವನಿ, ಈ ನವೋದಯ ಕಾಲದಲ್ಲೂ ಮತ್ತೆ ಮೊಳಗುವುದು ಸಮಂಜಸವಾಗಿದೆ.

ಸತ್ಯದ ಆರಾಧಕರಾದ ನಾವು ಇನ್ನು ವೀರಕಚ್ಚೆಯನ್ನು ಬಿಗಿಯೋಣ. ಜ್ಞಾನದ ಹಸಿವಿನಿಂದ ಬಳಲುತ್ತಿರುವ ಜನಕೋಟಿಯನ್ನು ವಿಚಾರದ ಔತಣಕ್ಕೆ ಕರೆಯೋಣ. ಬದುಕನ್ನು ಸುಂದರಗೊಳಿಸುವ ಮಹಾಯಜ್ಞದ ಯಶಸ್ಸಿಗೋಸ್ಕರ ನಮ್ಮ ಲೇಖನಿಯ ಕಲಾ—ಸಾಮರ್ಥ್ಯವನ್ನು ಮುಡುಪಾಗಿಡೋಣ. ಎಲ್ಲ ಬರೆಹಗಾರ ಬಾಂಧವರಿಗಿದು ಆಹ್ವಾನ ! ಬನ್ನಿ !

- ೧೯೫೫ ಡಿಸೆಂಬರ್‌ನಲ್ಲಿ ರಾಯಚೂರಿನಲ್ಲಿ ಜರುಗಿದ ಮೂವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿದ್ದ ಲೇಖಕಗೋಷ್ಠಿಯ ಅಧ್ಯಕ್ಷ ಭಾಷಣ. 'ಕನ್ನಡನುಡಿ' ವಿಶೇಷಾಂಕದಲ್ಲಿ ಮೊದಲು ಪ್ರಕಟವಾಯಿತು.

ಸಾಹಿತ್ಯ ಸೃಷ್ಟಿಯ ಸಮಸ್ಯೆ

ಒಂದು ಶತಮಾನಕ್ಕೂ ಹಿಂದಿನ ಮಾತು. ನೂರಾರು ಕಾದಂಬರಿಗಳ ಕರ್ತೃವಾದ ಪ್ರಖ್ಯಾತ ಫ್ರೆಂಚ್ ಸಾಹಿತಿ ಅಲೆಕ್ಸಾಂಡರ್ ಡ್ಯೂಮಾ, ಲಕ್ಷಾಂತರ ಓದುಗರ ಪ್ರೀತಿಗೆ ಪಾತ್ರನಾಗಿದ್ದ. ಆತನ ಹೊಸಹೊಸ ಕೃತಿಗಳಿಗಾಗಿ ಅವರೆಲ್ಲ ಹಾತೊರೆಯುತ್ತಿದ್ದರು. ಡ್ಯೂಮಾ ತಾನೊಬ್ಬನೇ ಸಾಕಷ್ಟು ಹೊಸ ಕಾದಂಬರಿಗಳನ್ನು ಬರೆಯಲಾಗದೆ ಬಾಡಿಗೆಯ ಬರಹಗಾರರನ್ನೂ ನೇಮಿಸಿ ಬರೆಸುವ ಪರಿಸ್ಥಿತಿ ಒದಗಿತು. ಅದೊಂದನ್ನೂ ತಿಳಿಯದ ಓದುಗರು, ಡ್ಯೂಮಾನ ಕಾದಂಬರಿಗಳು ಬಂದಂತೆಲ್ಲ ಎದೆಗವಚಿಕೊಂಡರು.

ಒಂದು ದಿನ, ಪರವೂರಿನಿಂದ ಬಂದ ಮಗನನ್ನು ಡ್ಯೂಮಾ ಭೇಟಿಯಾದ. ಮಗನನ್ನು ಕುರಿತು ಆತ ಕೇಳಿದ :

"ನನ್ನ ಇತ್ತೀಚಿನ ಕಾದಂಬರಿ ಓದಿದ್ದೀಯಾ?"

ಮಗನೆಂದ: "ಇಲ್ಲ. ನೀನು ಓದಿದ್ದೀಯಾ?"

ಮಗನ ಮಾತು ಕೇಳಿ ತಂದೆ ನಕ್ಕ. ವಿಸ್ಮಯವೆನಿಸುವಂತಿದ್ದರೂ ನಿಜವಾದ ಸಂಗತಿ. ಡ್ಯೂಮಾನ ಕಥೆ ಕಟ್ಟುವ ಕಲೆಗಾರಿಕೆಯ ಮೋಡಿಗೆ ಬಲಿಯಾಗದವರು ಅಂದೂ ಇರಲಿಲ್ಲ. ಇಂದೂ ಇಲ್ಲ, ಆ ಕಲಾಕೃತಿಗಳಲ್ಲಿ ಬರೆಹಗಾರ ಡ್ಯೂಮಾನ ತತ್ವಗಳಿದ್ದುವೆ—ನಂಬುಗೆಗಳಿದ್ದುವೆ? ಆತನ ಕೃತಿಗಳ ಮಟ್ಟಿಗೆ, ಅದು ಅನುಗತ್ಯವೆನಿಸುವ ಅರ್ಥವಿಲ್ಲದ ಪ್ರಶ್ನೆ.

ಇದಕ್ಕಿಂತ ಭಿನ್ನವಾದುದು, ಮತ್ತೊಬ್ಬ ಪ್ರಖ್ಯಾತ ಫ್ರೆಂಚ್ ಸಾಹಿತಿ ಬಾಲ್ಜಾಕನ ಬರೆವಣಿಗೆ. ಪ್ರಗತಿಯನ್ನು ವಿರೋಧಿಸಿ, ಆಗಿನ ಸಮಾಜ ವ್ಯವಸ್ಥೆಯನ್ನು ಸಮರ್ಥಿಸ ಹೊರಟ ಪ್ರಭೃತಿ ಆತ, ಸೃಷ್ಟ್ಯಾತ್ಮಕ ಬರೆವಣಿಗೆಯಲ್ಲಿ ಅದನ್ನು ಪ್ರತಿಪಾದಿಸಲು ಯತ್ನಿಸಿದ ಮಹಾನುಭಾವ. ಆ ಯತ್ನದಲ್ಲಿ ಆತ ಯಶಸ್ವಿಯಾದನೆ? ಇಲ್ಲ. ಪ್ರತಿಯೊಂದು ಕೃತಿಯಲ್ಲೂ ತತ್ವಪ್ರತಿಪಾದನೆಗೆ ಸೋಲಾಯಿತು. ಆತನ ಸತ್ಯನಿಷ್ಠೆ, ಪ್ರಾಮಾಣಿಕತೆ, ಜಯಭೇರಿ ಬಾರಿಸಿದವು. ತರ್ಕಬದ್ಧವಾಗಿ ಬೆಳೆದ ಪಾತ್ರಗಳು, ಸನ್ನಿವೇಶ ಚಿತ್ರಣ, ಆತನ ನಿರೀಕ್ಷೆಗೆ ವ್ಯತಿರಿಕ್ತವಾದ ಪ್ರತಿಫಲವನ್ನು ನೀಡಿದವು. ರೈತರು ಬಲು ಕೆಟ್ಟವರೆಂದು ಚಿತ್ರಿಸಲು ಹೊರಟ ಬಾಲ್ಜಾಕ್, ಅತ್ಯಂತ

ಪ್ರಾಮಾಣಿಕತೆಯಿಂದ ರೈತರ ಬರುಡು ಬದುಕಿನ ಚಿತ್ರವನ್ನು ಸೃಷ್ಟಿಸುತ್ತಿದ್ದ. ಅದನ್ನು ನೋಡಿದವರಿಗೆ ರೈತರ ಬಗೆಗೆ ದ್ವೇಷವೆನಿಸುವ ಬದಲು, ಅನುಕಂಪ ಉಂಟಾಗುತ್ತಿತ್ತು. ಅವರ ದುರವಸ್ಥೆಗೆ ಕಾರಣವಾದ ಸಮಾಜವ್ಯವಸ್ಥೆ ಕರಿದು ನೋಟ ಕಣ್ಣಿಗೆ ಕಟ್ಟುತ್ತಿತ್ತು.

ಇವಕ್ಕಿಂತಲೂ ಭಿನ್ನವಾದುದು, ಈ ಶತಮಾನದ ಪ್ರಖ್ಯಾತ ಫ್ರೆಂಚ್ ಬರೆಹಗಾರ ರೊಮಾ ರೋಲಾನ ಸಾಹಿತ್ಯಸೃಷ್ಟಿ. ಆತನದು ಸದಾ ಸ್ಪಂದಿಸುತ್ತಿದ್ದ ಸಹಸ್ರ ಮುಖಬಾಳ್ವೆ. ವಿಶ್ವಬಂಧುತ್ವಕ್ಕಿಂತ ಕಿರಿದಾದ ಕಲ್ಪನೆ ಕನಸಿನಲ್ಲೂ ದುಸ್ಸಾಧ್ಯವಾಗಿದ್ದ ಹಿರಿಯ ಬದುಕು. ಅಪೂರ್ವವಾದ ಮಾನವೀಯತೆ ಮಾತಿನಂತೆ ಕೃತಿ. ಎಲ್ಲರ ಕಲ್ಯಾಣವನ್ನು ಬಯಸಿದ ಆ ಸಂವೇದನಾಜೀವಿ, ಸ್ವತಃ ಅನುಭವಿಸಿದ ಹೃದಯ-ಮೆದುಳಿನ-ಸಂಕಟ ಅಪಾರವಾದುದು. ಅಂತಹ ಕಲಾವಿದ ಸೃಷ್ಟಿಸಿದ ಸಾಹಿತ್ಯವೋ-ಅಮೋಘವೆನಿಸುವಂತಹದು, ಅಮೂಲ್ಯವೆನಿಸುವಂತಹದು.

ಈ ಮೂರು ನಿದರ್ಶನಗಳಿಂದ ಸ್ಪಷ್ಟವಾಗುವುದೇನು?—ತತ್ತ್ವ ಹಾಗು ನಂಬುಗೆಗಳ ಗೋಜಿಗೆ ಹೋಗದೆಯೇ ಅದ್ಭುತವಾದ ಕಲಾಕೃತಿಯನ್ನು ನಿರ್ಮಿಸುವುದು ಸಾಧ್ಯ. ಸೌಂದರ್ಯದ ಉಪಾಸಕರಿಗೆ ಅದರಿಂದ ಸಮಾಧಾನವೆನಿಸುವುದೂ ಸಾಧ್ಯ. ಹಾಗೆಯೇ, ತತ್ತ್ವ ಹಾಗು ನಂಬುಗೆಗಳನ್ನು ಕಲೆಗೆ ವ್ಯತಿರಿಕ್ತವಾಗದ ಹಾಗೆ ಅಭಿವ್ಯಕ್ತಿಗೊಳಿಸಿ ಅದ್ಭುತ ಕಲಾಕೃತಿಯನ್ನು ಸೃಷ್ಟಿಸುವುದೂ ಶಕ್ಯ. ಮನೋರಂಜನೆಯೊಂದೇ ಸಾಕು—ಎನ್ನುವವರು, ತತ್ತ್ವ ನಂಬುಗೆಗಳನ್ನು ಕುರಿತು ಯೋಚಿಸುವ ಗೊಡವೆಗೇ ಹೋಗುವುದಿಲ್ಲ. ಆದರೆ ಸಾಹಿತ್ಯ ಆತ್ಮೋನ್ನತಿಗೂ ಸಾಧಕವೆಂದು ಭಾವಿಸುವವರು, ಸೌಂದರ್ಯೋಪಾಸನೆಯು ಬದುಕಿನ ಉಪಾಸನೆಗಿಂತ ಭಿನ್ನವಲ್ಲ ಎಂದು ನಂಬುವವರು, ಮನೋರಂಜನೆ ಮಾತ್ರದಿಂದ ತೃಪ್ತರಾಗುವುದಿಲ್ಲ.

ಉಳಿದ ಎಲ್ಲರಂತೆ ಬರೆಹಗಾರನೂ ಮನುಷ್ಯ, ಆತನಿಗೂ ರಾಗದ್ವೇಷಗಳಿವೆ. ಒಳಿತು-ಕೆಡುಕುಗಳ ವಿವೇಚನಾಸಾಮರ್ಥ್ಯವಿದೆ ಅವನಿಗೂ. ಯುಗಧರ್ಮದಿಂದ, ಕಾಲಧರ್ಮದಿಂದ, ಆತನೂ ಬಾಧಿತ. ಅವನ ಬಾಳ್ವೆ ಭವ್ಯವಾದಷ್ಟು ಬದುಕನ್ನು ನೋಡುವ ನೋಟ ಸಮಗ್ರವಾಗುತ್ತದೆ. ಆ ದೃಷ್ಟಿಯೇ, ಕಲಾಸೃಷ್ಟಿಗೋಸ್ಕರ ಆತ ಆಯ್ದುಕೊಳ್ಳಬೇಕಾದ ವಸ್ತುವನ್ನು ನಿರ್ಧರಿಸುತ್ತದೆ. ಆತನ ದೃಷ್ಟಿಗೆ ಅನುಗುಣವಾಗಿಯೇ ಬರವಣಿಗೆಯ ರೂಪುರೇಖೆಗಳು ಗೋಚರವಾಗುತ್ತವೆ. ಬರೆಯುವವನ ದರ್ಶನ, ಬರವಣಿಗೆಯಲ್ಲಿ ಆತನ ಅರಿವಿಲ್ಲದೆಯೇ ಪ್ರತಿಬಿಂಬಿತವಾಗುತ್ತದೆ.

ಆದರೆ, ನಮ್ಮ ಬರೆಹಗಾರರಲ್ಲಿ ಈ ದಿನ, ಸ್ವಂತದ ಅಭಿಪ್ರಾಯಗಳಿಲ್ಲದವರೇ ಹೆಚ್ಚು ಜನ. 'ಬದುಕು ಆಳವಾಗಬೇಕೆ'ನ್ನುವುದು, ಹುರುಳಿಲ್ಲದ ಘೋಷಮಾತ್ರ, ನಿಂತ ನೀರೇ ನಮ್ಮ ಪಾಲಿನ ಗಂಗೆ, ದರ್ಶನವೆನ್ನುವುದು ತತ್ತ್ವಶಾಸ್ತ್ರದ ಅಧ್ಯಾಪಕರೋ, ನಿವೃತ್ತ ಸದ್ಗೃಹಸ್ಥರೋ, ಸನ್ಯಾಸಿಗಳೋ ಪ್ರಸ್ತಾಪಿಸುವ ವಿಷಯ. ನಮ್ಮ ಮನೆಯನ್ನೇ

ಕಡೆಗಣಿಸಿರುವ ನಮಗೆ ಮಾನವೀಯತೆಯ ಗೀಳು ಎಲ್ಲಿಯದು? ನಮ್ಮ ತತ್ತ್ವೋಪದೇಶ, ಇನ್ನೊಬ್ಬರಿಗೋಸ್ಕರ ನಂಬುಗೆ—ನಮ್ಮಲ್ಲೇ ನಮಗಿದ್ದರೆ ತಾನೆ?

ಇಂಥವರಿಂದ ಒಳ್ಳೆಯ ಸಾಹಿತ್ಯವನ್ನು ನಿರೀಕ್ಷಿಸುವುದೂ ಒಂದೇ; ಮರಳು ಹಿಂಡಿ ಎಣ್ಣೆ ಬರಿಸಲೆತ್ನಿಸುವುದೂ ಒಂದೇ.

'ಫ್ಯಾಶನಿ'ಗೋಸ್ಕರ ತತ್ತ್ವಸಂಬುಗೆಗಳನ್ನು ವ್ಯಕ್ತಪಡಿಸಿ ಬರೆವಣಿಗೆಯಲ್ಲಿ ಪ್ರತಿಪಾದಿಸುವ ಕೆಲವರಿದ್ದಾರೆ. ಅವರು ಹೆಪ್ಪುಹಾಕಿ ಮೊಸರು ಕಡೆಯುವುದಿರಲಿ, ಕಾಯಿಸುವ ಹಾಲೇ ಒಡೆದುಹೋಗುತ್ತದೆ. ರಾಜಕೀಯ ತತ್ವಜ್ಞಾನವಿರಲಿ, ಧಾರ್ಮಿಕ ನಂಬುಗೆ ಇರಲಿ, ದಾರ್ಶನಿಕ ಸಿದ್ಧಾಂತಗಳಿರಲಿ, ಬರೆಯುವವನ ಬದುಕಿನಲ್ಲಿ ಸಮರಸವಾದರೆ ಮಾತ್ರ ಅವು ಕಲಾಸೃಷ್ಟಿಗೆ ಪೂರಕವಾಗುತ್ತವೆ; ಇಲ್ಲದೆ ಹೋದರೆ ಮಾರಕವಾಗುತ್ತವೆ.

ಕಲಾಕೃತಿಯಲ್ಲಿ ಯಾವುದು ಹೆಚ್ಚು, ಯಾವುದು ಕಡಮೆ? ಕಲೆಯ ಎಲ್ಲ ಲಕ್ಷಣಗಳೂ ಅದರಲ್ಲಿರಲೇಬೇಕು. ಮೊಟ್ಟಮೊದಲು, ಕವಿತೆ ಕವಿತೆಯಾಗಬೇಕು; ಕತೆ ಕತೆಯಾಗಬೇಕು. ಆ ಕವಿತೆಯಲ್ಲಿ-ಕತೆಯಲ್ಲಿ ಬೆರತಿರಬೇಕು; ವಿಚಾರದ ಅಂಶ. ಕಲೆಯ ಅಂಶದೊಡನೆ ವಿಚಾರದ ಅಂಶ ಸರಿಸಮನಾಗಿರಬೇಕು ; ಸಮರಸ ಹೊಂದಿರಬೇಕು. ನೀರಿಗೆ ಎಣ್ಣೆ ಸುರಿದಂತಲ್ಲ-ಹಾಲಿಗೆ ಸಕ್ಕರೆ ಬೆರಸಿದಂತೆ.

ಯಾವುದೇ ತತ್ವದ ಪ್ರಚಾರಕ ಇಲ್ಲವೇ ಆರಾಧಕ ಆ ತತ್ತ್ವದ ಪ್ರತಿಪಾದನೆಗೆಂದೇ ಸಿದ್ಧಗೊಳಿಸುವ ಬರೆವಣಿಗೆ, ಎಂದಿಗೂ ಸಾಹಿತ್ಯವೆನಿಸದು. ಬರೆಯುವವನು ಮುಖ್ಯತಃ ಮೂಲತಃ ಪ್ರಾಮಾಣಿಕನಾದ ಒಳ್ಳೆಯ ಕಲಾವಿದನಾಗಿದ್ದರೆ, : ಆತನ ನಿಷ್ಠೆಯಿಂದ ನಂಬುಗೆಗಳಿಂದ ಕಲೆಗೆ ಹಾನಿಯೊದಗದು. ಅಷ್ಟೇ ಅಲ್ಲ, ಆ ಸಾಹಿತಿ ತನ್ನ ತತ್ತ್ವ ಹಾಗೂ ನಂಬುಗೆಗಳನ್ನು ಕಲೆಗೆ ವ್ಯತಿರಿಕ್ತವಾಗದಹಾಗೆ ಅಭಿವ್ಯಕ್ತಿಗೊಳಿಸುವುದೂ ದುಸ್ಸಾಧ್ಯವಾಗದು.

- ಧಾರವಾಡದಲ್ಲಿ ೧೯೫೭ರಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಅಂಗವಾಗಿ, 'ಸಾಹಿತಿಯು ತನ್ನ ತತ್ತ್ವ ಹಾಗು ನಂಬುಗೆಗಳನ್ನು ಕಲೆಗೆ ವ್ಯತಿರಿಕ್ತವಾಗದ ಹಾಗೆ ಅಭಿವ್ಯಕ್ತಿಗೊಳಿಸಲು ಸಾಧ್ಯವೇ?' ಎಂಬ ವಿಷಯವನ್ನು ಕುರಿತು ವಿಚಾರ ಸಂಕಿರಣ ನಡೆಯಿತು. ಇದು ಆ ವಿಚಾರ ಸಂಕಿರಣಕ್ಕೆಂದು ಸಿದ್ಧಗೊಳಿಸಿದ ನಿಬಂಧ.

೧೯೫೭

ಬರೆಯುವುದು ಯಾತಕ್ಕೋಸ್ಕರ ?

ಪರಿಚಯವಿರುವ ಬರೆಹಗಾರರನ್ನು ಓದುಗ ಸಂಧಿಸಿದಾಗ ಸಾಮಾನ್ಯವಾಗಿ ಕೇಳುವ ಪ್ರಶ್ನೆಯೊಂದುಂಟು:

"ಈಗೇನು ಬರೀತಾ ಇದೀರಿ?"

ಆ ಪ್ರಶ್ನೆ ಬಂದಾಗ ಆಗುವ ಸೂಕ್ಷ್ಮವಾದ ಮಧುರವಾದ ಅನುಭವವನ್ನು ಬರೆಹಗಾರರು ಮಾತ್ರ ಬಲ್ಲರು.

ಈ ಕಾದಂಬರಿ ಯುಗದಲ್ಲಿ—ಕನ್ನಡದಲ್ಲಿ ಪ್ರಶ್ನೆಯ ರೂಪ ಹೀಗೂ ಬದಲಾಗುತ್ತದೆ.

"ಈಗ ಯಾವುದು ಬರೀತಾ ಇದೀರಿ?"

ಯಾವುದು?—ಎನ್ನುವುದಕ್ಕೆ ಉತ್ತರ, ಒಂದು ಹೆಸರು, ಕೂಸುಹುಟ್ಟುವುದಕ್ಕೆ ಮುಂಚೆಯೇ ಮಾಡಿದ ನಾಮಕರಣ.

ಆ ರೀತಿ ಬರಲಿರುವ ಪುಸ್ತಕದ ಹೆಸರನ್ನು ಮೊದಲೇ ತಿಳಿದಾಗ, ಸಾಮಾನ್ಯ ಓದುಗನಿಗೆ ಆಗುವ ಸಂತೋಷವೂ ಸ್ವಲ್ಪವಲ್ಲ.

ಅಂತೂ, ಬರೆಹಗಾರನಾದವನು ಏನನ್ನಾದರೂ ಬರೆಯುತ್ತಲೇ ಇರುತ್ತಾನೆಂಬುದು ಪ್ರಚಲಿತ ಅಭಿಪ್ರಾಯ.

*　　*　　*

ಬರೆಹಗಾರ ಎನ್ನುವವನು ಬರೆಯುವ ಯಂತ್ರವೆ? ಕಾದಂಬರೀ ನಿರ್ಮಾಣದ ಕಾರಖಾನೆಯನ್ನು ನಡೆಸುವ ಅತಿವೇಗದ ಲೇಖಕನೂ ಹಾಗೆಂದು ಒಪ್ಪಲಾರ.

ಸಂಸ್ಕಾರದ ಹಿನ್ನೆಲೆಯುಳ್ಳ ವ್ಯಕ್ತಿಯಿಂದ ಮಾತ್ರ ಒಳ್ಳೆಯ ಕೆಲಸ ಸಾಧ್ಯ. ಒಳ್ಳೆಯ ಬರೆಹಗಾರನಾಗುವುದಕ್ಕೂ ಅಂತಹದೇ ಹಿನ್ನೆಲೆ ಬೇಕು.

ಸಾಯುವವರೆಗೂ ತಾನು ವಿದ್ಯಾರ್ಥಿಯೇ—ಇತರರಿಗೆ ಪಾಠ ಹೇಳಿಕೊಡುವ ಪ್ರಮೇಯ ಒದಗಿದರೂ ತಾನು ವಿದ್ಯಾರ್ಥಿಯೇ—ಎಂಬ ಭಾವನೆ ಬರೆಹಗಾರ ನಿಗಿದ್ದರೆ ಎಷ್ಟು ಚೆನ್ನು! ನಿರಂತರ ಅಧ್ಯಯನ, ಬದುಕನ್ನು ನೋಡುವ ವಿಷಯದಲ್ಲಿ

ಮಾನವೀಯವಾದ ದೃಷ್ಟಿ, ನಂಬಿದುದನ್ನು ಅನುಷ್ಠಾನಕ್ಕೆ ತರುವ—ಆಡಿದಂತೆ ಮಾಡುವ—ಪ್ರಾಮಾಣಿಕತೆ, ಇಂತಹ ಸದ್ಗುಣಗಳುಳ್ಳ ಲೇಖಕನ ಕೃತಿಯ ಬೆಲೆ ಹೆಚ್ಚುವುದು. ಬರೆಹಗಾರನ ಬದುಕು ಭವ್ಯವಾದರೆ ಕೃತಿಯೂ ಭವ್ಯವಾಗುವುದು.

ಅಂತಹ ಲೇಖಕನೆಂದಿಗೂ ಬಾಡಿಗೆಯ ಕಾರಕೂನನಾಗಲಾರ.

* * *

ಬರೆಹಗಾರ ಬರೆಯುವುದು ಕೀರ್ತಿಗೋಸ್ಕರವೆ? ಆತ್ಮಾನಂದವಾದರೆ ಸಾಕೆ ಆತನಿಗೆ? ಹಣ ಸಂಪಾದನೆ ಅವನ ಗುರಿಯೆ?

ಸಾಹಿತ್ಯಸೃಷ್ಟಿಯಲ್ಲಿ ಅಪೂರ್ಣವಾದೊಂದು ಆನಂದ ಉಂಟು. ಹೃದಯದ ವೇದನೆ, ಮೆದುಳಿನ ಸಂಕಟ- ಒಂದು ಕೃತಿಗೆ ಜನ್ಮವಿತ್ತಾಗ, ಅದರಿಂದ ದೊರೆಯುವ ಸುಖ ಅಪಾರವಾದುದು. ಆದರೆ ಅಷ್ಟೇ ಸಾಲದು. ಆ ಅನುಭವ ಇತರರಿಗೂ ಆಗಲಿ, ಎಂದು ಆತ ಬಯಸುತ್ತಾನೆ. ಜನರ ಮೆಚ್ಚುಗೆ ಎನ್ನುವುದು, ಆ ರೀತಿಯ ಸಾಮುದಾಯಿಕ ಅನುಭವಕ್ಕೆ. ಅನಂತರದ್ದು ಅರ್ಥದ ಪ್ರಶ್ನೆ. ಬರೆಹಗಾರನೂ ಹಸಿವು ನೀರಡಿಕೆ ಇರುವಂತಹ ಜೀವಿ, ಸಂಸಾರದ ಕಷ್ಟ ಕೋಟಲೆಗಳಿವೆ ಆತನಿಗೂ. ಹೀಗಾಗಿ ಬದುಕಿನ ಚಲನೆಯ ಚಕ್ರವಾದ ಹಣ ಅವನಿಗೂ ಬೇಕು.

ಇಷ್ಟನ್ನು ಕೀರ್ತಿ, ಆತ್ಮಾನಂದ, ಹಣ-ಸಂಪಾದನೆ ಎಂಬ ಹೆಸರುಗಳಿಂದ ಕರೆಯುವುದು ಸರಿಯೆನಿಸದು.

* * *

ಹಣ ಪ್ರಪಂಚದಲ್ಲಿ ಎಷ್ಟೋ ವೇಳೆ ಬರೆಹಗಾರ ದುಡಿಯುವ ಮನುಷ್ಯ ನಾಗುವುದುಂಟು. ಬೆವರು ಸುರಿಸಿ, ಕೆಟ್ಟು, ಸೃಷ್ಟಿಸುವ ಸಾಹಿತ್ಯ, ಗಡಿಯಾರದ ಮುಳ್ಳುಗಳ ಮೇಲೆ ಗಮನವಿರಿಸುತ್ತ ಓಡುವ ಲೇಖನಿ.......

ಇದು, ನಾಗರಿಕತೆಯ ಈವರೆಗಿನ ಬೆಳವಣಿಗೆಯೊಡನೆ ಅಂಟಿಕೊಂಡಿರುವ ಶಾಪ, ಮುರಿದೆಸೆಯುವುದು ಸಾಧ್ಯವೇ ಇಲ್ಲವೇನೋ ಎನ್ನುವಂತಹ ವಿಷವೃತ್ತ.

ಇದು ಹೀಗಿದ್ದರೂ ಬರೆಹಗಾರನಿಗೆ ಸಂಬಂಧಿಸಿದ ಮೂಲಭೂತ ಅಂಶಕ್ಕೆ ಚ್ಯುತಿ ಇಲ್ಲ.

ಪರಿಸ್ಥಿತಿ ಏನಿದ್ದರೂ ಅಂತಃಸತ್ವವಿರುವ ಸಾಹಿತಿ ಮಾತ್ರ ಒಳ್ಳೆಯ ಕೃತಿ ರಚಿಸು ತ್ತಾನೆ.

* * *

ಫ್ರಾನ್ಸಿನ ಈ ಶತಮಾನದ ಮಹಾಸಾಹಿತಿ (ದಿವಂಗತ) ರೊಮಾರೋಲಾ 'ಬರೆಹಗಾರ ಬರೆಯುವುದು ಯಾತಕ್ಕೋಸ್ಕರ?' ಎಂಬ ವಿಷಯವನ್ನು ಚರ್ಚಿಸುತ್ತ ಒಂದೆಡೆ ಹೇಳಿರುವ ಮಾತುಗಳು ಮನೋಜ್ಞವಾಗಿವೆ.

"ನಾನು ಬರೆಯುತ್ತಿರುವುದು ಯಾತಕ್ಕೋಸ್ಕರ? ಯಾತಕ್ಕೆಂದರೆ, ಬರೆಯದೆ ಸುಮ್ಮನಿರುವುದು ನನ್ನಿಂದ ಸಾಧ್ಯವೇ ಇಲ್ಲ. ಯಾಕೆಂದರೆ, ಕಾಗದದ ಮೇಲೆ ಬರೆಯದೆ ಇದ್ದರೂ ವಿಷಯಗಳನ್ನು ಸ್ಪಷ್ಟಗೊಳಿಸುವುದಕ್ಕೋಸ್ಕರ ಮನಸಿನಲ್ಲಾದರೂ ಬರೆಯುತ್ತಿರುತ್ತೇನೆ. ಯಾಕೆಂದರೆ, ನನಗೆ ಚಿಂತನೆಯ ಹಾಗೂ ವರ್ತನೆಯ ಅತ್ಯುನ್ನತ ವಿಧಾನವೇ ಬರೆವಣಿಗೆ, ಯಾಕೆಂದರೆ, ನನಗೆ ಬರೆಯುವುದೆಂದರೆ ಉಸಿರಾಡಿದಂತೆ, ಬದುಕಿದಂತೆ. ನಾನು ಸದಾಕಾಲವೂ ಚಲಿಸುತ್ತಲೇ ಇದ್ದೇನೆ; ಬದುಕಿರುವವರೆಗೂ ನಿಲ್ಲುವುದೆಂದಿಲ್ಲ, ಚಲನೆ—ನೇರವಾದ ಚಲನೆ—ಇಲ್ಲದ ಬದುಕು, ನನ್ನ ಪಾಲಿಗೆ ಅರ್ಥಶೂನ್ಯ.ನಾವು ಬರೆಹಗಾರರು, ಕುಂಟುತ್ತಿರುವವರನ್ನು ಬೇಗ ಬನ್ನಿರೆಂದು ಕರೆಯುತ್ತಿದ್ದೇವೆ. ಆದರೆ ಅವರಿಗೋಸ್ಕರ ನಾವು ಕಾದಿರಬೇಕಾದುದಿಲ್ಲ, ನಮ್ಮನ್ನು ಹಿಂದೆ ಹಾಕಿ, ಮುಂದೆ ಸಾಗುವುದು ಅವರಿಗೆ ಸೇರಿದ್ದು. ಮುನ್ನಡೆಯುತ್ತಿರುವ ಸೇನೆ ಎಂದೂ ತಡೆದುನಿಲ್ಲುವುದಿಲ್ಲ."

- 'ಚಿತ್ರಗುಪ್ತ'ದಿಂದ

೧೯೫೭

ಲೇಖಕ ಮತ್ತು ಮನಸ್ಸಾಕ್ಷಿ

ಸರ್ವೋದಯ ಸಮಾಜ ಶಿಲ್ಪಿ ವಿನೋಬಾ ಭಾವೆಯವರು ಕನ್ನಡ ಭೂಮಿಗೆ ಕಾಲಿಟ್ಟ ಸಂದರ್ಭದಲ್ಲಿ, ಮಂಗಳೂರು ನಗರದಲ್ಲಿ ಸಾಹಿತಿಗಳನ್ನು ಕರೆಸಿ ಮಾತುಕತೆ ನಡೆಸಿದರೆಂಬ ಚುಟುಕು ವಾರ್ತೆಯೊಂದು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಯಿತು. ಮಾತುಕತೆಯ ವಿಷಯ: ಬರೆಹಗಾರರ ಬುದ್ಧಿದಾನ.

ಈ ಬುದ್ಧಿದಾನದ ವೈಖರಿ ಯಾವುದು? ಭೂದಾನ ಚಳವಳಿಗೆ ನೆರವಾಗುವಂತಹ ಲೇಖನಗಳನ್ನು ಬರೆಯುವುದು; ಕತೆ-ಕಾದಂಬರಿ-ಕವಿತೆ-ನಾಟಕಗಳಲ್ಲಿ ಭೂದಾನದ ಸಂದೇಶವನ್ನು ಪ್ರಚುರಗೊಳಿಸುವುದು.

* * *

ಸಾಹಿತ್ಯ ಮತ್ತು ಪ್ರಚಾರ. ಇದು, ಸಾಹಿತ್ಯದ ಉಗಮದಷ್ಟೇ ಹಳೆಯದಾದ ಪ್ರಶ್ನೆ;ಕಾಲಕಾಲಕ್ಕೆ ಕಲಾವಿದರ-ಬುದ್ಧಿಜೀವಿಗಳ ಮನಸ್ಸನ್ನು ಕಲಕುತ್ತಲೇ ಬಂದಿರುವ ಪ್ರಶ್ನೆ.

ಸದಾ ಜಾಗೃತವಾದ ವಿಚಾರವಂತನಾದ ಪ್ರತಿಯೊಬ್ಬ ಬರೆಹಗಾರನಿಗೂ ಬದುಕನ್ನು ನೋಡುವ ತನ್ನದೇ ಆದ ದೃಷ್ಟಿ ಎಂಬುದುಂಟು. ತತ್ತ್ವನಂಬುಗೆಗಳಿಂದ ರೂಪುಗೊಂಡ ಆ ದೃಷ್ಟಿಯೇ ಆತನ ಪಾಲಿನ ದರ್ಶನ.

ಮನುಷ್ಯನ ಬದುಕಿನಲ್ಲಿ ಶಿಕ್ಷಣಕ್ಕೊಂದು ಸ್ಥಾನವಾದರೆ, ಅಷ್ಟೇ ಮಹತ್ವದ ಸ್ಥಾನ ಆತನ ಪರಿಸರಕ್ಕೆ—ಶಿಕ್ಷಣದ ಕೃತಕ ಗೆರೆಯನ್ನು ದಾಟಿ ಆ ಪರಿಸರದಲ್ಲಿ ನಿರಂತರ ನಡೆಯುವ ಅಧ್ಯಯನಕ್ಕೆ, ಬದುಕು ಪ್ರತಿಯೊಬ್ಬನ ವ್ಯಕ್ತಿತ್ವವನ್ನೂ ರೂಪಿಸುತ್ತದೆ-ಹಾಗೆ ರೂಪಗೊಂಡ ವ್ಯಕ್ತಿತ್ವ ಸುತ್ತಮುತ್ತಲಿನ ಬದುಕಿನಮೇಲೆ ತನ್ನ ಪ್ರಭಾವದ ಮುದ್ರೆಯನ್ನೊತ್ತುತ್ತದೆ.

ಬರೆಹಗಾರನ ವ್ಯಕ್ತಿತ್ವ ಪರಿಣಾಮ ಬೀರುವುದು, ಆತನ ಬರೆವಣಿಗೆಯ ಮೂಲಕ. ಆತ ಒಂಟಿಯಾದರೂ ಪ್ರಭಾವಶಾಲಿ ವ್ಯಕ್ತಿ, ಪ್ರತಿಷ್ಠಿತ ಮನುಷ್ಯ. ಆ ಕಾರಣದಿಂದಲೆ, ಜನರ ಮನೋರಾಜ್ಯದಮೇಲೆ ಪ್ರಭುತ್ವ ಸ್ಥಾಪಿಸಬಯಸುವವರೆಲ್ಲ, ಲೇಖಕನ - ಕಲಾವಿದನ ಸಾಮೀಪ್ಯವನ್ನು ಅಪೇಕ್ಷಿಸುತ್ತಾರೆ.

* * *

ಆಶ್ರಯದಾತರನ್ನು ನಾಯಕ-ನಾಯಿಕೆಯರನ್ನಾಗಿ ಸಾಹಿತ್ಯಕೃತಿಗಳಲ್ಲಿ ಚಿತ್ರಿಸುವುದು, ಪಾಳೆಯಗಾರ ಜೀವನಪದ್ಧತಿಯಲ್ಲಿ ಕಂಡುಬಂದ ಪ್ರವೃತ್ತಿ.

ಧರ್ಮ ಪ್ರಸಾರಕ್ಕೋಸ್ಕರ ಸಾಹಿತ್ಯ ಸೃಷ್ಟಿಯಾದುದು ನಾವು ಕಂಡ ಇನ್ನೊಂದು ಪ್ರವೃತ್ತಿ.

ಕಾಲಕಾಲಕ್ಕೆ ಬರೆಹಗಾರರು ಬಂಡಾಯದ ಸಾಹಿತ್ಯವನ್ನೂ ರಚಿಸಿದರು. ಹಳೆಯದನ್ನು ಇದಿರಿಸಿ, ಹೊಸ ವಿಷಯಗಳ ಪ್ರತಿಪಾದಕರಾದರು.

ಪರತಂತ್ರ ಭಾರತದಲ್ಲಿ ಸ್ವಾತಂತ್ರ್ಯದ ಸಂದೇಶವನ್ನು ಸಾಹಿತ್ಯ ಸಾರಿತು. ಈ ಸಂದರ್ಭದಲ್ಲೂ ಅನಂತರವೂ ರಾಜಕೀಯ ಸಿದ್ಧಾಂತಗಳು, ಸಾಹಿತ್ಯದ ಸಹವಾಸಕ್ಕಾಗಿ ಸೆಣಸಾಡಿದುವು.

ಪ್ರತಿಭಾಸಂಪನ್ನನಾದ ಸಾಹಿತಿ, ಅಪ್ರತಿಮನಾದ ಕಲಾವಿದ, ತನ್ನದಾಗಿ ಅಳವಡಿಸಿಕೊಂಡ ಬದುಕಿನ ಆದರ್ಶವನ್ನು ಸಾಹಿತ್ಯಕೃತಿಯಲ್ಲಿ ಒಡಮೂಡಿಸಿದಷ್ಟು ಕಾಲ, ಆತನ ವೈಯಕ್ತಿಕ ತತ್ತ್ವ ನಂಬುಗೆಗಳನ್ನೂ ಮೀರಿಸಿ ಆ ಕೃತಿ ನಾಲ್ಕು ದಿನ ಬಾಳಿದುದುಂಟು.

ಆದರೆ ಬದುಕನ್ನು ಉಪಯೋಗಿಸಿಕೊಳ್ಳಲಾಗದ ಬರೆಹಗಾರರು ಸಾಹಿತ್ಯಕೃತಿಗಳಲ್ಲಿ ತತ್ವಪ್ರತಿಪಾದನೆಗೆ ಹೊರಟಾಗ?

* * *

ಕಮ್ಯೂನಿಸ್ಟ್ ಪಕ್ಷದ ಪ್ರಚಾರಕ್ಕೋಸ್ಕರ ಸಿದ್ಧವಾಗುವ ಕವಿತೆ ನಾಟಕ ಕಾದಂಬರಿಗಳು ಎಂದೂ ಸಾಹಿತ್ಯ ಎನ್ನಿಸಿಕೊಳ್ಳಲಾರವು. ತನ್ನ ಸೃಷ್ಟಿ ಹೇಗಿರ ಬೇಕೆಂಬುದನ್ನು ಕಲಾವಿದನೇ ನಿರ್ಧರಿಸಬೇಕು, ರಾಜಕೀಯ ಪರಿಣತನಲ್ಲ. ರಾಜಕೀಯ ಪಕ್ಷದ ಗುರಿ ನಿರ್ದೇಶಗಳನ್ನು ಒಪ್ಪಿಕೊಂಡು ರಚಿತವಾಗುವ ಸಾಹಿತ್ಯ ಕಳಪೆಯಾಗು ವುದಷ್ಟೇ ಸಾಧ್ಯ, ಅದಕ್ಕೆ ಉದಾಹರಣೆ, ಸೋವಿಯೆತ್ ರಷ್ಯದ ಸಾಹಿತ್ಯ ಕೃಷಿ.

ಆದರೆ ನಮ್ಮಲ್ಲಿ, ಈ ಕೃಷಿ ವಿಧಾನವನ್ನು ಕಮ್ಯುನಿಸ್ಟರು ಮಾತ್ರವಲ್ಲ, ಕಾಂಗ್ರೆಸಿಗರೂ ಇಷ್ಟಪಡುತ್ತಾರೆ.

ತನ್ನ ಯೋಜನೆಗಳನ್ನು ಕೈಗೂಡಿಸಲು ಆಳುವ ವರ್ಗಕ್ಕೆ ಸಾಹಿತ್ಯದ ನೆಲವು ಬೇಕೇ ಬೇಕು. ಪ್ರಚಾರ ನಾಟಕಗಳು, ಪ್ರಚಾರ ಗೀತಗಳು, ಚಲಚ್ಚಿತ್ರಗಳು— ಎಲ್ಲವನ್ನೂ ಆಳುವವರು ಅಪೇಕ್ಷಿಸುತ್ತಾರೆ. ಅದಕ್ಕೋಸ್ಕರ ಅವರು ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಬಹುಮಾನಗಳನ್ನು ಕೊಡುತ್ತಾರೆ. 'ಇಂಥ ವಿಷಯಗಳ ಮೇಲೆ ಸಾಹಿತ್ಯ ಸೃಷ್ಟಿ ಮಾಡಿ' ಎನ್ನುತ್ತಾರೆ.

ಯಾವ ಕಟ್ಟುನಿಟ್ಟುಗಳೂ ಇಲ್ಲದ ಗುರಿಧ್ಯೇಯಗಳಿಲ್ಲದ, ನೈತಿಕ ಅಂತಃ

ಸತ್ವವಿಲ್ಲದ ಇನ್ನೊಂದು ವಾತಾವರಣದಲ್ಲಿ, ಹೊಲಸು ಸಾಹಿತ್ಯದ ಸೃಷ್ಟಿಯೇ ಹೆಚ್ಚು. ಅದಕ್ಕೆ ಉದಾಹರಣೆ, ಅಮೆರಿಕದ ಸಾಹಿತ್ಯ.

(ರಷ್ಯ ಅಮೆರಿಕಗಳ ಪ್ರಸ್ತಾಪ ಮಾಡಿದಾಗ, ಒಳ್ಳೆಯ ಸಾಹಿತ್ಯ ಅಲ್ಲಿ ಇಲ್ಲವೇ ಇಲ್ಲವೆಂದು ಅರ್ಥವಿಲ್ಲ. ಆ ಸಾಹಿತ್ಯಗಳಲ್ಲಿ ಉತ್ತಮವಾದುದು ಕಡಮೆ. ಆ ಎರಡು ರಾಷ್ಟ್ರಗಳಲ್ಲೂ, ಪ್ರವಾಹದಲ್ಲಿ ಮುಳುಗದೆ ತೇಲದೆ ಬಂಡೆಗಳಂತೆ ನಿಂತಿರುವ ಕೆಲ ಬರೆಹಗಾರರಷ್ಟೇ ಒಳ್ಳೆಯ ಸಾಹಿತ್ಯವನ್ನು ನೀಡಲು ಸಮರ್ಥರಾಗಿದ್ದಾರೆ.)

* * *

ಕಲ್ಯಾಣರಾಜ್ಯ ಬೇಡವೆಂದು ಯಾವ ಬರೆಹಗಾರನೂ ಹೇಳುವುದಿಲ್ಲ. ಹೊಸ ಸಮಾಜದ ಉದಯಕ್ಕಂತೂ ಆತ ಸದಾಕಾಲವೂ ಹರಿಕಾರನೇ. ಸುತ್ತಮುತ್ತಲಿನ ಪ್ರಧಾನ ವಿಚಾರಗಳ ಪ್ರಭಾವಕ್ಕೆ ಆತನೂ ಒಳಗು. ಎಂದ ಮಾತ್ರಕ್ಕೆ, ಆತ ಸರಕಾರದ ಪ್ರಚಾರ ಶಾಖೆಯ ಕಾರಕೂನನಾಗಲಾರ.

ಕಾಲ ಧರ್ಮವನ್ನು ಸಾಹಿತ್ಯ ಪ್ರತಿಬಿಂಬಿಸಬೇಕು, ಎನ್ನುವುದು ಒಳ್ಳೆಯ ಮಾತು.

ಭಾರತವಿರಲಿ, ರಷ್ಯವಿರಲಿ, ಅಮೆರಿಕವಿರಲಿ—ಯಾವ ದೇಶವೇ ಇರಲಿ, ಅಲ್ಲಲ್ಲಿನ ಬರೆಹಗಾರರು ತಮ್ಮ ಕರ್ತವ್ಯ-ಹೊಣೆಗಳನ್ನು ಗಮನದಲ್ಲಿಟ್ಟು, ತಮ್ಮ ಒಳಗಿನ ಕರೆಗೆ ಓಗೊಟ್ಟು, ತಾವು ಕಂಡ ದರ್ಶನವನ್ನು ತಮ್ಮ ಸಾಹಿತ್ಯಕೃತಿಗಳಲ್ಲಿ ಖಂಡಿತ ವಾಗಿಯೂ ಒಡಮೂಡಿಸುತ್ತಾರೆ.

ಬದಲು, ಆ ದರ್ಶನ ಹೀಗೆಯೇ ಇರಬೇಕು, ಸಾಹಿತ್ಯದ ಸ್ವರೂಪ ಇಂತಹದೇ ಇರಬೇಕು, ಎಂದು ಸರಕಾರಗಳು ನಿರ್ಧರಿಸಹೊರಟರೆ, ಸಾಹಿತಿಗಳು ಆ ನಿರ್ಧಾರಗಳಿಗೆ ತಲೆಬಾಗಿದರೆ, ಸಾಹಿತ್ಯ ಕಣ್ಣುಮುಚ್ಚುತ್ತದೆ.

* * *

ಒಂದು ಮಾತು ಸ್ಪಷ್ಟ: ಮನಸ್ಸಾಕ್ಷಿ ಎಂಬುದಿದೆ ಲೇಖಕನಿಗೆ. ಅದಕ್ಕೆ ಇದಿರಾಗಿ ವರ್ತಿಸುವ ಬರೆಹಗಾರ, ಸಾಹಿತ್ಯಲೋಕದಲ್ಲಿ ಅಧಮನೆನಿಸಿಕೊಳ್ಳುತ್ತಾನೆ, ಆ ಅಪರಾಧ ಅಕ್ಷಮ್ಯವಾಗುತ್ತದೆ.

- 'ಯುಗಪುರುಷ'ದ ದಸರಾ ವಿಶೇಷಾಂಕದಲ್ಲಿ ಪ್ರಕಟಿತ.

೧೯೬೦

ಸಾಹಿತ್ಯ ಮತ್ತು ಸಾಮಾಜಿಕ ನೀತಿ

೧

"ನಮಗೆ ಎಂತಹ ಸಾಹಿತ್ಯ ಬೇಕು?" ಹತ್ತು ಬಗೆಯ ಉತ್ತರ ಸಾಧ್ಯ.

"ನಮಗೆ ಎಂತಹ ಸಮಾಜ ಬೇಕು"? ಒಮ್ಮತ ಇಲ್ಲಿಯೂ ದುಸ್ಸಾಧ್ಯವೇ.

ಪ್ರಶ್ನೆ ನೇರವಿದ್ದರೂ ಉತ್ತರಗಳು ಹಲವಿರಬಹುದು. ಆದರೂ, ತಾವಿತ್ತದೇ ಸಮರ್ಪಕ ಉತ್ತರವೆನ್ನುವ ಪರಿಣತಮತಿಗಳೇ ನಮ್ಮಲ್ಲಿ ಹೆಚ್ಚು.

ಯಾವ ಸಂದೇಹಗಳೂ ಇಲ್ಲದ ಮನುಷ್ಯ ಎಷ್ಟೊಂದು ಸುಖಿ! ಅಧಿಕಾರವಾಣಿಯಿಂದ ಮಾತನಾಡಲೆಂದೇ ಹುಟ್ಟಿಬಂದ ಜೀವ ಇದು! ಪ್ರತಿಯೊಂದು ಅತಿಭಾರದ್ದೇ ಎಂದಾದರೆ ಮಾತುಗಳನ್ನು ತೂಗಿನೋಡುವ ಅಗತ್ಯವಾದರೂ ಎಲ್ಲಿದೆ? ಆಡಿದ ಮಾತಿನಿಂದ ಇತರರ ಮೇಲೆ ಆಗುವ ಪರಿಣಾಮ ಏನು?—ಎಂದೇ? ಆಡುವವರಿಗೂ ಅದಕ್ಕೂ ಸಂಬಂಧವಿಲ್ಲ. ಮುಕ್ತಾಫಲ ಉದುರಿಸುವುದಷ್ಟೇ ನಮ್ಮ ಕೆಲಸ.

ನಿಸ್ಸಂದೇಹಿ ಮನುಷ್ಯನಿಗಿಂತಲೂ 'ಅಭಿಪ್ರಾಯಗಳೇ ಇಲ್ಲದ ಮನುಷ್ಯ' ಮತ್ತಷ್ಟು ಸುಖಿ, ಯಾವ ಅಭಿಪ್ರಾಯಗಳೂ ಇಲ್ಲ ಅವನಿಗೆ. ಆತ ನಿಶ್ಚಿಂತ!

ಸಮಾಜದಲ್ಲಿ ಮೂಡಿನಿಂತಿರುವ ಈ ಎರಡು ಜಾತಿಗಳನ್ನು ಸಾಹಿತಿಗಳಲ್ಲೂ ಕಾಣಬಹುದು.

೨

'ಜಾತಿ'ಎಂದೆ. ಒಂದು ಜಾತಿಗೆ ಸೇರಿದ ಮಾತ್ರಕ್ಕೆ, ಒಂದೇ ಮುದ್ರಣಯಂತ್ರದಲ್ಲಿ ಅಚ್ಚಾದವರು ಎಂದರ್ಥವಲ್ಲ. ಅಲ್ಲಿಯೂ ವೈವಿಧ್ಯವುಂಟು. ಜಾತಿ-ಒಳ ಜಾತಿ;ಒಂದೊಂದು ದಿಕ್ಕಿಗೆ ಮುಖಮಾಡಿದ ಒಬ್ಬೊಬ್ಬರು; ಬೇರೆಬೇರೆ ಮತಗಳು.

ಲೋಕದ ಯಾತನೆಗೆಲ್ಲ ತಾನೇ ಹಕ್ಕುದಾರ ತಾನೇ ಜವಾಬುದಾರ ಎಂಬಂತೆ ವರ್ತಿಸುವ ಸಾಹಿತಿಯನ್ನು ಕಂಡಿರುವಿರೇನು? ಬದುಕನ್ನು ಬದಲಾಯಿಸಲೆಂದೇ ಜನ್ಮ ತಳೆದು ಬಂದವನು ಇನ್ನೊಬ್ಬ. ಅದಕ್ಕಾಗಿಯೇ ಅವನ ಲೇಖನಿ ಮುಡಿಪು, ಅವನು ಯೋಧ ಸಾಹಿತಿ. ಗಾಳಿಯೊಡನೆ ಗುದ್ದಾಟವಾದರೂ ಸರಿಯೇ, ಸದಾ ಹೋರಾಡುತ್ತಲೇ

ಇರಬೇಕು, ನವಪಂಥದ ಕಟ್ಟಾಳುವೊ?—'ಗುಡ್ಡ ಅಡ್ಡ' ಎಂಬ ನಾಣ್ಣುಡಿಯನ್ನು ಆತ ಕೇಳಿಯೇ ಇಲ್ಲ.

ಇಂಥವರಲ್ಲಿ 'ಸಂಶೋಧನೆ'ಯ ಹಂಬಲ ಹೆಚ್ಚು, ಅವರ ಸೂಕ್ಷ್ಮದೃಷ್ಟಿಗೆ ಬೀಳದ ಸಮಸ್ಯೆಗಳಿಲ್ಲ, ಅವುಗಳನ್ನು ಚಿತ್ರಿಸುವ ಕಲೆ ಅವರಿಗೆ ಕರತಲಾಮಲಕ, ಹರಿಜನ ಗಿರಿಜನರ ಸಮಸ್ಯೆ? ವಿಧವಾ ಸಮಸ್ಯೆ? ವೇಶ್ಯಾಸಮಸ್ಯೆ? ಅಂತರ್ಜಾತೀಯ ವಿವಾಹ ಸಮಸ್ಯೆ? ಪಾನನಿರೋಧ ಸಮಸ್ಯೆ? ಕುಟುಂಬ ಯೋಜನೆಯ ಸಮಸ್ಯೆ? ಇಂಥದು ನೂರು, ಸಾವಿರ, ಪ್ರತಿಯೊಂದು ಸಮಸ್ಯೆಯನ್ನೂ ಚಿತ್ರಿಸಿ ಸೂಕ್ತ ಪರಿಹಾರವನ್ನವರು ಸೂಚಿಸಬಲ್ಲರು.

ಎಲ್ಲ ಸಮಸ್ಯೆಗಳೂ ಪರಿಹಾರವಾಗಿ ಸಮಾಜವೀಗ ಇಷ್ಟೊಂದು ಸುಂದರ ವಾಗಿರುವುದು ಅವರ ಕೃಪೆಯಿಂದಲೇ ಅಲ್ಲವೆ? ಸಾಹಿತ್ಯಲೋಕದ ಧನ್ವಂತರಿಗಳಿವರು; ಪ್ರಾತಃಸ್ಮರಣೀಯರು!

೩

ಬಿಸಿಲಿಗೆ ಹೂ ಬಾಡುವುದೇಕೆ? ನಮಗೆ ತಿಳಿಯದು. ನೀರೆರೆದ ಗಿಡ ಚಿಗುರೊಡೆವುದೇಕೆ? ನಮಗೆ ತಿಳಿಯದು. ಅರಸೊತ್ತಿಗೆ ಮೇಲೋ ಪ್ರಜಾಪ್ರಭುತ್ವ ಮೇಲೊ?" ನಾವು ರಾಜಕೀಯದವರಲ್ಲ."ಯಾತಕ್ಕೋಸ್ಕರ ಬರೆಯುತ್ತೀರಿ?" ಸುಮ್ಮನೆ, ಆತ್ಮತೃಪ್ತಿಗೆ. "ಯೋಜನೆಗಳು ರಾಷ್ಟ್ರಾಭ್ಯುದಯಕ್ಕೆ ಸಾಧಕ—ಅಲ್ಲವೆ?" ನಾವು ಸಾಹಿತ್ಯದವರು; ನಮಗದು ತಿಳಿಯದು."

ಇವರೆಲ್ಲ 'ಅಭಿಪ್ರಾಯವಿಲ್ಲ'ದ ಜಾತಿ. ಈ ಇವರ ಮಂದಿರಕ್ಕೆ ಅನ್ಯರಿಗೆ ಪ್ರವೇಶವಿಲ್ಲ. ಅಲ್ಲಿ ಇವರೇ ಪೂಜಾರಿಗಳು, ಇವರೇ ಭಕ್ತರು.

೪

ಮೇಲಿನ ಮುಖ್ಯವಾದ ಎರಡು ಜಾತಿಗಳಲ್ಲದೆ, ಪ್ರಮಾಣದಲ್ಲಿ ಚಿಕ್ಕದಾದರೂ ಗಮನಾರ್ಹವಾದ ಇನ್ನೆರಡು ಜಾತಿಗಳಿವೆ.

ಇವು ಬಾಡಿಗೆಯವರು (ಅಥವಾ, ಕಸಬಿನವರು) ಮತ್ತು ಕಣ್‌ಪಟ್ಟಿಯವರು.

ಬಾಡಿಗೆಯವರು, ಸರಕಾರದ—ಅದರ ಆಕಾಶವಾಣಿ ಅಕಾಡಮಿಗಳ—ಸೇವೆಗೆ ಸದಾ ಸಿದ್ಧ. ಕವಿತೆಗಳ ಮೂಲಕ ಹುಟ್ಟು ಸಾವುಗಳ ಮೇಲಣ ತೆರಿಗೆಯನ್ನು ಜನಪ್ರಿಯ ಗೊಳಿಸಬೇಕೆ? ಪಂಚವಾರ್ಷಿಕ ಯೋಜನೆಗಳಲ್ಲಿ ಜನಕೋಟಿ ಆನಂದೋತ್ಸಾಹಗಳಿಂದ ಪಾಲುಗೊಳ್ಳುತ್ತಿರುವುದನ್ನು ಚಿತ್ರಿಸಿ ನಾಟಕ ಬರೆಯಬೇಕೆ? ಅದನ್ನು ಕುರಿತ ಚಲಚ್ಚಿತ್ರ-ವಾರ್ತಾಚಿತ್ರಗಳಿಗೆ ಕಥಾವಸ್ತು ಕಮೆಂಟರಿಗಳನ್ನು ಸಿದ್ಧಪಡಿಸಬೇಕೆ? ಕೆಲಸವೇನೇ

ಇರಲಿ, ಅದನ್ನವರು ಮಾಡುವರು.

ಯಾವುದೋ ದರ್ಶನಕ್ಕೆ ತತ್ವಜ್ಞಾನಕ್ಕೆ ದಾಸರಾಗಿ, ಯಾವುದೋ ರಾಜಕೀಯ ಪಕ್ಷದ ಯಂತ್ರದ ಗಾಲಿ ಕೀಲಿಗಳಾಗಿ ಸಾಹಿತ್ಯ ಸೃಷ್ಟಿಸುವವರೇ ಕಣ್ ಪಟ್ಟಿಯವರು, ಇವರ ನೇರಗೆರೆಯ ಆಚೀಚೆಗಿರುವುದೆಲ್ಲ ಕಾಡು-ಮರಳು. ಚಲನೆ ರೈಲು ಹಳಿಗಳ ಮೇಲೆ, ಹಳಿ ತಪ್ಪಿದಾಗಿನ ಅವಸ್ಥೆ ಕೇಳಬೇಡಿ !

೫

ಪುಂಖಾನುಪುಂಖವಾಗಿ ಪ್ರತಿನಿಮಿಷವೂ ಸಾಹಿತ್ಯ ಸೃಷ್ಟಿಯಾಗುತ್ತಿದೆ. ತಾವು ಜನ್ಮವೀಯುತ್ತಿರುವ ಸಂತಾನವೆಂಥದೆಂದು ಟ್ರೆಡಲ್-ಸಿಲಿಂಡರುಗಳೇನು ಬಲ್ಲವು? ಸಮಾಜಕ್ಕಾದರೂ ಉಂಟೆ ಅದರ ಪರಿವೆ ?

ಸಮಾಜದ ಆಗುಹೋಗುಗಳನ್ನು ರೂಪಿಸುತ್ತಿರುವ ಜನ ರಾಜಕೀಯದವರು. ಅವರಲ್ಲಿ ಕೆಲವರು ದರ್ಶನಗ್ರಂಥಗಳ ಪ್ರಭಾವಕ್ಕೆ ಒಳಗಾಗಿರುವುದು ಸಾಧ್ಯ,- ಕೆಲವರು ಇತರ ಸಾಹಿತ್ಯ ಕೃತಿಗಳಿಗೆ ಮಾತ್ರ ಅವರೊಡನೆ, ಯಾವ ಸಂಬಂಧವೂ ಇಲ್ಲ.

'ಕುಮಾರವ್ಯಾಸ ಭಾರತ'ದ ಅಗ್ಗದ ಪ್ರತಿಗಳು ಅಚ್ಚಾಗುತ್ತವೆ. 'ರಾಮಾಯಣ'ದ ಬೆಲೆಯೂ ಇಳಿಯುತ್ತದೆ. ಆದರೆ ಪ್ರತಿನಿತ್ಯದ ಬದುಕಿನ ಕಸಿವಿಸಿಯಲ್ಲಿ ತೊಳಲುವ ಜನ, ಜಾತಿರಾಜಕೀಯದ ಮುಷ್ಟಿ, ರಾಜಕೀಯದ ನೂಕುನುಗ್ಗುಲಲ್ಲಿ ಹೈರಾಣಾಗಿರುವ ಸಮಾಜ, ಆ ಕೃತಿಗಳನ್ನೋದಿ ಸತ್ಪ್ರೇರಣೆಗೆ ಒಳಗಾಗುವುದುಂಟೆ?

ಸಾಮಾಜಿಕ ನೀತಿಯನ್ನು ಸಾಹಿತ್ಯ ರೂಪಿಸಬಲ್ಲುದೆಂದು ಕೂಗಿ ಹೇಳುವುದು ಬಹಳ ಎದೆಗಾರಿಕೆಯ ಮಾತು. ಸಾಮಾಜಿಕ ಅವನತಿಗೆ ಸಾಹಿತ್ಯ ಕಾರಣವಾದೀತೆ?

ಕಾರಣವಾದೀತು, ಹಿತಕರವಲ್ಲದ 'ಸಾಹಿತ್ಯ' ಸ್ವಲ್ಪ ಮಟ್ಟಿಗೆ ಕಾರಣವಾದೀತು.

ಯಾವುದು ಹಿತಕರವಲ್ಲದ ಸಾಹಿತ್ಯ? ಮತ್ತೆ ಮೂಲಭೂತ ಪ್ರಶ್ನೆಗೇ ಬಂದೆವಲ್ಲ?

೬

ಸುಮಾರು ಇಪ್ಪತ್ತು ವರ್ಷಗಳ ಬರೆವಣಿಗೆಯ ಬದುಕಿನ ಅನಂತರ ಮೇಲಿನ ಪ್ರಶ್ನೆಗೆ ನಿರ್ದಿಷ್ಟ ಉತ್ತರವೀಯಲು ನಾನು ಅಸಮರ್ಥನಾಗಿದ್ದೇನೆ. ಲೋಕ ಜೀವನವೊಂದು ಬಂಡೆಗಲ್ಲು. ಅದಕ್ಕೆ ಬೇರೆಬೇರೆ ರೂಪುಗಳನ್ನೀಯಲು ಸಹಸ್ರ ಶಿಲ್ಪಿಗಳು ಶತಶತಮಾನಗಳಿಂದ ಯತ್ನಿಸುತ್ತಬಂದಿದ್ದಾರೆ. ಕಟ್ಟುತ್ತಿದ್ದಾರೆ, ಕೆಡವುತ್ತಿದ್ದಾರೆ, ಮತ್ತೆ ಕಟ್ಟುತ್ತಿದ್ದಾರೆ.....

ಈ ಅವಧಿಯಲ್ಲೆಲ್ಲ ಆದ ಸಾಹಿತ್ಯಸೃಷ್ಟಿಯಲ್ಲಿ ಮೇರುಕೃತಿಗಳಾಗಿ ಉಳಿದಿರು

ವಂಥವು ಎಷ್ಟು? ಕೆಲವು ಆಯಾ ಯುಗಧರ್ಮದ ರಸಪಾಕಗಳಾಗಿ ಚಿರಕಾಲಕ್ಕೆಂದು ಉಳಿದಿರುವ ಕೆಲವು.

ಅವು ಮಾತ್ರ ಮಾನವಕೋಟಿಗೆ ಆತ್ಮೀಯವಾಗಬಲ್ಲುವು.

ಅಂತಹ ಪರಮೋನ್ನತ ಕೃತಿಯ ಸೃಷ್ಟಿಗೂ ದೈನಂದಿನ ಸಾಮಾಜಿಕ ರೀತಿ-ನೀತಿಗಳಿಗೂ ಸಂಬಂಧವಿಲ್ಲ. ಮೇರುಕೃತಿಯ ಕಾಲಾವಧಿ ಒಂದು ಪೀಳಿಗೆಯಲ್ಲ ಒಂದು ಯುಗ.

ಹೀಗೆ ಯುಗಧರ್ಮದಿಂದ ಪ್ರೇರಿತವಾದ ಕೃತಿ, ಮುಂದಿನ ಯುಗಯುಗಗಳ ಮೇಲೆ ಪ್ರಭಾವ ಬೀರಬಹುದು, ಪ್ರಾಯಶಃ.

- 'ಮಲೆನಾಡು' ಸಾಹಿತ್ಯ ವಿಶೇಷಾಂಕದಲ್ಲಿ ಪ್ರಕಟಣೆ.

೧೯೬೦

ಇತಿಹಾಸ ಕಲಿಸುವ ಪಾಠ

ಇತಿಹಾಸದಿಂದ ನಾವು ಪಾಠ ಕಲಿಯಬೇಕು—ಎಂದು ರಾಜ್ಯಸೂತ್ರಗಳನ್ನು ಹಿಡಿದ ಜನ ಆಗಾಗ್ಗೆ ಆಡುವುದುಂಟು.

ಹಿತೋಪದೇಶ, ಸಂಶಯವಿಲ್ಲ. ಆದರೆ, ಮಾತಿಗೂ ಕೃತಿಗೂ ನಡುವೆ ಅಂತರವೊಂದಿದೆಯಲ್ಲ? ಮಾನವ ನಾಗರಿಕತೆಯಷ್ಟೇ ಹಳೆಯದು ಅದು. ಆಡಿದಂತೆ ನುಡಿಯಬೇಡ-ಎಂದು ಯಾವ ಸಂತ ಮಹಾನುಭಾವ ಶಾಪವಿತ್ತನೊ? ನಮ್ಮ ದುರದೃಷ್ಟ. ಹೆಜ್ಜೆ ಹೆಜ್ಜೆಗೂ ಅದರ ನೆನವರಿಕೆ ನಮಗೆ ಆಗುತ್ತಲೇ ಇರುತ್ತದೆ.

ಈ ಲೋಕದಲ್ಲಿ ದುಷ್ಟರೂ ಇದ್ದಾರೆ, ಶಿಷ್ಟರೂ ಇದ್ದಾರೆ, ನಿನ್ನೆಯೂ ಅವರಿದ್ದರು, ನಾಳೆಯೂ ಇರುತ್ತಾರೆ ಅವರಿಬ್ಬರ ನಡುವಿನ ಘರ್ಷಣೆಯೂ ಅಷ್ಟೆ. ಸದಾಕಾಲ ಇರುವಂಥಾದ್ದು.

ಯಾದವೀ ಕಲಹ ಕೆಟ್ಟುದೆಂದು ಯಾರಿಗೆ ತಿಳಿಯದು? ಆದರೂ, ಸಹಸ್ರ ಕುರುಕ್ಷೇತ್ರಗಳ ಸಮೂಹ, ಪ್ರತಿಯೊಂದು ರಾಜ್ಯ, ಇಡಿಯ ಜಗತ್ತು. ಒಂದು ಘೋರ ಯುದ್ಧದ ನೆನಪು ಅಳಿಯುವುದರೊಳಗೇ ಇನ್ನೊಂದನ್ನು ಇದಿರ್ಗೊಳ್ಳುವ ಸಿದ್ಧತೆ. ಸುಖನಿದ್ರೆಗಾಗಿ ಚಡಪಡಿಸುವುದು, ಮದ್ದು ತುಂಬಿದ ಬಂದೂಕನ್ನು ದಿಂಬಿನ ಕೆಳಗಿರಿಸಿದ ಮಾತ್ರ ಇನ್ನೆರಡು ಘಳಿಗೆಗಳಲ್ಲೇ ಚಂದ್ರಲೋಕಕ್ಕೆ ಪಯಣ. ಆದರೆ ರಾಕೆಟ್ಟು—ಬಿಳಿಯರಿಗೆ ಬೇರೆಯೇ, ಕರಿಯರಿಗೆ ಬೇರೆಯೇ.

ಇಂತಹದೊಂದು ವಾತಾವರಣದಲ್ಲಿ ನಾವು ಈ ದಿನ ಉಸಿರಾಡುತ್ತಿದ್ದೇವೆ.

ಹೆಸರಲ್ಲ ಮುಖ್ಯ

ಎಲ್ಲ ಜನರೂ ಸುಖಿಗಳಾಗಿರಬೇಕು ಎಂಬುದು ಪುರಾತನ ಕಾಲದಿಂದಲೂ ವ್ಯಕ್ತಿಗೊಳ್ಳುತ್ತ ಬಂದಿರುವ ಸದಾಶಯ.

ಸಮಾಜವಾದದ ಮಂತ್ರ ಜಪಿಸುತ್ತಿರುವ ಈ ದೇಶದ ನಾಯಕಮಣಿಗಳಾದರೂ ಎತ್ತಿಹಿಡಿದಿರುವುದು ಅದೇ ಆಶಯವನ್ನು.

ಈ ಪದ ಹೊಸದು. ಔದ್ಯೋಗಿಕ ಕ್ರಾಂತಿಯ ಅನಂತರ ಹುಟ್ಟಿದ್ದು.

ಅದರ ವ್ಯಾಪ್ತಿಯೋ ಮೇರೆ ಇಲ್ಲದ್ದು. ಕುರುಡರು ಮುಟ್ಟಿನೋಡುವ ಆನೆ ಅದು ಬೇರೆಬೇರೆ ಬಾಯಿಗಳಲ್ಲಿ ಬೇರೆ ಬೇರೆ ರೀತಿ. 'ಸಾಹಿತ್ಯ'ಒಂದೇ: ರಾಗ ತಾಳ ಹಲವು ಹದಿನೆಂಟು.

ಗುಗಿಯನ್ನು ಬಲ್ಲೆವು. ಬೆಟ್ಟದ ತುದಿಯನ್ನೇ ನಾವು ಏರಬೇಕು. ದಾರಿ ತಿಳಿಯದು. ವಾಸ್ತವವಾಗಿ, ದಾರಿಯೇ ಇಲ್ಲ. ಕಾಡು ಮರಗಿಡ ಪೊದೆ ಬಳ್ಳಿ ಮುಳ್ಳುಗಳನ್ನು ಕಡಿದು ಸರಿಸಿ ಹಾದಿ ಬಿಡಿಸಬೇಕು. ಅಂದಮೇಲೆ ನಾವು ತುಳಿದದ್ದೇ ಹಾದಿ.

ಕಳೆದ ಹತ್ತು ಹದಿಮೂರು ವರ್ಷಗಳಲ್ಲಿ ಉತ್ಪನ್ನವಾದ ಹೆಚ್ಚಿನ ರಾಷ್ಟ್ರೀಯ ಆದಾಯ ಹೋಯಿತೆಲ್ಲಿಗೆ? ಯಾರ ಕಿಸೆಗೆ? ಎಲ್ಲರಿಗೂ ತಿಳಿಯುವ ತವಕ. ಹಗಲು ಹೊತ್ತು ದೀವಟಿಗೆ ಹಿಡಿದು ಹುಡುಕಬೇಕಿನ್ನು.

ನಾಳೆಯ ಸುಖಕ್ಕಾಗಿ ಇಂದು ಪರಿಶ್ರಮ. ಜೀವಮಾನವೆಲ್ಲ ಪರಿಶ್ರಮವೊಂದನ್ನೇ ಬಲ್ಲ ಜನಕೋಟಿಗೆ ಈ ತತ್ವದ ಆಚರಣೆ ಸುಲಭ. 'ನಗದಿ ಇಂದು, ಕಡ ನಾಳೆ' ಯಾರಿಗೆ ಬೇಡ?

ಈ ವ್ಯಾಪಾರಗಳನ್ನು ನೋಡುತ್ತಲಿರುವ ಮಾಡುತ್ತಲಿರುವ ಜೀವರಾಶಿಗಳಲ್ಲಿ ಬರೆಹಗಾರನೂ ಒಬ್ಬ.

ಎಷ್ಟು ಬೆಲೆ ?

ಕಲೆಯ ಲೋಕದ ಬರಿಗೈ ದೊರೆ ಬರೆಹಗಾರ (ಕಲಾವಿದ).

ಹಿಂದೆ ಈತನಿಗೆ ರಾಜಾಶ್ರಯವಿತ್ತಂತಲ್ಲ? ಈಗ ಪ್ರಜಾಪ್ರಭುತ್ವಯುಗದಲ್ಲಿ ಸ್ವತಂತ್ರ ದೇಶದಲ್ಲಿ, ಅವನು ಅನಾಥನೆನ್ನುವುದು ಎಂಥ ಅವಮಾನ! ಅದು ಸಲ್ಲದೆಂದು ಈಗಿನ ರಾಜರೂ ಬರೆಹಗಾರನತ್ತ ನೋಡಿ ಸನ್ನೆಮಾಡುತ್ತಾರೆ, "ಬಾ" ಎಂದು.

ಆ ಕೃಪಾಛತ್ರದ ಕೆಳಗೆ ಇವನು ಆಸರೆ ಪಡೆಯಬೇಕು. ಆದರೆ ನೆರಳಿರುವ ತಾಣ ಸೀಮಿತ. ಬಿಸಿಲಲ್ಲಿ ಬರಿತಲೆಯಿಂದಿರುವವರ ಸಂಖ್ಯೆ ಅಗಣಿತ. ಹೀಗಾಗಿ, ತುರುಸಿನ ಸ್ಪರ್ಧೆ ಇವರೊಳಗೆ. ಬಹುಮಾನಿತನಾದವನು ಬದುಕಿದ.

ಅಭಿಮಾನಧನರ ಕಾಲ ಕಳೆಯಿತು. ಈಗ, "ವೃದ್ಧಾಪ್ಯದ ಕಾರಣದಿಂದಲೋ ಅಡಿ ತಪ್ಪಿಯೋ ಕಷ್ಟಕ್ಕೀಡಾದವರಿಗೆ ಧನಸಹಾಯ ಮಾಡಿರೆಂದು ಕೈಯೊಡ್ಡಿ ಸರಕಾರವನ್ನು ಯಾಚಿಸುವ ಭಿಕ್ಷುಕರದೇ ಮೆರವಣಿಗೆ, ಆ ಮೆರವಣಿಗೆಯ ಮುಂದಿರುವವರಿಗೇ ಸಾರಸ್ವತ ಪ್ರಪಂಚದಲ್ಲಿ ಅಗ್ರಪೂಜೆ.

ಹೊಸ ಮೌಲ್ಯ ಮಾಪನಗಳೀಗ ಬಳಕೆಗೆ ಬಂದಿವೆ. ಸಾಹಿತ್ಯಕೃತಿಗಳಿಗೆ ಮುನ್ನುಡಿ ಬರೆಯುವುದು (ಯಾರೋಬರೆದ-ಸ್ವತ: ಗ್ರಂಥಕರ್ತನೇ ಬರೆದ ಮುನ್ನುಡಿಗೆ ಅಂಕಿತವಿಡುವುದು) ಸಚಿವರಿಗೋ ಅವರ ಆಪ್ತರಿಗೋ ಪ್ರಭಾವಶಾಲಿ ರಾಜಕೀಯ

ದುರಂಧರರಿಗೋ ಮೀಸಲು. ಆ ಮುನ್ನುಡಿ, ಅಧಿಕಾರದ ವಲಯಗಳಲ್ಲಿ ಸುತ್ತಾಡಲು ರಹದಾರಿ. ನಿಮ್ಮ ಕೃತಿಗಳನ್ನು ಓದುಗರು ಓದಿ ಮೆಚ್ಚುವುದು ಮುಖ್ಯವಲ್ಲ. ಪ್ರಚಾರದ ಅತ್ಯಾಧುನಿಕ ಸಾಧನಗಳಿರುವ ಈ ದಿನಗಳಲ್ಲಿ ಖ್ಯಾತಿ ಗಳಿಸುವುದು ಅದೆಷ್ಟರ ಕೆಲಸ? ನಿಮಗೆ ಪಾರಿತೋಷಕ ಘಳಿಗೆ-ಮುಹೂರ್ತಗಳಿಗೆಲ್ಲ, ದಿನ-ವರ್ಷಗಳಿಗೆ ಎಲ್ಲಿಲ್ಲದ ಪ್ರಾಧಾನ್ಯ, ಮುಂದಿನ ವರ್ಷದ ಕಕ್ಷೆಯೊಳಗೆ ಬರುವಂತೆ. ನಾಲ್ಕು ತಿಂಗಳು ಪ್ರಕಟಣೆಯನ್ನು ತಡೆಹಿಡಿದ ಅಥವಾ ಡಿಸೆಂಬರ್ ಹದಿನೈದರೊಳಗೇ ಹೊರ ಬೀಳುವಂತೆ, ಬೇಗಬೇಗನೆ ಬರೆದು ಅವಸರ ಅವಸರವಾಗಿ ಅಚ್ಚು ಹಾಕಿಸಿದರಾಯಿತು. ಅಕಾಡೆಮಿ ಅವಾರ್ಡಾದರೆ, ಅನುಕೂಲ ಮತ ದೊರಕಿಸಿಕೊಳ್ಳಲು ಪರದಾಟ. ರಾಜ್ಯ ಸರಕಾರದ ಪ್ರಸಾದವಾದರೆ, ಪ್ರಭಾವೀ ವಲಯಗಳಿಗೆ ನೆಗೆದಾಟ. ಇಷ್ಟೂ, ತೆರೆಯ ಮರೆಯಲ್ಲಿ. ಕೊನೆಗೂ ಬರೆಹಗಾರ 'ಸನ್ಮಾನಿತ ಸಾಹಿತಿ'ಯಾದ ಅನ್ನಿ. ಆ ಕ್ಷಣವೇ ಆತ ಸಿಹಿ ಹಂಚಬೇಕು, ಹಿರಿಯ ಸಾಹಿತಿಗೇ ಈ ಮನ್ನಣೆ ಎಂದಾದರೆ, ಅಲ್ಲಲ್ಲಿರುವ ಮರಿಗಳಿಂದ, ಸತ್ಕಾರ ಕೂಟಗಳೇರ್ಪಡಬೇಕು. 'ಫಲಿತಾಂಶ' ಹೊರಬಿದ್ದ ಮೇಲಷ್ಟೇ ಆ ಬಹುಮಾನಿತ ಕೃತಿಯ ಹೆಸರಿನ ಪ್ರಥಮ ಪರಿಚಯ ವಾಚಕಲೋಕಕ್ಕೆ! ಓದುವವರ ದೌರ್ಭಾಗ್ಯ. ಯಾರೇನು ಮಾಡೋಣ?

ಹೀಗೆ, ಸರಕಾರದ ಸುತ್ತಲೂ ಅಲೆದಾಡುವ ಬರೆಹಗಾರರ ಹೊಸ ವರ್ಗವೊಂದು ಈಗ ಉದಿಸಿದೆ. ಇವರಲ್ಲಿ ಪ್ರಮುಖರಾದವರು ಸಾಹಿತ್ಯಲೋಕದ V.I.P.ಗಳು—Very Important Persons. ಕಿಷ್ಕಿಂಧೆಯಿಂದ ಅಯೋಧ್ಯೆಯ ತನಕ ಇವರ ಉಡ್ಡಾಣ. ಆಳುವವರಲ್ಲಿ ಇವರಿಗೆ 'ಬೇಕಾದವರು ಬಹಳ. 'ವಿದೇಶಗಳಿಗೆ ತೆರಳುವ ಸಾಂಸ್ಕೃತಿಕ ನಿಯೋಗಗಳಲ್ಲಿ ಸ್ಥಾನ ದೊರೆಯಲು, ಅಂತಹ ಆಪ್ತಬಾಂಧವ್ಯವೇ ಅಸ್ತಿವಾರ.

ಎಲ್ಲರೂ V.I.P. ಗಳಾಗುವುದು ಸಾಧ್ಯವಿಲ್ಲವಲ್ಲ. ಹೀಗಾಗಿ ಉಳಿದವರು I.P.ಗಳು ಅವರ ತಾಳಕ್ಕೆ ಇವರ ಕುಣಿತ. ಅವರು ನೀಡದ್ದು ಇವರಿಗೆ ಮಹಾಹಸಾದ. (ಪಾಲಿಗೆ ಬಂದ ಪಂಚಾಮೃತ.)

ಸಾಹಿತ್ಯದ ಮುನ್ನಡೆ

ಸ್ವಾಗತ ಗೀತೆಗಳನ್ನೂ ವಿಶೇಷ ಸಮಾರಂಭಗಳಿಗಾಗಿ ವಿಶೇಷ ಕಬ್ಬಗಳನ್ನೂ ತಯಾರಿಸುವ ಕವಿಗಳು ಮೊದಲಿನಿಂದಲೂ ನಮ್ಮಲ್ಲಿದ್ದಾರೆ. ಅವರ ಮಹೋನ್ನತಿ ಶ್ರೇಣಿಯಲ್ಲಿ ಹೊಸಬರನ್ನೂ ಈಗ ನಾವು ಕಾಣುತ್ತೇವೆ. ವಿಷಯ ಕೊಟ್ಟರಾಯಿತು. ಗಾತ್ರ ತಿಳಿಸಿದರಾಯಿತು. ಕವಿತೆಗಳನ್ನಿವರು ಸೃಜಿಸುತ್ತಾರೆ. ಆಗಸ್ಟ್ ಹದಿನೈದು? ಸೌಭಾಗ್ಯ ದರ್ಶನ ? ನೆಲ-ಜಲ ? ನಾಯಕಮಣಿಯ ಜೀವನ ಚರಿತ್ರೆ? ಪಂಚವಾರ್ಷಿಕ ಯೋಜನೆ? ('ನವೋದಯ!') ಮಿತಸಂತಾನ ಸಮಸ್ಯೆ? ಪಾನನಿಷೇಧ ? ಯಾವುದಾದರೂ ಸರಿಯೆ. ಹಣ ಎಷ್ಟೆಂದು ನಮೂದಿಸಿ ಕರಾರುಪತ್ರವನ್ನು ಮುಂದಿಟ್ಟರೆ ಸಾಕು. ಕಣ್ಣು

ಮುಚ್ಚಿ ಸಹಿಹಾಕಿ, ತಕ್ಷಣವೇ ಸ್ಫೂರ್ತಿಗೊಂಡು, ಕವಿ ಕೃತಿ ರಚಿಸುತ್ತಾನೆ.

(ಆ ಕೃತಿಗಳಿಗೆ ಸ್ವರ ಪ್ರಸ್ತಾರ ಹಾಕಿ ಗಮಕಿ ಹಾಡುತ್ತಾನೆ. ಆ ಹಾಡಿಗೆ ಹಿಮ್ಮೇಳ ನೀಡುತ್ತದೆ ವಾದ್ಯವೃಂದ.)

ಅಂತಹದೇ ವಸ್ತುಗಳುಳ್ಳ ನಾಟಕಗಳೂ ಸಿದ್ಧವಾಗುತ್ತವೆ. ಕಥೆ ಕಾದಂಬರಿಗಳೂ ಬರೆಯಲ್ಪಡುತ್ತವೆ. ಇವು ಬಹುಮಾನಿತವಾಗಿ ಭಾರತದ ಎಲ್ಲ ಭಾಷೆಗಳಲ್ಲೂ ಪ್ರಕಟಗೊಳ್ಳುತ್ತವೆ. ನವಭಾರತದ ಪ್ರಾತಿನಿಧಿಕ ಕೃತಿಯೆಂದು ವಿಶ್ವದ ಇತರ ಭಾಷೆಗಳಿಗೆ ಅನುವಾದಿತವಾಗುವ ಸಂಭವವೂ ಇಲ್ಲದಿಲ್ಲ. ಇದಲ್ಲವೆ ಸಾಹಿತ್ಯದ ಮುನ್ನಡೆ?

ತರವಲ್ಲ

ಯಾರಾದರೂ ಕೇಳಬಹುದು. ಕಲ್ಯಾಣ ರಾಜ್ಯದ ಸಮಾಜವಾದದ ಸ್ಥಾಪನೆಗೆ ಇಷ್ಟಾದರೂ ಕಾಣ್ಕೆ ಸಲ್ಲಬೇಡವೆ ಬರೆಹಗಾರನಿಂದ—ಕಲಾವಿದನಿಂದ?

ತನ್ನ ಕರ್ತವ್ಯವನ್ನೂ ಹೊಣೆಗಾರಿಕೆಯನ್ನೂ ಬಲ್ಲ ಪ್ರಾಮಾಣಿಕನಾದ ನಿಷ್ಠಾವಂತನಾದ ಲೇಖಕ ಇಂತಹ ಪ್ರಶ್ನೆಯನ್ನು ಉತ್ತರಿಸಬೇಕಾದ ಅಗತ್ಯವಿಲ್ಲ. ಹೀಗೆ ಸವಾಲು ಹಾಕಿ ಆತನನ್ನು ಅವಮಾನಿಸುವುದು ತರವಲ್ಲ.

ಪರಿಸರದಿಂದ, ಬದುಕಿನಿಂದ, ಮಹಾ ಸಂಭವಗಳಿಂದ, ರೂಪುಗೊಳ್ಳುತ್ತಿರುವ ಇತಿಹಾಸದಿಂದ, ಆತ ಸ್ಫೂರ್ತಿ ಪಡೆದೇತೀರುತ್ತಾನೆ. ಯುಗಧರ್ಮಕ್ಕೆ ಆತ ವಾಣಿಯಾಗಿಯೇ ಆಗುತ್ತಾನೆ.

ಆದರೆ ಆ ಸ್ಫೂರ್ತಿಗೆ ಇಂತಹದೇ ಆಗರವಾಗಲಿ, ಆ ವಾಣಿ ಹೀಗೆಯೇ ಮೊಳಗಲಿ—ಎಂದು ಆಳುವ ಜನರೂ ರಾಜಕೀಯ ಪಕ್ಷಗಳೂ ನಿರ್ದೇಶ ನೀಡುವುದು ಬೇಡ.

ಸಮಾಜವಾದದ ಸ್ಥಾಪನೆಗೆಂದು ಸಮವಸ್ತ್ರ ಧರಿಸಿದ ಲೇಖಕರ ದಂಡು ಸೃಷ್ಟಿಸಿರುವ ಸಾಹಿತ್ಯ, ವಿಶ್ವದಲ್ಲಿ ಈಗಾಗಲೇ ವಿಪುಲವಾಗಿದೆ. ಆ ಭಾರಕ್ಕೆ ಸರಸ್ವತಿಯ ಬೆನ್ನು ಬಾಗಿದೆ.

ಮಂದಿರ ತುಂಬ ಪಂಜರದ ಗಿಣಿಗಳು. ನೋಟಕ್ಕೆ ಸುಂದರ, ಆದರೆ ಮಾತು ಒಂದೇ ತೆರ, ಒಡೆಯ ಕಲಿಸಿದ ನುಡಿಗಳು—ಎಲ್ಲವೂ. ಬೇಸರ ಬರಲು ಕೆಲ ನಿಮಿಷಗಳೇ ಸಾಕು.

ಅಂತರಿಕ್ಷದುದ್ದಗಲಕ್ಕೆ ಭವ್ಯವಾಗಿ ರೆಕ್ಕೆ ಬಿಚ್ಚಿ ಹಾರುವ ಖಗರಾಜನಿಗೂ ಮಾಮರಗಳ ರಾಣಿಯಾದ ಕೋಗಿಲೆಗೂ ಪಂಜರ ಜೀವನದ ದುರ್ದೆಸೆ ಎಂದೂ ಒದಗಬಾರದು. ಆ ಹಕ್ಕಿಗಳನ್ನು ಹಿಡಿಯಲು ಯಾರೂ ಬಲೆಯೊಡ್ಡಲಾಗದು. ಉದ್ದೇಶ ಸಾಧುವಿರಲಿ, ದುಷ್ಟವಿರಲಿ, ಅದರಿಂದಾಗುವುದು ಹಾನಿ ಮಾತ್ರ, ಇದು ಇತಿಹಾಸ ಕಲಿಸುವ ಪಾಠ.

- 'ಯುಗಪುರುಷ' ದಸರಾ ವಿಶೇಷಾಂಕದಲ್ಲಿ ಅಚ್ಚಾದದ್ದು.

೧೯೬೪

ಕಳೆದ ಅಧ್ಯಾಯದ ಮೇಲೆ ಬೆಳಕು

ಆಧುನಿಕ ಕನ್ನಡ ಸಾಹಿತ್ಯದ ಕೃಷಿಕಾರರಲ್ಲಿ ಅರವತ್ತು ದಾಟಿರುವವರೆಲ್ಲ ಅದೃಷ್ಟವಂತರು, ಒಂದೇ ಕಾರಣಕ್ಕಾಗಿ. ಉಳುಮೆಗೆ ಬಿತ್ತನೆಗೆ ಅವರಿಗೆ ದೊರೆತದ್ದು, ಹೊಚ್ಚ ಹೊಸ ಫಲವತ್ತಾದ ನೆಲ.

ಹಳೆಯ ತಲೆಮಾರಿನ ಕೆಲ ಜನ, 'ಆಧುನಿಕ'ರೆಂದು ಇವರನ್ನು ಜರೆದರು, ನಿಜ. ಆದರೆ ಅವರ ಗಂಟಲಿನಿಂದ ಹೊರಟದ್ದು ಕ್ಷೀಣಧ್ವನಿ. ಇವತ್ತೋ ನಾಳೆಯೋ ಎಂದು ದಿನವೆಣಿಸುತ್ತ ಮನೆಯ ಮೂಲೆ ಹಿಡಿದ ಗೂರಲು ಮುದುಕ ಗೊಣಗಿದರೆ ಯಾರು ಕೇಳುತ್ತಾರೆ? ನೂತನ ದಂಪತಿಗಳ, ಅವರ ಮುದ್ದು ಸಂತಾನದ, ಹಾರಾಟವೇ ಹಾರಾಟ.

ಇಂಗ್ಲಿಷ್ ವಿದ್ಯೆಯ ಸಂಸ್ಕಾರ ಪಡೆದ ನಮ್ಮ ಲೇಖಕರು, ಆ ಸಂಸ್ಕಾರದ ಪ್ರಭಾವಕ್ಕೊಳಗಾದವರು. 'ಅವಳ ತೊಡುಗೆ ಇವಳಿಗುಡಿಸಿ ನೋಡಬಯಸಿದವರು. ಹಾಡಬಯಸಿದವರು.' ಕವಿತೆ ಸಣ್ಣ ಕತೆ ಕಾದಂಬರಿ ನಾಟಕ ಲಲಿತ ಪ್ರಬಂಧಗಳು ತಮ್ಮ ಹೊಸತನದಿಂದ ಕನ್ನಡ ಸಾರಸ್ವತಲೋಕವನ್ನು ಮರುಳುಗೊಳಿಸಿದುವು. ಒಬ್ಬ ಲೇಖಕ ಇನ್ನೊಬ್ಬನ ಬೆನ್ನುತಟ್ಟಿದ. ಅವರಿಬ್ಬರನ್ನೂ ಭುಜಗಳ ಮೇಲೇರಿಸಿ ವಾಚಕ ಓಡಾಡಿದ. ಸಂಭ್ರಮವೋ ಸಂಭ್ರಮ—ನಮ್ಮ ಸಾಹಿತಿಗಳು ಕನ್ನಡ ಪಾದ್ರಿಗಳಾದರೆ, ಕಾವೇರಿ-ಗೋದಾವರಿಯರ ನಡುವಣ ನೆಲದ ಮೇಲೆಲ್ಲಾ ಓಡಾಡಿ ಕನ್ನಡ ಮತದ ಪ್ರಚಾರಮಾಡಿದರು, ಕನ್ನಡ ನಾಡಿನ ಪುನರುದಯದ ತುತೂರಿ ಊದಿದರು.

ಆದರೆ ಇಂದಿನ ತರುಣರು ನಾಳೆ ಮಧ್ಯವಯಸ್ಕರಾಗುತ್ತಾರೆ, ನಾಡದು ವೃದ್ಧರಾಗುತ್ತಾರೆ, ಈಗಿನ ತರುಣರ ಸ್ಥಾನದಲ್ಲಿ ಮುಂದೆ ಬೇರೆ ತರುಣರು ಕಾಣಿಸಿಕೊಳ್ಳುತ್ತಾರೆ. 'ಬೇರೆಯೇ ಭಾಷೆಯನ್ನಾಡುತ್ತಾರೆ.' ಇವತ್ತಿನ ನಾವೀನ್ಯ ಕಾಲ ಕಳೆದಂತೆ ಮಾಸುತ್ತದೆ, ಬೇರೊಂದು ಅದರ ಸ್ಥಳವನ್ನು ಆಕ್ರಮಿಸಿಕೊಂಡು ತಾನೇ ವಿಶ್ವಸುಂದರ ಎಂದು ಸಾರುತ್ತದೆ.

ಇದೊಂದು ಅಂಶವನ್ನು ನವೋದಯದ ಕನ್ನಡ ಸಾಹಿತಿಗಳು ಆಗ ಯೋಚಿಸಲಿಲ್ಲವೆನ್ನಿ.

ಹೊಸ ರಾಗ

ನವೋದಯದ ಮೋಹಕರಾಗವನ್ನು ನಮ್ಮ ಬರೆಹಗಾರರು ಹದಿನೈದು ಇಪ್ಪತ್ತು ವರುಷಗಳ ಕಾಲ ಒಂದೇ ಸಮನೆ ಹಾಡಿದರು. ಕೂಹೂ ಕೂಹೂ ಎಂದು ನುಡಿದು ನುಡಿದು ಕೋಗಿಲೆ ಬಳಲಿತು. ಅದು ಕಾಗೆಯಾಗಿ ಮಾರ್ಪಡುತ್ತಿದೆಯೇನೋ ಎಂಬ ಶಂಕೆ ಮೂಡಿತು ಕೆಲವರಲ್ಲಿ. ಬರಿಯ ಪಕ್ವಾನ್ನವನ್ನೇ ಅದೆಷ್ಟು ವರ್ಷತಾನೆ ಉಣ್ಣಬಹುದು? ಕನ್ನಡ ಸರಸ್ವತಿಯ ಆರೋಗ್ಯ ಕೆಟ್ಟಿತು.

ಅದಕ್ಕೆ ಔಷಧಿಯಾಗಿ ಬಂತು ಪ್ರಗತಿಶೀಲತೆಯ ವಾದ, ಆಯುರ್ವೇದದ ಮದ್ದಲ್ಲ, ಪಶ್ಚಿಮದ್ದು. ಸಾಹಿತ್ಯ ಲೋಕದಲ್ಲಿ ಸ್ವದೇಶಿಯೇನು, ವಿದೇಶೀ ಏನು? ಸಹಜವಾಗಿ ಕಾಣುವಂಥದೆಲ್ಲ ನಮ್ಮದೇ ತಾನೆ ?

ಕೆಂಪು ಕಣ್ಣುಗಳು. ಬೆಂಕಿಯುಗುಳುವ ನಾಲಿಗೆ, ಲೆಫ್ಟ್‌ರೈಟ್ ಪದಹತಿ. ಸಾಹಿತ್ಯ ನಾಟಕದ ಈ ಹೊಸ ನಟನನ್ನು ಕಂಡು ಪ್ರೇಕ್ಷಕ ಮಹಾಶಯರೆಲ್ಲ ಕಿವಿಗಡಚಿಕ್ಕುವ ಹಾಗೆ ಚಪ್ಪಾಳೆ ತಟ್ಟಿದರು.

ಧನ್ವಂತರಿ ಹೇಳಿದ: "ನಾನು ಫಾಸಿಸಮಿಗೆ ವಿರೋಧಿ; ಬಂಡವಾಳಶಾಹಿಗೆ ವಿರೋಧಿ, ಕನ್ನಡ ಸಾಹಿತ್ಯ ರೈತರ ಕೂಲಿಕಾರರ ಜೀವನವನ್ನು ಚಿತ್ರಿಸಬೇಕು. ದಲಿತರ ಪಕ್ಷವಹಿಸಬೇಕು. ಮೂಕ ಜನಕೋಟಿಗೆ ವಾಣಿಯಾಗಬೇಕು."

ಘೋಷಣೆಗಳ, ಪ್ರಸ್ತಾವನೆಗಳ, ನಿರ್ಣಯಗಳ ಸೂಜಿಮದ್ದು, ಮಾತ್ರೆ, ಮಿಕ್ಸ್‌ಚರ್‌ಗಳು ಸರಸ್ವತಿಯನ್ನು ದಂಗುಬಡಿಸಿದವು. ಆಕೆ ಕಾಯಕಲ್ಪ ಚಿಕಿತ್ಸೆಗೊಳಗಾದ ಆ ಅವಸ್ಥೆಯಲ್ಲಿ ವೀಣೆಯಿಂದ ಹೊರಟ ರಾಗ ಇಂಪಾಗಿರಲಿಲ್ಲ, ಆದರೆ ಹೊಸದಾಗಿತ್ತು. ಜನ ಕಿವಿಗೊಟ್ಟರು.

ಕೂಸು ಹುಟ್ಟಿದ ಬಗೆ

ಮುಷ್ಟಿಯಲುಗಿಸುತ್ತ ಅರಚುತ್ತ ಬಂದ ಆ ಶಿಶು ಹೇಗೆ ಜನ್ಮತಳೆಯಿತೆಂದು ಇಲ್ಲಿ ತಿಳಿಯುವುದು ಅಪ್ರಸ್ತುತವಾಗದು.

ಈ ದೇಶದಲ್ಲಿ ಪ್ರಗತಿಶೀಲ ಸಾಹಿತ್ಯದ ಆದ್ಯ ಪ್ರವರ್ತಕರೊಬ್ಬರು ತಮ್ಮ 'ನೆನಪು'ಗಳು ಎಂಬ ಲೇಖನದಲ್ಲಿ ಹೀಗೆ ಬರೆದಿದ್ದಾರೆ;

೧೯೩೫ ಒಂದು ವಿಶಿಷ್ಟ ವರುಷ. ಆಗ ನಾನು ಲಂಡನ್ನಿನಲ್ಲಿ ನನ್ನ ವಿದ್ಯಾರ್ಥಿ ಜೀವನದ ಕೊನೆಯ ದಿನಗಳನ್ನು ಕಳೆಯುತ್ತಿದ್ದೆ.

...... ಜಗತ್ತನ್ನೇ ನುಂಗಹೊರಟ ಆರ್ಥಿಕ ಬಿಕ್ಕಟ್ಟಿನ ರಾಜಕೀಯ ಪರಿಣಾಮದ ವಿರಾಟರೂಪ ಕಾಣಿಸಿಕೊಂಡಿತು. ಎಲ್ಲ ಕಡೆಗಳಿಂದಲೂ ಫಾಸಿಸ್ಟ್ ದಬ್ಬಾಳಿಕೆಯ ದುಃಖಪೂರ್ಣ ಕತೆಗಳೇ ಕೇಳಿಬರುತ್ತಿದ್ದುವು.

ಅಂಥ ದುಷ್ಟ ಶಕ್ತಿಗಿದಿರಾಗಿ ಜನತೆ ಎಚ್ಚೆತ್ತು ಪ್ರತಿಭಟಿಸಿದ್ದನ್ನು ನಾವು ಕಂಡೆವು. .....ಬುದ್ಧಿಜೀವಿಗಳಲ್ಲೂ ವಿಚಾರ ಕ್ರಾಂತಿಯಾಯಿತು. ಜರ್ಮನಿಯ ಮಹಾ ಸಾಹಿತಿಗಳಾದ ಥಾಮಸ್ ಮಾನ್, ಅರ್ನೆಸ್ಟ್ ಟಾಲರ್ ಮತ್ತಿತರರು ಅಂತರ ರಾಷ್ಟ್ರೀಯ ಖ್ಯಾತಿಯ ಐನ್‌ಸ್ಟೀನ್, ಹಾಬರ್ ಮತ್ತಿತರರು, ಕಲಾವಿದರು, ಸಂಗೀತಗಾರರು, ವೈದ್ಯರು ಇವರೆಲ್ಲಾ 'ದೇಶಭ್ರಷ್ಟ'ರಾಗಿ ಊಟಕ್ಕೆ ದಿಕ್ಕಿಲ್ಲದೆ ಅಲೆಯುತ್ತಿದ್ದ ಕಾಲ ಅದು.

ಕಣ್ಣೆದುರು ನಡೆಯುತ್ತಿದ್ದ ಘಟನೆಗಳು, ನಾವು ಓದುತ್ತಿದ್ದ ಪುಸ್ತಕಗಳು, ನಡೆಸುತ್ತಿದ್ದ ಚರ್ಚೆಗಳು, ನಮ್ಮನ್ನು ಹೊಸಬರನ್ನಾಗಿ ಮಾಡಿದುವು.... ನಾವು ಮೆಲ್ಲ ಮೆಲ್ಲನೆ ಸಮಾಜವಾದದ ಸಿದ್ಧಾಂತದತ್ತ ಸಾಗಿದೆವು.

ನಾವು ಹಲವಾರು ಇಂಗ್ಲಿಷ್ ಲೇಖಕರನ್ನು ಸಂಧಿಸುತ್ತಿದ್ದೆವು. ("ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಗತಿಶೀಲತೆಯ ವಾದ ಅರಂಭವಾಗಿದ್ದ ದಿನಗಳು.")

ಒಂದು ದಿನ, ಪ್ರಗತಿಶೀಲ ಲೇಖಕರ ಸಂಘದ ಬಗೆಗೆ ಮಾತಾಡೋಣವೆಂದು ರಾಲ್ಫ್ ಫಾಕ್ಸ್‌ನ್ನು (ಮಾರ್ಕ್ಸ್‌ವಾದಿ ವಿಚಾರಧಾರೆಯ ಪ್ರಖ್ಯಾತ ಆಂಗ್ಲ ಲೇಖಕ) ನನ್ನ ಕೊಠಡಿಗೆ ಊಟಕ್ಕೆ ಕರೆದೆ. ಸಾಹಿತ್ಯದ ಬಗ್ಗೆ ದೀರ್ಘಕಾಲ ಚರ್ಚೆ ನಡೆಯಿತು, ಪ್ರಗತಿಶೀಲ ವಾದವನ್ನು ಮುಂದಿಡುವ ಉದ್ವೇಗದಲ್ಲಿ ನಾವು ಸಂಕುಚಿತ ವಾದಕ್ಕೂ ಪೂರ್ವರೂಪಿತ ಅಭಿಪ್ರಾಯಗಳಿಗೂ ಎಡೆಕೊಡಬಾರದೆಂದು ಫಾಕ್ಸ್ ಎಚ್ಚರಿಸಿದರು....

ಮುಂದೆ ಒಂದು ದಿನ ನನ್ನ ಕೊಠಡಿಯಲ್ಲಿ ಒಂದು ಸಭೆ ಜರಗಿಸಿದೆವು. ಆರೇಳು ಜನರಿದ್ದೆವು. ಭಾರತೀಯ ಪ್ರಗತಿಶೀಲ ಲೇಖಕರ ಸಂಸ್ಥೆಯನ್ನು ಕಟ್ಟಲು ಒಂದು ಸಮಿತಿ ರಚಿಸಿದೆವು. ಆರಂಭದಲ್ಲಿ ಕೆಲಸ ನಿಧಾನವಾಗಿ ಸಾಗಿತು, ಆದರೆ ಸ್ವಲ್ಪ ದಿನಗಳಲೇ ಎಲ್ಲರೂ ಆಸಕ್ತಿ ತಳೆದೆವು. ಚಳವಳಿಯ ಗುರಿ ಉದ್ದೇಶಗಳನ್ನು ನಿರೂಪಿಸಿ, ಒಂದು ಘೋಷಣೆಯನ್ನು ಸಿದ್ಧಗೊಳಿಸಬೇಕೆಂದು ನಿರ್ಣಯಿಸಲಾಯಿತು. ನಾಲ್ಕೈದು ಜನರಿಗೆ ಆ ಕೆಲಸವನ್ನು ಒಪ್ಪಿಸಿದ್ದೂ ಆಯಿತು. ಮೊದಲು ಕರಡುಪ್ರತಿಯನ್ನು (ಮುಲ್ಕ್‌ರಾಜ್) ಆನಂದ್ ತಯಾರಿಸಿದರು. ಅದು ದೀರ್ಘವಾಗಿತ್ತು. ಇನ್ನೊಂದು ಕರಡನ್ನು ಡಾಕ್ಟರ್ ಘೋಷ್ ಸಿದ್ಧಗೊಳಿಸಿದ್ದರು. ಅವೆರಡರ ಆಧಾರದಮೇಲೆ ಮೂರನೆಯ ಕೊನೆಯ ಪ್ರತಿಯನ್ನು ನಾನು ಸಿದ್ಧಪಡಿಸಿದೆ.

ಬಲು ಸಂಭ್ರಮದಿಂದ ಮೊದಲ ದೊಡ್ಡ ಸಭೆಗೆ ತಯಾರಿ ನಡೆಯಿತು. ಲಂಡನ್, ಆಕ್ಸ್‌ಫರ್ಡ್, ಕ್ಯಾಂಬ್ರಿಜ್‌ಗಳಲ್ಲಿ ಸಾಹಿತ್ಯದ ಬಲವಿದ್ದ ಭಾರತೀಯರನ್ನೆಲ್ಲ ಕಂಡು ಮಾತಾಡಿದೆವು..... ನಮ್ಮ ಮೊದಲ ಸಭೆಗೆ ಆನಂದರನ್ನು ಅಧ್ಯಕ್ಷರಾಗಿ ಆರಿಸಿದೆವು.... ಕೆಲವು ಸಣ್ಣ ತಿದ್ದುಪಾಟುಗಳೊಡನೆ ಆ ಘೋಷಣೆ ಸ್ವೀಕೃತವಾಯಿತು. ಕಾರ್ಯಸಮಿತಿಗೆ

ಆಯ್ಕೆಯಾದ ನಾವು ನಾಲ್ವರು ಐವರಿಗೆ ಸಮಾರಂಭ ಯಶಸ್ವಿಯಾದಂತೆ ಕಂಡಿತು...

....ನಮ್ಮ ಪ್ರಗತಿಶೀಲ ಲೇಖಕರ ಸಂಘದ ಸಭೆ ತಿಂಗಳಿಗೆ ಒಂದು ಬಾರಿ ಇಲ್ಲವೆ ಎರಡು ಬಾರಿ ಲಂಡನ್ನಿನಲ್ಲಿ ಜರಗುತ್ತಿತ್ತು.

"ಆದರೆ ದೂರದ ಲಂಡನ್ನಿನಲ್ಲಿ ಕುಳಿತು ಮಾಡುವ ಇಂಥ ಕಾರ್ಯದಿಂದ ಹೆಚ್ಚಿನ ಪ್ರಯೋಜನ ಇರಲಿಲ್ಲ. ಭಾರತದ ವಿವಿಧ ಭಾಷೆಗಳಿಗೂ ಹರಡಿ, ಗುರಿಧ್ಯೇಯಗಳು ಕೃತಿಯಲ್ಲಿ ಕಂಡುಬಂದಾಗ ಮಾತ್ರ, ಪ್ರಗತಿಶೀಲ ಲೇಖಕರ ಚಳವಳಿಯೊಂದು ಪ್ರಭಾವಶಾಲಿಯಾದ ಶಕ್ತಿ ಆಗುವುದೆಂಬುದನ್ನು ನಾವು ಮನಗಂಡೆವು."

ಮೇಲಿನದನ್ನು ಬರೆದಿರುವ ವ್ಯಕ್ತಿ ಉರ್ದೂ ಲೇಖಕ ಸಜ್ಜದ್ ಜಹೀರ್.

ಅನಂತರದ ಕಥೆ

ಜಹೀರ್ ಭಾರತಕ್ಕೆ ಮರಳಿ ಬಂದರು. ಮುಲ್ಕ್‌ರಾಜ್ ಆನಂದ್ ಮತ್ತಿತರರೂ ತಾಯ್ನಾಡಿಗೆ ಮರಳಿದರು.

ಲಂಡನ್ನಿನಲ್ಲಿ ಮೊಳಕೆಯೊಡೆದು ಜೀವ ತಳೆದಿದ್ದ ಭಾರತೀಯ ಪ್ರಗತಿಶೀಲ ಲೇಖಕರ ಸಂಘದ ಎಳೆಯ ಗಿಡವನ್ನೂ ಅವರು ತಂದಿದ್ದರು ಜತೆಯಲ್ಲಿ. ಅದನ್ನು ಈ ನೆಲದಲ್ಲಿ ನೆಟ್ಟಿದರು.

'ಗಿಡ ಹೆಮ್ಮರವಾಗಬೇಕೆನ್ನುವ ಹೆಬ್ಬಯಕೆ ಅವರಿಗೆ. ಜಹೀರರು ಉತ್ತರದ ಭಾಷೆಗಳ ಲೇಖಕರೊಡನೆ ಸಂಪರ್ಕ ಬೆಳೆಸಿದರು. ಆ ಸಾಹಿತ್ಯ ಸಂಭವವನ್ನು ಕಂಡು ರಾಜಕೀಯ ನಸುನಕ್ಕಿತು.

ಲಂಡನ್ನಿನಲ್ಲಿ ಮಾರ್ಕ್ಸ್‌ವಾದೀ ವಿಚಾರಧಾರೆಗೆ ಮನಸೋತ ಅನೇಕ ಯುವಕರಲ್ಲಿ ಜಹೀರ್ ಒಬ್ಬರು. ಸ್ವದೇಶಕ್ಕೆ ಹಿಂತಿರುಗಿದಾಗ ಇಲ್ಲಿನ ಮಾರ್ಕ್ಸ್‌ವಾದೀ ಚಳವಳಿಯೊಡನೆ ಅವರು ಸಂಬಂಧ ಬೆಳೆಸಿದುದು ಸ್ವಾಭಾವಿಕ. ಬ್ರಿಟಿಷ್ ಸರಕಾರ ಮಾರ್ಕ್ಸ್ ಪಂಥಾನುಯಾಯಿಗಳ ಗುಂಪನ್ನು—ಕಮ್ಯೂನಿಸ್ಟ್ ಪಕ್ಷವನ್ನು ಅಕ್ರಮ ಸಂಸ್ಥೆಯೆಂದು ಸಾರಿತು. ಅದರ ಪ್ರಮುಖರು ಭೂಗತರಾಗಿದ್ದುಕೊಂಡು ಕಾರ್ಯಾಚರಣೆಯಲ್ಲಿ ತೊಡಗಿದ್ದರು. ಜಹೀರ್ ಅವರೊಡನೆ ವಿಚಾರವಿನಿಮಯ ನಡೆಸಿ ತಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಂಡುದು ಸಹಜವಾಗಿತ್ತು.

ಹಾಗೆ ಪ್ರಗತಿಶೀಲ ಲೇಖಕರ ಚಳವಳಿಯ ಸೂತ್ರಚಾಲನೆಯನ್ನು ಕಮ್ಯೂನಿಸ್ಟ್ ಪಕ್ಷ ಮಾಡತೊಡಗಿತು.

ಆದರೆ ಇದು ಅಂತರಂಗದ ಮಾತು. ಸಾಹಿತ್ಯಕ್ಕೆ ಸಂಬಂಧಿಸಿದ ಹೊಸ ವಾದದಿಂದ ಆಕರ್ಷಿತರಾದವರಿಗೆಲ್ಲ ಅದು ತಿಳಿಯದು. ತಿಳಿದ ಕೆಲವರಿಗೆ ಅದು ಮಹತ್ವದ್ದೆಂದು ತೋರಲಿಲ್ಲ.

ಪ್ರಗತಿಶೀಲ ಲೇಖಕರ ಎರಡು ಸಮ್ಮೇಳನಗಳು ಜರುಗಿದವು, ಮೊದಲಿನದಕ್ಕೆ ಪ್ರೇಮ್‌ಚಂದರೂ ಎರಡನೆಯದಕ್ಕೆ ಕವಿ ರವೀಂದ್ರರು ಅಧ್ಯಕ್ಷರಾಗಿದ್ದರು.

ದಕ್ಷಿಣಾಯನ

ದ್ವಿತೀಯ ಜಾಗತಿಕ ಯುದ್ಧದ ಆರಂಭ, ಇಲ್ಲಿ ಪ್ರಖರಗೊಂಡ ರಾಷ್ಟ್ರೀಯ ಹೋರಾಟ ರೂಪುತಳೆದ ಪ್ರಕ್ಷುಬ್ಧ ಪರಿಸ್ಥಿತಿ—ಇವುಗಳ ದೆಸೆಯಿಂದ ಪ್ರಗತಿಶೀಲ ಸಾಹಿತ್ಯ ಚಳವಳಿಯ ಮುನ್ನಡೆ ಕುಂಠಿತವಾಯಿತು.

ಆ ಅವಧಿಯಿಂದ ಮುಂದೆ ಹತ್ತು ಹದಿನೈದು ವರ್ಷಗಳತನಕ ಪ್ರಗತಿಶೀಲ ಲೇಖಕ ಚಳವಳಿಯು ಕಮ್ಯೂನಿಸ್ಟ್ ಪಕ್ಷದ ಕಾಲ್ತೊತ್ತಾಯಿತೆಂಬುದು ವಿಚಿತ್ರವೆಂದು ತೋರಬಹುದಾದರೂ ನಿಜವಾಗಿರುವ ಸಂಗತಿ.

ರಷ್ಯ ಇಂಗ್ಲಿಷರ ಮಿತ್ರರಾಷ್ಟ್ರವಾದಮೇಲೆ, ನಡೆಯುತ್ತಿರುವುದು ಜನತಾ ಯುದ್ಧವೆಂದು ಭಾರತೀಯ ಕಮ್ಯೂನಿಸ್ಟರು ಸಾರಿದ ಮೇಲೆ, ಇಲ್ಲಿನ ಕಮ್ಯೂನಿಸ್ಟ್ ಪಕ್ಷವನ್ನು ಬ್ರಿಟಿಷ್ ಸರಕಾರ ಕ್ರಮಬದ್ಧಗೊಳಿಸಿತು. ರಾಷ್ಟ್ರೀಯ ನಾಯಕತ್ವವು ಸೆರೆಮನೆಯಲ್ಲಿದ್ದ ವೇಳೆಯಲ್ಲಿ ರೈತರನ್ನೂ ಕಾರ್ಮಿಕರನ್ನೂ ವಿದ್ಯಾರ್ಥಿಗಳನ್ನೂ ಸಂಘಟಿಸುತ್ತ ಕಮ್ಯೂನಿಸ್ಟ್ ಪಕ್ಷವು ಅವರ ರಾಜಕೀಯ ನಾಯಕನೆನ್ನಿಸಿಕೊಂಡಿತು. ಮಧ್ಯಮವರ್ಗದ ಮೇಲೆಯೂ ಪ್ರಭಾವ ಬೀರಲು ಬಯಸಿ, ಜನತಾ ರಂಗಭೂಮಿ, ಪ್ರಗತಿಶೀಲ ಲೇಖಕರ ಸಂಘ, ಭಾರತ-ರಷ್ಯಾ ಸ್ನೇಹ ಸಂಘ—ಇಂತಹ ಸಂಸ್ಥೆಗಳನ್ನು ಕಟ್ಟತೊಡಗಿತು.

ಆಗ ಬೊಂಬಾಯಿಯಲ್ಲಿ ಜರಗಿತು, ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನ. ಅದರಲ್ಲಿ ಮುಖ್ಯವಾಗಿ ಭಾಗವಹಿಸಿದವರು ಕಮ್ಯೂನಿಸ್ಟ್ ಪಂಥಾನುಯಾಯಿಗಳಾದ ಲೇಖಕರು.

ಅಲ್ಲಿಂದ ತಮ್ಮ ಪ್ರಾಂತಗಳಿಗೆ ಮರಳಿದಮೇಲೆ, ಸ್ಥಳೀಯ ಕಮ್ಯೂನಿಸ್ಟ್ ಪಕ್ಷಗಳ ನೇತೃತ್ವದಲ್ಲಿ, ಆ ಲೇಖಕರು ಪ್ರ. ಶೀ. ಲೇ. ಸಂಘಗಳನ್ನು ಕಟ್ಟತೊಡಗಿದರು.

ಹಾಗೆ ಕರ್ನಾಟಕದಲ್ಲಿ ಆರಂಭವಾಯಿತು, ಪ್ರಗತಿಶೀಲ ಲೇಖಕರ ಚಳವಳಿ.

ಮೂರು ದಾರಿ

ಕನ್ನಡದಲ್ಲಿ ಪ್ರಗತಿಶೀಲ ಲೇಖಕರ ಸಂಘಟನೆ ಏಕಮುಖವಾಗಿ ಎಂದೂ ಚಲಿಸಲಿಲ್ಲ.

ಜಹೀರ್ ಭಾರತಕ್ಕೆ ಬರುತ್ತ ದಾರಿಯಲ್ಲಿ ಪ್ಯಾರಿಸಿನಲ್ಲಿ ಫ್ರೆಂಚ್ ಕವಿ ಲೂಯಿ ಅರಗನ್‌ರನ್ನು ಕಂಡಿದ್ದರಂತೆ.

"ಸಾಹಿತ್ಯಗಳನ್ನು ಸಂಘಟಿಸುವ ವಿಷಯದಲ್ಲಿ ನಿಮ್ಮ ಅನುಭವವೇನು?" ಎಂದು ಜಹೀರ್ ಕೇಳಿದಾಗ ಅರಗನ್ ನಗುತ್ತ ಭುಜ ಕುಪ್ಪಳಿಸಿ ಅಂದರಂತೆ: "ಅದೊಂದು

ವಿಷಯ ಕೇಳಬೇಡಿ, ಸಾಹಿತಿಗಳನ್ನು ಸಂಘಟಿಸುವುದರಷ್ಟು ಕಷ್ಟದ ಕೆಲಸ ಇನ್ನೊಂದಿಲ್ಲ. ಪ್ರತಿಯೊಬ್ಬನೂ ವಿಶಿಷ್ಟ ಹಾದಿಯನ್ನೇ ಅಪೇಕ್ಷಿಸುತ್ತಾನೆ."

ಕರ್ನಾಟಕದ ಮಟ್ಟಿಕ್ಕೆ ಅದು ಅಕ್ಷರಶಃ ನಿಜವಾಯಿತು. ಬೆಂಗಳೂರು, ಮಂಗಳೂರು, ಧಾರವಾಡಗಳಲ್ಲಿ ಪ್ರ. ಶೀ. ಲೇ. ಸಂಘಗಳು ಸ್ವತಂತ್ರ ಘಟಕಗಳಂತೆ ವರ್ತಿಸಿದುವು. ಪ್ರಗತಿಶೀಲತೆಯ ಮುದ್ರಾಧಾರಣೆಗೆ ಮುಂದೆಬಂದಿದ್ದ ಒಬ್ಬ ಕಾದಂಬರಿಕಾರರೂ ಒಬ್ಬ ನಾಟಕಕಾರರೂ ಎರಡು ಧ್ರುವಗಳಾದರು. ಆರೋಪ ಪ್ರತ್ಯಾರೋಪಗಳ ಗೊಂದಲ ಹಲವರ ಪಾಲಿಗೆ ಉಚಿತ ಮನೋರಂಜನೆಯಾಯಿತು.

ಪ್ರಗತಿಶೀಲರೆನ್ನಿಸಿಕೊಂಡವರ ಪ್ರಚಾರ ವೈಖರಿಯಿಂದ ಗಾಬರಿಗೊಂಡ ಅನೇಕ ಲೇಖಕರು, ಪ್ರಗತಿಶೀಲತೆಯ ವಾದದಿಂದ ಆಕರ್ಷಿತರಾದರೂ ಆ ಚಳವಳಿಯಿಂದ ಹರದಾರಿ ದೂರ ಉಳಿದರು.

ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನದಲ್ಲಿ (೧೯೪೩) ಮುಖ ತೋರಿಸಿದ ಪ್ರಗತಿಶೀಲ ಸಾಹಿತ್ಯ, ರಬಕವಿಯ ಸಮ್ಮೇಳನದಲ್ಲಿ (೧೯೪೪) ತುತೂರಿಯೂದಿತು. ಕ್ರಮೇಣ ಜಗಳ ಒಳಜಗಳಗಳಿಂದ ದುರ್ಬಲಗೊಂಡು ಬಹುಮಟ್ಟಿಗೆ ನಿಷ್ಕ್ರಿಯ ವಾಯಿತು.

ಭಾರತದಲ್ಲಿ ಪ್ರಗತಿಶೀಲರ ಚಳವಳಿಯನ್ನು ಪುನಃ ಸಂಘಟಿಸುವ ಪ್ರಯತ್ನವನ್ನು ಕಮ್ಯೂನಿಸ್ಟ್ ಪಕ್ಷ ನಡೆಸಿದ್ದು ೧೯೫೩ರಲ್ಲಿ. ಆಮೇಲೆ ಕರ್ನಾಟಕದಲ್ಲೂ ಪ್ರಗತಿಯ ಜಾಗಟೆ ಸದ್ದು ನಾಲ್ಕು ದಿನ ಕೇಳಿಸಿತು.

ಆ ಸದ್ದಿನೊಡನೆ ಅಂಕದ ಪರದೆಯೇ ಬಿದ್ದಿತೆನ್ನಬೇಕು.

ಇನ್ನೊಂದು ಮುಖ

ಮೇಲಿನದೆಲ್ಲ ಒಂದು ಮುಖ ; ಚಳಿವಳಿ, ಸಂಘಟನೆಗಳದ್ದು. ಸಾಹಿತ್ಯಕ್ಷೇತ್ರದಲ್ಲಿ ರಾಜಕಾರಣ ನಡೆಸಿದ ಕಸರತ್ತಿಗೆ ಸಂಬಂಧಿಸಿದ್ದು.

ಇನ್ನೊಂದು ಮುಖ; ಸಾಹಿತ್ಯಲೋಕದಲ್ಲಿ ಪ್ರಗತಿಶೀಲತೆಯ ವಾದ ಬೀರಿದ ಪ್ರಭಾವದ್ದು.

ಈ ಎರಡನೆಯ ಮುಖ ಹೆಚ್ಚು ಸ್ಪಷ್ಟವಾಗಿದೆ. ಹೆಚ್ಚು ಆಕರ್ಷಕವಾಗಿದೆ. ಸಾಹಿತ್ಯದ ಇತಿಹಾಸಕಾರ ಅದರ ರೂಪು ರೇಖೆಗಳನ್ನು ತನ್ನ ಟಿಪ್ಪಣಿಪುಸ್ತಕವಲ್ಲಿ ಆಗಲೇ ಗುರುತಿಸಿಕೊಂಡಿದ್ದಾನೆ.

ಇದು ಭಾರತದ ಎಲ್ಲ ಪ್ರಮುಖ ಭಾಷೆಗಳಲ್ಲೂ ಎದ್ದುಕಾಣುವ ಅಂಶ, ಕನ್ನಡದಲ್ಲೂ ಅಷ್ಟೆ.

- 'ಜನಪ್ರಗತಿ' ದೀಪಾವಳಿ ಸಂಚಿಕೆಯಲ್ಲಿ ಪ್ರಕಟಿತ

೧೯೬೪

ಕನ್ನಡ ಸಣ್ಣಕತೆ ಮೇಲೆ ಪಶ್ಚಿಮದ ಪ್ರಭಾವ

"ಇದೇನು, ಇಂಥಾ ಹೊತ್ನಲ್ಲಿ ಒಬ್ಬರೇ ಹೊರಟಿದ್ದೀರಿ?"

"ಅಯ್ಯೋ! ಏನು ಹೇಳ್ಲಿ ನನ್ನ ಕಥೆ!"

ಅಥವಾ "ಅವನು ಕಳೆದ ಶತಮಾನದ ಅಸಾಧಾರಣ ಮನುಷ್ಯನಾಗಿದ್ದ. ಅವನ ಬಗೆಗೆ ಹುಟ್ಟಿಕೊಂಡಿರುವ ಕಥೆಗಳು ಅನೇಕ."

ಇಲ್ಲವೆ—"ಅಜ್ಜೀ, ಒಂದು ಕಥೆ ಹೇಳಜ್ಜಿ..."

—ಇಂಥ ಎಲ್ಲ ಕಥೆಗಳಿಗೆ ಸಂಬಂಧಿಸಿ ಪೂರ್ವ-ಪಶ್ಚಿಮಗಳ ಪ್ರಭಾವದ ಮಾತೇ ಇಲ್ಲ. ಮನುಷ್ಯ ಮಾತನಾಡತೊಡಗಿದಾಗಲೇ ಈ ಬಗೆಯ ಕಥೆಗಳನ್ನೂ ಕಟ್ಟಿದ ಎಂದರೆ ಸಾಕು. ಆದರೆ ಕೆಲವರಿಗೆ ಈ ರೀತಿಯ ಹೇಳಿಕೆ ಸಮ್ಮತವಿಲ್ಲ.

"ಇಂಥ ಕಥೆಗಳಿಗೆ ಮಾತ್ರ ಯಾಕೆ? ಎಲ್ಲ ಕಥೆಗಳೂ ಅಷ್ಟೇ. ಪಶ್ಚಿಮದ ಕಥಾ ಪ್ರಕಾರಕ್ಕೂ ನಮ್ಮದಕ್ಕೂ ಯಾವ ಸಂಬಂಧವೂ ಇಲ್ಲ. ಪಂಚತಂತ್ರದ ಹಿತೋಪದೇಶದ ಕಥೆಗಳನ್ನು ಲೋಕಕ್ಕೆ ಕೊಟ್ಟವರು ಯಾರು? ನಾವಲ್ಲವೆ? ಸಂಸ್ಕೃತದಲ್ಲಿ ರಚಿತವಾದ ಅಸಂಖ್ಯ ಕಥೆಗಳು, ಬುದ್ಧನ ಜಾತಕ ಕತೆಗಳು ಇವೆಲ್ಲ ವಿಶ್ವಸಾಹಿತ್ಯಕ್ಕೆ ನಮ್ಮ ಕಾಣ್ಕೆಯಲ್ಲವೆ?—ಎಂದು ಇವರು ಸವಾಲು ಹಾಕುತ್ತಾರೆ.

ಇದರಲ್ಲಿ ತಥ್ಯಾಂಶವಿಲ್ಲದಿಲ್ಲ. ಮೂರು ಸಾವಿರವೋ, ಐದು ಸಾವಿರವೋ ವರ್ಷಗಳಿಗೆ ಹಿಂದೆಯೇ ನಾವು ಕತೆ ಕಟ್ಟಿದ್ದು ನಿಜ. ಅಂದಮಾತ್ರಕ್ಕೆ ಭಾವಪರವಶವಾಗಿ ಸಣ್ಣಕತೆಯ ಪ್ರಕಾರವನ್ನು ಲೋಕಕ್ಕೆ ಕೊಟ್ಟವರೇ ನಾವು—ಎನ್ನಲಾದೀತೆ? ಹಾಗೆ ಮಾಡಬಾರದು—ಎನ್ನುತ್ತಾನೆ ಸಾಹಿತ್ಯದ ಇತಿಹಾಸಕಾರ.

ಈಗಿನ ರೀತಿಯಲ್ಲಿ ಆಧುನಿಕ ಸಣ್ಣಕತೆಯ ಪ್ರಕಾರ ಪಶ್ಚಿಮದಿಂದ ಬಂದದ್ದು. ಎಡ್ಗಾರ್ ಅಲನ್ ಪೋ ಅದರ ಜನಕ. 'A Manuscirpt Found in a Bottle ' ಆ ಮೊದಲ ಕತೆಯ ಹೆಸರು (೧೮೩೩).

ಪೋನಂತೆಯೇ ಶ್ರೇಷ್ಠ ಸಣ್ಣಕತೆಗಳನ್ನು ಅಮೆರಿಕದಲ್ಲಿ ಇನ್ನೂ ಅನೇಕರು ರಚಿಸಿದರು. ಹಾಥಾರ್ನ್, ಇರ್ವಿಂಗ್, ಓ ಹೆನ್ರಿ—ಮತ್ತಿತರರು.

ಇವರ ಕೃತಿಗಳ ರಮ್ಯತೆ ರಂಜಕತೆ, ಜಾಕ್ ಲಂಡನ್ನನ ಸಣ್ಣಕತೆಗಳಲ್ಲಿ ಸಿಡಿಲಾಗಿ

ಗುಡುಗಾಗಿ ಪ್ರತಿಧ್ವನಿಸಿತು. ಮುಂದೆ ಹೆಮಿಂಗ್‌ವೇ, ಫಾಕ್ನರ್ ಮತ್ತಿತರರ ಕೈಯಲ್ಲಿ ಕತೆ ಹೆಚ್ಚು ಆಳವಾಯಿತು, ವಿಸ್ತಾರಗೊಂಡಿತು.

ಆಧುನಿಕ ಕನ್ನಡ ಸಣ್ಣಕತೆಗಾರರಿಗೆ—ಅವರಲ್ಲಿ ಹೆಚ್ಚಿನವರಿಗೆ—ಮೇಲಿನ ಕೃಷಿಕಾರರು ಯಾರೂ ಅಪರಿಚಿತರಲ್ಲ. ಅದೇ ರೀತಿ ಐರೋಪ್ಯ ಸಾಹಿತ್ಯದ ಕಥಾಲೇಖಕರನ್ನೂ ಇವರು ಬಲ್ಲವರೇ.

ರತ್ನಹಾರ

ಕಥಾ—ಸರಸ್ವತಿಯ ಕೊರಳನ್ನು ಸೊಗಸಾದ ರತ್ನಹಾರದಿಂದ ಅಲಂಕರಿಸಿದವರು ಫ್ರಾನ್ಸಿನ ಮೊಪಾಸಾ. ಬಹಳ ಕಾಲ ಉಳಿಯುವಂತಹ ನೂರಾರು ಸಣ್ಣಕತೆಗಳನ್ನು ಅವನು ಬರೆದ. ಬದುಕಿನ ರುದ್ರರಮ್ಯ ಚಿತ್ರಗಳನ್ನು ಬಾಲ್ಜಾಕ್ ತನ್ನ ಕತೆಗಳಲ್ಲಿ ನೀಡಿದ. ಈತ ಹಾಗೂ ಇವನ ಸಮಕಾಲೀನರು ಹತ್ತೊಂಬತ್ತನೆಯ ಶತಮಾನದ ಫ್ರಾನ್ಸಿನಲ್ಲಿ ಉತ್ತಮ ಕತೆಗಳನ್ನು ಕಡೆದ ಶಿಲ್ಪಿಗಳಾದರು.

ರಷ್ಯದಲ್ಲಿ ಆ ಕಾಲದಲ್ಲಿ ನಡೆದುದೂ ಕಲೆಯ ದೃಷ್ಟಿಯಿಂದ ಕುಸುರಿನ ಕೆಲಸವೇ. ಪೂಷ್ಕಿನ್ (ಹೆಚ್ಚಿನ ಕಾಲ ಪ್ಯಾರಿಸ್ಸಿನಲ್ಲಿರುತ್ತಿದ್ದ) ತೂರ್ಗೆನೀಫ್, ಟಾಲ್‌ಸ್ಟಾಯ್ ರಚಿಸಿದ ಕತೆಗಳು ರಷ್ಯದಲ್ಲೂ ಇತರ ರಾಷ್ಟ್ರಗಳಲ್ಲೂ ಮನ್ನಣೆಗೆ ಪಾತ್ರವಾದುವು.

ಟಾಲ್‌ಸ್ಟಾಯ್‌ಯ ನೀತಿಬೋಧೆ, ಚೆಕಾಫನ ಕತೆಗಳಲ್ಲಿ ರಷ್ಯದ ಬದುಕಿನ ಸೂಕ್ಷ್ಮ ಚಿತ್ರಣಕ್ಕೆ ಎಡೆಮಾಡಿಕೊಟ್ಟಿತು. ಸಂವೇದನಾಶೀಲತೆ ಹೊಸ ಮೆರುಗನ್ನು ಆ ಕತೆಗಳಿಗೆ ಕೊಟ್ಟಿತು.

ಹಾರವಲ್ಲ, ಖಡ್ಗ

ಕಥಾವಸ್ತು ಗೌಣವಾಗಿ ಬದುಕಿನ ಕಲಾತ್ಮಕ ಚಿತ್ರಣವೇ ಪ್ರಧಾನವಾಗಿದ್ದ ರಷ್ಯದ ಸಾಹಿತ್ಯ ಪರಂಪರೆಯನ್ನು ಗಾರ್ಕಿ, ಪ್ರಕ್ಷುಬ್ಧ ಕಡಲಿನಲ್ಲಿ ವಿಹಾರಕ್ಕೆ ಕರೆದೊಯ್ದ, 'ಜನತೆ'ಗಾಗಿ ಬರೆದ. ಪರಿಸ್ಥಿತಿಯ ವಿರುದ್ಧ ಬಂಡಾಯವೇಳುವ ಹೊಸ ಮಾನವನನ್ನು ಅವನು ಚಿತ್ರಿಸಿದ.

ಇಂಗ್ಲೆಂಡಿನಲ್ಲಿ ಹತ್ತೊಂಭತ್ತನೆಯ ಶತಮಾನವನ್ನು ಕಾದಂಬರಿಯೇ ಆಳಿದರೂ, ಮುಂದೆ ಕ್ರಮೇಣ ವೆಲ್ಸ್, ಗಾಲ್ಸ್‌ವರ್ದಿ, (ಡಿ.ಎಚ್.) ಲಾರೆನ್ಸ್, ಮಾಮ್ ಸಣ್ಣಕತೆಗಳ ಅಪೂರ್ವ ಕೊಡುಗೆಯನ್ನು ನೀಡಿದರು.

ಖಡ್ಗವಲ್ಲ, ಪಾತಾಳಗರಡಿ

ರಮ್ಯತೆಯ ಹಾರವನ್ನು ಕಿತ್ತೊಗೆದು ರಾಲ್ಫ್, ಫಾಕ್ಸ್‌ನಂತಹ ಯುವಕ ಲೇಖಕರು ಇಂಗ್ಲೆಂಡಿನ ಗಾರ್ಕಿಗಳಾದರು.

ಖಡ್ಗದ ಆಟ ನಾವೀನ್ಯ ಕಳೆದುಕೊಂಡೊಡನೆ ಆಂಗ್ಲ ಸಣ್ಣಕತೆ (ಕವಿತೆಯಿಂದ ಮೊದಲಾಗಿ ಇನ್ನಿತರ ಪ್ರಕಾರಗಳನ್ನೂ ಒಳಗೊಂಡ ಸಾಹಿತ್ಯ) ಮಾನವ ವ್ಯಾಪಾರಗಳ ಆಳವನ್ನು ಮುಟ್ಟುವ, ತಟ್ಟುವ, ಕದಕುವ ಪಾತಾಳಗರಡಿಯಾಯಿತು. 'ಸುಪ್ತಚಿತ್ತದ ಪ್ರವೃತ್ತಿ ವೈಚಿತ್ರ್ಯ'ವನ್ನು ಕತೆಗಳು ಬಹಿರಂಗ ಪಡಿಸಿದುವು.

ಅಟ್ಲಾಂಟಿಕಿನಾಚೆಗೆ ಹೆಮಿಂಗ್‌ವೇಯಾದರೆ, ಈ ಕಡೆಗೆ ಕ್ಯಾಥರೀನ್ ಮ್ಯಾನ್ಸ್ ಫೀಲ್ಡ್ ಅಪೂರ್ವವಾದ ನವ್ಯ ಆಭರಣಗಳನ್ನು ಕಥಾದೇವಿಗೆ ತೊಡಿಸಿದರು.

ಪಶ್ಚಿಮದಿಂದ ಇಷ್ಟೆಲ್ಲವನ್ನೂ ಮೋಡಗಳು ನಮ್ಮಲ್ಲಿಗೆ ಹೊತ್ತುತಂದುವು; ತಂದು ಸುರಿದುವು, ಬಂದುದು ಇಲ್ಲಿನ ಮಣ್ಣಿನಲ್ಲಿ ಇಂಗಿ, ನಮ್ಮ ಕೃಷಿ ಫಲವತ್ತಾಯಿತು.

೧೯೦೫ ಜೂನ್ ೩೦ರಂದು ತಮ್ಮ ಕೃತಿ(ವಾಗ್ದೇವಿ) ಗೆ (ಇಂಗ್ಲಿಷಿನಲ್ಲಿ) ಬರೆದಿರುವ ಮುನ್ನುಡಿಯಲ್ಲಿ ಕರ್ತೃ ಬೋಳಾರ ಬಾಬುರಾಯರು ಹೀಗೆ ಹೇಳಿದ್ದಾರೆ:

"In modern times as western education advances, novels in the vernacular languages are springing up and a few works on fiction in Kanarese language as well have adorned the literature of the day in the Karnataka country."

ಎಂ. ಎಸ್. ಪುಟ್ಟಣ್ಣ ಅವರು ತಮ್ಮದೊಂದು ಕೃತಿಗೆ ('ಸುಮತಿ ಮದನ ಕುಮಾರರ ಚರಿತ್ರೆ') ೧೯೧೩ ಜನವರಿ ೧೩ರಂದು ಬರೆದಿರುವ ಮುನ್ನುಡಿಯಲ್ಲಿ ಹೀಗಿದೆ;

"As the 'History of Sandford and Mertion' (by Thomas Day), which is my ideal, deserves to be in the hands of all teachers and pupils, all parents and children it is my prayer that this book, written after the model of that immortal work, may not be thrown away without a calm perusal by all those interested in the cause of education."

ಸೋಸಲೆ ಗರಳಪುರಿ ಶಾಸ್ತ್ರಿಗಳ 'ಇದ್ದರೂ ಇರಬಹುದು' ಗ್ರಂಥದ ಪ್ರಸ್ತಾವನೆಯಲ್ಲಿ ಈ ರೀತಿ ಇದೆ

'......ಈ ಕಥಾ ಸಂಗ್ರಹದ ಮೊದಲನೆಯ ಮತ್ತು ಎರಡನೆಯ ಕತೆಗಳು ೧೯೧೩ನೆಯ ಇಸವಿಯಲ್ಲಿ ನಾನು ಲಂಡನ್ ನಗರದಲ್ಲಿದ್ದಾಗ ಬರೆದವು. ಇನ್ನೂ ಎರಡು ಕತೆಗಳು ಲಂಡನ್‌ನಲ್ಲಿ ೧೯೧೯ರಲ್ಲಿ ಬರೆದವು'

ಹೀಗೆ, ಆಂಗ್ಲಭಾಷೆಯೂ ಸಾಹಿತ್ಯವೂ ತಮ್ಮ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಆಧುನಿಕ ಕನ್ನಡ ಸಾಹಿತ್ಯ ಕೃಷಿಕ್ಷೇತ್ರದ ಮೊದಲಿಗರು ಒಪ್ಪಿಕೊಂಡಿದ್ದಾರೆ ಎಂದಾಯಿತು.

ಅರ್ಧ ಶತಕದ ಸುದ್ದಿ

ಒಪ್ಪಲಿ ಒಪ್ಪದಿರಲಿ, ಇಂಗ್ಲಿಷ್ ಭಾಷ್ ನಮ್ಮ ಮನೆಯ ಅನೇಕ ಕಿಟಿಕಿಗಳನ್ನು ತೆರೆಯಿತೆಂಬುದು ನಿರ್ವಿವಾದ.

ಕನ್ನಡದ ಸಣ್ಣಕತೆಯ ಮೊದಲಿಗರೆಂದು ಕೆರೂರ್, ಪಂಜೆ, ಕಾಮತರನ್ನು ಸ್ಮರಿಸುವುದು ನ್ಯಾಯೋಚಿತ. ಹೀಗಿದ್ದರೂ, ಆ ಪ್ರಕಾರಕ್ಕೆ ಕನ್ನಡ ಸಾಹಿತ್ಯದಲ್ಲಿ ಶಾಶ್ವತ ಸ್ಥಾನವನ್ನು ದೊರಕಿಸಿ ಕೊಟ್ಟವರು ಶ್ರೀನಿವಾಸರೊಬ್ಬರೇ. ಇವರೆಲ್ಲರಿಂದ ಮೊದಲ್ಗೊಂಡು ಈ ಪೀಳಿಗೆಯ ಸದಾಶಿವ, ಪೂರ್ಣಚಂದ್ರ ತೇಜಸ್ವಿಯರ ತನಕ, ಕನ್ನಡದ ಬಹ್ವಂಶ ಸಣ್ಣಕತೆಗಾರರೆಲ್ಲ ಇಂಗ್ಲಿಷ್ ವಿದ್ಯಾಭ್ಯಾಸ ಹಾಗೂ ಸಾಹಿತ್ಯಾಧ್ಯಯನಗಳ ಪ್ರಭಾವಕ್ಕೆ ಒಳಗಾಗಿದ್ದರೆ, ಯುರೋಪಿನ ಇಂಗ್ಲಿಷೇತರ ಸಾಹಿತ್ಯವನ್ನೂ ಇಂಗ್ಲಿಷಿನ ಮೂಲಕ ಓದಿ ಅವರು ಮನನ ಮಾಡಿಕೊಂಡಿದ್ದಾರೆ.

ಇಂಗ್ಲಿಷಿನಲ್ಲಿ ಸಣ್ಣಕತೆ ದಾಟಿಬಂದ ಮಜಲುಗಳ ಪ್ರತಿಬಿಂಬವನ್ನು ಕನ್ನಡ ಕಥಾವಾಹಿನಿಯಲ್ಲೂ ನಾವು ಕಾಣಬಹುದು. ಕಳೆದ ಐವತ್ತು ವರ್ಷಗಳ ಕಾಲಾವಧಿಯನ್ನು ಸ್ಥೂಲವಾಗಿ ಹೀಗೆ ಗುರುತಿಸುವುದು ಸಾಧ್ಯ: ಸಾಂಪ್ರದಾಯಿಕ ಕಥನ (ರಮ್ಯತೆ, ರಂಜಕತೆ) ಪ್ರಗತಿಶೀಲ ಪ್ರವೃತ್ತಿ (ಆಯುಧವಾಗಿ ಮಾರ್ಪಟ್ಟ ಲೇಖನಿ), ನವ್ಯ ಮಾರ್ಗ (ಪಾತಾಳಗರಡಿ).

ಸಮಾಜದ ವರ್ಗೀಕರಣ ಹಾಗೂ ವರ್ಗಸಮರವನ್ನು ಪ್ರತಿಪಾದಿಸುವ ಮಾರ್ಕ್ಸ್ ಸಿದ್ಧಾಂತದಿಂದ ಪಶ್ಚಿಮದ ಅನೇಕ ಕತೆಗಾರರು ಪ್ರಭಾವಿತರಾದರು. ಪ್ರಗತಿಶೀಲತೆಯ ರಣನಿನಾದಕ್ಕೆ ಅದು ತಳಹದಿಯಾಯಿತು. ಫ್ರಾಯ್ಡ್ ಯೂಂಗರ ಮನೋವಿಜ್ಞಾನದಿಂದ ಪ್ರೇರಿತರಾಗಿ ಪಶ್ಚಿಮದ ಕತೆಗಾರರನೇಕರು ಸಾಹಿತ್ಯದಲ್ಲಿ ಹೊಸತನವನ್ನು ತಂದರು. ನವ್ಯಮಾರ್ಗಕ್ಕೆ ಅದು ಹಾಸುಗಲ್ಲಾಯಿತು.

ಕನ್ನಡ ಕಥಾಲೋಕದಲ್ಲಿ ನಾವು ಕಾಣುವುದೂ ಅದೇ ಚಿತ್ರವನ್ನು; ಅವೇ ಮೆಟ್ಟಿಲುಗಳನ್ನು. ಪ್ರತಿ ಸಲವೂ ಹಳೆಯದನ್ನು ಜರೆದೇ ಹೊಸತು ತನ್ನ ಘೋಷಮೊಳಗಿಸಿದರೂ ವಾಸ್ತವವಾಗಿ ಇವು ಒಂದರಿಂದ ಇನ್ನೊಂದು ಪ್ರತ್ಯೇಕವಲ್ಲ. ಪ್ರತಿಯೊಂದು ಘಟ್ಟದಲ್ಲಿ ನಡೆದಿರುವುದೂ ಹಿಂದಿನ ಕಥಾರಚನಾವಿಧಾನವನ್ನು ವಿಸ್ತರಿಸುವ, ಆಳಗೊಳಿಸುವ ಪ್ರಯತ್ನ.

'ಕಿರಿದರೊಳ್...'

ಪ್ರಕಾರ, ವಸ್ತುವಿನ್ಯಾಸ, ತಂತ್ರ, ವಿಚಾರಧಾರೆ—ಇಂಗ್ಲಿಷಿನ ದಾರಿಯಾಗಿ ಬಂದಿತಾದರೂ, ನಮ್ಮ ಕತೆಗಾರರೆಲ್ಲ ಚಿತ್ರಿಸಿರುವುದು ಸುತ್ತಮುತ್ತಲಿನ ಬದುಕನ್ನೇ. ಕತೆ ರಂಜಕವಾಗಿರಬೇಕೆ? ವಿಸ್ಮಯದ ಅಂಶವನ್ನು ಸೂಚಿಸಬೇಕೆ? ಕಲ್ಪನೆಯ

ಅಶ್ವಾರೋಹಣ ಬೇಕೆ ಕತೆಯಲ್ಲಿ?

ಅದರಲ್ಲಿ ಸಮಾಜ ಪ್ರಜ್ಞೆ ರಾಷ್ಟ್ರಪ್ರಜ್ಞೆ ಗಳಿರಬೇಕೆ?ಸುಪ್ತಚಿತ್ರ ವ್ಯಾಪಾರಗಳ ಚಿತ್ರಣವಿರಬೇಕೆ?

ಕನ್ನಡಕಥಾಲೋಕದಲ್ಲಿ ಇವೆಲ್ಲವೂ ಇವೆ.

ಕಳೆದ ಇಪ್ಪತ್ತು ವರ್ಷಗಳಲ್ಲಂತೂ 'ಕಿರಿದರೊಳ್ ಪಿರಿದರ್ಥಮಂ' ಹೇಳುವ ಪ್ರವೃತ್ತಿ ನಮ್ಮ ಸಣ್ಣಕತೆಗಳಲ್ಲಿ ಬಲಗೊಂಡಿದೆ. ಮಾತಿನಲ್ಲಿ ಮೊನಚು, ಪ್ರತಿಮೆಗಳ ಬಳಕೆ, ಕತೆಗಳಲ್ಲಿ ಕಸುವು ತುಂಬಿವೆ. ಸರಳ ಕಥನವೈಖರಿ ಕೆಲವೆಡೆ ಜಟಿಲಗೊಂಡಂತೆ ಕಂಡರೂ, ಬದುಕಿನ ಜಂಜಡದ ರೂಪ ಚಿತ್ರಣಕ್ಕೆ ಹೊಸ ವಿಧಾನ ಪರಿಣಾಮಕಾರಿಯಾಗಿದೆ.

'ಸಾಲ' ನೀಡಿದ ಪಶ್ಚಿಮದವರೂ ಸಂತೋಷಪಡುವಷ್ಟು ಕೆಲಸ ನಮ್ಮಲ್ಲಿ ಆಗಿದೆ.

ಇಷ್ಟಿದ್ದರೂ ನಮ್ಮ ಕತೆಗಾರರು ನೆನಪಿಡಬೇಕಾದ ಒಂದು ಮಾತಿದೆ:

ಪ್ರಭಾವಕ್ಕೊಳಗಾಗಿ ಹೊಸ ಧ್ವನಿಯನ್ನು ಹೊರಡಿಸುವುದು ಸುಲಭ. ಹೆಚ್ಚುಗಾರಿಕೆ ಇರುವುದು ಆ ಪ್ರಭಾವವನ್ನು ಅರಗಿಸಿಕೊಂಡು ತನ್ನತನವನ್ನು ಉಳಿಸಿಕೊಳ್ಳುವುದರಲ್ಲಿ.

● 'ಪ್ರಜಾವಾಣಿ' ದೀಪಾವಳಿ ಸಂಚಿಕೆಯಲ್ಲಿ ಅಚ್ಚಾದದ್ದು.

೧೯೬೪

ಒಂದು, ಎರಡು, ಮೂರು

ಕೆಳಗೆ ಮೂರು ಚಿತ್ರಗಳಿವೆ. ಒಂದು: ಕವಿ ಮಿಂದು ಶುಚಿರ್ಭೂತನಾಗಿ, ಒದ್ದೆಯುಟ್ಟು ದೇವರನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸಿ, ದೇವಸನ್ನಿಧಿಯಲ್ಲಿ ತಾಳೆಯ ಗರಿಗಳನ್ನು ಎದುರಿಗಿಟ್ಟುಕೊಂಡು ಕುಳಿತುಕೊಳ್ಳುತ್ತಾನೆ. ಸೂರ್ಯ ಉದಿಸಿ ಬೆಳಕು ಹಬ್ಬಿರುವುದರ ಪರಿವೆಯಾಗಲೀ, ಆಹಾರ ಪಾನೀಯಗಳ ಗೊಡವೆಯಾಗಲೀ ಆತನಿಗಿಲ್ಲ. ಕೃತಿ ರಚನೆಯಲ್ಲಿ ಅವನು ಮಗ್ನ, ಬರೆದು ಮುಗಿಸಿದ ತಾಡವೋಲೆಗಳು ಒಂದರ ಮೇಲೊಂದಾಗಿ ಏರುತ್ತಹೋಗುತ್ತವೆ. ಕುಳಿತಲ್ಲಿಂದ ಕವಿ ಮೇಲೇಳುವುದು ಮೈಮೇಲಿನ ಒದ್ದೆಬಟ್ಟೆ ಒಣಗಿದಾಗ.

ಲೇಖಕ (ಕತೆಗಾರ, ಕಾದಂಬರಿಕಾರ) ದಿನಕಳೆದು, ಇರುಳಿನ ಊಟವಾಗಿ, 'ಸಂಸಾರ' (ಇದ್ದರೆ!) ವಿಶ್ರಾಂತಿಗೆಂದು ಕತ್ತಲಿನ ಮರೆಹೊಕ್ಕಮೇಲೆ, ತಾನು ಬರೆಯುವ ಮೇಜನ್ನು ಸಮೀಪಿಸುತ್ತಾನೆ: ಗುಂಡಿಯನ್ನೊತ್ತುತ್ತಾನೆ. ವಿದ್ಯುದ್ದೀಪ ಮೇಜಿನಮೇಲೆ ಬೆಳಕು ಚೆಲ್ಲುತ್ತದೆ. ಜೋಡಿಸಿ ಇಟ್ಟಿರುವ ಬಿಳಿಯ ಹಾಳೆಗಳು ಒಂದೆಡೆ. ಫೌಂಟನ್ ಪೆನ್ನನ್ನು (ಅಥವಾ ಬಾಲ್ ಪೆನ್ನನ್ನು) ಎತ್ತಿಕೊಂಡು ತನ್ನ ಕಲಾಶಕ್ತಿಯಲ್ಲಿ ತಿರುಗಿಸುತ್ತಾನೆ. ಕಲ್ಪನಾಲಹರಿ ಹರಿಯುತ್ತದೆ. ಸಾಹಿತ್ಯ ಸೃಷ್ಟಿಯಾಗುತ್ತದೆ. ನಡುನಡುವೆ ಸಿಗರೇಟು, ಆ ಚಟವಿದ್ದರೆ, ಕರಿದುಗೊಳಿಸಿದ ಬಿಳಿಯ ಹಾಳೆಗಳ ಸಂಖ್ಯೆ ಹೆಚ್ಚುತ್ತದೆ. ಲೇಖಕ ಕುಳಿತಲ್ಲಿಂದ ಮೇಲೇಳುವುದು ತೂಕಡಿಕೆ ಆರಂಭವಾದಾಗ.

ಕಾದಂಬರಿಕಾರ, ಸಂದರ್ಶನಕ್ಕೆ ಬಂದವರನ್ನು ಕಳುಹಿಸಿ ಕೊಟ್ಟು, ಒಂದು ಗುಟುಕು ಕಾಫಿ ಅಥವಾ ಸೋಮರಸವನ್ನು ಕುಡಿದು, ತನ್ನ ಆಪ್ತ ಕೊಠಡಿಯನ್ನು ಪ್ರವೇಶಿಸುತ್ತಾನೆ. ಮೇಜಿನ ಮೇಲೆ ಫೋನ್, ಡಿಕ್ಟಾಫೋನ್, ನಿರ್ಜೀವ ಯಂತ್ರದೊಳಕ್ಕೆ ಧ್ವನಿಯನ್ನು ಇಳಿಬಿಟ್ಟು ಆತ ಕೇಳುತ್ತಾನೆ, 'ಸಿದ್ಧವಾಗಿದಿಯೊ'? ಉತ್ತರ ಬರುತ್ತದೆ: 'ಹ್ಞಂ'.

ಕಾದಂಬರಿಕಾರ ಆರಂಭಿಸುತ್ತಾನೆ: 'ಒಂನೆಯ ಅಧ್ಯಾಯ ಬರಕೊ.'

'ಇನ್ನೊಂದು ಕೊಠಡಿಯಲ್ಲಿರುವ ಸ್ಟೆನೋ, ಫೋನಿಗೆ ಕಿವಿಗೊಟ್ಟು, ಕಾದಂಬರಿಕಾರ ಸೃಷ್ಟಿಸತೊಡಗಿದ ಸಾಹಿತ್ಯವನ್ನು ಬರೆದುಕೊಳ್ಳುತ್ತಾನೆ. ಅಥವಾ ಕಾದಂಬರಿಕಾರ

ಧ್ವನಿವಾಹಕದೆದುರು ಸೃಷ್ಟಿ ಆರಂಭಿಸುತ್ತಾನೆ. ಇನ್ನೊಂದು ಕೋಣೆಯಲ್ಲಿರುವ ಟೇಪ್‌ರೆಕಾರ್ಡರಿನಲ್ಲಿ ಆ ಸಾಹಿತ್ಯ ದಾಖಲೆಯಾಗುತ್ತದೆ. ಇಲ್ಲವೆ, (ಸಹಾಯಕ ರಿಲ್ಲದಾಗ) ಟೈಪರೈಟರಿನ ಮುಂದೆ ಕುಳಿತು ಹೊಸ ಅಧ್ಯಾಯವನ್ನು ಕಾದಂಬರಿಕಾರ ಬರೆಯುತ್ತಾನೆ. ಆತ ಮೇಲಕ್ಕೇಳುವುದು, ದೇಹ ಸೋತಾಗ.

ಈ ಮೂರು ಚಿತ್ರಗಳ ಕಾಲವನ್ನು ಹೀಗೆ ನಿರ್ಧರಿಸಬಹುದು: ಮೊದಲಿನದು, ಒಂದು ಸಾವಿರ ವರ್ಷಗಳಿಗೆ ಹಿಂದಿನದು; ಎರಡನೆಯದು, ಈ ಶತಮಾನದ್ದು; ಮೂರನೆಯದು, ಇನ್ನು ನೂರು ವರ್ಷಗಳ (ಅಥವಾ ಐವತ್ತು ವರ್ಷಗಳ) ಅನಂತರದ್ದು.

ಔದ್ಯೋಗೀಕರಣದ ನೆರಳಲ್ಲಿ ಸಾಹಿತ್ಯ ನಡೆದುಬಂದಿರುವ, ಹಾಗೂ ಸಾಗುತ್ತ ಲಿರುವ ದಾರಿಯನ್ನು ಮೇಲಿನ ಚಿತ್ರಗಳಲ್ಲಿ ನಾವು ಕಾಣಬಹುದು.

ಪಶ್ಚಿಮದ ರಾಷ್ಟ್ರಗಳಿಗಿಂತ ಎರಡುನೂರು ವರ್ಷ ತಡವಾಗಿ ಔದ್ಯೋಗಿಕ ಕ್ರಾಂತಿ ನಮ್ಮ ದೇಶದಲ್ಲಿ ಆರಂಭವಾಯಿತು. ಆದ ಪರಿಣಾಮದ ದೃಷ್ಟಿಯಿಂದ, ಅದು ಕ್ರಾಂತಿಯಲ್ಲ ಎಂದರೂ ತಪ್ಪಾಗದು. ಅದು ಕುಂಟುನಡಿಗೆ, ಆಂಗ್ಲರಿಗೆ ಬೇಕಾಗಿದ್ದುದು, ತಮ್ಮ ತಾಯ್ನಾಡಿನ ಔದ್ಯೋಗಿಕ ಉತ್ಪನ್ನಗಳಿಗೆ ಮಾರುಕಟ್ಟೆ; ಕಚ್ಚಾ ಮಾಲುಗಳ ಪೂರೈಕೆಗೊಂದು ಪ್ರದೇಶ. ಅದಕ್ಕಿಂತ ಹೆಚ್ಚು ಪ್ರಗತಿ ಹೊಂದಲು ತಮ್ಮ ವಸಾಹತಾದ ಹಿಂದೂಸ್ಥಾನಕ್ಕೆಂದೂ ಅವರು ಆಸ್ಪದ ಕೊಡಲಿಲ್ಲ. ವಿದ್ಯುತ್ತು ಬಂತು, ದಿನನಿತ್ಯದ ಬೆಳಕಿನ ಬಳಕೆಗೆ ಬೇಕಾದಷ್ಟು, ಉಗಿಬಂಡಿ, ತಂತೀ ಕಂಬಗಳು, ಬಂದುವು ತಾವು ಗೆದ್ದ ಸಾಮ್ರಾಜ್ಯವನ್ನು ಭದ್ರವಾಗಿ ಬಿಗಿಯಲು ಅಗತ್ಯವಿದ್ದಷ್ಟು. ಮುದ್ರಣ ಯಂತ್ರ ಬಂತು, ಸರಕಾರೀ ಸಾಹಿತ್ಯವನ್ನು ಮುದ್ರಿಸಲು ಸಾಕಾಗುವಷ್ಟು.

ಆದರೆ ಒಮ್ಮೆ ಬೀಸತೊಡಗಿದ ಗಾಳಿಯನ್ನು ಎಷ್ಟುತಾನೇ ತಡೆಹಿಡಿಯುವುದು ಸಾಧ್ಯ? ಆಳುವವರು ರಚಿಸಿದ ಸೀಮಿತ ವೃತ್ತದೊಳಗೇ ಸಣ್ಣ ಉದ್ಯಮಗಳು ಈ ದೇಶದಲ್ಲಿ ಹುಟ್ಟಿದುವು. ಮುದ್ರಣ ಯಂತ್ರಗಳನ್ನು ದೇಶೀಯರೂ ಬಳಸಿದರು. ವೃತ್ತಪತ್ರಿಕೆಗಳನ್ನೂ ಪುಸ್ತಕಗಳನ್ನೂ ಮುದ್ರಿಸುವುದಕ್ಕೋಸ್ಕರ.

ಇಂಗ್ಲೆಂಡಿನ ಔದ್ಯೋಗಿಕ ಕ್ರಾಂತಿಯ ಅಮೂಲ್ಯ ಕೊಡುಗೆಯಾದ ಮುದ್ರಣಯಂತ್ರ, ಈ ದೇಶದಲ್ಲಿ ಇಂಗ್ಲಿಷರ ಆಳ್ವಿಕೆಗೆ ಸವಾಲುಹಾಕಿದ ರಾಷ್ಟ್ರೀಯತೆಯ ಹುಟ್ಟು, ಬೆಳವಣಿಗೆಗೆ ಕಾರಣವಾದುದು ಒಂದು ಸೋಜಿಗ. ಅಲ್ಪಸಂಖ್ಯಾಕರಿಂದ ಆರಂಭವಾದ ಕ್ರಾಂತಿಕಾರ ಅಭಿಪ್ರಾಯಗಳೂ ರಾಷ್ಟ್ರೀಯ ವಿಚಾರಗಳೂ ಮುದ್ರಣ ಯಂತ್ರದ ನೆರವಿನಿಂದ ಜನಸಮುದಾಯವನ್ನು ಮುಟ್ಟಿದುವು. ದೇಶೀಯ ಭಾಷೆಗಳ ವೃತ್ತಪತ್ರಿಕೆಗಳಿಗೆ, ಪ್ರತಿಯೊಂದು ಭಾಷಾಪ್ರದೇಶದಲ್ಲೂ ನಡೆದ ಪುನರುದಯ ಚಳವಳಿಗೆ, ಸಾಹಿತ್ಯಕ ಬೆಳವಣಿಗೆಗೆ ಪ್ರೇರಣೆಯಾಯಿತು.

ರಾಷ್ಟ್ರೀಯ ಬಂಡವಾಳಗಾರರು ಬಲಗೊಂಡಂತೆ ಈ ದೇಶದಲ್ಲಿ ಔದ್ಯೋಗೀಕರಣದ ಬಡಕಲು ಕಾಲುಗಳಿಗೆ ಮೆಲ್ಲಮೆಲ್ಲನೆ ಬಲ ಬಂದಿತು. ಆದರೂ ಔದ್ಯೋಗಿಕ ಕ್ರಾಂತಿಯ ಪೂರ್ಣ ಸ್ವರೂಪ ಇಲ್ಲಿ ಕಂಡುಬಂದಿರುವುದು ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ—ನೆಹರೂ ಇಲ್ಲಿ ಕಂಡು ಬಂದಿರುವುದು ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ—ನೆಹರೂ ಶಕೆ ಆರಂಭವಾದ ಮೇಲೆ.

ಔದ್ಯೋಗೀಕರಣ ಸಹಜವಾಗಿಯೇ, ಇತರ ಎಷ್ಟೋ ರಾಷ್ಟ್ರಗಳಲ್ಲಿ ಆಗಿರುವಂತೆ ಹಿಂದೂಸ್ಥಾನದಲ್ಲಿಯೂ, ಜನಜೀವನದ ಮೇಲೆ ಪರಿಣಾಮವನ್ನುಂಟುಮಾಡಿದೆ. ಕನ್ನಡವನ್ನೂ ಒಳಗೊಂಡು ಈ ದೇಶದ ವಿವಿಧ ಭಾಷಾಸಾಹಿತ್ಯಗಳ ಮೇಲೂ ಪ್ರಭಾವವನ್ನು ಬೀರಿದೆ.

ಈ ಪ್ರಭಾವ ಎರಡು ಬಗೆಯದು: ಒಂದು, ಸಾಹಿತ್ಯ ಕೃತಿಗಳ ಉತ್ಪಾದನೆಗೆ ಸಂಬಂಧಿಸಿ; ಇನ್ನೊಂದು, ಸಾಹಿತಿಗಳು ಆಯ್ದುಕೊಳ್ಳುವ ವಸ್ತುಗಳ ವಿಷಯದಲ್ಲಿ.

ವೇಗ, ಗಾತ್ರ

ಕಾಲಲ್ಲಿ ಒತ್ತುವ ಟ್ರೆಡಲ್ ಈ ನಾಡಿಗೆ ಬಂದು, ತಾಡವೋಲೆಗಳು ಸಂಶೋಧಕರನ್ನು ಅರಸುತ್ತಹೋದುವು. ಪರಿಷ್ಕೃತವಾಗಿ ಸಂಪಾದಿತವಾಗಿ ಕಾಗದದ ಮೇಲೆ ಅಚ್ಚುಗೊಂಡು ಗ್ರಂಥರೂಪದಲ್ಲಿ ಪ್ರಕಟವಾಗುವ ಆಸೆ ಅವುಗಳಿಗೆ. ತಾಳೆಯ ಗರಿಗಳ ಸ್ಥಾನವನ್ನು ಒರಟು ಕಾಗದಗಳು ಆಕ್ರಮಿಸಿದುವು.

ಕೃತಿ ಅಚ್ಚು ಕಾಣುವದೆಂದರೆ ಅದೆಂಥ ಸಂಭ್ರಮ ಕರ್ತೃವಿಗೆ ! ಕನ್ನಡ ಭೂಮಿಯಲ್ಲಿ ಪುನರುದಯ ಚಳುವಳಿ ಆರಂಭವಾಗಿದ್ದ ಕಾಲ ಅದು. ಆಧುನಿಕ ಕನ್ನಡ ಸಾಹಿತ್ಯ ಸೃಷ್ಟಿಗೆ ಕೈ ಹಾಕಿದ್ದವರನೇಕರು ಹಸ್ತಪ್ರತಿಗಳನ್ನು ಸಿದ್ಧಗೊಳಿಸತೊಡಗಿದ್ದರು.

ಆಗ ಮುದ್ರಣದ ರೀತಿ ರಿವಾಜು ಹೆಚ್ಚು ಕಡಮೆ ಹೀಗೆ: ಲೇಖಕ ಮುದ್ರಣದ ವೆಚ್ಚವನ್ನು ಮುದ್ರಕನಿಗೆ ಅಥವಾ ಪ್ರಕಾಶಕನಿಗೆ ಕೊಡಬೇಕು.

ಮುದ್ರಣವಾದೊಡನೆಯೇ ಇಂತಿಷ್ಟು ಪ್ರತಿಗಳನ್ನು ಕರ್ತೃ ದುಡ್ಡು ಕೊಟ್ಟು ಕೊಳ್ಳುತ್ತಲಿದ್ದ. ಕೊಂಡು, ಉಚಿತವಾಗಿ ಹಂಚುತ್ತಲಿದ್ದ—ಮಿತ್ರರಿಗೆ.

ಆಗಿನ ಬಹ್ವಂಶ ಪುಸ್ತಕಗಳ ಗಾತ್ರವೂ ಕಡಮೆ. ತುಳಿದು ನಡೆಸುವ ಯಂತ್ರ ಬಹಳ ಹೆಚ್ಚಿನ ಭಾರವನ್ನು ಹೊರಲು ಸಾಧಾರಣವಾಗಿ ಸಿದ್ಧವಿರಲಿಲ್ಲ.

ಮುಂದೆ ಸಿಲಿಂಡರ್ ಬಂತು. ವೃತ್ತಪತ್ರಿಕೆಗಳ ಪ್ರಸಾರ ಹೆಚ್ಚತೊಡಗಿತು. ಅಚ್ಚಿನ ಮನೆಯಿಂದ ಹೊರಬೀಳುತ್ತಿದ್ದ ಗ್ರಂಥಗಳ ಸಂಖ್ಯೆಯೂ ಹೆಚ್ಚಿತು. ಗ್ರಂಥಕರ್ತನಿಗೆ ಗೌರವಧನ (ಅಲ್ಪಸ್ವಲ್ಪವೇ ಆದರೂ) ದೊರೆಯಲು ಆರಂಭವಾಯಿತು.

ಒಮ್ಮೆಲೇ ಹದಿನಾರು ಪುಟಗಳ ಮುದ್ರಣ. ಅವರ ಹಿಂಬದಿಯಲ್ಲಿ ಹದಿನಾರು

ಪುಟಗಳು ಒಟ್ಟು ಮೂವತ್ತೆರಡು. ಅಲ್ಲಾವುದ್ದೀನನ ಅದ್ಭುತ ದೀಪದಿಂದ ಜೀವತಳೆದ ಸೈತಾನನಾಯಿತು ಮುದ್ರಣ ಯಂತ್ರ. ಎಷ್ಟು ಗ್ರಾಸವಿದ್ದರೂ ಅದಕ್ಕೆ ಸಾಲದು. ಅದೇ ವೇಳೆಗೆ ಸರಿಯಾಗಿ ಸಾಕ್ಷರರ ಸಂಖ್ಯೆ ಬೆಳೆಯುತ್ತಬಂದಿತ್ತು. ಪ್ರತಿವರ್ಷ ಓದುವವರ ಪಡೆಯನ್ನು ಹೊಸ ಸೈನಿಕರು ಸೇರಿದರು. ಔದ್ಯೋಗೀಕರಣದ ಇನ್ನೊಂದು ಶಿಶುವಾದ ಚಲಚ್ಚಿತ್ರವೂ, ಇಂಗ್ಲಿಷ್ ಭಾಷೆಯಲ್ಲಿ ಸಹಸ್ರಗಟ್ಟಲೆಯಲ್ಲಿ ಬರತೊಡಗಿದ ಬಣ್ಣದ ಪುಸ್ತಕಗಳೂ ವಾಚಕರ ಅಭಿರುಚಿಯನ್ನು ರೂಪಿಸಿದುವು. ಆ ಹೊಸ ಹಸಿವನ್ನು ತಣಿಸಲು ತಕ್ಕ ಆಹಾರ ಅಗತ್ಯವಾಯಿತು. ಆದರ್ಶವಾದ ಪ್ರೇಕ್ಷಕರಿಗೆ ನಮಿಸಿ ಪ್ರಕಾಶನ ರಂಗದಿಂದ ಮರೆಯಾಯಿತು. ಪ್ರೇಕ್ಷಕರೇ ಶಿಳ್ಳುಹೊಡೆದು ಅದನ್ನು ಓಡಿಸಿದ ರೆನ್ನಬಹುದು. ಲಕ್ಷ್ಮೀಭಕ್ತ ವರನಟನಾಗಿ ರಂಗಪ್ರವೇಶ ಮಾಡಿದ. ಅವನ ಕೈಯಲ್ಲಿತ್ತು ಸಾಹಿತಿಯ ಜುಟ್ಟು! ಆ ಸಾಹಿತಿ ಬರೆಯತೊಡಗಿದ, ಜನರಂಜನೆಯ ಕಾದಂಬರಿಗಳನ್ನು.

ವೇಗದ ಬರೆವಣಿಗೆ, ಗಾತ್ರದ ಪುಸ್ತಕ, ಶೀಘ್ರ ಮುದ್ರಣ. ತಾನು ಏನು ಬರೆದ ಎಂಬುದನ್ನು ಮುದ್ರಣಕ್ಕೆ ಮುಂಚೆ ಒಮ್ಮೆ ಓದಿನೋಡುವ ಅವಕಾಶವೂ ಇಲ್ಲ ಸಾಹಿತಿಗೆ !

ಈ ನಡುವೆ, ತೀವ್ರಗತಿಯಿಂದ ಚಲಿಸುವ ಲೇಖನಿ ತನ್ನದೇ ಆದ ವಿಶಿಷ್ಟ ಶೈಲಿಯನ್ನು ಅನಿವಾರ್ಯವಾಗಿ ರೂಢಿಸಿಕೊಂಡಿತು. ಜತೆಗೆ, ಪಡಿಯಚ್ಚು ನಿರ್ಮಿಸುವ ಉದ್ಯಮಗಳು ಹಗಲಿರುಳೂ ದುಡಿಯುವಂತಾಯಿತು. ಹೆಚ್ಚು ಕಡಮೆ ಪ್ರತಿಯೊಂದು ಪುಸ್ತಕವೂ ಬಣ್ಣದ ರಕ್ಷಾಕವಚದೊಡನೆ ಪ್ರಕಟವಾಗತೊಡಗಿತು.

ವಸ್ತುವೈವಿಧ್ಯ

ಮೇಲಿನದು, ಔದ್ಯೋಗೀಕರಣದ ಕಾಲಾವಧಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಕಂಡು ಬಂದಿರುವ ಪ್ರಧಾನ ಪ್ರವೃತ್ತಿ.

ವಸ್ತುವಿನ ಆಯ್ಕೆಯ ಸಂಬಂಧದಲ್ಲೂ ಔದ್ಯೋಗೀಕರಣ ತನ್ನ ಪ್ರಭಾವವನ್ನು ಬೀರಿದೆ.

ಹೊಸ ಹೊಸ ಕೈಗಾರಿಕೋದ್ಯಮಗಳ ಸ್ಥಾಪನೆಯ ಪರಿಣಾಮವಾಗಿ ಉದ್ಯೋಗಗಳನ್ನು ಹುಡುಕುತ್ತ ಜನರು ನಗರಗಳಿಗೆ ಬರುತ್ತಾರೆ. ದುಡಿಮೆಯ ಬದುಕು, ಜಾತಿಪಂಥಗಳಿಗೆ ಸಂಬಂಧಿಸಿದ ರೂಢಮೂಲ ವಿಚಾರಗಳನ್ನು ಬುಡಮೇಲು ಮಾಡುತ್ತದೆ. ಬದುಕಿನಲ್ಲಿ ವೇಗ ತಲೆದೋರುತ್ತವೆ. ಆಂತರಿಕ ಘರ್ಷಣೆ ತೊಳಲಾಟಗಳಿಗೆ ಮನುಷ್ಯ ಗುರಿಯಾಗುತ್ತಾನೆ, ಹೃದ್ರೋಗಗಳೂ ಮನೋ ರೋಗಗಳೂ ಸಾಮಾನ್ಯ ವಿಷಯಗಳಾಗುತ್ತವೆ. ತಾನು ಕಾಲಿಡುತ್ತಿರುವುದು ಉಸುಬು ಎಂದು ತಿಳಿದೂ ತಿಳಿದೂ ಮನುಷ್ಯ ವಾತಾವರಣದ ಶಿಶುವಾಗಿ ಆಕರ್ಷಕ

ಮರಳುಗಾಡಿನಲ್ಲಿ ಅಲೆಯುತ್ತಾನೆ.

ಇತ್ತ ಹೀಗಾದರೆ ಅತ್ತ ಗ್ರಾಮಾಂತರ ಪ್ರದೇಶಗಳಲ್ಲಿ ಜನಸಂಖ್ಯೆ ಕಡಮೆಯಾಗುತ್ತ ನಡೆದಿದೆ. ಅವಿಭಕ್ತ ಕುಟುಂಬಗಳು ಕಾಲಚಕ್ರದ ಬುಡಕ್ಕೆ ಸಿಲುಕಿ ಒಡೆದು ಹೋಗುತ್ತಿವೆ. ನೇಗಿಲು ಮೂಲೆಗುಂಪಾಗಿ ಟ್ರಾಕ್ಟರು ಮುಖ ತೋರಿಸುವ ಕಾಲ ಸನ್ನಿಹಿತವಾಗಿದೆ. ಸೈಕಲ್ಲು ತುಳಿಯುವ ಸಮಾಜಸೇವಕರು ಅಲ್ಲಿ ಕಾಣಿಸಿ ಕೊಳ್ಳುತ್ತಿದ್ದಾರೆ. ಹಳೆಯ ಭೂವ್ಯವಸ್ಥೆ ಕುಸಿಯುತ್ತಿದೆ. ಅದರ ಸ್ಥಳದಲ್ಲಿ ಹೊಸ ವ್ಯವಸ್ಥೆಯಿನ್ನೂ ಬೇರುಬಿಟ್ಟಿಲ್ಲ. ಬದುಕು ತ್ರಿಶಂಕುವಾಗಿದೆ. ವಿದ್ಯುತ್ತು ಸರ್ವಾಂತರ್ಯಾಮಿಯಾಗಬಯಸಿ ಹಲವು ಸಹಸ್ರ ಹಳ್ಳಿಗಳಲ್ಲಿ ಮಿಣಿಮಿಣಿ ಎನ್ನುತ್ತಿದೆ. ಭಾರೀ ನೀರಾವರಿ ಯೋಜನೆಗಳು ಕಾರ್ಯಗತವಾಗಿ, ಮತ್ತಷ್ಟು ಹೆಚ್ಚು ಔದ್ಯೋಗೀಕರಣಕ್ಕೋಸ್ಕರ ವಿದ್ಯುಚ್ಛಕ್ತಿ ನಿರ್ಮಾಣವಾಗುತ್ತದೆ.

ಸಮಾಜದಲ್ಲಿ ಹೆಣ್ಣು-ಗಂಡು ಸಂಬಂಧದಲ್ಲೂ ಸೂಕ್ಷ್ಮ ಮಾರ್ಪಾಟುಗಳಾಗುತ್ತಿವೆ. ಆಕೆ ಈಗ ಅಬಲೆಯಲ್ಲ, ಔದ್ಯೋಗೀಕರಣ ಸಹಸ್ರಾರು ಯುವತಿಯರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ನೀಡಿದೆ. ಕೈಗಾರಿಕೋದ್ಯಮದ ದೈತ್ಯಯಂತ್ರಗಳು 'ನಮ್ಮ ಮಟ್ಟಿಗೆ ಲಿಂಗ ಭೇದಗಳಿಲ್ಲ' ಎನ್ನುತ್ತಿವೆ...

ಹೀಗೆ, ನಿಸರ್ಗ—ಕೋಗಿಲೆ-ತಾರೆ-ಚಂದ್ರಮರ ಕಾಲ ಕನ್ನಡ ಸಾಹಿತ್ಯದಲ್ಲಿ ಕಳೆದುಹೋಗಿದೆ. ಅಣುರಿಯಾಕ್ಟರೇ ಈಗಿನ ಅಪ್ಸರೆಯೆಂದು ಕವಿಗಳು ಮನಗಾಣುವಂತಾಗಿದೆ. ಆಗುತ್ತಲಿರುವ ಸಾಮಾಜಿಕ ಅವಸ್ಥಾಂತರಗಳನ್ನು ಲೇಖಕ ತಿಳಿದೋ ತಿಳಿಯದೆಯೋ ಸಾಹಿತ್ಯಕೃತಿಗಳಲ್ಲಿ ಒಡಮೂಡಿಸುತ್ತಿದ್ದಾನೆ.

ವಿವೇಕಕ್ಕೆ ಕರೆ

ಯಂತ್ರ ಮಾನವನ ಅಧೀನದಲ್ಲಿರುವಷ್ಟು ಕಾಲ ಸಾಧನೆಯಾಗುವುದು ಪ್ರಗತಿ ಮಾತ್ರ. ಮಾನವ ಯಂತ್ರಕ್ಕೆ ದಾಸನಾದಾಗ ಅಧೋಗತಿ ತಪ್ಪದು. ನವಸಮಾಜ ನಿರ್ಮಾಣದ ಅಧ್ವರ್ಯುಗಳು ನೆನಪಿಡಬೇಕಾದ ಅಂಶ ಇದು. ಲೇಖಕನೂ ಅಷ್ಟೇ. ಹೊಸ ಗಾಳಿಯನ್ನು, ಪರಿವರ್ತನೆಯನ್ನು, ಮುನ್ನಡೆಯನ್ನು ಆತ ಸ್ವಾಗತಿಸುತ್ತಾನೆ. ಆದರೆ ಅವನ ಲೇಖನಿಯ(ಅಥವಾ ಟೈಪ್‌ರೈಟರಿನ) ಜವಾಬುದಾರಿ ಎಂದಿಗಿಂತ ಇಂದು ಹೆಚ್ಚು. ಪರಿಸ್ಥಿತಿಯನ್ನು ಆತ ಹತೋಟಿಯಲ್ಲಿಟ್ಟುಕೊಳ್ಳುವನೆ? ಅಥವಾ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಆತ ತೇಲಿಹೋಗುವನೆ?—ಎಂಬುದೇ ಅವನ ಮುಂದಿರುವ ಪ್ರಶ್ನೆ.

ವಿವೇಕ, ಹೆಚ್ಚಿನ ವಿವೇಕ, ಹೆಜ್ಜೆಹೆಜ್ಜೆಗೂ ಅವನಿಗೆ ರಕ್ಷೆಯಾಗಬೇಕು.

● ಮೈಸೂರು ದಸರಾ ವಿಶೇಷಾಂಕದಲ್ಲಿ ಪ್ರಕಟಣೆ.

೧೯೬೯

ಸಾಹಿತ್ಯ ಮತ್ತು ಪ್ರಚಾರ

ಸಾಹಿತ್ಯ ಮತ್ತು ಪ್ರಚಾರ ! Serves you right! ಎಂಬ ಉದ್ಗಾರಕ್ಕೆ ಎಡೆಯುಂಟು, ಇರಲಿ.

ಆಂಗ್ಲೋ-ಸಾಕ್ಸನ್ ಸಮಾಜದಲ್ಲಿ ಯಾವನಾದರೊಬ್ಬನನ್ನು ಅವಮಾನಿಸಬೇಕಾದರೆ, ಹೀಗಳೆಯಬೇಕಾದರೆ, ಅವನನ್ನು 'ಪ್ರಚಾರಕ' ಎಂದು ಕರೆದರಾಯಿತು. ಮತ ಪ್ರಚಾರಕರನ್ನು ಗೌರವಿಸುವ ಪೂಜಿಸುವ ಪರಂಪರೆಯುಳ್ಳ ಭಾರತೀಯ ಸಮಾಜದಲ್ಲಿ ಪ್ರಚಾರದ ಘಂಟೆಯಿಂದ ಹೊರಡುವ ಧ್ವನಿಗೆ ಕಿವಿ ಮುಚ್ಚಬೇಕಾಗಿಲ್ಲ. ಕನ್ನಡದಲ್ಲಂತೂ ಸಾಹಿತ್ಯ ಅನೇಕ ಮತಾಚಾರ್ಯರಿಗೆ, ಅವರ ಶಿಷ್ಯಕೋಟಿಗೆ, ಪ್ರೀತಿಯ ವಾಹನವಾಗಿದೆ. ಈ ಸಂದರ್ಭದಲ್ಲಿ ಬಳಸಲಾಗಿರುವ 'ಪ್ರಚಾರ' ಪದ Propaganda ದಿಂದ ಬಂದದ್ದು. ಲ್ಯಾಟಿನ್ ಮೂಲದ ಪ್ರಕಾರ' To Propagate, Tosots.

ಎಂಥ ಬಿತ್ತನಗೆ ಅದಂಥ ಬೆಳೆ ಬಂದಿತೋ!ಸಂಪರ್ಕ ಮಾಧ್ಯಮಕ್ಕೆ ಅಗ್ರಪೂಜೆ ಸಲ್ಲುತ್ತಿರುವ ಅಮೆರಿಕದಲ್ಲಿ 'ಪ್ರಚಾರ' ವೆಂದರೆ ತಾತ್ಸಾರ, ೧೯೨೦ರ ಸುಮಾರಿಗೇ ಅದು ಜಾತಿ ಕೆಟ್ಟಿತು. ಸಂಪರ್ಕಲೋಕದ ತಜ್ಞ ಎವೆರೆಟ್ ಡಿ. ಮಾರ್ಟಿನ್ ಹೀಗೆ ಹೇಳಿದ್ದಾರೆ; "ಶಿಕ್ಷಣದ ಗುರಿಯಾದರೋ ವಿಚಾರ ಸ್ವಾತಂತ್ರವನ್ನು ಸಾಧಿಸುವುದು, ಪ್ರಚಾರ ಮುಂದಿಡುವುದು, ವಿವೇಕಹೀನ ಮಂದೆಗಾಗಿ ಸಿದ್ಧಗೊಳಿಸಿದ ಅಭಿಪ್ರಾಯಗಳನ್ನು, ಗುರಿಯಲ್ಲೂ ವಿಧಾನದಲ್ಲೂ ಶಿಕ್ಷಣ ಮತ್ತು ಪ್ರಚಾರಗಳು ನೇರ ವಿರೋಧಿಗಳು."

'ಪ್ರಚಾರವನ್ನು 'ಅರಿವು' 'ತಿಳಿವಳಿಕೆ' 'ಸುದ್ದಿ' ಎಂದು ವಿವರಿಸುವುದುಂಟು. 'ಪ್ರಚಾರಕ' ಎನ್ನುವ ಬದಲು ವಾರ್ತಾಧಿಕಾರಿ ಎಂದೋ ಸಂಪರ್ಕಾಧಿಕಾರಿಯೆಂದೋ ಕರೆದರೆ ಹೆಚ್ಚು ಗೌರವ. ಅಭಿಪ್ರಾಯ ಮಂಡನೆ-ಜಿಜ್ಞಾಸೆಗಳನ್ನು, ಚರ್ಚೆಯನ್ನು ಸರಕಾರ ಅವಲಂಬಿಸಿರುವ ಕಡೆಗಳಲ್ಲೆಲ್ಲ ಸಂಪರ್ಕಸಾಧನಕ್ಕೆ ಹಿರಿಯ ಸ್ಥಾನವಿದೆ. ನಿರ್ದೇಶಿತ ಪರಿವರ್ತನೆ ಒಂದು ಸಮಾಜದಲ್ಲಿ ಆಗಬೇಕಾದರೆ, ಅದರ ಸಾರಥಿಗಳು ಸಂಪರ್ಕಸಾಧನದ ಮೊರೆಹೋಗಲೇಬೇಕು. ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳಲ್ಲಂತೂ ಇದರತ್ತ ವಿಶೇಷ ಗಮನ ಅಗತ್ಯ.

ಭಾರತ ಅಂತಹ ಒಂದು ರಾಷ್ಟ್ರ ತಾನೆ? ೫೬೦,೦೦೦ ಹಳ್ಳಿಗಳಿರುವ, ಪ್ರಬುದ್ಧರಲ್ಲಿ ಶೇಕಡಾ ೭೫ರಷ್ಟು ಜನ ಅನಕ್ಷರಸ್ಥರಾಗಿರುವ, ಹದಿನಾಲ್ಕು ಮುಖ್ಯ ಭಾಷೆಗಳಿರುವ, ಹತ್ತು-ಹತ್ತು ಲಕ್ಷ ಜನ ಮಾತನಾಡುವಂತಹ ೭೨ ಬೇರೆ ಭಾಷೆಗಳಿರುವ ಬೃಹತ್ ರಾಷ್ಟ್ರದಲ್ಲಿ ಸಂಪರ್ಕಮಾಧ್ಯಮ ಭಾರೀ ಸಮಸ್ಯೆಯೇ ಸರಿ. ಪತ್ರಿಕೆ, ರೇಡಿಯೋ, ಟೆಲಿವಿಷನ್ ಈ ಮೂರು ಪ್ರಧಾನ ಸಂಪರ್ಕ ಪ್ರಕಾರಗಳಲ್ಲಿ ಭಾರತದಲ್ಲಿ ಕಾಣಸಿಗುವ ಚಿತ್ರ ಇದು!

೫೨ ಕೋಟಿ ಜನಸಂಖ್ಯೆಯಲ್ಲಿ ಓದು ಬಲ್ಲವರು ೧೫ ಕೋಟಿ ೮೦ ಲಕ್ಷ. ಮುದ್ರಣವಾಗುತ್ತಿರುವ ದಿನಪತ್ರಿಕೆಗಳ ಪ್ರಸಾರ ಸಂಖ್ಯೆ ೬೩ ಲಕ್ಷ. ಅಂದರೆ, ಸಾವಿರ ಜನರಿಗೆ ೧೩ ಪತ್ರಿಕೆಗಳು. ಅವುಗಳಲ್ಲಿ ಶೇಕಡಾ ೨ರಷ್ಟು ಕೂಡಾ ಹಳ್ಳಿಗಳನ್ನು ತಲುಪುವುದಿಲ್ಲ. ಇದನ್ನು ಪೂರ್ವ ಪಶ್ಚಿಮಗಳ ರಾಷ್ಟ್ರಗಳೊಡನೆ ಹೋಲಿಸಬಹುದು. ಜಪಾನಿನಲ್ಲಿ ಒಂದು ಸಾವಿರ ಜನ ೪೫೧ ಪ್ರತಿಗಳನ್ನು ಬಳಸುತ್ತಾರೆ: ಥಾಯ್ಲಾಂಡಿನಲ್ಲಿ ೨೪ ಪ್ರತಿಗಳನ್ನು ; ಸಿಂಹಳದಲ್ಲಿ ೨೯ ಪ್ರತಿಗಳನ್ನು ; ಸ್ವೀಡನ್ನಿನಲ್ಲಿ ೫೦೫ ಪ್ರತಿಗಳನ್ನು.

ನಮ್ಮ ದೇಶದಲ್ಲಿ ೧೦ ಲಕ್ಷ ರೇಡಿಯೋಗಳಿಗೆ ಜನ ಲೈಸೆನ್ಸ್‌ಪಡೆದಿಲ್ಲ ಎಂದು ಹಿಂದಿನ ವಾರ್ತಾ-ಪ್ರಸಾರ ಮಂತ್ರಿ ಹೇಳಿದ್ದುಂಟು. ಆ ಸಂಖ್ಯೆಯನ್ನೂ ಸೇರಿಸಿದರೆ ಭಾರತದಲ್ಲಿ ೮೬ ಲಕ್ಷ ರೇಡಿಯೋಗಳಿವೆ. ಟ್ರಾನ್ಸಿಸ್ಟರುಗಳು ಪ್ರಚಾರಕ್ಕೆ ಬರುತ್ತಿವೆಯಾದರೂ, ಒಂದೊಂದು ಮನೆಯಲ್ಲಿ ಎರಡು-ಮೂರು ಸೆಟ್ಟುಗಳಿರುವ ಔದ್ಯೋಗಿಕ ಜಗತ್ತಿಗೂ ನಮಗೂ ಹೋಲಿಕೆ ಇಲ್ಲ. ಅಮೆರಿಕದಲ್ಲಿ ೧೦೦ ಜನರ ಬಳಿ ೧೦೦ ಸೆಟ್ಟುಗಳಿವೆ. ಶೇಕಡಾ ೯೭ರಷ್ಟು ಮನೆಗಳಲ್ಲಿ ರೇಡಿಯೋಗಳಿವೆ. ಬ್ರಿಟನ್ನಿನಲ್ಲಿ ೧ ಕೋಟಿ ೭೦ ಲಕ್ಷ ರಿಸೀವರುಗಳಿವೆ: ಫ್ರಾನ್ಸಿನಲ್ಲಿ ೧ ಕೋಟಿ ಮೂವತ್ತು ಲಕ್ಷ: ರಷ್ಯದಲ್ಲಿ ೧ ಕೋಟಿ ೬೦ ಲಕ್ಷ ; ಪೋಲೆಂಡಿನಲ್ಲಿ ೫೫ ಲಕ್ಷ.

ಅಮೆರಿಕದಲ್ಲಿ ೧೦೦೦ ಜನರಿಗೆ ೩೭೦ ಟೆಲಿವಿಷನ್ ಸೆಟ್ಟುಗಳಿವೆ:ಜಪಾನಿನಲ್ಲಿ ೨೦; ರಷ್ಯದಲ್ಲಿ ೮೦ ; ಪಶ್ಚಿಮ ಜರ್ಮನಿಯಲ್ಲಿ ೨೨೦ ; ಫ್ರಾನ್ಸಿನಲ್ಲಿ ೧೫೦ ; ಬ್ರಿಟನ್ನಿನಲ್ಲಿ ೨೬೦ ; ಇಟೆಲಿಯಲ್ಲಿ೧೩೦. ಇಡೀ ಭಾರತದಲ್ಲಿರುವ ಟೆಲಿವಿಷನ್ ಸೆಟ್ಟುಗಳ ಸಂಖ್ಯೆಯೇ ಏಳು ಸಾವಿರ. ಇವು ಕೇಂದ್ರಿ ಕೃತಿತವಾಗಿರುವುದು ದಿಲ್ಲಿಯ ಸುತ್ತುಮುತ್ತು. ಅಮೃತಸರದಲ್ಲೂ ಕೆಲವಿವೆ. ಅಲ್ಲಿನವರು ಪಾಕಿಸ್ತಾನದಿಂದ ಪ್ರಸಾರವಾಗುವ ಟೆಲಿವಿಷನ್ ಕಾರ್ಯಕ್ರಮಗಳನ್ನು ತಮ್ಮ ಸೆಟ್ಟುಗಳಲ್ಲಿ ನೋಡುತ್ತಾರೆ!

ಪ್ರೊ. ಎಸ್. ಸಿ. ದುಬೆ ಹೇಳಿರುವಂತೆ "ಗಮನಾರ್ಹವಾದ ಅನಕ್ಷರತೆಯ ಕಾರಣದಿಂದ (ಭಾರತದಲ್ಲಿ) ಪುಸ್ತಕಗಳನ್ನಾಗಲೀ, ನಿಯತಕಾಲಿಕಗಳನ್ನಾಗಲೀ, ವೃತ್ತಪತ್ರಿಕೆಗಳನ್ನಾಗಲೀ, ಸಂಪರ್ಕಮಾಧ್ಯಮಗಳಾಗಿ ಬಳಸುವಂತಿಲ್ಲ. ಬಡವರ ಪಾಲಿಗೆ ರೇಡಿಯೋ ಇನ್ನೂ ಕೈಗೆಟಕದ ಭೋಗವಸ್ತುವೇ. ಸಮುದಾಯ ರೇಡಿಯೋ

ಸೆಟ್ಟುಗಳ ಸಂಖ್ಯೆ ಚಿಕ್ಕದು. ಅವುಗಳ ಲಾಭ ಪಡೆಯುವವರ ಸಂಖ್ಯೆಯೂ ಸಹಜವಾಗಿಯೇ ಸಣ್ಣದು. ಟೆಲಿವಿಷನ್, ಜನರ ಆರ್ಥಿಕ ಸಾಮರ್ಥ್ಯವನ್ನು ಮೀರಿದ್ದು. ಅದರ ಉಪಯೋಗ ಬಹಳಮಟ್ಟಿಗೆ ಸಾಂಕೇತಿಕ ಮಾತ್ರ.

ಸ್ವತಂತ್ರ ಭಾರತದ ಸರಕಾರಕ್ಕೂ ರೇಡಿಯೋದಂತಹ ಸಂಪರ್ಕಸಾಧನದ ಮಹತ್ವ ಮನವರಿಕೆಯಾಗಿಲ್ಲ. ನಮ್ಮಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳಾದುವಷ್ಟೆ? ಮೊದಲ ಯೋಜನೆಯಲ್ಲಿ ಒಟ್ಟು ವೆಚ್ಚದ ಶೇಕಡಾ ೧ ರಲ್ಲಿ ದಶಮಾಂಶ ೨ ರಷ್ಟನ್ನು ರೇಡಿಯೋ ಪ್ರಸಾರಸಾಧನದ ವಿಸ್ತರಣಕ್ಕಾಗಿ ಮೀಸಲಿಡಲಾಯಿತು. ಆದರೆ ವಾಸ್ತವವಾಗಿ ವೆಚ್ಚವಾದದ್ದು ಅದರ ಅರ್ಧದಷ್ಟು ಮಾತ್ರ. ದ್ವಿತೀಯ ಯೋಜನೆಯಲ್ಲಿ ಶೇಕಡಾ ೧ರ ದಶಮಾಂಶ ೨ರಷ್ಟು ವ್ಯಯವಾಯಿತು. ತೃತೀಯ ಯೋಜನೆಯಲ್ಲಿ ಆ ವೆಚ್ಚವನ್ನು ಅದರ ಅರ್ಧಕ್ಕೆ ಇಳಿಸಲಾಯಿತು.

ಇಂಥ ಪರಿಸ್ಥಿತಿಯಲ್ಲಿ, ಆಧುನಿಕ ಸಂಪರ್ಕಸಾಧನಗಳನ್ನು ಬದಿಗಿರಿಸಿ ಪ್ರಚಾರಕ್ಕಾಗಿ ಪರಂಪರಾಗತ ವಿಧಾನಗಳನ್ನು ಸರಕಾರ ಬಳಸಬೇಕಾಯಿತು. ಬಂಗಾಳದ ಕವಿಗಾನ, ಮಹಾರಾಷ್ಟ್ರದ ಲಾವಣಿ-ಪೊವಾಡಗಳ ಮಧ್ಯೆ ಸಂವಾದ, ಪಂಜಾಬಿನ ಭಾಂಗ್ರಾ ನೃತ್ಯದ ನಡುವೆ 'ಬೋಲ್'. ಕರ್ನಾಟಕದ ಯಕ್ಷಗಾನ ಹಾಗೂ ಲಾವಣಿ, ಆಂಧ್ರದ ಬುರ್ರಕಥಾ, ತಮಿಳುನಾಡಿನ ಕಥಾ-ಕಾಲಕ್ಷೇಪ, ಸಂಚಾರಿ ನಾಟ್ಯಸಂಘಗಳು —ಇವೆಲ್ಲ ಮಾಧ್ಯಮಗಳನ್ನು ಉಪಯೋಗಿಸಿಕೊಳ್ಳಲಾಯಿತು.

ಪತ್ರಿಕೆಗಳು ನಮ್ಮ ದೇಶದಲ್ಲಿ ಸರಕಾರದ ಸ್ವತ್ತಲ್ಲ, ತಮ್ಮ ಸ್ವಾತಂತ್ರ್ಯದ ಬಗ್ಗೆ ಇವುಗಳ ಸಂಪಾದಕರು ಹೆಮ್ಮೆಪಟ್ಟುಕೊಳ್ಳುತ್ತಾರಾದರೂ ನಿಜಸ್ಥಿತಿಯನ್ನು ಬಲ್ಲವರೇ ಬಲ್ಲರು. ಸ್ವತಂತ್ರ ಭಾರತದ ಹಿತಸಾಧನೆಗಾಗಿ ಸಹಕಾರ ನೀಡುವ ಪತ್ರಿಕೆಗಳು ತಮ್ಮ ಒಡೆಯರ ಸೂಚನೆಯಂತೆ ಸರಕಾರಕ್ಕೆ ಬೆಂಬಲ ತೋರುವ ಪತ್ರಿಕೆಗಳು, ಸರಕಾರದಿಂದ ದೊರೆಯುವ ಜಾಹೀರಾತುಗಳ ಮೌಲ್ಯಕ್ಕೆ ಅನುಗುಣವಾಗಿ ಸಹಕರಿಸುವ ಪತ್ರಿಕೆಗಳು—ಹೀಗೆ ಬೇರೆಬೇರೆಯಾಗಿ ಪತ್ರಿಕಾ ಪ್ರಪಂಚವನ್ನು ವಿಂಗಡಿಸಬಹುದು. ಈ ಪರಿಸ್ಥಿತಿ ಹೇಗೆಯೇ ಇರಲಿ, ತಮಗೆ ಬೇಕಾದ ಪ್ರಚಾರವನ್ನು ಮಾತ್ರ ಬಹ್ವಂಶ ಪತ್ರಿಕೆಗಳ ಮೂಲಕ ಸರಕಾರ ಸುಲಭವಾಗಿ ಸಾಧಿಸುತ್ತವೆ. ಅದು ಒದಗಿಸುವ ಸಾಹಿತ್ಯವೆಲ್ಲ ಆ ಪತ್ರಿಕೆಗಳಲ್ಲಿ ಅಚ್ಚಾಗುತ್ತದೆ. ರೇಡಿಯೋ, ಟೆಲಿವಿಷನುಗಳಂತೂ ಸರಕಾರದ ಆಸ್ತಿ, ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಪ್ರತ್ಯಕ್ಷವಾಗಿ ಆ ಸಂಪರ್ಕ ವ್ಯವಸ್ಥೆ ದಕ್ಕುವುದಿಲ್ಲವಾದರೂ ಸರಕಾರ ತಾನು ಯೋಜಿಸುವ ಪ್ರಚಾರಕಾರ್ಯಗಳಿಗೆ ಅವುಗಳನ್ನು ಉಪಯೋಗಿಸಬಹುದು.

ಒಂದು ಗಾದೆಯಿದೆ: "ಗೀತಗಳನ್ನು ನಾನು ಹಾಡುವುದು ಸಾಧ್ಯವಿರುವಷ್ಟು ಕಾಲ,

ಕಾನೂನುಗಳನ್ನು ಯಾರು ರೂಪಿಸಿದರೇನು? ನನಗೆ ಅದರ ಗೊಡವೆ ಇಲ್ಲ."

ನಮ್ಮ ನೀತಿ ಯೋಜಕರೂ ಇದನ್ನು ಬಲ್ಲರೆಂದು ತೋರುತ್ತದೆ; ಕಾನೂನು ಏನೆಂಬುದನ್ನು ಹಾಡಿನ ಮೂಲಕವೇ ಅವರು ತಿಳಿಸಿಕೊಡಲು ಹೊರಟಿದ್ದಾರೆ! ಗಾನ, ನೃತ್ಯ, ನಾಟಕ-ಪ್ರಸಾರದ ಹಾಗೂ ಅಭಿನಯದ ನಾಟಕ, ಕವಿತೆ, ಕತೆ.....

ರೂಪುರೇಖೆ ಸಿದ್ಧಪಡಿಸುವವರೆಲ್ಲ ಅಧಿಕಾರಿಗಳೇ; ಬಣ್ಣ ತುಂಬುವುದು ಸಾಹಿತಿಗಳ ಕೆಲಸ.

* * *

ಪರಂಪರಾನುಗತ ಹಾಗೂ ಆಧುನಿಕ ಸಂಪರ್ಕ ಮಾಧ್ಯಮಗಳನ್ನು ಬಳಸಿ, ಸಾಹಿತ್ಯವನ್ನು ಉಪಯೋಗಿಸಿಕೊಂಡು, ರಾಷ್ಟ್ರವ್ಯಾಪ್ತಿಯಲ್ಲೂ ಈ ರಾಜ್ಯದಲ್ಲೂ ಸರಕಾರ ನಡೆಸಿದ ಪ್ರಚಾರಕಾರ್ಯದ ವಿವರ ಸ್ವಾರಸ್ಯಕರವಾಗಿದೆ.

ವಾರ್ತಾ ಮತ್ತು ಪ್ರಸಾರ ಮಂತ್ರಿಶಾಖೆ ಕಳೆದವರ್ಷದ ಚಟುವಟಿಕೆಗಳನ್ನು ಕುರಿತ ತನ್ನ ವರದಿಯಲ್ಲಿ ಹೀಗೆ ಹೇಳಿದೆ:

"ಆಕಾಶವಾಣಿಯು ನಾಟಕ ಪರಂಪರೆಯನ್ನು ಕಾಪಾಡುವುದರಲ್ಲೂ ನಾಟಕ ರಚನೆಗೆ ಪ್ರೇರೇಪಣೆ ನೀಡುವುದರಲ್ಲೂ ಮಹತ್ವದ ಪಾತ್ರವಹಿಸಿದೆ. ಮನೋರಂಜನೆ ಯೊದಗಿಸುವ ನಾಟಕಗಳನ್ನಲ್ಲದೆ ಆಕಾಶವಾಣಿಯ ರಾಷ್ಟ್ರೀಯ ಚಟುವಟಿಕೆಗಳು, ಯೋಜನೆಗಳು, ಆದರ್ಶಗಳು, ಆಕಾಂಕ್ಷೆಗಳು, ಕುಟುಂಬ ಯೋಜನೆ, ರಕ್ಷಣಾ ಅವಶ್ಯತೆಗಳು—ಈ ಬಗ್ಗೆ ಜನಸಮುದಾಯಕ್ಕೆ ಶಿಕ್ಷಣ ನೀಡುವುದಕ್ಕೋಸ್ಕರ ಧ್ಯೇಯೋದ್ದೇಶಗಳುಳ್ಳ ನಾಟಕಗಳನ್ನೂ ಪ್ರಸಾರಮಾಡುತ್ತದೆ."

ಈ ಮಂತ್ರಿಶಾಖೆಯ ಅಧೀನದಲ್ಲೇ ಇರುವ ಗೀತ-ನಾಟಕ ವಿಭಾಗ ಕಳೆದ ವರ್ಷ ಒಟ್ಟು ೬,೦೧೩ ಪ್ರದರ್ಶನಗಳನ್ನು ಇತ್ತಿದೆ. ಇವುಗಳಲ್ಲಿ ೫೧೦ ನಾಟಕ ಪ್ರದರ್ಶನಗಳಾಗಿದ್ದುವು, ರಾಷ್ಟ್ರೀಯ ಭಾವೈಕ್ಯ, ಕುಟುಂಬಯೋಜನೆ, ರಾಷ್ಟ್ರ ರಕ್ಷಣೆ—ಇವು ಆ ನಾಟಕಗಳ, ಹೇಳಿ ಬರೆಯಿಸಿದ ನಾಟಕಗಳ, ವಸ್ತುಗಳಾಗಿದ್ದುವು.

ಕಳೆದ ವರ್ಷದ ಜನವರಿಯಿಂದ ನವೆಂಬರ್ ಅಂತ್ಯದವರೆಗಿನ ೧೧ ತಿಂಗಳಲ್ಲಿ ಪಂಚವಾರ್ಷಿಕ ಯೋಜನಾ ಪ್ರಚಾರ ಘಟಕ 'ಮೈಸೂರು ರಾಜ್ಯ'ದಲ್ಲಿ ನಡೆಸಿದ ಚಟುವಟಿಕೆಗಳ ವರದಿಯೂ ದಂಗುಬಡಿಸುವಂಥಾದ್ದು. ಘಟಕದ ವಿವಿಧ ಅಧಿಕಾರಿಗಳು ೯೨೯ ದಿನ ಪ್ರವಾಸ ಮಾಡಿದರು : ೯೩೫ ಸ್ಥಳಗಳನ್ನು ಸಂದರ್ಶಿಸಿದರು; ೧೭೭೯ ಚಲಚ್ಚಿತ್ರ ಪ್ರದರ್ಶನಗಳನ್ನು ಏರ್ಪಡಿಸಿದರು, ೧೫,೫೮,೭೬೮ ಜನ ಅವುಗಳನ್ನು ಈಕ್ಷಿಸಿದರೆಂದು ಅಂದಾಜು. ೧,೦೫೨ ಸಾರ್ವಜನಿಕ ಸಭೆಗಳನ್ನು ನಡೆಸಿದರು. ೭೭೭ ಚರ್ಚಾಕೂಟಗಳಾದುವು. ಆ ಅವಧಿಯಲ್ಲಿ ೩೫ ನಾಟಕಗಳೂ

೩೬೯ ಹರಿಕಥೆ-ಶಿವಕಥೆಗಳೂ ೧೮೦ ಧಾರ್ಮಿಕ ಪ್ರವಚನಗಳೂ ಒಂದು ಕವಿ ಸಮ್ಮೇಳನವೂ, ಮೂರು ಲಾವಣಿ ಕಾರ್ಯಕ್ರಮಗಳೂ ಗೀತನಾಟಕ ವಿಭಾಗದ ಪರವಾಗಿ ಏರ್ಪಟ್ಟುವು. ಘಟಕ ತಾನೇ ಸ್ಥಳೀಯ ಪ್ರತಿಭೆಯ ನೆರವಿನಿಂದ ೮ ನಾಟಕಗಳನ್ನು ಪ್ರದರ್ಶಿಸಿತ್ತು, ಧಾರ್ಮಿಕ ಪ್ರವಚನಗಳಾದುವು; ೪೫ ಹರಿಕಥೆ ಶಿವಕಥೆಗಳಾದುವು; ೨ ಧಾರ್ಮಿಕ ಪ್ರವಚನಗಳಾದುವು; ೧೩ ಸಾಂಸ್ಕೃತಿಕ ಕಾರ್ಯಕ್ರಮಗಳಾದುವು.

ಪಂಚವಾರ್ಷಿಕ ಯೋಜನೆಗೆ ಸಂಬಂಧಿಸಿ—ನಾಲ್ಕನೇ ಯೋಜನೆ ಸಿಕ್ಕು ಗಂಟಾಗಿದ್ದರೂ ಕೂಡಾ—ಪ್ರಚಾರ ನಡೆಯಿತೆಂದು ಬೇರೆ ಹೇಳಬೇಕಾಗಿಲ್ಲ.

* * *

ಕುಟುಂಬಯೋಜನೆಯ ಪ್ರಚಾರಕ್ಕಾಗಿ ಮೂವರು ಬೇರೆಬೇರೆ ಅಧಿಕಾರಿಗಳನ್ನೇ ಕೇಂದ್ರ ಸರಕಾರ ನೇಮಿಸಿದೆ. ನೂರು ಗಾಂಧಾರಿ ಪುತ್ರರು—ಐವರು ಕುಂತೀ ಪುತ್ರರು. ಈ ಯಕ್ಷಗಾನ ಕಥೆಯ ಮೂಲಕ ಕುಟುಂಬಯೋಜನೆಯ ಮಹತ್ವವನ್ನು ಸರಕಾರ ಮನಗಾಣಿಸಿಕೊಡುತ್ತದೆ.

ಸತ್ಯ ಕಥೆಗಳ ಮೂಲಕ ಪ್ರಾದೇಶಿಕ ಅಧಿಕಾರಿಯೊಬ್ಬರು ಸಣ್ಣದೊಡ್ಡ ಪತ್ರಿಕೆಗಳ ಹಲವು ಪುಟಗಳನ್ನು ಆಕ್ರಮಿಸಿದ್ದಾರೆ.

ಒಂದು ಕಥೆ : ನಗುತ್ತಾ ಮುದ್ದಿಟ್ಟಳು.

ಅಂತ್ಯವಾಗುವುದು ಹೀಗೆ: "ಮೇರಿ ಈಗ ಹೇಗಿದ್ದಿ?"ಎಂದು ಲಲಿತಮ್ಮ ತಿರುಗಿ ಕೇಳಿದಾಗ ಮಗ್ಗುಲಲ್ಲಿ ಮಲಗಿ ಅಳುತ್ತಿದ್ದ ಮುದ್ದು ಮಗುವನ್ನೆತ್ತಿ, "ಚೆನ್ನಾಗಿದ್ದೇನೆ' ಎಂದು ಮೇರಿ ನಗುತ್ತಾ ಮುದ್ದಿಟ್ಟಳು.

ಮತ್ತೊಂದು ಕಥೆ : 'ಗಂಡ ಸಲಹೆ ನೀಡಿದರು. ಅಮ್ಮ ಧೈರ್ಯ ಕೊಟ್ಟಳು' ಆರಂಭವಾಗುವುದು ಹೀಗೆ:

"ಶಕುಂತಲೆ ನನ್ನ ಹಿರಿಯ ಮಗಳು. ಆಕೆಗೆ ಮದುವೆಯಾಗಿ ನಾಲ್ಕು ವರ್ಷಗಳಾದುವು. ಆಕೆಗೆ ಒಂದೇ ಮಗು...."

ಇತರ ಕೆಲವು ಶೀರ್ಷಿಕೆಗಳು ಹೀಗಿವೆ:

'ಮಕ್ಕಳೆಂದರೆ ಎಲ್ಲರಿಗೂ ಅಕ್ಕರೆ, ಆದರೆ.....'

'ಹುಣಸೆಹುಳಿ ಸುಂಕಪ್ಪ.'

'ಮೂವರಿಗೆ ಮೂರು ದಾರಿ.'

'ಹೊಸ ತೊಟ್ಟಿಲು ಇನ್ನೂ ತೂಗುತ್ತಿಲ್ಲ.'

'ಒಂದೇ ದೋಣಿಯಲ್ಲಿ ಸಾಗುತ್ತಿರುವವರು,'

ಬೈಜುಗೆ ಜ್ಞಾನೋದಯ;

'ಸೂರ್ಯ ಮುಳುಗುವಾಗ.

'ಕುಪ್ಪೆಗಾಲದ ಕೆಂಪೇಗೌಡ.'

—ಶೈಲಿ, ಪದ ಸಂಪತ್ತಿ, ಸ್ವಾರಸ್ಯ —ಈ ಎಲ್ಲ ಕಾರಣದಿಂದ ಓದಿಸಿಕೊಂಡು ಹೋಗುವ ಸಾಮರ್ಥ್ಯವಿರುವ ಬರೆವಣಿಗೆ.

ಕುಟುಂಬಯೋಜನೆಗೆ ಸಂಬಂಧಿಸಿ ಒಕ್ಕೂಟದ ಉನ್ನತಾಧಿಕಾರಿಯೊಬ್ಬರು ಒಂದೆಡೆ ಹೀಗೆಂದಿದ್ದಾರೆ:

೨.೫ ದಶಲಕ್ಷ ಜನರ ಅಭಿಪ್ರಾಯ ರೂಢಿಸುವ ನಾಯಕ ಗಣಕ್ಕೆ ಕುಟುಂಬಯೋಜನೆ ಕುರಿತು ಸಾಹಿತ್ಯವನ್ನು ಅಂಚೆ ಮೂಲಕ ಕಳುಹಿಸಿ ಕೊಡಲಾಗುತ್ತಿದೆ."

ಇನ್ನೊಬ್ಬರು: "ಕುಟುಂಬ ಯೋಜನೆಯಲ್ಲಿ ಹೊಸ ವಿಧಾನ ರೂಪಿಸಲೆಂದು ಜಾನಪದ ಕಲೆ, ಸಂಗೀತಗಳ ಮೂಲಕ ಜನತೆಗೆ ಸಂದೇಶ ಮುಟ್ಟಿಸಲು ಪ್ರಯತ್ನಿಸಲಾಗುತ್ತಿದೆ. ತತ್ಫಲವಾಗಿ ದೇಶದ ಸಂಗೀತಗಾರರು, ಸೂತ್ರದ ಗೊಂಬೆಯಾಟಗಾರರು, ನಾಟಕಕಾರರ ಪುನರುಜ್ಜೀವನಕ್ಕೆ ಮಾರ್ಗದರ್ಶಿಯಾಗಿದೆ."

ನಾಟಕವೇನು, ಸಾಹಿತ್ಯವೇನು? ಪ್ರಚಾರಕ್ಕಾಗಿ ಅವುಗಳನ್ನು ಬಳಸಿಕೊಳ್ಳುವುದಷ್ಟೇ ಅಲ್ಲದೆ, ಅವುಗಳ ಉತ್ಕರ್ಷಕ್ಕೆ ತಾವು ಕಾರಣರಾಗಿದ್ದೇವೆ—ಎಂಬುದು ಈ ಅಧಿಕಾರಿಗಳ ದೃಢ ನಂಬುಗೆ !

* * *

ಒಂದು ಕೃತಿಯ ಮುನ್ನುಡಿಯಲ್ಲಿ ಹೀಗಿದೆ: "ವಾರ್ತಾ ಮತ್ತು ಪ್ರಸಾರಾಂಗದ ನಾಟಕ ವಿಭಾಗದವರು ೧೯೬೦ನೇ ಸಾಲಿನಲ್ಲಿ ಏರ್ಪಡಿಸಿದ್ದ ಪ್ರಸಾರಯೋಗ್ಯವಾದ ನಾಟಕಗಳ ಸ್ಪರ್ಧೆಯಲ್ಲಿ ಈ ಕೃತಿಗೆ ಬಹುಮಾನವಿತ್ತು ಪ್ರೋತ್ಸಾಹಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು ಸಲ್ಲುತ್ತವೆ."

ಇದೇ ಬಗೆಯ—ಅಥವಾ ಇದಕ್ಕಿಂತಲೂ ಹೆಚ್ಚು ತೂಕದ—ಬಹುಮಾನ, ಪ್ರೋತ್ಸಾಹ ಇನ್ನೂ ಅನೇಕರಿಗೆ ದೊರೆತಿದೆ.

'ರಾಷ್ಟ್ರೀಯ ಕವನ'ಗಳ ಒಂದು ಸಂಕಲನದಲ್ಲಿ ಈ ಹಾಡಿದೆ:

"ಕುಡಿಯಬೇಡಣ್ಣ। ಹೆಂಡ ।
ಕುಡಿಯಬೇಡಣ್ಣ ।
ಹೆಂಡತೀಯ ನೋಡಣ್ಣ ।
ಮಕ್ಕಳಳುವ ಕೇಳಣ್ಣ ।
ಮನೆ-ಮಠ ಹೋಯ್ತಣ್ಣ।

ಸಾಲ-ಗೀಲ ಆಯ್ತಣ್ಣ।
ಕುಡಿಯ ಬೇಡಣ್ಣ। ಹೆಂಡ।
ಕುಡಿಯ ಬೇಡಣ್ಣ"

ಒಂದು ಪುಸ್ತಿಕೆಯ ಹೆಸರು: 'ನವರಸಭರಿತ ಲಾವಣ್ಯಾಮೃತ.' ಮಹಾತ್ಮ ಗಾಂಧಿ ಜಯಂತಿ ಲಾವಣಿ ಅದರೊಳಗಿನ ಹಾಡಿನ ಒಂದು ಪಲ್ಲವಿ:

"ಜನರೇಕ ಮತದೊಳೆಮ್ ರಾಷ್ಟ್ರ ರಕ್ಷಣೆಯ ನಿಧಿಗೆ
ಧನಕನಕ ಪದಾರ್ಥಗಳನ್ನು ನೀಡಿ ಘನದೊಳಗೆ,"

ಚೀನಾ ಈ ದೇಶವನ್ನು ಆಕ್ರಮಿಸಿದ ವೇಳೆಯಲ್ಲಿ ಆಕಾಶವಾಣಿ ಒಂದೇ ಸಮನೆ ಬಿತ್ತರಿಸಿದ ನೂರಾರು ವೀರಗೀತೆಗಳ ನೆನಪು ಶ್ರೋತೃಗಳಿಗೆ ಇನ್ನೂ ಇದ್ದಿತು.!

* * *

ಪ್ರಚಾರದ ಸಮವಸ್ತ್ರ ಧರಿಸಿದಾಗ ಸಾಹಿತ್ಯ ಸರಸೋತಿ ಯಮಭಯಂಕರಳಾಗುವ ಸಂದರ್ಭಗಳೇ ಹೆಚ್ಚು.

ಹಾಗಿದ್ದರೆ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಸಾಹಿತ್ಯದ ಬಳಕೆ, ತಪ್ಪೆ?

ಇದಕ್ಕೆ ಪ್ರತಿಯಾಗಿ ಕೇಳುವ ಪ್ರಶ್ನೆಯೆಂದರೆ:

"ಶೈಲಿ, ಪದಸಂಪತ್ತಿ, ನವರಸ ಚೇತನಗಳಿಂದ ಸಾಹಿತ್ಯಕೃತಿಯೇ ಸೃಷ್ಟಿಯಾಗುತ್ತದೆ ಎನ್ನುವುದಕ್ಕೆ ಭರವಸೆ ಏನು?"

ಯಾವ ಹಿರಿಯ ರಾಷ್ಟ್ರನಿರ್ಮಾಪಕನೂ ಸಾಹಿತಿ ಸರಕಾರದ ಸೇವಕನಾಗಲಿ-ಎಂದು ಹೇಳಲಾರ.

ಸಾಹಿತ್ಯವೂ ಒಂದು ಬಗೆಯ ದರ್ಜಿ ಕೆಲಸ, ಒಂದು ಬಗೆಯ ಬಡಗಿ ಕೆಲಸ ಎಂದು ಭಾವಿಸುವ ಅಧಿಕಾರಿಗಳಿಗೆ ಬರಗಾಲವಿಲ್ಲ. ದುಡ್ಡು ತೆತ್ತರೆ ತಮಗೆ ಬೇಕೆನಿಸುವ ಸಾಹಿತ್ಯ ಸೃಷ್ಟಿಯಾಗುತ್ತದೆ ಎಂದು ಅವರ ಭಾವನೆ. ಅಧಿಕಾರವಿರುವವರು ಮುಂದೆ ಅಂಥ ಸಾಹಿತಿಗೇ ಅಕಾಡಮಿ ಪ್ರಶಸ್ತಿ ಕೊಡಬಹುದು, ಪದ್ಮ ಪದಕ ನೀಡಬಹುದು. ಸ್ಟಾಲಿನ್ ಅವಧಿಯಲ್ಲಿ ರಷ್ಯಾ ದೇಶದಲ್ಲಿ ಸಾಹಿತ್ಯದ ಗತಿ ಏನಾಯಿತು? ಅದರ ಪುನರಾವೃತ್ತಿ ಈ ದೇಶದಲ್ಲಿ ಆಗಲೆಂದು ಯಾವನೂ ಬಯಸಲಾರ.

* * *

ಆಡಳಿತಗಾರರಿಗೆ ಹೇಗೆಯೋ ಹಾಗೆಯೇ ರಾಜಕೀಯ ಪಕ್ಷಗಳಿಗೂ ಸಾಹಿತಿಗಳ ಮೇಲೆ ಮಮತೆ. ದಕ್ಷಿಣದಲ್ಲಂತೂ ಬರೇ ವಾಕ್‌ಶಕ್ತಿಯೂ ವಾಕ್ಯಶಕ್ತಿಯೂ ಒಂದು ಪಕ್ಷವನ್ನು ಅಧಿಕಾರಕ್ಕೆ ತಂದಿತು. ಕಮ್ಯೂನಿಸ್ಟ್ ಪಕ್ಷದಲ್ಲೂ—ಬಂಗಾಳಿ, ಹಿಂದಿ,

ಮಲೆಯಾಳಿ ಯಾವುದೇ ಭಾಷೆ ಇರಲಿ—ಸಮರ್ಥ ಬರೆಹಗಾರರಿದ್ದಾರೆ.

ಒಂದಲ್ಲ ಒಂದು ಪ್ರಲೋಭನ ತೋರಿ-ಕಡೆಯ ಪಕ್ಷ ಆಕಾಶವಾಣಿಯ ಇಪ್ಪತ್ತೈದು ರೂಪಾಯಿಗಳ ಕಾಂಟ್ರಾಕ್ಟು-ಲೇಖಕರನ್ನು ತಮ್ಮ ಬರೆವಣಿಗೆ ಕೆಲಸಕ್ಕೆ ಆಕರ್ಷಿಸುವ ಶಕ್ತಿ ಹಿರಿಯ ಆಳುವ ಪಕ್ಷಕ್ಕಿದೆ. ಹಿರಿಯಕ್ಕನ ಚಾಳಿ. ಉಳಿದ ಆಳುವ ಪಕ್ಷಗಳಿಗೂ ಸಹಜವಾಗಿಯೇ ಆ ಶಕ್ತಿ ಪ್ರಾಪ್ತವಾಗುತ್ತದೆ.

ಇಲ್ಲಿ ಒಂದು ಪ್ರಶ್ನೆಗೆ ಎಡೆಯಿದೆ: ಯಾವುದೇ ಒಂದು ತತ್ವದಲ್ಲಿ, ವಿಚಾರ ಪ್ರಣಾಳಿಕೆಯಲ್ಲಿ, ರಾಜಕೀಯ ಸಿದ್ಧಾಂತದಲ್ಲಿ ನಂಬುಗೆ ಇರುವ ಬರೆಹಗಾರ ತನ್ನ ಮನಸ್ಸಾಕ್ಷಿಗೆ ಅನುಗುಣವಾಗಿ ಕೃತಿ ರಚಿಸಬಾರದೆ? ಅದನ್ನು 'ಪ್ರಚಾರ' ಎನ್ನಬೇಕೆ?

ಖಂಡಿತವಾಗಿಯೂ ಆತ ತನ್ನ ಒಳದನಿಗೆ ಅನುಸಾರವಾಗಿ ಸೃಷ್ಟಿಕಾರ್ಯದಲ್ಲಿ ನಿರತನಾಗಬಹುದು. ಬರೆದುದೆಲ್ಲವೂ ಸಾಹಿತ್ಯವೆನಿಸುತ್ತದೋ ಇಲ್ಲವೋ ಎಂಬುದರ ಪರಾಮರ್ಶೆ ನಡೆಯುವುದು ಆ ಬಳಿಕ. ಸಾಹಿತ್ಯಮೌಲ್ಯಗಳ ಒರೆಗಲ್ಲಿಗೆ ಅಂಥ ಬರೆವಣಿಗೆಯನ್ನು ತೀಡಿದಾಗ ಅದರ ತೂಕ ಬಯಲಾಗುತ್ತದೆ.

ಜಗತ್ತಿನಲ್ಲಿ ಸದಾಕಾಲವೂ ಶ್ರೇಷ್ಠ ಸಾಹಿತ್ಯಕೃತಿಗಳು ದಾರಿದೀಪಗಳಾಗಿವೆ; ಇತಿಹಾಸವನ್ನು ರೂಪಿಸಿವೆ. ಮುಂದೆಯೂ ಹೀಗೆಯೇ ಇರುತ್ತದೆಂಬ ಬಗ್ಗೆ ಸಂದೇಹ ಬೇಕಾಗಿಲ್ಲ.

ಆದರೆ ಇನ್ನೊಬ್ಬರ ಆಣತಿಯಂತೆ ಬರೆಯಲಾದ ಕೃತಿ—ಸಂತೆಗೋಸ್ಕರ ನೆಯ್ದ ಮೂರು ಮೊಳ—ಮೂವತ್ತು ಬೆಳ್ಳಿಗಳ ಸೊತ್ತು ಸಾಹಿತ್ಯವೆನಿಸೀತೆ? ಬಹಳ ದಿನ ಬಾಳೀತೆ ?

* * *

ಕರ್ಮಯೋಗಿ ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಕಟ್ಟೆಯನ್ನು ಕಟ್ಟಿಸಿದಾಗ ಆ ಬಗ್ಗೆ ಜನರನ್ನೇ ಹುರಿದುಂಬಿಸುವ ಕತೆ, ಕಾದಂಬರಿ, ನಾಟಕಗಳನ್ನು ಯಾರೂ ಬರೆಯಲಿಲ್ಲ—ಯಾರೂ ಬರೆಸಲಿಲ್ಲ.

ಮುಂದೆ ಸೌಂದರ್ಯೋಪಾಸಕ ಮಿರ್ಜಾ ಇಸ್ಮಾಯಿಲರ ಕಾಲಕ್ಕೆ ಪರಿಸ್ಥಿತಿ ಸ್ವಲ್ಪ ಬದಲಾಯಿತು. ಯುವಕ ಬರೆಹಗಾರನೊಬ್ಬನನ್ನು ಹಿಡಿದು ಮೈಸೂರು ರಾಜ್ಯದ ಬಗೆಗೆ ಒಂದು ಪುಸ್ತಕ ಬರೆಸಿದರು. ಆ ಸಂಬಂಧದಲ್ಲಿ ರಾಜ್ಯವನ್ನೆಲ್ಲ ಸುತ್ತಿ ಬರಲು ಅನುಕೂಲ ಮಾಡಿಕೊಟ್ಟ ಮಿರ್ಜಾ ಸಾಹೇಬರಿಗೆ ತಮ್ಮ ಋಣವನ್ನು ಆ ಗ್ರಂಥಕರ್ತ ಮುನ್ನುಡಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಆರ್. ಕೆ. ನಾರಾಯಣರನ್ನು ಈ ದಿನ 'ಸ್ವಾಮಿ ಮತ್ತು ಸ್ನೇಹಿತರು' ಮತ್ತಿತರ

ಕೃತಿಗಳಿಗಾಗಿ ಸ್ಮರಿಸುತ್ತಾರೆಯೇ ಹೊರತು, ಮೈಸೂರು ರಾಜ್ಯದ ಬಗೆಗೆ ಅವರು ಬರೆದ ಪುಸ್ತಕದ ಪ್ರಸ್ತಾಪವನ್ನು ಯಾರೂ ಮಾಡುವುದಿಲ್ಲ. ಈಗಲಂತೂ, ಸ್ವತಂತ್ರ ಭಾರತದಲ್ಲಿ ಅನೇಕ ಸಮಸ್ಯೆಗಳು ತಲೆ ತಿನ್ನುತ್ತಿರುವಾಗ, ಭಾರೀ ಪ್ರಮಾಣದ ಅಭಿವೃದ್ಧಿ ಕಾರ್ಯಗಳು ನಡೆದಿರುವಾಗ, ಶತಮಾನಗಳ ಕಾಲ ನಿದ್ದೆಯಲ್ಲಿದ್ದ ದೈತ್ಯ ಇದೀಗ ಎಚ್ಚತ್ತಿರುವಾಗ, ಬರೆಹಗಾರನಿಗೆ ಆಹ್ವಾನ ಬರುವುದು ಸಹಜ. ಆ ಆಹ್ವಾನವನ್ನು ಏನು ಮಾಡಬೇಕು? ಸ್ವೀಕರಿಸುವುದಾದರೆ ಎಷ್ಟರ ಮಟ್ಟಿಗೆ? ಹೇಗೆ? ಇದನ್ನೆಲ್ಲ ಆ ಬರೆಹಗಾರನೇ ತೀರ್ಮಾನಿಸಬೇಕು. ತನ್ನ ಮನಸ್ಸಾಕ್ಷಿಯ ಸಲಹೆಯಂತೆ ಆತ ನಡೆದುಕೊಳ್ಳಬೇಕು.

ನಮ್ಮ ದೇಶದಲ್ಲಿ 'ಪ್ರಚಾರ' 'ಶಿಕ್ಷಣ'ವಾಗಿ ಮಾರ್ಪಡಲು ಇನ್ನೂ ಬಹಳ ಕಾಲ ಬೇಕು. ಅಷ್ಟರತನಕ ಪ್ರಚಾರಕಾರ್ಯಕ್ಕೆಂದೇ ಬರೆಹಗಾರರ ದಂಡೊಂದು ಇಲ್ಲಿ ದುಡಿಯುತ್ತದೆ. ರಾಜಕೀಯ ಪಕ್ಷಗಳಲ್ಲಿ ಅಂಥ 'ಸೈನಿಕರ' ಲೇಖನಿಸೇವೆ ಸಲ್ಲಿಸುತ್ತದೆ. ಆ ದುಡಿಮೆ-ಸೇವೆಗಳಿಗೆಲ್ಲ ಸಾಹಿತ್ಯದ ಪ್ರಭಾವಳಿಯನ್ನು ಕಲ್ಪಿಸುವುದು ಮೂರ್ಖ ಕೆಲಸ. ಪ್ರಚಾರ ಏನಿದ್ದರೂ ಪ್ರಚಾರವೇ; ಸಾಹಿತ್ಯ ಸಾಹಿತ್ಯವೇ.

- 'ಪ್ರಬುದ್ಧ ಕರ್ನಾಟಕ'ದ ಚಿನ್ನದ ಹಬ್ಬದ ಸಂದರ್ಭದಲ್ಲಿ, ಒಂದು ವಿಚಾರ ಸಂಕಿರಣದಲ್ಲಿ ಮಂಡಿಸಿದ ನಿಬಂಧ.

೧೯೭೪

ಕಮಿಟ್‌ಮೆಂಟ್ ಯಾರಿಗೆ ? ಯಾವುದಕ್ಕೆ?

ಸಾಹಿತ್ಯಲೋಕದಲ್ಲೂ ಕಲಾಜಗತ್ತಿನಲ್ಲೂ ಆಗಾಗ್ಗೆ ಕಣ್ಣು ಕಿವಿಗಳಿಗೆ ಬೀಳುವ ಪದ—ಕಮಿಟ್‌ಮೆಂಟ್.

ವ್ಯವಹಾರದಲ್ಲಿ ಆ ಪದಕ್ಕೂ ಅದರ ವಿವಿಧ ರೂಪಗಳಿಗೂ ಇರುವ ಅರ್ಥ ಹೀಗೆ :

ವಚನ ಬದ್ಧತೆ-ಕಮಿಟೆಡ್ ವ್ಯಕ್ತಿ, ವಚನಬದ್ಧವ್ಯಕ್ತಿ.

ಕಟ್ಟುಪಾಡು-ಕಮಿಟ್ ಆದವನು, ಕಟ್ಟುಪಾಡಿಗೆ ಒಳಗಾದವನು.

ನ್ಯಾಯರಂಗದಲ್ಲಿ: ಸೆಷನ್ಸ್‌ಗೆ ಕಮಿಟ್ ಮಾಡಿದ್ರು.

ಹಣದ ಪ್ರಶ್ನೆ ಬಂದಾಗ

—ಈ ಸಲ ಬೇಡ. ತುಂಬಾ ಕಮಿಟ್‌ಮೆಂಟ್ಸ್‌ಇವೆ.

"ಕೊಟ್ಟಮಾತಿಗೆ ತಪ್ಪಲಾರೆನು, ಕೆಟ್ಟಯೋಚನೆ ಮಾಡಲಾರೆನು."

ಹಾಗಾದರೆ, ವಚನಬದ್ಧತೆಯ ಹಿನ್ನೆಲೆಯಲ್ಲಿ ಪ್ರಭಾವಳಿ ಮೂಡುತ್ತದಲ್ಲ?

ಪ್ರಭೆ, ನಿಜ. ಆದರೆ ಒಂದು ಬಗೆಯ ಬಂಧನದ ಭಾವನೆ? ಮುಜುಗರದ ಅನುಭವ? ಅಥವಾ, ಋಣಭಾರ?

* * *

ಕಮಿಟ್‌ಮೆಂಟ್ ಕೂಡಾ ನಾನಾಬಗೆಯದು: ಒಂದು ತತ್ತ್ವಕ್ಕೆ: ಒಂದು ರಾಜಕೀಯ ಪಕ್ಷಕ್ಕೆ ಅಥವಾ ರಾಜಕೀಯ ದರ್ಶನಕ್ಕೆ;ಯಾವುದೋ ಸಾಮಾಜಿಕ ಸಿದ್ಧಾಂತಕ್ಕೆ; ಒಬ್ಬ ವ್ಯಕ್ತಿಗೆ ಇಲ್ಲವೆ ಒಂದು ಪ್ರಣಾಳಿಕೆಗೆ. ಕಮಿಟ್‌ಮೆಂಟ್ ಧರ್ಮಮೂಲದ್ದೂ ಆಗಬಹುದು. ಒಂದು ಸಂಘಟನೆಗೆ ಅವರ ಧ್ಯೇಯ ಧೋರಣೆಗಳಿಗೆ ಇರಬಹುದು, ಒಬ್ಬರ ಕಮಿಟ್‌ಮೆಂಟ್.

ಬರೆಹಗಾರನನ್ನೋ ಕಲಾವಿದನನ್ನೋ 'ಕಮಿಟೆಡ್ ವ್ಯಕ್ತಿ' ಅಥವಾ 'ಕಮಿಟ್ ಆಗದವನು' ಎಂದು ಗುರುತಿಸುವುದುಂಟು. ಲೋಕವೆಲ್ಲ ಸಾಹಿತ್ಯವನ್ನು ಹೀಗೆ ಅರಿಯಲು ಹೊರಟರೆ ಆಗುವ ಅನುಭವ ಎಂಥದು ?

ಗ್ರೀಕ್ ಮಹಾಕಾವ್ಯಗಳನ್ನು ಬರೆದ ಹೋಮರನಿಗೆ (ಅಥವಾ 'ಹೋಮರ'ರಿಗೆ, ಯಾಕೆಂದರೆ ಅವರು ಹಲವರಿದ್ದರು, ವ್ಯಾಸರ ಹಾಗೆ) ಕಮಿಟ್‌ಮೆಂಟ್ ಇತ್ತೇ ಇಲ್ಲವೆ? ವಾಲ್ಮೀಕಿಗೆ?' 'ವ್ಯಾಸ'ರಿಗೆ ?

ವೇದಗಳು, ಬೈಬಲ್—ಈ ಬಗೆಯ ಸಾಹಿತ್ಯವನ್ನೇನ್ನೋ ಕಮಿಟೆಡ್ ಎನ್ನಬಹುದು, ಧಾರಾಳವಾಗಿ. ಚಿರಕಾಲ ಬಾಳುವ ನಾಟಕಗಳನ್ನಿತ್ತ ಸಾಫೊಕ್ಲಿಸ್-ಯೂರಿಪೀಸ್-ಈಸ್ಕೈಲಸ್, ಸಾಮಾಜಿಕ ವಿಡಂಬನೆಯಲ್ಲಿ ನಿರತನಾದ ನಾಟಕಕಾರ ಅರಿಸ್ಟಾಫನೀಸ್ ಯಾರಿಗೆ ಕಮಿಟ್ ಆಗಿದ್ದರು? ವಿಶ್ವದ ವಿವಿಧ ಭಾಷೆಗಳ ನೀತಿಕಥೆಗಳು (ಭಾರತ-ಗ್ರೀಸ್‌ಗಳಿಂದ ಮೊದಲಾಗಿ ಆಧುನಿಕ ಚೀನಾದ ನೀತಿಕಥೆಗಳ ವರೆಗೆ)-ಎಲ್ಲವೂ ಕಮಿಟೆಡ್, ಯಾವುದೋ ನೀತಿಗೆ ಇಲ್ಲವೆ ತತ್ತ್ವಕ್ಕೆ. ಯುರೋಪಿನ ಪುನರುದಯ ನೀಡಿದ ಬೆಳಕು ಲೋಕಕ್ಕೆ ವರವಾಯಿತು. ಬಹುಮುಖ ಪ್ರತಿಭೆಯ ದ-ವಿಂಚಿ, ಮಹಾಶಿಲ್ಪಿ ಮೈಕೆಲೆಂಜಲೋ, ಕಾವ್ಯರ್ಷಿಗಳಾದ ಮಿಲ್ಟನ್, ದಾಂತೆ, ಗಯಟೆ-ಅಸಾಧಾರಣ ಕಮಿಟ್‌ಮೆಂಟ್ ಅವರದು. ಅವರಿಗಿಂತ ಸಾವಿರ ವರ್ಷ ಹಿಂದಿನ ಮಹಾಕವಿ ಕಾಳಿದಾಸನದು? ನಡುಗಾಲದ ನಾಡೋಜ ಪಂಪನದು? ನಾಲ್ಕು ಶತಮಾನ ಹಿಂದಿನ ಷೇಕ್ಸ್‌ಪಿಯರನದು? ಸರ್ವಜ್ಞನದು? ಫ್ರೆಂಚ್ ಕ್ರಾಂತಿಯ ಕಿಡಿಹೊತ್ತಿಸಿದ ವಾಲ್ಟೇರ್‌ನದು? ರಷ್ಯದ ಜನತೆಯ ಹೃದಯವನ್ನು ಮೀಟಿದ ಕವಿಪುಂಗವ ಪೂಷ್ಕಿನನದು ?

ನೂತನ ಅಮೆರಿಕದ ಭೂಮಿಗೀತೆಯನ್ನು ಹಾಡಿದ ವಾಲ್ಟ್ ವ್ಹಿಟ್ಮನನನ್ನು ಯಾವ ಗುಂಪಿಗೆ ಸೇರಿಸೋಣ? ಕುಸಿಯುತ್ತಿದ್ದ ಸಮಾಜವ್ಯವಸ್ಥೆಯ ದರ್ಪಣಕಾರರೂ ಮಾನವೀಯತೆಯ ಪ್ರತಿಪಾದಕರೂ ಆಗಿದ್ದ ರಷ್ಯದ ಟಾಲ್‌ಸ್ಟಾಯ್, ದಸ್ತಯೇವ್‌ಸ್ಕಿಯವರನ್ನು?

ಮಾರ್ಕ್‌ಟ್ವೇನನ ನಗೆಯ ಹಿಂದೆ, ಆಂಟನಿ ಚೇಖವನ ಮ್ಲಾನಮುಖದ ಹಿಂದೆ, ಮುದ್ದಣನ ಸಾಹಿತ್ಯದ ಸಮಾರಾಧನೆಯ ಹಿಂದೆ, ಯಾವುದಾದರೂ ಕಮಿಟ್‌ಮೆಂಟ್?

ಬಂಡವಾಳಶಾಹಿ ಶಕ್ತಿಶಾಲಿಯಾಗಿ, ಸಾಮ್ರಾಜ್ಯಗಳು ಉದಿಸಿದಾಗ ಸಾಹಿತ್ಯ ವರ್ಣವೈವಿಧ್ಯ ಕಂಡುಬಂತು. ಜಾಕ್ ಲಂಡನ್, ಆಪ್ಟನ್ ಸಿಂಕ್ಲೇರ್ ಉಕ್ಕಿನ ಲೇಖನಿ ಹಿರಿದರು. ಮ್ಯಾಕ್ಸಿಂ ಗೋರ್ಕಿಯ ಕುಡಿಕೆ ತುಂಬಾ ಕಹಿಯಾದ ಕೆಂಪುಶಾಯಿ. ಅಸಾಮಾನ್ಯ ಕವಿ ಮಾಯಕೋವ್‌ಸ್ಕಿ ಪದಗುಂಡುಗಳನ್ನು ಬಳಸಿದ. ಇವರೆಲ್ಲರ ಕಮಿಟ್‌ಮೆಂಟ್ ಸುಸ್ಪಷ್ಟ.

ನಾರ್ವೆಯ ಇಬ್ಸೆನ್ ಹತ್ತೊಂಬತ್ತನೆಯ ಶತಮಾನದಲ್ಲೇ ರಂಗಭೂಮಿಗೆ ದಾರಿದೀಪವಾದ. ಬರ್ನಾರ್ಡ್ ಷಾ ಸಮಾಜವಾದದ ಮಾತನ್ನಾಡಿದ; ತನ್ನ ಸಮಾಜವನ್ನು ಕಟುಟೀಕೆಗೆ ಗುರಿಮಾಡಿದ. ಇವರಿಗಿರಲಿಲ್ಲವೆ ಕಮಿಟ್‌ಮೆಂಟ್?

ಪರತಂತ್ರ ಭಾರತದಲ್ಲಿ ಬಂಕಿಮಬಾಬು ವಂದಿಸಿದರು, ಮಾತೆಗೆ. ಠಾಕೂರರ ಧ್ವನಿ ಜಗತ್ತಿನ ಗಮನವನ್ನು ಭಾರತದೆಡೆಗೆ ಸೆಳೆಯಿತು. ಸಾಮಾನ್ಯ ಕಮಿಟ್‌ಮೆಂಟ್ ಈ ಇಬ್ಬರದು? ಕನ್ನಡ ನವೋದಯಕ್ಕೆ ಪರಾಕು ನುಡಿದ ಬೇಂದ್ರೆ ಪುಟ್ಟಪ್ಪ? ತಮ್ಮ ಕಮಿಟ್‌ಮೆಂಟ್‌ನ ಅರಿವಿತ್ತೆ ಇವರಿಗೆ ?

ಲೋಕ ಕಂಡ ಮೊದಲ ಮಹಾಯುದ್ಧ, ಕ್ರೌರ್ಯ, ಸುಲಿಗೆಗಳಿಗಿದಿರು ಪಾಶ್ಚಾತ್ಯ ಜಗತ್ತಿನಲ್ಲಿ ಆರ್ತನಾದ ಕೇಳಿಸಿತು. ಆಗಿನದೆಲ್ಲ ಕರುಳು ಕಿವುಚುವ ಸಾಹಿತ್ಯ. ಅನಂತರದ ಬರಡು ಭೂಮಿಯನ್ನು, ಜೀವನದ ಸಂಕೀರ್ಣತೆಯನ್ನು ಇಲಿಯಟ್ ಚಿತ್ರಿಸಿದ. ಎಜ್ರಾ ಪೌಂಡ್ ನೂತನ ಸಾಹಿತ್ಯದ ಕಮ್ಮಾರಸಾಲೆಯಲ್ಲಿ ತಿದಿಯೊತ್ತುಗನಾದ. ಜಾಯ್ಸ್-ಲಾರೆನ್ಸರ ಗದ್ಯಸೃಷ್ಟಿ ಬೆಲೆ ಕಟ್ಟುವವರಿಗೆ ಆಹ್ವಾನವಾಯಿತು. ಈ ಜನವೆಲ್ಲ ಕಮಿಟ್ ಆಗಿದ್ದುದು ಯಾವುದಕ್ಕೆ?

ಆ ಬಳಿಕ ಬಂದ ಹೆಮಿಂಗ್‌ವೇ, ಆಡೆನ್, ಫಾಕ್ನ್, ಡಾಸ್ ಫಾಸಸ್ ಬಂಡವಾಳ ವಾದದ ಕರಾಳಮುಖ ಫಾಸಿಸಮಿಗಿದಿರು ಬರಿಯ ಲೇಖನಿಯನ್ನಲ್ಲ, ಬಂದೂಕನ್ನೂ ಬಳಸಿದರು. 'ನಾನು ವಿರಮಿಸಲಾರೆ' ಎಂದ ರೊಮಾರೋಲಾ. ಯೂರೋಪನ್ನು ಕಾರ್ಗತ್ತಲು ಕವಿದಾಗ ಸಾತ್-ಪಿಕಾಸೋ ಅಮರಕೃತಿ 'ಗೆರನಿಕಾ'ವನ್ನು ಚಿತ್ರಿಸಿದ. ಸೋವಿಯತ್ ರಷ್ಯದಲ್ಲಿ ಷೋಲೋಖೋವ್, ಸಿಮೊನೋವ್, ತಿಖೊನೊವ್ ಮತ್ತಿತರ ಲೇಖಕರೆಲ್ಲ ಸಮವಸ್ತ್ರಧಾರಿಗಳಾಗಿ ಯುದ್ಧಭೂಮಿಗೆ ನಡೆದರು. ಮುಟ್ಟಿದರೆ ಅರಳು ಸಿಡಿಯುವ ಕಮಿಟ್‌ಮೆಂಟ್ ಇವರದು.

ಚೀನದಲ್ಲಿ ಲು-ಶೂನ್ ಸಾಹಿತ್ಯಸೃಷ್ಟಿಗೆ ಹೊಸ ಅರ್ಥ ನೀಡಿದ. ಭಾರತದಲ್ಲಿ ಶರಶ್ಚಂದ್ರ ಪ್ರೇಮ್‌ಚಂದರು ತಮ್ಮ ಕತೆಕಾದಂಬರಿಗಳಿಂದ, ಸ್ವಾತಂತ್ರ್ಯಸಂಗ್ರಾಮದ ಫಲಶ್ರುತಿಯಾದ ನವೋದಯವನ್ನು ಅರ್ಥಪೂರ್ಣಗೊಳಿಸಿದರು. ಉಜ್ವಲ ಮೆರುಗಿನ ಕಮಿಟ್‌ಮೆಂಟ್ ಇದು.

ಮೂರು ನಾಲ್ಕನೆಯ ದಶಕಗಳಲ್ಲಿ ಯೂರೋಪಿನಲ್ಲೂ ಭಾರತ ಮತ್ತಿತರ ದೇಶಗಳಲ್ಲೂ ಪ್ರಗತಿಶೀಲ ಲೇಖಕರ ಚಳವಳಿ ತಲೆದೋರಿತು. ಇದರ ಒಡಹುಟ್ಟಿದ್ದು ಜನತಾ ರಂಗಭೂಮಿ. ಇದು ಗಮನಾರ್ಹ ಸಂಖ್ಯೆಯ ಬರೆಹಗಾರರನ್ನೂ ಕಲಾವಿದರನ್ನೂ ಆವರಿಸಿದ ಪ್ರಭಾವ—ಯಾವ ಸಂದೇಹಕ್ಕೂ ಎಡೆಗೊಡದ ದೃಢ ಕಮಿಟ್‌ಮೆಂಟು.

ಆಧುನಿಕರು, ನವ್ಯರು ಎಲ್ಲ ದೇಶಗಳಲ್ಲೂ ಇದ್ದಾರೆ—ಮುಕ್ತ ಸಮಾಜದಲ್ಲೂ ಬದ್ಧ ಸಮಾಜದಲ್ಲೂ. ಇವರಲ್ಲಿ ಕೆಲವರು ಧ್ವಜವಾಹಕರು. ಘೋಷವಾಕ್ಯಗಳುಂಟು, ಜಯಕಾರಗಳುಂಟು. ಇನ್ನು ಕೆಲವರು ಒಂಟಿ ಪಯಣಿಗರು. ಇವರೆನ್ನುತ್ತಾರೆ: "ನಮಗೆ ಯಾವ ಕಮಿಟ್‌ಮೆಂಟೂ ಇಲ್ಲ. ನಾವು ಸ್ವತಂತ್ರರು. ವಾಸ್ತವವಾಗಿ ಆ ಸ್ವಾತಂತ್ರ್ಯಕ್ಕೆ

ಅವರ ಶತಮಾನಗಳಿಂದ ಪ್ರಭುತ್ವ—ಸನ್ಮಾನ ಪಡೆಯಲೆಂದೇ ಕೃತಿ ರಚಿಸಿದವರಿಲ್ಲವೆ? ಎಷ್ಟು ಸ್ಫೂರ್ತಿ ನೀಡಬಲ್ಲ ಕಮಿಟ್‌ಮೆಂಟ್ ಇದು!

* * *

ಪಾರದರ್ಶಕ ದೂರದರ್ಶಕಗಳ ನೆರವಿನಿಂದ ಬರೆವಣಿಗೆಯಲ್ಲೂ ಕಲಾ ಕೃತಿಯಲ್ಲೂ ಕಮಿಟ್‌ಮೆಂಟ್ ಹುಡುಕುವುದು ಕೆಲವರ ಹವ್ಯಾಸ. ಕಳೆದ ನಾಲ್ವತ್ತು ಐವತ್ತು ವರ್ಷಗಳ ಕೃತಿಗಳು ಇಂಥವರಿಗೆ ಗ್ರಾಸ.

ಮತ್ತೂ ಹಿಂದಕ್ಕೆ ಸರಿದು ಕಾಲದ ಗವಿಯಲ್ಲಿ ಕಮಿಟ್‌ಮೆಂಟಿಗಾಗಿ ತಡಕಾಡಿದರೆ?

ಒಂದಲ್ಲ ಒಂದು ಬಗೆಯ ಕಮಿಟ್‌ಮೆಂಟ್ ಎಲ್ಲ ಕಾಲಗಳಲ್ಲೂ ಇದ್ದುದನ್ನು ಅವರು ಕಾಣಬಹುದು.

ಗ್ರೀಕ್ ಬುಡಕಟ್ಟಿನ ಹಿರಿಮೆಯನ್ನು ನಿರೂಪಿಸಿ, ಸಾಮಾಜಿಕ ನೀತಿ ನಿಯಮಗಳಿಗೆ ಅಳತೆಗೋಲನ್ನು ನಿರ್ಮಿಸಿರುವ ಮಹಾಕಾರ್ಯಕ್ಕೆ ಬದ್ಧರಾಗಿದ್ದವರು 'ಹೋಮರ'ರು. ಕರುಣೆ, ಅನುಕಂಪ ಸದ್ಗುಣ-ಸೌಶೀಲ್ಯಗಳ ಹಿರಿತನವನ್ನು ಎತ್ತಿಹಿಡಿಯುವ ಮಹೋದ್ದೇಶವನ್ನು ಈಡೇರಿಸಿಕೊಂಡ ಕವಿ, ವಾಲ್ಮೀಕಿ, ರಾಜನೀತಿಯ ಬೃಹತ್ ಕೈಪಿಡಿಯಾಗಿ 'ಮಹಾಭಾರತ'ವನ್ನು ರಚಿಸಿದವರು 'ವ್ಯಾಸ'ರು......

ಹೀಗೆಯೇ ಅಂದಿನಿಂದ ಇಂದಿನವರೆಗೂ.

ಈ ಕಮಿಟ್‌ಮೆಂಟ್‌ಗಳ ಚಿತ್ರಶಾಲೆ ವರ್ಣರಂಜಿತ. ಇಲ್ಲಿ ಸೃಷ್ಟಿ ಒಬ್ಬನದಕ್ಕಿಂತ ಇನ್ನೊಬ್ಬನದು ಭಿನ್ನ. ಇಷ್ಟೇ ತಾವು ಕಮಿಟೆಡ್ ಕವಿಗಳೆಂಬ ಅರಿವೇ ಇರಲಿಲ್ಲ ಇವರಿಗೆ !

* * *

ಕಮಿಟ್‌ಮೆಂಟ್ ಸುಲಭವಾಗಿ ಒಂದು ಜಾಡ್ಯವಾಗಬಹುದು. ಕಮಿಟೆಡ್ ಬರೆಹಗಾರನೋ ಕಲಾವಿದನೋ ತನ್ನ ಗಾಲಿಗೆರೆಗಳನ್ನು ಕೊರೆದಾಗ, ಅದರ ಮೇಲೆಯೇ ಚಲಿಸತೊಡಗುತ್ತಾನೆ. ಆತ ಕಣ್ಣುಮುಚ್ಚಿಕೊಂಡೂ ಉರುಳಬಹುದು. ಹಳಿ ಅಷ್ಟೊಂದು ನಯವಾಗಿರುತ್ತದೆ : ಅವನಿಗೆ ಅಷ್ಟೊಂದು ಅಭ್ಯಾಸವಿರುತ್ತದೆ. ಆಗ ಅವನ ಸರ್ಕಸನ್ನು ಕಂಡು, ತಾವು ರಂಗದ ಹೊರಗಿದ್ದೇವೆ ಎಂದು ಭ್ರಮಿಸುವವರು ನಗುತ್ತಾರೆ. ಜೂ ಇಲ್ಲವೆ? ಪ್ರಾಣಿಗಳನ್ನು ನೋಡಲು ಮನುಷ್ಯರು ಹೋಗುತ್ತಾರೆ ; "ಇಕಾ!" ಎನ್ನುತ್ತಾರೆ, ಪ್ರಾಣಿಗಳತ್ತ ಬೊಟ್ಟುಮಾಡಿ. ಪಂಜರದ ಆ ಪ್ರಾಣಿಗಳೊ ? ಸ್ವತಂತ್ರರೆಂದು ಭಾವಿಸಿಕೊಂಡು ತಮ್ಮ ಸುತ್ತಮುತ್ತ ತಿರುಗುವ ಮನುಷ್ಯಪ್ರಾಣಿಗಳನ್ನು ನೋಡಿ ನಗುತ್ತವೆ.

ಕಮಿಟ್‌ಮೆಂಟಿನ ಹಣೆಪಟ್ಟಿ ಅಂಟಿಸಿಕೊಂಡ ಲೇಖಕ ಅಥವಾ ಕಲಾವಿದ ಅಂತಃ ಸತ್ವವುಳ್ಳ ಕೃತಿಯನ್ನು ರಚಿಸಲು ಸಮರ್ಥನಾಗಲೂಬಹುದು, ಆಗದೆ ಹೋಗಲೂ

ಬಹುದು. ಹಣೆಪಟ್ಟಿ ಇಲ್ಲದವನೂ ಅಷ್ಟೇ ಒಳ್ಳೆಯ ಕೃತಿ ಆತನಿಂದ ಬರಲೂ ಬಹುದು, ಬರದೆ ಹೋಗಲೂಬಹುದು.

ಸೃಷ್ಟಿಕಾರ್ಯಕ್ಕೆ ಕೈಇಕ್ಕುವವರಿಗೆ ಬರಿಮೈ ಮೇಲು. ಪೋಷಾಕಿನ ಜೊತೆಗೆ ಮಾನವೀಯತೆಯನ್ನೂ ಅವರು ಕಳಚಿ ಇಡಬಾರದು, ಅಷ್ಟೆ!

* * *

ಮಾನವೀಯತೆಯನ್ನು ಕೈಬಿಡದಿದ್ದರೆ, ಅನುತಾಪ ಅನುಕಂಪಗಳನ್ನು ಮೈಗೂಡಿಸಿಕೊಂಡರೆ, ಬದುಕಿನ ಆರಾಧಕನಾದರೆ, ಸತ್ಯದ ಪ್ರತಿಪಾದಕನಾದರೆ, ಅನ್ಯಾಯಕ್ಕೆ ಇದಿರು ನಿಲ್ಲುವ ಧರ್ಮಯೋಧನಾದರೆ..... ಎಷ್ಟೊಂದು ಕಮಿಟ್‌ಮೆಂಟ್ಸು ! ಚುಟುಕಾಗಿ ಹೇಳೋಣವೆ? ಕಮಿಟ್‌ಮೆಂಟು ಇರಬೇಕಾದದ್ದು ಬದುಕಿಗೆ—ಅಳಿವಿಲ್ಲದ ಬದುಕಿಗೆ.

ಬದುಕನ್ನು ಉತ್ತಮಪಡಿಸಲು ಯಾವುದು ಸಾಧಕವೋ ಅದಕ್ಕೆ ಸ್ವಾಗತ. ಬದುಕನ್ನು ಯಾವುದು ವಿರೂಪಗೊಳಿಸುತ್ತದೋ ಅದಕ್ಕೆ ತಿರಸ್ಕಾರ.

ಹೊರಗೆ ಜೀವನ ದುಸ್ಸಹವಾಗಿರಬಹುದು. ನಾನು ಇಲ್ಲಿನವನಲ್ಲ. ಅನ್ಯ—ಎಂಬ ಭಾವನೆ ಬರಲೂಬಹುದು. ಆದರೆ ಮಾನವಕೋಟಿ ನಮಗೆ ಆಗದವರ ಸಂಖ್ಯೆಗಿಂತ ಹಿರಿದು. ಘಾಸಿಯಾದ ಬೆರಳಿಗಿಂತ ದೊಡ್ಡದು ಶರೀರ. "ಮಾನವ ಜನುಮ ದೊಡ್ಡದು".

ಅಂಥ ಬದುಕಿಗೆ ಕಮಿಟ್‌ಮೆಂಟ್ ಆಗಬೇಕಾದ್ದು ಆ ಬದುಕಿನ ಆರಾಧನೆ.

ರಾಬರ್ಟ್ ಫ್ರಾಸ್ಟ್ ಅಂದು:

"....The woods are lovely dark and deep
But I have promises to keep
And miles to go before I sleep...."

—ಎಂಥ ಋಣಭಾರ ! ಇಂಥ ಭಾರದಿಂದ ಲೋಕದ ಎಲ್ಲ ಬರೆಹಗಾರರೂ ಕಲಾವಿದರೂ ತುಸು ಬಾಗಿ ನಡೆಯುವುದು ಸಾಧ್ಯವಾದರೆ !

ಕಮಿಟ್‌ಮೆಂಟ್‌ನ ಅರ್ಥವಿವರಣೆಗೆ ಸೇರಿಸಬಹುದಾದದ್ದು ಇನ್ನೂ ಒಂದಿದೆ: 'ಸೆರೆಮನೆ ವಾಸ'

ಬರೆಹಗಾರ ಕಮಿಟೆಡ್ ಟು ಪ್ರಿಸನ್!ಅದೂ ಜೀವಾವಧಿ ಶಿಕ್ಷೆ! ಬಾಳ್ವೆಯುದ್ದಕ್ಕೂ ಋಣಭಾರ.

ಕಷ್ಟದ ಕಮಿಟ್‌ಮೆಂಟ್, ಕಷ್ಟದ ಹೊರೆ.

ಈ ಕಷ್ಟದ ಅನುಭವದಿಂದಲೇ ಶ್ರೇಷ್ಠತಮ ಸಾಹಿತ್ಯಸೃಷ್ಟಿ, ಕಲಾಸೃಷ್ಟಿ.

- 'ಉದಯವಾಣಿ' ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟಿತ.

೧೯೭೫

ಕೋಮಲ ಕ್ರಾಂತಿಕಾರಿ ಸಜ್ಜಾದ್ ಜಾಹೀರ್

ಸಾರಸ್ವತ ಬಂಧುಗಳೇ, ಸಾಹಿತ್ಯ ಮಿತ್ರರೇ, ಏಳು ಸಂಪುಟಗಳ ಕಿರಿಯರ ವಿಶ್ವಕೋಶ 'ಜ್ಞಾನಗಂಗೋತ್ರಿ'ಯ ಏಳನೆಯ ಸಂಪುಟದಲ್ಲಿ ಸಜ್ಜಾದ್ ಜಾಹೀರ್ ಎಂಬ ಶೀರ್ಷಿಕೆ ಇದೆ. ಅದರ ಕೆಳಗಿರುವ ಲೇಖನವನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ಜೀವನ ಪರಿಚಯ

"ಅವರ ಕಾವ್ಯ, ಧ್ರುವತಾರೆಯಂತೆ ಜಗತ್ತಿನಾದ್ಯಂತ ಪ್ರಗತಿಶೀಲ ಜನರಿಗೆ ಮಾರ್ಗದರ್ಶನ ಸ್ಫೂರ್ತಿ ನೀಡುತ್ತ ಜೀವಂತವಾಗಿಯೇ ಉಳಿಯುತ್ತದೆ."

ದಿವಂಗತ ಸಯ್ಯದ್ ಸಜ್ಜಾದ್ ಜಾಹೀರರ ನಿಧನದ ಅನಂತರ ಸೇರಿದ ಸಂತಾಪಸೂಚಕ ಸಭೆಯಲ್ಲಿ ಹೀಗೆ ಹೇಳಿದವರು ಪ್ರಮುಖ ಉರ್ದುಕವಿ ಫೈಜ್ ಅಹ್ಮದ್ ಫೈಜ್.

ಹೆಸರುವಾಸಿ ನ್ಯಾಯಾಧೀಶ ಹಾಗೂ ಕೇಂದ್ರ ಮಂಡಲಿಯ ಸದಸ್ಯರಾಗಿದ್ದ ಸರ್ ವಜೀರ್ ಸಯ್ಯದ್ ಅಲಿ ಜಾಹೀರರ ಪುತ್ರ ಸಜ್ಜಾದ್ ಜಾಹೀರ್ ಅವರ ಜನನ ೧೯೦೫ ನವಂಬರ್ ೫ ರಂದು. ೨೦ನೆಯ ಶತಮಾನದ ಮೂರನೆಯ ದಶಕದಲ್ಲಿ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಇವರು ಮಾರ್ಕ್ಸ್‌ವಾದದಿಂದ ಆಕರ್ಷಿತ ರಾದರು. ಭಾರತಕ್ಕೆ ಮರಳಿದಮೇಲೆ ಪ್ರಗತಿಶೀಲ ಲೇಖಕರ ಸಂಘವನ್ನು ಸ್ಥಾಪಿಸಲು ದುಡಿದರು. ಈ ಕಾರ್ಯದಲ್ಲಿ ರವೀಂದ್ರನಾಥ ಠಾಕೂರ್, ಪ್ರೇಮಚಂದ್ ಮುಂತಾದವರ ಬೆಂಬಲ ಪಡೆದರು.

ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ಅಂಗಾರೆ' ಎಂಬ ಸಣ್ಣ ಕತೆಗಳ ಸಂಕಲನವು ಬ್ರಿಟಿಷ್ ಸರ್ಕಾರದಿಂದ ನಿಷೇಧಿಸಲ್ಪಟ್ಟಿತು.

ಭಾರತದ ವಿಭಜನೆಯ ಬಳಿಕ ಜಾಹೀರ್ ಪಾಕಿಸ್ತಾನಕ್ಕೆ ತೆರಳಿ ಅಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವ ವಹಿಸಿದರು. ಸರ್ಕಾರವನ್ನು ಉರುಳಿಸಲು ಯತ್ನಿಸಿದರೆಂಬ ಆಪಾದನೆ ಮೇಲೆ ಇವರನ್ನು ದೀರ್ಘ ಕಾಲದ ಸೆರೆಮನೆವಾಸಕ್ಕೆ ಗುರಿಮಾಡಲಾಯಿತು. ಅಲ್ಲಿಂದ ಹೊರಬಿದ್ದಮೇಲೆ ಜಾಹೀರ್ ಭಾರತಕ್ಕೆ ಮರಳಿ, ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿದರು.

ಖ್ಯಾತ ಉರ್ದು ಸಾಹಿತಿ ಜಾಹೀರರು ಭಾರತದ ಪ್ರಗತಿಶೀಲ ಲೇಖಕರ ಚಳವಳಿಯ ಸ್ಥಾಪಕರಲ್ಲೊಬ್ಬರು. ಆಫ್ರೋ-ಏಷ್ಯನ್ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಲೆಂದು ಸೋವಿಯೆತ್ ಕಜಾಕ್‌ಸ್ಥಾನದ ರಾಜಧಾನಿ ಅಲ್ಮಾ-ಅತಾಕ್ಕೆ ತೆರಳಿದ್ದಾಗ ಅಲ್ಲಿ, ೧೯೭೩ ಸೆಪ್ಟೆಂಬರ್ ೧೩ರಂದು, ಹೃದಯಸ್ತಂಭನದಿಂದ ನಿಧನರಾದರು.

ಕನ್ನಡ ಪ್ರಗತಿಶೀಲ ಲೇಖಕರ ಸಂಘಟನೆಯೊಡನೆ ಜಾಹೀರರಿಗೆ ಸಂಬಂಧವಿದ್ದಿತು. ೧೯೪೪ರಲ್ಲಿ ರಬಕವಿ ಸಾಹಿತ್ಯ ಸಮ್ಮೇಳನಕ್ಕೆ ಮುನ್ನ ಧಾರವಾಡದಲ್ಲಿ ಜರಗಿದ ಕನ್ನಡ ಪ್ರಗತಿಶೀಲ ಲೇಖಕರ ಸಮ್ಮೇಳನಕ್ಕೆ ಕಳುಹಿಸಿದ ದೀರ್ಘಸಂದೇಶದಲ್ಲಿ "ಪ್ರಗತಿಶೀಲ ಲೇಖಕರ ಚಳವಳಿಯು ಸಂಕುಚಿತ ದೃಷ್ಟಿ ತಳೆಯಬಾರದು; ನೂರರಲ್ಲಿ ತೊಂಬತ್ತರಷ್ಟು ಬರೆಹಗಾರರನ್ನು ಪ್ರಗತಿಶೀಲ ಲೇಖಕರ ಸಂಘ ಒಳಗೊಳ್ಳಬೇಕು," ಎಂದು ಆಶಯ ವ್ಯಕ್ತಪಡಿಸಿದರು.

ಕಿರು ಕಾದಂಬರಿ, ಸಣ್ಣಕಥೆ, ಪ್ರಬಂಧ, ಉರ್ದು ಪ್ರಗತಿಶೀಲ ಲೇಖಕರ ಚಳವಳಿಯ ಚರಿತ್ರೆ—ಮುಂತಾದುವನ್ನು ಸಜ್ಜಾದ್ ಜಾಹೀರ್ ರಚಿಸಿದ್ದಾರೆ. ಇವರ ಪತ್ನಿ ರಜಿಯಾ ಸಜ್ಜಾದ್ ಜಾಹೀರರೂ ಪ್ರಸಿದ್ಧ ಉರ್ದು ಕವಯಿತ್ರಿ.

ಮೊದಲ ಭೇಟಿ

ನನ್ನ ೧೯-೨೦ನೆಯ ವಯಸ್ಸಿನಲ್ಲಿ ಸಜ್ಜಾದ್ ಜಾಹೀರರ ಸಖ್ಯವನ್ನು ನಾನು ಸಂಪಾದಿಸಿದ್ದೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದ ಕನ್ನಡದ ಸಣ್ಣ 'ಕತೆಗಾರನೊಬ್ಬನ ಬಗೆಗೆ—ಅಂದರೆ ನನ್ನ ಬಗೆಗೆ—ಅವರಿಗೆ ಕುತೂಹಲ. ಅವರನ್ನು ನಾನು ಮೊದಲು ಕಂಡುದು ಭಾರತ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಕಚೇರಿಯಲ್ಲಿ, ಮುಂಬಯಿಯಲ್ಲಿ ೧೯೪೪ರಲ್ಲಿ. ಅವರ ವಿಷಯದಲ್ಲಿ ನನಗೆ ಆದರ, ಗೌರವ. ಒಂದು ರೀತಿಯ ಕೌತುಕ ಕೂಡಾ. ಈ ಸುಕುಮಾರ ದೇಹಿ ಎಂಥ ಕ್ರಾಂತಿಕಾರಿ? ಇಷ್ಟೊಂದು ಪರಿಷ್ಕೃತ ನಡೆನುಡಿಯ ಅಚ್ಚುಕಟ್ಟುತನದ ಬರೆಹಗಾರನ ಲೇಖನಿಯಿಂದ ಸಿಡಿಗುಂಡುಗಳು ಉರುಳುತ್ತವೆನ್ನುವುದು ಸಾಧ್ಯವೆ? ವಾಸ್ತವವಾಗಿ ಅವು ಅರ್ಥವಿಲ್ಲದ ಯೋಚನೆಗಳು. ಜಾಹೀರರಾಗಲೇ ಕಲ್ಲುಮುಳ್ಳುಗಳ ದಾರಿಯನ್ನು ಬಹಳ ದೂರ ತುಳಿದಿದ್ದರು. ಬ್ರಿಟಿಷರು ದೇಶವನ್ನಾಳುತ್ತಿದ್ದ ಕಾಲ. ತುರುಂಗವಾಸ ಅನುಭವಿಸಿದ್ದರು. ಅವರು ಸಂಪಾದಿಸಿದ ಉರ್ದು ಕಥಾಸಂಗ್ರಹ ಬ್ರಿಟಿಷರ ರೋಷಕ್ಕೆ ತುತ್ತಾಗಿ, ಉರ್ದು ಸಾಹಿತ್ಯ ಹೊಸ ದಿಕ್ಕಿಗೆ ಹೊರಳುವಂತೆ ಮಾಡಿತ್ತು.

ಕನ್ನಡದಲ್ಲಿ ಪ್ರಗತಿಶೀಲ ಚಳವಳಿ ಅದೇ ಆಗ ಆರಂಭವಾಗಿತ್ತು. ಹುಟ್ಟಿದ ಸ್ವಲ್ಪ ಸಮಯದಲ್ಲಿಯೇ ಬಾಲಗ್ರಹ ಪೀಡೆ ಬಾಧಿಸಿತು. ಆ ವ್ಯಾಧಿಯ ನಿವಾರಣೆಗೆ ನೆರವಾಗಬೇಕೆಂಬ ಉದ್ದೇಶದಿಂದ ಒಂದು ದೀರ್ಘ ಕಾಗದವನ್ನು ಅವರು ನನಗೆ

ಬರೆದರು; ಪ್ರಗತಿಶೀಲರಲ್ಲಿ ಸಂಕುಚಿತ ದೃಷ್ಟಿ ಸಲ್ಲದೆಂದು ಆ ಪತ್ರದಲ್ಲಿ ಅವರು ಸಾರಿದರು.

ಸ್ನೇಹದ ಕೊಂಡಿ

ಅನಂತರ ನಾನು ಜಾಹೀರರನ್ನು ಕಂಡದ್ದು ೧೯೬೯ರಲ್ಲಿ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸ ನೀಡಲೆಂದು ಅವರು ಬಂದಿದ್ದರು. ಆ ಮಾಲಿಕೆಯ ಉಪನ್ಯಾಸಗಳಲ್ಲೆಲ್ಲ ಜಾಹೀರರದೇ ಶ್ರೇಷ್ಠವಾಗಿದ್ದಿತಂತೆ. ಸಂಘಟಕರು ಜಾಹೀರರಿಗೆ, 'ಇನ್ನೊಮ್ಮೆ ಬರಬೇಕು' ಎಂದರಂತೆ. ಮೈಸೂರಿನಿಂದ ದಿಲ್ಲಿಗೆ ಮರಳುವ ದಾರಿಯಲ್ಲಿ ಜಾಹೀರರು ಬೆಂಗಳೂರಿನಲ್ಲಿ ಒಂದು ದಿನ ಇದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ಲೇಖಕರನ್ನು ಅವರು ಭೇಟಿಯಾದರು. ಆ ಸಭೆಯಲ್ಲಿ ನಾನು ಕಂಡ ಜಾಹೀರರು ಇಪ್ಪತ್ತೈದು ವರ್ಷ ಹಿಂದೆ ನನಗೆ ಪರಿಚಿತರಾಗಿದ್ದ ಜಾಹೀರರಂತೆಯೇ ಇದ್ದರು. ಪಾಕಿಸ್ತಾನ ಸೆರೆಮನೆಯಲ್ಲಿ ಎಂಟು ವರ್ಷ ಕಳೆದಿದ್ದರೂ ದೇಹದಲ್ಲಿ ಅದೇ ಸೊಂಪು, ತೂಕದ ಮಾತು. ಸರಳ ರೀತಿನೀತಿ.

ಕುಳಕುಂದ ಶಿವರಾವ್ ಹೆಸರು ಅವರ ನೆನಪಿನ ಅಲೆಗಳನ್ನು ತಟ್ಟಿ ಎಚ್ಚರಿಸಿತ್ತು. ಆ ಅಲೆಗಳಲ್ಲಿ ನಿರಂಜನ ಹೆಸರು ಮೈ ತೋಯಿಸಿಕೊಂಡಿತು.

ಪರಿಣಾಮ—ಮತ್ತೆ ಕೊಂಡಿ ಬೆಸೆದ ಸ್ನೇಹ. ಅವರ ಪಾಲಿಗೆ ನಾನು ಮಾಜಿ ಕಮ್ಯೂನಿಸ್ಟನಾಗಿರಲಿಲ್ಲ, ಅಂತಹ ಕಾವನ್ನು ಕಾದಿರಿಸಿಕೊಂಡಿದ್ದ ಬರೆಹಗಾರನಾಗಿದ್ದೆ.

೧೯೭೧ರಲ್ಲಿ ನನಗೆ ಸ್ಟ್ರೋಕ್ ಆದಾಗ ಜಾಹೀರ್ ಮತ್ತೆ ಹತ್ತಿರವಾದರು. ಪ್ರಯತ್ನಪಟ್ಟು ನನ್ನ ಅಸ್ವಾಸ್ಥ್ಯದ ಬಗೆಗೆ ಸೋವಿಯೆತ್ ವೈದ್ಯಕೀಯ ಪರಿಣತರ ಅಭಿಪ್ರಾಯ ತರಿಸಿಕೊಟ್ಟರು. (ಮಾಸ್ಕೋದಿಂದ ಉತ್ತರ ಬರುವುದು ತಡವಾದಾಗ ಆತಂಕಗೊಂಡು, ಸೋವಿಯೆತ್ ರಾಜಧಾನಿಯಲ್ಲಿ ವಿದ್ಯಾರ್ಥಿನಿಯಾಗಿದ್ದ ತಮ್ಮ ಮಗಳಿಗೆ ಬರೆದು, ಆಕೆಯನ್ನು ಅಲ್ಲಿ ಓಡಾಡಿಸಿದರು.)

ಮತ್ತೆ ಚೇತರಿಸಿಕೊಳ್ಳಲು ಏಕಾಂಗಿಯಾಗಿ ನಾನು ಹೋರಾಡುತ್ತಿದ್ದ ಆ ಕಾಲದಲ್ಲಿ ಜಾಹೀರರ ಸ್ನೇಹದ ನೆನವರಿಕೆ ನನಗೆ ಆಪ್ಯಾಯಮಾನವಾಗಿತ್ತು.

ತುಸು ಗುಣಮುಖನಾಗಿ ನಡೆಯುವುದು ಸಾಧ್ಯವಾದರೆ, ಆಫ್ರೋಏಷ್ಯನ್ ಬರೆಹಗಾರರ ಸಮ್ಮೇಳನಕ್ಕೆ ಅಲ್ಮಾ-ಅತಾಕ್ಕೆ ಹೋಗಬೇಕು ಎಂಬ ಯೋಚನೆ ಇತ್ತು. ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಆಗದೆ ಅಂಥ ಪ್ರವಾಸ ಸಾಧ್ಯವಾಗಲಿಲ್ಲ.

ಅದು ಸಾಧ್ಯವಾಗದ ಕಾರಣ ಜಾಹೀರರ ಕೊನೆಗಾಲದ ಒಡನಾಟ ನನಗೆ ಲಭ್ಯವಾಗಲಿಲ್ಲ.

ದೊಡ್ಡ ವ್ಯಕ್ತಿ. ತನ್ನ ನಂಬಿಕೆಗಾಗಿ ಅಪಾರ ಬೆಲೆ ತೆತ್ತವರು. ಇತರರಿಗೆ ಸ್ಫೂರ್ತಿ

ನೀಡುವ ಬದುಕನ್ನು ಬಾಳಿದವರು. ಸಮಕಾಲೀನರಿಗೆ ದಾರಿದೀಪವಾದವರು. ಬದುಕಿದ್ದರೆ ಇವತ್ತು ಅವರಿಗೆ ಎಪ್ಪತ್ತು ತುಂಬುತ್ತಿತ್ತು. ಕ್ಷಮಿಸಿ, ಬದುಕಿದ್ದರೆ ಈ ಹುಟ್ಟುಹಬ್ಬವನ್ನು ಮಾತ್ರ ನಾವು ಆಚರಿಸುತ್ತಿರಲಿಲ್ಲ ಎಂದು ತೋರುತ್ತದೆ. ಯಾಕೆ ಅಂದರೆ ಅದಕ್ಕೆ ಅವರು ಅನುಮತಿ ಕೊಡುತ್ತಿರಲಿಲ್ಲ ! ಸದಾ ದುಡಿಯುತ್ತ ಇರುತ್ತಿದ್ದವರು, "ಏನವಸರ? ಇನ್ನೂ ಕೆಲ ವರ್ಷ ಕಳೆಯಲಿ" ಎಂದಾದರೂ ಹೇಳುತ್ತಿದ್ದರು ! ಬದುಕಿರುವವರಿಗೆ, "ಇಂಥ ಹುಟ್ಟುಹಬ್ಬಗಳು ಇನ್ನಷ್ಟೋ ಬರಲಿ" ಎನ್ನುತ್ತೇವೆ. ನಮ್ಮೆದುರು ಇಲ್ಲದ ಜಾಹೀರರಿಗೆ? ಆಶಯ ಅಂಥದೇ: "ಇಂಥ ಹುಟ್ಟುಹಬ್ಬ ಪ್ರತಿ ವರ್ಷ ಇರಲಿ !"

ಪ್ರಗತಿಶೀಲ ಚಳವಳಿ

ಮೂವತ್ತೆರಡು ವರ್ಷಗಳಾದಮೇಲೆ ಕರ್ನಾಟಕದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಗತಿಶೀಲತೆಯ ಉಸಿರು ಮತ್ತೆ ಸಂಚರಿಸತೊಡಗಿದೆ. ಬೇಗನೆ ದಾವಣಗೆರೆಯಲ್ಲಿ ಅಖಿಲ ಕರ್ನಾಟಕ ಪ್ರಗತಿಶೀಲ ಸಾಹಿತ್ಯ ಸಮ್ಮೇಳನ ನಡೆಯಲಿದೆ. ವಿಶಾಲ ತಳಹದಿಯ ಪ್ರಗತಿಪಂಥ ವೇದಿಕೆ ಅಲ್ಲಿ ರೂಪುಗೊಳ್ಳುತ್ತದೆ.

ಮೂವತ್ತೊಂದು ವರ್ಷ ಹಿಂದೆ ಸಜ್ಜಾದ್ ಜಾಹೀರರು ಆಡಿದ ಹಿತನುಡಿಯೇ ಪ್ರಗತಿಪಂಥ ವೇದಿಕೆಯ ನಿರ್ಮಾಣ ಪ್ರಯತ್ನಕ್ಕೆ ಮಾರ್ಗದರ್ಶಿ.

ಆಗ ಅವರೆಂದರು :

"ಪ್ರಗತಿಶೀಲ ಲೇಖಕರ ಚಳವಳಿಯು ಸಂಕುಚಿತ ದೃಷ್ಟಿ ತಳೆಯಬಾರದು; ನೂರರಲ್ಲಿ ತೊಂಬತ್ತರಷ್ಟು ಬರೆಹಗಾರರನ್ನು ಪ್ರಗತಿಶೀಲ ಲೇಖಕರ ಸಂಘ ಒಳಗೊಳ್ಳಬೇಕು."

ಇಂದಿಗೂ ಇದು ಬಂಗಾರದ ಮಾತು ; ಮಾಸದ ಅಪ್ಪಟ ಬಂಗಾರ.

ಕರ್ನಾಟಕದಲ್ಲಿ ವಿಶಾಲ ತಳಹದಿಯ ಪ್ರಗತಿ ಪಂಥವನ್ನು ರೂಪಿಸುವುದು ಸಜ್ಜಾದ್ ಜಾಹೀರರಿಗೆ ನಾವು ನಿರ್ಮಿಸ ಬಹುದಾದ ಬಲುದೊಡ್ಡ ಸ್ಮಾರಕ ಎನ್ನಲೆ?

- ದಿವಂಗತ ಸಜ್ಜಾದ್ ಜಾಹೀರರ ೭೦ನೇ ಹುಟ್ಟುಹಬ್ಬದ ಆಚರಣೆ ಬೆಂಗಳೂರಿನಲ್ಲಿ ಆದಾಗ ಓದಲಾದ ಭಾಷಣ.

೧೯೬೫

ಚರ್ಚೆಗೋಸ್ಕರ-ಕರಡು
ಪ್ರಗತಿ ಪಂಥದ ಘೋಷಣೆ

ಪೀಠಿಕೆ

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಿಂದ ಪ್ರಭಾವಿತವಾಗಿ ಭಾರತೀಯ ಭಾಷಾ ಸಾಹಿತ್ಯಗಳೆಲ್ಲ ಈ ಶತಮಾನದಲ್ಲಿ ಪ್ರಗತಿಯ ಹಾದಿಯನ್ನು ಹಿಡಿದುವು. ಕನ್ನಡವನ್ನೂ ಒಳಗೊಂಡು ದೇಶದ ಎಲ್ಲಾ ಭಾಷಾಕ್ಷೇತ್ರಗಳಲ್ಲಿ ಸಾಂಸ್ಕೃತಿಕ ನವೋದಯದ ಚಳವಳಿ ನಡೆಯಿತು.

ಆ ನವೋದಯ ಚಳವಳಿಯಿಂದ ಕನ್ನಡ ಭಾಷೆ ಕಸುವನ್ನು ಪಡೆಯಿತು. ಕನ್ನಡ ಸಾಹಿತ್ಯ ಶ್ರೀಮಂತವಾಯಿತು. ಕನ್ನಡ ನಾಡು-ಜನ ಒಂದು ಎಂಬ ಕಲ್ಪನೆ ಬಲಗೊಂಡಿತು.

ನಾಲ್ಕನೆಯ ದಶಕದಲ್ಲಿ, ಭಾರತದ ಇತರ ಭಾಷಾಸಾಹಿತ್ಯಗಳಲ್ಲಿ ಹೇಗೋ ಹಾಗೆಯೇ ಕನ್ನಡದಲ್ಲೂ ಪ್ರಗತಿಶೀಲತೆ ಅಪೇಕ್ಷಣೀಯವಾದ ಪ್ರಬಲ ಸಾಹಿತ್ಯ ಪ್ರವೃತ್ತಿಯಾಯಿತು. ನವೋದಯಕಾಲದ ಅನಿವಾರ್ಯ ಭಾವನಾಮಯತೆಯೂ ಭಾಷಾಡಂಬರವೂ ಮರೆಯಾಗಿ ಕಠೋರ ಬದುಕಿನ ವಾಸ್ತವತೆ ಸಾಹಿತ್ಯಕೃತಿಗಳಲ್ಲಿ ಒಡಮೂಡಿಬಂತು. ಸಾಹಿತ್ಯದ ವಸ್ತು ವಿಸ್ತಾರಗೊಂಡಿತು. ಸಮಾಜದ ಶೋಷಿತ ಹಾಗೂ ಶ್ರಮಜೀವಿ ವರ್ಗವನ್ನು ಅದು ಆವರಿಸಿತು. ಪ್ರಗತಿಶೀಲತೆಯೂ ಸ್ವಚ್ಛಂದತೆಯೂ ಒಂದೇ ಎಂಬ ತಿಳುವಳಿಕೆಯಿಂದಾಗಿ ಕೆಲ ಪ್ರಗತಿಶೀಲರು ಮುಗ್ಗರಿಸಿದ್ದುಂಟು. ಹಾಗಿದ್ದರೂ ಕನ್ನಡ ಸಾಹಿತ್ಯೇತಿಹಾಸದಲ್ಲಿ ಪ್ರಗತಿಶೀಲ ಚಳವಳಿ ತನ್ನ ಹೆಜ್ಜೆಗುರುತುಗಳನ್ನು ಉಳಿಸಿತು.

ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ ಬದುಕಿನ ಸಂಕೀರ್ಣತೆಗೆ ಅಭಿವ್ಯಕ್ತಿನೀಡುವ ಯತ್ನ ಕನ್ನಡ ಸಾಹಿತ್ಯದಲ್ಲಿ ನಡೆದು 'ನವ್ಯತೆ' ಎಂಬ ಹೆಸರು ಪಡೆಯಿತು. ಆಡುಮಾತಿಗೆ ಮಹತ್ವವೀಯಬೇಕೆಂಬ ಪ್ರಗತಿಶೀಲರ ಅಭಿಪ್ರಾಯಕ್ಕೆ ನವ್ಯ ವಿಚಾರಸರಣಿಯಲ್ಲಿ ಮನ್ನಣೆ ದೊರೆಯಿತಾದರೂ, ನವ್ಯರು ಬರೆವಣಿಗೆಯಲ್ಲಿ ಬುದ್ಧಿಪೂರ್ವಕವಾಗಿ ಅಳವಡಿಸಿದ ಕ್ಲಿಷ್ಟತೆ, ನವ್ಯಸಾಹಿತ್ಯವನ್ನು ಸಾಮಾಜಿಕ ಪ್ರವಾಹದಿಂದ ದೂರ ಒಯ್ದಿತು.

ಈ ಸಂಪ್ರದಾಯದ ಶ್ರೇಷ್ಠ ಕೃತಿಗಳು ತಮ್ಮ ಗಟ್ಟಿತನದಿಂದಾಗಿ ಹೊಸ ಪಂಥದ ದಿಕ್ಸೂಚಿಗಳಾದುವು. ನವ್ಯತೆಯಿಂದ ಆಕರ್ಷಿತರಾದ ಅನೇಕ ಹೊಸ ಬರೆಹಗಾರರು ಮಾತ್ರ ಬದುಕಿನ ಬಗೆಗೆ ಆಳವಾದ ಅಧ್ಯಯನವಿಲ್ಲದೆ, ಸುತ್ತಲೂ ಕತ್ತಲೆಯೊಂದನ್ನೇ ಕಂಡು, ಬರಿಯ ಕಾಮಕೇಂದ್ರಿತ ವಸ್ತುಗಳಿಗೆ ಪ್ರಾಧಾನ್ಯವಿತ್ತು, ನಿರರ್ಥಕ ಸಾಹಿತ್ಯ ಸೃಷ್ಟಿಯಲ್ಲಿ ನಿರತರಾದರು. ಬದುಕಿನ ಆರಾಧನೆಗೆ, ಸಾಮಾಜಿಕ ಪ್ರಗತಿಗೆ ಮಹತ್ವ ನೀಡದೆ, ಬದುಕನ್ನು ಮುರುಟುವ ಶಕ್ತಿಗಳನ್ನು ಇದಿರಿಸಲಾಗದೆ, ನವ್ಯತೆಯ ಬಣ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತುಕಂಬಗಳನ್ನಷ್ಟು ನೆಟ್ಟು, ಬಿರುಕು ಬಿಟ್ಟಿತು.

೧೯೭೦ರ ಈಚೆಗಿನ ಈ ಬೆಳವಣಿಗೆ ಎರಡು ಹೊಸ ಸಾಹಿತ್ಯ ಪ್ರವೃತ್ತಿಗಳಿಗೆ ಚಾಲನೆ ನೀಡಿತು. ಒಂದು: ದಲಿತ-ಶೋಷಿತ ವರ್ಗಗಳ ಜೀವನ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಬೇಕೆಂಬ ವಾದವನ್ನು ಮುಂದಿರಿಸಿದ ದಲಿತ ಪಂಥ; ಎರಡು: ಪುರೋಹಿತಶಾಹಿ ಪಟ್ಟಭದ್ರರನ್ನು ಸಾಹಿತ್ಯಕ್ಷೇತ್ರದಿಂದ ಉಚ್ಚಾಟಿಸಿ, ಬಹುಜನ ಸಮುದಾಯದ ಮೇಲ್ಮೆಯನ್ನು ಸ್ಥಾಪಿಸಬೇಕೆಂಬ ಧ್ಯೇಯವನ್ನು ಮಂಡಿಸಿದ ಬರೆಹಗಾರರ ಮತ್ತು ಕಲಾವಿದರ ಒಕ್ಕೂಟ. ಮೊದಲಿನದು ಪೂರ್ತಿ ಸಾಹಿತ್ಯಕ ಸ್ವರೂಪದ್ದು. ಎರಡನೆಯದರಲ್ಲಿ ತಮ್ಮದೇ ಆದ ದಿನಪತ್ರಿಕೆಯನ್ನು ಆರಂಭಿಸುವ, ಸಂಪರ್ಕ ಮಾಧ್ಯಮಗಳ ಮೇಲೆ ಒಡೆತನ ಸ್ಥಾಪಿಸುವ ರಾಜಕೀಯ ಮಹತ್ವಾಕಾಂಕ್ಷೆಯ ಧ್ವನಿಗಳಿದ್ದುವು. ದಲಿತ ಪಂಥದ ಧ್ಯೇಯಗಳನ್ನು ಪ್ರಗತಿಶೀಲ ಚಳವಳಿಯೂ ಮುಂದಿಟ್ಟಿತ್ತು. ಆದರೆ ಆಗ ಬಳಸಲಾದ ದಲಿತ, ಶೋಷಿತ ಪದಗಳು ದಲಿತ ಪಂಥದ ಧ್ಯೇಯ-ನಿರೂಪಣೆಯಲ್ಲಿ ತಮ್ಮ ವ್ಯಾಪ್ತಿಯನ್ನು ಕಳೆದುಕೊಂಡು ಕುಗ್ಗಿದುವು. ಬರೆಹಗಾರ ಕಲಾವಿದರ ಒಕ್ಕೂಟದ ಸುದೀರ್ಘ ಘೋಷಣೆ ಇತ್ಯಾದಿಗಳು ಶೂದ್ರ ಕಹಳೆಯ ಸಾರರೂಪವನ್ನಷ್ಟೇ ಪಡೆದವು. ಶೂದ್ರರೆನಿಸಿಕೊಂಡವರಲ್ಲಿ ಬಹುಜನರು ಸಮಾಜದ ದಲಿತರು, ಶೋಷಿತರು. ಅವರ ಬದುಕಿನ ಚಿತ್ರಣದಿಂದ ಕನ್ನಡ ಸಾಹಿತ್ಯ ಸಂಪದ್ಭರಿತವಾಗಲೇಬೇಕು. ಆದರೆ ಆ ಜನರನ್ನು ಸುಲಿಯುವ ಪಟ್ಟಭದ್ರರು ಶೂದ್ರತ್ವಕ್ಕೆ ತಾವೇ ಗುತ್ತಿಗೆದಾರರೆಂದು ಮೆರೆದರು. ಇಂಥ ಚಳವಳಿ ಹುಟ್ಟುತ್ತಲೇ ಕಣ್ಣುಮುಚ್ಚಿಕೊಂಡುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಅದೇನಿದ್ದರೂ, ಕನ್ನಡ ಸಾಹಿತ್ಯದಲ್ಲಿ ಉಂಟಾದ ಈ ಹೊಸ ಕಲ್ಲೋಲವೂ ಸ್ವಾಗತಾರ್ಹವಾದದ್ದೇ. ಕನ್ನಡದ ಲೇಖಕರು, ವಿಮರ್ಶಕರು, ಪತ್ರಿಕೋದ್ಯೋಗಿಗಳು, ಕಲಾವಿದರು, ಶಿಲ್ಪಿಗಳು, ವಿಚಾರಶೀಲರು ಎಲ್ಲರೂ ಆತ್ಮನಿರೀಕ್ಷಣೆ ಮಾಡಿಕೊಂಡು ತಮ್ಮ ನಿಲುವನ್ನು ನಿರ್ಧರಿಸಬೇಕಾದದ್ದು ಈಗಿನ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿದೆ.

ಪ್ರಗತಿಯಲ್ಲಿ ನಂಬುಗೆ ಉಳ್ಳವರನ್ನು, ಎಲ್ಲ ವಿಚಾರಶೀಲರನ್ನು ಒಂದು ವೇದಿಕೆಯಲ್ಲಿ ಒಗ್ಗೂಡಿಸುವುದು ತೀರಾ ಅಗತ್ಯ. ಅದೇ ಪ್ರಗತಿ ಪಂಥದ ವೇದಿಕೆ.

ವಿಸ್ತಾರ ತಳಹದಿಯ ಮೇಲೆ ಪ್ರಗತಿ ಪಂಥೀಯರೆಲ್ಲ ಒಂದಾಗುವುದು ಇಂದಿನ ಐತಿಹಾಸಿಕ ಆವಶ್ಯಕತೆ.

ಘೋಷಣೆ

ಮುಕ್ತ ಮಾನವ ಮತ್ತು ಸಮೃದ್ಧ ಸಾಮಾಜಿಕ ಜೀವನ ಪ್ರಗತಿ ಪಂಥದ ಧ್ಯೇಯ. ಮಾನವನ ಇತಿಹಾಸವು ಪ್ರಗತಿಮುಖವಾದದ್ದು. ಹಳತು-ಹೊಸತಿನ ಸಾವು-ಬದುಕಿನ ಹೋರಾಟವೇ ಪ್ರಗತಿಯ ಹೊಸ ಮಜಲುಗಳನ್ನು ಮಾನವ ಕ್ರಮಿಸಲು ಕಾರಣವಾಗಿದೆ. ಪರಂಪರೆಯಲ್ಲಿನ ಈ ಪೋಷಕಾಂಶವನ್ನು ಪ್ರಗತಿ ಪಂಥ ಸ್ವೀಕರಿಸುತ್ತದೆ. ಮುನ್ನಡೆಸುವ ಪ್ರಗತಿವಾದವನ್ನು ಅದು ಬೆಂಬಲಿಸುತ್ತದೆ.

ಲೋಕದಾದ್ಯಂತ ಪ್ರಗತಿಯ ಸುದೀರ್ಘ ಪಯಣದಲ್ಲಿ ನಿರ್ಣಾಯಕ ಘಟ್ಟವನ್ನು ಮಾನವ ಈಗ ತಲುಪಿದ್ದಾನೆ. ಸಮಾಜವಾದದತ್ತ ಜಗತ್ತು ಮುಂದು ವರಿಯುತ್ತಿರುವುದೇ ಇಂದಿನ ಪರಿಸ್ಥಿತಿಯ ವಿಶೇಷ ಲಕ್ಷಣವಾಗಿದೆ.

ಜನತೆಯ ಮುನ್ನಡೆಯನ್ನು ನಿರೋಧಿಸಲು ಪ್ರತಿಗಾಮೀ ಶಕ್ತಿಗಳು ಸಂಘಟಿತ ಪ್ರಯತ್ನ ನಡೆಸಿವೆ ಎಂಬ ಅಂಶವನ್ನು ಪ್ರಗತಿಪಂಥೀಯರು ಕಡೆಗಣಿಸುವಂತಿಲ್ಲ. ಆ ಯತ್ನವನ್ನು ಇದಿರಿಸುವುದು ತಮ್ಮ ಕರ್ತವ್ಯವೆಂದು ಅವರು ಪರಿಗಣಿಸುತ್ತಾರೆ.

ನಮ್ಮ ಕಲೆಯೂ ಸಾಹಿತ್ಯವೂ ಒಳ್ಳೆಯ ಬದುಕಿಗಾಗಿ ಜನತೆ ನಡೆಸುವ ಹೋರಾಟದೊಡನೆ ಸಂಬಂಧಿತವಾಗಿವೆ. ಅಸಹಾಯತೆಯ ನಿರಾಶೆಯ ಸಾಹಿತ್ಯ ಪ್ರಗತಿಪಂಥೀಯರಿಗೆ ಸದಾ ಪರಕೀಯ. ಇಂಥ ಪ್ರವೃತ್ತಿಗಳು ಮಾನವನ ಕರ್ತೃತ್ವಶಕ್ತಿಯನ್ನು ಹ್ರಾಸಗೊಳಿಸುತ್ತವೆ; ಜೀವನದ ಬಗೆಗಿನ ಅವನ ಕನಸುಗಳನ್ನು ಮಣ್ಣುಗೂಡಿಸುತ್ತವೆ. ಆ ಕನಸುಗಳು ಮೂರ್ತರೂಪ ತಳೆಯವಂತೆ ತಮ್ಮ ಕೃತಿಗಳ ಮೂಲಕ ನೆರವಾಗುವುದೇ ಪ್ರಗತಿಪಂಥೀಯರ ಕರ್ತವ್ಯ.

ಅಭಿವ್ಯಕ್ತಿಯ ವಿಧಾನಗಳಲ್ಲಿ ಹೊಸ ಹೊಸ ಪ್ರಯೋಗಗಳು ನಡೆಯಬೇಕೆಂದು ಪ್ರಗತಿಪಂಥೀಯರು ಆಶಿಸುತ್ತಾರೆ. ಪದ್ಯ-ಗದ್ಯ ಹಾಗೂ ಸಾಹಿತ್ಯದ ಇತರ ಪ್ರಕಾರಗಳನ್ನು ಪರಿಪುಷ್ಟಗೊಳಿಸುವ ಎಲ್ಲ ಪ್ರಯತ್ನಗಳನ್ನು ಅವರು ಸ್ವಾಗತಿಸುತ್ತಾರೆ.

ಭಾಷೆ ಮತ್ತು ಸಾಹಿತ್ಯ ಮಾನವನ ಉಪಕರಣಗಳು. ತನ್ನ ಭಾವನೆ ಚಿಂತನೆ ವಿಚಾರಗಳನ್ನೆಲ್ಲ ಬೋಧಪೂರ್ಣವಾಗಿ ವ್ಯಕ್ತಪಡಿಸಲು ಆ ಉಪಕರಣಗಳನ್ನು ಆತ ಬಳಸುತ್ತಾನೆ. ಹೀಗಿರುತ್ತ, ಭಾಷೆ ಮತ್ತು ಸಾಹಿತ್ಯ ತಮ್ಮ ಸಾಮಾಜಿಕ ಮತ್ತು ಚಾರಿತ್ರಿಕ ಪಾತ್ರಗಳನ್ನು ನಿರ್ವಹಿಸದಂತೆ ನಡೆಯುವ ಪ್ರಯತ್ನಗಳನ್ನು ಪ್ರಗತಿ ಪಂಥೀಯರು ಖಂಡಿಸುತ್ತಾರೆ.

ಹಸಿವು, ಬಡತನ, ನಿರುದ್ಯೋಗ, ಅಜ್ಞಾನ, ಅನಕ್ಷರತೆ, ಧರ್ಮಾಂಧತೆ, ಅಂಧಶ್ರದ್ಧೆ-ಇವೆಲ್ಲವೂ ಮಾನವನನ್ನು ಅವನತಿಗೆ ತಳ್ಳುತ್ತವೆ.

ಜಾತೀಯತೆ, ಸಂಕುಚಿತ ಪ್ರಾಂತೀಯವಾದ, ಕುರುಡು ಭಾಷಾವಾದ—ಇವು ಪ್ರತಿಗಾಮಿ ಶಕ್ತಿಗಳ ಆಯುಧಗಳು. ಮಾನವನ ಅವನತಿಯನ್ನು ಸ್ಥಿರಗೊಳಿಸಲು ಅವು ಈ ಅಸ್ತ್ರಗಳನ್ನು ಬಳಸುತ್ತವೆ.

ಪ್ರಗತಿಪಂಥೀಯರು ಎಲ್ಲ ಮಾನವಕೋಟಿಯ ಸಂಸ್ಕೃತಿ ಸಂಸ್ಕಾರಗಳ ವಾರಸುದಾರರು ; ಯುಗಯುಗಗಳಿಂದ ಬಳುವಳಿಯಾಗಿ ಬಂದಿರುವ ಎಲ್ಲ ಶ್ರೇಷ್ಠ ಸಾಹಿತ್ಯ, ಕಲೆಗಳ ಹಕ್ಕುದಾರರು.

ಕನ್ನಡದಲ್ಲಿ ಈ ತನಕ ಸೃಷ್ಟಿಯಾಗಿರುವ ಎಲ್ಲ ಉತ್ಕೃಷ್ಟ ಸಾಹಿತ್ಯದ ಹಿರಿಯ ಪರಂಪರೆಯನ್ನು ಕರ್ನಾಟಕದ ಪ್ರಗತಿಪಂಥೀಯರು ಎತ್ತಿ ಹಿಡಿಯುತ್ತಾರೆ; ಪ್ರಾಗತಿಕವಾದ ಎಲ್ಲ ಕಲಾಸಾಹಿತ್ಯ ಪ್ರಯೋಗಗಳನ್ನು ಅವರು ಸ್ವಾಗತಿಸುತ್ತಾರೆ; ನಾಳೆಯ ಒಳಿತಿನತ್ತ ಮುನ್ನಡೆಯುವ ಜನಕೋಟಿಗೆ ಆಸರೆಯಾಗಬೇಕೆಂದು ಲೇಖಕರು, ವಿಮರ್ಶಕರು, ಪತ್ರಿಕೋದ್ಯೋಗಿಗಳು, ಕಲಾವಿದರು, ಶಿಲ್ಪಿಗಳು, ವಿಚಾರಶೀಲರು—ಇವರಿಗೆಲ್ಲ ಪ್ರಗತಿಪಂಥೀಯರು ಕರೆ ನೀಡುತ್ತಾರೆ.

-ನಿರಂಜನ

- ದಾವಣಗೆರೆಯ 'ಜನತಾವಾಣಿ'ಯ ದೀಪಾವಳಿ ಸಂಚಿಕೆಗಾಗಿ ಬರೆದ ಲೇಖನ ಇದು. ಮುಂದೆ ಕೆಲವೇ ತಿಂಗಳಲ್ಲಿ ಈ ಊರಲ್ಲೇ ಜರಗಲಿದ್ದ ಪ್ರಗತಿಪಂಥ' ಸ್ಥಾಪನಾಸಮ್ಮೇಳನದಲ್ಲಿ ಚರ್ಚೆಗಾಗಿ ಈ ಲೇಖನವನ್ನೇ ಪ್ರಗತಿಪಂಥದ ಕರಡು ಘೋಷಣೆಯನ್ನಾಗಿ ಮಂಡಿಸಲಾಯಿತು. ಈ ಲೇಖಕನೇ ಸೂಚಿಸಿದ ತಿದ್ದುಪಡಿಯೊಂದಿಗೆ ಅದು ಅಂಗೀಕೃತವಾಯಿತು. ಅಧಿಕೃತ ಘೋಷಣೆ 'ಪ್ರಗತಿಪಂಥ' ಪುಸ್ತಕದಲ್ಲಿದೆ.

೧೯೭೬

ಕರ್ನಾಟಕ ಪ್ರಗತಿಪಂಥ ಸ್ಥಾಪನಾ ಸಮ್ಮೇಳನದ ಅಧ್ಯಕ್ಷ ಭಾಷಣ

ಪ್ರಿಯ ಬಂಧುಗಳೇ,

ಕರ್ನಾಟಕದ ಸಾಹಿತ್ಯಕಲೆಗಳ ಕ್ಷೇತ್ರದಲ್ಲಿ ಪ್ರಗತಿಪಂಥವನ್ನು ರೂಪಿಸುವ ಮಹತ್ಕಾರ್ಯಕ್ಕಾಗಿ ನಾವಿಲ್ಲಿ ನೆರೆದಿದ್ದೇವೆ. ನನಗೆ ಒಪ್ಪಿಸಲಾಗಿರುವ ಅಧ್ಯಕ್ಷತೆಯ ಹೊಣೆ ಗುರುತರವಾದದ್ದೆಂದು ಬಲ್ಲೆ. ನನ್ನ ಬಗೆಗೆ ಗೆಳೆಯರು ತೋರಿರುವ ವಿಶ್ವಾಸಕ್ಕಾಗಿಯೂ ಗೌರವಕ್ಕಾಗಿಯೂ ನಾನು ಋಣಿಯಾಗಿದ್ದೇನೆ.

ನಿಮ್ಮೆಲ್ಲರ ನೆರವಿನಿಂದ ನನ್ನ ಕೆಲಸ ಹಗುರವಾಗುತ್ತದೆಂಬ ನಂಬಿಕೆ ನನಗಿದೆ.

ಪ್ರಗತಿಯ ಝೇಂಕಾರ ಕನ್ನಡಕ್ಕೆ ಹೊಸದಲ್ಲ, ನಾಲ್ಕನೆಯ ದಶಕದಲ್ಲಿ ಈ ದುಂಬಿಗಳು ಕನ್ನಡ ಸಾಹಿತ್ಯೋದ್ಯಾನಕ್ಕೆ ಮೆರಗು ನೀಡಿದುವು.

ಆ ಝೇಂಕಾರವನ್ನು ಈ ದಿನ ಮತ್ತೆ ಕೇಳುತ್ತಿದ್ದೇವೆ. ಇಲ್ಲಿ ಹಿರಿದುಂಬಿಗಳಿವೆ, ಮರಿದುಂಬಿಗಳಿವೆ. ಕಾಡು ಹೂವಿನಿಂದ ಕ್ಷಾತ್ರಮಧುವನ್ನು ತರಬಲ್ಲ ಸಾಹಸಜೀವಿಗಳು, ದುಡಿಮೆಯಲ್ಲಿ ಸುಖವನ್ನರಸುವ ಸಂಸಾರ ಇದು.

ಕಾಲಪುರುಷ ಅಸ್ವಸ್ಥನೆಂಬುದು ಸುಳ್ಳು. ನಮ್ಮ ಒಡಲಿಗೇ ಅವನು ಕಿಚ್ಚನ್ನಿಟ್ಟಿದ್ದಾನೆ. ಕನ್ನಡ ಪ್ರಗತಿಶೀಲ ಸಾಹಿತ್ಯಚಳವಳಿಯ ಅಧ್ವರ್ಯುವಾಗಿದ್ದ ಅ.ನ.ಕೃ. ನಮ್ಮನ್ನು ಅಗಲಿದರು: ಮಂಗಳೂರು ಪ್ರಗತಿಶೀಲ ಲೇಖಕರ ಸಂಘದ ಉಪಾಧ್ಯಕ್ಷರಾಗಿದ್ದ ಬಿ. ಶಂಕರಭಟ್ಟ, ಧಾರವಾಡ ಪ್ರಗತಿಶೀಲ ಲೇಖಕರ ಸಂಘದ ಕಾರ್ಯದರ್ಶಿಯಾಗಿದ್ದ ದ. ಬಾ. ಕುಲಕರ್ಣಿ ಕಣ್ಣು ಮುಚ್ಚಿದರು. ಈ ಮೂವರು ಹೊರಟುದು ವೃದ್ಧಾಪ್ಯಕ್ಕೆ ಮುನ್ನವೇ. 'ಜನಶಕ್ತಿ'ಯಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದ ಶಿವೇಶ್ವರ ದೊಡ್ಡಮನಿ ಮತ್ತು ಸದಾಶಿವ ಎಳಮೆಯಲ್ಲೇ ನಿಧನರಾದರು. ಯುವಕ ಪ್ರಗತಿಶೀಲ ಕತೆಗಾರ ಅ. ಸೋಗಾಲ ಅಪಮೃತ್ಯುವಿಗೆ ತುತ್ತಾದರು. ಇದು ಜೇನುತೊಟ್ಟಿಗೆ ಸೊಡರಿನ ಸೋಂಕು.

ಭ್ರಮರಗಳ ಬೃಹತ್ ಸಂಸಾರಕ್ಕೆ ಕಳೆದ ಕೆಲ ವರ್ಷಗಳಲ್ಲಿ ರಾಷ್ಟ್ರದ ವ್ಯಾಪ್ತಿಯಲ್ಲೂ ಹಾನಿ ತಟ್ಟಿದೆ; ವಿಶ್ವದ ವ್ಯಾಪ್ತಿಯಲ್ಲೂ ಧಕ್ಕೆಯುಂಟಾಗಿದೆ.

ಸಜ್ಜದ್ ಜಾಹೀರ್, ರಾಹುಲ ಸಾಂಕೃತ್ಯಾಯನ, ಬಲರಾಜ ಸಹಾನಿ ಇನ್ನಿಲ್ಲ. ಪುರೋಗಾಮೀ ಜಗತ್ತಿನ ಕಾವ್ಯರ್ಷಿ ಪಾಬ್ಲೋ ನೆರೂದಾ ತಮ್ಮ ತಾಯ್ನಾಡು ಚಿಲಿ ಫಾಸಿಸ್ಟ್ ಶಕ್ತಿಗಳಿಗೆ ಬಲಿಯಾದ ಘಳಿಗೆಯಲ್ಲಿ ಜರ್ಜರಿತರಾಗಿ ಅಸು ನೀಗಿದರು.

ಈ ಎಲ್ಲ ಚೇತನಗಳನ್ನು ಇಲ್ಲಿ ನೆನೆಯೋಣ. ಶ್ರದ್ಧಾಂಜಲಿ ಅರ್ಪಿಸಿ, ಮುಂದೆ ನಡೆಯೋಣ.

ಕರ್ನಾಟಕದಲ್ಲಿ ಪ್ರಗತಿಯ ಕರೆ

ಆಳುತ್ತಿದ್ದ ಸಾಮ್ರಾಜ್ಯಶಾಹಿ ದುರ್ಬಲವಾಗಿ, ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಅಂತಿಮ ಘಟ್ಟವನ್ನು ತಲುಪಿತ್ತು. ಸೋವಿಯೆತ್ ಕೆಂಪು ಸೇನೆಯ ಕೈಯಲ್ಲಿ ಫಾಸಿಸ್ಟ್ ಶಕ್ತಿಗಳು ತತ್ತರಿಸತೊಡಗಿದ್ದುವು. ಮೂಲಭೂತ ಪ್ರಶ್ನೆಗಳು ಜನಪದವನ್ನು ಕಾಡಿದ ಕಾಲ ಅದು. ಆಗ, ರಾಷ್ಟ್ರದ ಸಾಹಿತ್ಯಕಲೆಗಳ ವಲಯದಲ್ಲಿ ಪ್ರಗತಿಶೀಲತೆಯ ಗಾಳಿ ಬಲವಾಗಿ ಬೀಸಿತು. ಕರ್ನಾಟಕವನ್ನೂ ಅದು ಆವರಿಸಿತು. ನನ್ನಂಥ ಎಳೆಯರು ಮಾತ್ರವಲ್ಲ; ಅ.ನ.ಕೃ. ಶ್ರೀರಂಗ, ವಿನಾಯಕರಂಥ ಸಾಹಿತ್ಯಪ್ರಮುಖರೂ ದ. ಕೃ. ಭಾರದ್ವಾಜರಂಥ ವಿದ್ವಾಂಸರೂ ಪ್ರಗತಿಶೀಲತೆಯತ್ತ ಆಕರ್ಷಿತರಾದರು. ಪ್ರಗತಿಯ ಸಂದೇಶವನ್ನು ಬರೆವಣಿಗೆಯ ಕತ್ತಲುಕೋಣೆಗಳಿಗೆ ಒಯ್ಯಲು ಅ.ನ.ಕೃ. ಮತ್ತು ಅವರ ಯುವಕ ಮಿತ್ರವೃಂದ (ತ.ರಾ. ಸು. ಚದುರಂಗ, ಮಾ.ನಾ ಚೌಡಪ್ಪ, ಎಸ್. ಅನಂತನಾರಾಯಣ, ಕುಮಾರ ವೆಂಕಣ್ಣ, ನಾಡಿಗೇರ ಕೃಷ್ಣರಾವ್, ಅರ್ಚನಾ ವೆಂಕಟೇಶ...) ಪಟ್ಟ ಪರಿಶ್ರಮ ಅಪಾರ. ಪ್ರಭಾವಶಾಲಿಯಾದ ಇನ್ನೊಂದು ಮಾಧ್ಯಮವನ್ನು ಬಳಸಿ ಬಸವರಾಜ ಕಟ್ಟೀಮನಿ ಪ್ರಗತಿಯ ಪಾಂಚಜನ್ಯವನ್ನು ಮೊಳಗಿದರು. (ಕಟ್ಟೀಮನಿ, ಕುಳುಕುಂದ, ಪಾಟೀಲ ಪುಟ್ಟಪ್ಪ, ಕೋ. ಚೆನ್ನಬಸಪ್ಪ-ಇವರ ಕೃತಿಗಳನ್ನು ಪ್ರಕಟಿಸಿ 'ಉಷಾ' ಕನ್ನಡ ಸಾಹಿತ್ಯದ ಹೊಸ ಅಧ್ಯಾಯದ ಬರೆವಣಿಗೆಯಲ್ಲಿ ಸಕ್ರಿಯ ಪಾತ್ರವಹಿಸಿತು.) ಇದಲ್ಲದೆ, ಒಂದೆಡೆ ಎಚ್ಚೆಸ್ಕೆ ಮತ್ತು ಕೆ. ಶ್ರೀನಿವಾಸನ್ ಮತ್ತೊಂದೆಡೆ ಬಿ. ಶಂಕರಭಟ್ಟ ಮತ್ತು ಪಿ. ಕೆ. ನಾರಾಯಣ ತಮ್ಮ ಬರೆಹಗಳಿಂದಲೂ ಚಟುವಟಿಕೆಗಳಿಂದಲೂ ಹೊಸ ವಿಚಾರಧಾರೆಯನ್ನು ಪ್ರಚುರಗೊಳಿಸಲು ನೆರವಾದರು.

ಪ್ರಗತಿಶೀಲ ಲೇಖಕರ ಸಂಘಟನೆಯ ಜೊತೆ ರಂಗಭೂಮಿಯೂ ಜನ್ಮ ತಳೆಯಿತು. (ಇದರ ಮಂಗಳೂರು ಘಟಕವನ್ನು ಶಿವರಾಮ ಕಾರಂತರು ಉದ್ಘಾಟಿಸಿದರು).

ಹೊಸ ನೆಲದಲ್ಲಿ ಉಳುಮೆ, ಹೊಸ ಕೃಷಿ ವಿಧಾನ, ಬಹಳ ಜನ ಸಾಹಿತ್ಯ ಕಲೆಗಳ ಬೇಸಾಯಗಾರರು. ಆ ಸಂಭವದತ್ತ ದೃಷ್ಟಿ ಬೀರಿದರು. ಕೆಲವರು

ಮೆಚ್ಚುಗೆಯಿಂದ, ಬೇರೆ ಕೆಲವರು ಕುತೂಹಲದಿಂದ, ಮತ್ತೆ ಕೆಲವರು ತಿರಸ್ಕಾರದಿಂದ. ಆದರೆ ದಿನಕಳೆದಂತೆ ಪ್ರಗತಿಶೀಲತೆ ಅವಿನಾಶ ಎಂಬುದು ಸ್ಪಷ್ಟವಾಯಿತು. ಸಂಘಟನೆ ನಾನಾ ಕಾರಣಗಳಿಂದ ನಿಷ್ಕ್ರಿಯವಾದರೂ ಹಣೆಪಟ್ಟಿ ಕಳಚಿಬಿದ್ದರೂ ಪ್ರಗತಿಶೀಲತೆಯ ತಾತ್ವಿಕ ನಿಲುವು ಬಲಗೊಂಡಿತು. ನಾವೀನ್ಯ ನಷ್ಟವಾಗಿ ಸತ್ವಹೀನವಾಗಿದ್ದ ನವೋದಯ ಸಾಹಿತ್ಯ ತಾನು ವಿರಾಜಮಾನವಾಗಿದ್ದ ವೇದಿಕೆಯಲ್ಲಿ ಪ್ರಗತಿಶೀಲ ಸಾಹಿತ್ಯಕ್ಕೂ ಸ್ಥಳ ನೀಡಿತು. ಕಠೋರ ಬದುಕಿನ ವಾಸ್ತವತೆ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಹೆಚ್ಚು ಹೆಚ್ಚಾಗಿ ಒಡಮೂಡದೆ ಇದ್ದುದು ಒಂದು ದುರಂತ. ಒಳ್ಳೆಯ ಕೆಲವು ಕೃತಿಗಳನ್ನು ಅವರು ರಚಿಸಿದಾಗಲೂ ಸಾಹಿತ್ಯ ಕ್ಷೇತ್ರದಲ್ಲಿ ಅವುಗಳಿಗೆ ಯೋಗ್ಯ ಮನ್ನಣೆ ಲಭಿಸಲಿಲ್ಲ. ಪಟ್ಟಭದ್ರರ ಅಸೂಯೆಗೆ, ವಿಮರ್ಶಕರ ಮಡಿವಂತಿಕೆಗೆ ಅವು ಗುರಿಯಾದುವು.

ಪಥಭ್ರಾಂತರು

ಪ್ರತಿರೋಧ ಶಕ್ತಿ ಕುಗ್ಗಿದಾಗ ಹೊಸ ಶಕ್ತಿಗಳ ಪ್ರವೇಶ ಸುಲಭ. ಪ್ರಗತಿಶೀಲರ ಧ್ವನಿ ಹಿನ್ನೆಲೆಗೆ ಸರಿದ ಸನ್ನಿವೇಶದಲ್ಲಿ, ಸ್ವಾತಂತ್ರ್ಯಾನಂತರದ ಸಂಕೀರ್ಣ ಬದುಕಿಗೆ ಅಭಿವ್ಯಕ್ತಿ ನೀಡಬೇಕೆಂಬ ಒಳ್ಳೆಯ ವಾದವನ್ನು ಮುಂದಿಟ್ಟು, ಅದರ ಮರೆಯಲ್ಲಿ ಸೃಜನಶೀಲರನ್ನೆಲ್ಲ ಜನಸಮುದಾಯದಿಂದ ದೂರ ಒಯ್ಯುವ ಒಂದು ಪ್ರವೃತ್ತಿ ಮೊಳೆತು ಬಲಿಯಿತು. ಇದರ ಪ್ರತಿಪಾದಕರು ನವ್ಯರೆಂಬ ಹೆಸರಿನಲ್ಲಿ ಬೌದ್ಧಿಕ ಕಸರತ್ತುಗಳಲ್ಲಿ ನಿರತರಾದರು, ಮೈಮರೆತರು. ಬಹುಪ್ರಸಾರದ ಸಂಪರ್ಕ ಮಾಧ್ಯಮಗಳು ಇವರಿಗೆ ಸೇವೆ ಸಲ್ಲಿಸಿದ ರೀತಿ ನೋಟಕರಿಗೆ ದಿಗ್ಭ್ರಮೆ ಹುಟ್ಟಿಸುವಂಥದು. ಪರಸ್ಪರ ಪ್ರಶಂಸೆಯಲ್ಲಂತೂ ನವ್ಯರು ನವೋದಯದ ಪ್ರಮುಖರನ್ನು ಮೀರಿಸಿದರು. ದಿನ ಕಳೆದಂತೆ, ಪರಸ್ಪರರ ಕಣ್ಣುಗಳಲ್ಲಿ ತಮ್ಮ ತಮ್ಮ ಪ್ರತಿಬಿಂಬಗಳನ್ನು ಕಂಡು ಬೇಸತ್ತು ಇವರು ಕಾಲಾಯಾಪನೆಗೆಂದು ಒಬ್ಬರನ್ನೊಬ್ಬರು ದೂಷಿಸುವ ಆಟ ಆರಂಭಿಸಿದರು. ಪರಿಣಾಮ—ವಿಘಟನ ಕ್ರಿಯೆ. ಮೂರಾಬಟ್ಟೆಯಾಯಿತು ನವ್ಯಪಂಥ.

ಆದರೆ ಜೀವಮಾನವೆಲ್ಲ ನಟಿಸುತ್ತ ಬಂದವರಿಗೆ ಎಲ್ಲಿಯ ನಿವೃತ್ತಿ? ಕೆಲವರಂತೂ ನಟಭಯಂಕರರು, ಪ್ರೇಕ್ಷಕರ ಚಪ್ಪಾಳೆಯೇ ಅವರ ಜೀವನದ ಉಸಿರು. ಅಂಥವರಿಗೆ ಯಾವ ನಾಟಕವಾದರೇನು? ಅಭಿನಯ ಪ್ರದರ್ಶನಕ್ಕೆ ಪೂರ್ಣಾವಕಾಶ ದೊರೆತರಾಯಿತು. ನೀವು ಹಿಡಿದಿರುವುದು ಸರಿದಾರಿಯಲ್ಲ—ದಾರಿಯೇ ಅಲ್ಲ—ಎಂದರೆ, ಭ್ರಾಂತರು ಸುಲಭವಾಗಿ ಒಪ್ಪುವುದಿಲ್ಲ.

ಕಾಯಕದ ಸತ್ಯ, ಕಾಯಕದ ಸೌಂದರ್ಯ

ಆಡುವ ಮಾತು ಮಾನಸಿಕ ಅನುಭವದ ಸಂಕೇತ; ಬರೆಯುವ ಪದ ಆಡುವ ಮಾತಿನ ಸಂಕೇತ—ಇದು ಒಂದು ಗ್ರೀಕ್ ಕಲ್ಪನೆ.

ಹದಿನೈದನೆಯ ಶತಮಾನದ ಮಹಾಪ್ರತಿಭಾಶಾಲಿ ವಿಂಚಿ ಚಿತ್ರಕಲಾಭ್ಯಾಸಿಗಳಿಗೆ "ಮನಸ್ಸಿನೊಳಗೆ ನಡೆಯುವುದು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಮುಖವನ್ನು ಚಿತ್ರಿಸಿ" ಎಂದ.

ಅವನ ಸಮಕಾಲೀನ ಮೈಕೆಲೆಂಜಲೋ, "ಚಿತ್ರಕಲೆಯು ಸಂಗೀತ, ಮಧುರರಾಗ" ಎಂದು ಇಂಪುನುಡಿ ಆಡಿದ.

ನಾಗರಿಕನಾಗಲು ಮಾನವ ಹೆಣಗಿದ ಹಲವು ಶತಮಾನಗಳ ಇತಿಹಾಸದ ನೆಲೆಯಲ್ಲಿ ಗ್ರೀಕರು ಆಧುನಿಕರು; ವಿಂಚಿ-ಮೈಕೆಲೆಂಜಲೋ ಅತ್ಯಾಧುನಿಕರು. ಸಾಹಿತ್ಯ ಕಲೆಗಳ ಉಗಮವನ್ನು ತಿಳಿಯಲು ಇತಿಹಾಸಕ್ಕೂ ಹಿಂದಿನ ಹಲವು ಸಹಸ್ರ ವರ್ಷಗಳ ಈಚೆಗಿನ ಕತ್ತಲೆಯೊಳಕ್ಕೆ ನಾವು ಇಣಿಕಿ ನೋಡಬೇಕು. ರಾಗ ಮೊದಲೊ? ಪದ ಮೊದಲೋ ? ಕುಣಿತ ಮೊದಲೊ? ನಟನೆ ಮೊದಲೊ? ಯಾವುದರ ಬಳಿಕ ಅಥವಾ ಯಾವುದಕ್ಕೆ ಮುಂಚೆ ಹುಟ್ಟಿತು ಚಿತ್ರಕಲೆ? ಇವೆಲ್ಲವೂ ಅಭಿವ್ಯಕ್ತಿಯ ಯತ್ನ, ಮನಸ್ಸಿನಲ್ಲಿದ್ದುದನ್ನು ಇನ್ನೊಬ್ಬರಿಗೆ ತಿಳಿಯಹೇಳುವ ಪ್ರಯತ್ನ. ಈ ಸಂವಹನ ಕ್ರಿಯೆಯೆಲ್ಲ ಸಾಮಾಜಿಕ ಸ್ವರೂಪದ್ದೆನ್ನುವುದು ನೆನಪಿಡಬೇಕಾದ ಅಂಶ. ಬೇಟೆಯ ಹರ್ಷೋನ್ಮಾದವನ್ನೂ ಭಯ ಸಂಕಟವನ್ನೂ ಮಾನವ ಚಿತ್ರಿಸಿದ—ಕಲ್ಲಿನ ಮೇಲೆ. ಕರಡಿ-ಕಾಡುಕೋಣ ಕಾಂಗರೂ -ನವಿಲು ನೃತ್ಯಗಳ ಮೂಲವೇನು? ತಾನು ಅವನ್ನು ಮಣಿಸಿದ ಅಥವಾ ಅವಕ್ಕೆ ಒಲಿದ ಸಂತಸವನ್ನು, ಆ ಪ್ರಾಣಿಗಳಂತೆಯೇ ಹೆಜ್ಜೆ ಇಟ್ಟು ಕುಣಿದು, ಇತರ ಸಾಮಾಜಿಕರಿಗೆ ಆತ ಹಂಚಿದ. ಕೃಷೀವಲನಾದಾಗ ಬಿತ್ತನೆ ನೃತ್ಯ. ಕೊರೆದ ಮರದ ದಿಮ್ಮಿಯನ್ನು ನೀರಿನಲ್ಲಿ ಚಲಿಸಿದ ದಿನದಿಂದ ಅಂಬಿಗ ನರ್ತನ ಹಾಡು ; ನಡೆದುದಕ್ಕೆ ರೆಕ್ಕೆಪುಕ್ಕ ಹಚ್ಚಿ ಬಣ್ಣಿಸಿ ಹೇಳುವ ಕಥೆ. ಹೀಗೆ ಸಾಹಿತ್ಯ ಕಲೆಗಳೆಲ್ಲ ಹುಟ್ಟಿದ್ದು ದುಡಿಮೆಯ ಜೊತೆಯಲ್ಲೇ, ಮಾನವನ ಕಾಯಕದಲ್ಲೇ. ತನ್ನ ಹೋರಾಟದ ಬದುಕಿನಲ್ಲಿ ಮನುಷ್ಯ ಸತ್ಯಾನ್ವೇಷಕನಾದ, ಸೌಂದರ್ಯೋಪಾಸಕನೂ ಆದ. ಇವೆರಡನ್ನೂ ತನ್ನ ಸುತ್ತಮುತ್ತಲ ಇರುವಿಕೆಯಲ್ಲೆ ಆತ ಕಂಡ. ಇರುವಿಕೆ ಮೂಡಿಸಿದ ಅರಿವಿನಿಂದಾಗಿ ಅವನು ತತ್ತ್ವಜ್ಞಾನಿಯಾದ. ಆ ಅರಿವು ಅವನ ಕೈಯಲ್ಲೊಂದು ಆಯುಧವಾಯಿತು. ಅದನ್ನು ಬಳಿಸಿ ಸಮಾಜವನ್ನೇ ಆತ ಪರಿವರ್ತಿಸತೊಡಗಿದ.

ತತ್ತ್ವಜ್ಞಾನಿ ತರ್ಕಸರಣಿಯಲ್ಲಿ ಮಾತನಾಡುತ್ತಾನೆ (ಇಂದಿನ ವಿಜ್ಞಾನಿಯೂ ಅಷ್ಟೆ).

ಕವಿ ನುಡಿಯುವುದು ಪ್ರತಿಮೆಗಳು ಮತ್ತು ಚಿತ್ರರೂಪದಲ್ಲಿ, ಆಗಲೂ-ಈಗಲೂ.

ಕಾವ್ಯವನ್ನು 'ವಾಸ್ತವತೆ ಮತ್ತು ನೈಜ ವಿಚಾರಗಳ ಕಲೆ' ಎಂದು ಹತ್ತೊಂಬತ್ತನೆಯ ಶತಮಾನದ ಐರೋಪ್ಯದ ಸಾಹಿತ್ಯದ ಅಗ್ರಪಂಕ್ತಿಯ ಪ್ರಭೃತಿ ರಷ್ಯನ್ ವಿಮರ್ಶಕ ಬೆಲಿನ್ಸ್ಕಿ ಕರೆದಿರುವುದು ಎಷ್ಟು ಸಮಂಜಸ !

ಇದನ್ನೆಲ್ಲ ತರ್ಕಬದ್ಧವಾಗಿ ಯೋಚಿಸಿದಾಗ ಒಂದು ಸತ್ಯ ಮೂಡಿಬರುತ್ತದೆ: ಕವಿಯ ಅಥವಾ ಕಲಾವಿದನ ಅಭಿವ್ಯಕ್ತಿ ಪರಮ ಶ್ರೇಷ್ಠವಾಗುವುದು—ಬದುಕಿನ ಒಂದಂಶವನ್ನು ಆತ ಕಂಡಾಗ ಅಲ್ಲ, ಬದುಕಿನ ಸಮಗ್ರ ಸ್ವರೂಪವನ್ನೇ ಆತ ಕಾಣುವುದು ಸಾಧ್ಯವಾದಾಗ ಮಾತ್ರ.

ಸಮಾಜದೊಡನೆ ನಂಟು

ದೀರ್ಘ ಶೋಧನೆಯ ಬಳಿಕ ಸತ್ಯದರ್ಶನವಾದವನ ಉತ್ಸಾಹದಿಂದ ಬೆಲಿನ್ಸ್ಕಿ ಸಾರಿದ :

"ವಾಸ್ತವತೆ ಇದೀಗ ಆಧುನಿಕ ಜಗತ್ತಿನ ಘೋಷ ಮತ್ತು ಕೊನೇ ಮಾತು ! ....ವಾಸ್ತವತೆ ಮಣ್ಣಿನಿಂದ ಚಿಮ್ಮುತ್ತದೆ ಮತ್ತು ಎಲ್ಲ ವಾಸ್ತವತೆಯಾದ ಮಣ್ಣೇ ಸಮಾಜ."

"ನಮ್ಮ ಕಾಲದ ಕಲೆ ಎಂಥದು?" ಎಂದು ಪ್ರಶ್ನಿಸಿ, ಆತನೇ ಉತ್ತರವಿತ್ತ: "ಅದು ಸಮಾಜವನ್ನು ಕುರಿತಾದ ತೀರ್ಪು, ಪೃಥಕ್ಕರಣ ; ಪರಿಣಾಮವಾಗಿ ಸಮಾಜದ ವಿಮರ್ಶೆ. ಈಗ ವಿಚಾರದ ಅಂಶ ಕಲೆಯ ಅಂಶದೊಡನೆ ಬೆರೆತಿದೆ. ನಮ್ಮ ಕಾಲದಲ್ಲಿ ಕಲಾಕೃತಿಯು ಯುಗಧರ್ಮದ ಅಂತಃಸ್ಫೂರ್ತಿಯಿಂದ ಹುಟ್ಟಿದೆ, ಚಿತ್ರಿಸಬೇಕು ಎನ್ನುವ ಒಂದೇ ಉದ್ದೇಶಕ್ಕೋಸ್ಕರ ಬದುಕನ್ನು ಚಿತ್ರಿಸಿದರೆ, ಅದು ಸಂಕಟದ ಕೂಗು ಇಲ್ಲವೆ ಮಹದಾನಂದದ ಅಮರಗಾನವಾಗದೆ ಇದ್ದರೆ, ಆ ಕೃತಿ ನಿರ್ಜೀವ ಎನಿಸಿಕೊಳ್ಳುವುದು."

ನಮ್ಮ ಕಾಲದ ಸಮಸ್ಯೆಗಳ ಸಾರವೇನು? ಜನತೆಯ ಆಶೋತ್ತರಗಳೇನು? ಯಾವುದು ನಡೆದುಬಂದ ದಾರಿ? ಸಾಮಾಜಿಕ ಸಾಂಸ್ಕೃತಿಕ ರೂಪುರೇಖೆಗಳು ಯಾವುವು? ಎಂಬುದನ್ನು ಸ್ಪಷ್ಟವಾಗಿ ಅರಿತಿರುವ ಬರೆಹಗಾರ ಮಾತ್ರ ಅರ್ಥಪೂರ್ಣ ಕೃತಿಗಳನ್ನು ರಚಿಸಬಲ್ಲ.

ಆಂಗ್ಲ ಕಾದಂಬರಿಯ ಜನಕ ಹೆನ್ರಿ ಫೀಲ್ಡಿಂಗ್ ಹೋಮರ್. ಮಿಲ್ಟನರ ಬಗೆಗೆ ಬರೆಯುತ್ತ, "ಅವರು ತಮ್ಮ ಕಾಲದ ಜ್ಞಾನವನ್ನೆಲ್ಲ ಕರಗತಮಾಡಿಕೊಂಡಿದ್ದರು" ಎಂದಿದ್ದಾನೆ.

ನಮ್ಮ ವಾಲ್ಮೀಕಿ—ವ್ಯಾಸರ ಬಗೆಗೂ ಪಂಪ-ಕುಮಾರವ್ಯಾಸರ ವಿಷಯದಲ್ಲೂ ಅಂಥದೇ ಮಾತನ್ನು ನಾವು ಆಡುವುದು ಸಾಧ್ಯ.

ಇರುವಿಕೆಯನ್ನು ಕುರಿತು ನಮ್ಮ ಅರಿವು ಅಗಾಧವಾಗಿದ್ದರೆ ಮಾತ್ರ, ನಾವು ರಚಿಸುವ ಕೃತಿ ಬಲಗೊಳ್ಳುತ್ತಿರುವ ಅಥವಾ ಕುಸಿಯುತ್ತಿರುವ ಸಮಾಜದ, ಬದಲಾಗುತ್ತಿರುವ ಮಾನವ ಸಂಬಂಧಗಳ ಚಿತ್ರಣವಾಗುತ್ತದೆ.

ರಷ್ಯದ ಮಹಾ ಸಾಹಿತಿ ಮಹರ್ಷಿ ತೋಲ್‌ಸ್ತೋೕಯ್ ಬಹಳ ಮೆಚ್ಚಿದ್ದ ಕೃತಿ— ಇಂಗ್ಲಿಷಿನ 'ರಾಬಿನ್ಸನ್ ಕ್ರೂಸೋ'. "ಇನ್ನೊಮ್ಮೆ ಹುಟ್ಟಿಬಂದರೆ ನಾನೊಂದು 'ರಷ್ಯನ್ ರಾಬಿನ್‌ಸನ್' ಬರೆಯಬೇಕು" ಎನ್ನುತ್ತಿದ್ದ ತೋಲ್‌ಸ್ತೋೕಯ್, ಇಳಿವಯಸ್ಸಿನಲ್ಲಿ. 'ರಾಬಿನ್ಸನ್‌ಕ್ರೂಸೊ' ಬರೆದ ಡೇನಿಯಲ್ ಡೆಫೋ ತೋಲ್‌ಸ್ತೋೕಯ್‌ಗಿಂತ ಎರಡು ಶತಮಾನ ಹಿಂದಿನವನು. ಅಸಾಮಾನ್ಯ ಮನುಷ್ಯ. ಅರಸನಿಗಿದಿರಾಗ, ಚಟುವಟಿಕೆಗಳಿಗಾಗಿ ಉಗ್ರಶಿಕ್ಷೆಗೆ ಗುರಿಯಾಗಿದ್ದ. ಆದರೆ ಅರವತ್ತು ದಾಟಿದ ಮೇಲೆ 'ರಾಬಿನ್ಸನ್‌ಕ್ರೂಸೊ' ಬರೆದು, ಲೋಕವನ್ನೇ ಬೆರಗುಗೊಳಿಸಿದ. ಹದಿನೆಂಟನೆಯ ಶತಮಾನದುದ್ದಕ್ಕೂ ಇಂಗ್ಲೆಂಡಿನಲ್ಲಿ 'ರಾಜಕೀಯ ಅರ್ಥಶಾಸ್ತ್ರ'ದ ಬೋಧನೆಗೆ ಡೆಫೋನ ಆ ಕೃತಿ ಆಧಾರಗ್ರಂಥವಾಯಿತು.

ಒಂದು ಕಾಲದಲ್ಲಿ ಕನ್ನಡದ ನವ್ಯಪಂಥೀಯರ ಆರಾಧ್ಯದೈವವಾಗಿದ್ದ ಟಿ.ಎಸ್. ಇಲಿಯಟ್ ನಮ್ಮ ವೈಯಕ್ತಿಕ ಹಿತವರ್ಧನೆಯನ್ನು ನಾವು ಬಯಸುವಂತೆ ಸಮಾಜದ ಹಿತವರ್ಧನೆಯ ಕಡೆಗೂ ಗಮನವೀಯಬೇಕು—ಎಂದು ಅಭಿಪ್ರಾಯ ಪಟ್ಟಿದ್ದಾರೆ. "ಸಮಾಜದ ವಿಷಯದಲ್ಲಿ ನಾವು ಇಷ್ಟನ್ನು ಹೇಳಬಹುದು : ಅತಿರೇಕವಾಗಲೀ ಕೊರತೆಯಾಗಲೀ ಇರುವಲ್ಲಿ ಅದನ್ನು ಸರಿಪಡಿಸಲು ನಾವು ಯತ್ನಿಸುವೆವು" ಎಂದಿದ್ದಾನೆ.

ಪ್ರಗತಿಶೀಲರ ಕೈಕಂಬ ಮಾಕ್ಸಿಂ ಗೋರ್ಕಿ ನಿಸ್ಸಂದಿಗ್ಧಮಾತುಗಳಲ್ಲಿ ಹೀಗೆ ನುಡಿದಿದ್ದಾನೆ :

ಬದುಕನ್ನೂ ದುಡಿಮೆಯನ್ನೂ ಪ್ರತಿಬಿಂಬಿಸುವುದು, ಚಿತ್ರಿಸುವುದು; ಪ್ರತಿಮೆಗಳಲ್ಲಿ, ಪಾತ್ರಗಳಲ್ಲಿ, ವ್ಯಕ್ತಿಗಳ ಮಾದರಿಗಳಲ್ಲಿ ಸತ್ಯವನ್ನು ಒಡಮೂಡಿಸುವುದು ಸಾಹಿತ್ಯದ ಕರ್ತವ್ಯ. ಹೆಚ್ಚು ಎತ್ತರಕ್ಕೆ ಏರಿದಷ್ಟೂ ಮತ್ತಷ್ಟು ದೂರ ನಮಗೆ ಕಾಣಿಸುವುದು ಎಂಬ ಗಾದೆ ಇದೆ. ಈಗಾಗಲೇ ಅಸ್ತಿತ್ವದಲ್ಲಿರುವ ವಿಷಯಗಳ ಚಿತ್ರಣದಿಂದಲೇ ಸೃಜನಶೀಲ ಬರೆವಣಿಗೆ ತೃಪ್ತವಾಗಬಾರದು. ನಾವು ಬಯಸುವ ವಿಷಯಗಳನ್ನೂ ಸಾಧಿಸುವುದು ಶಕ್ಯವಿರುವ ಸಂಗತಿಗಳನ್ನೂ ನಾವು ಗಮನದಲ್ಲಿಡಬೇಕು."

ಇದು ಎಲ್ಲ ಕಾಲಗಳ ಎಲ್ಲ ಸಮಾಜಗಳ ಬರೆಹಗಾರರಿಗೂ ಅನ್ವಯವಾಗುವ ಮಾತು.

ರಾಜಕೀಯ-ಸಾಹಿತ್ಯ

ಜಗತ್ತಿನಲ್ಲಿ ಆರಂಭದ ಸಾಮಾಜಿಕ ವ್ಯವಸ್ಥೆಗಳ ಕಾಲದಿಂದಲೂ ರಾಜಕೀಯ ತನ್ನ ಹಿರಿಮೆಯನ್ನು ಮೆರೆದಿದೆ. ಜನಸಮುದಾಯದ ಆಗುಹೋಗುಗಳನ್ನು ನಿರ್ದೇಶಿಸುವ, ನಿಯಂತ್ರಿಸುವ, ಸಾಮರ್ಥ್ಯ ಅದರದು. ಬದುಕಿಗೆ-ಸಮಾಜಕ್ಕೆ-ನೂರು ಎಳೆಗಳಿಂದ ಬರೆಹಗಾರ ಬಂಧಿತನಾಗಬೇಕು ಎನ್ನುವಾಗ, ರಾಜಕೀಯದಿಂದ ಆತ ದೂರವಿರುವುದು ಹೇಗೆ ಸಾಧ್ಯ?

ಗ್ರೀಕ್ ಮಹಾಕಾವ್ಯಗಳ ಕರ್ತೃವಾಗಲೀ ಭಾರತೀಯ ಮಹಾಕಾವ್ಯಗಳನ್ನು ರಚಿಸಿದವರಾಗಲಿ ರಾಜಕೀಯವನ್ನು ಬಿಟ್ಟಿರಲಿಲ್ಲ. ರಾಷ್ಟ್ರದ ಕಲ್ಪನೆಯನ್ನು ಬಲಗೊಳಿಸಿ, ರಾಷ್ಟ್ರೀಯ ಏಕತೆಯನ್ನು ಪರೋಕ್ಷವಾಗಿ ಸಾಧಿಸಲು ಆ ಕಾವ್ಯಗಳು ಬಹುಮಟ್ಟಿಗೆ ಕಾರಣವಾದುವು.

ಎಲ್ಲ ದೇಶಗಳ ಎಲ್ಲ ಕಾಲಗಳ ಪ್ರತಿಭಾನ್ವಿತ ಬರೆಹಗಾರರೂ ಕಲಾವಿದರೂ ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯ ಸೇಚನಕ್ಕೆ ಗುರಿಯಾದವರೇ. ಪನ್ನೀರು, ರಾಡಿ ಎರಡರ ಬಳಕೆಯೂ ಉಂಟು ಈ ಸೇಚನದಲ್ಲಿ. ರಾಜಕೀಯದ ಪ್ರಭೃತಿಗಳೊಡನೆ ಒಮ್ಮೊಮ್ಮೆ ಘರ್ಷಣೆಯೂ ಇಲ್ಲದಿಲ್ಲ.

ಷೇಕ್ಸ್‌ಪಿಯರನ ಚಾರಿತ್ರಿಕ ನಾಟಕಗಳಲ್ಲಿ ಕಂಡುಬರುವ ರಾಜಕೀಯ ಜ್ಞಾನ ಸಗಟು. ಮಹಾಕವಿ ಮಿಲ್ಟನ್ ತನ್ನ ಎರಡನೆಯ ಚಾರ್ಲ್ಸ್ ದೊರೆಯಿಂದ ಬಂಧಿತನಾದ. "ಮನುಷ್ಯನನ್ನು ಕೊಲ್ಲುವವನು ವಿಚಾರವಂತ ಪ್ರಾಣಿಯನ್ನು ಕೊಲ್ಲುತ್ತಾನೆ. ಆದರೆ ಪುಸ್ತಕಗಳನ್ನು ನಾಶಮಾಡುವವನು ವಿಚಾರಗಳನ್ನು ನಾಶಮಾಡುತ್ತಾನೆ"ಎಂದ ಮಿಲ್ಟನ್. ಮುದ್ರಣ ಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಲ್ಲಿ ಆತ ಹೀಗೆಂದ :

"ಮಾನ್ಯ ಸದಸ್ಯರಾದ ಪ್ರಭುಗಳೇ, ಸಾಮಾನ್ಯರೇ, ನಿಮ್ಮ ಧೀರೋದಾತ್ತ ಮತ್ತು ಸಂತೃಪ್ತ ನಿಲುವು ನಮಗೋಸ್ಕರ ದೊರಕಿಸಿಕೊಟ್ಟ ಸ್ವಾತಂತ್ರ್ಯ ಇದು : ಎಲ್ಲ ಜ್ಞಾನವನ್ನೂ ವಿವೇಕವನ್ನೂ ಪೋಷಿಸಿದ ಸ್ವಾತಂತ್ರ್ಯ. ಈ ಸ್ವಾತಂತ್ರ್ಯವೇ ಸ್ವರ್ಗದ ಪ್ರಭಾವದ ಹಾಗೆ ನಮ್ಮ ಚೇತನಗಳನ್ನು ಪರಿಶುದ್ಧಗೊಳಿಸಿದೆ, ಬೆಳಗಿದೆ...... ಬೇರೆಲ್ಲ ಸ್ವಾತಂತ್ರ್ಯಗಳಿಗಿಂತಲೂ ಮಿಗಿಲಾಗಿ, ಅರಿಯುವ ನುಡಿಯುವ ಆತ್ಮಸಾಕ್ಷಿಗೆ ಅನುಗುಣವಾಗಿ ಅನಿರ್ಬಂಧಿತವಾಗಿ ಚರ್ಚಿಸುವ ಸ್ವಾತಂತ್ರ್ಯವನ್ನು ನನಗೆ ಕೊಡಿ...."

ಪರಿಪೂರ್ಣತೆಯತ್ತ ಸಾಗುವ ಮಾನವನ ದೀರ್ಘ ಪಯಣದುದ್ದಕ್ಕೂ ಮಿಲ್ಟನನಂತೆ ವರ್ಡ್ಸ್‌ವರ್ತನೂ ಪಾರ್ಲಿಮೆಂಟ್ ಸದಸ್ಯನಾಗಿ ತನ್ನ ಕಾಲದ ರಾಜಕೀಯದಲ್ಲಿ ಸಕ್ರಿಯ ಪಾತ್ರವಹಿಸಿದ.

ಸ್ವಾತಂತ್ರ್ಯ ಯಾವ ಭೌಗೋಳಿಕ ಕಟ್ಟುಪಾಡುಗಳನ್ನೂ ಲೆಕ್ಕಿಸದ ಕಲ್ಪನೆ: ಪ್ರಜಾಪ್ರಭುತ್ವವೂ ಅಷ್ಟೆ. ಕವಿ ಬೈರನ್ ಗ್ರೀಸಿನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತ ಮಡಿದ ; ಲೇಖಕ ರಾಲ್ಫ್ ಫಾಕ್ಸ್ ಫ್ರಾಂಕೋ ಸರಕಾರಕ್ಕಿದಿರು ಕೈದು ಎತ್ತಿ ಸ್ಪೇನಿನಲ್ಲಿ ದೇಹವಿಟ್ಟ.

ಫ್ರಾನ್ಸಿನ ಅನತೋಲ್ ಫ್ರಾನ್ಸ್ ತನ್ನ ಕೊನೆಗಾಲದಲ್ಲಿ ಪ್ಯಾರಿಸಿನ ಬೀದಿಗಳಲ್ಲಿ ಕಾರ್ಮಿಕರ ಒಂದು ಮೆರವಣಿಗೆಯಲ್ಲಿ ಭಾಗವಹಿಸಿದ. ರೋಮೆ ರೋಲಾ ಫಾಸಿಸಮಿನೆದಿರು ದಿಟ್ಟತನದಿಂದ ಹೋರಾಡಿ, ಸೆರೆಮನೆಯಲ್ಲಿ ಸಾವನ್ನಪ್ಪಿದ.*

ಜರ್ಮನಿಯಲ್ಲಿ ನಾಟಕಕಾರ ಬ್ರೆಕ್ಟ್, ಕಾದಂಬರಿಕಾರ ಥಾಮಸ್ ಮಾನ್, ಲೇಖಕ ಅರ್ನೆಸ್ಟ್ ಟಾಲರ್, ಬರೆಹಗಾರ್ತಿ ಆನ್ನಾ ಸೆಯರ್ಸ್ ಫಾಸಿಸಮನ್ನು ಖಂಡಿಸಿದರು.

ಪರತಂತ್ರ ಭಾರತದಲ್ಲಿ ಬಂಕಿಮಚಂದ್ರ ಚಟ್ಟೋಪಾಧ್ಯಾಯ, ರವೀಂದ್ರನಾಥ ಠಾಕೂರ್, ಸರೋಜಿನಿ ನಾಯ್ಡು, ಅಬನೀಂದ್ರನಾಥ ಠಾಕೂರ್ ಮತ್ತಿತರ ಹಲವರು ರಾಜಕೀಯದಲ್ಲಿ ಆಸಕ್ತರಾಗಿದ್ದರು.

ತನ್ನ ವೃದ್ಧಾಪ್ಯದ ಕೊನೆಯ ವರ್ಷಗಳಲ್ಲಿ (೧೯೦೭-೧೯೧೦) ತೋಲ್‌ಸ್ತೋಯ್ ವಿಶೇಷವಾಗಿ ಇಷ್ಟಪಡುತ್ತಿದ್ದ ಸಂದರ್ಶಕರು, ಎಡರಾಜಕೀಯದವರು. ರಾಜಕೀಯ ಬೋಧೆ ಇದ್ದವರು. ೧೯೦೫ರ ಕ್ರಾಂತಿ ವಿಫಲವಾದ ಬಳಿಕ ಪ್ರಭುತ್ವಕ್ಕಿದಿರಾದ ರಾಜಕೀಯ ಚಟುವಟಿಕೆಗಳನ್ನು ತೋಲ್‌ಸ್ತೋಯ್ ಆತ್ಮೀಯತೆಯಿಂದ ಕಂಡ. 'ನಾನು ಮೌನವಾಗಿರಲಾರೆ' ಎಂಬ ಲೇಖನ ಬರೆದು ಜಾರ್‌ಶಾಹಿಯನ್ನು ಆತ ಖಂಡಿಸಿದ. ದಬ್ಬಾಳಿಕೆಯನ್ನೂ ರಾಜಕೀಯ ಮರಣದಂಡನೆಗಳನ್ನು ಕಡೆಗಾಣಿಸಬೇಕೆಂದು ಕರೆನೀಡಿದ. ಎಂಬತ್ತನ್ನು ಸಮೀಪಿಸುತ್ತಿದ್ದ ತೋಲ್‌ಸ್ತೋಯ್ ಸೆರೆಮನೆಯಲ್ಲಿದ್ದ ಲಾಂಡರ್ ಎಂಬ ಕ್ರಾಂತಿಕಾರಿಗೆ ಸ್ಥಾನಬದ್ಧತೆಯಿಂದ ಬಿಡುಗಡೆ ಹೊಂದಲು ಜಾಮೀನು ನಿಂತುದು ಹೃದಯಸ್ಪರ್ಶಿಯಾದೊಂದು ಸಂಭವ.

ಪ್ರಭುತ್ವದ ಕರಿನೆರಳು

ಸೃಜನಶೀಲಸಾಹಿತ್ಯದ ಬಗೆಗೆ ಪ್ರಭುತ್ವಗಳು ವಹಿಸುವ ಗಾಢ ಆಸಕ್ತಿಗೆ ಹತ್ತೊಂಬತ್ತನೆಯ ಶತಮಾನದ ಫ್ರಾನ್ಸ್, ರಷ್ಯಗಳು ಶ್ರೇಷ್ಠ ದೃಷ್ಟಾಂತಗಳು. ಸಮಾಜದ ಪ್ರತಿಷ್ಠಿತರ ಕೆಂಗಣ್ಣಿಗೆ ಗುರಿಯಾದ ಫ್ಲಾಬೇರ್ ನ್ಯಾಯಸ್ಥಾನವಲ್ಲಿ ಆರೋಪಿಯಾಗಿ ನಿಲ್ಲಬೇಕಾಯಿತು. ಆಗ ಇನ್ನೊಬ್ಬ ಸಾಹಿತಿ ಥಿಯೋಫಿಲ್ ಗಾಟಿಯೆರ್ ಅಂದ :

"ನಿಜವಾಗಿಯೂ, ನನ್ನ ವೃತ್ತಿಯ ಬಗೆಗೆ ನನಗೆ ನಾಚಿಕೆ ! ಬರೆದು

• ರೋಲಾ ಸತ್ತುದು ತಾನು ನಿರ್ಗಮಿಸಿದ ಹಳ್ಳಿಯಲ್ಲಿ ಎನ್ನುತ್ತಾರೆ.

ಸಂಪಾದಿಸದಿದ್ದರೆ ಉಪವಾಸಬಿದ್ದು ಸಾಯಬೇಕು. ಗಳಿಸುವ ಅಲ್ಪ ಹಣಕ್ಕಾಗಿ ನಾನು ಯೋಚಿಸುವುದರ ಅರ್ಧಾಂಶ ಅಥವಾ ಕಾಲಂಶ ಮಾತ್ರ ಹೇಳುತ್ತೇನೆ. ಹೀಗಿದ್ದರೂ ಬರೆಯುವ ಪ್ರತಿ ವಾಕ್ಯಕ್ಕಾಗಿ ನ್ಯಾಯಸ್ಥಾನಕ್ಕೆ ನಾನು ಹೋಗಬೇಕಾದ ಅಪಾಯ ಇದ್ದೇ ಇದೆ."

ಇಂಥ ಪರಿಸ್ಥಿತಿಯಲ್ಲಿ ಬದುಕಿನ ಸಮಸ್ಯೆಗಳಿಂದ ಬರೆಹಗಾರ ವಿಮುಖನಾಗುವುದು ಸಂಭವನೀಯ.

ಎಲ್ಲ ಬಗೆಯ ರಾಜಕೀಯ ವ್ಯಕ್ತಿಗಳ ಬಗೆಗೆ ಭ್ರಮೆನಿರಸನ ಉಂಟಾದಾಗ ಏನಾಗುತ್ತದೆ? ಹೆಸರಾಂತ ಫ್ರೆಂಚ್ ಸಾಹಿತಿಗಳಾದ ಗಾಂಕೊರ್ಟ್ ಸೋದರರು ತಮ್ಮ 'ದಿನಚರಿ'ಯಲ್ಲಿ ಹೀಗೆ ಹೇಳಿದ್ದಾರೆ.

"..... ಪ್ರತಿಯೊಂದು ನಂಬುಗೆಯ ವಿಷಯದಲ್ಲಿ ಅಸಹ್ಯಭಾವನೆ, ಯಾವ ಪ್ರಭುತ್ವ ಬಂದರೂ ಸಹಿಷ್ಣುತೆ. ರಾಜಕೀಯ ಶ್ರದ್ಧೆಯ ಬಗೆಗೆ ಉಪೇಕ್ಷೆ....... ಅನಿಸುವುದಷ್ಟು : ಯಾವ ಧ್ಯೇಯಕ್ಕಾಗಿಯೂ ಸಾಯಬೇಕಾಗಿಲ್ಲ. ಇರುವ ಸರಕಾರ ಯಾವುದೇ ಇರಲಿ ಅದರೊಡನೆ ಬಾಳಬೇಕು, ಕಲೆಯೊಂದರ ಹೊರತು ಬೇರೆ ಯಾವುದರಲ್ಲೂ ನಂಬುಗೆ ಇರಬಾರದು. ಸಾಹಿತ್ಯದ ಹೊರತಾಗಿ ಬೇರೆ ಯಾವ ಶ್ರದ್ಧೆಯನ್ನೂ ಒಪ್ಪಬಾರದು."

ಎಂಥ ಮಾನಸಿಕ ಸಂಕಟ, ತೊಳಲಾಟ ! ಯಾವ ಬರೆಹಗಾರನಿಗೂ ಕಲಾವಿದನಿಗೂ ಒದಗಬಾರದ ದುಃಸ್ಥಿತಿ ಇದು.

ಮಹಾಕವಿ ಪೂಷ್ಕಿನ್ ಪಟ್ಟಪಾಡು ಕೂಡಾ ಕರುಳು ಕತ್ತರಿಸುವಂಥದು. ಪೂಷ್ಕಿನನ' ಯೌವನದ ರಾಜಕೀಯ ತಪ್ಪುಗಳ'ನ್ನು ದೊರೆ ಒಂದನೆಯ ನಿಕೊಲಸ್ ಮನ್ನಿಸಿ, ಅವನ ಪೋಷಕನಾದ. ಈ ಕವಿಯ "ಲೇಖನಿಯನ್ನೂ ಮಾತುಗಾರಿಕೆಯನ್ನೂ ನಿರ್ದೇಶಿಸುವುದು ಸಾಧ್ಯವಾದರೆ ಅದರಿಂದ ಲಾಭವಿದೆ ಎಂಬುದು ಪೊಲೀಸರ ಮುಖ್ಯಸ್ಥ ಅನಂತರ ಸಲ್ಲಿಸಿದ ವರದಿ. ಆಗಿನ ರಾಜ್ಯವ್ಯವಸ್ಥೆಯನ್ನು ಪೂಷ್ಕಿನ್ ಹೊಗಳುವಂತೆ ಮಾಡುವುದು ಅರಸನ ಹಾಗೂ ಪೊಲೀಸರ ಮುಖ್ಯಸ್ಥರ ಬಯಕೆಯಾಗಿತ್ತು. ಕವಿಗೆ ಪ್ರಾಪ್ತವಾದ ಅಕಾಲ ಮೃತ್ಯು ಹಂಚಿಕೆಗಳನ್ನು ಮಣ್ಣುಗೂಡಿಸಿತು.

ಎಲೀಟೀಕರಣ

ಸಮಾಜದ ಎಲೀಟ್ ಜನ-ಪ್ರತಿಷ್ಠಿತರು-ಬಂಡಾಯಗಾರ ಬರೆಹಗಾರ ಅಥವಾ ಕಲಾವಿದನ ವಿಷಯದಲ್ಲಿ ತಳೆಯುವ ಔದಾರ್ಯ ಅವನ ಪಾಲಿಗೆ ಉರುಳಾಗುತ್ತದೆ. ಯಾವನಾದರೂ ಅಂಥ ಉರುಳು ತನಗೆ ಬೇಡ ಅಂದರೆ ಪ್ರತಿಷ್ಠಿತರಿಗೆ ಅದೆಷ್ಟು ಕಾತರ !

ಪೋಪ್‌ನ ಪ್ರಕಾರ,"ಪ್ರಭುವಿನ ಮತ್ತು ಆಸ್ಥಾನದ ಆಶ್ರಯ ಷೇಕ್ಸ್‌ಪಿಯರ್‌ಗೆ ದೊರೆತಿದ್ದರೆ ಅತ ಇನ್ನಷ್ಟು ಚೆನ್ನಾಗಿ ಬರೆಯುತ್ತಿದ್ದ." ವಿಶ್ವದ ಸಾಹಿತ್ಯಪ್ರಿಯರು ಪುಣ್ಯವಂತರು! ಷೇಕ್ಸ್‌ಪಿಯರ್ ತನಗೆ ಜನಾಶ್ರಯ ಸಾಕು ಎಂದ.

ವಾಲ್ಟೇರ್ ಕ್ರಾಂತಿಕಾರೀ ಲೇಖಕ. ಆದರೆ ಇವನ ಒಡನಾಟವನ್ನು ಬಯಸಿದ ಪ್ರಭುಗಳಿದ್ದರು. ಅವರ ಸಾನ್ನಿಧ್ಯದಲ್ಲಿ ವಾಲ್ಟೇರನ ಅಭಿರುಚಿಗಳು ಸುಲಭವಾಗಿ ರೂಪಾಂತರ ಹೊಂದುತ್ತಿದ್ದುವು. 'ಹ್ಯಾಮ್ಲೆಟ್' ನಾಟಕದಲ್ಲಿ ಕಾವಲುಗಾರ "ಒಂದು ಇಲಿಯೂ ಮಿಸುಕುತ್ತಿಲ್ಲ" ಎನ್ನುತ್ತಾನೆ. ರಾಷ್ಟ್ರದ ಪ್ರಥಮ ಪ್ರಜೆಗಳು ಎದುರುಗಡೆ ಆಸೀನರಾಗಿರುವಾಗ ಇಂಥ ಮಾತುಗಳನ್ನು ಆಡುವುದೆ?—ಎಂದು ಷೇಕ್ಸ್‌ಪಿಯರನ್ನು ಕುರಿತು ವಾಲ್ಟೇರನ ಟೀಕೆ. ಎಲೀಟ್ ಜನರ ಸಮ್ಮೋಹನಾಸ್ತ್ರದ ಪ್ರಭಾವ ಎಂಥದೆಂಬುದಕ್ಕೆ ಬೇರೆ ಉದಾಹರಣೆ ಬೇಕೆ?

"ಪ್ರತಿಷ್ಠಿತ ವ್ಯಕ್ತಿಯಾಗಿ ಅಪಾರ ಜನಮನ್ನಣೆ ಪಡೆಯಬೇಕೆಂಬ ಮಹತ್ವಾಕಾಂಕ್ಷೆ ರಣಹದ್ದಿನಂತೆ ನನ್ನ ಹೃದಯವನ್ನು ಕುಕ್ಕಿ ಮುಕ್ಕುತ್ತಿತ್ತು" ಎಂದು ತನ್ನ ಟಿಪ್ಪಣಿ ಪುಸ್ತಕದಲ್ಲಿ ಫ್ಲಾಬೇರ್ ಬರೆದಿದ್ದಾನೆ. ಈ ನೆಲೆಯಿಂದ ಹೊರಟು 'ಯಾವುದನ್ನು ಕುರಿತು ಬರೆದಿದ್ದೇನೆ ಎಂಬುದಕ್ಕಿಂತ ಯಾವ ರೀತಿಯಲ್ಲಿ ಬರೆದಿದ್ದೇನೆ ಎಂಬುದು ಮುಖ್ಯ' ಎಂಬ ನಿಲುವಿಗೆ ಫ್ಲಾಬೇರ್ ಬಂದು ಮುಟ್ಟಿದ್ದು ಅತ್ಯಂತ ಸಹಜಕ್ರಿಯೆ.

ಅಮೆರಿಕದ ಕ್ರಾಂತಿಕಾರಿ ಸಾಹಿತಿ ಜಾಕ್ ಲಂಡನ್ ಒಪ್ಪಿಕೊಂಡಿದ್ದಾನೆ:

ಬರೆದು ಮುಗಿಸಿದಮೇಲೆ ನನ್ನ ಬರೆಹಗಳ ಬಗೆಗೆ ನನಗೆ ದ್ವೇಷವುಂಟಾಗುತ್ತದೆ. ನನಗೆ ದುಡ್ಡಿನ ಅಗತ್ಯವಿದೆ. ಆದಕ್ಕಾಗಿ ಬರೆಯುತ್ತೇನೆ. ಇದು ಹಣ ಗಳಿಸಲು ಸುಲಭ ದಾರಿ. ಆದರೆ ನನ್ನಿಂದ ಸಾಧ್ಯವಿದ್ದಿದ್ದರೆ, ಶ್ರೀಮಂತರ ಮೇಲಿನ ನನ್ನ ದ್ವೇಷವನ್ನು ವ್ಯಕ್ತಪಡಿಸುವ ಲೇಖನಗಳನ್ನು ಬಿಟ್ಟು ಮತ್ತೇನನ್ನೂ ನಾನು ಬರೆಯುತ್ತಿರಲಿಲ್ಲ."

ಏನನ್ನೂ ಮರೆಮಾಚದ ಈ ಮಾತುಗಳಿಗಾಗಿ ಜಾಕ್ ಲಂಡನ್‌ನನ್ನು ನಾವು ಅಭಿನಂದಿಸಬಹುದು.

ಬಹು ಜನ ಬರೆಹಗಾರರು—ಕಲಾವಿದರೆಲ್ಲ ಬಡತನ ಎಂದರೇನೆಂಬುದನ್ನು ಅರಿತವರು. ಸಮಾಜದ ಬೆಳವಣಿಗೆಯ ಸೂತ್ರಗಳನ್ನು ಅರ್ಥಮಾಡಿಕೊಂಡು, ಹೊಸ ಜಗತ್ತನ್ನು ಬಯಸುವವರು ಕಡಮೆ. ಒಂದಿಷ್ಟು ಕೀರ್ತಿ, ಒಂದಿಷ್ಟು ಕಾಂಚನ ಲಭ್ಯವಾದಾಗ ಅವರ ತಲೆ ತಿರುಗುತ್ತದೆ. ಮೇಲಣ ಹಂತವನ್ನು ತಲಪಬೇಕೆಂಬ ಬಯಕೆ ಅವರನ್ನು ಕೊರೆಯುವ ಕೀಟವಾಗುತ್ತದೆ.

ಎಚ್. ಜಿ. ವೆಲ್ಸ್ ಮತ್ತು ಡಿ. ಎಚ್. ಲಾರೆನ್ಸ್ ಇಬ್ಬರೂ ಕಾರ್ಮಿಕ ವರ್ಗ ದಿಂದ ಬಂದರು. ಎಲೀಟೀಕರಣಕ್ಕೆ ಬಲಿಯಾದರು. ಆ ಮಟ್ಟಿಗೆ ಅವರ ಬರವಣಿಗೆ

ಬಡವಾಯಿತು.

ಉಳ್ಳವರ ಕೃಪಾಛತ್ರವನ್ನು ಬಯಸದ ಬರೆಹಗಾರರೂ ಕಲಾವಿದರೂ ಇಲ್ಲವೇ ಇಲ್ಲ ಎಂದಲ್ಲ. ಆದರೆ ಎಲ್ಲ ಕಾಲಗಳಲ್ಲೂ ಅವರ ಸಂಖ್ಯೆ ಕಡಮೆ. ಆ ಅಲ್ಪ ಸಂಖ್ಯಾಕರಲ್ಲೊಬ್ಬ ಪೋತನ. ಆಂಧ್ರದ ಕವಿ ಶ್ರೀನಾಥ ಅರಸೊತ್ತಿಗೆಯಿಂದ ಅನೇಕ ಸಾಹಿತ್ಯ ಗೌರವಗಳನ್ನು ಸಂಪಾದಿಸಿದವನು. ಪೋತನ ಅಂಥದೊಂದೂ ಬೇಡ ಎಂದವನು. ಅವನಿಗೆ ಸುಖ ಸೌಕರ್ಯ, ಇವನಿಗೆ ಕಡುಬಡತನ. "ವಾಸ್ತವ ದೃಷ್ಟಿ ಬೆಳಸಿಕೋ" ಎಂದು ಶ್ರೀನಾಥ ತನ್ನ ಮಿತ್ರನಿಗೆ ಎಷ್ಟೋ ಹೇಳಿದ. ಪೋತನ ಒಪ್ಪಲಿಲ್ಲ.

ತುಂಬು ಗೌರವದ ಪ್ರಣಾಮಕ್ಕೆ ಆ ಪೋತನ ಅರ್ಹ.

ಅಧಃಪತನದ ಜಾರುಬಂಡೆ

ಎಲೀಟೀಕರಣಕ್ಕೆ ತುತ್ತಾದವನ ಮುಂದಿರುವುದು ಅಧಃಪತನದ ಜಾರುಬಂಡೆ. ಕ್ಷಣಕ್ಷಣಕ್ಕೂ ಜಾರುತ್ತಿದ್ದರೂ, ಇದ್ದಲ್ಲಿಯೇ ಇದ್ದೇನೆ ಎನ್ನುವ ಚಪಲ. ಮೊದಲು ಹಟ ಸಾಧನೆ, ಬಳಿಕ ನಟನೆ—ಪಥಭ್ರಾಂತನಹಾಗೆ.

ಕಣ್ಣಿಗೆ ಪರೆ. ಪರೆ ಮುಖವನ್ನು ಮುಚ್ಚುವ ಪರದೆಯಾಗುತ್ತದೆ. ತೆಳುಪರದೆ ಗಟ್ಟಿ ರಟ್ಟಾಗುತ್ತದೆ. ರಟ್ಟು ಬಹಳ ಬೇಗನೆ ಬಣ್ಣ ಬಳೆದ ಮುಖವಾಡವಾಗುತ್ತದೆ. ಮುಖವಾಡದ ಮನುಷ್ಯನಾಗುತ್ತಾನೆ—ಆ ಬರೆಹಗಾರ, ಕಲಾವಿದ.

ಶೋಷಣೆಯೇ ಪ್ರಧಾನವಾಗಿರುವ ಸಮಾಜದಲ್ಲಿ ಸುಲಿಗೆಗಾರರ ಪಕ್ಷವಹಿಸುವ ಬರೆಹಗಾರರೂ ಕಲಾವಿದರೂ ವರ್ಗಸಮರದಲ್ಲಿ ತಮ್ಮೆಲ್ಲ ಬಲವನ್ನು ಬಳಸುತ್ತಾರೆ. ತಾವು ಓಲೈಸುವ ವರ್ಗಕ್ಕೆ ಭವಿತವ್ಯ ಇಲ್ಲವೆಂಬ ಕಟುಸತ್ಯವನ್ನು ಒಪ್ಪಲು ನಿರಾಕರಿಸುತ್ತಾರೆ. ತಾತ್ವಿಕ ದಿವಾಳಿತನದ ಫಲವಾಗಿ, ಕೃತಿರಚನೆಯಲ್ಲಿ, ಹೂರಣದ ಬದಲು ಹೊರ ಆಕಾರಕ್ಕೇ ಮಹತ್ವ ನೀಡುತ್ತಾರೆ. 'ಕಲೆಗಾಗಿ ಕಲೆ' ಅವರ ಕೌಪೀನ ಘೋಷವಾಗುತ್ತದೆ.

ಅವರಿಂದ ಸೃಷ್ಟಿಯಾಗುವುದು ಅಗ್ಗದ ಸಾಹಿತ್ಯ. ಅತೀವ ಅಂತರ್ಮುಖತೆ, ಅಸಹಾಯತೆಯ-ನಿರಾಶೆಯ ಧ್ವನಿ, ಕಾಮ ವೈಪರೀತ್ಯಗಳಿಗೆ ಆದ್ಯತೆ—ಈ ಪ್ರವೃತ್ತಿಗಳನ್ನು ಆ ಸಾಹಿತ್ಯದಲ್ಲಿ ಮುಖ್ಯವಾಗಿ ಕಾಣುತ್ತೇವೆ. ಮಾನವನ ಕರ್ತೃತ್ವಶಕ್ತಿಯನ್ನು ಹ್ರಾಸಗೊಳಿಸುವ ದುಷ್ಪ್ರವೃತ್ತಿಗಳು ಇವು.

ಸಮಾಜವಾದದ ಆಹ್ವಾನ

ಕರ್ನಾಟಕದಲ್ಲಿ ಮತ್ತೆ ಪ್ರಗತಿಮಾರ್ಗದ ಪಥಿಕರಾಗಲು ಬಯಸಿರುವ ನಾವು ಇಂದು ಇದಿರಿಸಬೇಕಾದ ಸವಾಲು ಯಾವುದು? ನಮ್ಮ ಮುಂದಿರುವ ಜ್ವಲಂತ

ಸಮಸ್ಯೆಗಳು ಯಾವುವು? ಇಂದಿನ ಪರಿಸ್ಥಿತಿಯ ವಿಶೇಷ ಲಕ್ಷಣವೇನು? ಪರತಂತ್ರ ಭಾರತದಲ್ಲಿ ಸ್ವಾತಂತ್ರ್ಯಸಾಧನೆ ಎಚ್ಚೆತ್ತ ಜನತೆಯ ಮುಖ್ಯ ಗುರಿಯಾಗಿತ್ತು. ದೇಶದ ವಿವಿಧ ಭಾಷಾಪ್ರದೇಶಗಳಲ್ಲಿ ಪುನರುದಯ ಚಳವಳಿ ನಡೆದದ್ದು ಸ್ವಾತಂತ್ರ್ಯ ಸಂಗ್ರಾಮದ ಪ್ರಭೆಯಲ್ಲೇ. ಬಿಡುಗಡೆಯ ಹೋರಾಟ ತೀವ್ರಗೊಂಡಂತೆ 'ನಾಳೆಯ ಭಾರತ ಹೇಗಿರಬೇಕು?' ಎಂಬ ಜಿಜ್ಞಾಸೆಯೂ ಆರಂಭವಾಯಿತು.

ಇಂದಿಗೆ ಸುಮಾರು ಐದು ದಶಕಗಳ ಜನನಾಯಕ ಜವಾಹರಲಾಲರು ಹೇಳಿದ ಮಾತುಗಳನ್ನು ನಿಮ್ಮ ಗಮನಕ್ಕೆ ತರಬಯಸುವೆ: "ಜಗತ್ತಿನ ಸಮಸ್ಯೆಗಳ ಹಾಗೂ ಭಾರತದ ಸಮಸ್ಯೆಗಳ ಪರಿಹಾರ ಸಾಧ್ಯವಿರುವುದು ಸಮಾಜವಾದದಲ್ಲೇ ಎಂಬುದು ನನಗೆ ಮನವರಿಕೆಯಾಗಿದೆ. ಈ ಪದವನ್ನು ನಾನು ಬಳಸುವುದು ಅಸ್ಪಷ್ಟವಾದ, ಮಾನವೀಯತೆಯ ರೀತಿಯಲ್ಲಲ್ಲ. ಅದನ್ನು ಬಳಸುತ್ತಿರುವುದು ವೈಜ್ಞಾನಿಕ ಮತ್ತು ಆರ್ಥಿಕ ಅರ್ಥದಲ್ಲಿ. ಅದು ಹೀಗಿದ್ದರೂ, ಸಮಾಜವಾದ ಆರ್ಥಿಕ ಸಿದ್ಧಾಂತಕ್ಕಿಂತಲೂ ಮಿಗಿಲಾದದ್ದು. ಅದೊಂದು ಜೀವನದರ್ಶನ. ಆ ರೀತಿಯಲ್ಲೂ ನನಗೆ ಅದು ಮೆಚ್ಚುಗೆ. ಭಾರತೀಯ ಜನತೆಯನ್ನು ಕಾಡುತ್ತಿರುವ ದಾರಿದ್ರ್ಯವನ್ನು, ಭಾರೀ ನಿರುದ್ಯೋಗವನ್ನು ಅಧಃಪತನವನ್ನು, ದಾಸ್ಯವನ್ನು ಕೊನೆಗಾಣಿಸಲು ಸಮಾಜವಾದದ ಹೊರತಾಗಿ ಬೇರೆ ದಾರಿ ನನಗೆ ಕಾಣಿಸುತ್ತಿಲ್ಲ. ನಮ್ಮ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ವಿಸ್ತೃತ, ಕ್ರಾಂತಿಕಾರೀ ಬದಲಾವಣೆಗಳನ್ನು ಅದು ಒಳಗೊಳ್ಳುತ್ತದೆ.... ಅಂತಿಮವಾಗಿ ನಮ್ಮ ಸಹಜ ಪ್ರವೃತ್ತಿಗಳಲ್ಲಿ, ಅಭ್ಯಾಸಗಳಲ್ಲಿ, ಅಪೇಕ್ಷೆಗಳಲ್ಲಿ ಬದಲಾವಣೆ ಅಗತ್ಯವಾಗುತ್ತದೆ. ಒಟ್ಟಿನಲ್ಲಿ ಈಗಿನ ಬಂಡವಾಳಶಾಹೀ ವ್ಯವಸ್ಥೆಗಿಂತ ತೀವ್ರವಾಗಿ ಭಿನ್ನವಾದ ಹೊಸ ನಾಗರಿಕತೆ ರೂಪುಗೊಳ್ಳುತ್ತದೆ...

ಯಾವ ಗೊಂದಲಕ್ಕೂ ಎಡೆಗೊಡದ ಸ್ಪಷ್ಟ ವಿಚಾರಗಳು. ಅರ್ಧ ಶತಮಾನ ಕಳೆದರೂ ಇವು ಕೃತಿಗಿಳಿದಿಲ್ಲ ಎನ್ನುವುದು ಆ ನಿಲುವಿಗೆ ಇರುವ ವಿರೋಧದ ಅಗಾಧತೆಯನ್ನು ಸೂಚಿಸುತ್ತದೆ. ಸಮಾಜವಾದದ ಗುರಿಯನ್ನು ಬರಿಯ ಘೋಷಣೆ ಭಾಷಣಗಳಿಂದ ಸಾಧಿಸುವುದು ಶಕ್ಯವಿದ್ದಿದ್ದರೆ, ಭಾರತ ಈ ಹೊತ್ತಿಗೆ ಭೂಮಿಯ ಮೇಲಿನ ಸ್ವರ್ಗವಾಗುತ್ತಿತ್ತು. ಪಟ್ಟಭದ್ರರು ಸಮಾಜದ ಮೇಲಿನ ತಮ್ಮ ಹಿಡಿತವನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದುಂಟೆ? ವರ್ಗಸಮರ ತೀವ್ರವಾಗದೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ತಮ್ಮ ಶಿಬಿರ ದುರ್ಬಲವಾಗುತ್ತಿದೆ ಎನಿಸಿದಾಗ ಉಳ್ಳವರು ಪ್ರಜಾಪ್ರಭುತ್ವದ ನಾಟಕವನ್ನು ಮುಕ್ತಾಯಗೊಳಿಸಿ, ಸರ್ವಾಧಿಕಾರದ ರುದ್ರನೃತ್ಯಕ್ಕೆ ಅಣಿಯಾಗುತ್ತಾರೆ. ಮತಾಂಧರು, ಧರ್ಮಾಂಧರು, ಸಮಾಜದ ಯಥಾಸ್ಥಿತಿಯನ್ನು ಬಯಸುವ ಕೆಲಬುದ್ಧಿಜೀವಿಗಳು—ಇವರೆಲ್ಲ ಆ ಶಕ್ತಿಯ ಸುತ್ತ ನೆರೆಯುತ್ತಾರೆ. ಶ್ರಮಜೀವಿಗಳ ಮೇಲೆ ಯುದ್ಧ ಸಾರುತ್ತಾರೆ.

ಈಗಲೂ ಸಮಾಜವಾಗಿ ಸ್ವತಂತ್ರ ಭಾರತದ ಸಾಮಾಜಿಕ ಗುರಿ. ಇದರಿಂದ ಜನತೆಯ ಕಲ್ಯಾಣವಾಗುತ್ತದೆಂದು ರಾಷ್ಟ್ರನಾಯಕತ್ವ ದೃಢವಾಗಿ ನಂಬಿದೆ; ಕಾರ್ಯೋನ್ಮುಖವಾಗಿದೆ. ಆದರೆ ಇಲ್ಲಿ ಹೊಲ ಮೇಯುವ ಬೇಲಿಗಳಿವೆ; ಸುಲಿಯುವವರೇ ಸಮಾಜವಾದೀಮುಖ ವ್ಯಾಘ್ರಗಳಾಗುತ್ತಾರೆ. ಜನ ಎಚ್ಚೆತ್ತು ಹೋರಾಡದಿದ್ದರೆ ಸಮಾಜವಾದ ಬರಿಯ ಘೋಷವಾಗಿ, ಹೂರಣವಿಲ್ಲದ ಹೊರ ಆಕಾರವಾಗುತ್ತದೆ ; ಟೊಳ್ಳಾಗುತ್ತದೆ.

ತಲೆತಲಾಂತರಗಳಿಂದ ಕ್ರೂರ ಶೋಷಣೆಗೆ ಒಳಗಾದ ಈ ದೇಶದ ಬಹುಜನ ಸಮುದಾಯ ಎದ್ದು ನಿಲ್ಲಲು ಹವಣಿಸುತ್ತಿರುವ ಈ ಘಳಿಗೆಯಲ್ಲಿ ಬರೆಹಗಾರರು ಕಲಾವಿದರ ಪಾತ್ರವೇನು? ತೀವ್ರಗೊಳ್ಳುವ ಹೋರಾಟದಲ್ಲಿ ನಾವು ಬಯಸುವುದು ಯಾರ ಹಿತವನ್ನು? ನಾವು ಯಾರ ಕಡೆ? ನಮ್ಮ ಸಹಾನುಭೂತಿ, ಬೆಂಬಲ ಯಾರಿಗೆ?

ಇತಿಹಾಸದುದ್ದಕ್ಕೂ ಬರೆಯುವವರನ್ನು, ಚಿತ್ರಿಸುವವರನ್ನು, ಚಿಂತಿಸುವವರನ್ನು ಕಾಡುತ್ತಬಂದಿರುವ ಪ್ರಶ್ನೆ—ಉತ್ತರಕ್ಕಾಗಿ ನಮ್ಮನ್ನೂ ಈಗ ಆಗ್ರಹಪಡಿಸುತ್ತಿದೆ. ಅನಾಗರಿಕ ಮಾನವ ತನ್ನ ರಟ್ಟೆಯ, ಕೊರಡಿನ ಅಧಿಕ ಬಲವನ್ನು ಪ್ರಯೋಗಿಸಿ ಇನ್ನೊಬ್ಬ ಬೇಟೆಯಾಡಿ ತಂದುದನ್ನು ಕಸಿದುಕೊಂಡಾಗಿನಿಂದ ಬೆಳೆದುಬಂದಿರುವ ಉಳಿದುಬಂದಿರುವ ದುಷ್ಟತನಕ್ಕೆ, ನಾವು ಜಯ ಹಾರಯಿಸೋಣವೆ? ಮಾನವೀಯತೆಯ ಅರ್ಚಕರು ಮಾಡುವ ಕೆಲಸ ಇದಲ್ಲ, ಹಾಗಾದರೆ ತಟಸ್ಥರಾಗೋಣವೆ? ಸಜ್ಜನರ ತಾಟಸ್ಥ್ಯ, ದುರ್ಜನರ ಬಂಡವಾಳವಾಗಬಹುದು. ಈ ಎರಡೂ ಸರಿಯಲ್ಲವೆಂದಾದರೆ, ಉಳಿಯುವ ದಾರಿಯೊಂದೇ:ಅಂಗಾತಸ್ಥಿತಿಯಿಂದ ಎದ್ದುನಿಲ್ಲಲು ಚಡಪಡಿಸುತ್ತಿರುವ ಮಾನವನಿಗೆ ಆಸರೆಯಾಗುವುದು. ಅವನ ಊರುಗೋಲಾಗುವುದು.

ಗಹನ ವಿಷಯ. ಯೋಚಿಸಬೇಕು, ಚರ್ಚಿಸಬೇಕು. ನಾಳೆಯ ಪೀಳಿಗೆ ಮೆಚ್ಚಿ ಹೆಮ್ಮೆಪಡುವಂಥ ತೀರ್ಮಾನ ಕೈಗೊಳ್ಳಬೇಕು.? ಆರ್ತರು, ದಲಿತರು, ಅನ್ಯಾಯಕ್ಕೊಳಗಾದವರು, ಸಮಾಜದ ಎಲ್ಲ ಬಗೆಯ ಮರ್ದಿತರು ಕರೆದು ಹೇಳುತ್ತಿದ್ದಾರೆ: "ನಮ್ಮಲ್ಲಿ ಹಣವಿಲ್ಲ, ಅಧಿಕಾರವಿಲ್ಲ, ಪ್ರತಿಷ್ಠೆ ಇಲ್ಲ; ಆದರೆ ಎಂದೂ ಇಂಗದ ಒಲವಿದೆ, ಬಂಧುತ್ವದ ಭಾವವಿದೆ. ಬನ್ನಿ."

"ಇಲ್ಲ" ಎನ್ನುತ್ತೀರಾ?

ನಾವು !

ನಾವು ಅವರ ಕರೆಗೆ ಓಗೊಡುವವರು, ಪ್ರಗತಿಪಂಥೀಯರು. ಲೆಕ್ಕಣಿಕೆ, ಕುಂಚ, ಭಾವಪ್ರದರ್ಶನ ನಮ್ಮ ಉಪಕರಣಗಳು. ನಾವು ಹೃದಯದ ದಾರಿಯಾಗಿ ಮೆದುಳಿಗೆ ಲಗ್ಗೆ ಇಡುವವರು. ಕಂಡ ಸತ್ಯವನ್ನು ಕೃತಿಗಳ ಮೂಲಕ ಸಾರುವವರು. ತೀರಾ

ಸರಳವೆಂದು ತೋರುವ ರಾಜಕಾರಣಿಯ ವಾಕ್ಸರಣಿಗಿಂತ ನಮ್ಮದು ಭಿನ್ನ. ನಾವು ಮಾತನಾಡುವುದು ಪ್ರತಿಮೆಗಳ ಮೂಲಕ. ವರ್ಣ-ಆಕಾರಗಳ ಮೂಲಕ.

ನಮ್ಮ ಕೃತಿಗಳು ಕಾಲಧರ್ಮವನ್ನು ಪ್ರತಿಬಿಂಬಿಸಬೇಕು, ಬದುಕಿನಿಂದ ಚಿಮ್ಮಬೇಕು, ಮಾನವನನ್ನು ಕುರಿತು ಓದುಗರ-ಪ್ರೇಕ್ಷಕರ-ಬೋಧೆಯನ್ನು ಹೆಚ್ಚಿಸಬೇಕು ಎಂಬುದನ್ನು ನಾವು ಬಲ್ಲೆವು. ಜಾತೀಯತೆಯ ವಿಷಗಾಳಿ ನಮ್ಮನ್ನು ಉಸಿರುಕಟ್ಟಿಸದಂತೆ ಎಚ್ಚರವಹಿಸುತ್ತೇವೆ ; ಮತಧರ್ಮಗಳ ಹೆಸರಲ್ಲಿ ಚೇತನ ಮುರುಟಿಹೋಗದಂತೆ ನಾವು ಜಾಗರೂಕರಾಗುತ್ತೇವೆ.

ನಮ್ಮ ಲೇಖನಿ ಕುಂಚಗಳು ಶೃಂಖಲೆಗಳನ್ನು ಕತ್ತರಿಸುವ ಕರವಾಳವಾಗಬಲ್ಲುವು ; ಕವಿದ ಜೇಡರಬಲೆಗಳನ್ನು ಸರಿಸುವ ಹಾರಿಸುವ ಕಸಬರಿಕೆಯಾಗಬಲ್ಲುವು.

ನಾವು ಸತ್ಯಾನ್ವೇಷಕ ಝಾಡಮಾಲಿಗಳು, ಸೌಂದರ್ಯೋಪಾಸಕ ಜಲಗಾರರು, ಶತಮಾನಗಳಿಂದ ಮನಸ್ಸುಗಳನ್ನು ಕವಿದಿರುವ ಜೇಡರ ಬಲೆಗಳೇ, ನೇರ ದಾರಿಗಳನ್ನು ಹೊಲಸುಗೊಳಿಸಿರುವ ತಿಪ್ಪೆ ರಾಶಿಗಳೇ, ಎಚ್ಚರ !

ನಾವು ಯಾವುದೇ ರಾಜಕೀಯ ಪಕ್ಷದ ಪ್ರಚಾರಕರಲ್ಲ. ಸ್ತುತಿ ಪಾಠಕರಲ್ಲ. ಎಲ್ಲ ಪಕ್ಷಗಳ ಮೇಲೂ ಕಣ್ಣಿಡುವ ಜನತೆಯ ಕಾವಲುಗಾರರು ನಾವು.

ಎಲ್ಲವನ್ನೂ ಬಲ್ಲೆವೆಂಬ ಹೆಮ್ಮೆ ನಮಗಿಲ್ಲ. ನಾವು ಬದುಕಿನ ನಿರಂತರ ವಿದ್ಯಾರ್ಥಿಗಳು.

ನಮ್ಮ ರಚನೆಯೇ ಮೇರುಕೃತಿ ಎಂದು ನಾವು ನಗಾರಿ ಬಾರಿಸುವುದಿಲ್ಲ. 'ನಾನೂ ಏನನ್ನೂ ಸಾಧಿಸಲಿಲ್ಲ' ಎಂದು ನುಡಿದು ಸತ್ತ ಅಮರಶಿಲ್ಪಿ ಮೈಕೆಲೆಂಜಲೋನ ವಂಶಜರು ನಾವು.

ನಾವು ಸಿರಿವಂತರು—ಎಲ್ಲ ಮಾನವಕೋಟಿಯ ಸಂಸ್ಕೃತಿ ಸಂಸ್ಕಾರಗಳ ವಾರಸುದಾರರು;ಯುಗಯುಗಗಳಿಂದ ಬಳುವಳಿಯಾಗಿ ಬಂದಿರುವ ಎಲ್ಲ ಶ್ರೇಷ್ಠ ಸಾಹಿತ್ಯ-ಕಲೆಗಳ ಹಕ್ಕುದಾರರು.

ನಮ್ಮದು ಮಠವಲ್ಲ, ಗುಂಪಲ್ಲ—ಪುರೋಗಾಮೀ ವಿಚಾರಧಾರೆಯ ಎಲ್ಲ ಬರೆಹಗಾರರೂ ಕಲಾವಿದರೂ ಮೇಳೈಸುವ ವಿಶಾಲ ವೇದಿಕೆ.

ಇಗೋ, ಸಾಹಿತ್ಯ-ಕಲೆಗಳ ಅಮರ ಚೇತನಗಳಿಗೆಲ್ಲ ನಮಿಸಿ, ದಾವಣಗೆರೆಯ ಎಚ್ಚೆತ್ತ ಜನತೆಯ ಸಾಕ್ಷಿಯಾಗಿ, ನಾವು ಹೊರಡುತ್ತಿದ್ದೇವೆ—ಬೌದ್ಧಿಕ ಜೈತ್ರಯಾತ್ರೆಗೆ.

ಇದಿಗೋ ಆಶ್ವಾಸನೆ ; ತೊರೆಯಾಗಿ ಹೊರಟ ನಾವು, ಬೇಗನೆ ಭೋರ್ಗರೆಯುವ ವಾಹಿನಿಯಾಗುತ್ತೇವೆ ; ಮೊರೆಯುವ ಕಡಲಾಗುತ್ತೇವೆ.

- ಸಮ್ಮೇಳನ ೧೯೭೬ ಜನವರಿ ೧೧ ರಂದು ದಾವಣಗೆರೆಯಲ್ಲಿ ನಡೆಯಿತು.

೧೯೭೬

ಉತ್ತಮ ಬದುಕಿನ ಎತ್ತರಕ್ಕೆ ಸಾಹಿತ್ಯದ ಏಣಿ

"ಮಾಡುವುದಕ್ಕೆ ಬೇರೇನೂ ಕೆಲಸ ಇಲ್ಲದಿದ್ದರೆ ಕಥೆ ಪುಸ್ತಕ ಓದು"—ಇದು ಒಂದು ಧೋರಣೆ. ಹೀಗೆ ಹೇಳುವವರು ಎಲ್ಲ ಕಡೆ ಸಿಗುತ್ತಾರೆ.

ವಿಜ್ಞಾನ, ತಾಂತ್ರಿಕಜ್ಞಾನ, ತತ್ವಜ್ಞಾನ—ಈ ಸಂಬಂಧದ ಸಾಹಿತ್ಯವನ್ನಷ್ಟೇ ಓದಿದರೆ ಸಾಕೆ? ಒಂದು ಸಮಗ್ರ ವ್ಯಕ್ತಿತ್ವದ ನಿರ್ಮಾಣಕ್ಕೆ ಲಲಿತವಾದದ್ದೂ ಬಹಳ ಬೇಕು, ಆದರೆ ಒಪ್ಪಿಕೊಳ್ಳುತ್ತೇನೆ—ಇಂಥ ಸಾಹಿತ್ಯ ತೀರಾ ಲಘುವಾಗಿರಬಾರದು.

ಉತ್ತಮ ಲಲಿತಸಾಹಿತ್ಯದಲ್ಲಿ ವೈಚಾರಿಕತೆ ಇದ್ದೇ ಇರುತ್ತದೆ. ಓದುಗರ ವಿಚಾರಸರಣಿಯ ಮೇಲೆ ಪ್ರಭಾವ ಬೀರಬಲ್ಲ ಕತೆ, ಕಾದಂಬರಿ, ಕಾವ್ಯ, ನಾಟಕಗಳನ್ನು ಮನುಷ್ಯ ಸೃಷ್ಟಿಸಿದ್ದಾನೆ. ಇವು ಕಲೆ-ವಿಚಾರಗಳ ಸಾಮರಸ್ಯ ಸಾಧ್ಯವಾಗಿರುವ ಕೃತಿಗಳು, ಓದಿದಮೇಲೆ ಮರೆತುಹೋಗುವುದಿಲ್ಲ. ಮತ್ತೆಮತ್ತೆ ನಮ್ಮ ಎದುರಿಗೆ ಬಂದು ನವಿಲುಗರಿಗಳನ್ನು ಅರಳಿಸುತ್ತವೆ. ಇವುಗಳ ನೆನಪು ಬೇಸಗೆಯಲ್ಲಿ ತಂಗಾಳಿ, ಚಳಿಗಾಲದಲ್ಲಿ ಹೊಂಬಿಸಿಲು.

ಅಕ್ಷದಿಂದ ಧ್ವನಿ

ಪ್ರಾಥಮಿಕ ಶಾಲೆಯಲ್ಲಿ ನಾನು ವಿದ್ಯಾರ್ಥಿಯಾಗಿದ್ದ ಕಾಲ. ಶಾಲೆಯ ಆವರಣದ ಹೊರಗೆ ಸಿಕ್ಕಿದ ಪುಸ್ತಕಗಳನ್ನೆಲ್ಲ ಓದುವ ಹುಚ್ಚು. ಅಳಸಿಂಗರಾಚಾರ್ಯರ 'ರಾಮಾಯಣ', 'ಮಹಾಭಾರತ' ಸಂಪುಟಗಳು ಸಿಕ್ಕಿದುವು. ಅದು ಧಾರ್ಮಿಕ ನೆಲೆಗಟ್ಟಿನ ವಾಚನವಲ್ಲ. ಮೂರು ಸಾವಿರ ವರ್ಷ ಹಳೆಯ ವೈದಿಕವಿಚಾರಗಳನ್ನು ಬಾಚಿ ರುಂಡಮುಂಡಗಳಿಗೆ ಮೆತ್ತಿಕೊಳ್ಳುವ ಪ್ರಯತ್ನವೂ ಅಲ್ಲ...

ಅದಕ್ಕೆ ಮುನ್ನ ಅ ಆ ಇ ಈ ಬಾಲಶಿಕ್ಷೆ ಪುಸ್ತಕ ಎಂಟು ಸಲ ಕೊಂಡಿದ್ದೆ. ಹೆಸರೇ ಬಾಲಶಿಕ್ಷೆ! (ಒಂದು ಪ್ರತಿಗೆ ಎರಡಾಣೆ) ಅಕ್ಷರಶತ್ರುವಾಗಿದ್ದೆನೇನೊ.

ಪಾಠ ತಲೆಗೆ ಹೋಗುತ್ತಿರಲಿಲ್ಲ. ಪುಸ್ತಕ ಚಿಂದಿಯಾಗುತ್ತಿತ್ತು, ಉಪಾಧ್ಯಾಯರು ಔಷಧಿ ಕೊಟ್ಟರು. (ಶಿಕ್ಷಕರಲ್ಲವೇ?) ಗಾತ್ರದ ರೂಲರಿನಿಂದ ತಲೆಬುರುಡೆಗೆ ಪೆಟ್ಟು. ಬೊಬ್ಬೆ ಕುಟ್ಟಿದೆ. ಹಣೆಯಲ್ಲಿ ಬಾವು ಎದ್ದಿತು. "ನರಕಕ್ಕೆ ಹೋಗ್ತೀ" ಅಂತ ಅವರು

ಎಚ್ಚರಿಕೆ ಕೊಟ್ಟಹಾಗೆ ನೆನಪು. ಆಗ ನನ್ನ ದೃಷ್ಟಿಯಲ್ಲಿ ಆ ಶಾಲೆಯೇ ನರಕ, ಸ್ವರ್ಗ ಇದ್ದುದ್ದು ಹೊರಗೆ—ಗುಡ್ಡಗಳ ತಪ್ಪಲಲ್ಲಿ ದನ ಎಮ್ಮೆಗಳನ್ನು ಮೇಯಿಸುವುದರಲ್ಲಿ, ಮೇಯಿಸುವ ಹುಡುಗರ ಸಂಗದಲ್ಲಿ.

ಆದರೆ ಆಶ್ಚರ್ಯ ! ಒಂದೇ ವರ್ಷದಲ್ಲಿ ನಾನಿದ್ದ ನರಕವನ್ನೇ ಸ್ವರ್ಗಮಾಡಿ ಕೊಂಡೆ. ತರಗತಿಯ ಹಿರೇಮಣಿಯಾದೆ. ಅಕ್ಷರಗಳು ಬರಿಯ ಅಕ್ಷರಗಳಾಗಿಯೇ ಇದ್ದಷ್ಟು ದಿವಸ ಸುಖವಿರಲಿಲ್ಲ. ಒಂದಕ್ಕೊಂದು ಜೋಡಿಸಿ ಶಬ್ದವಾದಾಗ, ಅವು ಶಬ್ದಿಸಿದಾಗ, ಧ್ವನಿ ಹೊರಟಾಗ, ಹಿಗ್ಗೋ ಹಿಗ್ಗು. ಮುಂದೆ ಒಂದೆರಡೇ ವರ್ಷಗಳಲ್ಲಿ, ಅಳಸಿಂಗರಾಚಾರ್ಯರ ಕನ್ನಡ ಸೃಷ್ಟಿಯಲ್ಲಿ ರಾಮಾಯಣ-ಮಹಾಭಾರತಗಳ ಅದ್ಭುತ ಜಗತ್ತಿನ ಯಾತ್ರಿಕನಾದೆ. ಅಯೋಧ್ಯೆಯಲ್ಲಿದ್ದೆ, ವಿಂಧ್ಯವನ್ನು ದಾಟಿದೆ, ದಂಡಕಾರಣ್ಯವನ್ನು ನುಗ್ಗಿದೆ, ಕಿಷ್ಕಿಂಧೆಗೆ ಬಂದೆ, ಲಂಕೆಗೆ ಹೋದೆ. ಹಾಗೆಯೇ ಹಸ್ತಿನಾವತಿ, ವಿರಾಟನಗರ, ದ್ವಾರಕೆ, ಕುರುಕ್ಷೇತ್ರ, ಎಂಥೆಂಥ ಅನುಭವಗಳು ! ಒಂದು ಸಲ ಓದಿದೆ; ಎರಡು ಸಲ ಓದಿದೆ. ಏನು ಸಿಕ್ಕತು ನನಗೆ? ಆನಂದ—ಮೇರೆ ಅರಿಯದ ಆನಂದ. ನಿಜ ಹೇಳುತ್ತೇನೆ. ಈಗ ಆ ಸಂಪುಟಗಳನ್ನೆಲ್ಲ ಮತ್ತೊಮ್ಮೆ ಓದಬೇಕು ಎಂದು ಆಸೆಯಾಗುತ್ತಿದೆ......

"ನಾಗರ ಹಾವೆ, ಹಾವೊಳು ಹೂವೆ
ಬಾಗಿಲ ಬಿಲದಲಿ ನಿನ್ನಯ ಠಾವೆ...."

ಪಂಜೆ ಮಂಗೇಶರಾಯರ ಅಭಿನಯಗೀತ. ಹಾವು !

ಕಾತರ, ಭಯ. ಆದರೆ ಕೊನೆಯಲ್ಲಿ, "ಹಾಲನ್ನೀವೆ ಪೋಪೋಪೋ" ಎಂದಾಗ, ಅದು ಹೊರಟೇಹೋಯಿತು ಎನ್ನುವಷ್ಟು ಸಮಾಧಾನ, ಸಂತಸ. ಹೀಗೆ ಅಕ್ಷರಗಳು ಧ್ವನಿಗೊಂಡು ಎಳೆಯನ ಒಳಗನ್ನು ಮುಟ್ಟಿ ಎಬ್ಬಿಸಿದ ಭಾವಗಳೆಷ್ಟು ! ಆಗ ಅರಳಿದ ಪರಳೆಗಳೆಷ್ಟು !

ದಯೆಯಿಲ್ಲದ ಲೆಕ್ಕಣಿಕೆ

ಶಿವರಾಮ ಕಾರಂತರ 'ಕನ್ಯಾಬಲಿ' ಅಥವಾ 'ಸೂಳೆಯ ಸಂಸಾರ'ಎನ್ನುವ ಕಾದಂಬರಿ(ಕಥೆ ಪುಸ್ತಕ) ನನಗೆ ಸಿಕ್ಕಿತು. ಮುನ್ನುಡಿಯಿಂದ ಮೊದಲುಮಾಡಿ ಓದಿದೆ. ಗ್ರಂಥಕರ್ತರು 'ಈ ಲೆಕ್ಕಣಿಕೆಗೆ ದಯೆಯಿಲ್ಲ, ಎಂದು ಬರೆದಿದ್ದರು. ವಿಚಿತ್ರವೆನಿಸಿದ ಪದಪುಂಜ. ಆ ಸಂಜೆ ಮನೆಯಲ್ಲಿ ಕಾಪಿಪುಸ್ತಕದ ಮೇಲಿನ ಸಾಲಿಗೆ ಆ ವಾಕ್ಯವನ್ನು ಬಳಸಿದೆ. ಈ ಲೆಕ್ಕಣಿಕೆಗೆ ದಯೆಯಿಲ್ಲ ಎಂದು ಪುಟ ತುಂಬ ಸಾರಿದೆ. ಮಾರನೆಯ ದಿವಸ ತರಗತಿಯಲ್ಲಿ ಅಧ್ಯಾಪಕರು ನನ್ನ ಕಾಪಿಪುಸ್ತಕ ನೋಡಿ, ಸಣ್ಣನೆ ಹುಬ್ಬು ಗಂಟಿಕ್ಕಿ,"ಏನಿದು"? ಎಂದು ಕೇಳಿದರು.

"ಕಾರಂತರ ಪುಸ್ತಕದಲ್ಲಿತ್ತು" ಅಂದೆ.

"ಯಾವ ಪುಸ್ತಕ?"

ನನ್ನ ಧೈರ್ಯವೇ ಧೈರ್ಯ. ಊರಿನ ವಾಚನಾಲಯದಿಂದ ಪಡೆದಿದ್ದ 'ಕನ್ಯಾಬಲಿ'ಯನ್ನು ತರಗತಿಗೆ ತೆಗೆದುಕೊಂಡುಹೋಗಿದ್ದೆ, ತೋರಿಸಿದೆ.

"ಹೀಗೆಲ್ಲಾ ಬರೀಬೇಡ"ಎಂದರು, 'ಕಾಪಿ'ಮಟ್ಟಿಗೆ.

"ಇಂಥ ಪುಸ್ತಕ ಓದಬೇಡ" ಎನ್ನಲಿಲ್ಲ!

ನನಗೆ ನೆನಪಿದೆ. ಅದನ್ನು ಓದಬೇಡ, ಇದನ್ನು ಓದಬೇಡ-ಅಂತ ಯಾರೂ ನನಗೆ ಹೇಳಿಲ್ಲ. ಬಾಲ್ಯದಲ್ಲಿ ಎಷ್ಟು 'ನಿಷೇಧ'ಗಳಿಗೆ ಗುರಿಯಾಗುತ್ತೇವೆ! ಆದರೆ ಓದುವ ವಿಷಯದಲ್ಲಿ ನಾನು ಪೂರಾ ಸ್ವತಂತ್ರನಾಗಿದ್ದೆ. ಅಕ್ಷರಸಾಗರದಲ್ಲಿ ಈಸಿದ್ದೇ ಈಸಿದ್ದು, ಆಟವಾಡಿದ್ದೇ ಆಡಿದ್ದು. (ನಿಜವಾದ ಸಮುದ್ರಕ್ಕೆ -ಸಣ್ಣ ನದಿಯೂ ಸಾಕು- ಇಳಿದರೆ ನಾನು ಮುಳುಗಿ ಹೋಗುತ್ತೇನೆ;ಈಜು ಬರದು. ಆಟದ ಬಯಲಿನಲ್ಲಿ ನಾನು ಆಸಕ್ತ-ಪ್ರೇಕ್ಷಕಮಾತ್ರ.)

ಮೆಚ್ಚುಗೆ : GOOD

ನಾಲ್ಕನೆಯ ತರಗತಿಯಲ್ಲಿದ್ದಾಗ ಒಂದು ದಿನ ಅಧ್ಯಾಪಕರು ವಿಷಯ ಕೊಟ್ಟು "ಪ್ರಬಂಧ ಬರೆಯಿರಿ" ಎಂದರು. ಸ್ಥಳದಲ್ಲಿ ಬರವಣಿಗೆ, ನನ್ನ ಪ್ರಬಂಧ ಓದಿ ಮಾರ್ಜಿನ್‌ನಲ್ಲಿ ಕೆಂಪು ಮಸಿಯಲ್ಲಿ Good ಅಂತ ಬರೆದು ಸಹಿ ಹಾಕಿದರು. ಹರ್ಷ? ಖಂಡಿತವಾಗಿ. ಆದರೆ ಅದಕ್ಕಿಂತಲೂ ಮುಖ್ಯವಾದದ್ದು ನನ್ನಲ್ಲಿ ಹುಟ್ಟಿದ ಆತ್ಮವಿಶ್ವಾಸ.

'ಬರೆದೇ ಬದುಕುತ್ತೇನೆ' ಎನ್ನುವ ನಿರ್ಧಾರವನ್ನು ಏಳು ವರ್ಷಗಳ ಅನಂತರ ನಾನು ಕೈಗೊಂಡದ್ದಕ್ಕೆ ಪ್ರಾಥಮಿಕಾವಸ್ಥೆಯ ಗ್ರಂಥ ಘಟನೆಗಳೇ ಕಾರಣ.

ಮೊದಲ ಕಿರುಗತೆ

ನನ್ನ ಪಠ್ಯೇತರ ವಾಚನದಲ್ಲಿ ಸಾಪ್ತಾಹಿಕಗಳೂ ಸ್ಥಾನ ಪಡೆದುವು. ಮುಖ್ಯ ಆಕರ್ಷಣೆ ವಾರದ ಕತೆ. (ರಾಷ್ಟ್ರೀಯ ವಲಯದ ಲಾಠೀ ಪ್ರಹಾರ, ಗೋಳೀಬಾರ್ ಸುದ್ದಿಗಳೂ ಗಮನ ಸೆಳೆಯುತ್ತಿದ್ದುವು.) ಪ್ರತಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸಣ್ಣ ಕತೆಗಳಿಗೆ 'ವಾರದ ಕತ್ತೆ' ಎಂಬ ಅಡ್ಡ ಹೆಸರೂ ಇತ್ತು ! ಹದಿಮೂರನೆಯ ವರ್ಷ, ನಾನೊಂದು ಕತೆ ಬರೆದೆ. ಯಾರಿಗೂ ತೋರಿಸಲಿಲ್ಲ. ಸಾಹಿತಿಗಳು ಎನಿಸಿಕೊಂಡವರು ಯಾರೂ ಹತ್ತಿರ ಇರಲಿಲ್ಲ. ಅಧ್ಯಾಪಕರಿಗೆ ತೋರಿಸಲು ಮನಸ್ಸಾಗಲಿಲ್ಲ, ಶಾಲೆಯ ಬದುಕು ಬೇರೆ, ಹೊರಗಿನದು ಬೇರೆ ಎಂದು ಆಗಲೇ ನನಗೆ ಅನಿಸಿತ್ತು. ಬರೆದು

ಮುಗಿಸಿದಾಗ ಆದ ಅನುಭವವೇನು? ವಿಸ್ಮಯವೊ? ಕೌತುಕವೊ? ಸಂತೋಷವೊ? ನೆನಪಿಲ್ಲ. ಮಂಗಳೂರಿನ 'ರಾಷ್ಟ್ರಬಂಧು' ಪತ್ರಿಕೆಯ ವಿಳಾಸವನ್ನು ಲಕೋಟೆಯ ಮೇಲೆ ಪ್ರತಿಮಾಡಿ ಅಂಚೆಗೆ ಸೇರಿಸಿದೆ. ಸಂಪಾದಕ ಕಡೆಂಗೋಡ್ಲು ಶಂಕರಭಟ್ಟರು ಆ ಬಾಲಬರೆಹದಲ್ಲಿ ಏನು ಕಂಡರೋ? ಮೂರು ವಾರಗಳಾದಮೇಲೆ ಅದು ಅಚ್ಚಾಯಿತು. ನನ್ನ ಕತೆಯನ್ನು ಅದಕ್ಕಿಂತಲೂ ಹೆಚ್ಚಾಗಿ ನನ್ನ ಹೆಸರನ್ನು—ಅಚ್ಚಿನಲ್ಲಿ ಕಂಡು, ಒಂದಂಗುಲ ಎತ್ತರ ಬೆಳೆದೆ. ಆಡುತ್ತ ಆಡುತ್ತ ನಾನೊಂದು ಏಣಿ ನಿರ್ಮಿಸಿದ್ದೆ. ಅದನ್ನು ಅಕ್ಷರಗಳೆ ಮುಗಿಲಿಗೆ ಆನಿಸಿ, ಏರಿನಿಂತು, ಅತ್ತಿತ್ತ ನೋಡಿ 'ಆರಾರೆ ಎನ್ನಯ ಸಮಾನರ್‍ಯಾರು?' ಎನ್ನುವ ಹಾಗಾಯಿತು. ಶುದ್ಧ ಹುಚ್ಚು!

ಆಮೇಲಿನದು ಊರ ಮುಂದಿನ ತಿರುಕನ ಕಥೆ. "ಸಾಹಿತ್ಯವೇ ನನ್ನ ಜೀವನದ ಉಸಿರಾಯಿತು" ಎನ್ನುವುದಿಲ್ಲವೆ? ಹಾಗೆ—ಓದುವುದು, ಬದುಕಿಗೆ ಅದನ್ನು ಹೋಲಿಸುವುದು, ಓದಿದ್ದಕ್ಕೆ ಸ್ಪಂದಿಸುವುದು, ನೋಡಿದ್ದಕ್ಕೆ ಅರಳುವುದು, ಜತೆಜತೆಗೆ ಬರೆಯುವುದು ವಿದ್ಯಾಭ್ಯಾಸದ ಕಸರತ್ತೂ ಇತ್ತು.

'ಗೋರಾ' 'ತಾಯಿ' 'ಕ್ರಿಸ್ಟಫ಼ಿ'

ಹೈಸ್ಕೂಲು ಸೇರಿದಾಗ ಟಾಗೋರರ 'ಗೋರಾ' ದೊರೆಯಿತು. ಬಂಗಾಳಿ ಮೂಲದ ಆಂಗ್ಲ ಅನುವಾದ (ಆ ವೇಳೆಗೆ, ನನ್ನ ಪಾಲಿಗೆ ಇಂಗ್ಲಿಷ್ ಅಕ್ಷರಗಳೂ ಪದಗಳಾಗಿ ಪುಟಿಯತೊಡಗಿದ್ದುವು) 'ಗೋರಾ' ನನ್ನನ್ನು ಕುಲುಕಿತು. ಓದುವುದಕ್ಕೆ ಮುನ್ನ ಇದ್ದುದಕ್ಕಿಂತ ಭಿನ್ನವ್ಯಕ್ತಿಯಾದೆ ಓದಿದಮೇಲೆ.

ಇಂಗ್ಲಿಷಿನಲ್ಲಿ ಜಗತ್ತಿನ ಶ್ರೇಷ್ಠ ಸಾಹಿತ್ಯವೆಲ್ಲ ಲಭ್ಯ. ಭಾರತದ ಬಂಗಾಳದಿಂದ ಇಂಗ್ಲೆಂಡಿಗೆ ಹೋದೆ, ಅಲ್ಲಿಂದ ರಷ್ಯಕ್ಕೆ, ರಷ್ಯದಿಂದ ಫ್ರಾನ್ಸಿಗೆ, ಫ್ರಾನ್ಸಿನಿಂದ ಅಮೇರಿಕಕ್ಕೆ, ಅಮೇರಿಕದಿಂದ ಚೀನಕ್ಕೆ. ರೈಲು ಹಡಗುಗಳಿಲ್ಲದೆ ಮನೋವೇಗದ ಪ್ರಯಾಣ.

ಆ ಅವಧಿಯಲ್ಲಿ ನನ್ನಮೇಲೆ ಪ್ರಭಾವ ಬೀರಿದ ಕಾದಂಬರಿಗಳು ಎರಡು:ರಷ್ಯದ ಮ್ಯಾಕ್ಸಿಂ ಗೋರ್ಕಿಯ 'ತಾಯಿ' ಫ್ರಾನ್ಸಿನರೊಮೆ ರೊಲಾನ 'ಜಾನ್ ಕ್ರಿಸ್ಟಫ಼ಿ', ಒಂದು ಬದುಕಿನ ಜ್ವಾಲಾಮುಖಿ. ಇನ್ನೊಂದು ಬಾಳ್ವೆಯ ಕಡಲು. ನನ್ನದು ಸಾಹಿತ್ಯ ವಿಮರ್ಶೆ-ಚರ್ಚೆಗಳ ನೆರವಿಲ್ಲದೆ ನಡೆಸಿದ ಮೌಲ್ಯಮಾಪನ. ಈ ಕೃತಿಗಳು ನನ್ನ ಯೋಚನಾ ಸಾಮರ್ಥ್ಯವನ್ನು ಹೊಸ ಸ್ತರಕ್ಕೆ ಒಯ್ದುವು. ಮಾನಸಿಕ-ಬೌದ್ಧಿಕ ತಾಕಲಾಟಗಳಿಗೆ ನನ್ನನ್ನು ಅಣಿಗೊಳಿಸಿದುವು. ವಿಶ್ವಕುಟುಂಬವನ್ನು ಕುರಿತ ನನ್ನ ಅಸ್ಪಷ್ಟ ಕಲ್ಪನೆಗಳು ನಿಚ್ಚಳವಾದುವು.

ಒಂದು ವಿಷಯದಲ್ಲಿ ನನಗೆ ಯಾವ ಸಂದೇಹವೂ ಉಳಿಯಲಿಲ್ಲ. ಅದು ಲೇಖನಿಯ ಸಾಮರ್ಥ್ಯ. ಮುಗಿಲಿಗೆ ಏಣಿ ಇಟ್ಟವನು, ಅಲ್ಲಿ ನಿಂತು ಲೇಖನಿಯನ್ನು ಝಳಪಿಸಿ, "ಆಹ ! ಮಿಂಚು !" ಅಂದುಕೊಂಡೆ.

ಬದುಕು-ಸಾಹಿತ್ಯ

"ರಾಷ್ಟ್ರಬಂಧು" ಪ್ರಕಟಿಸಿದ ನನ್ನ ಮೊದಲ ಸಣ್ಣಕತೆಯ ವಸ್ತು ಏನುಗೊತ್ತೇ? (ಹೇಳಲೋ? ಬೇಡವೋ?)ಹುಡುಗ-ಹುಡುಗಿ ಪ್ರೇಮ (ಅಜರ, ಅಮರ ಅಲ್ಲವೆ ಈ ವಸ್ತು?)

ಆದರೆ ಬದುಕಿನಲ್ಲಿರುವುದು ಇದೊಂದೇ ಪ್ರೇಮ ಅಲ್ಲ ಎನ್ನುವುದು ಬೇಗನೆ ಗೊತ್ತಾಯಿತು. ಪರಿಣಾಮವಾಗಿ, ಬರೆಹಗಾರನಾದ ನನ್ನೆದುರು, ವಸ್ತುವಿನ ಆಯ್ಕೆಯ ಕ್ಷೇತ್ರ ವಿಸ್ತಾರವಾಯಿತು; ಬರೆವಣಿಗೆಯಲ್ಲಿ ವೈವಿಧ್ಯ ಮೂಡಿತು.

ಒಮ್ಮೆ ಏನಾಯಿತೆಂದರೆ...... ನನಗಾಗ ಹದಿನೆಂಟು. ನನ್ನ ಮೊದಲ ಕತೆಯನ್ನು ಪ್ರಕಟಿಸಿದ ಪತ್ರಿಕೆಯಲ್ಲೇ ಉಪಸಂಪಾದಕನಾಗಿದ್ದೆ. ಸಂಪಾದಕರಿಗೆ ನನ್ನಲ್ಲಿ ವಿಶ್ವಾಸ. ನಾನು ಬರೆದ ಕಥೆಯನ್ನು ಅವರಿಗೆ ತೋರಿಸಬೇಕಾದ ಅಗತ್ಯವಿರಲಿಲ್ಲ. ಹಾಗೆಯೇ ಅಚ್ಚಿಗೆ ಹೋಗುತ್ತಿತ್ತು. ಯುದ್ಧಕಾಲ, ಆಳುತ್ತಿದ್ದ ಪರಕೀಯರೂ ಸ್ಥಳೀಯ ಲಾಭಬಡಕರೂ ಜನರನ್ನು ಸುಲಿಯುತ್ತಿದ್ದರು. ದುರ್ಲಭವಾಗಿದ್ದ ಸೀಮೆ ಎಣ್ಣೆಗೆ ಮಹತ್ವ ನೀಡಿ ಒಂದು ಕತೆ ಬರೆದೆ, ಚಿಕ್ಕದು. ಅಚ್ಚಾಯಿತು. ಪತ್ರಿಕೆ ಹೊರಬಂದ ಮೇಲೆ ಸಂಪಾದಕರೂ ಆ ಕತೆಯನ್ನು ಓದಿ ಮೆಚ್ಚಿರಬೇಕು ಎಂದು ಊಹೆ. ಆದರೆ ಸರಕಾರದವರು ಮೆಚ್ಚಲಿಲ್ಲ (ಅದು ೧೯೪೨, ಜುಲೈ).

ಐ.ಸಿ.ಎಸ್. ಕಲೆಕ್ಟರಿಂದ ಕರೆಬಂತು—ಸಂಪಾದಕರಿಗೆ, ಹೋದರು, ಕತೆಯ ಇಂಗ್ಲಿಷ್ ಭಾಷಾಂತರ ಸಾಹೇಬರ ಮುಂದಿತ್ತು. ಆ ಕತೆ ಹೇಗೆ ಅಪಾಯಕಾರಿ ಎಂಬುದನ್ನು ಸರಕಾರದ ಆ ವಕ್ತಾರ ಅಧಿಕಾರದ ಭಾಷೆಯಲ್ಲಿ ತಿಳಿಸಿದರು. ಅದು ಎಚ್ಚರಿಕೆ, ಆದರೆ ಕಡೆಂಗೋಡ್ಲು ರಾಷ್ಟ್ರೀಯವಾದಿ. ಅವರದು ಬೆದರಿಕೆಗಾಗಲೀ ಆಮಿಷಕ್ಕಾಗಲೀ ಮಣಿಯದ ವ್ಯಕ್ತಿತ್ವ. ಕಲೆಕ್ಟರರ ಕಚೇರಿಯಿಂದ ಹೊರಟುಬಂದರು, "ಇಂಥದನ್ನು ಇನ್ನು ಬರೀ ಬೇಡಿ"ಎಂದು ನನಗೆ ಹೇಳಲಿಲ್ಲ.

ನನ್ನ ಮೊದಲ ಕತೆ ಅಚ್ಚಾದದ್ದನ್ನು ಕಂಡು, ಮುಗಿಲಿಗೆ ಏಣಿ ತಗಲಿಸಿದ್ದೆನಲ್ಲ? ಅಚ್ಚಾದ ನನ್ನ ಈ ಕತೆ ಉಂಟುಮಾಡಿದ 'ಗಲಭೆ' ಕಂಡು"ನಕ್ಷತ್ರಗಳಿಗೇ ನಾನಿನ್ನು ಕೈಚಾಚಬಹುದು" ಎನಿಸಿತು !

ಸಾಹಿತ್ಯ ಶಕ್ತಿ

ಬದುಕು ಎಷ್ಟೋ ಪಾಠಗಳನ್ನು ಕಲಿಸುತ್ತದೆ ; ಬದುಕಿನಿಂದ ಪ್ರೇರಿತವಾಗಿರುವ ಸಾಹಿತ್ಯ ಕೂಡ. ಒಂದು ಕಾಲದ ಹುಚ್ಚು ಆದರ್ಶಗಳು ಬಾಳ್ವೆಯ ಮೂಸೆಯಲ್ಲಿ ಕರಗಾಗುತ್ತವೆ. ವಾಸ್ತವತೆಯೊಂದೇ ನಿತ್ಯ ಸವಾಲಾಗುತ್ತದೆ.

ಸಾಹಿತ್ಯ ಓದುವ ಬೇನೆ ತಗಲಿ ಸುಮಾರು ನಾಲ್ಕು ದಶಕ ಆಗುತ್ತ ಬಂತು. ಬರಿಯ ಲಲಿತ ಸಾಹಿತ್ಯವಲ್ಲ. ತತ್ವಜ್ಞಾನವು ವಿವಿಧ ವಿಜ್ಞಾನಗಳೂ ಬೆರೆತ ಸಮ್ಮಿಶ್ರ ಸಾಹಿತ್ಯ. ಈಗಲೂ ಓದುತ್ತೇನೆ. ಸಾಯಬಹುದು. ಆದರೆ ಸಾಹಿತ್ಯ ಓದುವುದು ಮುಕ್ತಾಯವಾಗುತ್ತದಲ್ಲ ಎಂಬ ಚಿಂತೆ. ಬದುಕು ಇಲ್ಲವಾದಾಗ ಮುಂದೆ ಅದರ ಬಗೆಗೆ ಬರೆಯುವಂತಿಲ್ಲವಲ್ಲ ಎಂಬ ಖೇದ.

ಬಾಲ್ಯದ ಹುಚ್ಚು ಆವೇಶವೀಗ ಇಲ್ಲ. ಆದರೆ ಆಸೆ ಆಗಿನದೇ. ಈಗಲೂ ಹೇಳುತ್ತೇನೆ: ಬದುಕನ್ನು ಒಳ್ಳಿತಿಗೆ ಬದಲಾಯಿಸಲು ಸಾಹಿತ್ಯ ನೆರವಾಗಬೇಕು.

ನಮ್ಮ ಸುತ್ತುಮುತ್ತನ್ನೇ ನೋಡೋಣ. ಸಾಕ್ಷರರೆಷ್ಟು? ಅದರಲ್ಲಿ ಸಾಹಿತ್ಯ ಓದುವವರೆಷ್ಟು? ಆದರೂ ಬಯಕೆ—ನಾವು ಬರೆದದ್ದು ಜನರಿಗೆ ಮುಟ್ಟಬೇಕು ; ಅವರು ಮೆಚ್ಚಬೇಕು ; ಅವರಿಗೆ ಅದರಿಂದ ಉಪಯೋಗವಾಗಬೇಕು. ಬಹ್ವಂಶ ಬರೆಹಗಾರರ ಅಪೇಕ್ಷೆ ಇದೇ.

ಸಾವಿರ ಏಳೆಗಳಿಂದ ಬರೆಹಗಾರ ಬದುಕಿಗೆ ಬಂಧಿತ, ಕಾಡಿನ ಸ್ಥಿತಿಯಿಂದ ನಾಡಿ ನವನಾಗಲು ಮನುಷ್ಯ ಬಹಳ ಕಷ್ಟಪಟ್ಟಿದ್ದಾನೆ. ಅದು ಇನ್ನೂ ನಡೆಯುತ್ತಲೇ ಇರುವ ಹೋರಾಟ. ಸಾಹಿತಿಗಳೂ ಮನುಕುಲಕ್ಕೆ ಸೇರಿದವರು, ಸಮಾಜದ ಸದಸ್ಯರು. ಆ ಕಾರಣದಿಂದಲೇ, ಸಮೃದ್ಧ ಬದುಕಿಗಾಗಿ ಮಾನವ ನಡೆಸುವ ಸಮರದಲ್ಲಿ ಅವರು ಭಾಗಿಗಳು. ಜನರ ನೋವು-ನಲಿವು-ದುಃಖ-ಸುಖ ಯಾವುದರಿಂದಲೂ ಅವರು ಹೊರತಲ್ಲ.

ಪ್ರಜ್ಞಾವಂತ ಬರೆಹಗಾರ—ಕಾಲ, ಇತಿಹಾಸ, ಸಮಾಜ, ಪ್ರಗತಿಗಳ ಪ್ರಜ್ಞೆ ಇರುವ ಬರೆಹಗಾರ—ಅರ್ಥಪೂರ್ಣ ಸಾಹಿತ್ಯವನ್ನು ನಿರ್ಮಿಸಲು ಶಕ್ತ. ಅಂಥ ಸಾಹಿತ್ಯದಿಂದ ಬದುಕು ಹಸನಾಗುತ್ತದೆ, ಮಾನವ ಉನ್ನತಿಯತ್ತ ಸಾಗುತ್ತಾನೆ.

- 'ಸಾಹಿತ್ಯದಿಂದ ನಾನು ಏನನ್ನು ಬಯಸಿದೆ?' ಎಂಬ ಆಕಾಶವಾಣಿ ಮಾಲಿಕೆಯಲ್ಲಿ ಪ್ರಸಾರವಾದ ನನ್ನ ಭಾಷಣದ ಲೇಖನರೂಪ ಇದು. 'ಕೆಂಬಾವುಟ' ವಿಶೇಷ ಸಂಚಿಕೆಯಲ್ಲಿ ಪ್ರಕಟಿತ.

೧೯೭೭

ರಂಗಮಧ್ಯದಿಂದ ನಿರ್ಗಮನ

ಮಾನ್ಯರೇ,

ಕರ್ನಾಟಕ ಪ್ರಗತಿಪಂಥದ ಮೊದಲ ಹುಟ್ಟಹಬ್ಬ ಇವತ್ತು. ಒಂದೇ ವರ್ಷದ ಅವಧಿಯಲ್ಲಿ ಇಷ್ಟೊಂದು ಬಲಶಾಲಿಯಾಗಿದೆಯಲ್ಲ ಈ ಶಿಶು; ನಿನ್ನೆಮೊನ್ನೆ ಅಂಬೆಗಾಲಿಟ್ಟದ್ದು ಇದ್ದಕ್ಕಿದ್ದಂತೆ ನಡೆಯತೊಡಗಿದೆ ! ಓಡಾಡುವುದಕ್ಕೂ ಆರಂಭಿಸಿದೆ. ವರ್ಷವಿಡೀ ಹಾಲೂಡಿಸಬೇಕಾಗುತ್ತದೆ.—ಎಂದಿದ್ದೆ. ಹಲ್ಲು ಬೇಗನೆ ಮೂಡಿತು. ರೊಟ್ಟಿ ಕಡಿಯುವುದಕ್ಕೆ, ಅನ್ನ ಮೆಲ್ಲುವುದಕ್ಕೆ ಶುರು ಮಾಡಿಯೇಬಿಟ್ಟಿತು ; ಬೆಟ್ಟು ಚೀಪುತ್ತಿದ್ದದ್ದನ್ನು ಬಿಟ್ಟು, ಅದರ ಕಡೆಗೆ ಇದರ ಕಡೆಗೆ ಬೊಟ್ಟುಮಾಡಲು ತೊಡಗಿತು; ಬಳ್ಳಾರಿಯ ಬಾಚಿಗೊಂಡನಹಳ್ಳಿಯಿಂದ ರಾಷ್ಟ್ರದ ರಾಜಧಾನಿ ದಿಲ್ಲಿಯವರೆಗೆ ಪ್ರಗತಿಪಂಥದ ಮೊರೆತ. ಕರ್ನಾಟಕದ ಒಳಗೂ ಹೊರಗೂ—ಪ್ರಗತಿಪರ ಕನ್ನಡ ಬರೆಹಗಾರರು ಮತ್ತು ಕಲಾವಿದರು ಇರುವಲ್ಲೆಲ್ಲ—ಇಪ್ಪತ್ತು ಶಾಖೆಗಳು. ಇನ್ನೂ ನಾಲ್ಕಾರು ಕಡೆ ನೇರ ಸದಸ್ಯತ್ವ ಹೊಂದಿರುವ ಒಂಟಿ ಸದಸ್ಯರು ಒಟ್ಟು ೨೦೦. ಸದಸ್ಯ ಸಂಖ್ಯೆ ಪತ್ರಗಳು, ಒಂದೇ ವರ್ಷದ ಅವಧಿಯಲ್ಲಿ ೧೬೦೦ ಕ್ಕೂ ಮಿಕ್ಕಿದ ಓಲೆಗಳು—ಅಭಿಮಾನಿಗಳು ಸಹಸ್ರಾರು ಜನ. ಒಂದು ಆಕರಗ್ರಂಥ. ಹತ್ತು ವಾರ್ತಾ ಪತ್ರ, ಸಂದೇಶಗಳ—ರವಾನೆ. ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘದ ನಾಲ್ವತ್ತನೆಯ ಹುಟ್ಟುಹಬ್ಬ ಆಚರಣೆ. ಸಭೆ-ಸಮಾರಂಭ-ಸಮ್ಮೇಲನಗಳು-ಅಲ್ಲಲ್ಲಿ ಶತಶತಮಾನೋತ್ಸವ, ವಿಚಾರ ಸಂಕಿರಣ, ಕವಿಗೋಷ್ಠಿಗಳು. ಮಾತು. ಮಾತು. ಆಕಾಶವಾಣಿ, ದೊಡ್ಡ ಪ್ರಸಾರದ ದೈನಿಕಗಳ ನೆರವಿಲ್ಲದೆಯೇ ಪ್ರಗತಿಪಂಥ ಸಾಹಿತ್ಯ ಕಲಾಲೋಕದ ಭಾರೀ ಸುದ್ದಿಯಾಯಿತು. ಪ್ರೀತಿ ತೋರಿದವರು ಕೆಲವರು; 'ಮುಟ್ಟಬೇಡಿ' ಎಂದವರು ಬೇರೆ ಕೆಲವರು. ಇರಬೇಡವೇ ನಿಂದಕರು?

ಆ ನೆನಪು

ದಾವಣಗೆರೆಯಲ್ಲಿ ೧೯೭೬ ಜನವರಿ ೧೨ ರಂದು ಸಜ್ಜದ್ ಜಾಹೀರ್ ನಗರದಲ್ಲಿ ಪ್ರಗತಿಪಂಥದ ಉದಯ. ಅದರ ಬೀಜಾಂಕುರ ಆದದ್ದು ಅದಕ್ಕೂ ಹದಿನೆಂಟು ತಿಂಗಳ ಹಿಂದೆ. ಎಂದೂ ಸಾವರಿಯದ ಪ್ರಗತಿಶೀಲತೆ ಕಾಲು ಶತಮಾನದ ಮೌನ

ಸಮಾಧಿಯಿಂದ ಹೊರಬರಲು ಬಯಸಿತ್ತು. ಆ ಪ್ರಸ್ತಾಪ ಮೊದಲು ಬಂದದ್ದು ವಿಜಾಪುರ ಜಮಖಂಡಿಗಳ ಮಿತ್ರರಿಂದ. ಕರ್ನಾಟಕದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿ ೧೯೪೩ರಲ್ಲಿ ಹುಟ್ಟಿ ರೂಪುಗೊಂಡುದನ್ನೂ ಬೆಳೆದು ೧೯೫೧ರಲ್ಲಿ ಮುರಿದು ಹೋದುದನ್ನೂ ನಾನು ಕಂಡಿದ್ದೆ; ಸಂಕಟಪಟ್ಟಿದ್ದೆ. ಈ ದುರವಸ್ಥೆ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ೧೯೫೩ರಲ್ಲಿ ಪುನರುದ್ದೀಪನ ಪ್ರಯತ್ನ ದಿಲ್ಲಿಯಲ್ಲಿ ನಡೆಯಿತು. ನಾನೂ ಆಗ ಮುಂಬಯಿಯಲ್ಲಿದ್ದ ವಾಸುದೇವರೂ ಕರ್ನಾಟಕದ ಪ್ರತಿನಿಧಿಗಳಾಗಿ ಹೋಗಿದ್ದೆವು. ಆದರೆ ಬಾಡಿದ ಮರ ಮತ್ತೆ ಹಸುರಾಗಲು ಹೆಬ್ಬಯಕೆಗಳ ಗೊಬ್ಬರ ಸಾಕಾಗಲಿಲ್ಲ.

ಗಮನಿಸಬೇಕಾದ ಸಂಗತಿ ಎಂದರೆ—ಸಂಘಟನೆ ಇಲ್ಲದಿದ್ದಾಗಲೂ ಪ್ರಗತಿಪರ ಕೃತಿಗಳ ರಚನೆ ನಿಲ್ಲಲಿಲ್ಲ ಎಂಬುದು.

ಹಿಂದೆ ಆದ ತಪ್ಪುಗಳ ಅರಿವಿದ್ದ ನಾನು, ಈಗ ಬೇಕಾಗಿರುವುದು ಬರೆಹಗಾರರನ್ನೂ ಕಲಾವಿದರನ್ನೂ ಒಳಗೊಳ್ಳುವ ವಿಶಾಲ ವೇದಿಕೆ ; ಬಹ್ವಂಶ ಲೇಖಕರೂ ಕಲಾವಿದರೂ ಅಲ್ಲಿ ಇರುವಂತಾಗಬೇಕು; ಇದು ವೈಚಾರಿಕ ಸ್ವರೂಪದ ಚಳವಳಿಯಾಗಬೇಕು ; ಇದನ್ನು ಪ್ರಗತಿಪಂಥ ಎಂದು ಕರೆಯೋಣ ಎಂದು ಸೂಚಿಸಿದೆ. ಜಮಖಂಡಿಯ ಬಿಜಾಪುರದ ಮಿತ್ರರು ಒಪ್ಪಿದರು. ಸಮ್ಮೇಳನ ಜಮಖಂಡಿಯಲ್ಲಿ ನಡೆಯಬೇಕೆಂದು ಗೊತ್ತಾಯಿತು. ಸ್ವಾಗತ ಸಮಿತಿಯ ರಚನೆಯೂ ಆಯಿತು. ನಿಧಾನವಾಗಿ ಸಾಗಿದ ಕೆಲಸ

ದೇಶದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿ ರಾಷ್ಟ್ರಾಧ್ಯಕ್ಷರು ತುರ್ತುಪರಿಸ್ಥಿತಿ ಘೋಷಿಸಿದರು. ಪ್ರಧಾನಿ ಸಾಮಾಜಿಕ ಪ್ರಗತಿಗೆ ಅನುಕೂಲವಾಗಲೆಂದು ೨೦ ಅಂಶಗಳ ಕಾರ್ಯಕ್ರಮವನ್ನು ದೇಶದ ಮುಂದಿಟ್ಟರು. ನನ್ನ ಮಿತ್ರ ಶ್ರೀ ಬಸವರಾಜ ಕಟ್ಟೀಮನಿಯವರು ಇಪ್ಪತ್ತಂಶಗಳ ಕಾರ್ಯಕ್ರಮಕ್ಕೆ ಬೆಂಬಲ ನೀಡುವುದಕ್ಕೋಸ್ಕರ ಪ್ರಗತಿಶೀಲ ಬರೆಹಗಾರರ ಮತ್ತು ಪತ್ರಕರ್ತರ ಸಮ್ಮೇಳನವಾಗಲೆಂದು ಪತ್ರಿಕೆಗಳ ವಾಚಕರ ವಾಣಿಯಲ್ಲಿ ಬರೆದರು. ಪ್ರಗತಿಪಂಥ ಸಮ್ಮೇಳನಕ್ಕಾಗಿ ಜಮಖಂಡಿಯಲ್ಲಿ ಆಗುತ್ತಿದ್ದ ಸಿದ್ಧತೆಯನ್ನು ಬ. ಕ. ರ ಗಮನಕ್ಕೆ ತಂದೆ. 'ಅಲ್ಲಿ ಹಣ-ಸಂಗ್ರಹ ಕಷ್ಟವಾಗಿದೆ' ಎಂದರು. ದಾವಣಗೆರೆಯ ಪುರಸಭೆ ಆತಿಥ್ಯ ನೀಡಬಹುದೆಂದು ಆ ಊರನ್ನು ಆರಿಸಿದೆವು. "ಎಮರ್ಜೆನ್ಸಿ ಲೇಖಕರ ಸಮ್ಮೇಳನ ಇಲ್ಲಿ ಆಗಲಿದೆ" ಎಂದು ದಾವಣಗೆರೆಯಲ್ಲಿ ಹಲವರು ನಗೆಮಾತು ಆಡಿದರಂತೆ. ದಾವಣಗೆರೆಯ ಮಿತ್ರರಿಗೆ ನಾನು ಸ್ಪಷ್ಟಪಡಿಸಿದೆ:" ಇಷ್ಟರತನಕ ನಡೆದದ್ದು ಪ್ರಗತಿಪಂಥವನ್ನು ರಚಿಸುವ ಪ್ರಯತ್ನ. ಅದರಲ್ಲಿ ಬರೆಹಗಾರರೂ ಇರುತ್ತಾರೆ, ಕಲಾವಿದರೂ ಇರುತ್ತಾರೆ. ಪ್ರಗತಿಪಂಥದ

ಉದಯವನ್ನು ಸಾರುವುದೊಂದೇ, ದಾವಣಗೆರೆ ಸಮ್ಮೇಳನದ ಉದ್ದೇಶ" ಎಂದೆ. ಅವರು ಒಪ್ಪಿದರು. ಅಂಥ ಸಮ್ಮೇಳನ ದಾವಣಗೆರೆಯಲ್ಲಿ ನಡೆಯಿತು.

ಅದು ಹೆರಿಗೆ ಆಸ್ಪತ್ರೆ. ಹುಟ್ಟಿದ ಮಗುವನ್ನು ಅಲ್ಲಿಯೇ ಬಿಡುವುದೆ? ಆರಂಭದಲ್ಲಿ ಮಗುವಿನ ಆರೈಕೆ ಮಾಡಲು ನಾನು ಸಿದ್ಧನಿದ್ದೆ. ಆದರೆ 'ಕ' "ನಿಮ್ಮ ಆರೋಗ್ಯ ಸರಿಯಿಲ್ಲ; ಅಲ್ಲದೆ ನೀವು ಕಾದಂಬರಿ ಬರೆಯುತ್ತಿದ್ದೀರಿ" ಎಂದರು. ಡಾ. ಅನುಪಮಾ- "ಒಂದು ವರ್ಷದ ಮಟ್ಟಿಗೆ ಅವರ ಆರೋಗ್ಯದ ಜವಾಬ್ದಾರಿ ನನಗಿರಲಿ", ಎಂದರು. ಸಂಘಟನೆಗೆ ಅಂಗರಚನೆ ಬೇಕು ಎಂದೆ. "ಅದನ್ನು ಮುಂದಿನ ಸಮ್ಮೇಳನದಲ್ಲಿ ಮಾಡೋಣ. ಈಗ ಏನೂ ಬೇಡ. ಪ್ರಗತಿಪಂಥ ಬೆಳೆಯುತ್ತಿರಲಿ" ಎಂದರು ಬ. ಕ. ಸಮ್ಮೇಳನದ ಸಾಧನೆಗಳು ವ್ಯರ್ಥವಾಗುತ್ತವಲ್ಲ—ಎನಿಸಿತು. "ಸ್ಥಳೀಯ ಸಮಿತ್ರೆಗಳು ರೂಪ ತಳೆಯಲಿ, ಚಟುವಟಿಕೆಗಳನ್ನು ಕ್ರೋಢೀಕರಿಸಲು ಒಂದು ಸಂಯೋಜನಾ ಸಮಿತಿಬೇಕು"—ಎಂದೆ. ಅದರ ರಚನೆಯಾಯಿತು. ಒಂದು ವರ್ಷದ ಮಟ್ಟಿಗೆ ನಾನು ಕಾರ್ಯ ನಿರ್ವಾಹಕನಾದೆ.

ಪ್ರಾಮಾಣಿಕ ತಪ್ಪುಗ್ರಹಿಕೆ, ದುರುದ್ದೇಶದಿಂದ ಕೂಡಿದ ಅಪಪ್ರಚಾರ, ಪೂರ್ವಾಗ್ರಹಗಳು, ಅಸೂಯೆ-ಈ ಪೀಡೆಗಳಿಂದ ಪ್ರಗತಿಪಂಥವನ್ನು ರಕ್ಷಿಸುವುದು ಬೆಳೆಸುವುದು ನಾನು ನಿರೀಕ್ಷಿಸಿದ್ದಕ್ಕಿಂತ ಕಷ್ಟತರವಾಗಿತ್ತು. ಸಂಯೋಜನಾ ಸಮಿತಿಯ ಒಬ್ಬ ಸದಸ್ಯರು "೪೦೦ ಮಂದಿ ಪ್ರಗತಿಶೀಲ ಲೇಖಕರನ್ನು ಸಿದ್ಧ ಪಡಿಸಿಕೊಡುತ್ತೇನೆ" ಎಂದರು. ೪೦೦ ಜನ ; ಪ್ರಗತಿಪಂಥದ ಧ್ಯೇಯೋದ್ದೇಶಗಳನ್ನು ವಿವರಿಸಿ, ಅವರಿಗೆ ಮಾರೋಲೆ ಬರೆದೆ. ಸಧ್ಯಃ ಅವರ ಊರಿನ ಸಮಿತಿಯಲ್ಲಿ ಐವರು ಸದಸ್ಯರು ಮಾತ್ರ ಇದ್ದಾರೆ.

ಆರಂಭದಲ್ಲಿ ಇಂಥ ಗ್ರಹಿಕೆ ಇರುತ್ತದೆ ಎನ್ನುವಿರಾ? ಮೊನ್ನೆ ಮೊನ್ನೆ ಇನ್ನೊಂದು ಕೇಂದ್ರದ ಅಧ್ಯಕ್ಷರು "ಜನವರಿ ಅನಂತರ ನನಗೆ ಬಿಡುವಾಗುತ್ತದೆ. ೩೦೦ ಜನ ಸದಸ್ಯರನ್ನು ಸೇರಿಸುತ್ತೇನೆ" ಎಂದಿದ್ದಾರೆ; ಪ್ರಾಯಶಃ ೩೦ ಇದ್ದೀತು;ತಪ್ಪಿ ೩೦೦ ಎಂದು ಬರೆದಿರಬೇಕು—ಎಂದು ಉತ್ತರವಿತ್ತೆ. ಒಂದು ವರ್ಷ ಕಳೆದಮೇಲೂ ಹೀಗೆ; ಆಲೋಚನೆಯಲ್ಲಿ ಎಷ್ಟೊಂದು ಸ್ತರಗಳು.

ಅಸಮಾಧಾನ

೧೯೪೩ ರಲ್ಲಿ ಕನ್ನಡನಾಡಿನಲ್ಲಿ ಪ್ರಗತಿಶೀಲ ಲೇಖಕರ ಸಂಘ ಮೊದಲು ಜನ್ಮ ತಳೆದದ್ದು ಮಂಗಳೂರಲ್ಲಿ. ಶ್ರೀ ಕಾಂತಪ್ಪ ಶೆಟ್ಟರು ಅಧ್ಯಕ್ಷರು; ಬಿ. ಶಂಕರ ಭಟ್ಟರು ಉಪಾಧ್ಯಕ್ಷರು; ನಾನು ಕಾರ್ಯದರ್ಶಿ. ಆ ಚಳಿವಳಿ ಜೀವಂತವಾಗಿದ್ದ ಸುಮಾರು ಒಂದು ದಶಕದಲ್ಲಿ ಸಂಘಗಳು ರೂಪುಗೊಂಡದ್ದು ಒಟ್ಟು ನಾಲ್ಕೇ ಕಡೆ: ಮಂಗಳೂರು,

ಬೆಂಗಳೂರು, ಧಾರವಾಡ, ಹುಬ್ಬಳ್ಳಿ. ಈ ಸಲ? ಒಂದೇ ವರ್ಷದಲ್ಲಿ ಇಪ್ಪತ್ತು ಕಡೆ. ಸಮಾಧಾನಕರ ಅಷ್ಟೇ ಅಲ್ಲ, ಹರ್ಷದಾಯಕ ಕೂಡಾ.

ಆದರೂ ನನಗೆ ಬೇಸರ, ಹತ್ತೂರು ಸುತ್ತಲಾರದವನು. ಮಿತ್ರ ಬ.ಕ.ರೇ. ಕಾರ್ಯ ನಿರ್ವಾಹಕರಾಗಲು ನಾನು ಒತ್ತಾಯಿಸಿದ್ದರೆ, ಇನ್ನಷ್ಟು ಕೆಲಸ ಆಗುತ್ತಿತ್ತೇನೋ?

ಅನುಪಮಾ ನನ್ನ ಆರೋಗ್ಯ ನೋಡಿಕೊಂಡರು; ಜತೆಗೆ ಅವರೂ ಮಕ್ಕಳೂ ಕರ್ನಾಟಕ ಪ್ರಗತಿಪಂಥ ಸಂಯೋಜನಾ ಸಮಿತಿಯ ಕಾರ್ಯಾಲಯದಲ್ಲಿ ಹಲವು ವಿಧಗಳಲ್ಲಿ ನೆರವಾದರು. ಸಂಗಾತಿಗಳು ಹಲವರಿದ್ದೂ ನಾನು ಒಂಟಿಯೇ ಎಂಬ ಭಾವನೆ ನನ್ನಲ್ಲಿ ಉಂಟಾಗದಂತೆ ನೋಡಿಕೊಂಡರು.

ವಿಸ್ತೃತ ಪತ್ರವ್ಯವಹಾರ, ಮಾಸಿಕ ವಾರ್ತಾಪತ್ರ ಇವು ಸಂಘಟನೆಯನ್ನು ಬೆಳೆಸಲು ನಾನು ಕೈಕೊಂಡ ಎರಡು ಕ್ರಮಗಳು. ಅವುಗಳಿಂದ ಸ್ಪಷ್ಟೀಕರಣ, ಮಾರ್ಗದರ್ಶನ ಇತರರಿಗೆ ಲಭಿಸಿತು. ಕೆಲವೇಳೆ ಕಂಡೂ ಕಾಣಿಸದ ಕಡಿವಾಣವೂ ಆದೆ.

ದಿನಗಳ ಎಣಿಕೆ, ದುಡಿಮೆ, ಕೊನೆಗಾಣದ ದುಡಿಮೆ. ಇಷ್ಟು ಕೆಲಸವಿದ್ದರೂ 'ಮೃತ್ಯುಂಜಯ'ವನ್ನು ಬರೆದು ಮುಗಿಸಿದೆ.

ಆಗಾಗ್ಗೆ ಅನಿಸಿದೆ. ಅಂಗರಚನೆ ದಾವಣಗೆರೆಯಲ್ಲೇ ಸ್ವೀಕೃತವಾಗಿ ರಾಜ್ಯ ನಾಯಕತ್ವದ ಆಯ್ಕೆ ಆಗಲೇ ಆಗಿದ್ದರೆ ಎಷ್ಟು ಒಳಿತಾಗುತ್ತಿತ್ತು ; ಆಗಲಿಲ್ಲ.

ಪ್ರಗತಿಪಂಥ ಅಲ್ಪಾಯುವಾಗುತ್ತದೆ ಎಂದು ಮಸಣದ ಕನಸನ್ನು ಕಂಡ ಪ್ರಗತಿ ವಿರೋಧಿಗಳು ಮಾತ್ರ ಈಗ ನಿರಾಶರಾಗಿದ್ದಾರೆ.

ಮುಖ್ಯ ಪ್ರವೃತ್ತಿಗಳು

ಪ್ರಗತಿಪರ ಬರೆಹಗಾರರ ಕಲಾವಿದರ ವಿಶಾಲ ವೇದಿಕೆ ಎಂದಮೇಲೆ, ಒಮ್ಮಿಂದೊಮ್ಮೆಲೆ ಏಕರೂಪತೆ ಹೇಗೆ ಸಾಧ್ಯವಾದೀತು? ಅಲ್ಲದೆ, ಎಲ್ಲರೂ ಒಂದೇ ಅಭಿಪ್ರಾಯ ತಳೆಯಬೇಕೆಂಬ ಹಟವಾದರೂ ಯಾಕೆ ? ವೈವಿಧ್ಯ ಇದ್ದಾಗಲೇ ವೈಚಾರಿಕ ತಾಕಲಾಟ. ಅಂಥ ತಾಕಲಾಟದಿಂದ ಯಾವಾಗಲೂ ಒಳಿತೇ ಆಗುತ್ತದೆ.

ಈ ಒಂದು ವರ್ಷದಲ್ಲಿ ಈ ನಾಲ್ಕು ಪ್ರವೃತ್ತಿಗಳನ್ನು ಪ್ರಗತಿಪಂಥದಲ್ಲಿ ನಾನು ಗುರುತಿಸಿದ್ದೇನೆ :

(೧) ಪ್ರಭುತ್ವಕ್ಕೆ ಹತ್ತಿರವಿದ್ದು ಅಧಿಕಾರಪೀಠದ ಶಾಖದಲ್ಲಿ ಮೈ ಕಾಯಿಸಿ ಕೊಳ್ಳಬೇಕು; ಅದರಿಂದ ಪ್ರಯೋಜನವುಂಟು—ಎನ್ನುವ ವಾದ. ಇದು ಸಂದರ್ಭ ಸಾಧನೆ.

(೨) ಕಾರ್ಮಿಕವರ್ಗದ ಸರ್ವಾಧಿಕಾರತ್ವದ ಸ್ಥಾಪನೆಯನ್ನು ಪ್ರತಿಪಾದಿಸುವ ಕ್ರಾಂತಿಕಾರೀ ಕಲೆ, ಸಾಹಿತ್ಯ ಮಾತ್ರ ಪ್ರಗತಿಶೀಲ ಕಲೆ, ಸಾಹಿತ್ಯ ಎಂಬ ಸಂಕುಚಿತವಾದ,

ಪ್ರಗತಿಶೀಲತೆ ತಮ್ಮ ಗುತ್ತಿಗೆ ಎಂದಹಾಗೆ.

(೩) ರಾಜಕೀಯ ವಿಚಾರಗಳಿಗೆ ಪ್ರಗತಿಪಂಥದಲ್ಲಿ ಸ್ಥಾನವಿರಲೇಬಾರದು ಎನ್ನುವ ಮಡಿವಂತಿಕೆ ದೃಷ್ಟಿ. ಇದರಿಂದಾಗಿ ಸಾಹಿತ್ಯ ಸತ್ವಹೀನವಾಗುತ್ತದೆ.

(೪) ಕಾಲದ, ಇತಿಹಾಸದ, ಸಮಾಜದ ಪ್ರಜ್ಞೆ ಇರುವವರು; ಸಾಮಾಜಿಕ ಕಳಿಕಳಿ ಉಳ್ಳವರು ; ಸಾಮಾಜಿಕ ಪರಿವರ್ತನೆಯಲ್ಲಿ, ರಾಜಕೀಯ ಆಗುಹೋಗುಗಳಲ್ಲಿ ಆಸಕ್ತಿ ತೋರುವವರು; ಬದುಕಿಗೆ ಅದರ ವ್ಯಾಪಕ ಅರ್ಥದಲ್ಲಿ ಬದ್ಧರಾದವರು; ಮಾನವೀಯತೆಯ ಪ್ರತಿಪಾದಕರು—ಇಂಥವರಿಗೆಲ್ಲ ಪ್ರಗತಿಪಂಥದಲ್ಲಿ ಸ್ಥಾನವಿದೆ ಎಂಬ ನಿಲುವು.

ಯಾವುದು ಸರಿ? ಯಾವುದು ತಪ್ಪು? ತೀರ್ಮಾನ ನಾನು ಇಲ್ಲಿ ನೀಡಬಾರದು. ಪ್ರಗತಿಪಂಥದ ಘೋಷಣೆ, ಅದು ಸ್ವೀಕರಿಸಿರುವ ನೆಲೆ, ಸುಸ್ಪಷ್ಟ. ಆದರೂ ಚರ್ಚೆ ನಡೆಯಲಿ. ಇನ್ನಷ್ಟು-ಮತ್ತಷ್ಟು ನಡೆಯಲಿ.

ಒಡೆಯುವ ಪ್ರಯತ್ನ

ಪ್ರಗತಿಪಂಥದ ಉತ್ಕರ್ಷ ಕಂಡು ಕರುಬಿದವರು ಅದನ್ನು ಒಡೆಯಲು ಯತ್ನಿಸುವುದು ಸಹಜ. ಆ ಕೆಲಸವೂ ನಡೆಯಿತು. ಒಕ್ಕೂಟದ ಕವಿಯೊಬ್ಬರು—ನಿರಂಜನರ ಮೆದುಳು ಮುಂಡಗಳ ನಡುವೆ ರಕ್ತಸಂಚಾರವಿಲ್ಲ ಎಂದರು. "ನಿನಗೆ ಶವಾಲಯ ಮಾಡುತ್ತೇವೆ" ಎಂದರು.

"ಅವರ ಒಕ್ಕೂಟಕ್ಕೂ ಪ್ರಗತಿಪಂಥಕ್ಕೂ ವ್ಯತ್ಯಾಸವಿಲ್ಲ;ಇವೆರಡೂ ಸೇರಿ ಮಹಾ ಒಕ್ಕೂಟ ರಚಿಸಬಹುದು" ಎಂದರು ಪ್ರಗತಿಪಂಥದ ಒಬ್ಬ ಹಿರಿಯರು;ಇದು ಕತ್ತು ಹಿಸುಕುವ ವ್ಯಾಖ್ಯಾನ. ಹೊಕ್ಕಳುಬಳ್ಳಿ ಕೊರಳಿಗೆ ಸುತ್ತಿಕೊಂಡು ಕೂಸು ಸಾಯುವುದುಂಟು. ಪೂರ್ವಾಪರ ಯೋಚನೆ ಇಲ್ಲದೆ ನಮ್ಮವರು ಮಾತನಾಡಿದರೆ, ವರ್ತಿಸಿದರೆ ಪ್ರಗತಿಪಂಥಕ್ಕೆ ಕೇಡು ಕಟ್ಟಿಟ್ಟದ್ದು.

ಸೈತಾನನ ಭಕ್ತರಿಗೆ ನಮ್ಮಲ್ಲಿ ಅಭಾವವಿಲ್ಲ. ಅವರು ನಿತ್ಯದ ಬಲಿ ನೀಡಲು ಕಾಯುತ್ತಾರೆ. ನಾನಾ ಹೂಟಗಳನ್ನು ಹೂಡುತ್ತಾರೆ. ಮಿತ್ರರಂತೆ ನಟಿಸುತ್ತಾರೆ. ಬೆನ್ನಲ್ಲಿ ಇರಿಯುತ್ತಾರೆ. ಕಡೆಗೆ ತಾವೇ ಹಾಳಾಗುತ್ತಾರೆ.

ಕೆಲವರು ಮೊಲೆಹಾಲೆಂದು ವಿಷ ನೀಡಿದರೂ ಪ್ರಗತಿಪಂಥ ಬದುಕಿ ಉಳಿದಿದೆ. ಇಂಥವರ ಬಗೆಗೆ ಸದಾ ಜಾಗರೂಕರಾಗಿರಬೇಕು. ಹೆಚ್ಚು ಹೇಳಲಾರೆ, ಬೋರಾಗ ಬಾರದು. ಸೂಕ್ಷ್ಮಮತಿಗಳಾದ ನಿಮಗೆ ಅರ್ಥವಾಗದ್ದುಂಟೆ?

ಈ ಸಮ್ಮೇಳನ—ಎರಡನೆಯದು—ಬೆಂಗಳೂರಲ್ಲಿ ನಡೆಯಲಿ ಎಂದು ಆಶಿಸಿದ್ದೆ. ವೆಚ್ಚಕ್ಕೆ ಹೆದರಿ ಹಿಂದೇಟು ಹಾಕಿದರು. ಜಿಲ್ಲಾ ಸಮ್ಮೇಳನ ಮಾಡಲು ಹೊರಟಿದ್ದ

ಪುತ್ತೂರಿನ ಶ್ರೀ ಶರ್ಮರಿಗೆ ಬರೆದೆ. ಸಂಯೋಜನಾ ಸಮಿತಿ ಸದಸ್ಯ ಶ್ರೀ ಪಿ. ಕೆ. ನಾರಾಯಣರು ಅನಾರೋಗ್ಯದ ನಡುವೆಯೂ ಇತರರನ್ನು ಹುರಿದುಂಬಿಸಿದರು. ಶ್ರೀ ಪಾ. ಸಂಜೀವ ಬೋಳಾರರು ಪ್ರಗತಿಪಂಥಕ್ಕಾಗಿ ದುಡಿಯುವುದು ತಮ್ಮ ಕರ್ತವ್ಯ ಎಂದು ಬಗೆದರು. ಅಖಿಲ ಕರ್ನಾಟಕ ಪ್ರಗತಿಪಂಥದ ದ್ವಿತೀಯ ಸಮ್ಮೇಳನದ ಮೋಹಕ ಕರೆ ನಾಡಿನ ಉದ್ದಗಲಕ್ಕೆ ಹರಿಯಿತು.

ನನ್ನ ಅವಧಿ ಮುಗಿಯಿತು. ಡಾಕ್ಟರರು ಒತ್ತಾಯಿಸುತ್ತಿದ್ದಾರೆ, ನಾನು ನಿರ್ಗಮಿಸಬೇಕು. ಅದಕ್ಕೆ ಮುನ್ನ ಪ್ರಗತಿಪಂಥದ ಅಂಗರಚನೆ ನಿಯಮಾವಳಿಯನ್ನು ನೀವು ಅಂಗೀಕರಿಸುತ್ತೀರಿ. ಕರ್ನಾಟಕ ಪ್ರಗತಿಪಂಥದ ನಾಯಕತ್ವವನ್ನು ಆರಸುತ್ತೀರಿ. ಅದರ ವಶ ಕೊಡುತ್ತಿದ್ದೇನೆ. ಈ ವರ್ಷ ಹೊತ್ತ ಹೊರೆಯನು, ರಂಗಮಧ್ಯದಿಂದ ದೂರ ಸರಿದು ವರ್ತುಲದ ಪರಿಧಿಯಲ್ಲಿ ನಿಂತು ರಕ್ಷಕ ಭೂತವಾಗುತ್ತೇನೆ.

ಈ ಒಂದು ವರ್ಷದ ಅವಧಿಯಲ್ಲಿ ತಾರುಣ್ಯದ ಹುಚ್ಚಿನ ಸುಖವನ್ನು ಮತ್ತೆ ಅನುಭವಿಸಿದೆ. ಹೊಸ ಮಿತ್ರರನ್ನು ಪಡೆದೆ. ಒಂದಿಷ್ಟು ಕಹಿಯನ್ನು ಉಂಡೆ. ಅದಂತೂ ನನಗೆ ಹೊಸತಲ್ಲವಲ್ಲ.

ಇವತ್ತು ಕಾರ್ಯನಿರ್ವಾಹಕನಾಗಿ ನಿಮ್ಮ ಜತೆ ಇದ್ದು, ನಾಳೆ ಸಂಗಾತಿಯಾಗಿ ಓಡಿ ಆಡಿ, ನಾಡದು, ಸ್ವಂತದ ಬರೆವಣಿಗೆಯೊಂದೇ ಸಾಧ್ಯವಿರುವ ನನಗೆ ಅತಿ ಪ್ರಿಯವಾದ ಗವಿವಾಸಕ್ಕೆ ಹೊರಡುತ್ತೇನೆ.

ನಮನ

ಜನವರಿ ೬, ೧೯೭೭ —ನಿರಂಜನ

● ಕರ್ನಾಟಕ ಪ್ರಗತಿಪಂಥದ ದ್ವಿತೀಯ ಸಮ್ಮೇಳನದಲ್ಲಿ, ಸಕಲ ಸದಸ್ಯರ ಸಭೆಯಲ್ಲಿ ಮಂಡಿಸಿದ ವಾರ್ಷಿಕ ವರದಿ.

೧೯೭೭

ಸಾಹಿತ್ಯ ಮತ್ತು ಇತಿಹಾಸ ಪ್ರಜ್ಞೆ

ಜಾಗತಿಕ ರಂಗದಲ್ಲಿ ಭಾರೀ ವೇಷಧಾರಿಯಾಗಿ ಮೆರೆದು ಇತಿಹಾಸದ ನೆಲಮಾಳಿಗೆ ಸೇರಿದವನು ಇಟಲಿಯ ಬೆನಿಟೊ ಮುಸೋಲಿನಿ. ನನಗೆ ಅವನ ಪರಿಚಯವಾದದ್ದು ೧೯೩೮ರಲ್ಲಿ—ನಾನು ಪ್ರೌಢಶಾಲೆಯಲ್ಲಿದ್ದಾಗ.

ನನ್ನ ಸಣ್ಣಕತೆಗಳು ನಾಲ್ಕಾರು ಪ್ರಕಟವಾಗಿ ಲೇಖಕ ಎನಿಸಿಕೊಂಡಿದ್ದೆ. ಜ್ಞಾನ ಕ್ಷೇತ್ರ ವಿಸ್ತಾರಗೊಳ್ಳಲು ಚಡಪಡಿಸುತ್ತಿತ್ತು. ಜೀವನ ಚರಿತ್ರೆಗಳ ವಾಚನ ಇಷ್ಟವಾಯಿತು. ಆಗ ಸಿಕ್ಕಿತು ಬೆನಿಟೊ ಮುಸೋಲಿನಿಯ ಆತ್ಮಕಥನ.

ಬಡತನದ ಅವನ ಬಾಲ್ಯ. ಅನ್ಯಾಯ ಕಂಡಾಗ ಸಿಡಿಯುವ ಪ್ರವೃತ್ತಿ. ಯುವಕನಾದಂತೆ ದಲಿತರ ಉದ್ಧಾರಕ್ಕಾಗಿ, ದೇಶದ ಉತ್ಕರ್ಷಕ್ಕಾಗಿ, ಹೋರಾಡುವ ಹಂಬಲ. ಸಮಾಜವಾದದ ಘೋಷ. 'ಅವಾಂತಿ' ಪತ್ರಿಕೆಯ ಸಂಪಾದಕತ್ವ...... ಖುಷಿಪಟ್ಟುಕೊಂಡು ಓದಿ ಮುಗಿಸಿದೆ.

ಈ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರಿಸಬೇಕು ಅನಿಸಿತು. 'ಹಿಂದೂ' ದೈನಿಕದ ಸಂಪಾದಕರಿಗೆ ಕಾಗದ ಬರೆದು ವಿಷಯ ತಿಳಿಸಿ, "ಅನುಮತಿಗಾಗಿ ಯಾರಿಗೆ ಬರೆಯಬೇಕು?" ಅಂತ ಸಲಹೆ ಕೇಳಿದೆ. "ಗ್ರಂಥಕರ್ತರಿಗೇ ಬರೆಯಿರಿ, ವಿಳಾಸ: ಬೆನಿಟೊ ಮುಸೋಲಿನಿ, ರೋಮ್, ಇಟಲಿ" ಅಂತ ಉತ್ತರ ಬಂತು. ಹಾಗೆಯೇ ಮಾಡಿದೆ. ನನ್ನ ಮೆಚ್ಚುಗೆ ಗಳಿಸಿದ್ದ 'ಅವಾಂತಿ' ಸಂಪಾದಕನಿಂದ ಯಾವ ಉತ್ತರವೂ ಬರಲಿಲ್ಲ. ಒಳ್ಳೆಯದೇ ಆಯಿತು. ಆತ ಸಮ್ಮತಿಸಿದ್ದರೂ ಅನುವಾದ ಕಾರ್ಯಕ್ಕೆ ನಾನು ಕೈ ಹಾಕುತ್ತಿರಲಿಲ್ಲ. ತಡೆ ಇಲ್ಲದೆ ಸಾಗಿದ್ದ ನನ್ನ ಓದು ಇನ್ನೂ ಎಷ್ಟನ್ನೋ ನನಗೆ ತಿಳಿಸಿತು. ರಾಜಕೀಯ ಮುಖವಾಡಗಳ ಪರಿಚಯವಾಯಿತು. ಸಮಾಜವಾದೀ ಘೋಷ ಮೊಳಗಿಸುವ ರಾಜಕಾರಣಿಗಳು ಫಾಸಿಸ್ಟರಾಗಿರುವುದೂ ಸಾಧ್ಯ ಎನ್ನುವುದನ್ನು ಕಂಡುಕೊಂಡೆ. ಫಾಸಿಸಮಿನ ಕರಾಳರೂಪ ನೋಡಿ ಮನಸ್ಸು ಮುದುಡಿತು.

ಮುಂದೆ ಅಡಾಲ್ಫ್ ಹಿಟ್ಲರನ 'ನನ್ನ ಹೋರಾಟ' ಓದಿದೆ. ಕನ್ನಡಿಸಬೇಕು ಅನಿಸಲಿಲ್ಲ.

ಜನ ಜಾಗೃತಿಗೆ - 'ರಾಷ್ಟ್ರೀಯತೆ'ಯ ಅಫೀಮು

ಲೋಕ ತಲ್ಲಣಿಸುವಂತೆ ಮಾಡಿದ ಪ್ರಚಂಡ ಹಿಟ್ಲರ್. ಈ ಶತಮಾನವನ್ನು ಕುರಿತ ಮಹಾಕಾವ್ಯದಲ್ಲಿ ಅದ್ಭುತ ಪಾತ್ರವಾಗುವ ಅರ್ಹತೆ ಅವನದು. ಕಷ್ಟ ಕಾರ್ಪಣ್ಯಗಳ ಎಳೆತನ, ಚಿತ್ರಕಾರ, ಬರೆಹಗಾರ ಎಂದುಕೊಂಡು ದಿನಕಳೆದ ಯೌವನ. ಮೊದಲ ಲೋಕಮಹಾಯುದ್ಧದಲ್ಲಿ ಸಾಮಾನ್ಯ ಯೋಧನ ಪಾತ್ರ. ಜರ್ಮನಿ ಸೋತಿತೆಂದು ಸಂಕಟ. ಕೈಸರ್ ಗದ್ದುಗೆಯಿಂದ ಇಳಿದ. ಪರಾಜಿತ ರಾಷ್ಟ್ರ 'ಗಣರಾಜ್ಯ' ಎನಿಸಿಕೊಂಡಿತು. ಹಿಟ್ಲರ್ ರಾಜಕೀಯದ ದಾರಿ ತುಳಿದ: ಇವನ ಎದೆಗುದಿಗೆ ಸ್ಪಂದಿಸಿದ ಮಂಡಿಸಿದ. ಗುರಿ—ಭವ್ಯ ಜರ್ಮನಿ. ಜನಜಾಗೃತಿಗೆ ರಾಷ್ಟ್ರೀಯತೆಯ ಅಫೀಮು ಭಕ್ಷಣವೊಂದೇ ದಾರಿ. ತಮ್ಮದು ಶ್ರೇಷ್ಠ ಕುಲ—ತಾವು ಆರ್ಯರು. ಜರ್ಮನಿಯ ಈಗಿನ ದುರವಸ್ಥೆಗೆ ಕಾರಣರು ಯಾರು? ಅಗೋ-ಯೆಹೂದ್ಯರು. ಆದರೆ ಕಾರ್ಮಿಕ ವರ್ಗ ಒಂದಿದೆಯಂತಲ್ಲ? ಅವರಿಗಾಗಿ ಸಮಾಜವಾದೀ ಘೋಷಣೆಗಳು; ಆ ವರ್ಗವನ್ನು ಆಧರಿಸಿಯೇ ಪಕ್ಷಕ್ಕೆ ಹೆಸರಿಡಬೇಕು. ಹಾಗೆ ಹುಟ್ಟಿತು-ನ್ಯಾಶನಲ್ ಸೋಷಲಿಯಿಸ್ಟ್ ಜರ್ಮನ್ ವರ್ಕರ್ಸ್ ಪಾರ್ಟಿ ನಾಜೀ ಪಕ್ಷ."

ಮೊದಲ ಬಹಿರಂಗ ಸಭೆಯಲ್ಲಿ ಅಡಾಲ್ಫ್ ಹಿಟ್ಲರನೇ ಪ್ರಮುಖ ಭಾಷಣಕಾರ. ಇಪ್ಪತ್ತೈದು ಅಂಶಗಳ ಕಾರ್ಯಕ್ರಮವನ್ನು ಅವನು ದೇಶದ ಮುಂದಿರಿಸಿದ, (25 Point Programme).

ಆ ಕಾರ್ಯಕ್ರಮದಲ್ಲಿತ್ತು ದೀನದಲಿತರ ಬಗ್ಗೆ ತೀವ್ರ ಅನುಕಂಪ. ಅದು ಸಾರಿತು, ದೊಡ್ಡ ಉದ್ಯಮಗಳ ರಾಷ್ಟ್ರೀಕರಣವಾಗಬೇಕು; ಭೂಕಂದಾಯ ರದ್ದು; ಭೂಮಿಯ ಮಾರಾಟವಿಲ್ಲ; ದ್ರೋಹಿಗಳಿಗೆ ಸಾಲಿಗರಿಗೆ ಲಾಭಬಡಕರಿಗೆ ಗಲ್ಲು! ವರ್ಸೇಲ್ ಒಪ್ಪಂದವನ್ನು ಅಲ್ಲಗಳೆಯಬೇಕು; ಯೆಹೂದ್ಯರನ್ನು ತುಳಿದಿಡಬೇಕು. ಕೊನೆಯ-೨೫ನೆಯ ಅಂಶ ಸ್ಪಷ್ಟಪಡಿಸಿತು. "ರಾಷ್ಟ್ರದಲ್ಲಿ ಬಲಿಷ್ಠ ಕೇಂದ್ರಾಧಿಕಾರವಿರಬೇಕು."

ಸ್ವಸ್ತಿಕದ ಚಿಹ್ನೆ ಇದ್ದ ಕರಿಯ ಪಟ್ಟಿಯನ್ನು ತೋಳಿಗೆ ಕಟ್ಟಿ ನಿರುದ್ಯೋಗಿ ಯುವಕರು ಬೀದಿಗಳಲ್ಲಿ ಕೂಚು ನಡೆಸಿದರು.—ಲೆಫ್ಟ್ ರೈಟ್ ಲೆಫ್ಟ್ ರೈಟ್.

'ಶಿಸ್ತಿನ ಪಾಠ'

ಸಂಘಟಿತ ಕಾರ್ಮಿಕರಿಗೆ ಶಿಸ್ತಿನ ಪಾಠ ನೀಡಿದ ಹಿಟ್ಲರ್, ಜರ್ಮನಿಯ ಹಿರಿಯ ಬಂಡವಾಳಗಾರರ ಪ್ರೀತಿಗೆ ಪಾತ್ರನಾದ. ಅವರೂ ಭೂಮಾಲಿಕರೂ ರಹಸ್ಯವಾಗಿ ಹಿಟ್ಲರನಿಗೆ ನೆರವಾದರು.

ಜರ್ಮನ್ ಮಹಿಳೆಯರು ಅಡುಗೆಮನೆಗಳ ಒಡತಿಯರಾದರು. ಮಕ್ಕಳು "ಹೇಯ್ಲ್ ಹಿಟ್ಲರ್?" ಅಂದರು.

ಚುನಾವಣೆಯಲ್ಲಿ ನಾಜೀಪಕ್ಷಕ್ಕೆ ಅತ್ಯಧಿಕವಲ್ಲವಾದರೂ ಭಾರೀ ಬಹುಮತ ಬಂತು. ಹಿಟ್ಲರ್ ಜರ್ಮನಿಯ ಛಾನ್ಸ್‌ಲರ್ ಸ್ಥಾನಕ್ಕೆ ನಿಯೋಜಿತನಾದ.

ಪ್ರಚಾರ ನಿರ್ದೇಶಕ ಗೊಎಬೆಲ್ಸ್ ತನ್ನ ದಿನಚರಿಯಲ್ಲಿ ಬರೆದ: "ಇನ್ನು ಹೋರಾಟ ಸುಲಭ. ಪ್ರಭುತ್ವದ ಎಲ್ಲ ಸಲಕರಣೆಗಳೂ ನಮ್ಮ ಕೈಯಲ್ಲಿವೆ. ರೇಡಿಯೋ ಮತ್ತು ಪತ್ರಿಕೆಗಳಮೇಲೆ ನಮ್ಮದೇ ಹತೋಟಿ. ಹಣಕ್ಕಂತೂ ಇನ್ನು ಅಭಾವವೇ ಇಲ್ಲ."

ಮೆದುಳಿನ ಬಣ್ಣ ಬದಲಿಸುವ ವಿಧಾನವನ್ನು ಗೊಎಬೆಲ್ಸ್ ಪರಿಣಾಮಕಾರಿಯಾಗಿ ಸಮರ್ಪಕವಾಗಿ ರೂಪಿಸಿದ.

ಬರ್ಲಿನ್ ನಗರದ ಎಲ್ಲ ದಿನಪತ್ರಿಕೆಗಳ ಸಂಪಾದಕರೂ ಜರ್ಮನಿಯ ಇತರ ನಗರಗಳ ಪತ್ರಿಕೆಗಳ ಪ್ರತಿನಿಧಿಗಳೂ ದಿನವೂ ಬೆಳಗ್ಗೆ ಪ್ರಚಾರ ಮಂತ್ರಿ ಗೊಎಬೆಲ್ಸ್‌ನ ಕಾರ್ಯಾಲಯಕ್ಕೆ ಬರಬೇಕು. ಅಲ್ಲಿ ಆತನ ಪ್ರವಚನಕ್ಕೆ ಕಿವಿ ಕೊಡಬೇಕು. ಆ ದಿನ ಮುದ್ರಿಸಬೇಕಾದ ಸುದ್ದಿ ಯಾವುದು? ಹತ್ತಿಕ್ಕಬೇಕಾದ್ದು ಯಾವ ಸುದ್ದಿ? ವಾರ್ತೆಯನ್ನು ಯಾವ ರೀತಿ ಬರೆಯಬೇಕು—ತಲೆಕಟ್ಟು ಹೋಗಿರಬೇಕು? —ಪತ್ರಿಕೆಗಳ ಪಾಲಿಗೆ ಇದು ನಿತ್ಯದ ಚಿಂತನ. ಭಿನ್ನಮತದ ಮಾತೇ ಇಲ್ಲ. ಎಲ್ಲರದೂ ಒಂದೇ ಧ್ವನಿ—'ಉಫೇ' ಉಫೇ'.

ರೇಡಿಯೋ ಹೇಗೂ ನಾಯಕ ಹಿಟ್ಲರನ ಆರಾಧನೆಗೆ, ನಾಜೀವಾದದ ಪ್ರತಿಪಾದನೆಗೆ ಮಿಸಲು. ಒಂದೇ ದಶಕದ ಅವಧಿಯಲ್ಲಿ ಇಡೀ ಜರ್ಮನ್ ಜನಾಂಗದ ಸ್ವರೂಪವೇ ಬದಲಾಯಿತು.

ದೇಶ ತ್ಯಾಗ

ಉಸಿರು ಕಟ್ಟಿಸುವ ವಾತಾವರಣದಲ್ಲಿ ಇರಲಾಗದೆ ಸಾಹಿತಿಗಳು ವಿಜ್ಞಾನಿಗಳೆಷ್ಟೋ ಜನ ದೇಶ ಬಿಟ್ಟು ಓಡಿದರು. ಉಳಿದವರು ಹಿಟ್ಲರ್-ಗೊರಿಂಗ್-ಹಿಮ್ಲರ್-ಹೆಸ್-ರಿಬ್ಬನ್ ಟ್ರಾಪ್-ಗೊಬೆಲ್ಸರಿಗೆ ಪರಾಕು ನುಡಿದರು.

ಜನ ಏನನ್ನು ಓದಬೇಕು? ಏನನ್ನು ಓದಬಾರದು? ನಾಜೀ ನಾಯಕರು ಅದನ್ನು ನಿರ್ಧರಿಸಿದರು. ಥಾಮಸ್ ಮಾನ್, ಹೀನ್ರಿಚ್ ಮಾನ್, ಅರ್ನಾಲ್ಡ್ ಜ್ವೇಗ್, ಸ್ಟಿಫಾನ್ ಜ್ವೇಗ್, ಎರಿಕ್ ಮಾರಿಯ ರಿಮಾರ್ಕ್, ಜಾಕ್ ಲಂಡನ್? ಅಪ್ಟನ್ ಸಿಂಕ್ಲೇರ್, ಹೆಲೆನ್ ಕೆಲ್ಲರ್, ಎಚ್. ಜಿ. ವೆಲ್ಸ್, ಹ್ಯಾವ್‌ಲಕ್ ಎಲಿಸ್, ಫ್ರಾಯ್ಡ್, ಆಂದ್ರೆಗಿದೆ, ಎಮಿಲಿ ಜೋಲಾ—ಇವರೆಲ್ಲರ ಕೃತಿಗಳನ್ನು ಹೊರತೆಗೆದು ಸುಟ್ಟರು.

ಜರ್ಮನರ ಪಾರಾಯಣ ಗ್ರಂಥವಾಯಿತು ಹಿಟ್ಲರನ ಆತ್ಮವೃತ್ತ. ಪ್ರತಿಯೊಂದು ಮೇಜಿನ ಮೇಲೂ ಒಂದು ಪ್ರತಿ. ಮದುವೆಯ ಉಡುಗೊರೆಗೂ ಅದೇ .ಇಗರ್ಜಿಯ

ಪವಿತ್ರ ವೇದಿಕೆಯ ಮೇಲೂ ಆ ಪುಸ್ತಕವೇ. ೧೯೩೩ರಿಂದ ೩೯ರವರೆಗಿನ ಆರು ವರ್ಷಗಳಲ್ಲಿ ೬೦ ಲಕ್ಷ ಪ್ರತಿಗಳು ಮಾರಾಟವಾದುವು.

"ನಮ್ಮದು ಸಾವಿರ ವರ್ಷ ಬಾಳುವ ಪ್ರಭುತ್ವ" ಎಂದ ಹಿಟ್ಲರ್. ಆತನ ಆರ್ಯ ರಣಕಾಳಿ ಸಿದ್ಧವಾದಳು. ನಾಜೀ ಪಡೆಗಳ ಪದಹತಿಗೆ ಯೂರೋಪು ಕಂಪಿಸಿತು. ಮಾತಿನ ಗುಡುಗು ಬಿರಿದು ಬಾಂಬು ಮಳೆ ಸುರಿಯಿತು. ಈ ಶತಮಾನದ ಎರಡನೆಯ ಮಾರಣಹೋಮ ಕಂಡು ಜಗತ್ತು ತತ್ತರಿಸಿತು.

"ಶಾಂತಿ ಕಾಲದಲ್ಲಿ ಮಕ್ಕಳು ಹೆತ್ತವರನ್ನು ಮಣ್ಣುಮಾಡುತ್ತಾರೆ. ; ಯುದ್ಧ ಕಾಲದಲ್ಲಿ ಹೆತ್ತವರು ಮಕ್ಕಳನ್ನು ಮಣ್ಣುಮಾಡುತ್ತಾರೆ."

ಪ್ರಾಚೀನ ನುಡಿ ತನ್ನ ಸತ್ಯತೆಯನ್ನು ಮತ್ತೆ ಸಾರಿತು.

ಯೆಹೂದ್ಯರ ವಿನಾಶದ ಅಂಕೆ ಸಂಖ್ಯೆಗಳನ್ನಿಷ್ಟು ಗಮನಿಸೋಣ.

ನರಹತ್ಯೆಯ ಸಂಖ್ಯೆ

ಯುದ್ಧಕ್ಕೆ ಮುನ್ನ ಪೋಲೆಂಡಿನಲ್ಲಿ ೩೩,೩೦,೦೦೦ ಯೆಹೂದ್ಯರಿದ್ದರು; ಯುದ್ಧಾಂತ್ಯದಲ್ಲಿ ಉಳಿದವರು ೩,೦೦,೦೦೦ ಜನ. ಬಾಲ್ಟಿಕ್ ದೇಶಗಳಲ್ಲಿ ಹಿಂದೆ ೨,೫೩,೦೦೦ ಇದ್ದರು; ಉಳಿದವರು ಇಪ್ಪತ್ತೈದೇ ಸಾವಿರ, ಜರ್ಮನಿ ಆಸ್ಟ್ರಿಯಗಳಲ್ಲಿ ಮೊದಲು ಇದ್ದವರು ೨,೪೦,೦೦೦; ಬದುಕಿ ಉಳಿದವರು ೨೦,೦೦೦. ರಷ್ಯದಲ್ಲಿ ಹತ್ಯೆಗೆ ಗುರಿಯಾದ ಯೆಹೂದ್ಯರು ಮತ್ತು ಇತರ ಫಾಸಿಸ್ಟ್ ವಿರೋಧಿಗಳು ೬,೩೩,೩೦೦. ಜೀವಂತ ದಹನಕ್ಕೆ ವಿದ್ಯುತ್ ಚಿತೆ, ಮುಚ್ಚಿದ ಕೊಠಡಿಗಳ ಒಳಕ್ಕೆ ವಿಷವಾಯು ಪ್ರಯೋಗ, ಗುಂಡುಗಳು, ಕೊಲ್ಲುವ ಸೂಜಿಮದ್ದು. ಹಿಟ್ಲರನ ಸೈದ್ಧಾಂತಿಕ ನರಮೇಧದಲ್ಲಿ ಒಟ್ಟು ಹತರಾದವರು ಆರು ಲಕ್ಷಕ್ಕೂ ಹೆಚ್ಚು ಜನ.

ಲೋಕಯುದ್ಧದ ಕಾಳ್ಗಿಚ್ಚಿನಲ್ಲಿ ಬೆಂದು ಬೂದಿಯಾದವರ ಪೂರ್ಣಸಂಖ್ಯೆ ಎರಡು ಕೋಟಿ ಇಪ್ಪತ್ತು ಲಕ್ಷ.

ಸರ್ವಾಧಿಕಾರಿ ವಿಜಯದ ಸಿಡಿಕಂಬದ ತುದಿಗೇರಿದ. ಕಣ್ಣು ಕತ್ತಲು ಬಂತು—ಕೆಳಕ್ಕೆ ಬೀಳುವ ವೇಳೆ. ಸೋಲಿನ ಮೇಲೆ ಸೋಲು, ಮುನ್ನಡೆದವರು ಹಿಮ್ಮೆಟ್ಟಿದರು. ಬರ್ಲಿನ್ ನಗರವನ್ನು ರಷ್ಯದ ಕೆಂಪು ಪಡೆ ಸುತ್ತುಗಟ್ಟಿತು. ಇನ್ನು ಕಥೆಯ ಉಪಸಂಹಾರ. ಇತಿಹಾಸ ಹಿಟ್ಲರನ ಪ್ರಿಯ ವಿಷಯವಾಗಿತ್ತು. ಕಾರ್ಲೈಲ್ ವಿರಚಿತ 'ಮಹಾ ಫ್ರೆಡರಿಕನ ಚರಿತ್ರೆ'ಯಿಂದ ಒಂದು ಅಧ್ಯಾಯ ಓದುವಂತೆ ಗೋಎಬೆಲ್ಸನಿಗೆ ಹಿಟ್ಲರ್ ಹೇಳಿದ—ನೆಲಮಾಳಿಗೆಯಲ್ಲಿ. ಆ ಅಧ್ಯಾಯದ ಹೆಸರು : 'ಏಳು ವರ್ಷಗಳ ಯುದ್ಧದ ಅತ್ಯಂತ ದಾರುಣ ದಿನಗಳು. ಆ ದಿನಗಳಲ್ಲಿ ಜ್ಯೋತಿಷ್ಯ ಫ್ರೆಡರಿಕ್ ಚಕ್ರವರ್ತಿಗೆ ಹೇಳಿದ್ದನ್ನು ಗೋಎಬೆಲ್ಸ್ ನಾಟಕೀಯವಾಗಿ ಓದಿದ: "ಧೀರ ಪ್ರಭುವೆ ! ಇನ್ನು ಸ್ವಲ್ಪ ಕಾಲ

ಮಾತ್ರ. ತಮ್ಮ ಸಂಕಟದ ದಿನಗಳು ಇಷ್ಟರಲ್ಲೇ ಮುಕ್ತಾಯವಾಗುತ್ತವೆ. ನಿಮ್ಮ ಅದೃಷ್ಟಸೂರ್ಯ ಆಗಲೇ ಮೋಡಗಳ ಹಿಂದೆ ನಿಂತಿದ್ದಾನೆ. ಬೇಗನೇ ಮರೆಯಿಂದ ಹೊರಬಂದು ಬೆಳಗುತ್ತಾನೆ."

ಆಲಿಸುತ್ತಲಿದ್ದ ನಾಯಕನ ಕಣ್ಣುಗಳಲ್ಲಿ ಹನಿ ಆಡಿತು. ಅವನು ಗೋಳಾಡಿದ: "ಎಲ್ಲರೂ ಮೋಸಮಾಡಿದ್ರು. ಸತ್ಯಸಂಗತೀನ ಯಾರೂ ನನಗೆ ತಿಳಿಸ್ಲಿಲ್ಲ."

ವಸ್ತುಸ್ಥಿತಿಯೊಡನೆ ಎಲ್ಲ ಸಂಪರ್ಕವನ್ನೂ ಕಳೆದುಕೊಂಡಿದ್ದ ವ್ಯಕ್ತಿ ತನ್ನ ಸೂರ್ಯ ಮುಳುಗುತ್ತಿದ್ದುದನ್ನು ನೋಡಿದ.

ಸಾವಿರ ವರ್ಷ ಬಾಳುವ ಪ್ರಭುತ್ವ ಎಂದಿದ್ದ ಹಿಂದೆ. ಹನ್ನೆರಡು ವರ್ಷ ನಾಲ್ಕು ತಿಂಗಳಲ್ಲಿ ಮುಗಿಯಿತಲ್ಲ?

ಸಾವು ಬಾಗಿಲು ತಟ್ಟುತ್ತಿತ್ತು. ಹದಿನಾಲ್ಕು ವರ್ಷಗಳಿಂದ ತನ್ನ ಪ್ರೇಯಸಿ ಯಾಗಿದ್ದವಳನ್ನು ವಿಧ್ಯುಕ್ತವಾಗಿ ಹಿಟ್ಲರ್ ಮದುವೆಯಾದ. ಸುಳ್ಳುಗಳ ಕೊನೆಯ ಸರಮಾಲೆ ಪೋಣಿಸಿ, ಮೃತ್ಯುಪತ್ರ ಬರೆದ. ಮುಂದೆ ಹಿಟ್ಲರ್ ದಂಪತಿಗಳ ಆತ್ಮಹತ್ಯೆ.

ಕೆಲದಿನಗಳ ಹಿಂದೆಯಷ್ಟೇ ಬೆನಿಟೊ ಮುಸೋಲಿನಿ ಹತನಾಗಿದ್ದ. ಈಗ ಹಿಟ್ಲರನೂ ಭೂತವಾದ.......

ವರ್ತಮಾನ ಕಾಲದಲ್ಲಿ ಭೂತಗಳ ಪ್ರಸ್ತಾಪ ಸರಿಯೇ? ಈಗ ಯಾಕೆ ಗತಕಾಲದ ನೆನಪು?

ಅಮೆರಿಕದ ತತ್ತ್ವಜ್ಞಾನಿ ಸಾಂಟಾಯನ ಹೇಳಿದ್ದಾನೆ:

"ಗತಕಾಲವನ್ನು ನೆನಪಿಡದವನು ಆ ದುರ್ಭರ ಬದುಕನ್ನು ಮತ್ತೆ ಬಾಳ ಬೇಕಾಗುತ್ತದೆ."

ಇತಿಹಾಸದ ಪ್ರಜ್ಞೆ ಇರಬೇಕು—ಆಳುವವರಿಗೆ, ಪ್ರಜೆಗಳಿಗೆ, ಲೇಖಕರಿಗೆ. ಸಮಾಜದ ಪ್ರಜ್ಞೆ ಸಮಕಾಲೀನ ಪ್ರಜ್ಞೆಗಳೆಷ್ಟು ಅಗತ್ಯವೋ ಅಷ್ಟೇ ಅಗತ್ಯ .ಇತಿಹಾಸ ಪ್ರಜ್ಞೆ ಕೂಡ. ಈ ಪ್ರಜ್ಞೆ ಇದ್ದರೆ ಮಾತ್ರ ಅವರ ಸೃಷ್ಟ್ಯಾತ್ಮಕ ಕೃತಿ—ಕಾವ್ಯವೊ ನಾಟಕವೊ ಕಾದಂಬರಿಯೊ ಅರ್ಥಪೂರ್ಣವಾಗುತ್ತದೆ.

ಇತಿಹಾಸದ ಕಲ್ಪನೆ

೧೯೫೭ರಲ್ಲಿ ನಾನೊಂದು ಕಾದಂಬರಿ ಬರೆದೆ, 'ಕಲ್ಯಾಣಸ್ವಾಮಿ'. ಇತಿಹಾಸಕ್ಕೆ ಸಂಬಂಧಿಸಿದ ಕಥಾವಸ್ತು. ಸೃಷ್ಟಿಸಾಹಿತ್ಯ (ಸೃಷ್ಟನೆಯ ಸಾಹಿತ್ಯ, ಸೃಷ್ಟ್ಯಾತ್ಮಕ ಸಾಹಿತ್ಯ) ಹಾಗೂ ಇತಿಹಾಸ—ಈ ಬಗೆಗೆ ನಾನು ಬರೆದ ಆರೆಂಟು ಪುಟಗಳು ಕಾದಂಬರಿಯ ಕೊನೆಯಲ್ಲಿವೆ. ಅಲ್ಲಿಂದ ಕೆಲವು ಸಾಲುಗಳನ್ನು ಇಲ್ಲಿ ಉಲ್ಲೇಖಿಸಬೇಕು.

ಉಲ್ಲೇಖ ಆರಂಭ: "ಇತಿಹಾಸವೆನ್ನುವುದು ರಾಜರಾಣಿಯರ ಕಥೆ ಎಂಬ ಸಾಮಾನ್ಯ

ಕಲ್ಪನೆಯೊಂದುಂಟು. ಅದು ಸರಿಯಲ್ಲ. ಒಬ್ಬ ರಾಜ ಇನ್ನೊಬ್ಬ ರಾಜನ ಮೇಲೆ ಸಾರಿದ ಯುದ್ಧ, ಒಬ್ಬನನ್ನು ಪದಚ್ಯುತಗೊಳಿಸಲು ಮತ್ತೊಬ್ಬ ನಡೆಸಿದ ಯತ್ನ, ಕುಟಿಲ ಕಾರಸ್ಥಾನಗಳು, 'ವಿಶಿಷ್ಟ'ರೆನಿಸಿದ ಆ ವ್ಯಕ್ತಿಗಳ ಸುಖ ದುಃಖ ಬರಿಯ ಈ ವಿವರ. ಇತಿಹಾಸವೆನಿಸದು ಕಾಲಕಾಲಕ್ಕೂ ಬದಲಾಗುತ್ತ ಬಂದ ಬದುಕು, ಆಗಿನ ಕಾಲಧರ್ಮ, ಅದರಿಂದ ಪ್ರಭಾವಿತರಾದ ಜನರ ರೀತಿನೀತಿಗಳು. ಆ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳು—ಇವು ಇತಿಹಾಸವನ್ನು ರೂಪಿಸುವ ಮುಖ್ಯ ಅಂಶಗಳು. ಸಾಮ್ರಾಜ್ಯಗಳು ಎದ್ದುವು, ಬಿದ್ದುವು, ಆ ಉತ್ಕರ್ಷ-ಅಧಃಪತನಗಳಿಗೆ ಒಬ್ಬ ರಾಜ ಅಥವಾ ಒಬ್ಬಳು ರಾಣಿ ಮಾತ್ರ ಕಾರಣ ಎನ್ನುವುದು ಸರಿಯಾಗದು. ಆ ಸೃಷ್ಟಿಯ ಲಯದ ಹಿಂದೆ ಆಯಾ ಜನಾಂಗಗಳ ಕಥೆ ಇದೆ. ಆ ಘಟನೆಗಳ ಹಿಂದೆ ಜನಜೀವನದ ಸಂಸ್ಕೃತಿಯ-ಸಾಹಿತ್ಯದ ಪ್ರೇರಕ ಶಕ್ತಿಗಳಿವೆ.

'ಮಾನವ ಸಮಾಜದ ಬೆಳವಣಿಗೆಯ ಅಧ್ಯಯನವೇ ಚರಿತ್ರೆಯ ಮಹಾಸಂಭವಗಳನ್ನು ಅರ್ಥ ಮಾಡಿಕೊಳ್ಳಲು ಬುನಾದಿ. ಒಂದು ಸಾಮಾಜಿಕ ವ್ಯವಸ್ಥೆ ಇನ್ನೊಂದು ಸಾಮಾಜಿಕ ವ್ಯವಸ್ಥೆಗೆ ಹಾದಿಮಾಡಿಕೊಟ್ಟ ಸೂತ್ರವೇ ಲೋಕದ ವಿವಿಧ ರಾಷ್ಟ್ರಗಳ ಇತಿಹಾಸಗಳನ್ನು ಕ್ರಮಬದ್ಧವಾಗಿ ಕೋದಿರುವ ದಾರ.....

"ನಮ್ಮ ಕಣ್ಣೆದುರಲ್ಲೇ ನಡೆಯುತ್ತಿರುವ ಹಲವಾರು ಘಟನೆಗಳ ಐತಿಹಾಸಿಕ ಸ್ವರೂಪ ಎಂಥದೆಂದು ನಾವು ಹೇಳಬಲ್ಲೆವಾದರೆ, ಇಂದಿನ ಪರಿಸ್ಥಿತಿ ನಾಳೆ ಯಾವ ರೀತಿ ರೂಪುಗೊಳ್ಳುವುದೆಂದು ಸರಿಯಾಗಿ ತಿಳಿಯಬಲ್ಲೆವಾದರೆ, ಆದಿಯವರೆಗೆ ಚಾಚಿರುವ ಆ 'ನಿನ್ನೆ'ಯನ್ನು ಅರ್ಥಮಾಡಿಕೊಳ್ಳುವುದು—ಶಾಸ್ತ್ರೀಯವಾಗಿ ಪೃಥಕ್ಕರಿಸುವುದು ಕಷ್ಟವಾಗದು. ಅಂಥ ಚಾರಿತ್ರಿಕ ನೋಟವಿರುವ ಮನುಷ್ಯ ಬರಿಯ ಬುರುಗಿನಲ್ಲಿ ಓಡಾಡುವುದಿಲ್ಲ, ಪಾದಗಳ ಕೆಳಗಿರುವುದು ಉಸುಬಾಗಿ ಆತನಿಗೆ ತೋರುವುದಿಲ್ಲ. ಶತಶತಮಾನಗಳಿಂದ ಭದ್ರವಾಗಿರುವ, ಮುಂದೆಯೂ ಶತಶತಮಾನಗಳವರೆಗೆ ಭದ್ರವಾಗಿಯೇ ಉಳಿಯುವ, ನೆಲದ ಮೇಲೆ ದೃಢಹೆಜ್ಜೆಗಳನ್ನು ಆತ ಇಡುತ್ತಾನೆ.

"ನಿನ್ನೆಯ ಅಂಶ ತಾನು, ನಾಳೆಯ ಬೀಜ ತನ್ನಲ್ಲಿದೆ, ಎಂಬ ತಿಳಿವಳಿಕೆಯಿಂದ ಮನುಷ್ಯನ ಬದುಕು ಅರ್ಥಪೂರ್ಣವಾಗುತ್ತದೆ. ಬರೆಹಗಾರನಿಗೆ ಆ ಚಾರಿತ್ರಿಕ ದೃಷ್ಟಿ ಇತ್ತೆಂದರೆ, ಆತನ ಸಾಹಿತ್ಯ ಸೃಷ್ಟಿ ಬೆಲೆಬಾಳುತ್ತದೆ.

"ಆ ದೃಷ್ಟಿ ಇರಬೇಕಾದುದು ಗತಕಾಲವನ್ನು ಚಿತ್ರಿಸುವಾಗ ಮಾತ್ರ ಅಲ್ಲ. ವರ್ತಮಾನ ಕಾಲದ ಸಾಮಾಜಿಕ ಚಿತ್ರಣಕ್ಕೂ ಇತಿಹಾಸಕ್ಕೆ ಸಂಬಂಧಿಸಿ ನಿರ್ದಿಷ್ಟ ಸ್ಥಾನವಿದ್ದೇ ಇದೆ. ಇಂದಿನ ವಾಸ್ತವತೆಯನ್ನು ನಾಳೆಯ ಸಾಧ್ಯತೆಯನ್ನು ಗುರುತಿಸುವ ಕಥೆಯಲ್ಲೂ ಚರಿತ್ರೆಯ ದೃಷ್ಟಿ ಇದ್ದೇ ಇದೆ."

ಉಲ್ಲೇಖ ಮುಕ್ತಾಯ.

ಮೇಲಿನದನ್ನು ಬರೆದು ಎರಡು ದಶಕಗಳು ಸಂದಿವೆ. ಅದರಲ್ಲಿ ದೃಷ್ಟಿ ಎನ್ನುವ ಕಡೆ ಪ್ರಜ್ಞೆ ಎಂಬ ಪದವನ್ನಿಟ್ಟರೆ ಇವತ್ತಿನ ಕನ್ನಡದ ಭಾಷಾಪರಿಕರಗಳನ್ನು ಬಳಸಿದಂತಾಗುತ್ತದೆ.

ಇತಿಹಾಸ ಪ್ರಜ್ಞೆ.

ಲೇಖಕರಲ್ಲಿ ಈ ಪ್ರಜ್ಞೆ ಇರಬೇಕು, ಮಾತ್ರವಲ್ಲ—ಅವರನ್ನು ಇದು ಕಾಡಬೇಕು. ಆಗ ಮಾತ್ರ ಬರೆವಣಿಗೆಗೆ ಬೆಲೆ ಬಂದೀತು; 'ನಾಳೆ 'ಯನ್ನು ಸಹ್ಯಗೊಳಿಸಲು ಅದು ಸಹಾಯಕವಾದೀತು.

- ಇಂದಿರಾ ಪತನದ ಬಳಿಕ ಆಕಾಶವಾಣಿ ನಾಲ್ಕಾರು ಬಾರಿ ಪ್ರಸಾರ ಮಾಡಿದ ಭಾಷಣ.

೧೯೭೮

ಪಂಥವೆಂದರೆ ದಾರಿ, ಮಾರ್ಗ; ಗುಂಪಲ್ಲ, ಮಠವಲ್ಲ

ಪ್ರಗತಿಶೀಲ ಸಾಹಿತ್ಯ ಚಳವಳಿಯ ಹೊಸ ರೂಪ—ಬರೆಹಗಾರರ, ಕಲಾವಿದರ ವೇದಿಕೆಯಾದ ಪ್ರಗತಿಪಂಥ. ಇಂಥ ಸಂಘಟನೆ ಕರ್ನಾಟಕಕ್ಕೆ ವಿಶಿಷ್ಟ.

ಪ್ರಗತಿಪಂಥದ ಸಂಸ್ಥಾಪನಾ ಸಮ್ಮೇಳನ ನಡೆಸಲು ವಿಜಾಪುರದ ಮಿತ್ರರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗ (೧೯೭೪) ತುರ್ತುಪರಿಸ್ಥಿತಿ ಇರಲಿಲ್ಲ ; ಪ್ರಗತಿಪರ ಬರೆಹಗಾರರನ್ನೂ ಕಲಾವಿದರನ್ನೂ ಒಟ್ಟುಗೂಡಿಸುವ ಪ್ರಯತ್ನಕ್ಕೆ ಪಕ್ಷ ರಾಜ ಕೀಯದ ಯಾವ ಲೇಪವೂ ಇರಲಿಲ್ಲ, ಸ್ವಾಗತ ಸಮಿತಿಯ ಕೆಲಸ ಕುಂಠಿತವಾಯಿತು; ವರ್ಷ ಸಂದಿತು. 'ಎಮರ್ಜನ್ಸಿ' ಕರಾಳ ಅಧ್ಯಾಯ ಆರಂಭವಾಯಿತು. ಹೆಸರಾಂತ ಪ್ರಗತಿಶೀಲ ಲೇಖಕರೊಬ್ಬರು "ಪ್ರಧಾನಿ ಇಂದಿರಾ ಗಾಂಧಿಗೆ ಬೆಂಬಲವೀಯಬೇಕು ; ಇಪ್ಪತ್ತಂಶಗಳ ಅನುಷ್ಠಾನಕ್ಕಾಗಿ ದುಡಿಯಬೇಕು, ಅದಕ್ಕಾಗಿ ಪ್ರಗತಿಶೀಲ ಲೇಖಕರ ಪತ್ರಕರ್ತರ ಸಮ್ಮೇಳನ ಕರೆಯಬೇಕು." ಎಂದು ಕರೆಕೊಟ್ಟರು,

ಅಂತಹ ಸಮ್ಮೇಳನಕ್ಕೆ ನನ್ನ ಬೆಂಬಲವಿರಲಿಲ್ಲ. ಬದಲು, ಲೇಖಕರ ಕಲಾವಿದರ ವೇದಿಕೆಯಾಗುವಂತೆ ಪ್ರಗತಿಪಂಥವನ್ನು ಸಂಸ್ಥಾಪಿಸುವ ಸಮ್ಮೇಳನ ನಡೆಯಬೇಕು. ಎಂದೆ.

ದಾವಣಗೆರೆಯಲ್ಲಿ ೧೯೭೬ರ ಜನವರಿಯಲ್ಲಿ ಜರಗಿದ ಆ ಸಮ್ಮೇಳನದ ಉದ್ಘಾಟಕರು ಹೀಗೆಂದರು :

"ತುರ್ತು ಪರಿಸ್ಥತಿ ಜಾರಿಗೆ ಬಂದಂದಿನಿಂದ ದೇಶದಲ್ಲಿ ಶಿಸ್ತು ಸಂಯಮ ನೆಲೆಗೊಂಡಿದೆ. ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ೨೦ ಅಂಶಗಳ ಕಾರ್ಯಕ್ರಮದ ಮೂಲಕ ಸಮಾಜವಾದದ ದಾರಿಯಲ್ಲಿ ಮುನ್ನಡೆ ಯುತ್ತಿದ್ದಾರೆ. ಪ್ರಗತಿಪರರೂ ಸಮಾಜವಾದಿಗಳೂ ಆದ ನಮ್ಮ ಪ್ರಧಾನಮಂತ್ರಿಗಳಿಗೆ ನಮ್ಮ ಹೃತ್ಪೂರ್ವಕ ಬೆಂಬಲವಿದೆ."

ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ನಾನೆಂದೆ:

"ನಾವು ಯಾವುದೇ ರಾಜಕೀಯ ಪಕ್ಷದ ಪ್ರಚಾರಕರಲ್ಲ, ಸ್ತುತಿಪಾಠಕರಲ್ಲ. ಎಲ್ಲ ಪಕ್ಷಗಳ ಮೇಲೂ ಕಣ್ಣಿಡುವ ಜನತೆಯ ಕಾವಲುಗಾರರು ನಾವು."

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಹಾಕವಿ ಮಿಲ್ಟನ್ ಮುದ್ರಣಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಮಾಡಿದ ಭಾಷಣದಿಂದ ಈ ಕೆಳಗಿನ ವಾಕ್ಯವನ್ನು ನಾನು ಉಲ್ಲೇಖಿಸಿದೆ: "ಬೇರೆಲ್ಲ ಸ್ವಾತಂತ್ರ್ಯಗಳಿಗಿಂತಲೂ ಮಿಗಿಲಾಗಿ—ಅರಿಯುವ, ನುಡಿಯುವ, ಆತ್ಮಸಾಕ್ಷಿಗೆ ಅನುಗುಣವಾಗಿ ಅನಿರ್ಬಂಧಿತವಾಗಿ ಚರ್ಚಿಸುವ ಸ್ವಾತಂತ್ರ್ಯವನ್ನು ನನಗೆ ಕೊಡಿ."

ಪ್ರಧಾನಿಗೆ ಬೆಂಬಲ ಸೂಚಿಸುವ ಇಪ್ಪತ್ತಂಶಗಳನ್ನು ಸ್ವಾಗತಿಸುವ ಇತ್ಯಾದಿ ನಾಲ್ಕು ನಿರ್ಣಯಗಳನ್ನು ಸಮ್ಮೇಳನದಲ್ಲಿ ಮಂಡಿಸುವ ಬಯಕೆ ಉದ್ಘಾಟಕರಿಗೆ ಇದ್ದಿತು. ಆದರೆ ನನ್ನ ದೃಢನಿಲುವನ್ನು ಕಂಡು ಅವರು ಹಿಂತೆಗೆದರು :

ಯಾವ ಕಳಂಕವೂ ತಟ್ಟದೆ ಪ್ರಗತಿಪಂಥ ಜನ್ಮ ತಳೆಯಿತು.

ಮುಂದೆ ೧೯೭೭ರಲ್ಲಿ ಪುತ್ತೂರಿನಲ್ಲಿ ಜರಗಿದ ದ್ವಿತೀಯ ಸಮ್ಮೇಳನಕ್ಕೆ ಶ್ರೀರಂಗರು ಅಧ್ಯಕ್ಷರಾಗಿ ಪ್ರಗತಿ ಪಂಥಕ್ಕೆ ಹಿರಿಮೆ ಬಂದಿತು.

ಈಗ ಮೂರನೆಯ ಸಮ್ಮೇಳನ ಡಾ.ಹಾ. ಮಾ. ನಾಯಕರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ. ಈ ಸಮ್ಮೇಳನ ಜರಗುತ್ತಿರುವುದೇ ಪ್ರಗತಿಪಂಥದ ಅಂತಃಸತ್ವಕ್ಕೆ ಸಾಕ್ಷಿ.

ಪ್ರಭುತ್ವ ನೀಡಬಹುದಾದ ಚೂರುಪಾರುಗಳಿಗೆ ಮರುಳಾಗದೆ, ರಾಜಕೀಯ ಆಮಿಷಗಳಿಗೆ ಬಲಿಯಾಗದೆ, ಬರೆಹಗಾರರ ಕಲಾವಿದರ ವಿಶಾಲ ವೇದಿಕೆಯಾಗಿ ಪ್ರಗತಿಪಂಥ ಬೆಳೆಯುವುದೆಂದು ನಾನು ದೃಢವಾಗಿ ನಂಬಿದ್ದೇನೆ. ಅನಾರೋಗ್ಯದ ಕಾರಣ ಯಾವುದೇ ಜವಾಬುದಾರಿಯ ಸ್ಥಾನವನ್ನು ನಾನು ವಹಿಸಿಕೊಳ್ಳಲಾರೆ. ಪಂಥ ವೆಂದರೆ ದಾರಿ, ಮಾರ್ಗ; ಗುಂಪಲ್ಲ, ಮಠವಲ್ಲ. ಪ್ರಗತಿಯ ದಾರಿಯಲ್ಲಿ ಸಾಗುವ ಎಲ್ಲ ಲೇಖಕರಿಗೂ ಕಲಾವಿದರಿಗೂ ನನ್ನ ಶುಭಾಶಯಗಳು.

—ನಿರಂಜನ

- ಮಹಾಲಿಂಗಪುರದಲ್ಲಿ ನಡೆದ ಪ್ರಗತಿಪಂಥದ ಮೂರನೆಯ ರಾಜ್ಯ ಸಮ್ಮೇಳನದ ಸವಿನೆನಪಿನ ಸಂಚಿಕೆಗೆ ಸಂಘಟಕರ ಕೋರಿಕೆಯಂತೆ ಕಳುಹಿಸಿದ 'ಸಂದೇಶ'. ಇದರ ಮೇಲೆ ಕತ್ತರಿ ಪ್ರಯೋಗಿಸಿ ಸ್ವಲ್ಪ ಭಾಗವನ್ನು ಮಾತ್ರ ಸಂಘಟಕರು ಪ್ರಕಟಿಸಿದರು.

೧೯೮೪

Man, the pivot ; Humanism, the Creed

THE KID

The KID joined Life's long trek with twin handicaps undernourishment and informal ostracism. The former did not matter much, but the latter needed to be tackledfast. His mastery over the 3 R's did the trick. He became an avid reader of books—classics to modern writing—newspapers and periodicals included. He grew fond of Ramayana and Mahabharata, which were for him, sagas of heroic deeds, depicting exploits of fantastic proportions. The superiority of the KID, wearing threadbare shorts and shirt and with a tuft on his head, was acknowledged, his steps in the process acquiring spring and bounce.

The long bell at the school would find the KID racing along the winding roads to the town's nerve centre, the bus-stand. It buzzed with many tongues Tulu, Kannada, Konkani and Malayalam. The buses arrived and departed raising clouds of dust. The hawkers' cry —"Soda-Lemonade-Beeda Beedi" was music to his ears. The smell of oven-fresh eats from nearby hotels filled his nostrils. For him, the passengers were out of the ordinary creatures, strange yet lovable. Slowly, the bustle would subside and the shopkeepers would light their kerosene lamps to woo the last customers of the day. The main street, the artery of the town, had houses on both sides, most of them thatched and a few tiled, built cheek by jowl. The few and far between municipal street lamps, lit by a man with a ladder, shed their murky light as the KID returned to the shelter of his ramshackle house. There was a street lamp right in front, beneath which the KID did his home work and invariably read

pages from a book borrowed from the library. Now and then he would raise his head hoping to catch an appreciative glance from some passer-by. Was he not a young scholar, if not a marvel ?

One summer's evening, the KID, now ten, heard as he approached the bus stand the beats of a drum wafting through the air. A very young boy was striking a small drum with abandon. A shabbily dressed lanky man with unshaven cheeks was at the farther edge of the road, hurriedly fixing bamboo poles, in preparation for a rope-walk. A girl in plaits, in her early teens, wearing a tattered salwar-kameez was strutting about like a peahen; a woman long past her youth was singing, which sounded more like a wail. A crowd began to collect forming a semi-circle around a family of tumblers, professional acrobats. The KID joined them and edged his way to the front. The drum beat rose to a crescendo and then fell silent. The woman stopped singing as the tumbler-chief faced his spectators. Introductory remarks over, the tumbler shouted an invitation: "Any one of you, come forward." The voice seemed to hold forth a challenge. But there were no takers. The tumbler threw an endearing glance at the youngsters in the front row and said: "Come, one of you; I woun't gobble you up!"—Some among the audience, laughed, but no one moved. The KID entrusted his school bag to a boy standing beside him and walked up to the tumbler. The drum sounded again and along with it the refrain of the woman's song. The KID's heart missed a beat, but he was encouraged by the performer's welcome smile. The tall figure bent low to whisper to him: "Listen, dear boy. We have come from far. No food for the last three days. Be kind to us. Please do just as I Instruct, will you? I know you are a good boy. You will do just as I....... Promise?" With the drum beating faster, he repeated the entreaty. Getting into the spirit of it all, the KID whispered his consent again and again. The tumbler shouted to the spectators: "Now we begin! Moving his fingers over the KID's arm, he said in an aside: "Tell them your arm smells of rose." Loudly: "Boy, how does your arm smell? Tell them....." The KID did as instructed:" My arm smells of rose." Sweet nonsense, but the KID had become a willing partner. This sort of dialogue went on for a

while. Then the whisper :" This time it smells of dung." The KID was shocked, thought enough was enough, and shook his head in the negative. The drummer-boy drummed again, and the mother resumed singing shrilly. With the air of a victor, the tumbler announced "Now a new game!" The KID was told to stay on. A rag was spread on the arena and the girl stretched herself on it. A piece of cloth covered her from head to foot. The KID was commanded to squat beside, What really was the next game? The tumblers' eagerness to go on with the performance and the KID's own puzzlement came to a sudden end when a stern-looking 'writer' of the Police Station arrived on the scene."How dare you stage a show without a license? You rascal!". The stentorian voice boomed. He was the sole representative of the Empire, where the sun never set, in this spot in which simple folk had gathered for an evening's recreation. He held the tumbler tight by his sleeves and dragged him to the Police Station, a stone's throw from the scene. In the face of authority, the crowd melted as easily as it had collected, a few following the captive tumbler. The girl with the plaits had got up, releasing the KID from 'bondage', and joined her mother and brother. The drummer shoved his drum in a sack and went about quietly dismantling the bamboos. The distaff side started packing. The show was over and collections were nil.

Grieved at the turn of events, the KID recovered his school bag and strode to the Police Station. He stood on the roadside under a tree, trying to get a glimpse of the goings on inside. The 'writer' was working on the tumbler's stomach, chest and chin with his fists. The custodian of law fretted and fumed, while the tumbler, with folded hands, was—perhaps—begging to be forgiven. His family members sat on the steps whining and crying. It was getting dark, and soon not a single citizen was to be seen in the vicinity. The KID deeply dejected, slid away.

"No homework today"? a concerned query from mother.

Lying down in the dark, he let out a groan of grief and helplessness—grief over the tumbler family's continued starvation, and his helplessness to do anything about it.

On the morrow he was told by his mates that the tumblers were not seen any where. But in the evening, there was a post-script to the episode. As soon as he reached the bus-stand, the KID was summoned to an audience with a zamindar, clad in a muslin dhoti and serge coat, who was holding a durbar on the verandah of a large grocery shop.

"Tell me, how did feel yesterday?"

"Yesterday?"

"Yes, when the tumbler ran his fingers over your arm."

The KID thought-come what may, I shall not let the tumbler down (or give myself up!).

"I felt nothing."

The Zamindar looked around with a triumphant smile, and addressed the hangers-on :

"Didn't say so? It was Mesmerism!"

The KID had the last laugh. How foolhardy the educated and elite could be!

THE MAHATMA

The Great One had undertaken a tour of the country through train, car and walk. Life beside the high way had indeed its blessings. He was scheduled to pass through the sleepy small town. The years of adolescene were now behind the KID. He was fairly informed of the struggle for freedom and was eager to see the 'master' in flesh and blood. That morning, the barren field on the river bank was filled with people, a concourse of townsfolk and villagers. The arrival of the 'leader of the nation', rumbling along in an old car, was heralded by cries of "Mahatma Gandhi Ki Jai!" The scantily-clad frail little man sat on a table and spoke in a low voice. The town could not boast of a loudspeaker and the Mahatma had to depend solely on the strength of his vocal cord. What he said really did not matter. The 'darshan' was the thing. It was as though the congregation was entranced. The teenager felt inexplicable stirrings deep within him. The ageing, toothless tumbler had cast his spell. *Khadi* clothes became the fashion of the day. Tailors overworked. The teenager bought a Gandhi cap.

THE PRINCE

A couple of years later, early in 1937, Jawaharlal Nehru came speeding along, rosy-cheeked prince on a white horse. It was a whrilwind tour on the eve of elections to the Provincial Assemblies, and everywhere newspapers said, Nehru attracted large crowds. The teenager, now bereft of tuft, had travelled twenty miles to see the prince at close quarters. This large town had loudspeakers and petromaxes. Regardless of the enveloping darkness, the sea of humanity listened in rapt attention to Nehru's speech in English and its Kannada translation. His charisma was irresistible. Cries of "Jawaharlal Nehru Ki jai" rent the air as the speech concluded and the motorcade started moving slowly out of the meeting place. People ran after the vehicles in hundreds, cheering lustily. The teenager was one of them; holding fast to Nehur's open car, he ran alongside as far as he could. Jawahar, the young and dynamic tumbler, had stolen the show.

The aftermath of this was the teenager's active participation in politics.The headmaster of his school was an ardent nationalist and was a source of inspiration to the youngster. Accompanied by a couple of friends, he started taking out prabhat pheris in the early hours of the day during the National week. The slogans and the National song earned for him and his mates the wrath of the sleeping gentry.

THE WRITER

For the 13 year old youngster, that year was memorable for yet another reason....There was a Tulu journal published in the district. The teenager greatly admired the varied fare it offered. He was tempted to try his hand at writing (stories and poems) in Tulu, the main language of the local people and was overjoyed to see them in print. He began writing in Kannada as well. A Weekly published his very first story, launching him on his journey into the literary parnassus. For him, active politics receded, giving place to creative writing.

THE PULL OF MARXISM

When the Second World War broke out, the teen ager was

pursuing his studies in a town bordering Kerala. The contrast between the poor and the rich was marked here; the mass of people lived in utter penury. Here, the struggle for freedom had acquired new dimensions. The politically conscious and highly articulate Keralites had different visions of a free India. For them, anti imperiation was synonymous with anti feudalism and anti-capitalism. The teenager first heard there the shouts of 'Inquilab Zindabad'. The underground revolutionaries who were active all over Kerala were a self-effacing lot. The teenager was attracted towards them and to the struggles organized and led by them. Marx had charted the path to El Dorado. The wretched of the earth had nothing to lose but their chains. Under Lenin's stewardship, one sixth of the world had gone socialist. The creation of a new civilization that would embrace all humanity was feasible. No sacrifice was too great for the attainment of that goal. The teenager's search for identity seemed almost over. He was drawn towards communism.

His writings had a social purpose and dealt with everyday life of the people. He believed that one could bring about social changes through effective and powerful literature. This made him an inveterate believer in the might of the pen; he spurned an academic career that would have been his, and took to journalism. He bade goodbye to the Gandhi cap which had been his totem till then. The comradeship of like-minded youth was heart-warming. It was a tumblers' extravaganza.On turning twenty, he moved from city to city working as a pamphleteer and publicist for the Cause, snatching an hour or two, now and then, for literary practice. He was also associated with the Progressive Writers 'Organization and the People's Theatre. When it was decided in 1947 to launch a Weekly- the party organ- he was chosen to be the editor, a responsibility which he accepted with enthusiasm. The transfer of power and the exit of the British found the communist movement in the country in paroxysm. In the ding dong battle that ensued, a new leadership emerged and gave a call for armed revolt against the National Government. The very same Jawaharlal Nehru who ahd said, if the choice was between capitalism and communism he would prefer the latter, came down on the

Indian communsits with a heavy hand. This forced the comrades to go underground. Drawing their inspiration from the successful Chinese revolution led by Mao, the peasants of Telengana, a part of Nizam's dominion, rose up in arms. Sardar Patel put out the fire before it could develop into a conflagration (and Vionba, anointed the apostle of peace, commenced his bhoodaan movement). Again the communist leadership engaged itself in acimonious inner-party debate, The 'class enemy' had thundered: Either be a part of the system or face annihilation." It was time to take another look at the strategy and the tactics.

The youthful editor who had gone underground, moving from hutment to basement, slum to temporary shelter, or vice versa, continued to edit the journal till it was banned by Morarji Bhai acting from Bombay. This was followed by nerve racking work in the den-translating the self-critical reports, cutting the stencils, cyclostyling them and arranging for their clandestine despatch to units. There were narrow escapes aplenty. There were betrayals too. Some got arrested, and one was shot dead in jail. The dangers inherent in underground activity had their own charm. But one does not live on charms alone.

'Revolutionary' work of this nature and the resulting tension took their toll. The intermittent solitude found him in an introspective mood. How long could he go on like this? Would not release from the agit-prop frame help him to reforge his links with out sidelife which along could provide the inspiration needed for his creative wok? As the third year of underground life was coming to a close, news trickled in that there would be another shift in the Party's policy, and that the Government would lift the ban, "Now he decided, "I quit."

THE UNTOUCHABLE

The hawks within the party demanded that he be formally ostracised while the doves counselled patience.There was always a chance of the prodigal son returning. But the debate was interrupted by the arrival of a posse of police from a distant town with a three-year old non-bailable warrant to arrest the

ex-editor of a now defunct Weekly. He was taken into custody, handcuffed and lodged in different lockups(in one he had a thief for company, and in another he shared the space with a gang of smugglers). The protracted trial on three charges of publishing objectionable material in the Weekly made him a minor sensation. Finally, the law granted him his liberty and the Party, after another year's wait, set him free. To his former colleagues he now became an untouchable of sorts.

THE ARRIVAL

Rehabilitation is an agonizing process, even for one just 26. That the brain is the seat of thought, emotion and action is a simple enough statement. But the fact that the gray matter contains 10,000 million microscopic nerve cells, most of them dormant, is a frightening prospect. Memories could be stored away but not destroyed. Attempting a new break had its limitations considering the spillover from the past one has to contend with. But man is an ingenious creature and does not accept defeat easily. Undeterred by odds. the youthful writer-cum-journalist set out in in right earnest to refurbish his fractured image. The first thing he did was to rechristen himself by adopting one of his many pseudonyms (Kulkund Shivrao became NIRANJANA). His capital was meagre-three slim volumes of short stories—but the themes he could work on were plenty. He reeled off short stories, columns, radio plays and features, His first novel *VIMOCHANE* was written in a mood of dejection. He considered it amateurish, but it was a runaway success. Spurred on, he produced a string of novels, some of which, as luck would have it, turned out to be good. *(RANGAMMANA VATHAARA* and *CHIRASMARANE* were among these). He thought he had arrived, but, Kannada, the language chosen by the writer as his medium, of expression, did not have a vast readership. It was rare that a book saw a second edition, especially when works transcended the limits of popular literature. This happened to *CHIRASMARANE*. But the gradual change in the social and political awareness of the Kannada reader revived interest in *CHIRASMARANE* and other works of the writer. They also saw translations into various languages. A

love affair, culminating in marriage and the coming of kids helped him achieve a complete personality.

A complete personality? Rather a tall claim. He knew he had i's to be dotted and t's to be dashed. He was hungry for knowledge which could be found between the covers of countless volumes. What a large storehouse of learning man had accumulated over the millenia. All the human beings the world over were rightful heirs to that rich heritage. The writer undertook to edit a 7-volume junior encyclopaedia in Kannada, a highly regarding 5-year task. It was voyage across time and space, at once instructive and exhilarating. The natural corollary of work of this nature was his major novel *MRITYUNJAYA*. The theme was the first ever revolt by the peasants of a province against centralized authority of the Pharoah, high priest and feudal lords that occurred in ancient Egypt 4500 years ago.

HUMANISM

Man has been, by turn, great and pettifogging, king and cruel, a builder and destroyer. Undoubtedly he has made this planet hospitable. Will he also be instrumental in turning it into a vast graveyard or a limitless desert? Who has the answers- the philosophers religious heads, politicians, godmen, fortune tellers? What is heaven-on earth or elsewhere worth, if it is not pervaded with compassion? if a nuclear holocaust does not reduce this planet to shambles, denudation of forests and pollution of water and atmosphere will. The main thing is to let man live so that he completes his historic mission of making this world a better one to inhabit.

But man, in the course of his long march, has also built institutions of tyranny and oppression. In modern times democracy has been mauled badly in several countries. Power-mad dictators have trampled on human rights. Massacre of the innocents has become the order of the day. In many countries, the colour bar divides humanity sharply. Leaders masquerading as servants of the people are for ever hatching plots to perpetuate authoritarian and dynastic rules. Revivalists and fundamentalists are always on the look-out for opportunities to grab power.

What should be the writer's task in the context? Deeply concerned with the fate of man, he shall always, in all spheres, fight the forces of evil and uphold human values. Humanism alone can be the guiding spirit in everything that he does. A committed writer he is-comitted to Life in its totality.

Nearing middle age the writer had a brush with death when he suffered a paralytic stroke. The left limbs were gone for good, impairing his mobility. But the spirit remained unbroken and he continued with the task he had assigned to himself. Did not the red signal warrant a serious reappraisal of many fundamental postulates? Some wondered: Now at last would he not submit to God with whom as a teenager he had entered into an agreement ("You are not to meddle in my affairs and I shall not meddle in yours")? During sleepless nights he did review many things, but on questions of Almighty et al... he found his inner strength intact. Was it the time for retrogression, to find and cling to the 'sacred thread' he had discarded soon after his 'covenant with God? Would not the inviting warmth of the clan he had left behind prove to be the panacea for all ills that plagued him? No. He refused to be beaten.

The position was clear: He was not a Hindu, nor a Muslim, nor a Christian. Neither did he belong to any sect or tribe. Even national barriers meant nothing to him. He was just a member of the great human race.

Now, in 1984, the writer, past middle age, continues to be firm in his commitment to life; his concern for man remains as deep as ever; and his faith in humanism is undiminished.

- '*What Life has caught me*' ಮಾಲಿಕೆಗೆ Deccan Herald ಪತ್ರಿಕೆಯ ಸಂಪಾದಕರು ನನ್ನಿಂದ ಒಂದು ಲೇಖನ ಬಯಸಿದರು. 'ನಾನು' ಪದವನ್ನು ಬಳಸದೆ ನನ್ನ ಬಗೆಗೆ ನಾನೇ ಬರೆಯುವುದು ಸಾಧ್ಯವೇ? ಸಾಧ್ಯ ಎನಿಸಿತು. ಮೇಲಿನದನ್ನು ಬರೆದುಕೊಟ್ಟೆ. ಮಾರ್ಚ್ ೫ರ ಸಂಚಿಕೆಯಲ್ಲಿ ಅದು ಪ್ರಕಟವಾಯಿತು.

೧೯೮೪

ಸಾಹಿತ್ಯ ಪ್ರೇರಣೆಯ ಮೊದಲ ಹೆಜ್ಜೆಗಳು

ಒಪ್ಪಿಕೊಂಡದ್ದನ್ನು ಆದಷ್ಟು ಒಪ್ಪವಾಗಿ ಮಾಡುವ ಜಾಯಮಾನ ನನ್ನದು. ಆದರೆ ಈ ಸಲ ಧ್ವನಿಮುದ್ರಣದ ದಿನ ಹತ್ತಿರ ಬಂದರೂ ಬರೆವಣಿಗೆ ಸಿದ್ಧವಾಗಿಲ್ಲ. ಒಂದು ರಾತ್ರಿ, ಒಂದರ್ಧ ಹಗಲು, ಬರೆಯದೇ ಇದ್ದರೆ ಅವಮಾನ. ಬುದ್ಧಿ-ಭಾವ-ಕ್ರಿಯೆಗಳ ಪೀಠವಾದ ಮೆದುಳು ಸವಾಲು ಹಾಕುತ್ತಿದೆ: "ಮಂಕೇ, ಹೆಜ್ಜೆ ಗುರುತುಗಳು ಮಾಸಿಹೋಗಿವೆಯಲ್ಲೋ ! ಏನು ಗುರುತಿಸ್ತೀಯಾ ನೀನು?" ಅಂದರೇನು? ಬುರುಡೆ ಬಿಡಬೇಕಾದೀತು ಎಂಬ ಎಚ್ಚರಿಕೆಯೆ? ಇದ್ದೀತು. ಪ್ರಾಮಿಸ್-ಆ ಕೆಲಸ ನಾನು ಮಾಡಲಾರೆ. ಸಾಚಾತನ ಉಳಿಸಿಕೊಳ್ಳಲೇಬೇಕು ಕಡೆಯವರೆಗೂ.

ಸಾಹಿತ್ಯವನ್ನು ಕುರಿತು ತುಸುವಾದರೂ ಗಂಭೀರವಾಗಿ ನಾನು ಆಲೋಚಿಸ ತೊಡಗಿದ್ದು ನನ್ನ ಹದಿನೆಂಟನೆಯ ವಯಸ್ಸಿನಲ್ಲಿ. ಆದರೆ ಆ ವೇಳೆಗಾಗಲೇ ನನಗೆ ಸಾಹಿತ್ಯಪ್ರೇರಣೆಯಾಗಿ ಐದು ವರ್ಷ ಕಳೆದಿದ್ದುವು. ಇಪ್ಪತ್ತು-ಮೂವತ್ತರಷ್ಟು ಕತೆ ಇತ್ಯಾದಿ ಬರೆದು ಹೆಬ್ಬೆರಳು-ತೋರುಬೆರಳು-ನಡುಬೆರಳು ಮಸಿಯಿಂದ ತೋಯ್ದಿದ್ದುವು ; ಎಷ್ಟು ತೊಳೆದರೂ ಅಳಿಸಲಾಗದ ಕಲೆ ಉಳಿದಿತ್ತು.

ಆ ಅವಸ್ಥೆ ಆರಂಭವಾದದ್ದು ೧೯೩೦ರಲ್ಲಿ, ನನ್ನ ಹದಿಮೂರನೆಯ ವರ್ಷದಲ್ಲಿ., ಪೂರ್ವಾರ್ಧದಲ್ಲಿ, ಇದ್ದಕ್ಕಿದ್ದಂತೆ, ತುಳು ಭಾಷಾ ಲೇಖಕನಾದೆ. ಉತ್ತರಾರ್ಧದಲ್ಲಿ, ಅಷ್ಟೇ ಅನಿರೀಕ್ಷಿತವಾಗಿ, ಕನ್ನಡದ ಕತೆಗಾರನಾದೆ. ಅಚ್ಚಿನಲ್ಲಿ ಹೆಸರು ಕಂಡ ಈ ಸಂಭವದ ಹಿನ್ನೆಲೆ ಏನು? ಏನಿದ್ದೀತು?

ಸ್ಮೃತಿಕೋಶಿಕೆಗಳಲ್ಲಿನ ದಾಖಲೆ ಮೊದಲಾಗುವುದು ಐದನೆಯ ವರ್ಷದಿಂದ ಎನ್ನುವ ಸಾಮಾನ್ಯ ತಿಳಿವಳಿಕೆಗೆ ನಾನು ಅಪವಾದವಲ್ಲ. ಆದರೆ ಆರು ತಿಂಗಳ ಮಗು ವನ್ನೆತ್ತಿಕೊಂಡು, ಮೂವತ್ತು ದಾಟಿದ ತಾಯಿ ಹಳ್ಳಿ ಬಿಟ್ಟು, ಕಾವು ಎಂಬ ಊರಿಗೆ ಬಂದದ್ದು ನೆನಪಿದೆಯಲ್ಲ? ಊಹುಂ. ಅದು ನನ್ನ ನೆನಪಲ್ಲ. ಕಿರಿಯವನಾಗಿದ್ದಾಗ ಹೆತ್ತವಳು. ಭೈರಿಗೆ ಕೊರೆದು ಮೆದುಳಿಗೆ ತುಂಬಿಸಿದ್ದು. ಶಾಲೆಯಲ್ಲಿ, ನಾನೇ ಪ್ರಮುಖ, ಅಕ್ಷರ ಶತ್ರುಗಳಲ್ಲಿ! ಮರಳಮೇಲೆ ಬೆರಳು ಹಿಡಿದು ಲಿಪಿ ರೂಪಿಸಿದ್ದ ಗುರುವಿಗೆ ಎಂಥ ಅವಮಾನ ! ಅವರು ತಾಳ್ಮೆಗೆಟ್ಟು ಬೈದರೆ, ಕೈ ಎತ್ತಿದರೆ, ನನಗೆ ಖುಷಿ.

ಒಂದು ದಿನ ಕರಿಮರದ ಗಾತ್ರದ ರೂಲರಿನಿಂದ ನನ್ನ ಮುಂತಲೆಗೆ ಏಟು ಕೊಟ್ಟರು. ಅವರ ಪುಣ್ಯ—ಅದು ಬಿರುಕುಬಿಡಲಿಲ್ಲ, ಬಾವು ಬಂತು. ಒಳಗೆ ಕೋಶಿಕೆಗಳು ಕುಲುಕಿ ಚುರುಕಾದುವೇನೋ! ಬೇಗನೆ ಅಕ್ಷರಸ್ಥನಾದೆ. ಓದುವ ಹುಚ್ಚು ಅಂಟಿತು.

ಆ ಮುಂದಿನ ವರ್ಷಗಳಲ್ಲಿ ಆಳಸಿಂಗರಾಚಾರ್ಯರ ಕನ್ನಡ 'ರಾಮಾಯಣ ' ದಿಂದ ಮೊದಲ್ಗೊಂಡು ಕೋಶಿ. ಕಾರಂತರ ಪತ್ತೇದಾರಿ ಕಾದಂಬರಿ 'ವಿಚಿತ್ರ ಕೂಟ', ಭಿ. ಪ. ಕಾಳೆಯವರ-ಡಿಟ್ಯೋ-'ಭಯಂಕರ ಕೊಲೆ', ವೆಂಕಟಾಚಾರ್ಯರು ಅನುವಾದಿಸಿದ ಬಂಕಿಮರ 'ಆನಂದ ಮಠ' ಎಲ್ಲ ನನಗೆ ಗ್ರಾಸವಾದುವು.

ಸುಳ್ಯದ ಹಯರ್ ಎಲಿಮೆಂಟರಿ ಶಾಲೆಗೆ ಬಂದಾಗ, ನನ್ನ ಹುಡುಗಾಟದ-ಹುಡುಕಾಟದ-ಬಯಲು ವಿಸ್ತಾರವಾಯಿತು. ಆಗ ನಾನು ಪಡೆದದ್ದರಲ್ಲಿ ವೈವಿಧ್ಯ ವಿತ್ತು ; ನೋವು, ಅವಮಾನ, ಹೆಗ್ಗಳಿಕೆ, ಅನುಕಂಪ, ವಾತ್ಸಲ್ಯ, ಸ್ನೇಹ.... ಸಿಕ್ಕಿದ್ದನ್ನೆಲ್ಲ ಓದಿದೆ. ಪತ್ರಿಕೆಗಳನ್ನು ಸಹ. ಪುಟ್ಟ ಲೋಕಾನುಭವಿ.

ಆದರೆ ಕಲ್ಪನಾಲೋಕಕ್ಕಿಂತ ಭಿನ್ನವಾಗಿತ್ತು, ವಾಸ್ತವ ಜಗತ್ತು. ಗಾಂಧಿ-ನೆಹರು ಹಾದುಹೊದರು, 'ಭಾರತಮಾತಾಕಿ" ಜೈ!' ಮೆದುಳು ಧಿಮಿಧಿಮಿ. ನಾಡಿಗಳಲ್ಲಿ ರಿಂಗಣಗುಣಿತ. ದೇಶವೇ ತಾಯಿ. ಪರಕೀಯರ ಕೈಯಲ್ಲಿ ಬನ್ನಪಡುತ್ತಿದ್ದಾಳೆ. ಅವಳಿಗೆ ಬಿಡುಗಡೆ ಬೇಕು. ಸಮಾನ ಧರ್ಮೀಯರಾದ ನಾವು ಮೂವರೋ ನಾಲ್ವರೋ ಪ್ರಭಾತಫೇರಿ ಹೊರಡಿಸುತ್ತಿದ್ದೆವು. ಒಂದೇ ಹಾಡು: 'ಝುಂಡಾ ಉಂಛಾ ರಹೇ ಹಮಾರಾ......' ಕೋಳಿ ಕೂಗಿತೇಳು ಕಂದ......... ಎದ್ದೆವು. ಕಾಗೆಗಳು ಕಾ ಎಂದುವು. ನಸುಕಿನ ಸುಖನಿದ್ರೆಗೆ ಭಂಗತಂದ ಎಳೆಯರ ಮೇಲೆ ಹಲವರಿಗೆ ಸಿಟ್ಟು. ಎರಡು ತಂಡ ಅಲ್ಲವೆ? 'ಸ್ವಾತಂತ್ರ್ಯ ಬೇಕು' ಎನ್ನುವವರು ; 'ಬೇಡ' ಎನ್ನುವವರು;

ಆಗ ಕಣ್ಣಿಗೆ ಬಿತ್ತು ಪಣಿಯಾಡಿಯವರ 'ತುಳುನಾಡ್' ಪತ್ರಿಕೆ. ಕನ್ನಡ ಲಿಪಿ, ಸುತ್ತುಮುತ್ತ ಜನ ಆಡುವ ತುಳುಭಾಷೆ. ಅದರಲ್ಲಿ ಪ್ರಕಟವಾಗುತ್ತಿದ್ದುವು. ಎಂ.ವಿ. ಹೆಗ್ಡೆಯವರ ಗೀತೆಗಳು. ಓದಿ ಪುಲಕಗೊಳ್ಳುತ್ತಿದ್ದೆ. ಮನೆಯಲ್ಲಿ ತಾಯಿ ನನ್ನೊಡನೆ ಆಡುತ್ತಿದ್ದದ್ದು ಅವಳ ವಿಶಿಷ್ಟ ತುಳುಭಾಷೆ.

ನನ್ನ ಮಟ್ಟಿಗೆ ಆ ಭಾಷೆಯ ಬಳಕೆ ಮಣ್ಣುಗೋಡೆಯ ಮುಳಿಹುಲ್ಲು ಛಾವಣಿಯ ನಮ್ಮ ಸಣ್ಣ ಮನೆಯೊಳಗೆ ಮಾತ್ರ. ಶಾಲೆಯಲ್ಲಿ ಕನ್ನಡ, ಆಡಳಿತದಲ್ಲೂ ಕನ್ನಡ. ಆದರೆ ಹೊರಗೆ ಸರ್ವಮಾನ್ಯ ತುಳು ಮೆರೆಯುತ್ತಿತ್ತು—ಎಲ್ಲ ಧರ್ಮಗಳ ಎಲ್ಲ ಪಂಗಡಗಳ ಜನರೂ ಪರಸ್ಪರರೊಡನೆ ವ್ಯವಹಾರಕ್ಕಾಗಿ ಬಳಸುತ್ತಿದ್ದ ಭಾಷೆ. ಆ ಸರ್ವಮಾನ್ಯ ತುಳುಭಾಷೆಯಲ್ಲಿ ನಾನು ಕವಿತೆಗಳನ್ನೂ ಕತೆಗಳನ್ನೂ.ಬರೆದೆ. ಅವೆಲ್ಲ ಅಚ್ಚಾದುವು.....

ತುಳುವಿನಲ್ಲಿ ಬರೆದರೂ ನನ್ನ ಪಾಲಿಗೆ ಲೋಹಚುಂಬಕವಾಗಿದ್ದುದ್ದು ಕನ್ನಡವೇ. ಕೆಲವೇ ಮಿನಿಟುಗಳ ಈ ಭಾಷಣದಲ್ಲಿ ನನ್ನ ಪಠ್ಯೇತರ ಚಟುವಟಿಕೆಗಳಿಗೆ ಆಸರೆಯಾಗಿದ್ದ ಅಧ್ಯಾಪಕರೆಲ್ಲರ ವಿದ್ಯಾರ್ಥಿ-ಒಡನಾಡಿಗಳೆಲ್ಲರ ಬಗೆಗೆ ಬರೆಯಲು ವೇಳೆ ಸಾಲದು. ಜಿಲ್ಲೆಯದೇ ಸಂಗೀತನಾಟಕ ಮಂಡಲಿಯೊಂದು ಬಂದು ಕೆಲವು ನಾಟಕಗಳನ್ನು ಅಭಿನಯಿಸಿತು. ಮುಂದೆ ಊರಿನ ಪ್ರತಿಷ್ಠಿತರು ಹವ್ಯಾಸಿಗಳಾಗಿ, ಒಂದೆರಡು ನಾಟಕಗಳನ್ನು ಆಡಿ ತೋರಿಸಿದರು. ಒಂದರಲ್ಲಿ ನಾನು ಮೊಘಲ್ ಸಮ್ರಾಜ್ಞಿ ಉದಯಪುರಿಯ ಪಾತ್ರವಹಿಸಿ, ವಿನೋದಕ್ಕೆ ಕಾರಣನಾದೆ. ಶಾಲೆಯಲ್ಲಿ ನಡೆಯುತ್ತಿದ್ದ ತಿಂಗಳ ಹಬ್ಬದಲ್ಲಿ ನಾನೇ ರೂಪಿಸಿದ 'ವಿಲಿಯಂ ಟೆಲ್' ನಾಟಕದಲ್ಲಿ ದೇಶಪ್ರೇಮಿ ಟೆಲ್‌ನ ಪಾತ್ರ ನಿರ್ವಹಿಸಿ, ಉದಯಪುರಿಯನ್ನು ಇತಿಹಾಸದ ಪುಟಗಳಿಗೆ ಮರಳಿ ತಳ್ಳಿದೆ. ವರ್ಷದ ಜಾತ್ರೆ, ರಥೋತ್ಸವ.... ಹಗ್ಗವನ್ನು ನಾನೂ ಬಿಗಿಯಾಗಿ ಹಿಡಿದು, ನಾನೇ ಜಗ್ಗಿದೆ ಎನ್ನುವಷ್ಟು ಹಿಗ್ಗಿದೆ. ಮಣಿಸರಕಿನ ಅಂಗಡಿಗಳ ಥಳಕುಫಳಕಿಗೆ ಬೆರಗಾದೆ. ಕೊಳ್ಳಲು ಮಾತ್ರ ಕಾಸಿರಲಿಲ್ಲ, ಮೂಗಿಲ್ಲದ ಮಾತ್ರಕ್ಕೆ ಶ್ವಾನರಾಯರು ಸಂತೆಗೆ ಹೋಗಲೇಬಾರದು ಎಂದಿಲ್ಲವಲ್ಲ? ಒಮ್ಮೆ ಧಾರವಾಡ ಕಡೆಯ ಒಬ್ಬ ಯುವಕ ಬಂದಿಳಿದರು, ಬಸ್ ನಿಲ್ದಾಣದಲ್ಲಿ. ರಸ್ತೆಯ ಧೂಳು ಆವರಿಸಿ ಕಾವಿಯಾಗಿದ್ದ ಖಾದಿ ಉಡುಗೆ, ಭುಜದ ಮೇಲೊಂದು ಬಟ್ಟೆಗಂಟು. ಸೀರೆ, ಧೋತ್ರ? ಅಲ್ಲ. ಅದರಲ್ಲಿದ್ದುವು ಆಧುನಿಕ ಸಾಹಿತ್ಯದ ಪುಸ್ತಕಗಳು. ನಾಗರಿಕರು ಪುಸ್ತಕ ಕೊಳ್ಳುವುದನ್ನು ನಾನೆಂದೂ ನೋಡಿರಲಿಲ್ಲ. ನಮ್ಮೂರಲ್ಲಿ ಗ್ರಂಥ ಭಂಡಾರದ ಹೊರತಾಗಿ ಗಿರಾಕಿಯಾಗುವ ಅರ್ಹತೆ ಇದ್ದವರು ಮುಖ್ಯೋಪಾಧ್ಯಾಯರು ಒಬ್ಬರೇ. ಬಂದ ವ್ಯಕ್ತಿ ಮಿತ ಭಾಷಿ. ಸಮೀಪಿಸಿ ಹೆಸರು ಕೇಳಿದೆ.— "ಮೇವುಂಡಿ ಮಲ್ಲಾರಿ" ಎಂದರು. ರಾತ್ರಿ ಮುಖ್ಯೋಪಾಧ್ಯಾಯರಲ್ಲಿ ಅವರ ವಾಸ್ತವ್ಯ. ಮರುದಿನ ಮುಂದಕ್ಕೆ ಪಯಣ. ಹೆಡ್ ಮಾಸ್ಟರ ಮನೆಗೆ ಮಾರನೆಯದಿನ ಹೋದೆ. ಪುಸ್ತಕಗಳನ್ನು ಅಲ್ಲಿ ಕೊಂಡಿರಲಿಲ್ಲ. ಆಗ ಅನಿಸಿತು ; ಹೆಚ್ಚು ಕಾಸು ಸುಲಭ ಲಭ್ಯವಲ್ಲ.

ಕಾಸು ಗಳಿಸಲು ಯತ್ನಿಸಿದೆ. ಬಸ್‌ನಿಲ್ದಾಣದಲ್ಲಿ ಬೀಡಾ ಮಾರಾಟದಿಂದ ಮುಂದೆ ದಾರಿಹೋಕರಿಗೆ "ಕಾಫಿ ನೀರು ಬೇಕೆ?"ಎಂದು ಕೇಳಿದೆ, 'ನತದೃಷ್ಟ' ಒಂಟಿದರ್ಜಿಯೊಬ್ಬರಲ್ಲಿ ಶಿಷ್ಯನಾದೆ. ಒಂದು ದಿನವಿಡೀ ಕಾಜಾಹಾಕಿ ಬೆರಳು ಚುಚ್ಚಿಸಿಕೊಂಡದ್ದೇ ಬಂತು. ಸಂಜೆ ದರ್ಜಿ ಖುಲಾಸೆಯ ತೀರ್ಪು ಕೊಟ್ಟರು. "ಈ ಕೆಲಸ ನಿನಗೆ ಹೇಳಿದ್ದಲ್ಲ." ಶಾಲೆಯಲ್ಲಿ ವೃತ್ತಿಶಿಕ್ಷಣವಿತ್ತು. ಬುಕ್ ಬೈಂಡಿಂಗ್ ಹೇಳಿಕೊಟ್ಟಿದ್ದರು. ಅದರವೇ ಗುಡಿಕೈಗಾರಿಕೆ ಆರಂಭಿಸಿದೆ. ತಯಾರಿಮಾಲು ಚೆನ್ನಾಗಿತ್ತು. ಆದರೆ ಕೊಳ್ಳುವವರಿರಲಿಲ್ಲ. ಬಹಳ ಚೆನ್ನಾಗಿ ಕಂಡ ಒಂದು ಡಯರಿಯಲ್ಲಿ ರತ್ನನ ಪದಗಳನ್ನು

ಪ್ರತಿಮಾಡಿದೆ. 'ಮಡಿಕೇರಿಲಿ ಮಂಜು'.... 'ಪೂವಮ್ಮಾ, ಪೂವಮ್ಮಾ' ಆ ಪದ್ಯಗಳನ್ನು ಮತ್ತೆಮತ್ತೆ ಓದುವುದರಲ್ಲಿ ಸಂತೋಷ ಸಿಕ್ಕಿತು. ಬೈಂಡಿಂಗ್ ಕೆಲಸಕ್ಕೆ ವಿದಾಯ ನುಡಿದೆ. ಕಾರಂತರು ನಡೆಸುತ್ತಿದ್ದ ಮಕ್ಕಳ ಕೂಟಕ್ಕೆ ವಿಟ್ಲವೋ ಕನ್ಯಾನವೋ ಹೋದೆ. ಪ್ರಾಯ ಮೀರಿ ಪ್ರಬುದ್ಧನಾದವನು—ಚಿಲಿಪಿಲಿ ಆಟ ಇಷ್ಟವಾಗಲಿಲ್ಲ. ಆದರೆ ಪುತ್ತೂರಿನ ನಾಡಹಬ್ಬ ಬೇರೆ ಸಂಗತಿ. ಅಲ್ಲಿತ್ತು ಅಡೆತಡೆಯಿಲ್ಲದ ವಾಕ್‌ಪ್ರವಾಹ, ಹೇರಳ ಮನೋರಂಜನೆ. ಗೊರೂರು, ತೀ.ನಂ.ಶ್ರೀ., ಅ.ನ.ಕೃ., ಕಸ್ತೂರಿ, ವಿ.ಸೀ., ದಿನಕರ ದೇಸಾಯಿ, ಕಾರಂತ ದಂಪತಿ. ಹನ್ನೊಂದು ಹನ್ನೆರಡರ ನಾನು—ಹೊಸಗನ್ನಡ ಸಾಹಿತ್ಯಗಾಳಿಯಿಂದ ಪುಪ್ಪುಸಗಳನ್ನು ತುಂಬಿಕೊಂಡೆ.

ಶಾಲೆಗೆ ಮಂಗಳೂರಿನಿಂದ 'ರಾಷ್ಟ್ರಬಂಧು' ವಾರಪತ್ರಿಕೆ ಬರುತ್ತಿತ್ತು. ಪ್ರತಿ ಸೋಮವಾರ, ತಿಂಗಳಿಗೊಮ್ಮೆ ಸಾಹಿತ್ಯ ಸಂಚಿಕೆ ಇರುತ್ತಿತ್ತು. ಅದರಲ್ಲಿ 'ವಾರದ ಕಥೆ' ತಪ್ಪದೆ ಕಾಣಿಸುತ್ತಿದ್ದ ಶೀರ್ಷಿಕೆ. ಅದರ ಕೆಳಗೆ ಒಂದು ಕತೆ. ಒಂದು ಇಡೀ ಪುಟ, ಅಥವಾ ಅದಕ್ಕಿಂತ ತುಸು ಕಿರಿದು. ಬೆಂಗಳೂರು, ಮೈಸೂರು, ಧಾರವಾಡ, ಕಾರವಾರ ಕಾಣದ ಆ ಊರುಗಳೆಲ್ಲ ಪ್ರದೇಶಗಳೆಲ್ಲ ಮಾನಸಿಕವಾಗಿ ನನಗೆ ಹತ್ತಿರವಾಗಿದ್ದುವು. ಕನ್ನಡದ ಭಾಷಾಪ್ರಭೇದಗಳನ್ನು ಗುರುತಿಸಿದ್ದೆ, ಆ ವಿಶಾಲ ಪ್ರದೇಶದ ಜನಸಮುದಾಯವೆಲ್ಲ ನನ್ನ ಬಂಧು ಬಳಗ, ಅಲ್ಲಿಂದ ಬರುತ್ತಿದ್ದ ಪತ್ರಿಕೆ ಪುಸ್ತಕಗಳೆಲ್ಲ ನನ್ನ ವ್ಯಾಪ್ತಿಗೆ ಒಳಪಟ್ಟ ಸಾಹಿತ್ಯ—ಎಂಬ ಭಾವನೆಯಿಂದ ನಾನು ವಿಶಾಲವಾದ ಬಾನಿನಲ್ಲಿ ಹಾರಾಡುವ ಹಕ್ಕಿಯಾದೆ.

ಅಂಥದರಲ್ಲಿ ಒಂದು ರಾತ್ರಿ ಇದ್ದಕ್ಕಿದ್ದಂತೆ—ಸೀಮೆಎಣ್ಣೆಯ ಬುಡ್ಡಿದೀಪದ ಮುಂದೆ ನೆಲದ ಮೇಲೆ ಕುಳಿತೆ. ನೀಡುತ್ತಿದ್ದ ಬೆಳಕಿಗಿಂತಲೂ ಅದು ಉಗುಳುತ್ತಿದ್ದ ಹೊಗೆಯೇ ಜಾಸ್ತಿ. ಅಯ್ಯೋ ಪಾಪ-ಎನ್ನಬೇಕಾದ್ದಿಲ್ಲ. ಇರುಳಿನಲ್ಲಿ ಅದಕ್ಕಿಂತ ಬೇರೆಯಾದ ಬೆಳಕು ನನಗೆ ದೊರೆಯಬೇಕೆಂಬ ಹಟವಿರಲಿಲ್ಲ ; ಸಿಕ್ಕೀತೆನ್ನುವ ಆಸೆಯೂ ಇರಲಿಲ್ಲ. ಪಕ್ಕದಲ್ಲಿದ್ದ ಎಕ್ಸರ್‌ಸೈಜ್ ಪುಸ್ತಕದಿಂದ ಖಾಲಿ ಹಾಳೆಗಳನ್ನು ಹರಿದೆ. ಮೊದಲ ಪುಟದ ಮೇಲ್ಗಡೆ 'ಓಂ' ಇಲ್ಲ, 'ಶ್ರೀ' ಇಲ್ಲ. ಮಸಿದವತಿಗೆ (ಕಪ್ಪೋ? ನೀಲಿಯೊ?)ನೀಳ ಲೇಖನಿ ಅದ್ದಿ ಬರೆಯತೊಡಗಿದೆ. ವಾಕ್ಯರಚನೆಗೆ ತೊಡಗುವ ಮುನ್ನ ಬುದ್ಧಿ ಭಾವಗಳು ಮೇಳೈಸಿದ್ದುವೆ? ವಸ್ತು ಖಚಿತವಾಗಿತ್ತೆ? ತಂತ್ರದ ಬಗೆಗೆ ನಿರ್ಧರಿಸಿದ್ದೆನೆ? ನನಗೆ ನೆನಪಾಗುತ್ತಿಲ್ಲ... ಓದಿದ್ದ ಎಷ್ಟೋ ಕತೆಗಳು ನನ್ನ ಆಳವನ್ನು ಹೊಕ್ಕು ಸ್ವಾಸ್ಥ್ಯವನ್ನು ಕೆಡಿಸಿರಬಹುದು. ಅಸ್ಪಷ್ಟವಾದೊಂದು ವಸ್ತು ರೂಪುಗೊಂಡಿರ ಬೇಕು... ವಿವಾಹಿತ ಕಾಲೇಜು ವಿದ್ಯಾರ್ಥಿ. ಊರಿನಲ್ಲಿ ಆತನ ಒಲವು ದೊರೆಯದೇ ಕಾದಿರುವ ಎಳೆಯ ಹೆಂಡತಿ. ಸಿರಿವಂತ ಸಹಪಾಠಿನಿಯಲ್ಲಿ ಅವನು ಅನುರಕ್ತ. ಮೋಹ

ಅವಳ ಮೇಲಲ್ಲ. ಅವಳ ಹಣದ ಮೇಲೆ ಎನ್ನುವ ಸಂದೇಹದ ಧ್ವನಿ ಒಂದೆಡೆ. ಕಸಿವಿಸಿಗೆ ಒಳಗಾದ ಹುಡುಗನ ತಂದೆ ಆಯಾ ಊರುಗಳಿಂದ ಪತ್ರ-ಉತ್ತರ.... ನಡುನಡುವೆ ಒಂದೊಂದು 'ವಯರ್'—ತಂತಿ—ಹುಡುಗ ತನ್ನ ಹೆಂಡತಿಯ ಹಣ ದೋಚುತ್ತಾನೆ. ಆ ಅಪರಾಧಕ್ಕಾಗಿ ನ್ಯಾಯಾಧೀಶರು ಆತನಿಗೆ ಶಿಕ್ಷೆ ವಿಧಿಸಿದರೆಂದು 'ಲೋಕಮತ' ಪತ್ರಿಕೆಯಲ್ಲಿ ಸುದ್ದಿ, (ಕದ್ದದ್ದು ಒಂದೂವರೆ ಸಾವಿರ, ಶಿಕ್ಷೆ ಒಂದೂವರೆ ವರ್ಷ) ಕತೆಗೆ ಇಟ್ಟ ಹೆಸರು (ನನ್ನ ಮೂಲ ನಾಮಧೇಯದ ಮೂರು ಪದಗಳ ಮೊದಲ ಅಕ್ಷರಗಳತ್ತಿಕೊಂಡು ನಾನೇ ಟಂಕಿಸಿದ ಕಾವ್ಯನಾಮ.) ಸಂಪಾದಕರ ಮೇಲೆ ಮೋಡಿ ಬೀಸಲೆಂದು, 'ಕಿಶೋರ' ಹೆಸರಿನ ಮುಂದೆ ಸೇರಿಸಿದೆ ; 'ಬಾಲವೃಂದ' ಸುಳ್ಯ. ಬರೆದುದನ್ನು ತಿರುಗಿ ಓದಲಿಲ್ಲ. ಇನ್ನು ತಿದ್ದುವ ಮಾತೆಲ್ಲಿಯದು?

ನಿದ್ದೆ. ಎಚ್ಚರ. ಕತೆಯ ವಿಲೇವಾರಿಯಾಗಬೇಕಲ್ಲ? ಯಾರಿಗೂ 'ಕತೆ'ಯ ವಿಷಯ ಹೇಳಲಿಲ್ಲ, 'ತುಳುನಾಡ್' ಪತ್ರಿಕೆಗೆ ಹಸ್ತಪ್ರತಿ ರವಾನಿಸಿ ಅನುಭವ ಇದ್ದವನು. 'ಮೋಹಜಾಲ'ವನ್ನು ಮಂಗಳೂರಿನ 'ರಾಷ್ಟ್ರಬಂಧು' ಸಂಪಾದಕರಿಗೆ ಸಾಗಹಾಕಿ ನಿಶ್ಚಿಂತನಾದೆ.

ಅಷ್ಟು ಮಾಡಿ ಆ ವಿಷಯ ಮರೆತೇಬಿಟ್ಟೆ ಎಂದು ತೋರುತ್ತದೆ.

ಮೇಲಣ ಸೋಮವಾರವೂ ಅನಂತರದ ಸೋಮವಾರವೂ ಎಂದಿನಂತೆ ಇತರರ ಜತೆಗೂಡಿಯೇ 'ರಾಷ್ಟ್ರಬಂಧು'ವನ್ನು ನೋಡಿದೆ. ವಾರದ ಕತೆಗಳನ್ನೂ ಓದಿದೆ. ನಂಬುವುದು ಕಷ್ಟವಾದೀತು. ಆದರೂ ವಾಸ್ತದ ಸಂಗತಿ ಇದು:

ನಾನೊಂದು ಕನ್ನಡ ಕತೆ ಬರೆದಿದ್ದರ ನೆನಪನ್ನು ಕಾಡಲಿಲ್ಲ. ಆಮೇಲೂ ಒಂದೆರಡು ವಾರಗಳು ಕಳೆದಿರಬೇಕು.

ಒಂದು ಸೋಮವಾರ.

ಮಧ್ಯಾಹ್ನದ ಬಿಡುವು ಮುಗಿದೊಡನೆ, ರಸ್ತೆಯಾಚೆಗಿನ ಶಾಲೆಯ ಇನ್ನೊಂದು ಕಟ್ಟಡದತ್ತ ಹೋದವನು ಓಡುತ್ತ ಕುಪ್ಪಳಿಸುತ್ತ ನನ್ನ ತರಗತಿಯ ಕಡೆಗೆ ಮಾಮೂಲಿನಂತೆ ಜಗಲಿಯಲ್ಲಿ, ಅದೇ ಆಗ ಬಂದಿದ್ದ 'ರಾಷ್ಟ್ರಬಂಧು'ವನ್ನು ತೆರೆದು ಮೂವರು ನಾಲ್ವರು ಸಹಪಾಠಿಗಳು ಗುಂಪುಕಟ್ಟಿ ನೋಡುತ್ತಿದ್ದರು.ವಾರದ ಕತೆ ಯಾವಾಗಲೂ ಇರುವ ಎರಡನೆಯ ಪುಟ. ಇಣಿಕಿ ಕತೆಯ ಹೆಸರನ್ನು ಗಟ್ಟಿಯಾಗಿ ಉಚ್ಚರಿಸಿ, ಆಮೇಲೆ ಓದಿದರಾಯಿತೆಂದು ಮುಂದೆ ಸಾಗಿದೆ.

ಹತ್ತು ಹೆಜ್ಜೆ ಹೋಗಿದ್ದೆನೋ ಇಲ್ಲವೋ, ಒಮ್ಮೆಲೇ ನಿಂತೆ. ಎದೆಗುಂಡಿಗೆಯ ಬಡಿತ ಕ್ರಮ ತಪ್ಪಿದಂತೆ ಅನಿಸಿತು. ಸರಕ್ಕನೆ ತಿರುಗಿ ಗುಂಪಿನೆಡೆಗೆ ಮರಳಿದೆ. ಪತ್ರಿಕೆಯ ಪುಟವನ್ನು ಮತ್ತೆ ನೋಡಿದೆ.

'ಮೋಹಜಾಲ'—ನನ್ನ ಕಥೆ!

ಅಲ್ಲಿದ್ದವರು ತಿಳಿಯುವುದಕ್ಕೆ ಮುನ್ನವೇ ನಾನು ಕತೆಗಾರನಾಗಿಬಿಟ್ಟಿದ್ದೆ.

ಸಂಪಾದಕ ಕಡೆಂಗೋಡ್ಲು ನನ್ನ ಬರೆವಣಿಗೆಯಲ್ಲಿ ಏನು ಕಂಡರೋ! ನಾನು ಒಂದರ ಮೇಲೊಂದಾಗಿ ಬರೆದ ಕತೆಗಳೆಲ್ಲ 'ರಾಷ್ಟ್ರಬಂಧು'ವಿನಲ್ಲಿ ಅಚ್ಚಾದುವು. 'ಬಾಲವೃಂದ'ದ ಕಟ್ಟುಕತೆ ಆವಿಯಾಯಿತು. ಒಂಟಿ 'ಕಿಶೋರ'ನಾದೆ. 'ಕತೆಗಾರ'ಎಂಬ ಕಾವ್ಯನಾಮವನ್ನೂ ಬಳಸಿದೆ. ಒಂದು ಹಂತ ಮುಟ್ಟಿದಾಗ, ಇನ್ನು ನಿಜನಾಮ ಧೇಯವೇ ಸಾಲದೆ? ಎನಿಸಿತು.

ಬರೆದು ನಾಲ್ಕು ವರ್ಷ ಆದಮೇಲೆ ಇತರ ಕತೆಗಳೊಂದಿಗೆ ನನ್ನ ಮೊದಲ ಕತೆಯೂ ಕಳೆದುಹೋಯಿತು. 'ಮೋಹಜಾಲ'ವಂತೂ ಕಳಪೆ ಎಂಬ ನಿರ್ಧಾರಕ್ಕೆ ನಾನೇ ಬಂದಿದ್ದೆ. ಅದನ್ನೆಲ್ಲ ಓದಬೇಕು ಎಂಬ ತೀವ್ರ ಆಸೆ ಉದಿಸಿದ್ದು ಈಚೆಗೆ. ನಸೀಬ ಖೊಟ್ಟಿಯಾಗಿರಲಿಲ್ಲ. ಸಂಪುಟಗಳು ದೊರೆತುವು. ಆತ್ಮೀಯರ ಶ್ರಮದಿಂದ ಸುಮಾರು ಅರುವತ್ತು ಕತೆ-ಲೇಖನಗಳು ನನ್ನಲ್ಲಿಗೆ ಮರಳಿದುವು.

'ಮೋಹಜಾಲ'ದ ಮೊದಲ ಓಲೆಯನ್ನು ಓದಲೆ? ತಮಾಷೆಗೆ:

ರಾಯ್ಪುರ

ಪ್ರಿಯಾ, ದಿನಾಂಕ................

ನೀವು ಇನ್ನೂ ಮನೆಗೆ ಏಕೆ ಬರುವುದಿಲ್ಲ? ಪರೀಕ್ಷೆಯ ಫಲಿತಾಂಶವನ್ನಂತೂ ತಿಳಿಸಿಯೇ ಇಲ್ಲ. ನಾನು ನಿಮ್ಮನ್ನು ಕಂಡುದೆಂದರೆ, ಅಂದು ಮದುವೆಯ ದಿವಸ ಕದ್ದು ಕಂಡುದೇ ಸರಿ. ಕಳೆದ ವರುಷ ಸೆಕೆಗಾಲದ ರಜೆಯಲ್ಲಂತೂ ನೀವು ಮನೆಗೆ ಬರಲೇ ಇಲ್ಲ. ಬಿ.ಎ.ಗೆ. ಕುಳಿತುಕೊಳ್ಳಲು ಸನ್ನಾಹವೆಂದಿರಿ. ಈ ಸಲ ರಜೆ ಸಿಕ್ಕಿ ೨-೩ ದಿನಗಳಾದುವು. ನನಗೆ, ನನ್ನ ಅತ್ತೆಮಾವಂದಿರಿಗಾಗುವ ದುಃಖಕ್ಕಿಂತಲೂ ಅಧಿಕ ದುಃಖವಾಗುತ್ತದೆ. ನೀವು, ನನ್ನ ತಂದೆಯವರು ಬರೆದ ಕಾಗದಕ್ಕೆ ಉತ್ತರವನ್ನೇ ಕೊಡುವುದಿಲ್ಲವೇಕೆ? ನನಗಂತೂ ನೀವು, ಈ ಇಡೀ ವರುಷದಲ್ಲಿ, ಒಮ್ಮೆಯೂ ಸರಿಯಾಗಿ ಪತ್ರವನ್ನು ಬರೆದುದಿಲ್ಲ. ನೀವು ಹೀಗೆ ಮಾಡುವುದಾದರೂ ಏತಕ್ಕೆ?

ನನ್ನ ಮನಸ್ಸು ನಿಮ್ಮನ್ನು ಕಾಣದೆ ತಳಮಳಗೊಳ್ಳುತ್ತಿದೆ. ಈ ಕಾಗದ ತಲಪಿದ ಕೊಡಲೇ ಹೊರಟು ಬನ್ನಿರಿ. ಖರ್ಚಿಗೆ ನಿಮ್ಮ ಮಾವ ಹತ್ತು ರೂಪಾಯಿ ಕಳುಹಿಸುತ್ತಾರಂತೆ: ಪರೀಕ್ಷೆಯ ಫಲಿತಾಂಶವನ್ನು ತಂತಿಮೂಲಕ ತಿಳಿಸಿರಿ.

ಇಲ್ಲಿ ತೋರುವ ಮಟ್ಟಿಗೆ ಎಲ್ಲರೂ ಸೌಖ್ಯದಿಂದಿದ್ದಾರೆ. ಅಜ್ಜಿಗೆ ಶೀತ. ಅಕ್ಕನ ಮಗ ಕೇಶೂಗೆ ಪುಡಿಗಜ್ಜಿ ಎದ್ದಿದೆ.

ಇತಿ ನಿಮ್ಮ ಹೆಂ-ಡ-ತಿ

ಸರಳಾ

ನನ್ನ ಸಾಹಿತ್ಯಪ್ರೇರಣೆಯ ಮೊದಲ ಹೆಜ್ಜೆಗಳನ್ನು ಗುರುತಿಸಲು ಪ್ರಾಮಾಣಿಕ ಪ್ರಯತ್ನವನ್ನೇನೋ ಮಾಡಿದ್ದೇನೆ. ಪರಿಣಾಮ ನನಗೆ ತೃಪ್ತಿ ತಂದಿಲ್ಲ. ಇಂಥ ಹೊಣೆಯನ್ನು ಒಂದು ಕಂಪ್ಯೂಟರಿಗೆ ವಹಿಸುವ ದಿನ ಬೇಗನೆ ಬರಬಾರದೆ?

- ಏಪ್ರಿಲ್ ೧೫ರ ರಾತ್ರಿ ಪ್ರಸಾರವಾದ ಬಾನುಲಿ ಭಾಷಣ. ಈ ಪುಸ್ತಕದಲ್ಲಿ ಸೇರ್ಪಡೆ ಆಕಾಶವಾಣಿಯ ಸೌಜನ್ಯದಿಂದ.

ಬಂಧ-ಅನುಬಂಧ

೧೯೨೪

ಹುಟ್ಟು ನೋಡು......

ಜನನ (ಜೂನ್ ೧೫). ದಕ್ಷಿಣ ಕನ್ನಡದ ಕುಳುಕುಂದ ಎಂಬ ಹಳ್ಳಿಯಲ್ಲಿ. ತಾಯಿ ಚಿನ್ನಮ್ಮ. ತನ್ನ ಎಂಟನೆಯ ವಯಸ್ಸಿನಲ್ಲಿ ಮದುವೆಯಾಗಿ, ಆ ವರ್ಷವೇ ವಿಧವೆಯಾದವಳು. ಮುಂದೆ ತನ್ನ ಮೂವತ್ತನೆಯ ವರ್ಷದಲ್ಲಿ ಶ್ರೀ ಶ್ರೀನಿವಾಸರಾಯ ಎಂಬವರ ಸಂಬಂಧದಿಂದ ತಾಯ್ತನ. ಮಗುವಿಗಿಟ್ಟ ಹೆಸರು ಶಿವ(ರಾಯ). ಮಗುವಿಗೆ ಆರು ತಿಂಗಳಾದಾಗ ಪರಿತ್ಯಕ್ತೆಯಾಗಿ, ಮಗುವಿನೊಂದಿಗೆ ಗ್ರಾಮದಿಂದ ನಿರ್ಗಮನ. ಬೀಡುಬಿಟ್ಟದ್ದು ಕಾವು ಎಂಬ ಪುಟ್ಟ ಊರಲ್ಲಿ. ಅಲ್ಲಿ ಪಂಚಾಯತಿ ವಿಚಾರಣೆಗೆ ಗುರಿ. ಆ ಸ್ಥಳಕ್ಕೆ ಕರೆತಂದ ಶ್ರೀ ಮಂಜುನಾಥ ಪೈ ರಕ್ಷಕ (ಮುಂದೆ ನೀಲೇಶ್ವರದಲ್ಲಿ ಮಗನ ಹದಿನಾಲ್ಕನೆಯ ಹರೆಯದಲ್ಲಿ ಈ ರಕ್ಷಣೆಯಿಂದ ಬಿಡುಗಡೆ).

೧೯೨೯-೧೯೩೩

ಕಾವು ಲೋವರ್ ಎಲಿಮೆಂಟರಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ಮುಖ್ಯೋಪಾಧ್ಯಾಯರು ; ಶ್ರೀ ಉಂಗ್ರಿ ಪುಳಿತ್ತಾಯ. ಅಕ್ಷರ ಜೋಡಣೆ ಸಾಧ್ಯವಾದಮೇಲೆ ಹುಡುಗನಿಗೆ ಬಾಹ್ಯ ಓದು ಬಹಳ ಇಷ್ಟ. ರಾಮಾಯಣ, ಮಹಾಭಾರತ ಮತ್ತು ಕೈಗೆ ಸಿಕ್ಕ ಎಲ್ಲ ಪುಸ್ತಕಗಳ ವಾಚನ. ವಿದ್ಯೆ ಆ ಶಾಲೆಗೆ ಮುಗಿಯಿತು ಎಂಬ ದಿಗಿಲು. ಒಂದು ವರ್ಷ ವ್ಯರ್ಥವಾದಮೇಲೆ, ಗಂಟು ಗದಡಿಯೊಡನೆ ಸುಳ್ಯಕ್ಕೆ.

೧೯೩೪-೧೯೩೮

ಮುಂದಿನ ವಿದ್ಯಾಭ್ಯಾಸ ಸುಳ್ಯ ಹಯರ್ ಎಲಿಮೆಂಟರಿ ಶಾಲೆಯಲ್ಲಿ. ಮುಖ್ಯೋಪಾಧ್ಯಾಯರು ; ಶ್ರೀ ರಾಮಪ್ಪಯ್ಯ. ಇತರ ಅಧ್ಯಾಪಕರು: ಸರ್ವಶ್ರೀ ಬಿ. ಶಂಕರನಾರಾಯಣರಾವ್, ವೆಂಕಪ್ಪಯ್ಯ ಭಟ್. ಜನಾರ್ದನ ವಾಗ್ಲೆ, ರಾಮಚಂದ್ರ ಭಟ್, ಸುಬ್ಬಣ್ಣ, ತಮ್ಮಣ್ಣ.....

೧೯೩೪ರಲ್ಲಿ ಆ ಹೆದ್ದಾರಿಯಾಗಿ ಬಂದ ಗಾಂಧೀಜಿಯನ್ನು ಕಂಡದ್ದು. ದೇಶಪ್ರೇಮದ ಪುಳಕ. ೧೯೩೫ರಲ್ಲಿ ಸುಳ್ಯದಲ್ಲಿ ಜರಗಿದ ಮಕ್ಕಳ ಕೂಟದಲ್ಲಿ ಸ್ವಯಂಸೇವಕ. ಮುಂದಿನ ವರ್ಷ ವಿಟ್ಲ-ಕನ್ಯಾನಗಳಲ್ಲಿ ಜರಗಿದ ಮಕ್ಕಳ

ಕೂಟದಲ್ಲಿ ಪ್ರತಿನಿಧಿ. ಅಲ್ಲಿ ಶ್ರೀ ರಾಜರತ್ನಂ ಭೇಟಿ. ಈ ಕೂಟಗಳ ನೇತಾರ ಶ್ರೀ ಶಿವರಾಮ ಕಾರಂತ.

ಪುತ್ತೂರು ನಾಡಹಬ್ಬಗಳಲ್ಲಿ, ೧೯೩೬ ಮತ್ತು ೧೯೩೭ರಲ್ಲಿ, ಸಂಭ್ರಮದ ಓಡಾಟ;ಸಾಹಿತ್ಯ ತಂಗಾಳಿಯ ಸೇವನೆ.

೧೯೩೭

ಬರೆದು ನೋಡು......

ವರ್ಷದ ಆದಿಭಾಗದಲ್ಲಿ ಪುತ್ತೂರಿನಲ್ಲಿ ಜವಾಹರಲಾಲರ ಭಾಷಣ ಕೇಳಿದ್ದು.(ಕನ್ನಡಾನುವಾದ ಮುದವೀಡು ಕೃಷ್ಣರಾಯರದ್ದು). ಮದರಾಸು ಆಧಿಪತ್ಯದ ಪ್ರಜಾಪ್ರತಿನಿಧಿ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸ್ವಯಂ ಸೇವಕ. ಸುಳ್ಯದಲ್ಲಿ ಆ ವರ್ಷ ರಾಷ್ಟ್ರೀಯ ಸಪ್ತಾಹ ಆಚರಿಸಿದ ಎಳೆಯರ ಪಟಾಲಮಿನ ನೇತೃತ್ವ. ಇಷ್ಟಾದರೂ ಅಭಿವ್ಯಕ್ತಿಗೆ ಹದಗೊಂಡದ್ದು ಬರೆವಣಿಗೆ.

ಹದಿಮೂರರ ಕಿಶೋರ ಶ್ರೀ ಎಸ್. ಯು. ಪಣಿಯಾಡಿಯವರ 'ತುಳುನಾಡ್' ಪತ್ರಿಕೆಗೆ ಮಾರುಹೋದ. ಶ್ರೀ ಎಂ. ವಿ. ಹೆಗ್ಡೆಯವರ ತುಳು ಗೀತೆಗಳು ಮೋಡಿ ಬೀಸಿದುವು. ವರ್ಷದ ಪೂರ್ವಾರ್ಧದಲ್ಲಿ ಸರ್ವಮಾನ್ಯ ತುಳುಭಾಷೆಯಲ್ಲಿ ಕೃತಿ ರಚನೆ, ಕವಿತೆ, ಕತೆ, ಇತ್ಯಾದಿ. 'ತುಳುನಾಡ್' ಪತ್ರಿಕೆಯಲ್ಲಿ ಪ್ರಕಟಣೆ. ಉತ್ತರಾರ್ಧದಲ್ಲಿ, ಕನ್ನಡದಲ್ಲಿ ಕಿರಿಯನ ಮೊದಲ ಕತೆ ರೂಪು ತಳೆಯಿತು.'ಮೋಹಜಾಲ'. ಇದರ ಹಾಗೂ ಅನಂತರದ ಕತೆಗಳು ಅಚ್ಚಾದದ್ದು 'ರಾಷ್ಟ್ರಬಂಧು' ಸಾಪ್ತಾಹಿಕದಲ್ಲಿ. (ಸಂ: ಶ್ರೀ ಕಡೆಂಗೋಡ್ಲು ಶಂಕರಭಟ್ಟ.)

೧೯೩೮-೧೯೪೧

ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ಅಧ್ಯಯನ. ಸುಳ್ಯದಲ್ಲಿ ಎಂಟನೇ ತರಗತಿಯ (ಅಂತಿಮ) ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು, ಈ ಊರಿಗೆ. ಇಲ್ಲಿ ನಾಲ್ಕು, ಐದು ಮತ್ತು ಆರನೆಯ ಫಾರ್ಮ್‌ಗಳು. ಮುಖ್ಯೋಪಾಧ್ಯಾಯರು : ಶ್ರೀ ರಾಮಕೃಷ್ಣರಾವ್. ಇತರ ಅಧ್ಯಾಪಕರು; ಸರ್ವಶ್ರೀ ಕರುಣಾಕರನ್ ನಂಬಿಯಾರ್, ಶಂಕರನಾರಾಯಣರಾವ್, ಅಡಿಯೋಡಿ, ವಾರಿಯರ್, ಶಿವರಾಮಕೃಷ್ಣ ಅಯ್ಯರ್, ನಾಯನಾರ್, 'ಭಟ್ ಮಾಸ್ಟ್ರು', ವೆಂಕಟರಮಣ ಭಟ್, ಶಂಕರನಾರಾಯಣ (ಭಟ್?), ಗಂಗಾಧರಭಟ್; ಕೆಲ ತಿಂಗಳು ಅನಧಿಕೃತ ಹಿಂದೀ ಅಧ್ಯಾಪಕರು : ಶ್ರೀ ಕೆ. ಮಾಧವನ್;—ಎರಡು ವರ್ಷ ಅನಧಿಕೃತ ದೈಹಿಕ ಶಿಕ್ಷಣ-ಯೋಗಾಸನ ಭಾರ ಎತ್ತುವಿಕೆ ಇತ್ಯಾದಿ—ಶ್ರೀ ಕೆ.

ಎನ್. ಪಿಡಾರರ ವ್ಯಾಯಾಮ ಶಾಲೆಯಲ್ಲಿ.
ಸುತ್ತಲ ಬದುಕಿಗೆ ಸ್ಪಂದಿಸತೊಡಗಿದ ಸೃಜನಶೀಲ ವಿದ್ಯಾರ್ಥಿ ಲೇಖಕ. ಗಾಂಧೀವಾದ, ಜವಾಹರರ ಸಮಾಜವಾದಗಳ ಆಕರ್ಷಣೆಗೆ ಸವಾಲಾಗಿ ಕೇರಳದಿಂದ ಹರಿದುಬಂತು ಮಾರ್ಕ್ಸ್‌ವಾದ. ಬ್ರಿಟಿಷ್ ಆಡಳಿತದ ಯಂತ್ರದ ಕಣ್ಣುತಪ್ಪಿಸಿ ಅಲೆಯುತ್ತಿದ್ದ ಭೂಗತ ಕ್ರಾಂತಿಕಾರಿಗಳ ಸಂಪರ್ಕ.

೧೯೪೧

ವರ್ಷದ ಆರಂಭದಲ್ಲಿ ಕಾಸರಗೋಡು ತಾಲೂಕು ವಿದ್ಯಾರ್ಥಿಗಳ ಸಮ್ಮೇಳನದ ಸಂಘಟನೆ, ನೀಲೇಶ್ವರದಲ್ಲಿ. ಚರಿತ್ರಾರ್ಹ ಕಯ್ಯೂರು ಘಟನೆ. ಸಾಮ್ರಾಜ್ಯಶಾಹಿ ವಿರೋಧದ ಗುಂಗಿನಲ್ಲಿದ್ದಾಗಲೇ ಮದರಾಸು ಆಧಿಪತ್ಯದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತದ್ದು. ಪ್ರಥಮ ದರ್ಜೆಯಲ್ಲಿ ತೇರ್ಗಡೆ. ಆಳುತ್ತಿದ್ದ ದುರುಳರ ಯಾವ ಹಂಗೂ ಬೇಡವೆಂದು, ಪ್ರಮಾಣಪತ್ರ ಸ್ವೀಕರಿಸಲು ನಿರಾಕರಣೆ.

ಲೇಖನ ಝಳಪಿಸಿ ನೋಡು.....

ನೀಲೇಶ್ವರದಿಂದ ಮಂಗಳೂರಿಗೆ. 'ರಾಷ್ಟ್ರಬಂಧು'ವಿನಲ್ಲಿ ಉಪಸಂಪಾದಕ ಹಾಗೂ ನಗರ ಪ್ರತಿನಿಧಿ.

೧೯೪೨

'ರಾಷ್ಟ್ರಬಂಧು' ದುಡಿಮೆಯ ಜತೆಗೆ, ಹುಬ್ಬಳ್ಳಿ 'ಸಂಯುಕ್ತ ಕರ್ನಾಟಕ' ದೈನಿಕದ ಸುದ್ದಿಗಾರ.

೧೯೪೩

ಪ್ರೀತಿಸಿ ನೋಡು.....

ಅನುರಾಗದ ಅಲೆ ಮನತೋಯಿಸಿತು.
ಹೊಸದಾಗಿ ಸ್ಥಾಪಿತವಾದ ಮಂಗಳೂರು ಸೋವಿಯೆತ್ ಮಿತ್ರಸಂಘದ ಕಾರ್ಯದರ್ಶಿತ್ವ, ಶ್ರೀ ಬಿ.ವಿ. ಕಕ್ಕಿಲ್ಲಾಯರೊಂದಿಗೆ. ಕಮ್ಯೂನಿಸ್ಟ್ ಪಕ್ಷದ ಸದಸ್ಯತ್ವ. ಶ್ರೀ ಎನ್.ಕೆ. ಉಪಾಧ್ಯಾಯರ 'ಪೌರೋಹಿತ್ಯ'. ಜೂನ್‌ನಲ್ಲಿ ಮುಂಬಯಿಯಲ್ಲಿ ಜರಗಿದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನ ಹಾಗೂ ಜನತಾ ರಂಗಭೂಮಿ ಸಮ್ಮೇಳನಗಳಲ್ಲಿ ಪಾಲ್ಗೊಂಡದ್ದು.
ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸಂಘಟಕ ಕಾರ್ಯದರ್ಶಿ, ಶ್ರೀ ಕಯ್ಯಾರ ಕಿಂಞಣ್ಣ ರೈಯವರ ಜತೆ.

ಬೆಂಗಳೂರಿನ 'ಉಷಾ' (ಸಂ: ಶ್ರೀ ಬಸವರಾಜ ಕಟ್ಟೀಮನಿ) ಮಾಸಿಕದಲ್ಲಿ ಬರೆವಣಿಗೆ. ನಡುವಯಸ್ಸಿನಲ್ಲಿ ಶ್ರೀ ಶ್ರೀನಿವಾಸರಾಯರು ಹೃದಯಾಘಾತ ದಿಂದ ನಿಧನರಾದ ವಾರ್ತೆ.

ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಉತ್ತರಕರ್ನಾಟಕ, ಮೈಸೂರು ಸಂಸ್ಥಾನಗಳಲ್ಲಿ ಪ್ರವಾಸ. ವರ್ಷದ ಕೊನೆಯಲ್ಲಿ ಶಿವಮೊಗ್ಗೆಯಲ್ಲಿ ಜರಗಿದ (ಅಧ್ಯಕ್ಷರು: ಶ್ರೀ ಬೇಂದ್ರೆ) ವಾರ್ಷಿಕ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ. ಪ್ರತ್ಯೇಕ ಸಭೆಯಲ್ಲಿ ಶ್ರೀ ಅನಕೃ ಜತೆ ಪ್ರಗತಿಶೀಲತೆಯ ತುತೂರಿ.

೧೯೪೪

ಮಂಗಳೂರಲ್ಲಿ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ.
ಮಂಗಳೂರು ಪತ್ರಿಕೋದ್ಯೋಗಿ ಸಂಘ, ಪ್ರಗತಿಶೀಲ ಲೇಖಕರ ಸಂಘ.
ಜನತಾ ರಂಗಭೂಮಿಗಳ ಕಾರ್ಯದರ್ಶಿತ್ವ.
ಉಡುಪಿ ಕಿರಿಯರ ಸಮ್ಮೇಳನದ ಸೂತ್ರಚಾಲನೆ.
ಈ ವರ್ಷ ಬೆಂಗಳೂರಿನ 'ತಾಯಿನಾಡು','DAILY NEWS'
'ಜನವಾಣಿ' ದೈನಿಕಗಳಿಗೂ ಮಂಗಳೂರು ಸುದ್ದಿಗಾರ. ಮಂಗಳೂರಿನ 'ರಾಷ್ಟ್ರಬಂಧು' ವಾರಪತ್ರಿಕೆ 'ನವಭಾರತ' ದಿನಪತ್ರಿಕೆಗಳ ನಗರ ಪ್ರತಿನಿಧಿ.

ವರ್ಷಾಂತ್ಯದಲ್ಲಿ ಧಾರವಾಡದಲ್ಲಿ ಜರಗಿದ, ಸರ್ವಶ್ರೀ ಶ್ರೀರಂಗ ಗೋಕಾಕ-ಅ.ನ.ಕೃ. ಭಾಗವಹಿಸಿದ ಪ್ರಗತಿಶೀಲ ಸಾಹಿತ್ಯಾಸಕ್ತರ ಸಭೆಯಲ್ಲಿ ಶ್ರೀ ಅ.ನ.ಕೃ. ಕಾರ್ಯವಿಧಾನವನ್ನು ಟೀಕಿಸಿ ಭಾಷಣ. ರಬಕವಿಯಲ್ಲಿ ಏರ್ಪಟ್ಟ ವಾರ್ಷಿಕ ಸಾಹಿತ್ಯ ಸಮ್ಮೇಳನದಲ್ಲಿ (ಅಧ್ಯಕ್ಷತೆ: ಪ್ರೊ.ಶಿ.ಶಿ. ಬಸವನಾಳ) ಭಾಗವಹಿಸಿದ್ದು.

೧೯೪೫

ಮಂಗಳೂರು ಮಕ್ಕಳ ಸಮ್ಮೇಳನದ ಉಸ್ತುವಾರಿ.
ಮಂಗಳೂರಿನಿಂದ ಬೆಂಗಳೂರಿಗೆ ವಲಸೆ. 'ಪ್ರಜಾಮತ'ದ ಸಹಸಂಪಾದಕ ಹುದ್ದೆ. (ಸಂ: ಶ್ರೀ ಬಿ.ಎನ್. ಗುಪ್ತ)
ಆ ಸಾಪ್ತಾಹಿಕದಲ್ಲಿ 'ಸರೂ ಕೇಳಿದೆಯಾ?' ಅಂಕಣ.
ಶ್ರೀ ಅ.ನ.ಕೃ. ಬಳಗದವರಿಗೆ (ಸಹಜವಾಗಿಯೇ) ಅಸ್ಪೃಶ್ಯ.
ಪ್ರಥಮ ಕಥಾಸಂಗ್ರಹ 'ಅಯ್ಯನ್ನೆ ! ಪ್ರಕಟಣೆ.
ಮದರಾಸಿನಲ್ಲಿ ಜರಗಿದ ವಾರ್ಷಿಕ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ (ಶ್ರೀ ಕೈಲಾಸಂ ಅಧ್ಯಕ್ಷತೆ.)

೧೯೪೬

ಭೂಮಿಯ ಮೇಲೆ ಸ್ವರ್ಗ ನಿರ್ಮಿಸಿ ನೋಡು.....

ಬೆಂಗಳೂರಿನಿಂದ ಹುಬ್ಬಳ್ಳಿಗೆ. ಕಮ್ಯೂನಿಸ್ಟ್ ಪಕ್ಷದ ಕನ್ನಡ ಸಾಪ್ತಾಹಿಕ 'ಜನಶಕ್ತಿ' ಹೊರಡಿಸಲು ತಯಾರಿ. (ಹುಬ್ಬಳ್ಳಿಯಲ್ಲಿ ಪಕ್ಷದ ಮುಖಂಡರು: ಶ್ರೀ ಎನ್. ಎಲ್. ಉಪಾಧ್ಯಾಯ, ಶ್ರೀ ಸಿ.ಬಿ. ಮೊಣ್ಣಯ್ಯ.)

ಧಾರವಾಡ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನ, ಹುಬ್ಬಳ್ಳಿಯಲ್ಲಿ. ಸ್ವಾಗತ ಸಮಿತಿಯ ಜಂಟಿ ಕಾರ್ಯದರ್ಶಿತ್ವದ ಹೊಣೆ. (ಇನ್ನೊಬ್ಬರು ಶ್ರೀ ಪಿ. ವೆಂಕೋಬಾಚಾರ್.) ಶ್ರೀ ಅ.ನ.ಕೃ. ಸಮ್ಮೇಳನಾಧ್ಯಕ್ಷ!

ಪತ್ರಿಕೆಯ ಬದಲು, ಪಕ್ಷದ ಜನತಾ ಸಾಹಿತ್ಯ ಪ್ರಕಾಶನದ ಆರಂಭ. ೨೭ ಪುಸ್ತಿಕೆಗಳ ಪ್ರಕಟಣೆ.

ಬೆಂಗಳೂರಿನ 'ಛಾಯಾ' ಮಾಸಿಕ, 'ದೇಶಬಂಧು' ಸಾಪ್ತಾಹಿಕಗಳಲ್ಲಿ (ಸಂ. ಶ್ರೀ ಬಿ. ಎಸ್. ವೆಂಕಟರಾಮ್) ಬರೆವಣಿಗೆ. 'ಉಷಾ'ದಲ್ಲಿ (ಸಂ:ಶ್ರೀ ಎಸ್. ನಂಜಪ್ಪ) 'ಸರೋಜ ಸಂಚಯ' ಅಂಕಣ.

ಪ್ರಕಟಣೆ: 'ಸಂಧಿಕಾಲ'- 'ಅಯ್ಯನ್ಯೆ!'ಯ ಪುನರ್ ಮುದ್ರಣ:

'ರಕ್ತ ಸರೋವರ'—ಎರಡನೆಯ ಕಥಾಸಂಗ್ರಹ.

ಹರಪನಹಳ್ಳಿಯಲ್ಲಿ ಜರಗಿದ ವಾರ್ಷಿಕ ಸಾಹಿತ್ಯ ಸಮ್ಮೇಳನದ (ಅಧ್ಯಕ್ಷರು ಶ್ರೀ ಸಿ.ಕೆ. ವೆಂಕಟರಾಮಯ್ಯ) ಸಂದರ್ಭದಲ್ಲಿ ಏರ್ಪಟ್ಟ ಯುವ ಲೇಖಕರ ಪ್ರತ್ಯೇಕ ಸಭೆಯ ಅಧ್ಯಕ್ಷತೆ.

೧೯೪೭

ಮೇ ೧ರಂದು ಆರಂಭವಾದ 'ಜನಶಕ್ತಿ' ಸಾಪ್ತಾಹಿಕದ ಸಂಪಾದಕತ್ವ. 'ಸಂಗಾತಿಯ ಸಂಚಯ'ಆದರಲ್ಲಿದ್ದ ಅಂಕಣ. (ಜತೆಗಾರರು : ಸರ್ವಶ್ರೀ ಶಿವೇಶ್ವರ ದೊಡ್ಡಮನಿ, ಕೆ. ಸದಾಶಿವ, ಕೆ. ಶ್ರೀಧರ್. ಆರುವಾರ ಉಪಸಂಪಾದಕ ರಾಗಿದ್ದವರು ಶ್ರೀ ಹ. ವೆಂ ನಾಗರಾಜರಾವ್.) ವರ್ಷದ ಅಂತ್ಯದಲ್ಲಿ ನಡೆದ ಕಾಸರಗೋಡು ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ. (ಶ್ರೀ ತಿ. ತಾ. ಶರ್ಮ ಅಧ್ಯಕ್ಷತೆ)

೧೯೪೮-೪೯-೫೦

ಬಿರಿವುದಕ್ಕೆ ಮುನ್ನ ಕಮರುವುದ ಕಾಣು....

'ಕ್ರಾಂತಿ'ಯ ಬೇಗೆಯಲ್ಲಿ ಅನುರಾಗದ ಪ್ರಸಂಗದ ಮುಕ್ತಾಯ. ಮೂರು ವರ್ಷ

'ಭೂಗತ' ಜೀವನ. ೧೯೪೯ ರಲ್ಲಿ ಮುಂಬಯಿ ಸರಕಾರ ಪತ್ರಿಕೆಯನ್ನು ನಿಷೇಧಿಸುವವರೆಗೂ, ಹುಬ್ಬಳ್ಳಿ-ಧಾರವಾಡಗಳಲ್ಲಿ ತಲೆಮರೆಸಿ ಜೀವಿಸುತ್ತ 'ಜನಶಕ್ತಿ'ಗೆ ಮ್ಯಾಟರ್ ಪೂರೈಕೆ. ಬಳಿಕ ಬೆಂಗಳೂರಿಗೆ ಮರಳಿ, ಗುಪ್ತವಾಗಿದ್ದುಕೊಂಡು ಪಕ್ಷದ ಚಟುವಟಿಕೆ.....ಸರಿ....ತಪ್ಪುಗಳನ್ನು ಕುರಿತ 'ಸೈದ್ಧಾಂತಿಕ'ತಾಕಲಾಟದಲ್ಲಿ ಬೆಂದು, ೧೯೫೦ರ ಅಂತ್ಯದಲ್ಲಿ ಪಕ್ಷದಿಂದ ಬಿಡುಗಡೆ ಬಯಸಿ ವರಿಷ್ಠರಿಗೆ ಪತ್ರ.

೧೯೫೧

ಮತ್ತೆ ಪ್ರೀತಿಸಿ ನೋಡು......(ನಿಗೂಢ ರಸಾಯನ ಕ್ರಿಯೆ!) 'ಭೂಗತ' ಬದುಕಿನಿಂದ ಬಹಿರಂಗ ಪ್ರಪಂಚಕ್ಕೆ. ಬೆಂಗಳೂರಿನಿಂದ ಮುಂಬಯಿಗೆ ಹೋಗಿ, ಅಲ್ಲಿ ಶ್ರೀ ಮಂಜೇಶ್ವರ ಗೋವಿಂದ ಪೈ ಅಧ್ಯಕ್ಷತೆಯಲ್ಲಿ ನೆರೆದಿದ್ದ ವಾರ್ಷಿಕ ಸಾಹಿತ್ಯ ಸಮ್ಮೇಳನದಲ್ಲಿ 'ಪ್ರತ್ಯಕ್ಷ'. ಬೆಂಗಳೂರಿನಲ್ಲಿ ನೆಲೆಯೂರಿ ಪುರೋಗಾಮಿ ಪ್ರಕಾಶನದ ಆರಂಭ (ಶ್ರೀ ವಾಸುದೇವ ಜತೆ ಸಂಪಾದಕರು)

ಇಪ್ಪತ್ತಾರು ದಾಟಿದ ಮೇಲೆ ಕುಳುಕುಂದ ಶಿವರಾಯ ಹೊಸ ಹೆಸರಿಟ್ಟುಕೊಂಡ, ನಿರಂಜನನಾದ. ಪುರೋಗಾಮಿ ಪ್ರಕಾಶನ ಆರು ಪುಸ್ತಕಗಳನ್ನು ಹೊರತಂದು ನೇಪಥ್ಯಕ್ಕೆ ಸರಿಯಿತು.

ವರ್ಷಾರಂಭದಲ್ಲಿ'ಉಷಾ' ಮಾಸಿಕದಲ್ಲಿ 'ಸಾಧನ ಸಂಚಯ' ಅಂಕಣ ಆರಂಭ. ಒಲಿದವಳಿಗೆ ವಾರವಾರವೂ ಬರೆದರೆ ಮೇಲು ಎಂದು 'ಜನಪ್ರಗತಿಯಲ್ಲಿ (ಸಂ: ಶ್ರೀ ಎನ್. ಎಸ್. ಸೀತಾರಾಮ ಶಾಸ್ತ್ರಿ) ಆ ಅಂಕಣ ಮುಂದುವರಿಕೆ.- ಸುಮಾರು ಐದು ವರ್ಷ. 'ಚಿತ್ರಗುಪ್ತ'ದಲ್ಲಿ (ಸಂ:ಶ್ರೀ ಎಂ. ಎಸ್. ಭಾರದ್ವಾಜ್)'ಓದುಗರೊಡನೆ ಐದು ನಿಮಿಷ "ಕಾಲಕ್ಷೇಪ" ಸಾಹಿತ್ಯ ಸಮೀಕ್ಷೆ 'ಅಂಕಣಗಳ ಬರೆವಣಿಗೆ—ಎರಡು ಮೂರು ವರ್ಷ.

ಈ ನಡುವೆ 'ಸಂಗಾತಿಯ ಸಂಚಯ' ಅಂಕಣ ಬರೆವಣಿಗೆ ಮತ್ತು ಎರಡು ವರದಿಗಳಿಗೆ ಸಂಬಂಧಿಸಿದಂತೆ 'ಜನಶಕ್ತಿ' ಸಂಪಾದಕನ ವಿರುದ್ಧ ಮುಂಬಯಿ ಸರಕಾರ ಹೊರಡಿಸಿದ್ದ ಮೂರು ವರ್ಷ ಹಳೆಯ ವಾರಂಟು ಜಾರಿಮಾಡಿ, ಬೆಂಗಳೂರಿನಲ್ಲಿ ಬಂಧನ. ಕೈಗಳಿಗೆ 'ಬೇಡಿ', ಲಾಕಪ್ಪುಗಳಲ್ಲಿ ವಾಸ ಇತ್ಯಾದಿ. ಕಾರವಾರದಲ್ಲಿ ಜಾಮೀನಿನ ಮೇಲೆ ಬಿಟ್ಟರೂ ವರ್ಷವಿಡೀ ವಿವಿಧ ಹಂತಗಳಲ್ಲಿ ವಿಚಾರಣೆ. ಜುಲ್ಮಾನೆ ವಿಧಿಸಿ ಖುಲಾಸೆ.

೧೯೫೨

ಪ್ರಕಟಣೆ : 'ವಾರದ ಹುಡುಗ' ಕಥಾ ಸಂಗ್ರಹ-ಪತ್ರಿಕಾ ಲೇಖಿನ ವ್ಯವಸಾಯ. ದಾವಣಗೆರೆಯ ಶ್ರೀ ರೇವಣಸಿದ್ದಯ್ಯನವರ ವಾರಪತ್ರಿಕೆಯಲ್ಲಿ ಅಂಕಣ-'ಬಿಸಿಲು -ಬೆಳದಿಂಗಳು. ಶ್ರೀ ಅ.ನ.ಕೃ. ಹಿರಿಯೂರಲ್ಲಿ ಸಂಘಟಿಸಿದ್ದ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಿದ್ದು ('ಕತ್ತಿವರಸೆ')

೧೯೫೩

ಪ್ರಕಟಣೆ: 'ಕೊನೆಯ ಗಿರಾಕಿ' ಕಥಾ ಸಂಗ್ರಹ; ಅಂಕಣ-ಸಂಗ್ರಹಗಳು: 'ಐದು ನಿಮಿಷ' 'ಸಾಧನಾ' 'ವಿಮೋಚನೆ'—ಮೊದಲ ಕಾದಂಬರಿ ; 'ಅನ್ನಪೂರ್ಣ' ಕಥಾ ಸಂಗ್ರಹ

೧೯೫೪

ಪ್ರಕಟಣೆ ; ಮ್ಯಾಕ್ಸಿಂ ಗೋರ್ಕಿಯ 'ತಾಯಿ' ಅನುವಾದಿತ ಕಾದಂಬರಿ, (ಪೂರ್ವಾರ್ಧ; 'ಚಿತ್ರಗುಪ್ತ'ದಲ್ಲಿ ಧಾರಾವಾಹಿಯಾಯಿತು); ಕಾದಂಬರಿಗಳು 'ಬನಶಂಕರಿ' 'ಸೌಭಾಗ್ಯ' 'ಅಭಯ' 'ದೂರದ ನಕ್ಷತ್ರ' 'ರಂಗಮ್ಮನ ವಠಾರ'.

ಬೇಲೂರಿನಲ್ಲಿ ಜರಗಿದ ವಾರ್ಷಿಕ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡದ್ದು (ಅಧ್ಯಕ್ಷತೆ : ಡಾ.ನಂದೀಮಠ). (ಸಮ್ಮೇಳನಕ್ಕೆ ಗೆಳೆಯರೊಂದಿಗೆ ಶಿರಸಿಯಿಂದ ಬಂದಿದ್ದ ಶ್ರೀ ರಾಮಕೃಷ್ಣ ಹೆಗಡೆಯವರ ಪರಿಚಯ) ದಿಲ್ಲಿಯಲ್ಲಿ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಭಾಗಿ.

೧೯೫೫

ಪ್ರಕಟಣೆ: 'ವಿಮೋಚನೆ' ಎರಡನೆಯ ಮುದ್ರಣ.

ಹೊಸ ಕಾದಂಬರಿಗಳು- 'ಪಾಲಿಗೆ ಬಂದ ಪಂಚಾಮೃತ' 'ಏಕಾಂಗಿನಿ,' 'ಚಿರಸ್ಮರಣೆ', 'ಕೊನೇ ನಮಸ್ಕಾರ'

ಪ್ರೇಮ ಪ್ರಸಂಗದಲ್ಲಿ ಬಿಕ್ಕಟ್ಟು. ಬೆಂಗಳೂರಿನಿಂದ ಮೈಸೂರಿಗೆ ವಲಸೆ, ಮೈಸೂರಿನಲ್ಲಿ ಶ್ರೀ ಕೋ.ಶಿ. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿದ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದು. ಅದೇ ವರ್ಷದ ಅಂತ್ಯದಲ್ಲಿ ಶ್ರೀರಂಗರ ಅಧ್ಯಕ್ಷತೆಯಲ್ಲಿ ರಾಯಚೂರಿನಲ್ಲಿ ನೆರೆದ ಇನ್ನೊಂದು 'ವಾರ್ಷಿಕ' ಸಾಹಿತ್ಯ ಸಮ್ಮೇಳನದಲ್ಲಿ ಲೇಖಕ ಗೋಷ್ಠಿಯ ಅಧ್ಯಕ್ಷತೆ.

೧೯೫೬

ಮದುವೆ ಮಾಡ್ಕೊಂಡು ನೋಡು.......

'ಸುದಿನ'ಕ್ಕಾಗಿ ಐದು ವರ್ಷ ಕಾದಬಳಿಕ ಅನುಪಮಾ ಜತೆ ಮದುವೆ. :

(ಅನುವಾದ ಗೋರ್ಕಿಯ ಆತ್ಮಕಥನ ಭಾಗ ೧ 'ನನ್ನ ಬಾಲ್ಯ': 'ಚೀನೀ ನೀತಿ ಕಥೆಗಳು.'ಸ್ವಂತ-'ದೂರದ ನಕ್ಷತ್ರ' ದ್ವಿತೀಯ ಮುದ್ರಣ; 'ವಿಲಾಸಿನಿ' 'ಕಲ್ಯಾಣ ಸ್ವಾಮಿ.'

ಹೈದರಾಬಾದಿನ 'ಸಾಧನಾ' ಪತ್ರಿಕೆಯಲ್ಲಿ ಕೆಲಕಾಲ 'ಮಧು ಸಂಚಯ' ಅಂಕಣ. (ಸಂ ಶ್ರೀ ಜೆ.ಕೆ. ಪ್ರಾಣೇಶಾಚಾರ್ಯ,

ಧಾರವಾಡದಲ್ಲಿ ನಡೆದ ವಾರ್ಷಿಕ ಸಾಹಿತ್ಯ ಸಮ್ಮೇಳನದಲ್ಲಿ ಸಪತ್ನೀಕನಾಗಿ ಭಾಗಿ (ಶ್ರೀ ಕುವೆಂಪು ಅಧ್ಯಕ್ಷತೆ)

೧೯೫೭

ಪ್ರಕಟಣೆ; 'ಕಾತ್ಯಾಯಿನಿ' ಕಥಾ ಸಂಗ್ರಹ ; ಅಂಕಣ ಸಂಗ್ರಹಗಳು 'ಕಾಲಕ್ಷೇಪ', 'ಪುಷ್ಪಹಾರ': 'ಅಂಜನ' ಕಾದಂಬರಿ; ಚೆಖಾವ್‌ನ ಅನುವಾದಿತ ಕಥಾ ಸಂಗ್ರಹ- 'ಮದುವಣಗಿತ್ತಿ."

೧೯೫೮

ಮೈಸೂರಿನಿಂದ ಧಾರವಾಡಕ್ಕೆ. ವೈದ್ಯಕೀಯ ವೃತ್ತಿಗೂ ಸಾಹಿತ್ಯ ವ್ಯವಸಾಯಕ್ಕೂ ಉತ್ತರದ ಈ ಪಟ್ಟಣ.

ಮಗಳನ್ನು ಆಡಿಸಿ ನೋಡು..... ಮಗಳು ತೇಜಸ್ವಿನಿಯ ಆಗಮನ. ಪ್ರಕಟಣೆ ; ಗೋರ್ಕಿಯ ಕಾದಂಬರಿ ; 'ಅಧಃಪತನ'-ಅನುವಾದ ; 'ವಿಶಾಲಾಕ್ಷಿ'-ಸ್ವಂತದ ಕಾದಂಬರಿ; 'ಕಲ್ಯಾಣಸ್ವಾಮಿ'-ಎರಡನೆಯ ಮುದ್ರಣ (ಮೈಸೂರು ವಿಶ್ವವಿದ್ಯಾಲಯದ ಪಿ.ಯು.ಸಿ.ಗೆ ಉಪಪಠ್ಯ)

೧೯೫೯

ಪ್ರಕಟಣೆ: 'ಬನಶಂಕರಿ', 'ಅಭಯ' ಎರಡನೆಯ ಮುದ್ರಣ.

೧೯೬೦

ಪ್ರಕಟಣೆ: 'ಒಂಟಿ ನಕ್ಷತ್ರ ನಕ್ಕಿತು' ಕಥಾ ಸಂಗ್ರಹ;-'ತೊಟ್ಟಿಲು ತೂಗದ ಕೈ' ಧಾರಾವಾಹಿ 'ಪ್ರಜಾಮತ'ದಲ್ಲಿ (ಸಂ : ಶ್ರೀ ಹ. ವೆಂ. ನಾಗರಾಜರಾವ್): ಧಾರಾವಾಹಿ ಮುಗಿದಮೇಲೆ ಪ್ರಕಟಣೆಗೆ ತೆಗೆದುಕೊಂಡ ಪ್ರಕಾಶಕರ ಪ್ರಕಾರ, ಹಸ್ತಪ್ರತಿ ಕಳೆದುಹೋಯಿತು. ಕಾಲು ಶತಮಾನವಾಗುತ್ತ ಬಂದರೂ ಪುಸ್ತಕ ಹೊರಬಂದಿಲ್ಲ. (ಈ ತೊಟ್ಟಿಲ ಘಟನೆಯ ಬಳಿಕ ಕಾರ್ಬನ್ ಹಾಳೆಗಳನ್ನು ಹೇರಳವಾಗಿ ಬಳಸತೊಡಗಿದೆ !)

೧೯೬೧

ಪ್ರಕಟಣೆ : 'ಸಂಗಮ ಸ್ನಾನ' ಬಾನುಲಿರಂಗ ನಾಟಕ ; 'ಋತುರಾಜ' ಜೀವಿತ ವೃತ್ತ ; ಗೋರ್ಕಿಯ ಆತ್ಮಕಥನ ಭಾಗ ೨ — 'ನನ್ನ ವಿಶ್ವವಿದ್ಯಾನಿಲಯಗಳು' —ಅನುವಾದ. ವರ್ಷಾಂತ್ಯದಲ್ಲಿ ಧಾರವಾಡದಿಂದ ಬೆಂಗಳೂರಿಗೆ (ಕೊನೆಯ ನಿಲ್ದಾಣ).

೧೯೬೨

ಪ್ರಕಟಣೆ:'ಹಿಮಾಲಯದ ದಳ್ಳುರಿ' —'ರಾಜಕೀಯ. 'ಸಮ್ರಾಜ್ಞಿ' ಬಾನುಲಿರಂಗ ನಾಟಕ. 'ಋತುರಾಜ' ಎಸ್.ಎಸ್.ಎಲ್.ಸಿ. ಪಠ್ಯ ಆವೃತ್ತಿ. 'ಹೆಣ್ಣಾಗಿ ಕಾಡಿತ್ತು ಮಾಯೆ' ಕಾದಂಬರಿ (ಪುಸ್ತಕ ರೂಪದಲ್ಲಿ ಬರುವುದಕ್ಕೆ ಮುನ್ನ ಶ್ರೀ ಟಿ. ಎಸ್. ರಾಮಚಂದ್ರರಾವ್ ಸಂಪಾದಕತ್ವದ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಧಾರಾವಾಹಿ). ಬಂಗಾರದ ಜಿಂಕೆ'- ಕಾದಂಬರಿ (ಪುಸ್ತಕ ರೂಪಕ್ಕೆ ಮುನ್ನ ಶ್ರೀ ಮೋಹನದಾಸ ಪೈ ಸಂಪಾದಕತ್ವದ 'ಪ್ರಕಾಶ'ಸಾಪ್ತಾಹಿಕದಲ್ಲಿ ಧಾರಾವಾಹಿ) ಮ್ಯಾಕ್ಸಿಂ ಗೋರ್ಕಿಯ ಆತ್ಮಕಥನ-ಭಾಗ ಮೂರು 'ಜನತೆಯ ನಡುವೆ- ಅನುವಾದ. 'ಪ್ರಜಾವಾಣಿ ಸಾಪ್ತಾಹಿಕ ಪುರವಣಿ ಸಂಪಾದಕ ಶ್ರೀ ಎಂ. ಬಿ. ಸಿಂಗ್ ಅಪೇಕ್ಷೆ ಯಂತೆ 'ಬೇವು -ಬೆಲ್ಲ'.ಅಂಕಣ ಆರಂಭ. ನಾಲ್ಕು ವರ್ಷಗಳ ಬಳಿಕ ಶ್ರೀ ರಾಮಚಂದ್ರರಾಯರ ನಿರ್ಧಾರದಂತೆ 'ಬೇವು-ಬೆಲ್ಲ'ನಿಲುಗಡೆ.

೧೯೬೩

ಮಗಳನ್ನು ತೂಗಾಡಿಸಿ ನೋಡು......

ಸೀಮಂತಿನಿಯ ಆಗಮನ.

ಪ್ರಕಟಣೆ: 'ಆಹ್ವಾನ'-ಬಾನುಲಿ ನಾಟಕ ಮಾಲಿಕೆ.

೧೯೬೪

ಸಾಲ ಮಾಡಿ ಮನೆ ಕಟ್ಟನೋಡು......

ಪ್ರಕಟಣೆ: 'ಯಾವ ಜನ್ಮದ ಶಾಪ?-ಕಥಾ ಸಂಗ್ರಹ;' ಪುರುಷೋತ್ತಮ 'ಋತುರಾಜ'ದ ಪರಿಷ್ಕೃತ ಆವೃತ್ತಿ; 'ನಂದಗೋಕುಲ'—ಕಾದಂಬರಿ (ಪುಸ್ತಕ ರೂಪಕ್ಕೆ ಮುನ್ನ 'ಗೋಕುಲ' ಸಾಪ್ತಾಹಿಕದಲ್ಲಿ ಧಾರಾವಾಹಿ, ಸಂ: ಶ್ರೀ ಖಾದ್ರಿ ಶಾಮಣ್ಣ). ವರ್ಷದ ಅಂತ್ಯಭಾಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ. (ಅಧ್ಯಕ್ಷರು: ಶ್ರೀ ಜಿ. ವೆಂಕಟಸುಬ್ಬಯ್ಯ)

೧೯೬೫
ಬೇಸಗೆಯಲ್ಲಿ ಕಾರವಾರದಲ್ಲಿ ವಾರ್ಷಿಕ ಸಾಹಿತ್ಯ ಸಮ್ಮೇಳನ. ಶ್ರೀ. ಕಡೆಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆ. ಸಮ್ಮೇಳನ ಮುಗಿದೊಡನೆ ಸ್ವಇಚ್ಛೆಯಿಂದ ಪರಿಷತ್ತಿನ ಕಾರ್ಯದರ್ಶಿತ್ವದಿಂದ ನಿವೃತ್ತಿ.
ಶ್ರೀ ಗ. ಸ. ಹಾಲಪ್ಪ-ಶ್ರೀ ಎಂ. ವಿ. ಕೃಷ್ಣರಾವ್ ವಿರಚಿತ History of *Freedom Movement Karnataka* ಕನ್ನಡಕ್ಕೆ ಅನುವಾದ.
ದಿಲ್ಲಿಯ ಇನ್ಫಾ(ಇಂಡಿಯಾ ನ್ಯೂಸ್ ಅಂಡ್ ಫೀಚರ್ ಅಲಯನ್ಸ್)ಸಂಸ್ಥೆಗೆ ಕರ್ನಾಟಕದ ಪ್ರತಿನಿಧಿ. (ದಿಲ್ಲಿಗೆ ಇಂಗ್ಲಿಷಿನಲ್ಲಿ ವಾರದ ವಾರ್ತಾಪತ್ರ, ದಿನವೂ ಒಂದು ತಂತಿ ಸುದ್ದಿ.) ಪ್ರಾದೇಶಿಕ ವ್ಯವಸ್ಥೆಯಲ್ಲಿಪ್ರತಿವಾರ ಕನ್ನಡದಲ್ಲಿ ಅಂಕಣಗಳು: 'ರಾಜಧಾನಿಯಿಂದ','ದಿನಚರಿಯಿಂದ'ಮತ್ತು ವಾರ್ತಾ ಪತ್ರ. ಕಾರ್ಯನಿರತ ಪತ್ರಿಕೋದ್ಯಮ.
ಪ್ರಕಟಣೆ : 'ನಾಸ್ತಿಕ ಕೊಟ್ಟ ದೇವರು-ಕಥಾ ಸಂಗ್ರಹ;' ಸ್ವಾಮಿ ಅಪರಂಪಾರ' ಕಾದಂಬರಿ (ಪುಸ್ತಕ ರೂಪಕ್ಕೆ ಮುನ್ನ ಶ್ರೀ ಹ. ರಾ. ಪುರೋಹಿತರ ಸಂಪಾದಕತ್ವದ ಹುಬ್ಬಳ್ಳಿಯ 'ಕರ್ಮವೀರ'ಸಾಪ್ತಾಹಿಕದಲ್ಲಿ ಧಾರಾವಾಹಿ); 'ನೂರು ಜುಟ್ಟು ಮೂರು ಜಡೆ-ಭಾಗ ೧—ಕಾದಂಬರಿ.

೧೯೬೭
ಇನ್ಫಾ ದುಡಿಮೆ.
ಪ್ರಕಟಣೆ: 'ಮಾನವನ ಪಾಡು'-ಶೊಲೊಖೋವ್ ಕಿರುಕಾದಂಬರಿ-ಅನುವಾದ.

೧೯೬೮
ಪ್ರಕಟಣೆ:'ನಾಸ್ತಿಕ ಕೊಟ್ಟ ದೇವರು' ಕಥಾ ಸಂಗ್ರಹ-ದ್ವಿತೀಯ ಮುದ್ರಣ (ಬೆಂಗಳೂರು ವಿಶ್ವವಿದ್ಯಾನಿಲಯದ ಪಿ.ಯು.ಸಿ.ಗೆ ಉಪಪಠ್ಯ).
ಇನ್ಫಾದುಡಿಮೆ.

೧೯೬೯-೭೧
ಮೈಸೂರು-ಬೆಂಗಳೂರು ವಿಶ್ವವಿದ್ಯಾನಿಲಯಗಳ ಸೆನೆಟ್ ಸದಸ್ಯತ್ವ.

೧೯೬೯
ಇನ್ಫಾದಿಂದ ಸ್ವ—ಇಚ್ಛೆಯಿಂದ ಬಿಡುಗಡೆ.

೧೯೬೯-೭೪
ದೊಡ್ಡ ಆಕಾರದ ಒಟ್ಟು ೫,೦೦೦ ಪುಟಗಳ ಏಳು ಸಂಪುಟಗಳ ಕಿರಿಯರ

ವಿಶ್ವಕೋಶ 'ಜ್ಞಾನಗಂಗೋತ್ರಿ'—ಪ್ರಧಾನ ಸಂಪಾದಕತ್ವ.

೧೯೭೦

ಪ್ರಕಟಣೆ: 'ವಿಮೋಚನೆ'ಯ ರಷ್ಯನ್ ಆವೃತ್ತಿ-BOP. (ವೋರ್)
ಬಿಡುಗಡೆ:'ಜ್ಞಾನಗಂಗೋತ್ರಿ'ಯ ಮೊದಲನೆಯ ಸಂಪುಟ-ಮನುಕುಲದ ಕಥೆ'.

೧೯೭೧

ಪ್ರಕಟಣೆ:'ಸ್ಮರಣೆಯೊಂದೇ ಸಾಲದೆ?' (ಪುಸ್ತಕ ರೂಪಕ್ಕೆ ಮುಂಚೆ 'ಸಂಯುಕ್ತ ಕರ್ನಾಟಕ' ದೈನಿಕದ ಬೆಂಗಳೂರು ಆವೃತ್ತಿಯಲ್ಲಿ ಧಾರಾವಾಹಿ. ಸಂಪಾದಕ ಶ್ರೀ ಸುರೇಂದ್ರ ದಾನಿಯವರ ಒತ್ತಾಸೆಗೆ ಮಣಿದು ದಿನಕ್ಕೊಂದು ಅಧ್ಯಾಯದಂತೆ ಬರೆದುಕೊಟ್ಟುದು.)
ಪಾರ್ಶ್ವವಾಯು ಪೀಡೆ. ಹತೋಟಿ ತಪ್ಪಿದ ಎಡಗೈ-ಎಡಗಾಲು. ಆ ಸ್ಥಿತಿಯಲ್ಲೇ ಕಿರಿಯರ ವಿಶ್ವಕೋಶದ ದುಡಿಮೆ ಮುಂದುವರಿಕೆ.
ಬಿಡುಗಡೆ: 'ಜ್ಞಾನಗಂಗೋತ್ರಿ' ಎರಡನೆ ಸಂಪುಟ—'ಜೀವಜಗತ್ತು'.

೧೯೭೨

ಪ್ರಕಟಣೆ: ಅಂಕಣ ಸಂಗ್ರಹಗಳು-'ದಿನಚರಿಯಿಂದ' ಮತ್ತು 'ರಾಜಧಾನಿಯಿಂದ'.
ಬಿಡುಗಡೆ : ವರ್ಷದ ಪೂರ್ವಾರ್ಧದಲ್ಲಿ, 'ಜ್ಞಾನಗಂಗೋತ್ರಿ' ಮೂರನೆಯ ಸಂಪುಟ-'ಭೌತ ಜಗತ್ತು.'

ಸಾಲ ತೀರಿಸಿ ಮನೆಮಾರಿ ನೋಡು......
ಹತ್ತಲಾಗದ ಮಹಡಿ ಮೆಟ್ಟಲುಗಳ 'ರಶ್ಮಿ' ಮನೆಯ ಮಾರಾಟ. ಬಿಡುಗಡೆ : ವರ್ಷದ ಉತ್ತರಾರ್ಧದಲ್ಲಿ, 'ಜ್ಞಾನಗಂಗೋತ್ರಿ'ದ ನಾಲ್ಕನೆಯ ಸಂಪುಟ-'ಯಂತ್ರ ಜಗತ್ತು.'

೧೯೭೩

ಮತ್ತೆ ಮನೆ ಕಟ್ಟಿ ನೋಡು....
ಚಲನೆ ಇಲ್ಲದೆ ಕಾಲ ಸವೆಯಲು 'ನೆಲಮಟ್ಟದ ಮನೆ—'ಕಥೆ' —ಪ್ರಕಟಣೆ: 'ಅಭಯಧಾಮಂ'-'ಅಭಯ'ದ ತೆಲುಗು ಭಾಷಾಂತರ. ಬಿಡುಗಡೆ: ವರ್ಷದ ಪೂರ್ವಾರ್ಧದಲ್ಲಿ 'ಜ್ಞಾನಗಂಗೋತ್ರಿ'ಯ ನಾಲ್ಕನೆಯ ಸಂಪುಟ—'ಕಲೆ, ಸಾಹಿತ್ಯ'; ಉತ್ತರಾರ್ಧದಲ್ಲಿ, ಐದನೆಯ ಸಂಪುಟ—'ಕ್ರೀಡೆ, ಮನೋಲ್ಲಾಸ.'

೧೯೭೪

ಬಿಡುಗಡೆ: ವರ್ಷದ ಪೂರ್ವಾರ್ಧದಲ್ಲಿ, 'ಜ್ಞಾನಗಂಗೋತ್ರಿ'ಯ ಏಳನೆಯ ಸಂಪುಟ 'ಭಾರತದ ಕಥೆ'. ಸರಕಾರದ ರೂ.೯ ಲಕ್ಷ ಸಾಲ ತೀರಿಸಿ ಕಿರಿಯರ ವಿಶ್ವಕೋಶ ಯೋಜನೆಯು ಯಶಸ್ವೀ ಮುಕ್ತಾಯ. ಜತೆಗಾರರಾಗಿ ದಣಿವರಿಯದೆ ದುಡಿದ ಶ್ರೀ ಅಡ್ಯನಡ್ಕ ಕೃಷ್ಣಭಟ್, ಶ್ರೀ ಮಾ. ನಾ. ಚೌಡಪ್ಪ ಮತ್ತಿತರರಿಗೆ ಆತ್ಮೀಯ ಬೀಳ್ಕೊಡುಗೆ. ಮುದ್ರಿಸಿದ ೨೦,೦೦೦ ಪ್ರತಿಗಳಲ್ಲಿ ಉಳಿದಿದ್ದ ೨,೨೫೦ ಸೆಟ್‌ಗಳ ಹಸ್ತಾಂತರ, ಪ್ರಕಾಶಕರಾದ ಕನ್ನಡ ಸಹಕಾರೀ ಪ್ರಕಾಶನ ಮಂದಿರಕ್ಕೆ (ಇವು ಮಾರಾಟವಾದಾಗ ಮಂದಿರಕ್ಕೆ ನಿವ್ವಳ ಲಾಭ ನಾಲ್ಕುಲಕ್ಷ ರೂಪಾಯಿ.) ಯೋಜನೆ ಮುಗಿದ ಮೇಲೆ ಆ ಸಂಸ್ಥೆಗೆ ಅಂತಿಮ ನಮಸ್ಕಾರ.

ಪ್ರಕಟಣೆ: 'ಚಿರಸ್ಮರಣೆ'ಯ ಮಲಯಾಳಂ ಅನುವಾದ.

ವರ್ಷದ ಉತ್ತರಾರ್ಧದಲ್ಲಿ ಡಾ. ಸುಬ್ರಮಣ್ಯಂರ 'ಸಂಗಮ್ ಪಾಲಿಟಿ'ಯ ಅನುವಾದ: 'ಸಂಗಮ್ ರಾಜಕೀಯ-ಸಾಮಾಜಿಕ ವ್ಯವಸ್ಥೆ'.(ಪ್ರಕಟಣೆ ೧೯೭೯ ರಲ್ಲಿ.)

೧೯೭೫

ತಾಯಿಯ ಮರಣ. ೮೦ನೆಯ ವಯಸ್ಸಿನಲ್ಲಿ.

ಪ್ರಕಟಣೆ : ಕನ್ನಡ 'ಚಿರಸ್ಮರಣೆ'—ಎರಡನೆಯ ಮುದ್ರಣ.

ಬೇಸಗೆಯಲ್ಲಿ ಹೊಸ ಕಾದಂಬರಿ 'ಮೃತ್ಯುಂಜಯ'ದ ರಚನೆ ಆರಂಭ. (ಬರೆಯುತ್ತಲಿದ್ದಂತೆ, 'ಕರ್ಮವೀರ' ಸಂಪಾದಕ ಶ್ರೀ ಎಸ್. ವಿ. ಪಾಟೀಲರ ಅಪೇಕ್ಷೆಯಂತೆ ಆ ಪತ್ರಿಕೆಯಲ್ಲಿ ಧಾರಾವಾಹಿ. ಕಾರ್ಬನ್‌ಪ್ರತಿ ಪುಸ್ತಕ ರೂಪದ ಮುದ್ರಣಕ್ಕೆ ಮೀಸಲು!)

೧೯೭೬

ದಾವಣಗೆರೆಯಲ್ಲಿ ಸಮಾವೇಶಗೊಂಡ ಪ್ರಗತಿಪಂಥ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷತೆ. 'ವಿಮೋಚನೆ' ಪೋಲಿಷ್ ಭಾಷಾಂತರದ ಭಾಗಶಃ ಪ್ರಕಟಣೆ ವಾರ್ಸಾದ 'ಕಾಂಟಿನೆಂಟ್' ಭಾರತವಿಶೇಷಾಂಕದಲ್ಲಿ. ವರ್ಷದ ಉತ್ತರಾರ್ಧದಲ್ಲಿ 'ಮೃತ್ಯುಂಜಯ' ಕಾದಂಬರಿ ರಚನೆಯ ಮುಕ್ತಾಯ. ಪ್ರಕಟಣೆ: 'ವಿಮೋಚನೆ' 'ಬನಶಂಕರಿ','ಅಭಯ','ಕಲ್ಯಾಣಸ್ವಾಮಿ'ಮೂರನೆಯ ಮುದ್ರಣ;—'ಬಂಗಾರದ ಜಿಂಕೆ,' ನಂದಗೋಕುಲ 'ಸ್ವಾಮಿ ಅಪರಂಪಾರ'—ಎರಡನೆಯ ಭಾಗಗಳು ಒಂದು ಸಂಪುಟದಲ್ಲಿ—ಹೊಸ ಶೀರ್ಷಿಕೆ); 'ಮೃತ್ಯುಂಜಯ'- ಮೊದಲ ಮುದ್ರಣ.

೧೯೭೭

ಪುತ್ತೂರಿನಲ್ಲಿ ಜರಗಿದ ಪ್ರಗತಿಪಂಥದ ದ್ವಿತೀಯ ಸಮ್ಮೇಳನದಲ್ಲಿ ಕಾರ್ಯನಿರ್ವಹಣೆಯ ಹೊಣೆಯನ್ನು ಹೊಸಬರಿಗೆ ಒಪ್ಪಿಸಿ ಸಕ್ರಿಯ ಪಾತ್ರದಿಂದ ನಿರ್ಗಮನ.

ಪ್ರಕಟಣೆ: *THE STARS SHINE BRIGHTLY*-'ಚಿರಸ್ಮರಣೆ'ಯ ಇಂಗ್ಲಿಷ್ ಅನುವಾದ;'ನಿನ್ನೈವುಗಳ್ ಅಳಿವದಿಲ್ಲೈ-'ಚಿರಸ್ಮರಣೆಯ ತಮಿಳು ಅನುವಾದ; 'ಸ್ವಾಮಿ ಅಪರಂಪಾರ' ಮೂರನೆಯ ಮುದ್ರಣ. ನಾಲ್ಕನೆಯ ಮುದ್ರಣ (ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ., ಬಿ.ಎಸ್‌ಸಿ. ತರಗತಿಗಳಿಗೆ ಉಪಪಠ್ಯ); 'ರಂಗಮ್ಮನ ವಠಾರ'-ಮೂರನೆಯ ಮುದ್ರಣ (ಕರ್ನಾಟಕ ವಿಶ್ವ ವಿದ್ಯಾಲಯದ ಬಿ.ಎ. ತರಗತಿಗೆ ಉಪಪಠ್ಯ)

೧೯೭೮

ಪ್ರಕಟಣೆ: 'ಚಿರಸ್ಮರಣ'—ಚಿರಸ್ಮರಣೆ'ಯ ಮಲಯಾಳಂ ಅನುವಾದದ ಎರಡನೆಯ ಮುದ್ರಣ. ಕನಸಿನ ಕಾದಂಬರಿಯ ಬರೆವಣಿಗೆಗೆ ಸಿದ್ಧತೆ. 'ಪ್ರಾಗ್ಭಾರಾತಗಾರ್ಥ' ಅಥವಾ ಬೇರೆ ಹೆಸರು?

ಪ್ರಕಟಣೆ: 'ಚಿರಸ್ಮರಣೆ'ಯ ತೆಲುಗು ಭಾಷಾಂತರ 'ಚಿರಸ್ಮರಣಂ' 'ವಿಶಾಲಾಂಧ್ರ' ದೈನಿಕದಲ್ಲಿ ಧಾರಾವಾಹಿ.

೧೯೭೯

'ಗವಿವಾಸಿ'ಯಾಗಿದ್ದುಕೊಂಡೇ ೨೫ ಸಂಪುಟಗಳ ವಿಶ್ವಕಥಾಕೋಶ ಯೋಜನೆಯನ್ನು ರೂಪಿಸಿದ್ದು, ಕೃತಿಗಿಳಿಸುವ ಹೊಣೆ ಹೊತ್ತದ್ದು. ಪ್ರಧಾನ ಸಂಪಾದಕನಾಗಿ ಕಥಾಲೋಕದಲ್ಲಿ ಅಲೆದಾಟ.

ಪ್ರಕಟಣೆ :'ಅವಿಸ್ಮರಣೀಯ ವೀರಗಾಥಾ'- 'ಚಿರಸ್ಮರಣೆ'ಯ ಮರಾಠಿ ಅನುವಾದ.

೧೯೭೯ - ೮೦

ಪ್ರಕಟಣೆ : ಮೋಚನಂ- 'ವಿಮೋಚನೆ'ಯ- ಮಲೆಯಾಳಂ ಭಾಷಾಂತರ. ಮಾಸಿಕದಲ್ಲಿ ಧಾರವಾಹಿ.

೧೯೮೦

'ವಿಮೋಚನೆ' ತೆಲುಗು ಭಾಷಾಂತರ ಸಿದ್ಧ.

ಪ್ರಕಟಣೆ: 'ರಂಗಮ್ಮಯುಡೆ ವಾಡಗಪರಂಬು' - 'ರಂಗಮ್ಮನ ವಠಾರ'ದ ಮಲಯಾಳಂ ಅನುವಾದ.

ವರ್ಷದ ಪೂರ್ವಾರ್ಧದಲ್ಲಿ ಬಿಡುಗಡೆ: ಧರಣಿ ಮಂಡಲ ಮಧ್ಯದೊಳಗೆ'.'ಆಫ್ರಿಕದ ಹಾಡು', 'ಕಾಡಿನಲ್ಲಿ ಬೆಳದಿಂಗಳು' 'ಚೆಲುವು'-ವಿಶ್ವಕಥಾಕೋಶದ ೧-೪ ಸಂಪುಟಗಳು, ಉತ್ತರಾರ್ಧದಲ್ಲಿ ಬಿಡುಗಡೆ; 'ಸುಭಾಷಿಣಿ','ವಿಚಿತ್ರ ಕಕ್ಷಿದಾರ,' 'ಮಂಜು ಹೂವಿನ ಮದುವಣಿಗ', 'ಬೂದು ಬಣ್ಣದ ಕಾಂಗರೂ'-ವಿಶ್ವಕಥಾಕೋಶದ ೫-೮ ಸಂಪುಟಗಳು.

೧೯೮೧

'ಮೃತ್ಯುಂಜಯ'ದ ಇಂಗ್ಲಿಷ್ ಭಾಷಾಂತರ *COMING FORTH BY DAY* ಟೈಪ್‌ಸ್ಕ್ರಿಪ್ಟ್ ಸಿದ್ಧ.

ಪ್ರಕಟಣೆ: ಗೋರ್ಕಿಯ 'ತಾಯಿ'-ಅನುವಾದ -ದ್ವಿತೀಯ ಮುದ್ರಣ ; 'ಚಿರಸ್ಮರಣೆಯ ಕಯ್ಯೂರು'—ಇತಿಹಾಸ ಟಿಪ್ಪಣಿ ; ಕನ್ನಡ 'ಚಿರಸ್ಮರಣೆ. ಮೂರನೆಯ ಮುದ್ರಣ; 'ನಿನೈವುಗಳ್ ಅಳಿವದಿಲ್ಲೈ'—ಚಿರಸ್ಮರಣೆ'ಯ ತಮಿಳು ಭಾಷಾಂತರ-ದ್ವಿತೀಯ ಮುದ್ರಣ; 'ಚಿರಸ್ಮರಣಂ'-ತೆಲುಗು ಅನುವಾದ-ಮೊದಲ ಮುದ್ರಣ; 'ಚಿರಸ್ಮರಣೀಯ್'-ಬಂಗಾಳಿ ಭಾಷಾಂತರ -ಮೊದಲ ಮುದ್ರಣ.

ಬಿಡುಗಡೆ; ವರ್ಷದ ಪೂರ್ವಾರ್ಧದಲ್ಲಿ 'ಹೆಜ್ಜೆಗುರುತು' 'ಅರಬಿ' 'ನೆತ್ತರುದೆವ್ವ' 'ಬಾವಿಕಟ್ಟೆಯ ಬಳಿ'-ವಿಶ್ವಕಥಾಕೋಶ ೯-೧೨ ಸಂಪುಟಗಳು; ಉತ್ತರಾರ್ಧದಲ್ಲಿ, 'ಅದೃಷ್ಟ' 'ಸಜ್ಜನನ ಸಾವು' 'ಡೇಗೆ ಹಕ್ಕಿ'ಅವಸಾನ-ವಿಶ್ವಕಥಾಕೋಶದ ೧೩-೧೬ ಸಂಪುಟಗಳು.

೧೯೮೨

'ಮೃತ್ಯುಂಜಯನ್'-'ಮೃತ್ಯುಂಜಯ' ಮಲಯಾಳಂ ಅನುವಾದದ ಹಸ್ತಪ್ರತಿ ಸಿದ್ಧ.

ಪ್ರಕಟಣೆ:'ಮೃತ್ಯುಂಜಯ'—ಎರಡನೆಯ ಮುದ್ರಣ; 'ಮೋಚನಂ' ಪುಸ್ತಕ ರೂಪದಲ್ಲಿ.

ಬಿಡುಗಡೆ ; ವರ್ಷದ ಪೂರ್ವಾರ್ಧದಲ್ಲಿ, 'ತಾತನ ಹುಟ್ಟುಹಬ್ಬ ''ಬಾಲ ಮೇಧಾವಿ 'ಇಲ್ಲರು ಗೆಳೆಯರು' 'ಅಬಿಂದಾ ಸಯೀದ್'—ವಿಶ್ವಕಥಾ ಕೋಶದ ೧೭-೨೦ ಸಂಪುಟಗಳು.

ಯೋಜನೆಯ ಅಂತ್ಯ ಸಮೀಪಿಸುತ್ತಿದ್ದಂತೆ ಪಾರ್ಶ್ವಪೀಡೆಯ 'ಎರಡನೆಯ ಪರಿಷ್ಕೃತ-ಆವೃತ್ತಿ! ಚೇತರಿಸಿಕೊಳ್ಳುತ್ತ ಕೊನೆಯ ಎರಡು ಸಂಪುಟಗಳ ಪ್ರಸ್ತಾವನೆ ಬರೆವಣಿಗೆ. ಉತ್ತರಾರ್ಧದಲ್ಲಿ ಬಿಡುಗಡೆ: 'ನಿಗೂಢ ಸೌಧ' 'ಬೆಳಗಾಗುವ ಮುನ್ನ''ಮರಳುಗಾಡಿನ ಮದುವೆ' 'ಕಿವುಡು ವನದೇವತೆ' 'ಸಾವಿಲ್ಲದವರು 'ಜತೆಗೆ

ಕತೆಗಾರರ ಅನುವಾದಕರ ಸೂಕ್ಷ್ಮ ಪರಿಚಯ ನೀಡುವ ಪುರವಣಿ ಸಂಪುಟ.
ಅನಾರೋಗ್ಯದಲ್ಲೂ ವಿಶ್ವಕಥಾ ಯೋಜನೆಯನ್ನು ಪೂರ್ತಿಗೊಳಿಸಿದ ಮೇಲೆ ಅದರ ಮಾಲಿಕ ಸಂಸ್ಥೆಯಾದ ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್‌ಗೆ 'ದಸ್ವಿದಾನಿಯ' (ವಿದಾಯ).

೧೯೮೩

ಪಾರ್ಶ್ವಪೀಡೆಯ 'ಎರಡನೆಯ ಆವೃತ್ತಿ'ಯಿಂದ ಲುಪ್ತವಾದ ಚೈತನ್ಯವನ್ನು ಮರಳಿ ಪಡೆಯುವ ಯತ್ನದಲ್ಲಿ ಕಾಲವ್ಯಯ. ಲೇಖನಿಗೆ ವಿಶ್ರಾಂತಿ.
ಪ್ರಕಟಣೆ: *WAIT FOR THE MOON*—'ವಿಮೋಚನೆ'ಯ ಇಂಗ್ಲಿಷ್ ಭಾಷಾಂತರ. ತಂದೆಯ ಮೂರುಸಾವಿರ ಪುಟ ಬಿಡಿ ಬರೆಹಗಳನ್ನು ಹತ್ತು ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸುವ, ಅದಕ್ಕಾಗಿ 'ಸ್ಪಂದನ' ಪ್ರಕಾಶನ ಆರಂಭಿಸುವ ಛಲ ಸೀಮಂತಿನಿಗೆ.
ನನಗೆ ಕನಸಿನ ಕಾದಂಬರಿಯ ಕನಸು ಮುಂದುವರಿಕೆ.....

೧೯೮೪

......ಕನಸು ಜೀವಂತ,
ಪ್ರಕಟಣೆ: 'ಕಾವೇರಿ ಎಂಡೆ ರಕ್ತಂ' ಸ್ವಾಮಿ ಅಪರಂಪಾರದ ಮಲಯಾಳಂ ತರ್ಜುಮೆ' 'ಜನಯುಗಂ'ನಲ್ಲಿ ಧಾರಾವಾಹಿ.
ಪ್ರಕಟಣೆ: 'ಬುದ್ಧಿ-ಭಾವ-ಬದುಕು' ಲೇಖನ ಸಂಕಲನ; ಸಂದರ್ಶನಗಳ (ಪ್ರಶ್ನೆ-ಉತ್ತರಗಳ)ಸಂಕಲನ.

೧೯೮೫

ಯೋಜನೆ: ೧೫೦ಕ್ಕೂ ಹೆಚ್ಚು ಕತೆಗಳ (೧,೦೦೦ ಪುಟ?) 'ನಿರಂಜನ ಸಮಗ್ರ ಕಥಾ-ಸಂಪುಟ' ದ ಪ್ರಕಟಣೆ. ವರ್ಷಾಂತ್ಯದಲ್ಲಿ ಕನಸಿನ ಕಾದಂಬರಿ 'ಹೆಜ್ಜೆ' ಬರೆಯಲು ಆರಂಭ. (ಇದು ಮುಗಿಯುವುದು ಯಾವ ವರ್ಷವೊ? ಪ್ರಕಟಣೆ ಮುಂದೆ ಯಾವತ್ತಾದರೂ....
ಸೃಜನಶೀಲತೆ ಒರತೆ ಸುಲಭವಾಗಿ ಬತ್ತದು. ಆದರೂ ಅಕಸ್ಮಾತ್ತಾಗಿ ಬುದ್ಧಿ-ಭಾವ ತಣ್ಣಗಾದರೆ ? ಬದುಕು ಬೂದಿಯಾದರೆ-ಮಣ್ಣಾದರೆ? ಓಕೆ.
ಸತ್ತು ನೋಡು .... ಅಷ್ಟೆ

ಕೃತಿಗಳು

೧೯೮೪ ಅಂತ್ಯದತನಕ

ಕಥಾಸಂಗ್ರಹ	೯
ಕಾದಂಬರಿ	೨೫
ನಾಟಕ	೩
ಜೀವನವೃತ್ತ	೧
ರಾಜಕೀಯ	೧
ಇತಿಹಾಸ ಟಿಪ್ಪಣಿ	೧
ಅಂಕಣ ಸಂಗ್ರಹ	೭
ಲೇಖನ ಸಂಕಲನ	೨
ಭಾಷಾಂತರ ಕೃತಿಗಳು	೧೦
ಜ್ಞಾನಗಂಗೋತ್ರಿ ಸಂಪುಟಗಳು	೭
ವಿಶ್ವಕಥಾಕೋಶ ಸಂಪುಟಗಳು	೨೫
	೯೧

ಈ ೯೧ ಕೃತಿಗಳಲ್ಲದೆ ದಾಸ್ತಾನಿರುವ ಸರಕು : ೨೫೦೦ ಪುಟಗಳಷ್ಟು ಅಪ್ರಕಟಿತ ಬಿಡಿ ಬರೆಹಗಳು, ಪ್ರಸಾರ ಭಾಷಣಗಳು, ರೇಡಿಯೋ ರೂಪಕಗಳು ಇತ್ಯಾದಿ.



ನಿರಂಜನ

೧೯೨೪ – ೧೯೯೨

ಸತ್ತು ಬದುಕಿದ, ಬದುಕಿ ಉಳಿದ ನಿರಂಜನ ...

'ಸತ್ತು ನೋಡು' ಎಂದು ಸಾವನ್ನು ಸ್ವಾಗತಿಸಿ ಸವಾಲೆಸೆದ ನಿರಂಜನ ಮಾರ್ಚ್ 13, 1992ರಂದು ನಿಧನರಾದರು ; ಬದುಕಿ ಉಳಿದರು ; ಕೀರ್ತಿಶೇಷರಾದರು. ಸನಾತನ ನಿತ್ಯನೂತನ ಮಾನವಭವಿತವ್ಯಕ್ಕೆ ತಮ್ಮ ಬದುಕಿನ ಅವಧಿಯಲ್ಲಿ ಹೊಸ ಹೊಸ ಆಯಾಮಗಳನ್ನು ಕಂಡುಂಡು ತೆರೆದು ತೋರಿದರು.

ಬದುಕಿನುದ್ದಕ್ಕೂ ಅದೆಷ್ಟು ತುಮುಲ ತುಯ್ದಾಟಗಳು, ಸಂಘರ್ಷಗಳು ! ಅದೆಷ್ಟೇ ಪ್ರತಿಬಂಧಕಗಳಿರಲಿ, ಮಾನವೀಯ ಮೌಲ್ಯಗಳನ್ನು ಬದುಕಿ ಬಾಳುವ ಛಲ ಹೊತ್ತು ಸಾಗಿದ ಬಾಲ್ಯ ಅದೆಷ್ಟು ಅರ್ಥಪೂರ್ಣ ಭಾವಪೂರ್ಣ! ಅನುಕಂಪದ ಆವಿಷಕ್ಕಡಗದ ಆತ್ಮಪ್ರತ್ಯಯ ಆತ್ಮವಿಶ್ವಾಸಗಳ ಹೆಜ್ಜೆಗಳನ್ನಿಡುತ್ತ ಸಾಗಿದ ಆ ದಿನಗಳು ಅದೆಷ್ಟು ಚರಿತ್ರಾರ್ಹ !

ಹೃನ್ಮನಗಳ ಮಾನವೀಯ ಮಿಲನವೆಂಬಂತೆ ಬಾಳ ಸಂಗಾತಿ ಅನುಪಮಾರೊಂದಿಗಿನ ವಿವಾಹಕೂಡ ವೈಯಕ್ತಿಕ ನೆಲೆ ಮೀರಿ ಲೋಕಕ್ಕೆ ಬೆಳಕಾಗಿ ಮೂಡಿ ಬಂದದ್ದಾದರೂ ಅದೆಷ್ಟು ಹೃದಯಸ್ಪರ್ಶಿ !

ಬಾಳಿನುದ್ದಕ್ಕೂ ಅಂಶಾಂಶಿಕವಾಗಿ ಸತ್ಯವನ್ನು ಕಂಡು ಕೊಳ್ಳುತ್ತ ಸಾಗಿದ ಉತ್ಕಂಠೆಯ ಅನುಭವ ಅನುಭಾವಗಳ ಪಲುಕುಗಳು ಅದೆಷ್ಟು ಧ್ವನಿಪೂರ್ಣ !

Remarkable restless invincible creative spirit with seminal aesthetic sensibilities.......

'ಮೃತ್ಯುಂಜಯ', 'ಚಿರಸ್ಮರಣೆ'__ ನಿಜಕ್ಕೂ ನಿರಂಜನರ ಅದಮ್ಯ ಅವಿನಾಶಿ ಚೇತನಕ್ಕೆಷ್ಟು ಅನ್ವರ್ಥ !

— ಡಿ.ವಿ.ಕೆ.

ಡಿ. ವಿ. ಕೆ. ಮೂರ್ತಿ : : ಪ್ರಕಾಶಕರು : : ಮೈಸೂರು

ರೂ. 75

Vani press, Mysore Ph. 2330295